

ಅಕ್ಟೋಬ
೧೯೫೩

ಸಂಪುಟ
೧೬

ಸಂಚಿಕೆ
೫

ಬೆಲೆ
೮ ಆಣೆ

ಈ ಸಂಚಿಕೆಯಲ್ಲಿ:

ಲಂಚ ನಿರ್ಮೂಲನದ ಸಾಧ್ಯಾಸಾಧ್ಯತೆ (ಸಂಪಾದಕೀಯ)	ಸಂಪಾದಕರು	೧೬೧
ನಾಡನಡೆ (ಸಾಂದರ್ಭಿಕ ಟಿಪ್ಪಣಿಗಳು)	'ಕಾಲಭೈರವ'	೧೬೩
ಪ್ರೇಮ (ಅನುವಾದಿತ ಕಥೆ)	'ಪ್ರಿಯದರ್ಶನ'	೧೬೪
ಜ್ಯಾಕ್ಸ್ ಮುಲ್ಲರನವರ ಕಾದಗಳು (ಪತ್ರಸಾಹಿತ್ಯ)	ಶ್ರೀಮತಿ ಸರೋಜಿನಿ ಮಹಿಷಿ ಎಂ. ಎ. ಬೆಳಗಾಂವಿ	೧೬೯
ಹಾರುವ ಹಕ್ಕಿಗೆ (ಕವನ)	ಶ್ರೀ. ಎಸ್. ಎಸ್. ಬಸುಪಟ್ಟದ ಎಂ. ಎ., ಬಿ. ಇಡಿ.	೧೭೨
ಭಾಷಾಸಾಹಿತ್ಯದ ಆದರ (ಜೀವನ ಚಿತ್ರ)	ಶ್ರೀ. ಪಾ. ಭೀ. ಜೋರಾಪುರ ಎಂ. ಎ. ಜಬಲ್‌ಪುರ	೧೭೩
ಇಂದಿನ ಇತಾಣ (ಪರಿಚಯಾತ್ಮಕ ಪ್ರಬಂಧ)	ಶ್ರೀ. ವೆಂ. ಮು. ಜೋಶಿ, ಧಾರವಾಡ	೧೭೬
ಕಡಲಕರೆ (ಸಣ್ಣಕತೆ)	ಶ್ರೀ. ಸ. ಬಿ. ಕು. ಮುಂಬಯಿ	೧೭೯
ಮಧುರ ಚೆನ್ನರ ನೆನಹು (ಕವನ)	ಶ್ರೀ. ಚೆನ್ನವೀರ ಕಣವಿ ಎಂ. ಎ. ಧಾರವಾಡ	೧೮೨
ಮಧುರ ಚೆನ್ನರು	ಶ್ರೀ. ಭುಜೇಂದ್ರ ಮಹಿಷವಾಡಿ	೧೮೩
ಸೋಂಪಿ (ಕವನ)	ಶ್ರೀ ಜಿನದತ್ತ ದೇಸಾಯಿ, ಧಾರವಾಡ	೧೮೩
ಎಸ್. ಎಸ್. ಸಿ. ಯಾಶ್ರೆ (ನಾಟ್ಯಛಟಾ)	ಶ್ರೀ. ಎನ್. ಎಸ್. ಗದಗಕರ ಬಿ. ಎ. ಧಾರವಾಡ	೧೮೫
ಪಂಚವಾರ್ಷಿಕ ಯೋಜನೆ (ಲೇಖಾಂಕ ೫)	ಶ್ರೀ. ವೀ. ಸಿ. ಹಿತ್ತಲಮನಿ ಬಿ. ಎಸ್‌ಸಿ. (ಆಗ್ರಿ) ಧಾರವಾಡ	೧೮೮
ಊರ್ಮಿಳಾ (ಗೀತರೂಪಕ)	ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ	೧೯೪
ಕಿರುಗತೆಗಳು (೩ ವ್ಯಂಗ್ಯ ಚುಟುಕು)	ಶ್ರೀ. ದೇವೇಂದ್ರ ಹಕಾರಿ ಬಿ. ಎ. ಆನರ್ಸ್) ಹೈದರಾಬಾದ್	೧೯೧
ಕಲಿಯುಗದ ಮುದುಕಿ (ಜಾನಪದ ಕಥೆ)	ಶ್ರೀ. ವಸಂತ ಕುಷ್ಟಗಿ, ಕಲಬುರ್ಗಿ	೧೯೨
ಕ್ರಾಂತಿಕಾರಿ ಕ್ರೊಪಾಟಕಿನ್ ವ್ಯಕ್ತಿಪರಿಚಯ)	'ಅಮಲಕ'	೧೯೪
ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ	ಶ್ರೀ. ಕೆ. ಎಸ್. ಶರ್ಮಾ ವಿದ್ವಾನ್	೧೯೭
ಸಾದರ ಸ್ವೀಕಾರ	ಹೊದಿಕೆಯ ತನೆಯ ಪುಟದಲ್ಲಿ	

JAYANTI

ಸಾದರ ಸ್ವೀಕಾರ

ಋ

೪೪ **ನವಯುಗ** (ದಿನಪತ್ರಿಕೆಯ ವಾರ್ಷಿಕ ಸಂಚಿಕೆ) ಪ್ರಧಾನ ಸಂಪಾದಕರು ಶ್ರೀ. ತಿ. ರು. ನೇಸ್ತಿ ಬಿ. ಎಜೆ., ಎಂ. ಪಿ. ಸಂಪಾದಕರು ಶ್ರೀ. ಪಾಟೀಲ ಪುಟ್ಟಪ್ಪ ಎಂ. ಎಸ್ಸಿ. (ಕ್ಯಾ. ಫೋ.) ಎಲ್. ಎಲ್. ಬಿ. ನವಯುಗ ಕಾರ್ಯಾಲಯ ಹುಬ್ಬಳ್ಳಿ ಡೆ. ೧ಥ ೧೨೦ ಪುಟಗಳು. ಬೆಲೆ ೦–೧೨–೦

ಕರ್ನಾಟಕದಲ್ಲಿಯ ಮತ್ತು ಪರಪ್ರಾಂತಗಳ ಸುಪ್ರಸಿದ್ಧ ಲೇಖಕರು ಬರೆದ ಲಲಿತಲೇಖನ, ಕವನ, ನಾಟಕ, ಕಥೆ, ಪರಿಚಯಾತ್ಮಕ ಪ್ರಬಂಧಗಳು ಇದರಲ್ಲಿ ಪ್ರಕಟವಾಗಿದ್ದು, ಅಂದವಾಗಿ ಅಚ್ಚಾಗಿದೆ. ಎಲ್ಲರೂ ಓದಬೇಕಾದ ಸಂಚಿಕೆಯಿದು.

೪೫ **ಗ್ರಾಮಾಭ್ಯುದಯ ಮತ್ತು ಸಹಕಾರ** (ಮಾಸ ಪತ್ರಿಕೆಯ ವಿಶೇಷ ಸಂಚಿಕೆ) ಸಂಪಾದಕರು ಶ್ರೀಮಾನ್ ಕೆ. ಸಿ. ಚೌಡಪ್ಪ ರೆಡ್ಡಿ ಬಿ. ಎ. ಅವರು ಮೈಸೂರು ಸರಕಾರದ ಪ್ರಕಟನೆ. ಕ್ರೌ. ೧ಥ ೧೫೨ ಪುಟಗಳು.

ಈ ಸಂಚಿಕೆಯಲ್ಲಿಯ ಲೇಖನಗಳೆಲ್ಲ ತಜ್ಞರಿಂದ ಬರೆಯಿಸಿದುವುಗಳಾಗಿದ್ದು, ಹಳ್ಳಿಗರಿಗೆ ಪಟ್ಟಣಿಗರಿಗೆ—ಎಲ್ಲರಿಗೂ ಪ್ರಯೋಜನಕಾರಿಯೆನಿಸುವಂತಿವೆ. ಅಲ್ಲಲ್ಲಿ ಬಳಸಿದ ಚಿತ್ರಗಳು ಕಲಾಪೂರ್ಣವಾಗಿದ್ದು, ವಿಷಯ ವಿವರಣೆಗೆ ಸಹಾಯಕವಾಗುವಂತಿವೆ. ಉತ್ತಮ ತರದ ಹೊಳಪಿನ ಹಾಳೆಯ ಮೇಲೆ ಅಂದವಾದ ಮುದ್ರಣವಿದೆ. ಸಂಗ್ರಹಕ್ಕೆ ಯೋಗ್ಯವಾದ ಸಂಚಿಕೆ.

೪೬ **ವೈಜಯಂತಿ** (ಸಂಸ್ಕೃತ ಭಾಷೆಯ ವಾರಪತ್ರಿಕೆ). ಸಂಚಾಲಕು ಶ್ರೀಮಾನ್ ಗಲಗಲಿ ರಾಮಾಚಾರ್ಯರು. ಸಂಪಾದಕರು ಶ್ರೀ. ಗಲಗಲಿ ಪಂಥರಿನಾಥಾಚಾರ್ಯರು, ಕಾರ್ಯಾಲಯವು ಬಾಗಿಲು ಕೋಟೆಯಲ್ಲಿದೆ. ಕ್ರೌ. ೧ಥ ೮ ಪುಟಗಳು. ವಾರ್ಷಿಕ ಚಂದಾ ೫–೮–೦

ಮೊದಲು ಮಾಸಪತ್ರಿಕೆಯಾಗಿ ಹೊರಡುತ್ತಿದ್ದ 'ಮಧುರವಾಣಿ' ಈಗ 'ವೈಜಯಂತಿ' ಎಂಬ ಹೊಸಹೆಸರನ್ನು ಪಡೆದು ವಾರಪತ್ರಿಕೆಯಾಗಿ ಹೊರಡುತ್ತಲಿದೆ. ಸಂಪಾದಕರಿಬ್ಬರೂ ಸಂಸ್ಕೃತದಲ್ಲಿ ತುಂಬ ಪಾಂಡಿತ್ಯವುಳ್ಳವರು. ಭಾರತದಲ್ಲಿ ಹುಟ್ಟಿದ ವ್ಯಕ್ತಿಗೆ ಸಂಸ್ಕೃತ ಭಾಷೆಯ ಪರಿಚಯವಿರದೆ ಇರುವುದೆಂದರೆ, ಅದೊಂದು ದೊಡ್ಡ ಸಾಂಸ್ಕೃತಿಕ ನಷ್ಟ, ಇಂತಹ ಪತ್ರಿಕೆಗಳನ್ನು ಬರಮಾಡಿಕೊಂಡು, ಒತ್ತಾಯದಿಂದ ಓದಲು ತೊಡಗಿದರೆ, ಸಹಜವಾಗಿ ಸಂಸ್ಕೃತಭಾಷೆಯು ಪರಿಚಯವಾಗುವುದು. ಸಂಸ್ಕೃತ ಭಾಷೆಯು, ಭಾರತದ ಎಲ್ಲ ಭಾಷೆಗಳನ್ನೂ ಬೆಳೆಸಿದ ತಾಯಿ.

೪೭, **ವಿಕಲವ್ಯದರ್ಶನ** (ವಿಮರ್ಶಾತ್ಮಕ ಕಿರುಹೊತ್ತಗೆ). ಬರೆದವರು ಶ್ರೀ. ಸಿ. ಕೆ. ನಾಗರಾಜರಾಯರು, ಬೆಂಗಳೂರು. ಪ್ರಕಾಶಕರು ಸತ್ಯಶೋಧನ ಪುಸ್ತಕ ಭಂಡಾರ, ಕೋಟೆ, ಬೆಂಗಳೂರು ನಗರ. ಫೂ. ಕ್ಯಾ. ಅ. ೫೨ ಪುಟಗಳು. ಬೆಲೆ ೦–೮–೦

೪೮ **ವೀರವಾಣಿ** (ಕವನ ಸಂಕಲನ) ಶ್ರೀ. ಫತ್ತೇಪೂರ ಶಾಮಣ್ಣ, ಬೆಳವಣಿಕಿ. ಪ್ರಕಾಶಕರು ಶ್ರೀ ಎಚ್. ಆರ್. ಕೆ. ನೂತನ ಪ್ರಕಾಶನ ಮಂದಿರ, ಧಾರವಾಡ ಕ್ರೌ. ಆ. ೩೬ ಪುಟಗಳು ಬೆಲೆ ೦–೮–೦.

೪೯ **ಮೋಜಿನ ಮದ್ದು** (ಏಕಾಂಕ ಪ್ರಹಸನ) ಲೇಖಕರು ಶ್ರೀ. ತ. ಪು ವೆಂಕಟರಾಮ್. ಪ್ರಕಾಶಕರು ರೋಹಿಣೀ ಪ್ರಕಾಶನ ಮಂದಿರ, ತರಿಕೆರೆ. ಕ್ರೌ. ಅ. ೪೪ ಪುಟಗಳು. ಬೆಲೆ ೦–೮–೦

೫೦ **ನಿಟ್ಟುಸಿರು** (ಕಥಾ ಸಂಕಲನ) ಲೇಖಕರು ಶ್ರೀ. ದೂ. ವೆಂ. ಅರಗ. ಪ್ರಕಾಶಕರು: ಕನ್ನಡಕುಲ ಪ್ರಕಾಶಕರು, ವಾಣಿ ವಿಲಾಸರಸ್ತೆ, ಮೈಸೂರು. ಫೂ. ಕ್ಯಾ. ಅ. ೧೦೨ ಪುಟಗಳು. ಬೆಲೆ ೦–೮–೦

೫೧ **ಚಾಣಕ್ಯ ಸಾಹಸಂ** (ಚಿಕ್ಕ ಕಾವ್ಯ) ಲೇಖಕರು ಶ್ರೀ. ಟಿ. ಕೃಷ್ಣಭಟ್ಟ 'ವಿದ್ವಾನ್' ಪ್ರಕಾಶಕರು ವಿಟ್ಲ ಪ್ರಕಾಶನ ವಿಟ್ಲ (ದ. ಕ.). ಕ್ರೌ. ೮ ೪೦ ಪುಟಗಳು. ಬೆಲೆ ೧–೦–೦

೫೨ **ಮೋಗವೀರ ಯುವಕ ಸಂಘ, ಮುಂಬಯಿ** (ಸಂಸ್ಥೆಯ ೧೮ನೆಯ ವರ್ಷದ ವರದಿ). ಕಾರ್ಯದರ್ಶಿಗಳು ಶ್ರೀ. ರಾಮ ಟಿ. ಕೋಟ್ಯಾನ್ ಮತ್ತು ಶ್ರೀ. ಗೋವಿಂದ ಕೆ. ಸಾಲಿಯಾನ್ ಅವರು. ೪೬ ವೀರನಾರಾಯಣ್ ರೋಡು, ೨ನೆಯ ಮಾಳಾ ಫೋರ್ಟ್, ಮುಂಬೆ.

೫೩ **ಗೀಚುಗೆರೆ** (ಕಥಾಸಂಕಲನ). ಲೇಖಕರು ಶ್ರೀ. ರಾಮಚಂದ್ರ ಕೊಟ್ಟಲಗಿ, ಘಟಪ್ರಭಾ. ಪ್ರಕಾಶಕರು ಲಲಿತ ಸಾಹಿತ್ಯ ಮಾಲಾ, ಮನೋಹರ ಗ್ರಂಥ ಭಾಂಡಾರ, ಧಾರವಾಡ. ಕ್ರೌ. ೮ ೧೦೦ ಪುಟಗಳು. ಬೆಲೆ ಸಾದಾ ಪ್ರತಿಗೆ ೧–೪–೦ ಉತ್ತಮ ಪ್ರತಿ ೨–೦–೦.

೫೪ **ಈ ಹರಿಯ ಸೊಬಗು** (ಸ್ವತಂತ್ರ ಸಾಮಾಜಿಕ ಕಾದಂಬರಿ). ಲೇಖಕರು ಶ್ರೀ. ವಿ. ಎಂ. ಇನಾಮದಾರ್ ಧಾರವಾಡ. ಪ್ರಕಾಶಕರು ಲಲಿತ ಸಾಹಿತ್ಯ ಮಾಲೆ, ಮನೋಹರ ಗ್ರಂಥ ಭಾಂಡಾರ, ಧಾರವಾಡ.

೫೫ **ಮಣ್ಣು–ಹೆಣ್ಣು** (ಸ್ವತಂತ್ರ ಸಾಮಾಜಿಕ ಕಾದಂಬರಿ). ಲೇಖಕರು ಶ್ರೀ. ಬಸವರಾಜ ಕಟ್ಟಿಮನಿ. ಧಾರವಾಡದ ಪ್ರತಿಭಾ ಗ್ರಂಥಮಾಲೆಯ ೧೧ನೆಯ ವರ್ಷದ ೧೨ನೆಯ ಕಿರಣ. ಕ್ರೌ. ಅ. ೨೧೨ ಪುಟಗಳು. ಬೆಲೆ ೨–೮–೦.

೫೬ **ಅನ್ನಪೂರ್ಣಾ** (ಕಥಾಸಂಕಲನ). ಲೇಖಕರು ಶ್ರೀ. ನಿರಂಜನ ಅವರು. ಪ್ರಕಾಶಕರು ಸಮಾಜ ಪುಸ್ತಕಾಲಯ, ಧಾರವಾಡ. ಕ್ರೌ. ಅ. ೮೦ ಪುಟಗಳು. ಬೆಲೆ ೧–೦–೦.

೫೭ **ಛಾಂದೋಗ್ಯೋಪನಿಷತ್ತು** (ಮೂಲ ಸಂಸ್ಕೃತ ಗ್ರಂಥದ ಸರಳ ಭಾಷಾಂತರ, ಸಾರಾಂಶ ಇತ್ಯಾದಿ). ಲೇಖಕರು ಶ್ರೀಮಾನ್ ರಂಗನಾಥ ರಾಮಚಂದ್ರ ದಿವಾಕರ ಅವರು. ಪ್ರಕಾಶಕರು ಅಧ್ಯಾತ್ಮ ಕಾರ್ಯಾಲಯ, ಹುಬ್ಬಳ್ಳಿ. ಕ್ರೌ. ಅ. ೨೮ + ೨೧೨ ಪುಟಗಳು. ಬೆಲೆ ೩–೮–೦

ಜಯಂತಿ

ಸಂಪುಟ ೧೩ ಸಂಚಿಕೆ ೫

ಕುಟುಂಬದಲ್ಲಿಯ
ಪ್ರತಿಯೊಬ್ಬರೂ ಓದಿ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

***

ವ್ಯವಸ್ಥಾಪಕರು:
ಮತ್ತು
ಪ್ರಕಾಶಕರು:
ಶ್ರೀ. ಡಿ. ಶರತ್‌ಕುಮಾರ

**

ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು

**

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ

**

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು

**

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

卐

ಲಂಚನಿರ್ಮೂಲನದ ಸಾಧ್ಯಾಸಾಧ್ಯತೆ

ಭಾರತವು ಸ್ವತಂತ್ರವಾದಂದಿನಿಂದ ಲಂಚಗುಳಿತನವು ಹೆಚ್ಚಾಗಿದೆಯೆಂಬ ಕೂಗು, ಭಾರತದ ಪ್ರತಿಯೊಂದು ಪ್ರಾಂತದ ಜನರ ಬಾಯಲ್ಲಿಯೂ ತುಂಬಿ ಹರಿಯುತ್ತಲಿದೆ. ಇದು ವಾಸ್ತವವೋ ಅಭಾಸಾತ್ಮಕ ಸಂಗತಿಯೊ ?

ಬ್ರಿಟಿಷರು ಭಾರತವನ್ನು ಆಳುತ್ತಿರುವಾಗಲೂ ಲಂಚಗುಳಿಗಳಿಂದ ತುಂಬಿದ ಆಡಳಿತದ ಕೆಲವು ಭಾಗಗಳು ಇದ್ದೇ ಇದ್ದುವು. ಪೋಲೀಸ ಖಾತೆ ರೆವಿನ್ಯೂಖಾತೆ, ಲೋಕೋಪಯೋಗಿ ಕೆಲಸದ ಖಾತೆ, ಅಬಕಾರಿಖಾತೆ, ಫಾರೆಸ್ಟ್‌ಖಾತೆ— ಇವೆಲ್ಲ ಲಂಚಮುಕ್ಕುವುದಕ್ಕೆ ಎಂದಿನಿಂದಲೂ ಪ್ರಸಿದ್ಧವಾದುವುಗಳು. ಕೆಲವೊಂದು ಖಾತೆಗಳ ಅಧಿಕಾರಿಗಳು, ತಮ್ಮ ಜನ್ಮಸಿದ್ಧ ಹಕ್ಕು ಎಂದು ತಿಳಿದುಕೊಂಡಂತೆ 'ಮಾಮೂಲು' ಎಂಬ ಹೆಸರಿನಿಂದ ನಿಯಮಿತ ಲಂಚವನ್ನು ಪಡೆದೇ ಪಡೆಯುತ್ತಿದ್ದರು.

ವ್ಯಕ್ತಿಗಳು ತಮ್ಮ ಕೆಲಸವನ್ನು ಸಾಧಿಸಿಕೊಳ್ಳುವುದಕ್ಕಾಗಿ ಮೇಲಿನ ಅಧಿಕಾರಿ ವ್ಯಕ್ತಿಗಳಿಗೆ ಲಂಚಕೊಡುವುದು ಒಂದು ರೀತಿ. ಇದು ಬರೀ ಕೊಡು-ತಕ್ಕೊಳ್ಳುವ ಎರಡು ವ್ಯಕ್ತಿಗಳಿಗೆ ಸಂಬಂಧಿಸಿದುದು. ಇನ್ನೊಂದು ಬಗೆಯ ಲಂಚವು ಸಾರ್ವಜನಿಕರ ತಲೆಯ ಮೇಲೆ ಬೀಳುವುದು. ಹಳ್ಳಿಯ ಗೌಡ-ಕುಲಕರ್ಣಿಯವರು, ತಮ್ಮ ಮೇಲಿನ ಅಧಿಕಾರಿಗಳಿಗೆ-ಅಲ್ಲಲ್ಲಿ-ಕಾಲಕಾಲಕ್ಕೆ-ಸಲ್ಲಿಸಬೇಕಾದ ಮಾಮೂಲಿನ ಹಣವನ್ನು ವೈಯಕ್ತಿಕವಾಗಿ ಕೊಟ್ಟರೆ, ಅವರು ಮುಳುಗಿಯೇ ಹೋದಾರು. ಆದುದರಿಂದಲೇ ಈ ಗ್ರಾಮಾಧಿಕಾರಿಗಳು, ಈ ಮಾಮೂಲಿನ ಹಣದ ಭಾರವನ್ನು ಗ್ರಾಮದ ಜನರ ತಲೆಯ ಮೇಲೆ ಹೊರಿಸುವರು. ಇವರಂತೆಯೆ ತಾಲ್ಲೂಕಿನ ಪೋಲೀಸ್-ರೆವಿನ್ಯು ಅಧಿಕಾರಿಗಳೂ, ತಮ್ಮ ಮೇಲಿನವರಿಗೆ ಸಲ್ಲಿಸಬೇಕಾದ ಸರಬರಾಯಿಯ ಭಾರವನ್ನು ತಮ್ಮ ವಿಭಾಗದ ಗ್ರಾಮಾಧಿಕಾರಿಗಳ ತಲೆಯ ಮೇಲೆ ಹಂಚಿಹಾಕುವರು. ಈ ರೀತಿ ಇಂದು ನಿನ್ನೆಯ ದಲ್ಲ; ಪರಂಪರೆಯಿಂದ ನಡೆದುಕೊಂಡು ಬಂದುದು. ಸರ್ಕಾರಜಿಸ್ಟ್ರಾರರ ಕಚೇರಿಯಂತೂ ಲಂಚದ ಹಕ್ಕನ್ನು ಪಡೆದುಕೊಂಡೇ ನಿರ್ಮಾಣವಾದುದು. ಪೋಲೀಸಖಾತೆ ಲಂಚ ತಿಂದು ತಿಂದು, ಬ್ರಿಟಿಷರ ಕಾಲದಲ್ಲಿಯೂ ಎಷ್ಟು ನ್ಯಾಯಗಳನ್ನು ಅನ್ಯಾಯವಾಗಿಸಿದೆಯೊ—ಎಷ್ಟು ಅನ್ಯಾಯ ಗಳನ್ನು ನ್ಯಾಯವನ್ನಾಗಿಸಿದೆಯೊ — ಎಣಿಸಿ ಹೇಳುವುದಕ್ಕೆ ಸಾಧ್ಯವಿಲ್ಲ. ಸಾಂಸಾರಿಕ ಕಾರಣ ಗಳಿಗಾಗಿ ಬೇಸತ್ತು ಬಾವಿಬಿದ್ದು ಯಾರಾದರೂ ಸತ್ತರೆ, ಅವರಿಗೆ ಸಂಬಂಧಿಸಿದ ಜನರು ಪೋಲೀಸರ ಲಂಚದ ಕಾಟಕ್ಕೆ ಹೆದರಿ ಸಾಯಬೇಕಾಗುತ್ತಿತ್ತು. ನಿಜವಾಗಿ ಕೊಲೆಮಾಡಿದ ಅಪರಾಧಿಯೂ ಲಂಚದ ಬಲದಿಂದ ನಿರಪರಾಧಿಯೆಂದು ತೀರ್ಪು ಪಡೆದು, ವಿಜಯಶಾಲಿಯಾಗಿ ಮೆರೆಯುತ್ತಿದ್ದ. ೫೦-೪೦ ರೂಪಾಯಿ ತಿಂಗಳ ಸಂಬಳವಿರುವ ರೆವಿನ್ಯುಖಾತೆಯ ಕಾರಕೂನ ನೊಬ್ಬನು, ಸಹಜವಾಗಿ ೫೦-೪೦ ಸಾವಿರ ರೂಪಾಯಿಗಳನ್ನು ಗಳಿಸಿ ನಿವೃತ್ತನಾಗುತ್ತಿದ್ದನು. ಲಂಚದ ಬಲವಿಲ್ಲದೆ ಅನ್ಯಮಾರ್ಗದಿಂದಿದು ಸಾಧ್ಯವೆ ? ಕಾರಕೂನರ ವೈಭವವೇ ಇಂತಹದೆಂದ ಮೇಲೆ ಇವರ ಮೇಲಿನ ಅಧಿಕಾರಿಗಳ ಗಳಿಕೆಯನ್ನು ಹೇಗೆ ಎಣಿಸಿ ಹೇಳಬೇಕು ?

ಅಗತ್ಯವಿದ್ದವರು ಲಂಚಕೊಟ್ಟೇ ಕೊಡುತ್ತಿದ್ದರು. ಅಧಿಕಾರಿಗಳು ತೆಗೆದುಕೊಂಡೇ ತೆಗೆದು ಕೊಳ್ಳುತ್ತಿದ್ದರು. ಲಂಚ ತೆಗೆದುಕೊಳ್ಳುವುದು ಅಪರಾಧವೆಂಬ ಕಾನೂನು ಆಗಲೂ ಜಾರಿಯಲ್ಲಿ ಇದ್ದೇ ಇದ್ದಿತು. ಆದರೆ ಅಂದಿನ ಕಾಲದಲ್ಲಿ ಇಂದಿನಷ್ಟು ಲಂಚದ ವಿಷಯದಲ್ಲಿ ಜನರು ಗಲಾಟೆ ಎಬ್ಬಿಸುತ್ತಿರಲಿಲ್ಲ. ಲಂಚತಿನ್ನುವುದು ಅನ್ಯಾಯವೆಂಬ ಭಾವನೆಯ ಜಾಗೃತಿಯೇ ಅಂದಿನ ಜನರಲ್ಲಿ ಮೂಡಿರಲಿಲ್ಲ. ಆದಕ್ಕೆ ಕಾರಣವೆಂದರೆ ಅಂದಿನ ನಮ್ಮ ಪರಾಧೀನವೃತ್ತಿ. 'ಆಳುವ ಅಧಿಕಾರಿಗಳು ಶ್ರೇಷ್ಠರು, ಆಳಿಸಿಕೊಳ್ಳುವ ಜನರು ಕನಿಷ್ಠರು' ಎಂದಿದ್ದ ಅವರ ತಿಳಿವಳಿಕೆ. ಎಂತಲೇ ಹಿಂದಿನ ಕಾಲದ ಲಂಚದ ಪ್ರಪಂಚ ಯಾವ ಗದ್ದಲವೂ ಇಲ್ಲದೆ ಸಾಗಿಹೋಯಿತು.

ಇಂದು ಭಾರತದಲ್ಲಿ ಪ್ರಜಾಪ್ರಭುತ್ವ ಬಂದಿದೆ. ಇದುವರೆಗೆ ಲಂಚ ಕೊಟ್ಟುಕೊಟ್ಟು ಅವರ ಬಿಸಿಯ ಅರಿವಿನ್ನ ಜನರೇ ಪ್ರಭುತ್ವದ ಸೂತ್ರಧಾರಾಗಿ ನಿಂತಿದ್ದಾರೆ. ಬ್ರಿಟಿಷರ ಆಡಳಿತದ ಕಾಲದಲ್ಲಿ ಲಂಚವು ನ್ಯಾಯಾನ್ಯಾಯಗಳನ್ನು ಹೇಗೆ ಸ್ಥಾನಪಲ್ಲಟಗೊಳಿಸಿ ತೆಂಬುದರ ಜೀವಾಳ ತಿಳಿವಳಿಕೆ ಇವರಿಗಿವೆ. ಆದುದರಿಂದಲೇ ಭಾರತದಲ್ಲಿಯ ಪ್ರಜಾಪ್ರಭುತ್ವದ ಆಡಳಿತ ನ್ಯಾಯನಿಷ್ಠವಾಗಿ ನಡೆಯಬೇಕಾದರೆ, ಲಂಚವನ್ನು ಬೇರುಸಹಿತ ಕಿತ್ತು ಒಗೆಯುವುದೇ ಮುಖ್ಯವಾದ ಉಪಾಯವೆಂಬ ನಿಶ್ಚಯಕ್ಕೆ ನಮ್ಮ ಪ್ರಭುತ್ವದನರು ಬಂದಿದ್ದಾರೆ. ಅದಕ್ಕಾಗಿಯೇ ತೀಕ್ಷ್ಣದೃಷ್ಟಿಯಿಂದ ಕಾರ್ಯಮಾಡಬೇಕೆಂದು ಲಂಚ ನಿರ್ಮೂಲನ ಶಾಖೆಯೊಂದನ್ನು ಪ್ರತ್ಯೇಕವಾಗಿ ಏರ್ಪಡಿಸಿದ್ದಾರೆ. ಅದರೂ ಲಂಚಗುಳಿತನವು ಯಾವ ರೀತಿಯಿಂದಲೂ ಚಂಚಲತೆಯನ್ನು ಪಡೆದಿಲ್ಲ. ದಿನದಿನಕ್ಕೂ ಅದಕ್ಕೆ ಕಳೆಯೇರುತ್ತಲೇ ನಡೆದಿದೆ.

ಬ್ರಿಟಿಷ್ ಸರಕಾರದ ಪ್ರಭುತ್ವವಿದ್ದಾಗ, ಅಧಿಕಾರಿಗಳಿಗೆ ಕೇವಲ ಜನರಿಂದಲೇ ಲಂಚ ಹೆಚ್ಚಾಗಿ ದೊರೆಯುತ್ತಿದ್ದಿತು. ಇಂದಿನ ಆಡಳಿತದಲ್ಲಿರುವ ಅಧಿಕಾರಿಗಳಿಗೆ ಜನತೆ, ಸರಕಾರ—ಎರಡೂ ಕಡೆಯಿಂದಲೂ ಲಂಚ ಸುಲಿದುಕೊಳ್ಳಲು ಬರುತ್ತದೆ. ಭಾರತೀಯರನ್ನು ಪರಕೀಯರೆಂದೇ ಭಾವಿಸಿ ಆಳುತ್ತಿದ್ದ ಬ್ರಿಟಿಷ್ ಸರಕಾರವು, ಜನಹಿತದ ಕಾರ್ಯಕ್ರಮಗಳನ್ನು ಹೆಚ್ಚಾಗಿ ನಿರ್ವಹಿಸುತ್ತಲೇ ಇರಲಿಲ್ಲ. ಇಂದಿನ ಪ್ರಜಾಪ್ರಭುತ್ವವು ಜನಹಿತಕ್ಕಾಗಿ ಹಲವಾರು ಯೋಜನೆಗಳನ್ನು ಮಾಡಿ, ಅದಕ್ಕಾಗಿ ಕೋಟಿ ಕೋಟಿ ಲೆಕ್ಕದಲ್ಲಿ ಹಣವನ್ನು ವೆಚ್ಚಮಾಡುತ್ತಲಿದೆ. ಪ್ರಭುತ್ವ ವೆಚ್ಚಮಾಡಲಿರುವ ಈ ಕ್ಷುಣ್ಣಪ್ರಯೋಜನಕಾರ್ಯಕ್ಕಾಗಿ ಉಚಿತರೀತಿಯಲ್ಲಿ ನಿಷ್ಠೆವಹಿಸದಿದ್ದರೆ, ಅದರಿಂದ ಪ್ರಭುತ್ವದ ಪ್ರಜಾರಕ್ಷಣೆಯ ಗುರಿಯು ಸಾಧಿಸೀತು ಅದನ್ನು ಬಿಟ್ಟು ಆಯಾ ಕಾರ್ಯನಿರ್ವಾಹಕ ಶಾಖೆಗಳ ಅಧಿಕಾರಿಗಳೇ ಸಂಚುಮಾಡಿ, ಹಣವನ್ನು ನಡುವೆಯೆ ಎತ್ತಿಹಾಕಿ ಬಿಡುವುದೆಂದರೆ, ಇದೂ ಒಂದು ಬಗೆಯ ಲಂಚಗುಳಿತನವೇ. ಇದಕ್ಕಾಗಿ ಬೇಕಾದಷ್ಟು ಉದಾಹರಣೆಗಳನ್ನು ಕೊಡಬಹುದು. ಮಾದರಿಗಾಗಿ ಒಂದನ್ನು ಹೇಳಬೇಕಾದರೆ : ಈಗ ನಡೆದ ನೀರಾವರಿ ಕೆಲಸಗಳಲ್ಲಿ ಅಲ್ಲಲ್ಲಿ ಎದ್ದಿರುವ ಧನಾಪಹರಣೆಯ ಪ್ರಕರಣಗಳು. ಇಷ್ಟೇ ಅಲ್ಲ; ಈಗ ಒಕ್ಕಲಿಗರಿಗೆ ಅವರ ಉದ್ಯಮದ ಸಹಾಯಕ್ಕೆಂದು ಸರಕಾರವು ಕೊಡಮಾಡಿದ ಹಣವು, ಅವರವರ ಮನೆಗೆ ಹೋಗಿ ತಲ್ಪುವುದರಲ್ಲಿಯೆ ಅರ್ಧಕ್ಕೆ ಇಳಿದಿರುತ್ತದೆ. ಇಂತಹ ಧನಾಪಹರಣೆಗಳನ್ನು ಸರಕಾರದಿಂದ ಪಡೆವ ಲಂಚಗಳೆಂದು ಹೇಳಬಹುದು.

ಜನರಿಂದ ಸೆಳೆಯುತ್ತಿರುವ ಲಂಚದ ಪ್ರವಾಹವಂತೂ ರಭಸದಿಂದಲೇ ಹರಿಯುತ್ತಲಿದೆ. ಅನೇಕ ವಿಷಯಗಳಲ್ಲಿ ಭಾರತವು ಕೊರತೆಯ ರಾಷ್ಟ್ರವಾಗಿ ಇದ್ದುದರಿಂದ, ಸಮತೆಯನ್ನು ಕಾಯುವುದಕ್ಕಾಗಿ ಸರಕಾರವು ಹಲವು ನಿಯಂತ್ರಣ ಶಾಖೆಗಳನ್ನು ರಚಿಸಿ, ಅವುಗಳಿಂದ ಕೆಲಸಮಾಡಿಸುತ್ತಲಿದೆ. ಈ ನಿಯಂತ್ರಣ ಶಾಖೆಗಳು ಸ್ವತಂತ್ರಭಾರತದಲ್ಲಿಯ ಲಂಚದ ಆಡಳಿತದ ಅವ್ಯಾಹತತೆಗೆ ಹೆಚ್ಚಿಗೆ ನೆರವನ್ನು ಕೊಡುತ್ತಲಿವೆಯೆಂದು ಹೇಳಬಹುದು. ನಿಯಂತ್ರಣಕ್ಕೆ ಒಳಪಟ್ಟ ವಸ್ತುಗಳು ತಮಗೇ ಹೆಚ್ಚಾಗಿ ದೊರೆಯಬೇಕೆಂಬ ಅಪೇಕ್ಷೆಯಿಂದ, ಅಧಿಕಾರಿಗಳ ಕೈಯನ್ನು ಬೆಚ್ಚಗೆ ಮಾಡಿ ತಮ್ಮ ಕಾರ್ಯವನ್ನು ಸಾಧಿಸಿಕೊಳ್ಳುವ ಸಭ್ಯನಾಗರಿಕರು ನಮ್ಮಲ್ಲಿ ಬೇಕಾದಷ್ಟು ಜನರು.

ಲಂಚವೆಂಬುದು ಸಮೂಲ ನಾಶವಾಗಿ ಹೋಗಬೇಕೆಂದು ಬಹಳ ಜನರು ಹೇಳುವರಾದರೂ, ಅದು ನಮ್ಮ ನಾಡಿನಲ್ಲಿ ಸಾಧ್ಯವಾಗು. ಏಕೆಂದೇ ? ದೇವರಿಗೆ ಕೂಡ ಹರಕೆಯೆಂದು ಲಂಚವನ್ನು ಕೊಟ್ಟು, ಅವನ ಕಡೆಯಿಂದ ನಮಗೆ ಬೇಕಾದ ಕೆಲಸವನ್ನು ಮಾಡಿಸಿಕೊಳ್ಳಬೇಕೆನ್ನುವ ಭಕ್ತಾಗ್ರಣಿಗಳು ನಾವು. ಸಮಾಜದಲ್ಲಿಯ ಜನರೆಲ್ಲ ಯೋಗೀಶ್ವರರಾಗಬೇಕೆಂದು ಅಪೇಕ್ಷಿಸುವಷ್ಟೇ ಇದು ಅಸಾಧ್ಯ ಕೋಟಿಯ ಮಾತು. ಲಂಚದ ನಿರ್ಮೂಲನವಾಗಬೇಕೆಂದರೆ, ಮೊದಲು ಜನತೆಯಲ್ಲಿಯ ಸ್ವಾರ್ಥಸಾಧಕವೃತ್ತಿಯು ನಿರ್ಮೂಲನೆವಾಗಬೇಕು. ಸ್ವಾರ್ಥಸಾಧಕವೃತ್ತಿಯೇ ಲಂಚವನ್ನು ಕೊಡಲೂ ತೆಗೆದುಕೊಳ್ಳಲೂ ಹಚ್ಚುವುದು. ಇನ್ನೊಬ್ಬರ ಹಕ್ಕು–ಹಿತಸಂಬಂಧಗಳನ್ನು ಮುಳುಗಿಸಿ, ತನ್ನ ಕಾರ್ಯವನ್ನು ಮೊದಲು ಸಾಧಿಸಿಕೊಳ್ಳಬೇಕೆನ್ನುವವನು ಲಂಚವನ್ನು ಕೊಡಲು ಸಿದ್ಧನಾಗುತ್ತಾನೆ. ತಾನಾಗಿಯೇ ಬಂದ ಹಣವನ್ನು ಬಿಡಬೇಕೆಂಬ ಸದ್ಭಾವನೆಯು ಯಾವ ಸಾಮಾನ್ಯ ಮನುಷ್ಯನ ಮನಸ್ಸಿನಲ್ಲಿ ಉಂಟಾದೀತು ? ನಿಜವಾಗಿ ನೋಡಿದರೆ, ಲಂಚ ತೆಗೆದುಕೊಳ್ಳುವವನಿಗಿಂತ ಲಂಚವನ್ನು ಕೊಡುವವನೇ ಹೆಚ್ಚಿನ ಅಪರಾಧಿಯಾದರೂ, ಜನರ ಕೂಗು ತೆಗೆದುಕೊಳ್ಳುವನರಿಗೆ ವಿರುದ್ಧವಾಗಿದ್ದುದೇ ಹೆಚ್ಚಾಗಿ ಕೇಳುತ್ತದೆ. ಲಂಚಕ್ಕೆ ವಿರೋಧವನ್ನು ತೋರಿಸಿ ಕೂಗುವವರಲ್ಲಿಯೆ ಬಹುಜನರು, ತಮ್ಮ ಸ್ವಾರ್ಥಸಾಧನೆಯ ಸಂದರ್ಭವೊದಗಿದಾಗ, ಸಂತೋಷದಿಂದಲೇ ಹಣದ ಚೀಲವನ್ನು ಸಡಿಲು ಮಾಡುತ್ತಿರುವುದು ಎಲ್ಲೆಲ್ಲಿಯೂ ಕಣ್ಣಿಗೆ ಬೀಳುವ ದೃಶ್ಯ. ಆದರೂ ಹಿಂದೆ ಕರುವು ತಿನ್ನುತ್ತಿದ್ದರೂ ಕುರುಡನು ಹಗ್ಗ ಹೊಸೆದಂತೆ ಸರಕಾರವ ಲಂಚನಿರ್ಮೂಲನ ಶಾಖೆ, ನಿರ್ಮಾಣವಾದ ತಪ್ಪಿಗಾಗಿ ಏನೇನೋ ಕಾರ್ಯಮಾಡುತ್ತ ಹೊರಟಿದೆ. ಹೊರಟ ದಾರಿಯಲ್ಲಿಯ ಕುಂಬಳಕಾಯಿ ಅದಕ್ಕೆ ಕಾಣುವುದೇ ಇಲ್ಲ. ಸಾಸಿವೆ ಕಾಳೊಂದನ್ನು ಎತ್ತಿತೋರಿಸಿ, ತನ್ನ ಕರ್ತವ್ಯದಕ್ಷತೆಯನ್ನು ಸಿದ್ಧಮಾಡುವ ಚೇಷ್ಟೆಯನ್ನದು ನಡೆಯಿಸಿರುತ್ತದೆ. ಆನೆಯನ್ನು ನುಂಗಿದವರು ಹೆಚ್ಚಿನ ಅಧಿಕಾರಸ್ಥಾನಕ್ಕೆ ಜಿಗಿಯುತ್ತಾರೆ. ಇರುವೆಯ ಕಾಲನ್ನು ಕೈಯಿಂದ ಮುಟ್ಟಿದ ಒಬ್ಬಿಬ್ಬರು ಅಪರಾಧಿಗಳೆಂದು ಪೆರೆಮನೆ ಸೇರುತ್ತಲಿದ್ದಾರೆ. ಆಡಳಿತದ ಈ ರೀತಿಯನ್ನು ಕಣ್ಣಿಟ್ಟು ನೋಡುವ ತಿಳಿದ ಜನರೆಲ್ಲ ಚಪ್ಪಾಳೆತಟ್ಟಿ ನಗುಮಾತಾಗಿ ಕುಳಿತಿದೆಯೆಂದು — ಲಂಚನಿರ್ಮೂಲನ ಶಾಖೆಯ ಕಾರ್ಯ.

ಸಂಪಾದಕ

ನಾಡನಡೆ

●

ಆಂಧ್ರರಾಜ್ಯದ ಪ್ರತಿಷ್ಠಾಪನೆ

ಸ್ವತಂತ್ರ ಆಂಧ್ರರಾಜ್ಯಕ್ಕೆ ಭಾರತದಲ್ಲಿ ಸ್ಥಾನವು ದೊರೆತಂತಾಯಿತು. ಆಂಧ್ರಜನತೆಯ ಎಲ್ಲ ಪಕ್ಷಗಳೂ ಒಂದಾಗಿ ಪ್ರಾಣಪಣದಿಂದ ಹೋರಾಡಿ, ಸ್ವತಂತ್ರ ರಾಜ್ಯವನ್ನು ಗಳಿಸಿದುವಾದರೂ, ಆ ಮೇಲಿನ ರಾಜಕಾರಣ ಸ್ವಲ್ಪ ಗೊಂದಲಕ್ಕೇ ಇಟ್ಟದ್ದಿತು. ಯುದ್ಧಕಾಲದ ಕಾವು ಎಲ್ಲರ ಹೃದಯವನ್ನು ಒಂದುಗೂಡಿಸಿ ಸಮಷ್ಟಿಭಾವದ ಕಡೆಗೆ ತಿರುಗಿಸುವುದು. ವಿಜಯಕಾಲದಲ್ಲಿಯ ಅಡಳಿತದ ಸೂತ್ರಧಾರಿತ್ವದ ಪ್ರಸಂಗ ಬಂದಾಗ, ಸಮಷ್ಟಿಭಾವವು ನಷ್ಟವಾಗಿ ಪಕ್ಷೀಯ ಭಾವವೂ ವೈಯಕ್ತಿಕ ಸ್ವಾರ್ಥಗಳೂ ತಲೆದೋರುವುವು. ವಿಜಯ ಗಳಿಸಿದ ಆಂಧ್ರರಾಜ್ಯದಲ್ಲಿಯೂ ಈ ಬಗೆಯ ಗೊಂದಲದ ಪರಿಸ್ಥಿತಿ ತಲೆದೋರಿ, ಅಲ್ಲಿ ಪ್ರಾಂತೀಯಜನತೆಯ ಪ್ರಾತಿನಿಧ್ಯವು ಇಲ್ಲದಂತಾಗಿ ಕೇಂದ್ರ ಸರಕಾರವೇ ಎಲ್ಲಿ ಅಡಳಿತವನ್ನು ಸಾಗಿಸಬೇಕಾದ ಸಂದರ್ಭ ಬರುವುದೋ ಎಂದೆನಿಸಿದ್ದಿತು. ಏಕೆಂದರೆ, ಸದ್ಯ ರೂಢಿಯಲ್ಲಿರುವ ಆಂಧ್ರದ ಅಸೆಂಬ್ಲಿಯ ಸದಸ್ಯರು ಕಾಂಗ್ರೆಸ್, ಪ್ರಜಾಸಾಮ್ಯವಾದಿ, ಕಮ್ಯುನಿಸ್ಟ್—ಈ ಮೂರು ಪಕ್ಷಗಳಲ್ಲಿ ಪ್ರಾಮುಖ್ಯವಾಗಿ ಹೆಂಚಿಹೋಗಿರುವರು. ಸ್ವತಂತ್ರ ರೀತಿಯಿಂದ ಆಯ್ಕೆ ಪಡೆದು ಬಂದ ಕೆಲವು ಜನ ಸದಸ್ಯರು ಇರುವರಾದರೂ. ಅವರೆಲ್ಲ ಒಟ್ಟು ಸೇರಿದರೂ ಏಸು ಮಾತಲಿಕ್ಕೂ ಬಾರದಷ್ಟು ಅಲ್ಪಸಂಖ್ಯಾಕರಾಗಿ ಇರುವರು. ಪಕ್ಷಗಳಿಗೆ ಹೊಂದಿಕೊಂಡ ಸದಸ್ಯರು, ಪರಸ್ಪರ ವಿರೋಧಶಕವಾದ ರಾಜಕೀಯ ಸಂಪ್ರದಾಯದ ಪುರಸ್ಕರ್ತರಾದುದರಿಂದ, ಒಂದು ಪಕ್ಷದೊಂದಿಗೆ ಇನ್ನೊಂದು ಪಕ್ಷದವರು ಸಮರಸಭಾವದಿಂದ ಕೂಡಿ ನಡೆಯುವುದು ಸಾಧ್ಯವೆ ಇಲ್ಲ. ಸದಸ್ಯರ ಸಂಖ್ಯೆಯಲ್ಲಿ ಬಹುಸಂಖ್ಯಾಕರು ಕಾಂಗ್ರೆಸ್ಸಿಗರಾದರೂ, ಮಿಕ್ಕವರೆಲ್ಲ ಸೇರಿ ವಿರೋಧಪಕ್ಷದವರಾಗಿ ನಿಂತರೆ, ತೀರ ಅಲ್ಪಸಂಖ್ಯೆಯವರಾದ ಕಾಂಗ್ರೆಸ್ಸಿಗರಿಂದ ಸರಕಾರವನ್ನು ರಚಿಸಿ, ಅಡಳಿತ ಸಾಗಿಸುವುದಕ್ಕೆ ಸಾಧ್ಯವೇ ಇರಲಿಲ್ಲ. ಸಮ್ಮಿಶ್ರ ಸರಕಾರ ರಚಿಸಬೇಕೆಂದರೆ, ಅಲ್ಲಿ ಕಾಂಗ್ರೆಸ್ಸಿಗರು ಅಪೇಕ್ಷಿಸುತ್ತಿದ್ದ ಹೊಣೆಗಾರಿಕೆಯ ಅಧಿಕಾರಸೂತ್ರಗಳು ಅವರಿಗೆ ದೊರೆಯುವಂತಿರಲಿಲ್ಲ. ಹೀಗಾಗಿ ಪ್ರಸಂಗ ಬಿಕ್ಕಟ್ಟಿಗೇ ಬಂದು ನಿಂತಿದ್ದಿತು. ಎಂತಲೇ ರಾಜ್ಯಾರಂಭದ ಪ್ರಾರಂಭೋತ್ಸವದ ಮುಹೂರ್ತದಿನ ಹತ್ತಿರ ಹತ್ತಿರಕ್ಕೆ ಬಂದರೂ, ಮಂತ್ರಿಮಂಡಳದ ವಿಚಾರ ಉಯ್ಯಲೆಯನ್ನೇ ಆಡುತ್ತಲಿದ್ದಿತು. ಕಾಂಗ್ರೆಸ್ಸಿನ ಮೇಲಾಳುಗಳಿಗೂ ಇದೊಂದು ಬಗೆಹರಿಯದ ಸಮಸ್ಯೆಯಾಗಿ ಕುಳಿತಿದ್ದಿತು. ಅವರೆಲ್ಲ ತಲೆತಲೆ ಚುಚ್ಚಿಕೊಂಡು, ಆಂಧ್ರದ ಹಿರಿಯ ಧುರೀಣರಾದ ಶ್ರೀಮಾನ್ ಟಿ. ಪ್ರಕಾಶಮರ ಮನವನ್ನು ಒಲಿಸಿದಲ್ಲದೆ ಬೇರೆ ಗತಿಯಿಲ್ಲವೆಂದು, ಆ ದಾರಿಯಲ್ಲಿ ಪ್ರಯತ್ನ ಮಾಡಿ, ವಿಜಯವನ್ನು ಸಂಪಾದಿಸಿದರು. ಕೊನೆಗೆ ಶ್ರೀ. ಪ್ರಕಾಶಂ ಅವರು ತಮ್ಮ ಪ್ರಜಾಸಾಮ್ಯವಾದಿ ಪಕ್ಷದ ಸದಸ್ಯತ್ವಕ್ಕೆ, ರಾಜೀನಾಮೆಯನ್ನು ಕೊಟ್ಟು, ಕಾಂಗ್ರೆಸಿಗರೊಂದಿಗೆ ಕೂಡಿದರು. ಅವರೊಂದಿಗೆ ಅವರ ಬೆಂಬಲಿಗರಾದ ಸದಸ್ಯರು ಕೆಲವರೂ ಪ್ರ. ಸಾ. ವಿದಿ ಪಕ್ಷಕ್ಕೆ ರಾಜೀನಾಮೆಯನ್ನು ಕೊಟ್ಟು, ಕಾಂಗ್ರೆಸ್ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಿದರು. ಇದರ ಪರಿಣಾಮವೆಂದರೆ; ಆಂಧ್ರದಲ್ಲಿ ಅದರದೇ ಆದ ರಾಜ್ಯಸರಕಾರ, ಸದ್ಯದ ಮಟ್ಟಿಗಂತೂ ಸ್ಥಾಪಿತವಾಗುವುದು ಖಂಡಿತ. ಅಕ್ಟೋಬರ್ ೧೯ನೆಯ ದಿನವಂದು ಆ ಸರಕಾರ-ವಿಜೃಂಭಣೆಯ ಉತ್ಸವದೊಂದಿಗೆ—ಅಡಳಿತದ ಸೂತ್ರಗಳನ್ನು ಕೈಗೊಳ್ಳುವುದು. ಆಂಧ್ರದಲ್ಲಿಯೂ ಕಾಂಗ್ರೆಸ್ಸಿನ ರಾಜ್ಯವೇ ಪ್ರಾರಂಭವಾಗುವುದರಿಂದ, ಕೇಂದ್ರದ ನಾಯಕರ ಚಿಂತೆ ಶಪ್ಪಿದಂತಾಗುವುದು.

ಆಂಧ್ರದಲ್ಲಿಯ ಅಧಿಕಾರವಿಷಯಕ ಅಸಂತುಷ್ಟಿ

ಆಂಧ್ರದಲ್ಲಿ ಸದ್ಯ ಕಾಂಗ್ರೆಸ್ಸಿನ ಅಡಳಿತ ಪ್ರಾರಂಭವಾದರೂ, ಅದರ ಸ್ಥಿರತೆಯ ವಿಷಯದಲ್ಲಿ ರಾಜಕಾರ್ಯನಿದರು ಸಂದೇಹವನ್ನು ತಳೆಯುವಂತಹ ಪರಿಸ್ಥಿತಿಯು ಇನ್ನೂ ಇದ್ದೇ ಇದೆ. ಪ್ರಸಂಗಪರಾಧೀನರಾಗಿ ಕಾಂಗ್ರೆಸ್ಸಿಗೆ ಬಂದು ಸೇರಿಕೊಂಡ ಪ್ರಕಾಶಂರ ಪಕ್ಷಕ್ಕೂ ಹಳೆಯ ಕಾಂಗ್ರೆಸ್ಸಿಗರಿಗೂ ಸಂಪೂರ್ಣ ಹೊಂದಿ ನಡೆದರೆ, ಸಂದೇಹಕ್ಕೆ ಕಾರಣವೇ ಇಲ್ಲ. ಆದರೆ ಆ ಪಕ್ಷದಲ್ಲಿಯೇ ಇರುವ ಕೆಲವೊಂದು ವ್ಯಕ್ತಿಗಳ ಅಧಿಕಾರವ್ಯಾಮೋಹವು, ಅಲ್ಲಿಯ ಕಾಂಗ್ರೆಸ್ ಪಕ್ಷದಲ್ಲಿ ಸಾಮರಸ್ಯವನ್ನುಳಿಸಿ ಕಾಯ್ದುಕೊಂಡು ಹೋಗುವುದು ಎಂತಹ ಮಾತೋ! ಬೇರೆ ಪಕ್ಷದ ಮುದುಕ ಪ್ರಕಾಶಮರನ್ನು ಕರೆದು ಗದ್ದುಗೆಯ ಮೇಲೆ ಕೂಡಿಸಿ, ಅವರ ಕಡೆಗೆ ಮುಖ್ಯಪ್ರಧಾನರ ಹೊಣೆಗಾರಿಕೆಯನ್ನು ಒಪ್ಪಿಸುವ ಸಂದರ್ಭ ಬಂದುದು, ಈಗಾಗಲೇ ಅಲ್ಲಿಯ ಎಷ್ಟು ಜನ ಕಾಂಗ್ರೆಸ್ ನಾಯಕರ ಮನಸ್ಸನ್ನು ಕದಡಿದೆಯೋ ಏನೋ! ಅವರು ಸುಮ್ಮನೆ ಕುಳಿತುಕೊಳ್ಳುವರೇ? ಶ್ರೀಮಾನ್ ಟಿ. ಪ್ರಕಾಶಮರೇ ಈ ನೊದಲೇ ನಡೆದುಕೊಂಡಿರುವ ರೀತಿ ಅವರಿಗೆ ಪಾಠವಾಗಿ ಪರಿಣಮಿಸಬಹುದು. ಕಾಂಗ್ರೆಸ್ಸಿಗರಾಗಿಯೇ ಇದ್ದ ಪ್ರಕಾಶಮರು, ಅಧಿಕಾರವನ್ನು ಕಳೆದುಕೊಂಡ ಅಸಂತುಷ್ಟಿಯಲ್ಲಿಯೇ, ಕಾಂಗ್ರೆಸ್ಸನ್ನು ಬಿಟ್ಟು ಬೇರೆ ರಾಜಕೀಯ ಪಕ್ಷವನ್ನು ಕಟ್ಟಿದರು. ಅಧಿಕಾರದಲ್ಲಿರುವ ಕಾಂಗ್ರೆಸ್ಸಿಗರ ವಿರುದ್ಧವಾಗಿ ತೀವ್ರವಾದ ಪ್ರಚಾರವನ್ನು ಕೈಕೊಂಡರು. ಈಗ ಅಧಿಕಾರದ ಮುಖ್ಯಸೂತ್ರವು ತನ್ನ ಅಧೀನಕ್ಕೆ ಬರುವುದೆಂದಾಗ, ಪಕ್ಷದ ಹಿರಿಯರು ಒಪ್ಪಿಗೆ ಕೊಡದಾಗಲು, ಅದಕ್ಕೆ ರಾಜೀನಾಮೆಯನ್ನೇ ಕೊಟ್ಟು ಕಾಂಗ್ರೆಸ್ಸಿಗೆ ಮತ್ತೆ ಬಂದು ಸೇರಿದರು. ಪ್ರಕಾಶಂರಂತಹ ಹಿರಿಯ ಮುಂದಾಳುಗಳೇ ಅಧಿಕಾರಲುಬ್ಧರಾಗಿ ಹೀಗೆ 'ಸರ್ಕಸ್' ಮಾಡಿರುವರೆಂದಮೇಲೆ, ಮಿಕ್ಕ ಸಾಮಾನ್ಯ ಮುಂದಾಳುಗಳು ಏಕೆ ಸುಮ್ಮನಿರುವರು? ಅವರ ಅಸಂತುಷ್ಟ ಮನವೂ ಕುಟಿಲ ರಾಜಕಾರಣದ ವ್ಯೂಹವನ್ನು ರಚಿಸದೆ ಬಿಡದು. ಆಗ ಆಂಧ್ರದ ಸರಕಾರದ ವಿಷಯದಲ್ಲಿ ಮತ್ತೆ ಗಂಭೀರ ವಿಚಾರ ಮಾಡಬೇಕಾದ ಸಂದರ್ಭ ಬಂದೇ ಬರುವುದೆಂದು ಮುಂಧೋರಣೆಯ ರಾಜಕಾರಣಿಗಳು ಹೇಳಿದರೆ, ಅದಕ್ಕಾಗಿ ಆಶ್ಚರ್ಯಪಡುವ ಕಾರಣವೇನೂ ಇಲ್ಲ.

ಕಾಂಗ್ರೆಸ್ಸಿಗರದೇ ಆಗಿದ್ದ ತಿರುಕೊಚ್ಚಿಯ ರಾಜ್ಯಸರಕಾರದ ಹಣೇ ಬರೆಹವೇನಾಗಿದೆಯೆಂಬುದು ನಮ್ಮೆಲ್ಲರ ಕಣ್ಣ ಮುಂದಿನ ಉದಾಹರಣೆ. ರಾಜಕಾರಣಿಗಳ ಈ ಊಸರವಳ್ಳಿ ಹುಸಿಯಾಗಿ, ಆಂಧ್ರದಲ್ಲಿ ಸದ್ಯ ಸ್ಥಾಪಿತವಾದ ಸರಕಾರ ಸ್ಥಿರವಾಗಿ ನಡೆದರೆ, ನಮಗೆಲ್ಲ ಸಂತೋಷದ ಸಂಗತಿಯೇ ಸರಿ!

ಶ್ರೀ ಟಿ. ಪ್ರಕಾಶಮರ ವ್ಯಕ್ತಿತ್ವ

ಶ್ರೀಮಾನ್ ಟಿ. ಪ್ರಕಾಶಮರು ಪ್ರ. ಸಾ. ವಾ. ಪಕ್ಷವನ್ನು ಬಿಟ್ಟು ಕಾಂಗ್ರೆಸ್ಸಿಗೆ ಸೇರಿದ್ದೂ ತಪ್ಪೆಂದು ಹೇಳುವವರು ಇದ್ದಾರೆ; ಒಪ್ಪು ಎಂದು ಸಾಧಿಸುವವರೂ ಇದ್ದಾರೆ. ಪಕ್ಷ-ಪಕ್ಷಗಳ ಜಗಳಾಟದ ಸಂದರ್ಭದಲ್ಲಿ ಈ ತಪ್ಪು-ಒಪ್ಪುಗಳ ನಿರ್ಣಯದ ಬಗೆಗೆ ಮತಭೇದವಿರುವುದು ಅಸ್ವಾಭಾವಿಕವೇನೂ ಇಲ್ಲ. ಆದರೆ ವ್ಯಕ್ತಿಯ ಪೂರ್ವಚಾರಿತ್ರ್ಯ ಆ ಒಪ್ಪು-ತಪ್ಪುಗಳ ನಿರ್ಣಯಕ್ಕೆ ಸಬಲಪ್ರಮಾಣವಾಗಿ ನಿಲ್ಲುವುದು. ಅಪರಿಪೂರ್ಣಜ್ಞಾನಿಯಾದ ವ್ಯಕ್ತಿ, ತನ್ನ ಜೀವನದ ಅನುಭವಗಳಿಂದ ಗುಣಿಸಿ ನೋಡಿ, ಪ್ರಾಮಾಣಿಕವಾಗಿ ತನ್ನ ಮತಗಳನ್ನು ಬದಲಿಸುತ್ತಿರುವುದು ಅಸಹಜವೇನೂ ಇಲ್ಲ; ಇಷ್ಟೇ ಇಲ್ಲ, ಆ ವ್ಯಕ್ತಿಗೆ ಅದು ಹಿರಿಮೆಯನ್ನು ತಂದು ಕೊಡುವಂತಹವಾಗಿರುವದು. ಮಹಾತ್ಮಾ ಗಾಂಧೀಯವರ ಜೀವನವನ್ನು ಸೂಕ್ಷ್ಮವಾಗಿ ಅಭ್ಯಾಸಮಾಡಿದವರಿಗೆ, ಅವರ ಮತಪರಿವರ್ತನೆಯ ಪ್ರಸಂಗಗಳು ಅನೇಕವಾಗಿ ಬಂದುದು ಕಂಡುಬರಬಹುದು. ಅಂತಹ ಸಂದರ್ಭದಲ್ಲೆಲ್ಲ ಅವರು ತಮ್ಮ ಮೊದಲಿನ ಮತದಲ್ಲಿರುವ ದೋಷಗಳನ್ನು ಪ್ರಾಮಾಣಿಕವಾಗಿ ಒಪ್ಪಿಕೊಂಡು, ಹೊಸ ಅಭಿಪ್ರಾಯಕ್ಕೇಕೆ ಬಂದುನಿಂತೆನೆಂಬುದನ್ನು ಸಬಲವಾದ ಪ್ರಮಾಣಗಳಿಂದ ಸಿದ್ಧಮಾಡಿ ತೋರಿಸುತ್ತಲಿದ್ದರು. ಲೋಕಸೇವೆಯನ್ನು ಬಿಟ್ಟರೆ, ಬೇರೆ ಯಾವ ವೈಯಕ್ತಿಕ ಸ್ವಾರ್ಥಗಳೂ ಅವರ ಗುರಿಯಾಗಿರಲಿಲ್ಲ. ಎಂತಲೇ ಅವರ ಮತಪರಿವರ್ತನೆಯ ಪ್ರಸಂಗಗಳು ಯಾರ ಮನವನ್ನೂ ನೊಯಿಸುತ್ತಿರಲಿಲ್ಲವಿಷ್ಟೇ ಅಲ್ಲ, ಅವರ ಸದ್ಭಾವ ಪ್ರಕಟನೆಗೆ ಸಹಾಯವನ್ನು ಮಾಡಿದುವು. ಯಾರೂ ಸಂಶಯ ದೃಷ್ಟಿಯಿಂದ ಅವರನ್ನು ನೋಡುವ ಕಾರಣವೇ ಇರಲಿಲ್ಲ.

ಶ್ರೀ. ಟಿ ಪ್ರಕಾಶಮರ ರಾಜಕೀಯ ಮತಪರಿವರ್ತನೆಯ ಪ್ರಸಂಗಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸಿ ನೋಡಿದರೆ, ಅವುಗಳಲ್ಲಿ ಸಾಧಕನ ಪ್ರಾಮಾಣಿಕತನಕ್ಕಿಂತ ರಾಜತಾರಣಿಯ ಸಂಧಿಸಾಧಕತನವೇ ಹೆಚ್ಚಾಗಿ ಒಡೆದು ತೋರುವುದು. ನಿಸ್ವಾರ್ಥ ಪ್ರಜಾಸೇವೆಗಿಂತ, ಅಧಿಕಾರ ಮೋಹದ ಸ್ವಾರ್ಥವೃತ್ತಿ ಕೆಚ್ಚಾಗಿ ಎದ್ದು ಕಾಣುವುದು. ಅಂದು ಕಾಂಗ್ರೆಸ್ಸು ಬಿಟ್ಟುದು ಯಾವ ದಾಪಡೊಂದು ಉಚ್ಚ ಆದರ್ಶ ಸಾಧನೆಯ ಹಂಬಲದಿಂದಲ್ಲ. ಇಂದು ಪ್ರ. ಸಾ. ವಾ. ಪಕ್ಷವನ್ನು ಬಿಟ್ಟುದೂ ಯಾವುದೇ ಲೋಕಕಲ್ಯಾಣವನ್ನು ಸಾಧಿಸುವ ತತ್ವಾನುಷ್ಠಾನಕ್ಕಾಗಿ ಅಲ್ಲ. ಎರಡರ ಹಿಂದೆಯೂ ಅವರ ವೈಯಕ್ತಿಕ ಮಹತ್ವಾಕಾಂಕ್ಷೆಯ ಕೈಚಳಕ ಮೂಡಿಸುತ್ತಿದೆ. ಒಂದೊಂದು ವ್ಯಕ್ತಿತ್ವದ ಮೂಡಣ.

ಬಳ್ಳಾರಿಯ ಕನ್ನಡಿಗರಲ್ಲಿ ವಿಜ್ಞಪ್ತಿ

ಆಂಧ್ರರಾಜ್ಯದ ಪ್ರತಿಷ್ಠಾಪನೆಯೊಂದಿಗೆ ಬಳ್ಳಾರಿ ಜಿಲ್ಲೆಯ ಏಳು ತಾಲೂಕುಗಳು ಮೈಸೂರು ರಾಜ್ಯದಲ್ಲಿ ಒಳಗೊಂಡುದು ಸಂತೋಷದ ಸಂಗತಿಯಾಗಿದೆ. ಬಳ್ಳಾರಿ ಜಿಲ್ಲೆಯ ಕನ್ನಡಿಗರು ಯೋಗ್ಯಕಾಲದಲ್ಲಿ ಜಾಗೃತರಾಗಿ ಕಾರ್ಯಮಾಡದೆ ಹೋಗಿದ್ದರೆ, ಬಳ್ಳಾರಿ ಜಿಲ್ಲೆ ಇಡಿಯಾಗಿ ಆಂಧ್ರರಾಜ್ಯದ ಒಂದು ಭಾಗವಾಗಿಬಿಡುತ್ತಿದ್ದಿತು. ಆ ಸಂದರ್ಭ ತಪ್ಪಿ ಕನ್ನಡಿಗರ ಪ್ರದೇಶ ಕನ್ನಡದ್ದೇ ಆಗಿ, ಕನ್ನಡ ರಾಜ್ಯವಾದ ಮೈಸೂರಿಗೆ ಹೊಂದಿಕೊಳ್ಳುತ್ತಲಿರುವುದು ಅಖಿಲ ಕರ್ನಾಟಕಕ್ಕೆಲ್ಲ ಉತ್ಸಾಹವನ್ನು ಉಂಟುಮಾಡಿದೆ. ಆದರೆ ಬಳ್ಳಾರಿಯ ಕನ್ನಡಿಗರಲ್ಲಿ ಒಂದು ನಮ್ರ-ಭಾವದ ಬೇಡಿಕೆಯೆಂದರೆ, "ಸೋದರ ಸೋದರಿಯರೆ, ವಿಚ್ಛಿನ್ನವಾಗಿ ಹೋದ ಕನ್ನಡಿಗರು, ಬೇರೆ ಭಾಷೆಯವರ ಆಡಳಿತಕ್ಕೆ ಒಳಗಾಗಿ ಎಂತೆಂತಹ ಕಷ್ಟನಷ್ಟಗಳನ್ನು ಅನುಭವಿಸಬೇಕಾಗುವುದೆಂಬುದರ ಅನುಭವ ತಮಗೆ ಕಂಡುಂಡ ಮಾತಾಗಿದೆ. ಈಗ ತಾವು ಕನ್ನಡದ ಸ್ವತಂತ್ರ ರಾಜ್ಯವಾದ ಮೈಸೂರಿಗೆ ಸೇರಿದೆವೆಂಬ ಉಬ್ಬಿನಲ್ಲಿ ಮಿಕ್ಕ ಕನ್ನಡಿಗರ ಕಷ್ಟನಷ್ಟಗಳನ್ನು ಮರೆಯಬೇಡಿರಿ. ರಾಜಕೀಯ ಅಡಳಿತದ ಕಾರಣದ ಮೂಲಕ ಮೈಸೂರು ಕನ್ನಡಿಗರ ಮನದಿಂದ ಮಿಕ್ಕ ಕನ್ನಡಿಗರ ಕಷ್ಟನಷ್ಟಗಳ ಭಾವನೆ ದೂರದ್ದಾಗಿ ಕುಳಿತಿದೆ. ಈಗ ನೀವು ಹೋಗಿ ಅವರೊಂದಿಗೆ ಸೇರಿಕೊಂಡಿದ್ದೀರಿ. ಕರ್ನಾಟಕ ಏಕೀಕರಣದ ಆವಶ್ಯಕತೆಯೆಷ್ಟಿದೆಯೆಂಬುದನ್ನು ಮೈಸೂರಿನ ಕನ್ನಡಿಗರಿಗೆಲ್ಲ ಆಗಾಗ ಮನವರಿಕೆ ಮಾಡಿಕೊಡಿರಿ. ಮೈಸೂರು ರಾಜ್ಯವೆಂದರೆ ಸಂಪೂರ್ಣ ಕರ್ನಾಟಕವಲ್ಲವೆಂಬ ಮಾತನ್ನು ಸಾರಿ ಸಾರಿ ಹೇಳುತ್ತಲಿರಿ. ನೀವು ಮದ್ರಾಸ ರಾಜ್ಯದಲ್ಲಿದ್ದು ಯಾವ ಯಾವ ಬಗೆಗಳಲ್ಲಿ ಗುಲಾಮರಾಗಿದ್ದೀರೆಂಬ ಕಲ್ಪನೆ ನಿಮಗೆ ಸಾಕಷ್ಟು ಇದೆ. ಅದೆಲ್ಲ ಕಹಿ ಅನುಭವದ ಚಿತ್ರಗಳನ್ನು ಮೈಸೂರಿಗರ ಮನದ ಮುಂದಿಟ್ಟು, ಅವರ ಕರುಳು ಕರಗುವಂತೆ ಮಾಡಿರಿ. ಬಳ್ಳಾರಿಯನ್ನು ಕರ್ನಾಟಕಕ್ಕೆ ಉಳುಹಿಕೊಡಲು ಯಾವ ನಿಷ್ಠೆಯಿಂದ ನೀವು ನಿಮ್ಮ ಕರ್ತವ್ಯವನ್ನು ನಿರ್ವಹಿಸಿದಿರೋ, ಅದೇ ನಿಷ್ಠೆಯಿಂದ ಕನ್ನಡದ ಸ್ವತಂತ್ರ ರಾಜ್ಯನಿರ್ಮಾಣದ ಬಗೆಗಿರುವ ನಿಮ್ಮ ಕರ್ತವ್ಯವನ್ನೂ ನಿರ್ವಹಿಸಿರಿ! ಮೈಸೂರು ರಾಜ್ಯದಿಂದ ದೂರವಾಗಿ ಉಳಿದ ಕನ್ನಡ ಪ್ರದೇಶವೂ ಬೇಗನೆ ನಿಮ್ಮ ಕೂಡ ಒಂದಾಗುವಂತೆ ಮಾಡಿರಿ.' ಭದ್ರಂ ಶುಭಂ ಮಂಗಲಂ!

ಭಾರತಕ್ಕೆ ದೊರೆತ ಜಾಗತಿಕ ಆದರ!

ಕಳೆದ ತಿಂಗಳಲ್ಲಿ ಜರುಗಿದ ಜಾಗತಿಕ ಮಹತ್ವದ ಘಟನೆಯೊಂದು ಎಂದರೆ, ಶ್ರೀಮತಿ ವಿಜಯಲಕ್ಷ್ಮೀ ಪಂಡಿತರು ಸಂಯುಕ್ತ ರಾಷ್ಟ್ರಸಂಸ್ಥೆಗೆ ಅಧ್ಯಕ್ಷರಾಗಿ ಆಯ್ಕೆಯಾದುದು. ಭಾರತವು ಒಂದು ಕಾಲದಲ್ಲಿ ಪಾಶ್ಚಾತ್ಯ ನಾಗರಿಕ ರಾಷ್ಟ್ರಗಳಿಂದ ಎಂತೆಂತಹ ಉಪಚಾರ-ಮರ್ಯಾದೆಗಳನ್ನು ಪಡೆಯುತ್ತಿದ್ದರೆಂಬುದು, ನಮ್ಮಲ್ಲಿಯ ಅನೇಕ ಜನರಿಗೆ ಮರೆಯಲಾರದ ನೆನಪಾಗಿ ಉಳಿದುಬಿಟ್ಟಿದೆ. ಭಾರತನೆಂದರೆ ಅನಾಗರಿಕರಿಂದ ತುಂಬಿದ ಪ್ರದೇಶವೆಂಬುದರ ಪ್ರಚಾರ, ವಿವಿಧ

(೨೦ನೆಯ ಪುಟ ನೋಡಿರಿ)

ಪ್ರೇಮ

(ಸಣ್ಣಕತೆ)

'ಪ್ರಿಯದರ್ಶನ'*

●

ಹೆಣ್ಣಿನ ಪ್ರೇಮಕ್ಕಾಗಿ ತನ್ನ ಪ್ರಾಣವನ್ನೂ ಬಲಿಯನ್ನಾಗಿಸುವುದು ಗಂಡುಹಕ್ಕಿಗಳಲ್ಲಿ ಕಂಡುಬರುವುದು. ಆದರೆ ಹೆಣ್ಣಿನ ಜೀವವನ್ನು ಕೈಯಾರೆ ಕೊಲ್ಲುವಂತಹ ಗಂಡುಸು ಮಾನವನ ಸ್ವಭಾವಕ್ಕೆ ಏನೆಂದು ಹೇಳಬೇಕು? ಇದೂ ಪ್ರೇಮವೇ ಇರಬಹುದೆ?

●

ನೃತ್ತಪತ್ರಿಕೆಗಳಲ್ಲಿ, ಇತರ ಸುದ್ದಿಸಮಾಚಾರಗಳೊಡನೆ, ಅನುರಾಗಾತಿಶಯದ ದಾರುಣ ಘಟನೆಯನ್ನು ಇದೇ ತಾನೇ ಓದಿದೆ. ಅವನು ಅವಳನ್ನು ಕೊಂದು ತನ್ನನ್ನು ತಾನೆ ಕೊಂದುಕೊಂಡ, ಎಂದ ಮೇಲೆ ಅವನು ಅವಳನ್ನು ಪ್ರೇಮಿಸಿರಬೇಕು. ಅವನೊ? ಅವಳೊ?—ಯಾರಾದರೇನು? ಅವರಿಬ್ಬರ ಪ್ರೇಮವೊಂದೇ ನನ್ನ ಮನಸ್ಸನ್ನು ತಾಗುವುದು. ಈ ಸಂಗತಿ ಕಣ್ಣೀರುಗರೆಸುತ್ತದೆ, ಅಚ್ಚರಿಯನ್ನುಂಟುಮಾಡುತ್ತದೆ, ಹೃದಯವನ್ನು ಮಾರ್ದವಗೊಳಿಸುತ್ತದೆ—ಇಲ್ಲವೆ ಯೋಚನಾಪರನನ್ನಾಗಿ ಮಾಡುವುದೆಂದು ನನ್ನ ಮನಸ್ಸು ಆಕರ್ಷಿಸಿಗೊಂಡಿಲ್ಲ; ಆದರೆ ನನ್ನ ಹತ್ತೆಯ ದಿನವಲ್ಲಿ ನಡೆದ ಘಟನೆಯೊಂದನ್ನು ನೆನಪಿಗೆ ತರುತ್ತದೆ ಎಂದು ಇಂದು ಆ ಘಟನೆ, ಮೊದಲಿನ ಕ್ರೈಸ್ತರಿಗೆ ಕ್ರಾಸ್ ಕಂಡಂತೆ, ನನಗೆ ಪ್ರೇಮವು ಬೆಳಕುತೋರಿದ ಬೇಟೆಯ ವಿನೋದದ ಅಪೂರ್ವಸ್ಮೃತಿ.

ನನ್ನ ಸ್ವಭಾವ ಮತ್ತು ಪ್ರಜ್ಞೆಗಳು ಹುಟ್ಟಿನಿಂದ ತಾಮಸವೆಂದು ತೋರಿದರೂ ಸುಸಂಸ್ಕೃತ ಜೀವನದ ವಿಚಾರ ಮತ್ತು ಪರಿವೇಷಗಳಿಂದ ಅವು ಸಾಂತ್ವನಗೊಂಡಿದ್ದುವು. ನನಗೆ ಬೇಟೆಯೆಂದರೆ ಕಟ್ಟಾಸೆ; ಆದರೆ ಗಾಯಗೊಂಡ ಜೀವನ, ಅವರ ರಕ್ತ ಪುಕ್ಕಗಳ ಮೇಲಿನ ಮತ್ತು ನನ್ನ ಕೈಗಳ ಮೇಲಿನ ರಕ್ತದ ದೃಶ್ಯ, ಬೇಟೆಯನ್ನು ಕೈಸಾರಿ ಬಿಡಬೇಕೆನ್ನುವಷ್ಟು ನನ್ನ ಹೃದಯವನ್ನು ಕಲಕಿಬಿಡುತ್ತದೆ.

ಆ ವರ್ಷ ಚಳಿಯು ವರ್ಷಾಋತುವಿನ ಕೊನೆಯ ಕಾಲದ ಪ್ರಾರಂಭದಲ್ಲಿಯೆ ಕಾಲಿಟ್ಟಿತ್ತು. ನನ್ನ ಚಿಕ್ಕಪ್ಪನ ಮಗ,—ಸೋದರ ಎಂದುಕೊಳ್ಳಿ, ಕಾರ್ಲ್‌ದೆ ರಾವೆಲ್, ನಸುಕಿನ ಸಮಯದಲ್ಲಿ ಜೌಗು ಪ್ರದೇಶದಲ್ಲಿಯ ಬಾತುಗಳ ಷಿಕಾರಿಗೆ ಹೋಗಲು ನನ್ನನ್ನು ಕರೆದನು. ನನ್ನ ಸೋದರ, ಕೆಂಪು ಕೂದಲಿನ, ಸ್ಥೂಲ ಕಾಯವುಳ್ಳ, ಗಡ್ಡಬಿಟ್ಟ ನಲವತ್ತು ವರ್ಷ ಪ್ರಾಯದ ಸಂತೋಷ ಜೀವಿ. ಸ್ನೇಹಶೀಲನಾದ ಆ ಹಳ್ಳಿಯ ಶ್ರೀಮಂತನ ಸ್ವಭಾವದಲ್ಲಿ ಅರ್ಧ ಪಶುವೃತ್ತಿ ಬೆರೆತುಕೊಂಡಿತ್ತೆನ್ನಬೇಕು. ಸಾಧಾರಣವಾದುದನ್ನು ಪ್ರಿಯವನ್ನಾಗಿ ಮಾಡಬಲ್ಲ, ಗಾಲ್ ಜನರಿಗೆ ಸಹಜವಾದ ಬುದ್ಧಿ ಸೂಕ್ಷ್ಮತೆ ವಿನೋದ ಅವನಿಗೆ ಪ್ರಕೃತಿಯ ವರವಾಗಿತ್ತು. ಇತ್ತ ರೈತನ ಗುಡಿಸಿಲೂ ಅಲ್ಲ, ಇತ್ತ ಹಳ್ಳಿಯ ಶ್ರೀಮಂತನ ಬಂಗಲೆಯೂ ಆಲ್ಲದಂಥ ಅವನ ಮನೆಯು, ನದಿಯೊಂದನ್ನು ಒಳಗೊಂಡ ಕಣಿವೆಯಲ್ಲಿ ಇದ್ದಿತು. ಅತ್ತ ಇತ್ತಲಿನ ಬೆಟ್ಟಗಳ ಮೇಲೆ ಕಾಡು ನಿಬಿಡವಾಗಿ ಬೆಳೆದಿದ್ದಿತು; ಆ ಕಾಡುಗಳಲ್ಲಿ ಭವ್ಯವಾದ ಪುರಾತನ ಮರಗಳು ಇನ್ನೂ ಉಳಿದಿದ್ದುವು; ಫ್ರಾನ್ಸಿನ ಆ ಪ್ರಾಂತಕ್ಕೆ ಅತಿ ವಿರಳವಾದ ಪಕ್ಷಿಗಳನ್ನು ಅಲ್ಲಿ ಕಾಣಬಹುದಾಗಿತ್ತು. ಯಾವಾಗಲಾದರೂ ಒಮ್ಮೆ ಅಲ್ಲಿ ಹದ್ದುಗಳ ಷಿಕಾರಿಯನ್ನು ನಡೆಯಿಸುತ್ತಿದ್ದರು. ಜನನಿಬಿಡವಾದ ನಮ್ಮ ಹಳ್ಳಿಯ ಪ್ರದೇಶಕ್ಕೆ ಅಪರೂಪಕ್ಕೆ ಅತಿಕ್ರಮಿಸಿ ಬರುವ ವಲಸೆಹೋಗುವ ಹಕ್ಕಿಗಳು, ಹಿಂದೆ ತಾವು ರಾತ್ರಿಯಾದಾಗ ಸ್ವಲ್ಪ ಕಾಲ ತಂಗಲು ಆಸರೆಯಿತ್ತ ಗತಕಾಲದ ಕಾಡಿನ ಮೂಲೆಯನ್ನು ಅರಿದುವೊ ಅಥವಾ ನೆನೆಸಿಸಿಕೊಂಡುವೊ ಎಂಬಂತೆ, ನೇರವಾಗಿ ಭೀಮಾಕಾರದ ಆ ಓಕ್ ಮರಗಳ ಸಂದಣಿಗೆ ಇಳಿಯುತ್ತಿದ್ದುವು.

ಆ ಕಣಿವೆಯಲ್ಲಿ ಝರಿಗಳ ನೀರುಣುವ, ಕಟ್ಟೆಗಳಿಂದ ಹಲವಾಗಿ ಭಾಗಿಸಲ್ಪಟ್ಟ ವಿಶಾಲವಾದ ಹುಲ್ಲುಗಾವಲುಗಳಿದ್ದುವು. ಅನಂತರ, ಮುಂದೆ ಹರಿಯುತ್ತ, ಅಲ್ಲಿಯವರೆಗೂ ದಡಗಳಿರದಿರ ಮಧ್ಯೆ, ಕಟ್ಟನಲ್ಲಿ ಹರಿಯುತ್ತಿದ್ದ ನದಿಯು ವಿಶಾಲವಾದ ಜೌಗು ಪ್ರದೇಶವಾಗಿ ವಿಸ್ತಾರಗೊಂಡಿತ್ತು. ಆ ಜೌಗು ಪ್ರದೇಶವು ನಾನು ನೋಡಿದಂತೆ ಷಿಕಾರಿಯಾತಲು ಅತ್ಯುತ್ತಮ ಸ್ಥಳವಾಗಿದ್ದಿತು. ಅದಕ್ಕೆ ನನ್ನ ಚಿಕ್ಕಪ್ಪನ ಮಗನ ಜೋಪಾನದ ಕಾಪಿದ್ದಿತು. ಅವನು ಆ ಪ್ರದೇಶವನ್ನು ಕಾದಿರಿಸಿದ ವಸ್ತುವಂತೆ ನೋಡಿಕೊಳ್ಳುತ್ತಿದ್ದನು. ಜೌಗು ಪ್ರದೇಶವನ್ನು ಆವರಿಸಿದ ಆಪಿನಿಂದಾಗಿ, ಸರ್‌ಸರ್ ಎಂಬ ಶಬ್ದವುಂಟಾಗುತ್ತಿದ್ದುದಲ್ಲದೆ, ಆ ಜೌಗು ಪ್ರದೇಶವು ಆರಮ್ಯವಾಗಿ ಕಾಣುತ್ತಿದ್ದಿತು. ಆಪಿನ ಮಧ್ಯೆ ಅವುಗಳನ್ನು ಕತ್ತರಿಸಿ ಮಾಡಿದ್ದ ಇಕ್ಕಟ್ಟಾದ ದಾರಿಯಲ್ಲಿ, ಅಂಬಿಗರು ಹುಟ್ಟು ಹಾಕಲು, ಜೇಡಿಯನ್ನು ಒರೆಸುತ್ತ ಸನುವಾವ ತಳವುಳ್ಳ ದೋಣಿಗಳು ನಿಧಾನವಾಗಿ ಶಬ್ದವಿಲ್ಲದೆ ಹಾಯ್ದು ಹೋಗುವಾಗ, ಮಿಂಚಿನಮೀನು ನಲ್ಲೆಯಲ್ಲಿ ಅಡಗಿಕೊಳ್ಳುತ್ತಿತ್ತು, ಕಾಡುಕೋಳಿಯು ತನ್ನ ಚೂಪಾದ ಕರಿಯ ಕೊರಳು ಮುಂದಾಗಿ, ತಕ್ಷಣವೆ, ನೀರಿನೊಳಕ್ಕೆ ಮುಳುಗುತ್ತಿತ್ತು.

ನನಗೆ ನೀರು ಎಂದರೆ ಹುಚ್ಚು: ಸಮುದ್ರದ ನೀರು ಅಪರಿಮಿತವಾಗಿದ್ದರೂ, ಅತುಲ ಚೇತನಭರಿತವಾಗಿದ್ದರೂ, ಕಣ್ಣಿನ ದೃಷ್ಟಿಯಲ್ಲಿ ಸೆರೆಹಿಡಿಯಲಸದಳವಾಗಿದ್ದರೂ, ನನಗೆ ತುಂಬ ಪ್ರೀತಿ; ಮುಂದೆ ಜಾರಿ ಕಣ್ ತಪ್ಪಿಸಿ ಹರಿದೋಡುವ ಸುಂದರವಾದ ನದಿಯೆಂದರೆ ತುಂಬ ಆಸೆ; ಎಲ್ಲಕ್ಕೂ ವಿಗಿಲಿಲಾಗಿ, ಎಲ್ಲ ಜಲಚರಗಳ

* ಮೊಪಾಸಾಂತರ ಕತೆಯೊಂದರ ಅನುವಾದ. ಲೇ.

ಅನ್ಯ ಜೀವನಲೋಕವು ಜೀವನವೊಂದು ಕುಸಿಯುವ ಜಾಗು ಎಂದರೆ ತುಂಬುಗೆಳೆತನ. ಈ ಭೂಮಿಯ ಮೇಲೆ ಜಾಗು ತನ್ನದೆ ಆದ ಸೃಷ್ಟಿಯನ್ನುಳ್ಳ ಮಗುಮೊಂದು ಪ್ರಪಂಚ- ಆ ಪ್ರತ್ಯೇಕ ಪ್ರಪಂಚವು ತನ್ನದೆ ಆದ ಸ್ಥಳನಿವಾಸಿಗಳನ್ನು, ವಲಸೆಗಾರರನ್ನು, ತನ್ನದೆ ಆದ ನಾದ, ಶಬ್ದ, ಪದ್ಯ ಮತ್ತು, ಇವೆಲ್ಲವನ್ನು ಮೀರಿಸುವ ಕೌತುಕವನ್ನೂ ಹೊಂದಿದೆ. ಅಲ್ಲಿನ ಹೆಣ್ಣು ಕೋಳಿಗಿಂತ ಮತ್ತಾ- ವುದೂ ಹೆಚ್ಚು ಮನಮೋಹಕವಲ್ಲ. ತವಕಪೂರವಲ್ಲ. ಮತ್ತು ಭಯಾನಕವಲ್ಲ. ನೀರು ಆವರಿಸಿದ ಈ ತಗ್ಗಾನ ಬಯಲು ಪ್ರದೇಶದ ಮೇಲೆ ಆಸ್ಫುಟವಾದ ಅಂಜಿಕೆಯು ಮುಸುಕೇಕೆ? ಆಪಿನ ಮಧ್ಯೆ ನೀರು ಹರಿಯುವ ಸರ್‌ಸರ್ ಎಂಬ ವ್ಯಾಮವಾದ ಪದ್ಯೆ? ವಿಚಿತ್ರ- ವಾದ ಕೊಳ್ಳ ದೆವ್ವದ ಬೆಳಕೆ? ಪ್ರಶಾಂತವಾದ ರಾತ್ರಿಯಲ್ಲಿ ಬೀಸು ಬಿಡುವ ಮೌನವೆ? ತಗ್ಗಿನ ಬಯಲನ್ನು ಬಾಸಣಿಸಿದ ತೆರೆಯಂತೆ ತೋರುವ ಮೂಕ ಮಂಜೆ? ಕೇಳಿಸಿದಾಗ ಕೇಳದ ತೆರೆಗಳ ಬಡಿತದ, ಮೃದುವಾದ, ಸೌಮ್ಯವಾದ ನಾದವೆ? ಆ ನಾದವೇ ಈ ಜಾಗನ್ನು ಒನ್ಮೈಮೈ ಅರಿವಿಗೆ ನಿಲುಕದ ಭೀಕರವಾದ ಕೌತುಕವನ್ನೊಳಗೊಂಡ ಕನಸಿನ ಸೀಮೆಗಳನ್ನಾಗಿ ಗೈಯುವ, ಲೋಕದ ಸಿಡಿಮದ್ದಿಗಿಂತಲೂ, ನಭದ ಸಿಡಿಲಿಗಿಂತಲೂ ಭಯಾನಕವಾದ ಘರ್ಜನೆಯಾಗಿ ತೋರುವು. ದಿಲ್ಲನೆ ?— ಯಾವುದಿದು ಅಂಜಿಸುವುದು ?

ಅಲ್ಲ! ಬೇರೆ ಯಾವುದೊ ಅಂಜಿಕೆ ಅಲ್ಲುಂಟು- ಬೇರೊಂದು ರಹಸ್ಯ, ಬಹುಶಃ ಸೃಷ್ಟಿವೈಚಿತ್ರ್ಯದ ರಹಸ್ಯ! ಏಕೆಂದರೆ ತೇಜಕರನು ಪ್ರಕಾಶಿಸುತ್ತಿರುವಾಗ ಸುತ್ತಣ ನೆಲದ ಮೇಲೆಲ್ಲ ದಟ್ಟನಾಗಿ ಮಂಜು ಕವಿದಿರುವಾಗ, ಜಡವಾಗಿ ನಿಂತ ರಾತ್ರಿನೀರಿನಲ್ಲಿ ಅಲ್ಲಲ್ಲಿ ಮೊಟ್ಟ ಮೊದಲನೆಯ ಜೀವ ವಸ್ತುವಿನ ಹೃದಯ ಬಡಿಯಲಾರಂಭಿಸಿ, ಇಂದಿನ ಸ್ಥಿತಿಗೆ ವ್ಯಾಸಿಸಿದುದು ?

ಸಂಜೆ ನಾನು ಸೋದರ ರಾವೆಲ್ಲನ ಮನೆಗೆ ಬಂದೆ. ಚಳಿ ಮೈಯನ್ನು ಕೊರೆಯುತ್ತಿತ್ತು. ನಾವು ಬಾಬೆಕ್ಕೆ ಕುಳಿತ ಕೊಪಡಿಯು ಗೋಡೆ, ಪಾರ್ಶ್ವ ಮತ್ತು ಛಾವಣಿಯನ್ನೆಲ್ಲ ಕತ್ತೆರಿಸಿಟ್ಟ ಕೊಂಬೆಗಳ ಮೇಲೆ ಕುಳಿತ ಹಕ್ಕಿಗಳನೇಕವು, ಗಿಡಗ, ಬಕ, ರಣಹದ್ದು, ಗೂಬೆ ಮತ್ತಾವಾವೋ- ರೆಕ್ಕೆಯನ್ನು ತೆರೆದೊ ಅಥವಾ ಮುಚ್ಚಿಕೊಂಡೊ- ಆವರಿಸಿದ್ದುವು. ಕಡಲನಾಯಿಯ ಚರ್ಮದ ಜಂಗಿಯನ್ನು ತೊಟ್ಟು ಯಾವುದೊ ವಿಚಿತ್ರ ಪ್ರಾಣಿಯನ್ನು ಹೋಲುತ್ತಿದ್ದ ನನ್ನ ಸೋದರ ರಾವೆಲ್, ಆ ರಾತ್ರಿಯ ಬೇಟೆಗಾಗಿ ನಡೆದ ಸಿದ್ಧತೆಗಳನ್ನೆಲ್ಲ ಹೇಳಿದ.

ನಾವು ಮುಂಜಾವು ಮೂರುವರೆ ಗಂಟೆಗೆ ಹೊರಟು ಸುಮಾರು ನಾಲ್ಕುವರೆ ಗಂಟೆಯ ಹೊತ್ತಿಗೆ ಬೇಟೆಯ ಹಕ್ಕಿಗಳಿಗಾಗಿ ಕಾದು ಕುಳ್ಳಿರಲು ಅವನು ಸಿದ್ಧಪಡಿಸಿದ್ದ ಜಾಗವನ್ನು ತಲುಪಬೇಕಾಗಿತ್ತು.

ಬೆಳಕು ಹರಿಯುವ ಮುನ್ನ ಚಳಿಗಾಳಿ ಬೀಸುತ್ತದೆ; ಆ ಗಾಳಿ ಮೈಯನ್ನು ಗರಗಸದಂತೆ ಕೊಯ್ಯುತ್ತದೆ, ಚಾಕುವಿನ ಅಲಗಿನಂತೆ ಕತ್ತರಿಸುತ್ತದೆ, ವಿಷದ ಕೊಂಡಿಯಂತೆ ಕುಬ್ಜಿಸುತ್ತದೆ, ಇಕ್ಕುಳದಂತೆ, ತಿರುಚುತ್ತದೆ ಮತ್ತು ಬೆಂಕಿಯಂತೆ ಸುಡುತ್ತದೆ. ಆದರಿಂದ ರಕ್ಷಿಸಿ ಕೊಳ್ಳಲು ಮಂಜುಗಡ್ಡೆಗಳಿಂದ ನಿರ್ಮಿಸಿದ ಗುಡಿಸಿಲೊಂದು ಸಿದ್ಧವಾಗಿತ್ತು.

ನನ್ನ ಸೋದರ ಕೈಗಳನ್ನು ಉಜ್ಜಿಕೊಳ್ಳುತ್ತ ಹೇಳಿದ: 'ಇಂತ ಚಳಿಯನ್ನು ನಾನೆಂದೂ ಅನುಭವಿಸಿರಲಿಲ್ಲ. ಈಗಿನ್ನೂ ಸಂಜೆ ಆ ಗಂಟೆ; ಈಗಾಗಲೇ ಸೊನ್ನೆಡಿಗ್ರಿಗಿಂತ ಹನ್ನೆರಡು ಡಿಗ್ರಿ ಕೆಳಗಿಳಿದಿ ಶೈತ್ಯ ಪರಿಮಾಣ. "

ಊಟ ಮುಗಿದ ಕೂಡಲೇ ನಾನು ಹಾಸಿಗೆಯೊಳಗೆ ಹುದು ಕೊಂಡೆ. ಪ್ರಕಾಶಮಾನವಾದ ದೀಪವೊಂದು ಬೆಳಕನ್ನು ಚೆಲ್ಲುತ್ತಿತ್ತು

ಮೂರುಗಂಟೆಗೆ ಅವನು ನನ್ನನ್ನು ಎಬ್ಬಿಸಿದ. ನಾನು ಕುರಿ ಚರ್ಮದ ಅಂಗಿಯನ್ನು ತೊಟ್ಟುಕೊಂಡೆ; ಸೋದರ ಕಾರ್ಲ್ ಕರಡಿ ಚರ್ಮದ ಅಂಗಿಯನ್ನು ತೊಟ್ಟಿದ್ದ. ಒಬ್ಬೊಬ್ಬರೂ ಎರಡೆರಡು ಲೋ ಸುಡುವ ಕಾಫಿಯನ್ನು ಹೊಯ್ದುಕೊಂಡು, ಬ್ರಾಂದಿಯನ್ನು ಕುಡಿದ ಒಬ್ಬ ಬೇಟೆಯ ಆಳು ಪ್ಲಾಂಗಿಯನ್ ಮತ್ತು ಪೈರಾಟ್ ನಾ ಗಳೊಡನೆ ಹೊರಟಿವು.

ಮಕ್ಕಳ ಸದೃಢತೆಗಾಗಿ "ಬಗನ ಬಾಲಾಮೃತ"

ಹಲ್ಲು ಬರುವಾಗ "ಎಸ್ಸನ್ಸ್ ಗ್ರಾಇಫ್ ಹೀಲರ್"

ಜಂತು ಆದರೆ "ವರ್ಮ್ ಆಯಿಲ್"

ಉಪಯೋಗಿಸಿರಿ. ಇವು ಪತ್ರಿಯೊಬ್ಬ ಕುಟುಂಬಸ್ಥರಿಗೆ ಉಪಯೋಗಬೀಳುವ ಔಷಧಗಳು.

The National Pharmacies & Pharmaceuticals Ltd., Dharwar.

ಹೊರಗೆ ಕಾಲಿಟ್ಟ ಕ್ಷಣದಿಂದ ನನಗೆ .ಮಂಜಿನ ನೀರು ದೇಹಾ-ದ್ಯಂತ ಪ್ರವಹಿಸಲಾರಂಭಿಸಿದಂತಾಯ್ತು. ಭೂಮಿಯೆಲ್ಲ ಚಳಿಯಿಂದ ನಿಶ್ಚೇಷ್ಟಿತಗೊಂಡಂತೆ ಕಾಣುವ ರಾತ್ರಿಯದು. ಮಂಜುಗಟ್ಟಿದ ಗಾಳಿಯು ಕಣ್ಣಿಗೆ ಕಾಣುವ ಶತ್ರುವಿನಂತೆ ನಿಮ್ಮನ್ನು ಕಾಡುತ್ತದೆ. ಯಾವ ಬೇಸುಗಾಳಿಯು ಚಳಿಗಾಳಿಯನ್ನು ಅಲುಗಿಸಲಾರದು, ಅಷ್ಟು ನಿಶ್ಚಲವಾಗಿರುತ್ತದೆ ಅದು; ನಿಮ್ಮನ್ನು ಕಚ್ಚುತ್ತದೆ, ಚುಚ್ಚುತ್ತದೆ; ನಿಮ್ಮ ಚೈತನ್ಯರಸವೆಲ್ಲ ಒಣಗಿಹೋದಂತೆ, ಮೈಯೆಲ್ಲ ಜೋಮು ಹಿಡಿದು ಮರಕಟ್ಟಿದಂತೆ ಆಗುತ್ತದೆ. ಅದು ಗಿಡಗಳನ್ನು, ಬಳ್ಳಿಗಳನ್ನು, ಕೀಟಗಳನ್ನು, ಚಿಕ್ಕಹಕ್ಕಿಗಳನ್ನೂ, ಕೊಲ್ಲುತ್ತದೆ. ಚಳಿಯಿಂದ ಸತ್ತ ಎಲೆಗಳು ಮರದಿಂದ ನೆಲದ ಮೇಲಕ್ಕೆ ಬಿದ್ದು, ಅದರೊಡನೆ ಚಳಿಯ ಕ್ರೂರ ಸೆರೆಗೆ ಸಿಕ್ಕು ತಾವೂ ಕಠಿಣವಾಗುತ್ತವೆ, ಬಿರುಸಾಗುತ್ತವೆ. ಇದು ಚಳಿಯ ಪ್ರತಾಪ!

ಅಂತ್ಯದೆಶೆಯನ್ನು ಸಮೀಪಿಸುತ್ತಿದ್ದ ಹಿಮಕರನು ಒಂದೇ ದಿಕ್ಕಿಗೆ ಬೆಳಕನ್ನೀಯಲು ಶಕ್ತನಾಗಿದ್ದನು. ಗಗನದ ವಿಸ್ತಾರದಲ್ಲಿ ಚಂದ್ರನ ಬೆಳಕು ಕ್ಷೀಣನಾಗುತ್ತಲಿತ್ತು; ಸಂಪೂರ್ಣವಾಗಿ ನಭದಿಂದ ಮರೆಯಾಗಲಾರದೆ ಶೈತ್ಯದ ಕಠೋರತ್ವಕ್ಕೆ ತುತ್ತಾಗಿ ಚಂದ್ರನು ಕಾಂತಿರಹಿತನಾಗಿದ್ದನು. ಚಂದ್ರನು ಭೂಮಿಯ ಮೇಲೆ ಆದಿನ ಕಾಂತಿಗುಂದಿದ, ದುಃಖಶೂನ್ಯವಾದ ಬೆಳಕನ್ನು ಚೆಲ್ಲುದ್ದನು—ಆ ಬೆಳಕು ಕೃಷ್ಣಪಕ್ಷದ ಕೊನೆಯಲ್ಲಿ ಬೀರುವ ಕ್ಷೀಣವಾದ ಮುಸುಕು ಪ್ರಭೆಯಂತಿತ್ತು.

ಬೆನ್ನನ್ನು ಬಾಗಿಸಿ, ಕೈಗಳನ್ನು ಜೇಬಿನಲ್ಲಿ ತುರುಕಿಕೊಂಡು, ಬಂದೂಕುಗಳನ್ನು ಕೊಂಕುಳ ಸಂದಿಯಲ್ಲಿಟ್ಟುಕೊಂಡು ಕಾರ್ಲ್ ಮತ್ತು ನಾನು ಒಬ್ಬರ ಹಕ್ಕದಲ್ಲಿ ಒಬ್ಬರು ನಡೆದೆವು. ಮಂಜುಗಟ್ಟಿದ ನೀರಿನ ಮೇಲೆ ನಡೆದಾಗ ಜಾರಿಬೀಳಬಾರದೆಂದು ಉಣ್ಣೆಯಿಂದ ಸುತ್ತಿದ ನಮ್ಮ ಬೂಟುಗಳು ಶಬ್ದವನ್ನೇ ಮಾಡುತ್ತಲಿರಲಿಲ್ಲ. ನಮ್ಮ ನಾಯಿಗಳು ಉಸಿರುಬಿಟ್ಟಾಗ ಅದು ಬೆಳ್ಳಗೆ ಹಬೆಯಾಗಿ ತೇಲುವುದನ್ನು ನೋಡುತ್ತ ನಾನು ನಡೆದೆ.

ಸ್ವಲ್ಪಕಾಲದಲ್ಲಿಯೆ ನಾವು ಜೌಗಿನ ಅಂಚಿನ ಮೇಲಿದ್ದೆವು; ಕೆಳಗಿನ ಕಾಡಿನುದ್ದಕ್ಕೂ ಬೆಳೆದ ಒಣಗಿದ ಆಪಿನ ಮಧ್ಯದ ದಾರಿಯೊಂದನ್ನು ಹೊಕ್ಕೆವು.

ನಾವು ಮುಂದುವರಿದಂತೆಲ್ಲ ನಮ್ಮ ಮೊಳಕೈ ನೀಳವಾದ, ನೇರವಾದ ಆಪಿನಗರಿಗಳನ್ನು ತಾಗುವುದರಿಂದ ಉಂಟಾದ ಶಬ್ದ ಹೊರಡುತ್ತಿತ್ತು. ಜೌಗು ಪ್ರದೇಶಗಳು ನನ್ನಲ್ಲಿ ಸ್ಫುರಿಸುವ ತೀವ್ರವಾದ, ತೀಕ್ಷ್ಣವಾದ, ಅಪೂರ್ವ ಭಾವಾವೇಶವು ಮತ್ತಾವಾಗಲೂ ನನ್ನನ್ನು ಇಷ್ಟರಮಟ್ಟಿಗೆ ಮೈಮರೆಸಿರಲಿಲ್ಲ. ಅಲ್ಲಿನ ನಿವಾಸಿಗಳಾದ ಒಣಗಿದ ಆಪಿನ ಮಧ್ಯೆ ನಾವು ನಡೆಯಲಾರಂಭಿಸಿದ ಳಿಗೆಯಿಂದ ಈ ಜೌಗುಸತ್ತದೇಹದಂತೆ, ಚಳಿಕೊಂದ ಜೀವದಂತೆ ತೋರುತ್ತಿತ್ತು.

ಕೂಡಲೆ, ಒಂದು ದಾರಿಯು ಕೊನೆಯಲ್ಲಿ ತಿರುಗಿದಾಗ, ನಮಗೆ ಆಸರೆ ಯೀಯಲು ನಿರ್ಮಿಸಿದ್ದ ಗುಡಿಸಿಲು ನನ್ನ ದೃಷ್ಟಿಗೆ ಬಿದ್ದಿತು. ನಾನು ಒಳಹೊಕ್ಕೆ; ಅಲ್ಲಿ ಇಲ್ಲಿ ಅಲೆಯುವ ಹಕ್ಕಿಗಳು ಎಚ್ಚರಗೊಳ್ಳುವ ಸಮಯದವರೆಗೆ, ಇನ್ನೂ ಒಂದು ಘಂಟೆ ಕಾಲ, ಕಾಯಬೇಕಾದುದರಿಂದೆ, ನಾನು ಬೆಚ್ಚಗೆ ಮಾಡಿಕೊಳ್ಳಲು ಮೈತುಂಬ ಕಂಬಳಿಯನ್ನು ಸುತ್ತಿಕೊಂಡೆ. ಹಾಗೆಯೆ ಒರಗಿಕೊಂಡು, ಈ ಮಂಜುಗಡ್ಡೆಯ ಗುಡಿಸಲ ಅಲ್ಪಪಾರದರ್ಶಕ ಗೋಡೆಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಅಂದಗೆಟ್ಟ ಚಂದ್ರನನ್ನು ನೋಡತೊಡಗಿದೆ. ಅದರೆ, ಘನೀಭೂತವಾದ ಜೌಗಿನ ಶೈತ್ಯ, ಈ ಗೋಡೆಗಳಿಂದ ಬೀಸುತ್ತಿದ್ದ ಶೈತ್ಯ, ನಭದಿಂದ ತೂರಿಬರುತ್ತಿದ್ದ ಶೈತ್ಯಗಾಳಿ ನನ್ನನ್ನು, ತಡೆಯಲಾರದೆ ಕೆಮ್ಮಲಾರಂಭಿಸುವವರೆಗೆ ಕೊರೆದುಬಿಟ್ಟುವು. ಸೋದರ ಕಾರ್ಲಿನ ಮನಸ್ಸು ಮಾತಾಡತೊಡಗಿತು.

"ಈ ದಿನ ನಾವು ಹೆಚ್ಚು ಹಕ್ಕಿಗಳನ್ನು ಕೊಲ್ಲದಿದ್ದರೂ ಪರವಾಗಿಲ್ಲ. ನಿನಗೆ ಶೀತವುಂಟಾಗುವುದು ನನಗೆ ಸಮಾಧಾನವಲ್ಲ; ಬೆಂಕಿಯನ್ನು ಹತ್ತಿಸೋಣ" ಎಂದು, ಬೇಟೆಯಾಳಿಗೆ ಆಪನ್ನು ಕತ್ತರಿಸಲು ಹೇಳಿದ.

ಗುಡಿಸಿಲ ಮಧ್ಯದಲ್ಲಿ ಆಪಿನ ರಾಶಿಯನ್ನು ಒಟ್ಟಿದೆವು; ಮೇಲ್ಛಾವಣಿಯಲ್ಲಿ ಹೊಗೆ ಹೋಗಲು ರಂಧ್ರವೊಂದನ್ನು ಬಿಟ್ಟಿತ್ತು. ಬೆಂಕಿಯ ಕೆಂಪು ಜ್ವಾಲೆಗಳು ನಾಲಗೆ ಚಾಚಿದಾಗ, ಮಂಜಿನಗಡ್ಡೆಗಳು ಬೆವರು ಸುರಿಸಲಾರಂಭಿಸಿದಂತೆ, ನಿಧಾನವಾಗಿ, ಆವ್ಯಕ್ತವಾಗಿ ಕರಗಲಾರಂಭಿಸಿದುವು ಹೊರಗೆ ನಿಂತಿದ್ದ ಕಾರ್ಲ್, "ಇಲ್ಲಿ ಬಂದು ನೋಡು!" ಎಂದು ಕೂಗಿ ಕರೆದ, ನಾನು ಹೊರಕ್ಕೆ ಬಂದು ನಿಂತುನೋಡಿದಾಗ ಆಶ್ಚರ್ಯಗೊಂಡೆ. ಕೋಣಾಕರದ ನಮ್ಮ ಗುಡಿಸಿಲು ಜೌಗಿನ ಮಂಜುಗಟ್ಟಿದ್ದ ನೀರಿನಲ್ಲಿ ಹತಾತ್ತನೆ ಹಬ್ಬಿದ್ದ ಬೆಂಕಿಯನ್ನೊಳಗೊಂಡು, ಅದ್ಭುತವಾದ ವಜ್ರದಂತೆ ತೋರುತ್ತಿತ್ತು. ಒಳಗೆ, ಬೆಂಕಿ ಕಾಸಿಕೊಳ್ಳುತ್ತಿದ್ದ ನಮ್ಮ ಎರಡು ನಾಯಿಗಳಲ್ಲಿ, ಎರಡು ವಿಲಕ್ಷಣ ಆಕಾರಗಳನ್ನು ನಾವು ಕಂಡೆವು.

ಅವನೆ, ವಿಚಿತ್ರವಾದ, ನಾಲ್ಕು ಮೂಲೆಗೂ ಅಲೆಯುವ, ನೀಳವಾದ ಕೂಗು ಆಕಾಶದಲ್ಲಿ ಕೇಳಿಸಿತು. ಗುಡಿಸಿಲಿನೊಳಗಿನ ಬೆಂಕಿಯ ಬೆಳಕಿನಲ್ಲಿ ಕಾಡುಹಕ್ಕಿಗಳು ಹಾರುತ್ತಿರುವುದು ಕಾಣಿಸಿತು. ಚಳಿಗಾಲದಂದು ಮೂಡಣಬಾನಂಚಿನಲ್ಲಿ ದಿನದ ಮೊದಲನೆಯ ರವಿಕಿರಣಗಳು ಬೆಳಗುವ ಮುನ್ನ, ಕಣ್ಣಿಗೆ ಬೀಳದಂತೆ, ಮಂದವಾದ ಗಾಳಿಯಲ್ಲಿ ಎಲ್ಲೋ ದೂರಕ್ಕೆ, ತೇಲಿಹೋಗುವ ಹಕ್ಕಿಯ ಜಾಗ್ರತಾವಸ್ಥೆಯ ಕುರುಹಾದ ಪ್ರಥಮರವದಂತೆ ಮತ್ತಾವುದೂ ಜೀವವನ್ನು ಆನಂದಗೊಳಿಸಲಾರದು. ಹಕ್ಕಿ ಬಡಿಯುವ ರೆಕ್ಕೆಗಳು ಒಯ್ಯುವ ಆ ನೀಳವಾದ ಕೂಗು, ಮಂಜುಕವಿದ ಮುಂಜಾವಿನ ಈ ಳಿಗೆಯಲ್ಲಿ ಪ್ರಪಂಚದ ಮೇಲಿನ ಆತ್ಮವೊಂದರ ನಿಟ್ಟುಸಿರೊ ಎಂಬಂತೆ ತೋರುತ್ತದೆ!

"ಬೆಂಕಿಯನ್ನು ಆರಿಸು; ಈಗಾಗಲೆ ಬೆಳಕಾಗುತ್ತಿದೆ." ಕಾರ್ಲ್ ಕೂಗಿದ.

ಆಕಾಶದ ಬಣ್ಣವು ಮಬ್ಬಾಗುತ್ತ ಬಂದಿತು; ಬಾತುಕೋಳಿಗಳ ಹಾರಾಟವು ಆಕಾಶದಲ್ಲಿ ಎಳೆದ ನೀಳವಾದ ಗೆರೆಗಳು ಕೂಡಲೆ ಮುಸುಕುಗೊಂಡು ಅಳಿಸಿಹೋದುವು.

ಅದೃಶ್ಯ ಜೀವನಲೋಕವು ಚೀತನಗೊಂಡು ಕಂಪಿಸುವ ಜೌಗು ಎಂದರೆ ತುಂಬುಗೆಳೆತನ. ಈ ಭೂವಿಯ ಮೇಲೆ ಜೌಗು ತನ್ನದೆ ಆದ ಸೃಷ್ಟಿಯನ್ನುಳ್ಳ ಮಗುದೊಂದು ಪ್ರಪಂಚ– ಆ ಪ್ರತ್ಯೇಕ ಪ್ರಪಂಚವು ತನ್ನದೆ ಆದ ಸ್ಥಿರನಿವಾಸಿಗಳನ್ನು, ವಲಸೆಗಾರರನ್ನು, ತನ್ನದೆ ಆದ ನಾದ, ಶಬ್ದ, ಸದ್ದು ಮತ್ತು, ಇವೆಲ್ಲವನ್ನು ಮೀರಿಸುವ ಕೌತುಕವನ್ನೂ ಹೊಂದಿದೆ. ಅಲ್ಲಿನ ಹೆಣ್ಣು ಕೋಳಿಗಿಂತ ಮತ್ತಾವುದೂ ಹೆಚ್ಚು ಮನಮೋಹಕವಲ್ಲ, ತವಕಪೂರವಲ್ಲ. ಮತ್ತು ಭಯಾನಕವಲ್ಲ. ನೀರು ಆವರಿಸಿದ ಈ ತಗ್ಗಾದ ಬಯಲು ಪ್ರದೇಶದ ಮೇಲೆ ಅಸ್ಪುಟವಾದ ಅಂಜಿಕೆಯ ಮುಸುಕೇಕೆ? ಆಪಿನ ಮಧ್ಯೆ ನೀರು ಹರಿಯುವ ಸರ್‌ಸರ್ ಎಂಬ ಮೃದುವಾದ ಸದ್ದೆ? ವಿಚಿತ್ರವಾದ ಕೊಳ್ಳಿ ದೆವ್ವದ ಬೆಳಕೆ? ಪ್ರಶಾಂತವಾದ ರಾತ್ರಿಯಲ್ಲಿ ಬೀಡು ಬಿಡುವ ಮೌನವೆ? ತಗ್ಗಿನ ಬಯಲನ್ನು ಬಾಸಣಿಸಿದ ತೆರೆಯಂತೆ ತೋರುವ ಮೂಕ ಮಂಜೆ? ಕೇಳಿಸಿದರೂ ಕೇಳದ ತೆರೆಗಳ ಬಡಿತದ, ಮೃದುವಾದ, ಸೌಮ್ಯವಾದ, ನಾದವೆ? ಆ ನಾದವೇ ಈ ಜಾಗನ್ನು ಒಮ್ಮೊಮ್ಮೆ ಅರಿವಿಗೆ ನಿಲುಕದ ಭೀಕರವಾದ ಕೌತುಕವನ್ನೊಳಗೊಂಡ ಕನಸಿನ ಸೀಮೆಗಳನ್ನಾಗಿ ಗೈಯುವ, ಲೋಕದ ಸಿಡಿಮದ್ದಿಗಿಂತಲೂ, ನಭದ ಸಿಡಿಲಿಗಿಂತಲೂ ಭಯಾನಕವಾದ ಘರ್ಜನೆಯಾಗಿ ತೋರುವು. ದಿಲ್ಲವೆ?—ಯಾವುದಿದು ಅಂಜಿಸುವುದು?

ಅಲ್ಲ! ಬೇರೆ ಯಾವುದೊ ಅಜಿಕೆ ಅಲ್ಲುಂಟು– ಬೇರೊಂದು ರಹಸ್ಯ, ಬಹುಶಃ ಸೃಷ್ಟಿನೈಚಿತ್ರ್ಯದ ರಹಸ್ಯ! ಏಕೆಂದರೆ ತೇಜಕರನು ಪ್ರಕಾಶಿಸುತ್ತಿರುವಾಗ ಸುತ್ತಣ ನೆಲದ ಮೇಲೆಲ್ಲ ದಟ್ಟನಾಗಿ ಮಂಜು ಕವಿದಿರುವಾಗ, ಜಡವಾಗಿ ನಿಂತ ರಾಡಿನೀರಿನಲ್ಲಿ ಅಲ್ಲವೆ ಮೊಟ್ಟ ಮೊದಲನೆಯ ಜೀವ ವಸ್ತುವಿನ ಹೃದಯ ಬಡಿಯಲಾರಂಭಿಸಿ, ಇಂದಿನ ಸ್ಥಿತಿಗೆ ವ್ಯಾಪಿಸಿದುದು?

ಸಂಜೆ ನಾನು ಸೋದರ ರಾವೆಲ್ಲನ ಮನೆಗೆ ಬಂದೆ. ಚಳಿ ನೈಯನ್ನು ಕೊರೆಯುತ್ತಿತ್ತು. ನಾವು ಊಟಕ್ಕೆ ಕುಳಿತ ಕೊಪಡಿಯ ಗೋಡೆ, ಪಾರ್ಶ್ವ ಮತ್ತು ಛಾವಣಿಯನ್ನೆಲ್ಲ, ಕತ್ತರಿಸಿಟ್ಟ ಕೊಂಬೆಗಳ ಮೇಲೆ ಕುಳಿತ ಹಕ್ಕಿಗಳನೇಕವು, ಗಿಡಗ, ಬಕ, ರಣಹದ್ದು, ಗೂಬೆ ಮತ್ತಾವಾವೊ– ಲೆಕ್ಕೆಯನ್ನು ತೆರೆದೊ ಅಥವಾ ಮುಚ್ಚಿಕೊಂಡೊ– ಆವರಿಸಿದ್ದುವು. ಕಡಲನಾಯಿಯ ಚರ್ಮದ ಅಂಗಿಯನ್ನು ತೊಟ್ಟು ಯಾವುದೊ ವಿಚಿತ್ರ ಪ್ರಾಣಿಯನ್ನು ಹೋಲುತ್ತಿದ್ದ ನನ್ನ ಸೋದರ ರಾವೆಲ್, ಆ ರಾತ್ರಿಯ ಬೇಟೆಗಾಗಿ ನಡೆದ ಸಿದ್ಧತೆಗಳನ್ನೆಲ್ಲ ಹೇಳಿದ.

ನಾವು ಮುಂಜಾವು ಮೂರುವರೆ ಗಂಟೆಗೆ ಹೊರಟು ಸುಮಾರು ನಾಲ್ಕುವರೆ ಗಂಟೆಯ ಹೊತ್ತಿಗೆ ಬೇಟೆಯ ಹಕ್ಕಿಗಳಿಗಾಗಿ ಕಾದು ಕುಳ್ಳಿರಲು ಅವನು ಸಿದ್ಧಪಡಿಸಿದ್ದ ಜಾಗವನ್ನು ತಲುಪಬೇಕಾಗಿತ್ತು.

ಬೆಳಕು ಹರಿಯುವ ಮುನ್ನ ಚಳಿಗಾಳಿ ಬೀಸುತ್ತದೆ; ಆ ಗಾಳಿ ನೈಯನ್ನು ಗರಗಸದಂತೆ ಕೊಯ್ಯುತ್ತದೆ, ಚಾಕುವಿನ ಅಲಗಿನಂತೆ ಕತ್ತರಿಸುತ್ತದೆ, ವಿಷದ ಕೊಂಡಿಯಂತೆ ಕುಟುಕುತ್ತದೆ, ಇಕ್ಕುಳದಂತೆ, ತಿರುಚುತ್ತದೆ ಮತ್ತು ಬೆಂಕಿಯಂತೆ ಸುಡುತ್ತದೆ. ಅದರಿಂದ ರಕ್ಷಿಸಿಕೊಳ್ಳಲು ಮಂಜುಗಡ್ಡೆಗಳಿಂದ ನಿರ್ಮಿಸಿದ ಗುಡಿಸಿಲೊಂದು ಆ[illegible] ಸಿದ್ಧವಾಗಿತ್ತು.

ನನ್ನ ಸೋದರ ಕೈಗಳನ್ನು ಉಜ್ಜಿಕೊಳ್ಳುತ್ತ ಹೇಳಿದ: 'ಇಂತಹ ಚಳಿಯನ್ನು ನಾನೆಂದೂ ಅನುಭವಿಸಿರಲಿಲ್ಲ. ಈಗಿನ್ನೂ ಸಂಜೆ ಆ[illegible] ಗಂಟೆ; ಈಗಾಗಲೇ ಸೊನ್ನೆ ಡಿಗ್ರಿಗಿಂತ ಹನ್ನೆರಡು ಡಿಗ್ರಿ ಕೆಳಗಿಳಿದಿ[illegible] ಶೈತ್ಯ ಪರಿಮಾಣ.'

ಊಟ ಮುಗಿದ ಕೂಡಲೇ ನಾನು ಹಾಸಿಗೆಯೊಳಗೆ ಹುದುಗಿಕೊಂಡೆ. ಪ್ರಕಾಶಮಾನವಾದ ದೀಪವೊಂದು ಬೆಳಕನ್ನು ಚೆಲ್ಲುತ್ತಿತ್ತು.

ಮೂರುಗಂಟೆಗೆ ಅವನು ನನ್ನನ್ನು ಎಬ್ಬಿಸಿದ. ನಾನು ಕುರಿಯ ಚರ್ಮದ ಅಂಗಿಯನ್ನು ತೊಟ್ಟುಕೊಂಡೆ; ಸೋದರ ಕಾಲ್ಡ್ ಕರಡಿಯ ಚರ್ಮದ ಅಂಗಿಯನ್ನು ತೊಟ್ಟಿದ್ದ. ಒಬ್ಬೊಬ್ಬರೂ ಎರಡೆರಡು ಲೋಟ ಸುಡುವ ಕಾಫಿಯನ್ನು ಹೊಯ್ದುಕೊಂಡು, ಬ್ರಾಂದಿಯನ್ನು ಕುಡಿದ ಒಬ್ಬ ಬೇಟೆಯ ಅಳು ಪ್ಲಾಂಗಿಯನ್ ಮತ್ತು ಪೈರಾಟ್ ನಾಡಗೆಳೊಡನೆ ಹೊರಟಿವು.

ಮಕ್ಕಳ ಸದೃಢತೆಗಾಗಿ

"ಬಗನ ಬಾಲಾಮೃತ"

ಹಲ್ಲು ಬರುವಾಗ

ಎಸ್ಸೆನ್ಸ್ ಗ್ರಾಯಿಪ್ ಹೀಲರ್

ಜಂತು ಆದರೆ

"ಪರ್ಮ್ ಆಯಿಲ್

ಉಪಯೋಗಿಸಿರಿ. ಇವು ಪತ್ರಿಯೊಬ್ಬ ಕುಟುಂಬಸ್ಥರಿಗೆ ಉಪಯೋಗಬೀಳುವ ವಿಷಧಗಳು.

The National Pharmacies & Pharmaceuticals Ltd., Dharwar.

ಹೊರಗೆ ಕಾಲಿಟ್ಟ ಕ್ಷಣದಿಂದ ನನಗೆ ಮಂಜಿನ ನೀರು ದೇಹಾದ್ಯಂತ ಪ್ರವಹಿಸಲಾರಂಭಿಸಿದಂತಾಯ್ತು. ಭೂಮಿಯೆಲ್ಲ ಚಳಿಯಿಂದ ನಿಶ್ಚೇಷ್ಟಿತಗೊಂಡಂತೆ ಕಾಣುವ ರಾತ್ರಿಯದು. ಮಂಜುಗಟ್ಟಿದ ಗಾಳಿಯು ಕಣ್ಣಿಗೆ ಕಾಣುವ ಶತ್ರುವಿನಂತೆ ನಿಮ್ಮನ್ನು ಕಾಡುತ್ತದೆ. ಯಾವ ಬೀಸುಗಾಳಿಯು ಚಳಿಗಾಳಿಯನ್ನು ಅಲುಗಿಸಲಾರದು, ಅಷ್ಟು ನಿಶ್ಚಲವಾಗಿರುತ್ತದೆ ಅದು; ನಿಮ್ಮನ್ನು ಕಚ್ಚುತ್ತದೆ, ಚುಚ್ಚುತ್ತದೆ, ನಿಮ್ಮ ಚೈತನ್ಯರಸವೆಲ್ಲ ಒಣಗಿಹೋದಂತೆ, ಮೈಯೆಲ್ಲ ಜೋಮು ಹಿಡಿದು ಮರಗಟ್ಟಿದಂತೆ ಆಗುತ್ತದೆ. ಅದು ಗಿಡಗಳನ್ನು, ಬಳ್ಳಿಗಳನ್ನು, ಕೀಟಗಳನ್ನು, ಚಿಕ್ಕಹಕ್ಕಿಗಳನ್ನೂ, ಕೊಲ್ಲುತ್ತದೆ. ಚಳಿಯಿಂದ ಸತ್ತ ಎಲೆಗಳು ಮರದಿಂದ ನೆಲದ ಮೇಲಕ್ಕೆ ಬಿದ್ದು, ಅದರೊಡನೆ ಚಳಿಯ ಕ್ರೂರ ಸೆರೆಗೆ ಸಿಕ್ಕು ತಾವೂ ಕಠಿಣವಾಗುತ್ತವೆ, ಬಿರುಸಾಗುತ್ತವೆ. ಇದು ಚಳಿಯ ಪ್ರತಾಪ!

ಅಂತ್ಯದಿಶೆಯನ್ನು ಸಮೀಪಿಸುತ್ತಿದ್ದ ಹಿಮಕರನು ಒಂದೇ ದಿಕ್ಕಿಗೆ ಬೆಳಕನ್ನೀಯಲು ಶಕ್ತನಾಗಿದ್ದನು. ಗಗನದ ವಿಸ್ತಾರದಲ್ಲಿ ಚಂದ್ರನ ಬೆಳಕು ಕ್ಷೀಣವಾಗುತ್ತಲಿತ್ತು; ಸಂಪೂರ್ಣವಾಗಿ ನಭದಿಂದ ಮರೆಯಾಗಲಾರದೆ ಶೈತ್ಯದ ಕಠೋರತ್ವಕ್ಕೆ ತುತ್ತಾಗಿ ಚಂದ್ರನು ಕಾಂತಿರಹಿತನಾಗಿದ್ದನು. ಚಂದ್ರನು ಭೂಮಿಯ ಮೇಲೆ ಆದಿನ ಕಾಂತಿಗುಂದಿದ, ದುಃಖಶೂನ್ಯವಾದ ಬೆಳಕನ್ನು ಚೆಲ್ಲಿದ್ದನು—ಆ ಬೆಳಕು ಕೃಷ್ಣಪಕ್ಷದ ಕೊನೆಯಲ್ಲಿ ಬೀರುವ ಕ್ಷೀಣವಾದ ಮುಸುಕು ಪ್ರಭೆಯಂತಿತ್ತು.

ಬೆನ್ನನ್ನು ಬಾಗಿಸಿ, ಕೈಗಳನ್ನು ಜೇಬಿನಲ್ಲಿ ತುರುಕಿಕೊಂಡು, ಬಂದೂಕುಗಳನ್ನು ಕೊಂಕುಳ ಸಂದಿಯಲ್ಲಿಟ್ಟುಕೊಂಡು ಕಾರ್ಲ್‌ ಮತ್ತು ನಾನು ಒಬ್ಬರ ಪಕ್ಕದಲ್ಲಿ ಒಬ್ಬರು ನಡೆದೆವು. ಮಂಜುಗಟ್ಟಿದ ನೀರಿನ ಮೇಲೆ ನಡೆದಾಗ ಜಾರಿಬೀಳಬಾರದೆಂದು ಉಣ್ಣೆಯಿಂದ ಸುತ್ತಿದ ನಮ್ಮ ಬೂಟುಗಳು ಶಬ್ದವನ್ನೇ ಮಾಡುತ್ತಲಿರಲಿಲ್ಲ. ನಮ್ಮ ನಾಯಿಗಳು ಉಸಿರುಬಿಟ್ಟಾಗ ಅದು ಬೆಳ್ಳಗೆ ಹಬೆಯಾಗಿ ತೇಲುವುದನ್ನು ನೋಡುತ್ತ ನಾನು ನಡೆದೆ.

ಸ್ವಲ್ಪಕಾಲದಲ್ಲಿಯೆ ನಾವು ಜಾಗಿನ ಅಂಚಿನ ಮೇಲಿದ್ದೆವು; ಕೆಳಗಿನ ಕಾಡಿನುದ್ದಕ್ಕೂ ಬೆಳೆದ ಒಣಗಿದ ಆಪಿನ ಮಧ್ಯದ ದಾರಿಯೊಂದನ್ನು ಹೊಕ್ಕೆವು.

ನಾವು ಮುಂದುವರಿದಂತೆಲ್ಲ ನಮ್ಮ ಮೊಳಕೈ ನೀಳವಾದ, ನೇರವಾದ ಆಪಿನಗರಿಗಳನ್ನು ತಾಗುವುದರಿಂದ ಉಂಟಾದ ಶಬ್ದ ಹೊರಡುತ್ತಿತ್ತು. ಜಾಗು ಪ್ರದೇಶಗಳು ನನ್ನಲ್ಲಿ ಸ್ಫುರಿಸುವ ತೀವ್ರವಾದ, ತೀಕ್ಷ್ಣವಾದ, ಅಪೂರ್ವ ಭಾವಾವೇಶವು ಮತ್ತಾವಾಗಲೂ ನನ್ನನ್ನು ಇಷ್ಟರಮಟ್ಟಿಗೆ ಮೈಮರೆಸಿರಲಿಲ್ಲ. ಅಲ್ಲಿನ ನಿವಾಸಿಗಳಾದ ಒಣಗಿದ ಆಪಿನ ಮಧ್ಯೆ ನಾವು ನಡೆಯಲಾರಂಭಿಸಿದ ಘಳಿಗೆಯಿಂದ ಈ ಜಾಗುಸತ್ತದೇಹದಂತೆ, ಚಳಿಕೊಂದ ಜೀವದಂತೆ ತೋರುತ್ತಿತ್ತು.

ಕೂಡಲೆ, ಒಂದು ದಾರಿಯು ಕೊನೆಯಲ್ಲಿ ತಿರುಗಿದಾಗ, ನಮಗೆ ಆಸರೆ ಯೀಯಲು ನಿರ್ಮಿಸಿದ್ದ ಗುಡಿಸಿಲು ನನ್ನ ದೃಷ್ಟಿಗೆ ಬಿದ್ದಿತು. ನಾನು ಒಳಹೊಕ್ಕೆ; ಅಲ್ಲಿ ಇಲ್ಲಿ ಅಲೆಯುವ ಹಕ್ಕಿಗಳು ಎಚ್ಚರಗೊಳ್ಳುವ ಸಮಯದವರೆಗೆ, ಇನ್ನೂ ಒಂದು ಘಂಟೆ ಕಾಲ, ಕಾಯುಬೇಕಾದುದರಿಂದ, ನಾನು ಬೆಚ್ಚಗೆ ಮಾಡಿಕೊಳ್ಳಲು ಮೈತುಂಬ ಕಂಬಳಿಯನ್ನು ಸುತ್ತಿಕೊಂಡೆ. ಹಾಗೆಯೆ ಒರಗಿಕೊಂಡು, ಈ ಮಂಜುಗಡ್ಡೆಯ ಗುಡಿಸಲ ಅಲ್ಪಪ್ರಾರದರ್ಶಕ ಗೋಡೆಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಅಂದಗೆಟ್ಟ ಚಂದ್ರನನ್ನು ನೋಡತೊಡಗಿದೆ. ಆದರೆ, ಘನೀಭೂತವಾದ ಜೌಗಿನ ಶೈತ್ಯ, ಈ ಗೋಡೆಗಳಿಂದ ಬೀಸುತ್ತಿದ್ದ ಶೈತ್ಯ, ನಭದಿಂದ ತೂರಿಬರುತ್ತಿದ್ದ ಶೈತ್ಯಗಾಳಿ ನನ್ನನ್ನು, ತಡೆಯಲಾರದೆ ಕೆಮ್ಮಲಾರಂಭಿಸುವವರೆಗೆ ಕೊರೆದುಬಿಟ್ಟುವು. ಸೋದರ ಕಾರ್ಲಿನ ಮನಸ್ಸು ಪೇಚಾಡತೊಡಗಿತು.

"ಈ ದಿನ ನಾವು ಹೆಚ್ಚು ಹಕ್ಕಿಗಳನ್ನು ಕೊಲ್ಲದಿದ್ದರೂ ಪರವಾಗಿಲ್ಲ. ನಿನಗೆ ಶೀತವುಂಟಾಗುವುದು ನನಗೆ ಸಮಾಧಾನವಲ್ಲ; ಬೆಂಕಿಯನ್ನು ಹತ್ತಿಸೋಣ" ಎಂದು, ಬೇಟೆಯಾಳಿಗೆ ಅಪನ್ನು ಕತ್ತರಿಸಲು ಹೇಳಿದ.

ಗುಡಿಸಿಲ ಮಧ್ಯದಲ್ಲಿ ಆಪಿನ ರಾಶಿಯನ್ನು ಒಟ್ಟಿದೆವು; ಮೇಲ್ಛಾವಣಿಯಲ್ಲಿ ಹೊಗೆ ಹೋಗಲು ರಂಧ್ರವೊಂದನ್ನು ಬಿಟ್ಟಿತ್ತು. ಬೆಂಕಿಯ ಕೆಂಪು ಜ್ವಾಲೆಗಳು ನಾಲಗೆ ಚಾಚಿದಾಗ, ಮಂಜಿನಗಡ್ಡೆಗಳು ಬೆವರು ಸುರಿಸಲಾರಂಭಿಸಿದಂತೆ, ನಿಧಾನವಾಗಿ, ಅವ್ಯಕ್ತವಾಗಿ ಕರಗಲಾರಂಭಿಸಿದುವು ಹೊರಗೆ ನಿಂತಿದ್ದ ಕಾರ್ಲ್, "ಇಲ್ಲಿ ಬಂದು ನೋಡು!" ಎಂದು ಕೂಗಿ ಕರೆದ, ನಾನು ಹೊರಕ್ಕೆ ಬಂದು ನಿಂತುನೋಡಿದಾಗ ಆಶ್ಚರ್ಯಗೊಂಡೆ. ಕೋಣಾಕಾರದ ನಮ್ಮ ಗುಡಿಸಿಲು ಜೌಗಿನ ಮಂಜುಗಟ್ಟಿದ್ದ ನೀರಿನಲ್ಲಿ ಹತಾತ್ತನೆ ಹಚ್ಚಿದ್ದ ಬೆಂಕಿಯನ್ನೊಳಗೊಂಡು, ಆದ್ಭುತವಾದ ವಜ್ರದಂತೆ ತೋರುತ್ತಿತ್ತು. ಒಳಗೆ, ಬೆಂಕಿ ಕಾಸಿಕೊಳ್ಳುತ್ತಿದ್ದ ನಮ್ಮ ಎರಡು ನಾಯಿಗಳಲ್ಲಿ, ಎರಡು ವಿಲಕ್ಷಣ ಆಕಾರಗಳನ್ನು ನಾವು ಕಂಡೆವು.

ಅವನ್ನೆ, ವಿಚಿತ್ರವಾದ, ನಾಲ್ಕು ಮೂಲೆಗೂ ಆಲೆಯುವ, ನೀಳವಾದ ಕೂಗು ಆಕಾಶದಲ್ಲಿ ಕೇಳಿಸಿತು. ಗುಡಿಸಿಲಿನೊಳಗಿನ ಬೆಂಕಿಯ ಬೆಳಕಿನಲ್ಲಿ ಕಾಡುಹಕ್ಕಿಗಳು ಹಾರುತ್ತಿರುವುದು ಕಾಣಿಸಿತು. ಚಳಿಗಾಲದಂದು ಮೂಡಣಬಾನಂಚಿನಲ್ಲಿ ದಿನದ ಮೊದಲನೆಯ ರವಿಕಿರಣಗಳು ಬೆಳಗುವ ಮುನ್ನ, ಕಣ್ಣಿಗೆ ಬೀಳದಂತೆ, ಮಂದವಾದ ಗಾಳಿಯಲ್ಲಿ ಎಲ್ಲೋ ದೂರಕ್ಕೆ, ತೇಲಿಹೋಗುವ ಹಕ್ಕಿಯ ಜಾಗ್ರತಾವಸ್ಥೆಯ ಕುರುಹಾದ ಪ್ರಥಮರವದಂತೆ ಮತ್ತಾವುದೂ ಜೀವವನ್ನು ಆನಂದಗೊಳಿಸಲಾರದು. ಹಕ್ಕಿ ಬಡಿಯುವ ರೆಕ್ಕೆಗಳು ಒಯ್ಯುವ ಆ ನೀಳವಾದ ಕೂಗು, ಮಂಜುಕವಿದ ಮುಂಜಾವಿನ ಈ ಘಳಿಗೆಯಲ್ಲಿ ಪ್ರಪಂಚದ ಮೇಲಿನ ಆತ್ಮವೊಂದರ ನಿಟ್ಟುಸಿರೊ ಎಂಬಂತೆ ತೋರುತ್ತದೆ!

"ಬೆಂಕಿಯನ್ನು ಆರಿಸು; ಈಗಾಗಲೆ ಬೆಳಕಾಗುತ್ತಿದೆ." ಕಾರ್ಲ್ ಕೂಗಿದ.

ಆಕಾಶದ ಬಣ್ಣವು ಮಬ್ಬಾಗುತ್ತ ಬಂದಿತು; ಬಾತುಕೋಳಿಗಳ ಹಾರಾಟವು ಆಕಾಶದಲ್ಲಿ ಎಳೆವ ನೀಳವಾದ ಗೆರೆಗಳು ಕೂಡಲೆ ಮುಸುಕುಗೊಂಡು ಅಳಿಸಿಹೋದುವು.

ಕತ್ತಲಿಗೆ ಬೆಳಕಿನ ಪ್ರವಾಹವು ಮಗ್ಗಿತು; ಕಾರ್ಲ್ ಗುಂಡನ್ನು ಹಾರಿಸಿದ್ದನು. ಎರಡು ನಾಯಿಗಳು ಮುಂದೆ ಓಡಿದುವು

ತದನಂತರ, ನಿಮಿಷನಿಮಿಷಕ್ಕೂ. ಆಪಿನ ಮೇಲೆ ಹಾರುವ ಹಕ್ಕಿಗಳ ಗುಂಪಿನ ನೆಳಲು ಬಿದ್ದೊತನೆಯೆ, ಈಗ ನಾನು, ಈಗ ಅವನು ಗುರಿಯಿಟ್ಟು ಹೊಡೆಯತೊಡಗಿದೆವು. ಪೈರಾಟ್ ಮತ್ತು ಪ್ಲಾಂಗಿಯಾನ್‌ಗಳು ಏದುತ್ತ ಅದರೂ ಸಂತೋಷದಿಂದ ರಕ್ತಚೆಲ್ಲುತ್ತ ಬಿದ್ದಿದ್ದ ಪಕ್ಷಿಗಳನ್ನು ಹೊತ್ತು ತರುತ್ತಿದ್ದುವು; ಆ ಪಕ್ಷಿಗಳು, ಒಮ್ಮೊಮ್ಮೆ, ನಮ್ಮತ್ತ ನೋಡುತ್ತಿದ್ದುವು.

ಸೂರ್ಯನು ಹುಟ್ಟಿದನು; ಆ ದಿನದ ನೀಲಿಯಾಗಸದಲ್ಲಿ ಬೆಳಕು ತುಂಬಿತ್ತು. ನಾವು ಹಿಂತಿರುಗುವ ಯೋಚನೆಯಲ್ಲಿದ್ದಾಗ ಎರಡು ಹಕ್ಕಿಗಳು, ಕತ್ತನ್ನು ನೀಳವಾಗಿ ಚಾಚಿಕೊಂಡು, ರೆಕ್ಕೆಯನ್ನು ತೆರೆದು ವೇಗವಾಗಿ ಹಾರುತ್ತ ನಡೆದುವು. ನಾನು ಗುಂಡಿಟ್ಟು ಹೊಡೆದೆ: ಒಂದು ನನ್ನ ಕಾಲಬಳಿಯೆ ಸತ್ತುಬಿದ್ದಿತು. ಅದು ಬೆಳ್ಳಿ ಎದೆಯ ಚಿಕ್ಕ ಜಾತಿಯ ಹೆಣ್ಣು ಬಾತು. ನನ್ನ ಮೇಲಿನ ನೀಲಿಯಾಗಸದಲ್ಲಿ, ನನಗೊಂದು ಶಬ್ದಕೇಳಿಸಿತು—ಹಕ್ಕಿಯೊಂದರ ಶಬ್ದ. ಆಶಬ್ದ, ಭೀಕ್ಷ್ಣವಾದ, ಎದೆಕರಗಿಸುವ ಒತ್ತಿಬರುತ್ತಿದ್ದ ಆಕ್ರಂದನ. ಗುಂಡಿಗೆ ತುತ್ತಾಗದೆ ಉಳಿದಿದ್ದ ಸಣ್ಣಹಕ್ಕಿ. ನೀಲಿಯಾಗಸದಲ್ಲಿ, ನಮ್ಮ ತಲೆಯ ಮೇಲೆ, ನಾನು ಕೈಯಲ್ಲಿ ಹಿಡಿದಿದ್ದ ಗತಪ್ರಾಣನಾದ ಸಂಗಾತಿಯನ್ನು ನೋಡುತ್ತ ಸುತ್ತತೊಡಗಿತು.

ಬಂದೂಕನ್ನ ಹೆಗಲಮೇಲಿಟ್ಟುಕೊಂಡು, ಅದನ್ನು ಜಾಗರೂಕತೆಯಿಂದ ಈಕ್ಷಿಸುತ್ತ, ಅದು ಗುರಿಗೆ ಸಿಲುಕಲಿ ಎಂದು ಮೊಣಕಾಲೂರಿ ಕಾರ್ಲ್ ಕುಳಿತಿದ್ದ. ಕಾರ್ಲ್ ಹೇಳಿದ:

"ಹೆಣ್ಣು ಬಾತನ್ನು ಕೊಂದುಬಿಟ್ಟಿದ್ದೀಯೆ; ಇನ್ನು ಗಂಡು-ಬಾತು ಹಾರಿ ಹೋಗುವುದಿಲ್ಲ."

ಅದು ನಿಜವಾಗಿಯೂ ಹಾರಿಹೋಗಲಿಲ್ಲ; ಅದು ನಮ್ಮ ತಲೆಯ ಮೇಲೆ ಗರ್ರನೆ ತಿರುಗುತ್ತ, ಆಕ್ರಂದನ ಮಾಡುತ್ತಲೆ ಇತ್ತು. ಈ ನಿರ್ಭಾಗ್ಯ ಹಕ್ಕಿಯ, ಗಾಳಿಯಲ್ಲಿ ಕರಗಿಹೋದ ನಿಸ್ಸಹಾಯಕತೆಯ ಮೊರೆ, ಅಳಲುಕ್ಕಿಸುವ ಈ ದೂರನಿಸ್ಸು ಮತ್ತಾನ ದುಃಖದಿರ್ಶನಾದವೂ ನನ್ನ ಮನಸ್ಸನ್ನು ನೋಯಿಸಿತ್ತು.

ಅದರ ಚಲನೆಯನ್ನೆ ಅನುವರ್ತಿಸಿನ್ನ ಬಂದೂಕಿನ ಪೌರ್ಜನ್ಯವನ್ನು ಆಗಾಗ ಬುಗುರಂಚಿನಲ್ಲಿ ತಪ್ಪಿಸಿಕೊಂಡು ಹಾರಾಡಿತು, ಹಕ್ಕಿ; ಒಂಟಿಯವಾಗಿ ಯಾನವನ್ನು ಮುಂದುವರಿಸುವಂತೆ ಕಂಡಿತು; ಆದರೆ, ಹೃದಯವನ್ನು ಅಸ್ಪು ಕಲ್ಲುವಾಡಿಕೊಳ್ಳಲಾಗಲಿಲ್ಲವಾದುದರಿಂದ ಸಂಗಾತಿಯನ್ನು ನೋಡಲು ಹಿಂತಿರುಗಿತು.

"ಹೆಣ್ಣು ಹಕ್ಕಿಯನ್ನು ನೆಲದಮೇಲಿಡು. ಗಂಡುಹಕ್ಕಿ ನಿಧಾನವಾಗಿ ಗುರಿಗೆ ಸಿಕ್ಕುತ್ತದೆ."—ಕಾರ್ಲ್ ಹೇಳಿದ. ನಿಜವಾಗಿಯೂ ಅದು ನಮ್ಮ ಹತ್ತಿರಕ್ಕೆ ಬಂದಿತು; ಅಪಾಯವನ್ನು ಲೆಕ್ಕಿಸದೆ, ಪ್ರಾಣಸಹಜ ಪ್ರೇಮದಿಂದ ಮರುಳುಗೊಂಡು, ಸಂಗಾತಿಗೆ ತನ್ನಲ್ಲಿದ್ದ ಒಲವಿನ ಬಲುಮೆಯಿಂದ ಹತ್ತಿರಕ್ಕೆ ಬಂದಿತು ಗಂಡು ಹಕ್ಕಿ.

ಕಾರ್ಲ್ ಗುಂಡು ಹಾರಿಸಿದ ಆಕಾಶದಲ್ಲಿ ಹಕ್ಕಿಯನ್ನು ತೀಲಿಸುತ್ತಿದ್ದ ದಾರವನ್ನು ಯಾರೊ ಕತ್ತರಿಸಿದಂತಾಯಿತು. ಕರಿಯ ವಸ್ತುವೊಂದು ಇಳಿದಂತೆ ನನಗೆ ಕಂಡಿತು; ಆಪಿನ ಮಧ್ಯೆ ಏನೋ ಬಿದ್ದ ಸಪ್ಪಳವಾಯಿತು. ಪೈರಾಟ್ ಅದನ್ನು ಕಚ್ಚಿ ತಂದಿತು.

ನಾನು ಅವುಗಳನ್ನು – ಆವಾಗಶೆ ತಣ್ಣಗಾಗಿದ್ದುವು – ಬೇಟೆಯ ಚೀಲದೊಳಕ್ಕೆ ತುರುಕಿದೆ. ಆ ಸಂಜೆಯೆ ನಾನು ಪ್ಯಾರಿಸ್ಸಿಗೆ ಹೊರಟುಬಂದೆ.

ಧಾರವಾಡಕ್ಕೆ ಬರುವ ಪ್ರವಾಸಿಕರಿಗೆ ವಸತಿ-ಭೋಜನದ ಸೌಕರ್ಯ!

ಯೋಚನೆಯನ್ನೇ ಮಾಡಬೇಡಿರಿ! ನೇರವಾಗಿ ಇಲ್ಲಿಯೇ ಬನ್ನಿರಿ!

ಶ್ರೀ ಕೃಷ್ಣ ಮಂದಿರ

ಧಾರವಾಡದ ಜ್ಯುಬಲಿ ಸರ್ಕಲಿನಲ್ಲಿ ಬೋರ್ಡಿಂಗ್ ಮತ್ತು ಲಾಜಿಂಗ್ ಹೌಸ್

ಶುಚಿಯಾದ ವಾತಾವರಣ! ರುಚಿರುಚಿಯಾದ ಪದಾರ್ಥಗಳು! ಆದರದ ಸ್ವಾಗತ!

ಕೋರ್ಟು–ಕಚೇರಿ–ಶಾಲೆ–ಕಾಲೇಜುಗಳಿಗೆ ಹತ್ತಿರವಾಗಿದ್ದು, ರೇಲ್ವೆಸ್ಟೇಶನಿಗೆ ಹೋಗುವ ದಾರಿಯಲ್ಲಿಯೇ ಇದೆ. ವಸತಿಗಾಗಿ ಅಚ್ಚುಕಟ್ಟಾದ ಏರ್ಪಾಡು ಇದೆ.

ಮಾಲಕರು:— **ಮೆಸರ್ಸ್ ಎಂ. ಆರ್. ಮಳಯೆ**

SHRI KRISHNA MANDIRA, DHARWAR
BOARDING & LODGING HOUSE

ಮ್ಯಾಕ್ಸ್‌ಮುಲ್ಲರರು ಪತ್ನಿಗೆ ಬರೆದ ಕೆಲ ಕಾಗದಗಳು.

(ಬಿಡಿಸಿ ಬರೆಸಿರುವುದು.)

ಶ್ರೀಮತಿ ಸರೋಜಿನಿ ಮಹಿಷಿ ಎಂ. ಎ. ಬೆಳಗಾಂವಿ

●

ಮ್ಯಾಕ್ಸ್‌ಮುಲ್ಲರರ ತಾತ್ತ್ವಿಕ ವಿಚಾರಸರಣಿಗೂ ನಮ್ಮಲ್ಲಿಯ ಹರಿದಾಸ ಶಿವಶರಣರ ತಾತ್ತ್ವಿಕ ವಿಚಾರಸರಣಿಗೂ ವ್ಯತ್ಯಾಸವೇನಾದರೂ ತೋರುವುದೆ? ಯಾವ ದೇಶವಾದರೇನು— ಯಾವ ಕಾಲವಾದರೇನು—ಬೆಳಕು ಎಲ್ಲ ಕಡೆಗೂ ಒಂದೆ ಬಗೆಯಾಗಿರುವುದು.

●

(೧)

"ನಿಶ್ಚಿತವಾಗಿ ಎಲ್ಲವೂ ನಮ್ಮ ಹಿತಕ್ಕಾಗಿಯೆ ಆಗುತ್ತಿದೆ ಎಂಬ ವಿಶ್ವಾಸ ಇರಿಸಲ್ಪಟ್ಟಿದೆ. ದೇವರ ಇಚ್ಛೆಯಿಲ್ಲದೆ ಯಾವ ಕ್ಷುಲ್ಲಕ ಸಂಗತಿಯೂ ಘಟಿಸದು. ಯಾವುದೊಂದು ಸಂದರ್ಭ ಅರ್ಥವಿಲ್ಲದ್ದೆಂದು ತಿಳಿದರೆ, ಅಥವಾ ದೈವವಶಾತ್ ಬಂದಿತೆಂದರೆ, ದೇವರಲ್ಲಿಯ ನಮ್ಮ ವಿಶ್ವಾಸ ನುಚ್ಚುನೂರಾಗುವುದು. ಆ ಭಗವಂತನನ್ನು ನಂಬದೆ ಹೋದರೆ ನಾವು ಎಲ್ಲಿರುತ್ತೇವೋ! ನಮಗಾಗಿ ಅವನು ಸುಖವನ್ನಿಟ್ಟರಲಿ, ಅಥವಾ ದುಃಖವನ್ನಿಟ್ಟರಲಿ, ನಾವು ಅವನನ್ನು ನಂಬಲೇಬೇಕು. ವಿಶೇಷವಾಗಿ ಸುಖವೇ ಬಂದರೆ, ನಾವು ಬಲು ಎಚ್ಚರಿಕೆಯಿಂದಿರಬೇಕು! ನಮ್ಮನ್ನು ಪರೀಕ್ಷಿಸಲೆಂದೇ ಪರಮಾತ್ಮ ಹಾಗೆ ಸುಖವನ್ನು ಕೊಟ್ಟು ನೋಡುತ್ತಾನೆ.—ಅಂತಹ ಸುಖ, ನಾನವನ್ನು ಪಡೆಯಲು ಯೋಗ್ಯರೆಂದು ಬಂದುದಲ್ಲ! ಇದಕ್ಕೆ ವಿರುದ್ಧವಾಗಿ ದುಃಖ ಪರಮಾತ್ಮನಿಗೆ ನಮ್ಮೊಡನಿದ್ದ ಅಸಂತುಷ್ಟಿಯ ಕುರುಹಲ್ಲ, ಅದು ಅವನ ಕಾರುಣ್ಯ! ಅದರ ಮೂಲಕವಾಗಿಯೇ ನಾವು ಮತ್ತೆ ಪರಮಾತ್ಮನನ್ನು ಸೇರಬಲ್ಲೆವು. ಮೃತ್ಯು ನಮ್ಮನ್ನು ಅವನ ಸಾನ್ನಿಧ್ಯಕ್ಕೆ ಕರೆದೊಯ್ಯುತ್ತದೆ. ಸಾಮಾನ್ಯ ಮನುಷ್ಯನು ಅದರ ನೆನಪಿನಿಂದಲೇ ನಡುಗುತ್ತಾನೆ! ಅದರೆ ಕರುಣಾಳುವಾದ ದೇವರು, ಅಜನನ್ನು ಕೈ ಬಿಡದೆ ಕರೆದೊಯ್ಯುತ್ತಾನೆ. ನಾವು ಭೂಮಿಯ ಮೇಲಿದ್ದು, ಇನ್ನೂ ಅವನ ಸೇವೆಯನ್ನು ಮಾಡಬೇಕೆಂದಿದ್ದರೆ, ಅದೂ ಸಂತೋಷ! ಅಥವಾ ನಮ್ಮಿರ್ವರಲ್ಲಿ ಒಬ್ಬರು ಅವನ ಬಳಿ ಇರಬೇಕೆಂದರೆ, ಅದೂ ನನಗೆ ಮೆಚ್ಚಿಕೆ! ನಮ್ಮ ಜೀವನವಿದ್ದುದು ಮರಣದ ನೆರಳಿನಲ್ಲಿ! ಅದರೆ ಆ ನೆರಳು ಜೀವನದ ಪ್ರಕಾಶವನ್ನು ಕುಗ್ಗಿಸದಂತೆ ನಾವು ನೋಡಿಕೊಳ್ಳಬೇಕು, ಅಷ್ಟೇ! ಆ ನೆರಳು ಪರಮಾತ್ಮನ ಕೈಯ ಕುರುಹು, ನಮ್ಮ ಜೀವನೋತ್ತರದ ಸುಪ್ರಕಾಶ! ಪತಿ ತನ್ನ ಪತ್ನಿಯನ್ನು ಪ್ರೀತಿಸಲಿಕ್ಕೆಲ್ಲ, ತಾಯಿ ತನ್ನ ಮಗುವನ್ನು ಪ್ರೀತಿಸಲಿಕ್ಕಿಲ್ಲ — ಅಷ್ಟೊಂದು ಪ್ರೀತಿಯಿಂದ ಆ ಪರಮಾತ್ಮ ನಮ್ಮನ್ನು ನೋಡಿಕೊಳ್ಳುತ್ತಾನೆ. ಅವನು ಕೈವಿಡಿದು ಕಾಪಾಡುವನೆಂಬಲ್ಲಿ ನನಗೆ ಪೂರ್ಣ ವಿಶ್ವಾಸವಿದೆ." (ಪತ್ನಿ ತನ್ನ ತವರುಮನೆಯಲ್ಲಿ ಅನಾರೋಗ್ಯದಿಂದ ಬಳಲುತ್ತಿದ್ದಾಗ ಬರೆದ ಪತ್ರವಿದು!)

(೨)

ಆಕ್ಸಫರ್ಡ್ ನವೆಂಬರ್ ಗಿಲಿಗಿ

"ಈ ಜೀವನದ ಬಗ್ಗೆ ಅಷ್ಟೊಂದು ಪ್ರೀತಿಯನ್ನಿಟ್ಟುಕೊಳ್ಳಬಾರದೆಂದರೆ, ಅದು ಸಾಧ್ಯವೇ ಇಲ್ಲ. ಅದನ್ನು ಹೆಚ್ಚು ಆಸ್ಥೆಯಿಂದ ನೋಡಿಕೊಂಡಷ್ಟೂ ನಮ್ಮ ದುಃಖ ಹೆಚ್ಚು; ಯಾಕೆಂದರೆ ಒಂದಿಲ್ಲೊಂದು ದಿನ ಅದು ನಮ್ಮ ಕಣ್ಣಿನಿಂದ ಮರೆಯಾಗುವುದೆಂಬಲ್ಲಿ ಸಂಶಯವೇ ಇಲ್ಲ; ಆದರೆ ಆದರೊಡನೆ. ನಮ್ಮ ಪ್ರೇಮವೂ ಮರೆಯಾಗುವುದೇ? ನನಗೆ ಈ ಮಾತಿನಲ್ಲಿ ವಿಶ್ವಾಸವಿಲ್ಲ. ನಮ್ಮೊಬ್ಬರನ್ನಲ್ಲದೆ, ನಾಲ್ಕು ಜನರನ್ನು ಪರಮಾತ್ಮ ಸೃಷ್ಟಿಸಿದ್ದಾನೆ. ಅಂತಹ ನಮ್ಮೆಲ್ಲರಿಗಾಗಿ ಏಸುವು ತಾನೇ ಮರಣಹೊಂದಿದನು. ಅಂತೂ ನಮ್ಮ ಜೀವನ ಸ್ವಭಾವತಃ ಅಪರಿಪೂರ್ಣ; ಪರಮಾತ್ಮನಲ್ಲಿಯೂ, ಮನುಷ್ಯರಲ್ಲಿಯೂ ನಾವು ತೋರಿಸುವ ಪ್ರೇಮದಿಂದ ಅದು ಪೂರ್ಣವಾಗಬೇಕಾದುದು. ಮನುಷ್ಯಜೀವನದ ಯಾವ ಹಂತದಲ್ಲೂ ಅಶ್ರೀಯರ ಪ್ರೇಮ ಬಿಟ್ಟುದಲ್ಲ: ದೇವನಲ್ಲಿರುವ ಪ್ರೀತಿಯೊಂದಿಗೆ ಅದೂ ಕೂಡ ಇರಬಲ್ಲದು. ನಾವು ಇಲ್ಲಿ ಹೆಚ್ಚು ಪ್ರೀತಿಸುವ ಜನರನ್ನು ಸ್ವರ್ಗದಲ್ಲಿಯೂ ಹೆಚ್ಚು ಪ್ರೀತಿಸಬಹುದು.—ಅಥವಾ ಅಲ್ಲಿ ಎಲ್ಲರನ್ನೂ ಹೆಚ್ಚಾಗಿಯೇ ಪ್ರೀತಿಸಬಹುದು. ನಮ್ಮ ನಮ್ಮಲ್ಲಿ ಉಂಟಾಗಿದ್ದ ಕೃತಕ ಭೇದಭಾವಗಳನ್ನು ಕಿತ್ತೊಗೆದು 'ನಾವೆಲ್ಲ ಪರಮಾತ್ಮನ ಮಕ್ಕಳು' ಎಂಬ ಭಾವನೆಯನ್ನು ದೃಢಗೊಳಿಸಲು ಪ್ರೇಮವು ತುಂಬ ಪೋಷಕವಾಗಿದೆ. ಏಸುವು ಮಾತ್ರ ನಮ್ಮೆಲ್ಲರ ಬಗ್ಗೆ ಇದ್ದ ತನ್ನ ಅಧಿಕ ಪ್ರೀತಿಯಿಂದ, ಮತ್ತು ಅಷ್ಟೇ ಅಳವಾದ ಪರಮಾತ್ಮ ಪ್ರೀತಿಯಿಂದ ಇವನ್ನು ಸಾಧಿಸಿದನು. ನಮಗಾಗಿ ತನ್ನ ಜೀವನವನ್ನೇ ಮೀಸಲಾಗಿಟ್ಟನು! ಎಷ್ಟೇ ಪ್ರೀತಿಯಿದ್ದರೂ

ಯಾವ ತಾಯಿಯಾಗಲಿ, ಪತ್ನಿಯಾಗಲಿ ಹೀಗೆ ಮಾಡಬಹುದೇ? ಜೀವನವು ಅಪರಿಪೂರ್ಣವಾದುದು; ಪ್ರೇಮದಿಂದಲೇ ಅದು ಪರಿಪೂರ್ಣತೆಯನ್ನು ಪಡೆಯುತಕ್ಕುದು. ಪರಿಪೂರ್ಣವೆಂದು ಹೊರನೋಟಕ್ಕೆ ಕಾಣುವ ಪ್ರೇಮವು ಕೂಡ ಅಪರಿಪೂರ್ಣವಾಗಿಯೇ ಇರುತ್ತದೆ: ಪರಿಪೂರ್ಣವಾದುದು ಸ್ವಾರ್ಥವನ್ನು—ಸ್ವಾರ್ಥಕ್ಕೆ ಸಂಬಂಧಪಟ್ಟುದನ್ನು—ಹೊದೆದೋಡಿಸುತ್ತದೆ. ಅದಕ್ಕಾಗಿ ನಮ್ಮ ಪ್ರೇಮ ಹೆಚ್ಚಾಗುವಂತೆ ನೋಡಿಕೊಳ್ಳಬೇಕೇ ವಿನಾ ಕಡಿಮೆಯಾಗುವಂತಲ್ಲ. ಇಲ್ಲಿ ಅಪರಿಪೂರ್ಣವೆಂದೆನಿಸಿಕೊಂಡುದು ನಾಶಹೊಂದಬೇಕಷ್ಟೆ; ಮುಂದೆ ಪರಿಪೂರ್ಣವಾಗಬೇಕಾದುದು. ಆ ಪರಮಾತ್ಮನಲ್ಲಿ ಸರ್ವಸ್ವವೂ ಪರಿಪೂರ್ಣವಾಗಿದೆ; ಅವನಿಲ್ಲದೆ ಯಾವುದೂ ಪರಿಪೂರ್ಣವಾಗದು. ನಾವು ವಿಶ್ವಾಸದಿಂದ ಪರಮಾತ್ಮನನ್ನು ಪ್ರೀತಿಸಿದರೆ ಯಾವುದಕ್ಕೂ ಹೆದರಬೇಕಾಗಿಲ್ಲ. ಇಲ್ಲಿ ನಮ್ಮ ಜೀವನ ಅಸ್ಥಿರವೆನಿಸಿದರೂ, ಪರಮಾತ್ಮನಲ್ಲಿ ನಮ್ಮ ಸ್ಥಾನ ಸ್ಥಿರವಾಗಿದೆಯೆಂಬುದನ್ನು ನಂಬಬೇಕು!

(೩)

ಎಪ್ರಿಲ್ ೧೯, ಆಕ್ಸ್‌ಫರ್ಡ್.

ಮನೆಯು ಸುಖಕರವಾದ ವಾತಾವರಣದಲ್ಲಿ ನಮ್ಮನ್ನಿಟ್ಟು, ಮೇಲೆ ಸ್ವಾಧೀನವಾಗುವುದು ಬೇಡ ಎಂದರೆ ಸಾಧ್ಯವೇ? ಕಷ್ಟಕರವಾದ ಯಾವ ಕರ್ತವ್ಯಗಳೂ ನಮಗಿಲ್ಲದಿದ್ದರೆ ಹೇಗೆ? ನಾನಿನ್ನೂ ಬಹಳ ಕಾರ್ಯವನ್ನು ಮಾಡಬೇಕಾಗಿದೆ. ಬರೀ ಕಾರ್ಯವನ್ನೇ ಮಾಡಬೇಕೆಂದು ಆಶೆ! ಅದು ಈಗಲ್ಲದಿದ್ದರೂ ಕೊನೆಗೆ, ನನಗೂ ಹಿತಕರ, ಇತರರಿಗೂ ಲಾಭದಾಯಕ!..... ಒಂದೊಂದು ಸಲ ಎನಿಸುತ್ತದೆ: ನಿನುಗಾಗಿ, ಸಮಾಜಕ್ಕಾಗಿ ನನ್ನ ಹೆಚ್ಚು ವೇಳೆಯನ್ನು ಮೀಸಲಾಗಿತಬೇಕೆಂದು! ಆದರೆ ಇಂತಹ ಅಮೂಲ್ಯ ವೇಳೆಯನ್ನು ನನ್ನ ಮುಂದಿರುವ ಅಪಾರಕಾರ್ಯವನ್ನು ಪೂರೈಸಲು ವೆಚ್ಚ ಮಾಡಿದರೆ — ಆದಕ್ಕೆ ಪರಮಾತ್ಮನ ಬೆಂಬಲವಿದ್ದರೆ, ಎಷ್ಟು ಕಾರ್ಯವಾದೀತು!.... ಎಂದು ಯೋಚಿಸುತ್ತೇನೆ. ಜಗತ್ತಿನ ಹಿಂದೆ ಪರಮಾತ್ಮನ ಕಾರುಣ್ಯಪೂರ್ಣ ಹಸ್ತವಿದ್ದೇ ಇದೆ-ಎಂದು ತೋರಿಸಲು ಅದು ಸಹಾಯಕವಾದೀತು! ಅವನ ಕಾರುಣ್ಯವನ್ನರಿಯುವುದು ಮೊದಲಿಗೆ ಕೊಂಚ ಕಠಿಣವಾದೀತು! ಅವನ ಕಾರುಣ್ಯದ ಅಭಿವ್ಯಕ್ತಿಯ ರೀತಿ ಅರ್ಥವಾಗದೆ ಹೋದೀತು! ಹೀಗೆಯೇ ನಿನ್ನ ಕರುಣೆಯನ್ನು ತೋರಿಸೆಂದು ಅವನಿಗೆ ಹೇಳಲು ನಾವಾರು? ಸರಿ, ನಾನು ಆ ಕಾರ್ಯವನ್ನು ಮಾತ್ರ ಬಿಡಕೂಡದು. ಜಗತ್ತು ಒಂದು ರಂಗಭೂಮಿ; ಅದಿಯಿಂದ ಅಂತ್ಯದ ವರೆಗೂ, ಅರ್ಥವಿಲ್ಲದುದು, ಉದ್ದೇಶರಹಿತವಾದುದು, ಇಲ್ಲಿ ಯಾವುದೂ ಇಲ್ಲ! ನನ್ನ ಕಾರ್ಯ ಕ್ಷುದ್ರವೆಂದು ಈಗೆನಿಸಿದರೂ, ಮುಂದೆ ಜಗತ್ತಿನ ಇತಿಹಾಸದಲ್ಲಿಯೇ ಅದೊಂದು ಮನ್ನಣೆಯನ್ನು ಪಡೆಯುತ್ತದೆಂಬ ನನ್ನ ವಿಶ್ವಾಸ! ಸದ್ಯದ ನನ್ನ ಕಾರ್ಯ, ಮೇಲಿನ ಕೂಳೆಯನ್ನು ತೊಳೆಯುವುದೇ ಆಗಿದೆ. ಅದರಿ ಕ್ರಮೇಣ ತೊಳೆದಂತೆ, ಅಂತರ್ನಿಹಿತ ದೇಗುಲವೂ ಇದೆಯೆಂಬುದು ನಿನಗೂ ಸ್ಪಷ್ಟವಾದೀತು!

(೪)

ಲಂಡನ್, ಜುಲೈ ೭.

ಇಂದು ನಮ್ಮ ಧರ್ಮದ ವಿರುದ್ಧವಾಗಿ, ತೀರ ದುಷ್ಟವಾ ವಿಚಾರವನ್ನು ಕೇಳಿದೆ, ಓದಿದೆಯೆಂದು ತಿಳಿಸಲು ವಿಷಾದವಾಗುತ್ತ ಆ ಧರ್ಮಗುರುವಿನ ತತ್ತ್ವಗಳ ಸತ್ಯ ವಿವೇಚನೆಗೆ ನನ್ನ ಜೀವನವನ್ನೆ ಮೀಸಲಾಗಿಡಬೇಕೆಂದು ನಾನು ಆಶಿಸುತ್ತೇನೆ. ನಮ್ಮ ಆಪತ್ತಿಗಳ ಉಗಮಸ್ಥಾನವೆಂದರೆ, ಸ್ವಾರ್ಥಸಾಧಕರಿಂದ ರಚಿತವಾದ ತತ್ತ್ವಗಳು ಅಧ್ಯಾತ್ಮತತ್ತ್ವದ ಸತ್ಯವನ್ನು ಸಿದ್ಧಮಾಡಿ ತೋರಿಸಲು, ಬಾಹ್ಯ ಸಾಧನಗಳಿಲ್ಲ. ಒಳಗಿರುವ ನಮ್ಮ ಆತ್ಮವೇ ಅದಕ್ಕೆ ಸಾಕ್ಷಿಯಾಗಿದೆ. ಹಾಗೆ ನಮಗೆ ಹೊಳೆಯದೆ ಹೋದರೆ, ನಾವಿನ್ನೂ ಸಂಪೂರ್ಣವಾ ಏಸುವಿನ ಶಿಷ್ಯರಾಗಿಲ್ಲವೆಂದೇ ಹೇಳಬಹುದು. ಇನ್ನುಮೇಲಾದರೂ ಎಚ್ಚರಿಗೋಣ; ನಮ್ಮ ಸಂಶಯಗಳನ್ನು ನಿವಾರಿಸಿಕೊಳ್ಳೋಣ; ಉತ್ಪನ್ನವಾದ ಶಂಕೆಯನ್ನು ಹಾಗೇ ಹೆತ್ತಿಕ್ಕಿದರೆ, ಆತ್ಮದ ಸತ್ಯವನ್ನೆ ಹೆತ್ತಿಕ್ಕಿದಂತೆ! ಶಂಕೆಯನ್ನು ಉಸುರಿದರೆ, ಅದರ ನಿರಸನವಾದಂತೆ! ಈ ಎಲ್ಲ ಜಿಜ್ಞಾಸೆಗೆ ಮನಸ್ಸು ಸ್ಥಿಮಿತದಲ್ಲಿರಬೇಕು. ಈ ಕಾರ್ಯ ನಮ್ಮ ಜೀವನದಲ್ಲಿ ಮಹತ್ತ್ವದ ಸ್ಥಾನವನ್ನು ಪಡೆದರೆ ಮಾತ್ರ ನಾವದನ್ನು ಪೂರೈಸಬಲ್ಲೆವು: ಸತ್ಯಕ್ಕಾಗಿ ಇದ್ದ ನಮ್ಮ ಸಂಘರ್ಷಕ್ಕೆ ಪರಮಾತ್ಮನ ಬೆಂಬಲವು ಇದ್ದೇ ಇದೆ!

(೫)

ಆಕ್ಸ್‌ಫರ್ಡ್, ಮಾರ್ಚ್, ೧೪.

ಈ ವಾರ ಯೋಗಿಯಂತಿದ್ದು ನನ್ನ ಕಾರ್ಯವನ್ನು ಪೂರೈಸಬೇಕೆಂದಿದ್ದೇನೆ. ಶಕ್ಯವಿದ್ದ ಶಕ್ತಿಯನ್ನೆಲ್ಲ ಬಳಸಿ, ಕಾರ್ಯ

ಚಿತ್ರಗುಪ್ತ

ಕರ್ನಾಟಕದ ಅತ್ಯಂತ ಜನಪ್ರಿಯ ವಾರಪತ್ರಿಕೆ

ವಾರದಕಥೆ—ಕಾವ್ಯೋದ್ಯಾನ—ಪುಸ್ತಕ ಪ್ರಪಂಚ
ಛಾಯಾಲೋಕ-ನಾವು ನೀವು-ವಾರಭವಿಷ್ಯ
ರಾಜಕೀಯ ಸಿಂಹಾವಲೋಕನ
ಇತ್ಯಾದಿ, ಇತ್ಯಾದಿ
ಏಜೆಂಟರಿಲ್ಲದ ಕಡೆ ಏಜೆಂಟರು ಬೇಕಾಗಿದ್ದಾರೆ
ವಿವರಗಳಿಗೆ

ಚಿತ್ರಗುಪ್ತ—ಪೋ. ಬಾಕ್ಸ್ ೧೪೯—ಬೆಂಗಳೂರು ೨

ಮಾಡಲೆಂದೇ ನಾವಿಲ್ಲಿ ಹುಟ್ಟಿ ಬಂದಿದ್ದು. ಜೀವನದಲ್ಲಿ ಬರುವ ದೈಹಿಕಸುಖದ ಕೆಲವಂಶವನ್ನು ನಾವದರಿಂದ ಬಿಡಬೇಕಾದರೂ, ಅಪಾರವಾದ ಸಾತ್ತ್ವಿಕ ಸುಖ ನಮಗೆ ದೊರೆಯುವುದು ನಿಶ್ಚಿತ. ಅಲ್ಲದೆ ನಿರರ್ಥಕವಾಗಿ ನಾವು ಜೀವಿಸುತ್ತಿದ್ದೇವೆ ಎಂಬ ಭಾವನೆಯೂ ಅಳಿದುಹೋಗುತ್ತದೆ. ಆಗ ನಾವು ರಜೆಯ ಅವಧಿಯನ್ನು ಅಧಿಕಾರ ಪೂರ್ಣವಾಗಿ ಉಪಯೋಗಿಸಬಹುದು. ನಮ್ಮ ಬೇಸಗೆಯ ಬಿಡುವು ಹೀಗೆಯೇ ಸಂತೋಷದಲ್ಲಿ ಕೊಳೆಯುತ್ತದೆಂದುಆಶೆ! ಆದರೆ ಅದಕ್ಕೆ ಮೊದಲು ತುಂಬಾ ಕೆಲಸವಿದೆ ಮತ್ತೆ!

(೬)

ಎಪ್ರಿಲ್ ೭.

ನಿನ್ನ ಹೇಳಿಕೆಯ ಮೇರೆಗೆ ನಾನು ಶ್ರೀಮತಿ— ಯವರನ್ನು ಕಂಡಾಗ, ಅವರು ತುಂಬಾ ಕಷ್ಟದಲ್ಲಿದ್ದರು. ಅವಳ ಮಗು ಹಿಂದಿನ ರಾತ್ರಿವಾರವೇ ಅಕಸ್ಮಾತ್ತಾಗಿ ತೀರಿಕೊಂಡಿತ್ತು. ನಾನೂ ಆ ಮಗುವನ್ನು ನೋಡಲು ಹೋಗಿದ್ದೆ; ಶಾಂತವಾಗಿ ಗಂಭೀರವಾಗಿ ನಿದ್ರಿಸುತ್ತಿತ್ತು. ತನ್ನ ಜೀವನವನ್ನು ಕೊಟ್ಟಾದರೂ ಮಗುವನ್ನುಳಿಸಿಕೊಳ್ಳಲು ಸಿದ್ಧಳಾಗಿ ತಾಯಿ ದುಃಖಿಸಡುತ್ತಿದ್ದಳು. ಎಷ್ಟು ಪ್ರಯತ್ನಿಸಿದರೂ ಅವಳಿಗೆ ಸಮಾಧಾನವನ್ನು ಹೇಳುವುದು ನನಗೆ ಶಕ್ಯವಿರಲಿಲ್ಲ; ಆ ದೃಶ್ಯ ಮಾತ್ರ ಗಂಭೀರವಾಗಿತ್ತು! ಎಂತಹ ಸಣ್ಣ ಗೆರೆಯೊಂದು ನಮ್ಮನ್ನೂ, ನಮ್ಮ ಪ್ರೀತಿಯ ವಸ್ತುಗಳನ್ನೂ ಅಗಲಿಸಿಕೊಂಡೊಯ್ಯುತ್ತದೆ! ನಿಜವಾಗಿ ನೋಡಿದರೆ ಇಲ್ಲಿರುವುದು ನಮ್ಮ ಮನೆಯಲ್ಲ! ಆ ಪರಮಾತ್ಮನಲ್ಲಿಯೇ ನಮ್ಮ ಸ್ಥಾನ! ಸುಖವಾಗಿ ಆ ಸ್ಥಾನವನ್ನು ಸೇರಿದವರು ಈ ಜಂಜಡದಿಂದ ಮುಕ್ತರಾಗಿ ಎಷ್ಟೊಂದು ನೆಮ್ಮದಿಯಾಗಿರಬಹುದು! ಕೆಲ ದಿನಗಳ ಹಿಂದೆಯೇ ಆ ಮಗುವು ಆಡುವುದನ್ನು ನಾನು ನೋಡಿದ್ದೆ; ಈಗ ಈ ರೀತಿ! ನಮ್ಮ ಮಕ್ಕಳೂ ಅಂಗಳದಲ್ಲಾಡುತ್ತಿರುವಾಗ, ಈ ದೃಶ್ಯವನ್ನು ನೆನೆಸಿಕೊಂಡರೆ, ಎದೆ ನಡುಗುತ್ತದೆ! ಇನ್ನೂ ಒಳಿತು ಅತಂಗಾಗಿ ಭವಿಷ್ಯದಲ್ಲಿ ಕಾದಿದೆಯೆಂದು ಸಮಾಧಾನಪಡದೆ ಬೇರೆ ಮಾರ್ಗವಿಲ್ಲ! ಇಂತಹ ದುಃಖದಲ್ಲಿ ಹುದುಗಿದ ಜೀವನವನ್ನು ನಾವು ಕಳೆಯುತ್ತಿದ್ದರೂ, ನಗುನಗುತ್ತ, ಜೀವನದ ಎಲ್ಲ ವಿಷಯಗಳನ್ನೂ ಅಷ್ಟೇ ಸತ್ಯವೆಂದು ತಿಳಿದುಕೊಳ್ಳುತ್ತೇವೆ. ಕ್ಷುದ್ರ ವಸ್ತುಗಳಿಗಾಗಿ ಎಷ್ಟೊಂದು ವೇಳೆಯನ್ನು ನೆಚ್ಚ ಮಾಡುತ್ತೇವೆ: ಮತ್ತೆ ಹೀಗೆ ಮಾಡುವಲ್ಲಿ ಅಭಿಮಾನಪಟ್ಟುಕೊಳ್ಳುತ್ತೇವೆ.

(೭)

ಎಡಿನ್‌ಬರೋ, ನವೆಂಬರ್ ೧೦.

ಒಂದು ವ್ಯಾಖ್ಯಾನವಂತೂ ಬಹಳ ಚೆನ್ನಾಗಿ ಆಯಿತು. ಜನರು ಬಹುಸಂಖ್ಯೆಯಲ್ಲಿ ಕೂಡಿದ್ದರು. ನಿಜಕ್ಕೂ ಅವರು ನನ್ನ ಹೇಳುವಿಕೆಯನ್ನು ನೆಚ್ಚಿದರೋ ಇಲ್ಲವೋ ತಿಳಿಯಲಿಲ್ಲ; ಅವರು ತಮ್ಮ ಆನಂದವನ್ನು ವ್ಯಕ್ತ ಮಾಡುವುದರಿಂದ, ನೆಚ್ಚಿದರೆಂದೇ ನಾನು ತಿಳಿದುಕೊಂಡೆ. ಹೇಳುವ ಭಾಷೆ ಕೊಂಚ ಕಠಿಣವಾಗಿತ್ತು. ನೆರೆದ ವಿದ್ವಜ್ಜನರು ಮಾತ್ರ ಅದನ್ನು ಬಹುವಾಗಿ ನೆಚ್ಚಿದರು.

ನಮ್ಮ ಉಪಯೋಗಕ್ಕಾಗಿ ಇಷ್ಟೊಂದು ವಸ್ತುಗಳನ್ನು ನಿರ್ಮಿಸಿರುವ ಪರಮಾತ್ಮನಿಗೆ, ನಾವೆಷ್ಟು ಋಣಿಯಾಗಿರಬೇಡ! ಎಷ್ಟೋ ಜನರಿಗೆ ಜೀವವು ಒಂದು ಹೊರೆಯಾಗಿ, ದಿನಗಳೆಯುವುದು ಕೂಡ ಕಠಿನವಾಗಿರುವಾಗ, ನಮ್ಮ ಈ ಸುಖವಾದ ಜೀವನಕ್ಕೆ ನಾವು ಎಷ್ಟು ವಂದನೆಗೆ ಅಧಿಕಾರವನ್ನು ಪಡೆದಿದ್ದೇವೆ,-ಎಂಬ ಮಾತು ಬೇರೆ! ಅದರ ಜೊತೆಗೆ ನಾವು ನಿರ್ವಹಿಸಬೇಕಾದ ಹೊಣೆ ಎಂತಹದು! ಕ್ಷುಲ್ಲಕ ಕಾರಣಗಳಿಗಾಗಿ, ಯಾರೊಡನೆಯೂ ಬಡಿದಾಡದಿರುವುದು, ನೇಳಿ-ಶಕ್ತಿಗಳ ಅಪವ್ಯಯ ಮಾಡದಿರುವುದು, ಎಲ್ಲ ಸಣ್ಣ-ದೊಡ್ಡ ವ್ಯಕ್ತಿಗಳೊಡನೆಯೂ ಒಂದೇ ಬಗೆಯಾಗಿ ವರ್ತಿಸುವುದು. ಇವು ಸಾಮಾನ್ಯ ವಾಪುವುಗಳೇ? ಇವುಗಳಿಂದಲೇ ನಾವು ಆ ಪರಮಾತ್ಮನೊಡನೆ ಒಂದಾಗಿ ಇರಬಲ್ಲೆವು. ಅವನ ಆಜ್ಞೆಯನ್ನು ಪಾಲಿಸುವುದಕ್ಕಿಂತ ಬೇರಾವ ಕರ್ತವ್ಯವಿದೆ ನಮಗೆ? ಈ ನಮ್ಮ ಸಂಪತ್ತು, ವಿಪತ್ತನ್ನು ಎದುರಿಸುವ ಎದೆಯನ್ನು ಕೊಡಬಲ್ಲದೇ ನನಗೆ? ..... ನನಗೆ ನೆನಪಾದಾಗ ಹೃದಯ ನಡುಗುತ್ತದೆ. ಆದರೆ, 'ದೇವಾ, ಈ ಪಾಪಿಷ್ಠನನ್ನು ಕರುಣಿಸು' ಎಂದು ಮೊರೆಯಿಟ್ಟಾಗ, ನನ್ನ ಭಾರ ಕೊಂಚ ಕಡಿಮೆಯಾಗುತ್ತದೆ.

'ಕ್ಷುದ್ರ ಸ್ವಭಾವ' ಸ್ವಾರ್ಥಗಳೊಡನೆ ಸದಾ ಹೋರಾಡಿ ಅವುಗಳನ್ನು ಹೊರದೂಡೋಣ. ಜೀವನದ ಆದರ್ಶದಲ್ಲಿ, ನಾವು ಮುಟ್ಟಬೇಕಾದ ಗುರಿಯಲ್ಲಿ ಸಂಪೂರ್ಣ ವಿಶ್ವಾಸವನ್ನಿಟ್ಟು, ಅದರ ಸಿದ್ಧಿಯಲ್ಲಿ ಪರಮಾತ್ಮನ ಬೆಂಬಲವನ್ನೂ ಪಡೆಯೋಣ!

ಇಲ್ಲಿಯ ನನ್ನ ಕಾರ್ಯ ಮುಗಿಯುತ್ತದೆ. ನಿನ್ನೆ ರಾತ್ರಿ ಮಿ. ಮುಮಿರ್ ಅವರಲ್ಲಿ ಭೋಜನವೇರ್ಪಡಿಸಲ್ಪಟ್ಟಿತ್ತು. ಸರಿ, ನಾಳೆ ಒಂದು ದಿನ ನನ್ನ ವ್ಯಾಖ್ಯಾನವಾದರೆ, ಇಲ್ಲಿಯ ಕೆಲಸ ಮುಗಿದಂತಾಯಿತು. ಇಲ್ಲಿಯ ಜನ ಮಾತ್ರ ಬಹಳ ಒಳ್ಳೆಯವರು!

(೮)

ಆಕ್ಸ್‌ಫರ್ಡ್, ಡಿಸೆಂಬರ್ ೨೮.

ಇಲ್ಲಿ ನನ್ನ ಕಾರ್ಯವು ಚೆನ್ನಾಗಿ ಸಾಗಿದೆ; ಪ್ರಕೃತಿಯೂ ಚೆನ್ನಾಗಿದೆ. ಪ್ರತಿದಿನ ರಾತ್ರಿ ಸ್ಯಾನ್‌ಬೇಯವರಲ್ಲಿ ನನ್ನ ಸಂಜೆಯ ಆಹಾರವನ್ನು ತೆಗೆದುಕೊಳ್ಳುತ್ತೇನೆ ಲೇಡಿ ಅಗಸ್ಟಾ ಮತ್ತು ಅವರು ಆಕರ್ಷಣದಲ್ಲಿ ಏನೆಲ್ಲ ನೋಡಬೇಕಾದುದು, ಏನಿಲ್ಲ,—ಎಂಬುದನ್ನು ಕುರಿತು ವಿಶದವಾಗಿ ಹೇಳುತ್ತಾರೆ. ನಿಮ್ಮೆಲ್ಲರನ್ನು ಬಿಟ್ಟಿರಲು ನನಗೆ ಮನಸ್ಸಾಗದು. ಆದರೆ ನನ್ನ ಕಾರ್ಯಭಾರವನ್ನು ನಿರ್ವಹಿಸುವುದು ನನ್ನ ಕರ್ತವ್ಯ! ನಾನೊಬ್ಬನೇ ಇದ್ದಾಗ, ಹೆಚ್ಚು ಕಾರ್ಯವಾಗುವುದೆಂದು ನನ್ನ ವಿಶ್ವಾಸ!*

* ಶ್ರೀ. ಮ್ಯಾಕ್ಸ್‌ವಾಲ್ಲನ್ನು ಕುರಿತಾದ, 'Life and Letters' ಎಂಬ ಗ್ರಂಥದಿಂದ ಆಯ್ದುಕೊಂಡಪುಗಳು.

ಲೇ.

ಹಾರುವ ಹಕ್ಕಿಗೆ—

ಎಸ್. ಎಸ್. ಬಸುಪಟ್ಟದ ಎಮ್. ಎ., ಬಿ ಇಡಿ
ಗುಳೇದಗುಡ್ಡ

೧

ಬೀಲಿಯಾಳದಿ ಮೇಲನೇಲಕೆ
ತೇಲಿ ನೆಗೆಯುವ ಪಕ್ಷಿಯೆ,
ಗಗನಮಂಗಣವಲ್ಲಿ ಜೀವನು
ಕೆಚ್ಚಿ ನಿಲಿಸಿಹ ನಕ್ಷೆಯೆ,
ನಿಗೆದು ಸಾಗಿರೆ ಪಕ್ಷಿ, ನಿನ್ನಯ
ಕಜ್ಜವಲಿ ನೀ ದಕ್ಷಿಯು—
ಇದನು ನೋಡುತ ಲೀನವಾಯಿತು
ಇಲ್ಲಿ ಎನ್ನಯ ಚಕ್ಷಿಯು.

೨

ಇಳೆಯು ಕಳೆತನ ಬಯಸಿ ಗಗನವ
ನುಂದೆ ತಾನದು ಬಾಗಿರೆ
ನೀಲ ವರ್ಣದ ನಭವು ಸುತ್ತಲು
ನೆಲದ ಅಂಚಿಗೆ ತಾಗಿದೆ—
ಗಾಳಿಯಲೆಯಲಿ ಉಯ್ಯಲಾಡುತ
ಹೂವ ತೊಂಗಲು ತೂಗಿರೆ
ಮನವು ಹೊರಳಿತು ಅತ್ತ ದೂರದಿ
ನೀನು ಮೇಲಕೆ ಸಾಗಿರೆ—

೩

ತನ್ನ ಕರಗಳ ಚಾಚಿ ದಿನಕರ
ಪಡುವ ದಿಬ್ಬವನೇರಿರೆ
ಬಿಡದೆ ಚವರಿಯ ಬೀಸಿ ತರುಗಳು
ಸುತ್ತು ಸೌರಭ ಬೀರಿದೆ—
ಸಂಜೆವೆಣ್ಣಿನ ಮೊಗದಿ ಆ ಚಣ
ಮುಂದಪಾಸವು ತೂರಿರೆ,
ವೃಷ್ಟಿ ಹರಿಯಿತು ಅತ್ತಲಾ ಕಡೆ
ನೀನು ನಭದಲಿ ಹಾರಿದೆ—

೪

ಗಾಳಿಯಲೆಯಲಿ ತೂರಿಬಿಟ್ಟಿಹ
ಹಿಂಜರಿಕೆಯು ತೆರದಲಿ
ಬಳಿದು ನೋಡಲು ಕಾಂಡು ತುಂಡು
ಗಣಾಚಿ ಈಡಿಗೆ ಭರದಲಿ—
ಸುಳಿಯೆ, ಜಿಲುವದು ಜಿಲ್ಲವರಿದಿರಿ
ಸುತ್ತು ದಿಸೆಯೊಳು ಧರೆಯಲಿ,
ಎನ್ನ ಮನವನು ಹಿಡಿದು ಹಾಕಿದೆ
ಹಕ್ಕಿ ನಿನ್ನಯ ಸೆರೆಯಲಿ!

೫

ಕಂಡು ಕಾಣದ ತೆರದಿ ಹಕ್ಕಿಯೆ
ಏರುತಿರೆ ನೀ ಮೇಲಕೆ—
ದಣಿವ ತೋರದೆ ತಣಿವ ಬೀರದೆ
ಹಾರಿ ಮೇಲೆ ಸುನೀಲಕೆ
ರೆಕ್ಕೆ ಬೀಸುತ ನಭದಿ ಈಸುತ
ನೀನು ಹಾರುವ ಕಾಲಕೆ,
ಹೃದಯ ಮಿಡಿವುದು ಇತ್ತ, ನಿನ್ನಯ
ರೆಕ್ಕೆ ಬಡಿತದ ತಾಲಕೆ.

೬

ತನ್ನ ಒಡಲಲಿ ಕಂಪು ಸೂಸುವ
ಪರಿಮಳವು ತಾ ತೀವಿರೆ
ನೀರಮಧ್ಯದಿ ಕೆಸರಿನಲಿ ಸಹ
ಜನಿಸಿದರು ಆ ತಾವರೆ—
ಮೇಲೆ ನೆಗೆಯುತ ಮೊಗವನರಳಿಸಿ
ನಿಲುವ ತೆರದಲಿ ನೀನಿರೆ—
ಜನತೆ ನಲಿಯಲಿ ನಿನ್ನ ಉಲಿಯಲಿ
ಬಿಡದೆ ಜೀನುಗುವ ಜೇನಿರೆ.

೭

ಮೇಲೆ ಬಹು ಎತ್ತರಕೆ ಹಾರುತ
ಅಳಿವೆ ಇಳೆಯಾ ಜಿಲುವನು?
ತಗ್ಗು—ತೆವರನು ಮೀರಿ ಮೇಲಕೆ
ಹಾರಿ ಪಡೆದಿಹೆ ಗೆಲುವನು.
ಚಣಚಣಕೆ ನೀ ಮುಂದುಮುಂದಕೆ
ಸಾಗುತಿಹ ಆ ನಿಲುವನು
ಎಂತು ಪಡೆವುದು ಮನುಜ ಕುಲ, ಮೇಣ್
ಎಂದು ಪಡೆವುದು ನಲಿವನು—?

೮

ಕಟ್ಟು-ನಿಟ್ಟನು ಹರಿದು ಮೇಲಕೆ
ಹಾರಿ ಪಡೆದಿಹೆ ಮುಕ್ತಿಯ;
ಹೇಳಿಕೊಡು ಈ ಜಗದ ಜನತೆಗು
ನೋಕ್ಷದಾ ಹಿರಿ ಸೂಕ್ತಿಯ—,
ಅದನು ಪಠಿಸುತ ಪಡೆಯಲಿವರೂ
ನಿನ್ನೊಳಿಹ ಆ ಶಕ್ತಿಯ—,
ಆಗ ನಲಿವುದು ಸಕಲ ಜನತೆಯು
ಸೇರಿ ನಿನ್ನಾ ಸಂಕ್ತಿಯ ಸ್ತುತಿ.

ಭಾಷಾ ಸಾಹಿತ್ಯದ ಆದರ

(ಒಂದು ಚಿತ್ರ)*

ಶೀ. ಪಾ. ಭೀ. ಜೋರಾಪೂರ ಎಂ. ಎ. ಜಬಲ್‌ಪೂರ

●

ಉಚ್ಚ ಶಿಕ್ಷಣಹೊಂದಿದ ರಾಯರು— ಏನಽ ಏನ್ ಮಾಡ್ತೀ?

ಹೆಂಡತಿ— ಓದಲಿಕ್ಕಾತ್ರೀನಿ ಕಾಣಿಸೂದಿಲ್ಲೇನು?

ರಾಯರು— ಅದೇ, ಏನ್ ಓದ್ತೀ ಅಂತ ಕೇಳಿದ್ದು ತಿಳೀಲಿಲ್ಲೇನು?

ಹೆಂಡತಿ— ನನಗ ಮನಸಿಗೆ ಬಾದದ್ದು ..... ನಿಮ್ಹಾಂಗೇನು ಇಂಗ್ಲೀಷು ಬರೂದಿಲ್ಲಾ ಏನಿಲ್ಲಾ—ನನಗ—ದೈವದಾಗ ಇದ್ದದ್ದs ಓದೂದು.

ರಾಯರು— ಅವೆಲ್ಲಾ ಹೊಲಸು ಒಡ್ಡರ ಭಾಷಾ ಏನ್ ಓದ್ತೀ? ಅಂಥಾದ್ದು ಓದೂದಕಿಂತಾ ಬಿಡೋದೇ ನೆಟ್ಟಗ.

ಹೆಂಡತಿ— ಯಾಕ?

ರಾಯರು— ಅದು Immoral, Obscene, Filthy ಅದ.

ಹೆಂಡತಿ— ಏನ್ ಹಿಂಗೆಲ್ಲಾ ಬಡಬಡಸಿದರ?

ರಾಯರು— Immoral ಅಂತ ಯಾತಕ್ಕ ಅಂತಾರ ಗೊತ್ತದ ಏನು? (ಕುತ್ತಿಗೆಗೆ ತುತ್ತು ಸಿಕ್ಕಂತೆ) ಅದೇ ಅದೇ..... moral ಯಾವದಲ್ಲೋ ಅದು

ಹೆಂಡತಿ— ಮರಾಲ....ಮರಾಲೋ ಏನು ಹೆಸೋ?

ರಾಯರು— Nonsense! O woman thy name is stupidity!

ಹೆಂಡತಿ— ಇದರರ್ಥೇನು?

ರಾಯರು— ಅದೆಲ್ಲಾ ಕನ್ನಡದಾಗ ಹೇಳ್ಲಿಕ್ಕೆ ಬರೂದಿಲ್ಲಽ..... ಒಟ್ಟೇನು, ನಿಮ್ಮ ಪುಸ್ತಕ ಓದದೇ ಇರೂದೇ ನೆಟ್ಟಗೆ ಅಂತ.

ಹೆಂಡತಿ— ಅದರ, ಈ ಪುಸ್ತಕ ಅಷ್ಟೇನೂ ಕೆಟ್ಟಲ್ಲ, ಕಥಿ ಭಾಳ ಚೆಲೋ ಅದ.

ರಾಯರು— ಅದೇ ಹೌದಲ್ಲೋ ತಿರಿಗಿ ಮುರಿಗಿ?....ರಾಜಾ, ರಾಜಾನ ಹೆಂಡರ ಕಥಿ; ಇಲ್ಲಾ ನಲ.ದಮಯಂತೀ ಕಥಿ ಇರಬೇಕು.

ಹೆಂಡತಿ— ಯಾಕ? ಇದರ ಹೊರ್ತು ಬ್ಯಾರೇ ಕಥೀ ಇಲ್ಲೇ ಇಲ್ಲಂತ ತಿಳಿದೀರೇನು?

ರಾಯರು— ಮತ್ತೇನಽ? ಇನ್ನಾ ವವ ನಿನ್ನ ಕನ್ನಡದಾಗ?

ಹೆಂಡತಿ— ನನ್ನ ಕನ್ನಡದಾಗ .....? ಅವೆಲ್ಲಾ ಇಲ್ಲ. ನಿಮಗ ಬೇಕಾದದ್ದೇ ಅದ. ಇದರಾಗ ಸೆರೆ ಅದ, ಸೂಳ್ಯಾರು ಇದ್ದಾರ, ವಿಧವಾವಿವಾಹ ಅದ, ವಿರಹಿಗಳ ಗೀತ ಅದ.....

ರಾಯರು— (ಗೆದ್ದವನಂತೆ) Exactly. ಅದಕ್ಕೇ ಹೇಳಿದ್ದು ಮತ್ತ. ಇದೆಲ್ಲಾ ಯಾಕ ಓದ್ತೀ ಅಂತ.

ಹೆಂಡತಿ— ಓದಿದರ ಏನಾಗ್ತsದ?

ರಾಯರು— ಓದಿದರ Demoralize ಆಗ್ತsದ.

ಹೆಂಡತಿ— ಇದೇನ್ ಮತ್ತ ಅಂದ್ರಿ.....? ಜೋಮ ರಾಜಾನ?

ರಾಯರು— ಅಲ್ಲsಽ! ಬಲೇ ಕಠಿಣ ಬಂತಿದು. ನಡತೆ ನಡಾವಳಿ ಕೆಡತsದ ಅಂದೆ.

ಹೆಂಡತಿ— ಆಲ್ರೀ, ಬಾಟ್ಲೀ ಮ್ಯಾಲೆ ಬಾಟ್ಲೀ, ಪ್ಯಾಕಿನ ಮ್ಯಾಲೆ ಪ್ಯಾಕ್ ಹಾರಸ್ತೀರಿ. ಯಾರ ಮಾರೀ ನೋಡೂದ ಸಹಿತ ಪಾಪೋ, ಅವರ ಜೋಡೀ ಕೂತು ತಿಂತೀರಿ, ಕುಡೀತಿರಿ. ಅವರ ಹೊಲಸು ಮಾತ ಕೇಳದ್ರ, ಹೊಲೇರು ಸಹಿತ ಕಿವಿಮುಚ್ಚಿಗೋತಾರ. ಅವರು ಮಾಡೂದು ಒಂದೇನ್ ಉಳಿದಿಲ್ಲ. ಅಂಥಾವರ ಜೋಡಿ ನೀನೇನ್ ಮಾಡಿದರೂ ನಿಮ್ಮ ನೀತಿ ಕೆಡೂ ಅಂಜಿಕಿ ಇಲ್ಲಾ! ನಾ ಮಾತ್ರ ಕನ್ನಡ ಪುಸ್ತಕ ಓದಿದರ ಕೆಟ್ಟು ಹೋಗ್ತೀನಂತ ಅಂಜಿಕಿ ಬರ್ತದಲ್ಲಽ?

ರಾಯರು— ನಾನೊಂದು Brass pot ಉ. ನೀನೊಂದು Earthen pot ಉ!

ಹೆಂಡತಿ— ಯಾಕ ಇಷ್ಟು ಪಟ್ ಪಟ್ ಅಂತೀರಿ, ಜಂತ್ಯಾಗಿಂದ ನೀರು ಬಿದ್ದಂಗ? ಈ ಪುಸ್ತಕರೇ ನೋಡ್ಯರೇ ನೋಡ್ರಿ. ಆಂದ್ರ ತಿಳಿದೀತು.

ರಾಯರು— (ಜೆಟ್ಟನೆ ಹಿಂದೆ ಸರಿದು) ಏನಽ ಅದನ್ನ ಮುಟ್ಟಿ hand contaminate (ಅಪವಿತ್ರ) ಮಾಡಲೇನು?

ಹೆಂಡತಿ— ಏನು? ಅದರರ್ಥೇನು?

ರಾಯರು— ಅದನ್ನ ಮುಟ್ಟಿ ನಾನು ಕೈ ಹೊಲಸು ಮಾಡಿಕೊಳ್ಳೂದಿಲ್ಲ.

---

* ಮೂಲ ಬಂಗಾಲಿ ಲೇಖಕ ಸ್ವರ್ಗೀಯ ಬಂಕೀಮಚಂದ್ರರ ಕೃತಿಯೊಂದರ ಅನುವಾದ. ಕನ್ನಡಿಗರ ಜೀವನದಲ್ಲಿಯೂ ಇಂತಹ ಚಿತ್ರ ಹೊಸತೇನೂ ಅಲ್ಲ.

ಸಂ. ಜ.

* ಬಂಕಿಮಚಂದ್ರರು ಶ್ರೇಷ್ಠ ಕಾದಂಬರಿಕಾರರಿದ್ದಂತೆಯೇ, ಹಾಸ್ಯ ಬರೆಹಗಾರರೂ ಇದ್ದರು. ಆಧುನಿಕ ಸಾಂಘಿಕ-ಸಂಸ್ಕೃತಿಗಳಿಗೆ ಮೋಹ ಹೊಂದಿದ ಬಂಗಾಲೀ ಬಾಬುಗಳನ್ನು ವಿಡಂಬಿಸಿ ತಿಳಿಹಾಸ್ಯದ ಶೈಲಿಯಲ್ಲಿ "ಲೋಕ ರಹಸ್ಯ"ವನ್ನು ಬರೆದಿದ್ದಾರೆ. ಕಲಿತವರೆನಿಸಿಕೊಳ್ಳುವವರು ತೀಲಾಷ್ಟೀಲದ ಬಗ್ಗೆ ಎಂಥ ಗೋಮುಖವ್ಯಾಘ್ರದ ಮುಖವಾಡವನ್ನು ಹಾಕಿಕೊಂಡಿದ್ದಾರೆಂಬುದನ್ನು ಬಯಲಿಗೆ ಎಳೆಯುವುದೇ ಈ ವಿಡಂಬನೆಯ ಉದ್ದೇಶ.

—ಲೇ

ಹೆಂಡತಿ – ಏನ್ ಹೊಲಸು ತಗ್ಸೊವಿ!! ನಾನಾ ಒರಿಸಿಕೊಬತೀನಿ ತಗೋಳ್ರಿ. (ಸೀರೆಯಿಂದ ಒರೆಸಿ ಗಂಡನ ಕೈಯಲ್ಲಿ ಕೊಡುತ್ತಾಳೆ. ಮಾನಸಿಕ ಹೊಲಸಿನ ಭಯದಿಂದ ರಾಯರ ಕೈಯಿಂದ ಪುಸ್ತಕ ಬೀಳುತ್ತದೆ.)

ಹೆಂಡತಿ— ನೀವೆಷ್ಟು ಈ ಪುಸ್ತಕ ತುಚ್ಛಮಾಡ್ತೀರಿ, ತಪ್ಪು ನಿಮ್ಮ ಇಂಗ್ಲೀಷು ಸರಿತ ಮಾಡೂವಿಲ್ಲ. ಇಂಗ್ಲೀಷಿನ್ಯಾಗೂ ಇದರ ಭಾಷಾಂತರ ಮಾಡ್ಯಾರಂತ.

ರಾಯರು— ಹುಚ್ಚುಗಿಚ್ಚು ಹಿಡದದೇನ್ ನಿನಗ ?

ಹೆಂಡತಿ – ಗಚ್ ಇಲ್ಲ, ಸಿಮೆಂಟಿಲ್ಲ.

ರಾಯರು— ಮತ್ತೇನು, ಕನಡ ಪುಸ್ತಕಾ ಇಂಗ್ಲೀಷಿನಾಗ ಭಾಷಾಂತರ ಮಾಡ್ತಾರ ? ಇದೆಲ್ಲಾ ಹುಚ್ಚು ಪರಟೆ. ಎಲ್ಲೆ ಕೇಳೀದಿ ? ಇದು Seditious ಪುಸ್ತಕಂತೂ ಅಲ್ಲ ಹೌದಲ್ಲೊ ? ..... ಯಾವ ಪುಸ್ತಕ ತದು ?

ಹೆಂಡತಿ— ವಿಷವೈದ್ಯ.

ರಾಯರು— ಅಂದರ ?

ಹೆಂಡತಿ— ವಿಷಾ ಯಾತಕ್ಕಂತಾರ ಗೊತ್ತಿಲ್ಲಾ ? ಅದಂದೇ ವೈದ್ಯ.

ರಾಯರು— ಉಷಾನೋ ಉಮಾನೋ ?

ಹೆಂಡತಿ— ಅಂಧಾವ್ರನ್ನೆಲ್ಲಾ ಕಟ್ಟಿಕೊಂಡರ, ನಾ ಏನ್ನೂಂಥಾ ಪದಾರ್ಥ.

ರಾಯರು – ಓಹೋ ? Poison ! Dear me ! ಹೆಸರು ಭಾಳ ಜೆಲೋ ಆದ. ಒಗಿ ಒಗಿ ಅದನ್ನ.

ಹೆಂಡತಿ— ಇರ್ರಿ ಇರ್ರಿ ! ಅಷ್ಟ್ಯಾಕ ಹಾರ್ಯಾಟ ! .....ಗಿದಕ್ಕ ಏನಂತಾರ ಇಂಗ್ಲೀಷಿನ್ಯಾಗ ?

ರಾಯರು Tree.

ಹೆಂಡತಿ— ಈಗ ಅವೆರಡೂ ಕೂಡಸ್ರಿ

ರಾಯರು— Poison Tree ! ಅಪ್ಪಾ Poison Tree ಅಂತ ಎಲ್ಲೋ ಓದಿದ್ದಂಗ ಅವ್ನನs ಹೇಸರಿನಾಗ ? ಹಾಗಾದ್ರ ಕನಡದ ಭಾಷಾಂತರ ಏನದು ?

ಹೆಂಡತಿ— ಛೆ ಛೆ ! ಕನ್ನಡ ಪುಸ್ತಕ ಇಂಗ್ಲೀಷಿನ್ಯಾಗ ಹ್ಯಾಂಗ ಭಾಷಾಂತರ ಮಾಡ್ತಾರ್ರಿ ?

ರಾಯರು— ನನ್ನ idea ಇತ್ತು, ಆದ ಇಂಗ್ಲೀಷ ಪುಸ್ತಕಾ ಅಂತ ಊಂ.....ಹೊಂ.....ಇದರ್ದೇ ಭಾಷಾಂತರ ಹೆಂಗಾದ್ರ ? ಮತ್ತ ಇಂಗ್ಲೀಷೇ ಇದ್ದನ್ಯಾಲೆ ಕನ್ನಡರೆ ಯಾಕ ಓದೂದು ?

ಹೆಂಡತಿ— ಡೌಲು ಮಾಡಿ ಇಂಗ್ಲೀಷ ಅಪ್ಪೆ ಜೆಂಬಸ್ಲಿ ? ಏನಾಪ್ಪಾ ಇಂಗ್ಲೀಷೇ. ಪುಸ್ತಕ ಇರ್ರಿ, ನಿಗರೇಟು ಇರ್ರಿ. ಆಗಲಿ ನಿಮ್ಮಂತೇ ಆಗಲಿ

ರಾಯರು— (ಬೇರೊಂದು ಪುಸ್ತಕವನ್ನು ನೋಡಿ) ಯಾವ ಪುಸ್ತಕ ಇದು ? Robinson Cru-oe ನೋ Watt on the Improvement of mind ಓ ?

ಹೆಂಡತಿ – ನಿಮ್ಮ ಇಂಗ್ಲೀಷು ನನಗ್ಯೊತ್ತಿಲ್ಲ. ಕನ್ನಡದ ಹೆಸರುಕ್ಕ "ಛಾಯಾಮಯಿ" ಅಂತ ಅದ.

ರಾಯರು— "ಛಾಯಾಮಯಿ" ? ಅಂದ್ರೇನು ? ನೋಡ್ಲಾ ತಾ ಇಲ್ಲೆ— (ಕೈಯಲ್ಲಿ ಪುಸ್ತಕ ತಕ್ಕೊಂಡು) Dant by jove.

ಹೆಂಡತಿ—ನನಗೇನ್ ಇದು ತಿಳಿಯೂದಿಲ್ಲ. ಹಳ್ಳಿಯವರಿಗೆ ಹ್ಯಾಂ ತಿಳೀಬೇಕು ? ನೀವೇನ್ ತಿಳಿಸ್ತೀರೇನು ?

ರಾಯರು—ಅದಕ್ಯಾಕ ಅಷ್ಟು ಒದ್ಯಾಟ ? Dante lived in the fourteenth century, ಅಂದ್ರ ಅವ fourteenth century ಒಳಗ flourish ಆದಾ ಅಂತ.

ಹೆಂಡತಿ—ಪುಟನಾ ಸುಂದರಿಯ ಪಾಲಿಶ್ ಮಾಡ್ತಿದ್ನ ? ಹಂಗಾ ಭಾಳ ದೊಡ್ಡ ಕವಿ ಇದ್ದಾ ?

ರಾಯರು—ನೀನೂ ಒಂದು ಭಾಳ ದೊಡ್ಡ ಕಪಿ! ಅಲ್ಲss fourteen ಅಂದ್ರ ಹದಿನಾಲ್ಕು ಅಂದೆ ಹದಿನಾಲ್ಕು.

ಹೆಂಡತಿ—ಹದ್ನಾಕ್ ಸುಂದರಿಯರ ಪಾಲಿಶ್ ಮಾಡ್ತಿದ್ನ ? ಆ ಪಾಲಿಶ್ ಯಾಕ ಮಾಡ್ತಿತ್ತೊ ಹುಚ್ಚು !

ರಾಯರು—ಅದಲ್ಲ ನಾ ಹೇಳಿದ್ದು. ಏನ್ ತಲೀ ಒಡಕೊಂಡ್ರ ನಿನ್ನ ಜೋಡಿ! ಗಳನೆಯ ಸಂಚುರಿಯೊಳಗ ಇದ್ದಾ ಅಂತ.

ಹೆಂಡತಿ—(ತಿಳಿಸಿದನೆಂಬ ಅಕ್ಕಸದಿಂದ) ಇರ್ರಿ ಹೋಗ್ರಿ ! ಹಪ್ಪಾ ಅಗ್ಲಿ ಹದ್ನೆಂಟಾಗ್ಲಿ. ಪುಸ್ತಕದ ಅರ್ಥಾ ಹೇಳ್ರಿ ಅಂತ ಅಂ ಆವಾಗ ಇದ್ದಾ ಈವಾಗ ಇದ್ದಾಂತ. ಅದೆಲ್ಲಾ ತೊಗೊಂದೇ ಮಾಡೂದು. ಪುಸ್ತಕದಾಗ ಏನ ಅನ, ಅಷ್ಟ ಹೇಳಿದ್ರಾತ

ರಾಯರು—Author ನ life ಅಂತೂ ತಿಳಕೋ ಮೊದ್ಲ (ಲೆಕ್ಕ ಬಿಗಿಯುವವನಂತೆ) ಅವನು Florence ಪಟ್ಟಣದಲ್ಲಿ ಜನ್ಮ ತಾಳಿದನು. ಅವನು ದೊಡ್ಡ ದೊತ್ತ..... ... ಉಂ..... Appointments held ಮಾಡುತ್ತಾ ಇದ್ದನು . ....

ಜೀವನಪ್ರಕಾಶ

(ಕನ್ನಡ ನೂತನ ಮಾಸಪತ್ರಿಕೆ)

ಸಂಪಾದಕರು: ಶ್ರೀಮತಿ ಪ್ರೇಮಾ ಹುಲಕೊಪ್ಪಕರ

ಸಾಮಾಜಿಕ ಪ್ರಗತಿ – ಶಿಕ್ಷಣ – ಮನೋರಂಜನೆಗಳಿಗಾಗಿ ಕಾರ್ಯಮಾಡಲು ಹೊರಟ ಸದಭಿರುಚಿಯ ಪತ್ರಿಕೆಯಿದು.

ವಾರ್ಷಿಕ ಚಂದಾ ೬–೦–೦ ಬಿ. ಸಂಚಿಕೆಗೆ ೦–೮–೦

ಪ್ರಭಾ ಡಿಸ್ಟ್ರಿಬ್ಯೂಟರ್ಸ್, ಶಳಕವಾಡಿ–ಬೆಳಗಾಂವಿ

ಹೆಂಡತಿ—ನೀವೇನ್ ಸಾಲ್ಯಾಗಿದ್ದರಂತೆ ತಿಳಿದೀರೇನೀಗ?

ರಾಯರು—(ಗದ್ದರಿಸಿ ಕೂಡಿಸುವ ಶಿಕ್ಷಕನಂತೆ) ಸುಮ್ಮಿರಿ ಏ! ಆವನು ದೊಡ್ಡ ದೊಡ್ಡ ಕೆಲಸಗಳನ್ನು ಮಾಡುತ್ತಾ ಇದ್ದನು. ಹಿಂದೆ Guelph ಮತ್ತು Ghibilline ರ ಜಗಳದಲ್ಲಿ...

ಹೆಂಡತಿ—ಸಾಕ್ ಸಾಕು! ಕೈಮುಗೀತೀನಿ! ಇನ್ನ ನಮಗ ಝಗಳ ಬರತದ. ಹೇಳೂದಿತ್ತೆಂದ್ರ ಪುಸ್ತಕದಾಗಿಂದ ಹೇಳ್ರಿ. ಇಲ್ಲಾದ್ರ ಆ ರಗಳೆಲ್ಲಾ ಬ್ಯಾಡ.

ರಾಯರು—(ಸಿಟ್ಟಿಗೆದ್ದ ಹುಡುಗನಂತೆ) ಅದನ್ನೇ ಹೇಳ್ಲಿಕ್ಕೆ ಹತ್ತಿನಲ್ಲಾ? Author ನ life ತಿಳೀದೇ ಆವನ ಪುಸ್ತಕ ಹ್ಯಾಂಗ ತಿಳಕೋತೀದಿ?

ಹೆಂಡತಿ—ಯಾಕ? ಅಂವಾ ಯಾವಾಗ ಇದ್ದಾ....ಯಾವಾಗ ಸತ್ತಾ....ಇದು ತಿಳಿದ್ರೇ ಅವನ ಪುಸ್ತಕ ತಿಳೀತದೇನು? ಅದೆಲ್ಲಾ ಬ್ಯಾಡ ನನಗ.

ರಾಯರು—ಹುಂ. ಬ್ಯಾಡಾದ್ರ ಬಿಡು. ತಾ ಆ ಪುಸ್ತಕ ತಾ ಇಲ್ಲೆ. (ಪುಸ್ತಕ ತಕ್ಕೊಂಡು ಮೊದಲನೆಯ ಚರಣವನ್ನು ಓದುವನು) "ಸಂಧ್ಯಾಗಗನೆ ನಿಬಿಡ ಕಾಲಿಮಾ" ನಿನ್ನ ಹತ್ತರ ಶಬ್ದಕೋಶ ಅದ ಏನ? ?

ಹೆಂಡತಿ—ಯಾಕ ಯಾವ ಶಬ್ದದ ಅರ್ಥ ಬೇಕು?

ರಾಯರು—ಗಗನೆ ಅಂತ ಎದಕ್ಕ ಅಂತಾರ?

ಹೆಂಡತಿ—ಆಕಾಶಕ್ಕೆ ಗಗನ ಅಂತಾರ. ಆಕಾಶಂತ ಎದಕ್ಕ ಅಂತಾರ ಅದನ್ನೂ ಹೇಳ್ಬೇಕೇನು?

ರಾಯರು—"ಸಂಧ್ಯಾಗಗನೆ ನಿಬಿಡ ಕಾಲಿಮಾ" ನಿಬಿಡ ಅಂದ್ರೇನಕ?

ಹೆಂಡತಿ—ರಾಮ ರಾಮಾ! ಇಷ್ಟು ಶ್ಯಾಣ್ಯಾತನ ಇಟಗೊಂಡೇ ನನಗ ಕಲಿಸಲಿಕ್ಕೆ ಒಂದೀರೇನು? ನಿಬಿಡ ಅಂದರ ದಟ್ಟ. ಇಷ್ಟು ಸಹಿತ ತಿಳಿಯೂದಿಲ್ಲ? ನಾಚಿಕೆರಿ ಹ್ಯಾಂಗ ಬರೂದಿಲ್ಲೋ!

ರಾಯರು—ನಾಚಿಕ್ಯಾಕ? ಇಂಥಾ ಒಡ್ಡರ ಭಾಷಾ ನಾವೆಲ್ಲಾ ಓದೂದಿಲ್ಲ.

ಹೆಂಡತಿ—ಉಂ ಹೂಂ! "ನೀವುಗಳು" ಯಾರು?

ರಾಯರು—ನಮ್ಮ Polished Society. ಹಳ್ಳಿಯವರು ಬರೆದದ್ದು ಅವರೇ ಓತ್ತಾರೆ. Polished Society ಯೊಳಗ ಇದೆಲ್ಲಾ ನಡಿಯೂದಿಲ್ಲ.

ಹೆಂಡತಿ—ತಾಯಿನುಡೀ ಮ್ಯಾಲೆ ನಿಮ್ಮ ಪಾಲಿಶ್ ಹಚ್ಚೀದ್ಯಾಕ ಇಷ್ಟು ವಕ್ರದೃಷ್ಟಿ ಅಂತೀನಿ?

ರಾಯರು—ತಾಯಿ ನುಡಿಯಂತ! ತಾಯಿ ಸತ್ತು ಎಷ್ಟು ವರ್ಷಾತೋ! ಇನ್ನ ಆಕೀ ನುಡಿ ತೊಗೊಂಡೇನ್ ಮಾಡೂದೀಗ?

ಹೆಂಡತಿ—ನಂದೂ ಅದೇ ಭಾಷಾ ಅದ. ನಾನಂತೂ ಸತ್ತಿಲ್ಲಲ್ಲ?

ರಾಯರು—Yes for thy sake, my Jewel, I shall do it. ನೀನೇ ಒಂದು ಚೆಲೋ ಪುಸ್ತಕ ಹುಡಿಕಿಕೊಪ್ಪು ನೋಡೋಣು. ಆದ್ರ.....mind! ಒಂದೇ ಓದಾಂವ ಮತ್ತ!

ಹೆಂಡತಿ—ಒಂದು ತಿಂದ್ರೇನ್ ಕಡಿಮ್ಯಾತೇನು?

ರಾಯರು—ಆದ್ರ ಇಲ್ನೋಡು. ಬಾಗಿಲಾ ಗೀಗಲಾ ಎಲ್ಲಾ ಹಾಕಿ ಬಿಡು. ಒಳಗ ಕೂಡತೇನಿ. ಯಾರರೆ ನೋಡಿದರ ಫಜೀತಿ!

ಹೆಂಡತಿ—ಆಗಲಿ ಹಾಂಗೇ ಆಗಲಿ.

(ಒಂದು ಕೆಟ್ಟ, ಅಶ್ಲೀಲ ಮತ್ತು ಕೀಳ್ತರಗತಿಯ ಅದರೆ ಸರಸ ಪುಸ್ತಕವನ್ನು ಹುಡುಕಿ ರಾಯರಿಗೆ ಕೊಡುವಳು. ರಾಯರು ಮೊದಲಿನಿಂದ ಕೊನೆಯ ವರೆಗೆ ಆಶಿಬುರಕನಂತೆ ಓದಿ ಮುಗಿಸುವರು.)

ಹೆಂಡತಿ ಹ್ಯಾಂಗದ ಪುಸ್ತಕ?

ರಾಯರು—(ಸಂಭ್ರಮದಿಂದ) ಭಾಳ interesting ಅದ (ದೇಶಾವರಿಯಿಂದ) ಕನ್ನಡದಾಗೂ ಇಂಥಾ ಪುಸ್ತಕ ಆವನ್ನ? ನನಗ್ಗೊತ್ತಿದ್ದಿಲ್ಲ ಬಿಡು!

ಹೆಂಡತಿ—(ತಿರಸ್ಕಾರದಿಂದ) ಮತ್ತ ನಿಮ್ಮಂಥವರು ಓದವರು ಇದ್ದಾರ ಅಂದ ಮ್ಯಾಲೆ, ಇಂಥಾ ಪುಸ್ತಕನೂ ಹುಟ್ಟುತಾವ. ತಿಳೀತು ನಿಮ್ಮ ಬಣ್ಣೆಲ್ಲಾ. ನೀವು...ನಿಮ್ಮ ಪಾಲಿಶ್ ಹಚ್ಚಿ! ಇಂಥಾದ್ದು ಕಲಿತೇ ಇಷ್ಟು ಜಂಭ. ನಾ ತಿಳಿದಿದ್ದೆ ಇಂಗ್ಲೀಷ ಓದಿ ಬರದು ಬುದ್ಧಿವಂತರಾಗತಾರ ಅಂತ. ನೀವೇನು! ತಲ್ಯಾಂಗಿಂದೆಲ್ಲಾ ತೊಳಕೊಂಡು ಕೂತೀರಿ. ಮನಿಯೊಳಗ ಇದ್ದಷ್ಟು ಕಾಳ್ಯಾಗ ಹೊಟ್ಟು ಕೂಡಸ್ತೀರಿ.....ನಡ್ರಿ, ತಲಿ ತಂಪಾಗಲಿ ಅದಾಮ ಕೂಡ್ರಿ!

ಆನಂದ ಗ್ರಂಥಮಾಲಾ, ಹುಬ್ಬಳ್ಳಿ.

(ಸಂ.: ಶ್ರೀ. ಪಿ. ವೆಂಕೋಬಾಚಾರ್ಯ ಬಿ. ಎ. ಬಿ. ಟಿ.)

ಪುಷ್ಪಹಾರ (ಕಾದಂಬರಿ)	೧-೧
ಮನೋರಾಜ್ಯ (ನಾಟಕ)	೨-೪-೦
ಇವೆಕ್ (ಮೋಪಾಸಾ ಕಾದಂಬರಿ)	೧-೧೨-೦
ಪೂರ್ಣಿಮಾ (ಸಂಸಾರ ಚಿತ್ರಗಳು)	೨-೪-೦
ಸೈಮನ್ನನ ತಂದೆ (ಮೋಪಾಸಾನ ಕತೆಗಳು)	೨-೪-೦
	೧೪-೪-೦

ಈ ಮೇಲಿನ ೫ ಪುಸ್ತಕಗಳು ಕೇವಲ ೭-೦-೦ ರೂ. ಗಳಿಗೆ ಕೊಡಲ್ಪಡುವವು.

(ಸ್ವಾತಂತ್ರ್ಯದಿನದ ಸವಲತ್ತು)

೭೦೭೦ ಗವಳೀಗಲ್ಲಿ
ಹುಬ್ಬಳ್ಳಿ

ಸಂಚಾಲಕರು
ಆನಂದ ಗ್ರಂಥಮಾಲಾ

ಇಂದಿನ ಇರಾಣ

(ಪರಿಚಯಾತ್ಮಕ ಪ್ರಬಂಧ)

ಶ್ರೀ. ಎಂ. ಮು. ಜೋಶಿ, ಧಾರವಾಡ

●

ಇರಾಣದಲ್ಲಿಯ ಇಂದಿನ ರಾಜಕೀಯ ವಿಷಮಪರಿಸ್ಥಿತಿಗೆ, ದೇಶದಲ್ಲಿಯ ಆಂತರಿಕ ರಾಜಕೀಯಕ್ಕಿಂತ, ಹೊರಗಿನ ಪ್ರಬಲ ರಾಷ್ಟ್ರಗಳ ರಾಜಕೀಯ ಕೈಚಳಕವೇ ಮುಖ್ಯ ಕಾರಣವಾಗಿದೆ. ಎಷ್ಟೆಷ್ಟನೆಯವು ಇಲ್ಲವೆ ಜೋಗಿವ್ವನೆ ಇರಾಣವ ಕತೆಗೆ ಯಾವೊ ಕಣ್ಣು ಕೊನೆ ಪ್ರಾಕಟಿಸಲಸಾಧ್ಯವಾಗಿತ್ತು.

●

ಕಳೆದ ಆಗಸ್ಟ್ ತಿಂಗಳ ಸುಮಾರಿಗೆ ಇರಾಣದಲ್ಲಿ ರಾಜ್ಯಕ್ರಾಂತಿ ನಡೆಯಿತು. ಜಗತ್ತಿನ ಬಲಾಢ್ಯ ರಾಷ್ಟ್ರಗಳು ಇರಾಣದತ್ತ ಕಣ್ಣಿಲ್ಲಿ ಎಣ್ಣೆ ಹಾಕಿಕೊಂಡು, ಪರೀಕ್ಷಕ ದೃಷ್ಟಿಯಿಂದ ನೋಡತೊಡಗಿದವು. ಆ ರಾಷ್ಟ್ರಗಳ ವಿದೇಶನೀತಿ ಅಬಾಯಾ ದೇಶದ ಆಂತರಿಕ ಸ್ಥಿತಿಯ ಮೇಲೆಯೇ ಪೂರ್ತಿಯಾಗಿ ಅವಲಂಬಿಸಿದ್ದುದರಿಂದ, ಆ ದೇಶಗಳ ರಾಜಕಾರಣಪಟುಗಳು ಹಗಲಿರುಳೂ ಇರಾಣದಲ್ಲಿ ನಡೆಯುತ್ತಿರುವ ಘಟನೆಗಳನ್ನು ಕೂಲಂಕಷವಾಗಿ ಪರೀಕ್ಷಿಸುವುದರಲ್ಲಿ ತೊಡಗಿದ್ದರೆ, ಅದು ಆಶ್ಚರ್ಯದ ಮಾತಲ್ಲ. ಇರಾಣದಲ್ಲಿ ನಿನ್ನಿನ ನಾಯಕ ಇಂದಿಲ್ಲ. ಇಂದಿನ ನಾಯಕನ ಶಾಶ್ವತತೆಯ ಬಗ್ಗೆಯೂ ಸಂದೇಹವೇ. ಏಕೆಂದರೆ ಇರಾಣದಲ್ಲಿ ಈ ಹಿಂದೆ ನಡೆದ ಕೆಲವು ಘಟನೆಗಳನ್ನು ಲಕ್ಷಪೂರ್ವಕವಾಗಿ ಅಭ್ಯಸಿಸಿದರೆ, ಈಗ ಹೊಸದಾಗಿ ಅಡಳಿತ ವಹಿಸಿಕೊಂಡವರ ಭವಿಷ್ಯತಿಯ ಬಗ್ಗೆಯೂ ಸಂದೇಹಮೂಡದೆ ಇರದು. ಅಲಿ ರಾಜಕುಮಾರನ ಕೊಲೆ, ಇಂದು ಡಾ. ಮುಸಾದಿಕರ ಬಂಧನ, ಪರದೇಶದವರ ಸ್ವಾರ್ಥಪರ ದೃಷ್ಟಿ – ಇವೆಲ್ಲ ಸಂಗತಿಗಳು ಇನ್ನೂ ಕೆಲವು ವರುಷ, ಇರಾಣದಲ್ಲಿ ಶಾಂತಿಗೆ ಎಡೆಮಾಡಿ ಕೊಡಲಾರವು—ಎಂದು ಹೇಳಬಹುದು. ಇರಾಣದ ಇಂದಿನ ಪರಿಸ್ಥಿತಿಯನ್ನು ಅಭ್ಯಸಿಸುವುದಾದರೆ, ಅದರ ಐತಿಹಾಸಿಕ, ಭೌಗೋಲಿಕ ಹಿನ್ನೆಲೆಯನ್ನು ತಿಳಿದುಕೊಳ್ಳುವುದು ಅಗತ್ಯ–ಅಷ್ಟೇ ಅವಶ್ಯ.

ಭೌಗೋಲಿಕ ಹಿನ್ನೆಲೆ

ಇರಾಣದ ಭೌಗೋಲಿಕ ಸ್ಥಿತಿಯು ಮಹತ್ವದ್ದಾಗಿದೆ. ಉತ್ತರದಲ್ಲಿ ರಶಿಯಾ, ಪಶ್ಚಿಮದಲ್ಲಿ ಇರಾಕ ಮತ್ತು ತುರ್ಕಸ್ಥಾನ, ಪೂರ್ವಕ್ಕೆ ಅಫಗಾಣಿಸ್ತಾನ-ರಶಿಯಾ ಪಾಕಿಸ್ತಾನಗಳು. ದಕ್ಷಿಣಕ್ಕೆ ಇರಾಣದ ಸಾಮುದ್ರಧುನಿ. ಇಂತಹ ಭೌಗೋಲಿಕ ಸ್ಥಿತಿಯ ಮೂಲಕವಾಗಿಯೇ ಪರದೇಶದವರ ಕಣ್ಣು ಇರಾಣದ ಮೇಲೆ ಮೊದಲಿನಿಂದಲೇ ಇದ್ದಿತು. ಸಿಕಂದರನಿಂದ ಹಿಡಿದು ಮೊದಲನೆಯ ಮಹಾಯುದ್ಧದ ನಾಯಕ ಕೈಸರನ ವರೆಗೆ, ಎಲ್ಲರ ಕಣ್ಣೂ ಈ ದೇಶದ ಮೇಲೆ ಬಿದ್ದುದು ಆಶ್ಚರ್ಯದ ಮಾತಲ್ಲ. ಇಂದಿಗೆ ಕೂಡ ಪರದೇಶದವರ ಕಣ್ಣು ಇರಾಣದ ಮೇಲಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ರಶಿಯಾ ಇರಾಣದ ಆರ್ಥಿಕ ಡಾ. ಮುಸಾದಿಕರ ಬಗ್ಗೆ ಹೆಚ್ಚು ಆಸಕ್ತಿ ವಹಿಸುತ್ತಿದ್ದಿತು. ಆ ಆಸಕ್ತಿಯಲ್ಲಿ ಸ್ವಾರ್ಥದ ವಾಸನೆ ಇಲ್ಲದೆ ಇಲ್ಲ. ಇದರ ವಿಶೇಷಕಾರಣವೆಂದರೆ, ಇರಾಣದ ಮೇಲಿದ್ದ ಬ್ರಿಟಿಶರ ಪ್ರಭಾವ. ನಿಷ್ಪಕ್ಷಪಾತ ದೃಷ್ಟಿಯಿಂದ ನೋಡುವಾಗ, ಕೇವಲ ರಶಿಯವನ್ನಷ್ಟೇ ತೆಗಳಿದರೆ ತಪ್ಪಾದೀತು. ಅಮೇರಿಕೆ–ಬ್ರಿಟಿಶರ ಕೈವಾಡಗಳೂ ಅದೇ ಉದ್ದೇಶಕ್ಕಾಗಿ ಹೆಣಗಾಡುತ್ತಿದ್ದುದು ಕಂಡು ಬರುತ್ತಿದೆ.

ಐತಿಹಾಸಿಕ ಹಿನ್ನೆಲೆ

ಸುಮಾರು ೧೫೦ ವರುಷಗಳ ಹಿಂದೆ ಇರಾಣದ ಮೇಲೆ ತಂತಮ್ಮ ಪ್ರಭುತ್ವವನ್ನು ಬೀರುವುದಕ್ಕಾಗಿ, ಇಂಗ್ಲಂಡ್ ಮತ್ತು ರಶಿಯಾದ ನಡುವೆ ತಿಕ್ಕಾಟ ನಡೆದಿತ್ತು. ಮುಂದೆ ೧೯೦೭ರಲ್ಲಿ ಜಪಾನಿನಿಂದ ಪರಾಭವಗೊಳಿಸಲ್ಪಟ್ಟ ರಶಿಯಾ ಅಪಮರ್ಥ ಸ್ಥಿತಿಯಲ್ಲಿತ್ತು. ರಶಿಯಾದ ಕಳೆಗುಂದಿದ ಸ್ಥಿತಿಯ ಲಾಭ ಪಡೆದುಕೊಂಡು ಇಂಗ್ಲಂಡು ೧೯೦೭ರಲ್ಲಿ ಅದರ ಜತೆಯಲ್ಲಿ ಒಂದು ಒಪ್ಪಂದವನ್ನು ಮಾಡಿಕೊಂಡಿತು. ಆ ಒಪ್ಪಂದದ ಪ್ರಕಾರ ಇರಾಣ ಮೂರು ಭಾಗಗಳಲ್ಲಿ ವಿಂಗಡಿಸಲ್ಪಟ್ಟಿತು:—ಉತ್ತರ ಭಾಗ ರಶಿಯಕ್ಕೆ, ದಕ್ಷಿಣಭಾಗ ಬ್ರಿಟಿಶರಿಗೆ, ಮಧ್ಯಭಾಗ ನಿಷ್ಪಕ್ಷವಾಗಿರತಕ್ಕದ್ದು. ಈ ಒಪ್ಪಂದದ ಪ್ರಕಾರ ಈ ಎರಡೂ ಬಲಾಢ್ಯರಾಷ್ಟ್ರಗಳು ಇರಾಣದ ಆಂತರಿಕ ವಿಷಯದಲ್ಲಿ ಕೈ ಹಾಕಕೂಡದೆಂದು ನಿರ್ಧಾರವಾಗಿತ್ತು. ಆದರೆ ಈ ಕರಾರು ಕೇವಲ ಕಾಗದದ ಮೇಲೆಯೇ ಉಳಿಯಿತು. ತದನಂತರ ಇರಾಣದ ಜನತೆ, ಪರರಾಷ್ಟ್ರಗಳ ಸಹಾಯವನ್ನು ಅಪೇಕ್ಷಿಸುವುದಿದ್ದಲ್ಲಿ, ಬ್ರಿಟಿಶ್ ಅಥವಾ ರಶಿಯಾದ ಸಹಾಯವನ್ನು ಪಡೆಯದೆ ಅಮೇರಿಕೆಯ ಸಹಾಯವನ್ನು ಕೋರುವುದೇ ಉಚಿತವೆಂದು ನಿರ್ಧರಿಸಿತು. ಇದರ ಪರಿಣಾಮವಾಗಿ ಅಮೇರಿಕೆಯ ಶ್ರೀ. ಶುಸ್ಟರ್ ಎಂಬವರು, ಇರಾಣ ಸರಕಾರದ ಹಣಕಾಸಿನ ಅಧಿಕಾರಿಗಳಾಗಿ ನಿಯುಮಿಸಲ್ಪಟ್ಟರು. ೧೯೨೧ರಲ್ಲಿ ಕಾರ್ನ್ಯೆಡ್ ಲೆನಿನ್‌ರು ಒಳ್ಳೆ ಕಾರ್ಯಕ್ಷಮತೆಯಿಂದ, ಇರಾಣದ ಮೇಲಿದ್ದ ರಶಿಯಾದ ಕೆಲ ವಿಶೇಷ ಅಧಿಕಾರಗಳನ್ನು ರದ್ದುಪಡಿಸಿ, ಇರಾಣದ ಜತೆಯಲ್ಲಿ ಒಂದು ಮಿತ್ರತ್ವದ ಒಪ್ಪಂದವನ್ನು ಮಾಡಿಕೊಂಡನು. ಇರಾಣವು ರಶಿಯಾದ ಈ ಉದಾರತೆಯನ್ನು ಲಕ್ಷಿಸಿ, ತನಗೆ ತಿರುಗಿ ಬಿಟ್ಟುಕೊಟ್ಟ ವಿಶೇಷ ಅಧಿಕಾರಗಳನ್ನು ಯಾವುದೇ ಪರಿಸ್ಥಿತಿಯಲ್ಲಿ ಬೇರೆ ರಾಷ್ಟ್ರಕ್ಕೆ ಕೂಡ ಮಾರುವುದಿಲ್ಲವೆಂದು ವಚನ ಕೊಟ್ಟಿತು. ಇರಾಣದ ರಾಜ್ಯಘಟನೆಯ ೬ನೆಯ ಪ್ರಕರಣದಲ್ಲಿ ಕೆಳಗೆ ಕಾಣಿಸಿದಂತೆ ಕರಾರು ಹಾಕಲ್ಪಟ್ಟಿದೆ:

"ಒಂದು ವೇಳೆ ಪರರಾಷ್ಟ್ರ ತನ್ನ ಸೈನ್ಯಬಲದಿಂದ ಇರಾಣದಲ್ಲಿ ಒಳಹೊಕ್ಕು ಇರಾಣದ ಕೆಲಭಾಗವನ್ನು ವಶಪಡಿಸಿಕೊಂಡರೆ, ರಶಿಯಾದ ಸಮೀಪದ ಪ್ರದೇಶದ ಸುರಕ್ಷಿತತೆಗೆ ಭಂಗ ಬರುವಂಥ ಯಾವುದೇ ಘಟನೆಗಳು ನಡೆದರೆ—ಮತ್ತು ಇಂಥ ಪರಿಸ್ಥಿತಿಯಲ್ಲಿ

ಇರಾಣ ಈ ಪರರಾಷ್ಟ್ರ ಶಕ್ತಿಯ ಜತೆಯಲ್ಲಿ ಹೋರಾಡಲು ಅಸಮರ್ಥವಾದಲ್ಲಿ, ಆಗ ರಶಿಯಾ ತನ್ನ ಸೈನ್ಯವನ್ನು ಇರಾಣದಲ್ಲಿ ತಂದು, ಇರಾಣದ ಮೇಲೆ ಬಂದ ಪರರಾಷ್ಟ್ರವನ್ನು ಎದುರಿಸಿ; ಹೊಡೆದೋಡಿಸಿವುದು. ಮತ್ತು ರಶಿಯಾ ಪ್ರತಿಜ್ಞಾಪೂರ್ವಕವಾಗಿ ಹೇಳುವುದೇನೆಂದರೆ, ಇರಾಣದ ಮೇಲೆ ಪಡೆದು ಬಂದ ಗಂಡಾಂತರ ದೂರವಾದಾಕ್ಷಣ ರಶಿಯಾ ತನ್ನ ಸೈನ್ಯಬಲವನ್ನು ಇರಾಣದಿಂದ ಮರಳಿ ತೆಗೆದುಕೊಳ್ಳುತ್ತದೆ.'' ಎರಡನೆಯ ಮಹಾಯುದ್ಧದಲ್ಲಿ ಇರಾಣದಲ್ಲಿ ಇಂಥ ಸ್ಥಿತಿ ಬಂದೊದಗಿತು. ಆಗ ಬ್ರಿಟಿಶ್ ಸೈನ್ಯ (ಮಿತ್ರ ಸೈನ್ಯ) ಇರಾಣದಲ್ಲಿ ಪ್ರವೇಶಿಸಿತು. ಮತ್ತು ಯುದ್ಧ ಮುಗಿದಾಕ್ಷಣ ಅದು ಅಲ್ಲಿಂದ ಮರಳಿತು. !

ಇರಾಣದ ಎಣ್ಣೆಯ ಗಣಿಗಳು

ಭೌಗೋಲಿಕ ಪರಿಸ್ಥಿತಿಯ ಹೊರತಾಗಿ, ಇರಾಣದ ಮಹತ್ತಿಗೆ ಅದರಲ್ಲಿದ್ದ ಎಣ್ಣೆ ಗಣಿಗಳೂ ಕಾರಣ. ಈ ಎಣ್ಣೆಯ ಗಣಿಗಳ ಸಂಶೋಧನವಾದದ್ದು ೧೯೦೮ನೆಯ ಶತಮಾನದಲ್ಲಿ. ಒಬ್ಬ ಆರ್ಮಿನಿಯನ್ನನು ಇರಾಣದ ಶಹನಿಂದ ೫೦೦೦೦ ವರ್ಗ ಮೈಲು ಕ್ಷೇತ್ರದಲ್ಲಿ ಎಣ್ಣೆಯನ್ನು ತೆಗೆಯುವುದಕ್ಕಾಗಿ, ೬೦ ವರುಷಗಳ ಮುದ್ದತಿನಿಂದ ಇರಾಣದ ಶಹನಿಂದ ಗುತ್ತಿಗೆಯ ಅಧಿಕಾರವನ್ನು ಪಡೆದುಕೊಂಡನು. ಈ ಗುತ್ತಿಗೆದಾರನಿಂದ, ಒಬ್ಬ ಇಂಗ್ಲಿಷ್ ವ್ಯಾಪಾರಿಯು ಆ ಅಧಿಕಾರವನ್ನು ತಾನು ಖರೀದಿ ಮಾಡಿ ಪಡೆದುಕೊಂಡನು. ಆಗಲೇ ಈ ಕಂಪನಿಗೆ ಆ್ಯಂಗ್ಲೋ-ಇರಾನಿಯನ್ ಕಂಪನಿಯೆಂದು ನಾಮಕರಣವಾಯಿತು. ಬ್ರಿಟಿಶ್ ಜಲಸೇನೆಗೆ, ಎಣ್ಣೆಯ ಅವಶ್ಯಕತೆ ಎನಿಸಿದ್ದರಿಂದ, ಬ್ರಿಟಿಶ್ ಸರಕಾರ ೧೯೧೪ರಲ್ಲಿ ಈ ಆ್ಯಂಗ್ಲೋ ಇರಾನಿಯನ್ ಕಂಪನಿಯಲ್ಲಿ ೫೦ಂ೫೦ ಪೇಅರುಗಳನ್ನು ಖರೀದಿಗೆ ತೆಗೆದುಕೊಂಡಿತು. ಈ ರೀತಿಯಾಗಿ ಆ್ಯಂಗ್ಲೋ ಇರಾನಿಯನ್ ಎಣ್ಣೆ ಕಂಪನಿಯು, ಸರಕಾರಿ ರೂಪವನ್ನು ತಳೆಯಿತು; ಮತ್ತು ಅಂದಿನಿಂದ ಬ್ರಿಟಿಶ್ ಸರಕಾರ ಈ ಕಂಪನಿಯ ವಿಷಯದಲ್ಲಿ ಹೆಚ್ಚಿನ ಆಸ್ಥೆಯನ್ನು ವಹಿಸತೊಡಗಿತು.

ಎಣ್ಣೆಯ ಗಣಿಗಳಿಂದ ಲಾಭ

ಆಗಸ್ಟ್ ೧೯೧೪ರಲ್ಲಿ ಈ ಕಂಪನಿಯು ೧೪೨ ಮೈಲುದ್ದ ಎಣ್ಣೆ ಕೊಳವೆಗಳನ್ನು ಸ್ಥಾಪಿಸಿತು. ಮುಂದಿನ ಎರಡು ತಿಂಗಳಲ್ಲಿ ೬೦ ಲಕ್ಷ ಗ್ಯಾಲನ್ ಎಣ್ಣೆ ಅದರಿಂದ ತಯಾರಾಯಿತು. ಕಳೆದ ೫೦ ವರುಷಗಳಲ್ಲಿ ಬ್ರಿಟಿಶ್ ಸರಕಾರ, ಇರಾಣದ ಎಣ್ಣೆ ಕೊಳವೆಗಳಿಂದ ೬೦ ಕೋಟಿ ಟನ್ ಎಣ್ಣೆ ಪಡೆದುಕೊಂಡು ಮಾರಿದೆ, —ಎಂದು ಹೇಳಲಾಗುತ್ತಿದೆ. ಮತ್ತು ಈ ವ್ಯಾಪಾರದಿಂದ ಅವರಿಗೆ ೨೫೦೦ ಕೋಟಿ ರೂಪಾಯಿ ಉಳಿತಾಯವಾಗಿದೆ. ಕೇವಲ ೧೯೫೦ರಲ್ಲಿಯಷ್ಟೆ ೩೨೦ ಲಕ್ಷ ಟನ್ ಎಣ್ಣೆ ತೆಗೆಯಲಾಗಿದೆ.

ದ್ವಿತೀಯ ಮಹಾಯುದ್ಧದಲ್ಲಿ ಅಮೇರಿಕೆಯ ವ್ಯಾಪಾರಸ್ಥರಿಗೆ ಎಣ್ಣೆಯ ಮಹತ್ತ್ವಿಕೆಯ ಅರಿವಾಗಲು ತೊಡಗಿತು. ೧೯೪೪ರಲ್ಲಿ ಅಮೇರಿಕೆಯ ಕೆಲ ವ್ಯಾಪಾರೀ ಕಂಪನಿಗಳು, ಆ್ಯಂಗ್ಲೋ ಇರಾನಿಯನ್ ಎಣ್ಣೆ ಕಂಪನಿಯಿಂದ ಎಣ್ಣೆಯನ್ನು ಖರೀದಿ ಮಾಡುವುದಕ್ಕಾಗಿ, ಕಂಪನಿಯ ಜತೆಯಲ್ಲಿ ಒಂದು ಒಪ್ಪಂದವನ್ನು ಮಾಡಿಕೊಂಡುವು. ಆಗಿನ ಪ್ರಾಸಂಗಿಕ ಕಲಹದಲ್ಲಿ ಕೆಲ ಅಮೇರಿಕೆಯ ವ್ಯಾಪಾರಸ್ಥರು ಇರಾಣದ ಜಕಾತಿ ಫರ್ಮಾಂಧವನ್ನು ಪರಿಗಣಿಸದೆ ' ರೋಜಮೇರಿ ' ಎಂಬ ಹಡಗಿನಲ್ಲಿಂದ ಎಣ್ಣೆಯನ್ನು ಪರದೇಶಕ್ಕೆ ಒಯ್ಯುವ ಪ್ರಯತ್ನವನ್ನು ಮಾಡಿದರು. ಮತ್ತೊಂದು ಬದಿಯಲ್ಲಿ ವಿಶ್ವದ ಬ್ಯಾಂಕು (ಅಮೇರಿಕೆ), ಇರಾಣಕ್ಕೆ ಖಾಲವನ್ನು ಕೊಡಮಾಡಿ ಎಣ್ಣೆ ಕಣಿಗಳ ಮೇಲೆ ತನ್ನ ಕೈಚಾಚಬೇಕೆಂದೂ ಪ್ರಯತ್ನಿಸಿತು. ಎಣ್ಣೆ ಕಣಿಗಳ ಮೇಲೆ ತನಗೆ ಪ್ರಾಪ್ತವಾಗಿದ್ದ ಅಧಿಕಾರಗಳನ್ನು ಬಿಟ್ಟುಕೊಡಲು ಇಂಗ್ಲಂಡಕ್ಕೆ ಮನಸ್ಸಿರಲಿಲ್ಲ. ಅಮೇರಿಕೆಗೆ ತನ್ನ ಪ್ರಭಾವವನ್ನು ಇರಾಣದ ಮೇಲೆ ಬೀರುವ ಇಚ್ಛೆ ಅದಕ್ಕೆ ಪ್ರತಿಯಾಗಿ ಪ್ರಬಲಿಸತೊಡಗಿತು.

ಇರಾಣ ಇಂಗ್ಲಂಡ ಸಂಘರ್ಷಣೆ

ಎಷ್ಟೋ ವರುಷಗಳಿಂದಲೂ ಇರಾಣ ಮತ್ತು ಇಂಗ್ಲಂಡುಗಳ ನಡುವೆ ಘರ್ಷಣೆ ಇದ್ದೇ ಇದೆ. ಮೊದಲನೆಯ ಮಹಾಯುದ್ಧದ ನಂತರ ಆಗಿನ ಇರಾಣದ ಅರಸನಾದ ರಜಾಶಹ ಪಹೆಲವಿಯು, ಇರಾಣದಲ್ಲಿ ಸಾಮಾಜಿಕ ಸುಧಾರಣೆಗಳನ್ನು ಮಾಡಿ ಕಾಯಿದೆಯನ್ನು ಸುವ್ಯವಸ್ಥಿತಗೊಳಿಸಿದನು. ೧೯೩೩ರಲ್ಲಿ ತುಂಬಾ ಚರ್ಚೆಯಾಗಿ, ಆ್ಯಂಗ್ಲೋ ಇರಾನಿಯನ್ ಎಣ್ಣೆಯ ಕಂಪನಿಯು ಇರಾಣ ಸರಕಾರಕ್ಕೆ ಒಪ್ಪಿಸುವ ಕರದ ರಕಮಿನಲ್ಲಿ ವೃದ್ಧಿಗೊಳಿಸಲು ಒಪ್ಪಿಕೊಂಡಿತು.

ಎರಡನೆಯ ಮಹಾಯುದ್ಧದ ಸಮಯದಲ್ಲಿ, ಜರ್ಮನಿಯ ನೆವಮಾಡಿ ಇಂಗ್ಲಂಡು ಮತ್ತು ರಶಿಯಾ ತಂತಮ್ಮ ಸೈನ್ಯವನ್ನು ಇರಾಣದಲ್ಲಿ ತಂದಿರಿಸಿದುವು. ಇದೇ ಸಮಯಕ್ಕೆ ರಜಾಶಹ ಪಹೆಲವಿಯನ್ನು ಪಟ್ಟದಿಂದ ಕೆಳಗಿಳಿಸಿ, ಅವನ ಮಗನನ್ನು (ಈಗಿನ ಶಹ) ಪಟ್ಟದ ಮೇಲೆ ಕುಳ್ಳಿರಿಸಲಾಯಿತು.

ಇದೇ ಸಮಯಕ್ಕೆ ಎಣ್ಣೆಯ ಉತ್ಪಾದನೆಯು ಮಿತಿ ಬೆಳೆಯಲು ತೊಡಗಿತು. ಆದರೆ ಇದರಿಂದ ಇರಾಣದ ಜನತೆಗೆ ಯಾವುದೇ ತರಹದಿಂದ ಲಾಭವಾಗಲಿಲ್ಲ—ಆಗುವಂತಿರಲಿಲ್ಲ. ಜನತೆಯ ಆರ್ಥಿಕ ಸ್ಥಿತಿಯು ಮಟ್ಟ ದಿನೇದಿನೇ ಕೆಳಗಿಳಿಯು ತೊಡಗಿತು. ಇದರ ಹೊರತಾಗಿ ಆ್ಯಂಗ್ಲೋ ಇರಾನಿಯನ್ ಕಂಪನಿ ಇರಾಣದ ಆಂತರಿಕ ವಿಷಯದಲ್ಲಿ ಕೈ ಹಾಕತೊಡಗಿತು. ಇರಾಣದ ರಾಜಕೀಯ ಪಕ್ಷವಾದ ಮಜಲೀಸದ ಕೆಲ ಸದಸ್ಯರು ಎಣ್ಣೆ ಕಂಪನಿಯಿಂದ ಲಂಚ ತಿಂದು, ಆ ಕಂಪನಿಯ ಕೈಗೊಂಬೆಗಳಾದರು. ' ಮಜಲಿಸ ' ಪಕ್ಷದಲ್ಲಿ ಕೇವಲ ಜಮೀನದಾರ ವರ್ಗವೇ ತುಂಬಿತ್ತು. ಇರಾಣದ ಶಹ ಮತ್ತು ಆ್ಯಂಗ್ಲೋ ಇರಾನಿಯನ್ ಕಂಪನಿ ಇವರಿಬ್ಬರ ಸಹಾನುಭೂತಿ ಮಜಲಿಸ್ ಪಕ್ಷಕ್ಕೆ ಇದೇ—ಎಂದು ದೇರೆ ಹೇಳಬೇಕಾಗಿಲ್ಲ. ಇರಾಣದ ಶಹನೂ ಕಂಪನಿಯ ತಾಳಕ್ಕೆ ಸರಿಯಾಗಿ ಕುಣಿಯುತ್ತಿದ್ದನೆಂಬುದಕ್ಕೆ ಕೆಲವು ನಿದರ್ಶನಗಳುಂಟು. ಇರಾಣದ ಬಹ್ವಂಶ ಜನತೆ ಶೋಚಾ ಬಡತನ ಸ್ಥಿತಿಯಲ್ಲಿಯೇ ಇರುತ್ತದೆ.

ಇರಾಣದ ಸುಸಂಘಟಿತ ರಾಜಕೀಯ ಪಕ್ಷಗಳಲ್ಲಿ ತುದೇಹು ಪಾರ್ಟಿ ಒಂದಾಗಿದೆ. ಈ ಪಕ್ಷ ಸಂಪೂರ್ಣವಾಗಿ ಕಮ್ಯುನಿಸ್ಟ್

ದಸ್ಯನಿಂದ ತುಂಬಿಲ್ಲ, ಅದರೂ ಸಾಮಾನ್ಯವಾಗಿ ಈ ಪಕ್ಷ ಕಮ್ಯು ನಿಸ್ಟ್ ತತ್ತ್ವವನ್ನು ಮನ್ನಿಸುತ್ತದೆ. ಈ ಪಕ್ಷದ ಸಂಖ್ಯೆ ಒಂದುವರೆ ಲಕ್ಷ ವಿರಬಹುದು. ಶಹನಮೇಲೆ ಆಕ್ರಮಣ ಮಾಡಿದ ಆರೋಪದ ಮೇಲಿಂದ ಇತ್ತೀಚೆಗೆ ಈ ಪಕ್ಷವು ಕಾಯಿದೆ ಬಾಹ್ಯವೆಂದು ಸಾರಲ್ಪಟ್ಟಿತು. ಇಂದಿಗೂ ಈ ಸಂಸ್ಥೆ ಕಾಯಿದೆಬಾಹ್ಯವಾಗಿ ಉಳಿದಿದೆ. ಆದರೂ ಎಡಪಕ್ಷದ ನೇತೃತ್ವವನ್ನು ಇದೇ ಪಕ್ಷವು ವಹಿಸಿಕೊಂಡಿದೆ. ಯೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇರಾಣದ ಮತ್ತೊಂದು ಶಕ್ತಿಶಾಲಿ ವ್ಯಕ್ತಿ ಎಂದರೆ ಅಲ್ಲಾ ಕುಶಾನಿ. ಇವನೊಬ್ಬ ವಿಚಿತ್ರ ವ್ಯಕ್ತಿ. ಅಲ್ಲಾ ಕುಶಾನಿ ಧರ್ಮಗುರುವಾಗಿದ್ದರೂ ಹಿಂಸಾಪ್ರಿಯ ವ್ಯಕ್ತಿ. ಬಹ್ವಂಶ ಗೂಂಡಾ ಜನ ಈತನ ಬೆಂಬಲಿಗರಾಗಿದ್ದಾರೆ. ಈ ಮೊದಲಿನ ಪ್ರಧಾನಿಯಾದ ಅಲಿ ರಾಜವಾರನನ್ನು ಕೊಂದವರು, ಈ ಅಲ್ಲಾ ಕುಶಾನಿಯ ಅನುಯಾಯಿಗಳೇ. ಮೊನ್ನೆಮೊನ್ನೆಯ ವರೆಗೆ ಅಧಿಕಾರದಲ್ಲಿದ್ದ ಡಾ. ಮುಸಾದಿಕರೂ ಈ ಅಲ್ಲಾ ಕುಶಾನಿಗೆ ಅಂಜುತ್ತಲೇ ಇದ್ದರು.

ಈ ಅಲ್ಲಾ ಕುಶಾನಿಗೆ ರಶಿಯವೆಂದರೂ ಅಷ್ಟೆ—ಇಂಗ್ಲಂಡವೆಂದರೂ ಅಷ್ಟೆ. ಅವರಿಬ್ಬರ ಮತದ ಮೈಲಿಗೆ ಈ ವ್ಯಕ್ತಿಗಿಲ್ಲ. ತನ್ನ ದೇಶದ ಭಾಗ್ಯವನ್ನು ನಿರ್ಮಿಸುವ ಹಕ್ಕು ತನ್ನ ದೇಶದವರಿಗಿಷ್ಟೆ ಇರತಕ್ಕದ್ದೆಂಬುದೇ ಕುಶಾನಿಯ ಮತ. ಬ್ರಿಟಿಶರ ವಿಷಯದಲ್ಲಿ ಕುಶಾನಿಗೆ ತುಂಬಾ ತಿರಸ್ಕಾರ. ತುದೇಹ ಪಕ್ಷ ಮತ್ತು ಕುಶಾನಿ ಇವರಿಬ್ಬರೂ ಮುಸಾದಿಕ ಸರಕಾರಕ್ಕೆ ಈ ವರೆಗೆ ಬೆಂಬಲಕೊಡುತ್ತಲೇ ಬಂದಿದ್ದರು. ಆದರೆ ಈಗ ಕುಶಾನಿ, ಜನರಲ್ ಜಹೇದಿ ಸರಕಾರಕ್ಕೆ ಬೆಂಬಲ ಕೊಟ್ಟದ್ದು ಕಂಡು ಬಂದಿದೆ.

ಸಪ್ತವಾರ್ಷಿಕ ಯೋಜನೆ

ದೇಶದ ಪುನರ್ನಿರ್ಮಾಣದ ಕಾರ್ಯಕ್ಕಾಗಿ ಇರಾಣ ಸರಕಾರ ಒಂದು ಸಪ್ತವಾರ್ಷಿಕ ಯೋಜನೆಯನ್ನು ಸಿದ್ಧ ಪಡಿಸಿತು. ಆದರೆ ಬೊಕ್ಕಸದಲ್ಲಿ ಸಾಕಷ್ಟು ಧನವಿರದ್ದರಿಂದ, ಈ ಯೋಜನೆ ಕಾರ್ಯರೂಪಕ್ಕೆ ಬರಲಿಯುವದಸಾಧ್ಯವಾಗಿ ಕಂಡು ಬಂದಿತು. ಇರಾಣದ ಉತ್ಪನ್ನದಲ್ಲಿ ೧೯೦೯ಕ್ಕೆ ಒಂ ರಷ್ಟು ಭಾಗ ಕೇವಲ ಆ್ಯಂಗ್ಲೋ ಇರಾಣಿಯನ್ ಎಣ್ಣೆ ಕಂಪನಿಯಿಂದ ಕರರೂಪವಾಗಿ ಬರುತ್ತದೆ. ಇರಾಣದ ಜನತೆಗೆ ಈಗೀಗ ಅದರ ಅರಿವಾಗ ತೊಡಗಿತು. ವಿದೇಶೀಯರು ನಮ್ಮ ಭೂಮಿಯಲ್ಲಿ ಎಣ್ಣೆ ತೆಗೆದು ಅಪಾರ ಲಾಭ ಪಡೆಯುತ್ತಿರುವಾಗ, ಆ ಲಾಭದ ಮೇಲೆ ಇರಾಣಕ್ಕೆ ಕೆಲವಂಶವಾದರೂ ಅಧಿಕಾರವೇಕಿಲ್ಲವೆಂದು ಇರಾಣದ ಜನತೆ ಪ್ರಶ್ನೆ ಮಾಡತೊಡಗಿತು. ಕಾರಣ ಇರಾಣ ಸರಕಾರಕ್ಕೆ ಕೊಡುವ ಕರದಲ್ಲಿಯಾದರೂ ಹೆಚ್ಚುವರಿಯಲಿ ಎಂದು ಇರಾಣ ಕೇಳಿ ಕೊಂಡಾಗ, ಕಂಪನಿಯು ಗ್ರಾಹಕರಲ್ಲಾದ ಒಪ್ಪಂದದ ಕಡೆಗೆ ಬೊಟ್ಟುಮಾಡಿ ತೋರಿಸಿ ಈ ತಕ್ಕಟ್ಟಿನಿಂದ ಜಾರುವ ಉಪಾಯವನ್ನು ಯೋಚಿಸ ತೊಡಗಿತು. ಇರಾಣದ ಜನತೆ ಇವೆಲ್ಲ ಕಾರಣಗಳಿಂದ ಬ್ರಿಟಿಶ್ ಕಂಪನಿಗೆ ವಿರೋಧ ತೋರಿಸಲು ತೊಡಗಿತು. ಗ್ರಾಮಗಳಲ್ಲಿ ಮಜಲಿಸ ಪಕ್ಷ ಈ ಎಣ್ಣೆಯ ಉದ್ಯಮತನ್ನನ್ನು ರಾಷ್ಟ್ರೀಕರಣ ಮಾಡಿತು. ಈ ರಾಷ್ಟ್ರೀಕರಣದ ವಿರುದ್ಧ ಬ್ರಿಟಿಶ್ ಸರಕಾರ ಗುಲ್ಲೆಬ್ಬಿಸಿ ಈ ಪ್ರಶ್ನೆಯನ್ನು ಸಂ. ರಾ. ಸಂಘದ ಕಡೆಗೆ ತಂದಿರಿಸಿತು. ಆದರೆ ಈ ವಿಷಯ ಇರಾಣದ ಆಂತರಿಕ ವಿಷಯವೆಂದು ಹೇಳಿ ಸಂಯುಕ್ತ ರಾಷ್ಟ್ರ ಸಂಘವು ಈ ಪ್ರಶ್ನೆಯನ್ನು ತೆಕ್ಕೊಗೆಯಿತು. ಇದರಿಂದಾಗಿ ಇರಾಣದಲ್ಲಿ ಪೇಚು ಪ್ರಸಂಗಗಳು ಬಲಿಯಲು ತೊಡಗಿದವು ಇರಾಣದ ಸ್ಥಿತಿ ಕುದಿಯುತ್ತಿರುವ ಎಣ್ಣೆಯಂತಾಯ್ತು. ಇಂತಹ ಸ್ಥಿತಿಯಲ್ಲಿ ಇರಾಣದ ಶಹನು ಗವಾಮೆಸುಲ್ತಾನೇಹನನ್ನು ಪ್ರಧಾನಮಂತ್ರಿಯನ್ನಾಗಿ ನಿಯಮಿಸಿದನು. ಆದರೆ ಇರಾಣದ ಜನತೆ ಹಿಂಸೆಯನ್ನಾಚರಿಸಿ ಇದಕ್ಕೂ ತಮ್ಮ ವಿರೋಧವನ್ನು ಪ್ರದರ್ಶಿಸಿತು. ಆಗ ಶಹ ಮತ್ತೆ ಡಾ. ಮುಸಾದಿಕರನ್ನೇ ಪ್ರಧಾನ ಮಂತ್ರಿಯನ್ನಾಗಿ ನಿಯಮಿಸಿದರು. ಡಾ. ಮುಸಾದಿಕರು ಶಹನ ಎಷ್ಟೋ ಅಧಿಕಾರಗಳನ್ನು ರದ್ದು ಪಡಿಸಿಯೇ ಇರಾಣದ ಮುಖ್ಯ ಮಂತ್ರಿಗಳಾದರು. ಮುಸಾದಿಕರು ಇರಾಣದ ಸಲುವಾಗಿ ತುಂಬಾ ದುಡಿದರು; ಆದರೆ ತಮ್ಮ ಸ್ವಾಮಿತ್ವವನ್ನು ಕೊನೆಯವರೆಗೂ ಉಳಿಸಿಕೊಳ್ಳಬೇಕೆನ್ನುವ ಸ್ವಾರ್ಥಬುದ್ಧಿ ಅವರನ್ನು ಶಹನಿಷ್ಠರನ್ನಾಗಿ ಮಾಡಿದುದರ ಫಲವಾಗಿ, ಅವರ ಕೈಯಿಂದಲೂ ಕೆಲ ಪ್ರಮಾದಗಳು ಸಂಭವಿಸಿದವು.

ಇರಾಣದ ಭೌಗೋಲಿಕ ಸ್ಥಿತಿಯನ್ನನುಲಕ್ಷಿಸಿಯೇ ಅಮೇರಿಕೆ ಇರಾಣಕ್ಕೆ ಸಹಾಯ ನೀಡಲು ಸದಾ ಸಿದ್ಧವಾಗಿದೆ. ಮುಖ್ಯವಾದ ಕಾರಣವೆಂದರೆ: ಇರಾಣದ ಸೀಮಾಂತದಲ್ಲಿ ರಶಿಯ ಇದೆ. ಇರಾಣ ರಶಿಯದ ನೆರಳಲ್ಲಿ ನಿಲ್ಲುವುದು ಅಮೇರಿಕೆಗೆ ಬೇಡವಾಗಿದೆ ಅದಕ್ಕಾಗಿ ಅಮೇರಿಕೆ ಸಪ್ತವಾರ್ಷಿಕ ಯೋಜನೆಯನ್ನು ಕಾರ್ಯರಂಗಕ್ಕೆಳಿಸುವುದಕ್ಕಾಗಿ ಬೇಕಾಗುವ ಸಹಾಯವನ್ನು ನೀಡಲು ಮುಂದೆ ಬಂದಿತ್ತು. ಇಂಗ್ಲಂಡು ರಶಿಯಾದ ಅಧೋಗತಿಯನ್ನು ಮನವಾರೆ ಬಯಸುತ್ತಿದ್ದರೂ, ಅದಕ್ಕೆ ಇರಾಣದ ಮೇಲೆ ಅಮೇರಿಕೆಯ ಪ್ರಭಾವ ಬೆಳೆಯುತ್ತಿದ್ದದ್ದು ಸಹಿಸದಂತಾಗಿದೆ.

ಇಂತಹ ವಿಚಿತ್ರಶಕ್ತಿಗಳ ಸಮನ್ವಯತೆ ಆಗಿದ್ದುದರಿಂದು ಇರಾಣದಲ್ಲಿ ಮೇಲಿಂದ ಮೇಲೆ ಅಶ್ಚರ್ಯಜನಕ ಘಟನೆಗಳು ಘಟಿಸ ತೊಡಗಿವೆ. ಈಗ ಜನರಲ್ ಜಹೇದಿಯವರ ಸರಕಾರ ಅಸ್ತಿತ್ವ ದಲ್ಲಿದ್ದರೂ, ಎಡ ಪಕ್ಷಗಳ ಪ್ರಾಬಲ್ಯ ಸರ್ವತೋಮುಖವಾಗಿ ನಷ್ಟವಾಗಿಲ್ಲ. ಒಂದು ವೇಳೆ ಈಗಿನ ರಾಜ್ಯಕ್ರಾಂತಿಯ ಹಿಂದೆ ಪರರಾಷ್ಟ್ರಗಳ ಶಕ್ತಿಯ ಕೈವಾಡವಿದೆಯೆಂಬುದು ಖಂಡಿತವಾದರೆ, ಎಡಪಕ್ಷಗಳೂ ತಮಗೆ ಬೇಕಾದ ರಾಷ್ಟ್ರಗಳ ಶಕ್ತಿಯನ್ನು ಪರೋಕ್ಷವಾಗಿ ಪಡೆದು ಕೊಂಡು, ಇರಾಣದ ಶಾಂತಿಸ್ಥಾಪನೆಯ ದಿನಗಳನ್ನು ಮತ್ತೆ ಮುಂದೂಡಬಹುದೆಂಬ ಸಂದೇಹ ನೀರೀಕ್ಷಕರಲ್ಲಿ ಮೂಡುತ್ತಿದ್ದಲ್ಲಿ ಅದು ಅಶ್ಚರ್ಯದ ಮಾತಲ್ಲ.

ಅಂತೂ ಇರಾಣದಲ್ಲಿ ಕೆಲವರ್ಷಗಳಿಂದ ಪಡೆದುದು ರಾಜ ಕಾರಣಗಳ ಒಂದು ಹಗ್ಗಜಗ್ಗಾಟ.

ಕಡಲ ಕರೆ

(ಕಣ್ಣಕತೆ)

ಕೀ. ಸ. ಬಿ. ಕು. ಮುಂಬಯಿ

●

ಸಾಮಾಜಿಕ ಜೀವನದಲ್ಲಿಯ ವ್ಯಕ್ತಿವ್ಯಕ್ತಿಯ ಜೀವನದಲ್ಲಿಯ ಒಂದೊಂದು ಕ್ಷಣದ ಘಟನೆಯೂ ಕಥನಕ್ಕೆ ವಸ್ತುವಾಗಬಲ್ಲದು. ಎಂದಮೇಲೆ ಸೀತುವಿನಂತಹ ಮೀನಗಾರ ಗರತಿಯ ಬಡಬಾಳಿನ ಜೀವನ, ಅದೆಷ್ಟು ಕಥನಗಳ ಸೃಷ್ಟಿಗೆ ಕಾರಣವಾಗಿ ನಿಲ್ಲಬಹುದು?

●

ಸಂತೆಗೆ ಹೋದ ಸೀತು ಓಡುತ್ತೋಡುತ್ತಾ ಮನೆಗೆ ಬಂದಳು. ಮನೆಯ ಅಂಗಳಕ್ಕೆ ಬರುವಾಗ ಅವಳ ಆರು ತಿಂಗಳ ಶಿಶು ಜೋರಾಗಿ ಕೂಗುವ ಸ್ವರ ಕೇಳಿಸುತ್ತಿತ್ತು. ಮೀನು ಕೊಂಡುಹೋದ ಹೆಡಿಗೆಯನ್ನು ಅಂಗಳದಲ್ಲೇ ಬಿಸುಟು, ಮನೆಯೊಳಗೆ ಹೋಗಿ ಮಗುವನ್ನು ಎತ್ತಿಕೊಂಡಳು— "ಅಯ್ಯೋ, ನನ್ನ ಕಂದ ಎಷ್ಟು ಹಸಿದಿದೆಯೊ ಏನೊ? " ಎಂದು ಗೊಣಗುಟ್ಟುತ್ತಾ ಮೊಲೆಯುಣಿಸಲಾರಂಭಿಸಿದಳು. ಹಸಿವಿಂದ ಬಳಲುತ್ತಿದ್ದ ಶಿಶು ಬೇಗಬೇಗನೆ ಮಾತೆಯ ಎದೆಯ ಹಾಲನ್ನು ಹೀರಲಾರಂಭಿಸಿತು.

ಮಗುವಿನ ಹಸಿವು ನೀಗಿದ ಮೇಲೆ ಅದನ್ನಲ್ಲೇ ಚಾಪೆಯ ಮೇಲೆ ಒರಗಿಸಿ, ಕೊಕಡಿಗೆ ಹೋದಾಗ, ಅಲ್ಲಿ ಅವಳ ಹಿರಿಯ ಮಗ ವಾಸು, ಒಲೆಯಲ್ಲಿ ಅನ್ನಕ್ಕೆ ನೀರಿಟ್ಟು ಬೆಂಕಿ ಉಸುರುವುದರಲ್ಲಿದ್ದನು. ಹಸಿಯ ಕಟ್ಟಿಗೆಗೆ ಬೆಂಕಿ ಹಿಡಿಯದುದರಿಂದ, ಹೊಗೆ ಎದ್ದು ಅವನ ಕಣ್ಣುಗಳಿರಡೂ ಕೆಂಪುಕೆಂಪಾಗಿ ದರದರನೆ ನೀರು ಸುರಿಯುತ್ತಲಿತ್ತು. ಸೀತು ಬಂದುದನ್ನು ನೋಡಿ—"ನಮ್ಮ ಊರಿನ ಕೈರಂಪಣಿಯನ್ನು ಮೂಳೂರಿಗೆ ಕೊಂಡು ಹೋಗಿದ್ದಾರಂತೆ. ಸ್ವಲ್ಪ ಮೀನು ಬಿದ್ದಿದೆಯಂತೆ. ಅದನ್ನು ಪಾಲು ಮಾಡಿಕೊಳ್ಳಬಹುದು. ನೆರೆಮನೆಯವರೆಲ್ಲರೂ ಹೋದರು. " ಎಂದನು ವಾಸು.

" ನಮ್ಮ ಊರಿನ ಕೈರಂಪಣಿಯವರಿಗೆ ಊರಿನ ಸಮುದ್ರದಲ್ಲಿ ಮೀನು ಸಿಗುವುದಿಲ್ಲವೊ ಏನೋ? ಅಷ್ಟು ದೂರದ ಮೂಳೂರಿಗೆ ಹೋಗಿ ಕೈರಂಪಣಿ ಬಲೆಯನ್ನು ಬಿಟ್ಟರೆ, ಅಲ್ಲಿಗೆ ಕರ್ಮ ಮಾಡಿಕೊಂಡು ಹೋಗುವುದು ಯಾರು? ಹೊತ್ತು ಹೋಯಿತು, ಕತ್ತಲಾಗುತ್ತ ಬಂತು! " ಎಂದಳು ಸೀತು.

" ನಮ್ಮೂರ ಸಮುದ್ರದಲ್ಲಿ ತುಪಾನು ಇದೆ. ಮೂಳೂರಲ್ಲಿ ಮಡಿ ಬಿದ್ದುದರಿಂದ ಸಮುದ್ರವು ಶಾಂತವಿದೆ. ಅದಕ್ಕಾಗಿ ರಂಪಣಿಯನ್ನು ಅಲ್ಲಿಗೆ ಕೊಂಡು ಹೋಗಿದ್ದಾರೆ. ನೀನು ಊಟ ಮಾಡಿ ಬೇಗ ಹೋಗವ್ವಾ." ಎಂದು ಹೇಳಿ, ಮಣ್ಣಿನ ಕರದಲ್ಲಿ ಉಳಿದ ಗಂಜಿಯನ್ನು ಬಳಸುವೆನೆಂದು ವಾಸು ಎದ್ದನು.

" ಊಟ ಮಾಡಿ ಹೋಗುವಾಗ ಬಹಳ ತಡವಾದೀತು; ಮೀನು ಗೀನು ಪಾಲುಮಾಡಿಕೊಂಡಿದ್ದರೆ! ನಾನು ಬೇಗನೆ ಹೋಗಿ ತರುತ್ತೇನೆ! ಹೋಗದಿದ್ದರೆ ಅವರಿಗೂ ಗರ್ವ ಬರಬಹುದು" ಎಂದು ಹೇಳಿ, ಸೀತು ಹೆಡಿಗೆಯೊಂದನ್ನು ಹಿಡಿದುಕೊಂಡು ನಡೆದೇಬಿಟ್ಟಳು. ಪಶ್ಚಿಮಾಂಬುಧಿಯಲ್ಲಿ ಸೂರ್ಯನು ಮುಳುಗುವುದರದಲ್ಲಿದ್ದನು. ಪೂರ್ವದಿಗಂತದಲ್ಲಿ ಕರಿದಾದ ಮೋಡವು ಮೇಲೇರುತ್ತಾ ಬರುತ್ತಿತ್ತು. ಸೀತು ಹೆಡಿಗೆ ಹಿಡಿದುಕೊಂಡು ಬೇಗಬೇಗನೆ ಹೋಗುವ ಭರದಲ್ಲಿ, ನೆರೆಮನೆಯ ಅಚ್ಚಕ್ಕಳನ್ನು ಕರೆದು ಕೇಳಿದಳು: —" ಪಡ್ಡಾಗೆ ಕೈ ರಂಪಣಿ ಬಿಟ್ಟಲ್ಲಿಗೆ ಬರುವದಿಲ್ಲವೇ?" ಎಂದು. ಅಚ್ಚಕ್ಕ ಮನೆಯಿಂದ ಹೊರಗೆ ಬಂದು— " ಯಾಕೆ ಸೀತು, ನಿನಗಿಷ್ಟು ತಡವಾಯಿತು! ನಮ್ಮ ನರಸು ಮತ್ತು ಲಚಿಮಿ ಆವಾಗಲೇ ಹೋಗಿದ್ದಾರೆ. ಮರಳಿ ಬರಲಿಕ್ಕಾಯಿತು. ಹೋಗು ಹೋಗು, ಬೇಗ ಹೋಗು! ಹೊತ್ತು ಹೋಯಿತು " ಎಂದಳು.

" ಏನು ಮಾಡುವುದು ಅಚ್ಚಕ್ಕ? ಸಂತೆಗೆ ಮೀನು ಮಾರಲು ಹೋಗಿದ್ದೆ. ಬರುವಾಗ ಸ್ವಲ್ಪ ತಡವಾಯಿತು. ನನ್ನ ಅವಸ್ಥೆ ಇದೇ ನೋಡು! " ಎಂದು ಹೇಳುತ್ತಾ ಸೀತು ಸಮುದ್ರಬದಿಯಿಂದಾಗಿ ಮುಳೂರಿನ ದಾರಿ ಹಿಡಿದಳು.

ಮೂಳೂರಿಗೆ ಬಂದು ಮುಟ್ಟಿದಾಗ, ಹೊತ್ತು ಮುಳುಗಿ ಕತ್ತಲೆಯು ಕವಿಯುತ್ತಾ ಬರುತ್ತಿತ್ತು. ಕೈರಂಪಣಿ ಬೆಟ್ಟ ಸ್ಥಳಕ್ಕೆ ಬಂದಾಗ, ಎಲ್ಲರೂ ಅವರವರ ಪಾಲಿನ ಮೀನನ್ನು ಕೊಂಡು ಹೋಗಿದ್ದರು. ಒಂದು ಪಾಲಿನ ಮೀನು ಮಾತ್ರ ಉಳಿದಿತ್ತು. ಒರ್ವ ಬಾಲಕನು ಆ ಮೀನಿನ ರಾಶಿಯ ಬಳಿ ಕುಳಿತುಕೊಂಡು ಪಹರೆ ಮಾಡುತ್ತಿದ್ದನು. " ಇದು ಯಾರ ಮೀನಿನ ಪಾಲು ಮಗು? " ಎಂದು ಸೀತು ಆ ಬಾಲಕನಲ್ಲಿ ವಿಚಾರಿಸಿದಳು.

" ಯಾರ ಪಾಲಿನದ್ದೆಂದು ನನಗೆ ಗೊತ್ತಿಲ್ಲ. ಇದೊಂದು ಪಾಲು ಹೀಗೇನೇ ಉಳಿದಿದೆ. ಕೊನೆಗೆ ಇಲ್ಲಿ ಉಳಿದ ಕೈರಂಪಣಿಯ ಜನರು, ಈ ಮೀನಿನ ಪಾಲನ್ನು ಯಾರೂ ಕೊಂಡು ಹೋಗಲು ಬರದಿದ್ದಲ್ಲಿ ನಮ್ಮ ಮನೆಗೆ ಕೊಂಡೊಯ್ಯಲು ಹೇಳಿದ್ದಾರೆ. ಅದಕ್ಕಾಗಿ ನಾನು ಕಾದು ನಿಂತದ್ದು," ಎಂದು ಬಾಲಕನು ಉತ್ತರವಿತ್ತನು. ಸೀತು ಉಭಯಸಂಕಟಕ್ಕೆ ಬಿದ್ದಳು. ಒಂದು ವೇಳೆಗೆ ಅವಳ ಪತಿ ಕಾಡ್ಯನು ಪಾಲಿನ ಮೀನನ್ನು ಮನೆಗೆ ಹೋಗುವಾಗ ಕೊಂಡು ಹೋಗಿದ್ದರೆ, ಅವಳೂ ಕೊಂಡುಹೋದರೆ ಎರಡು ಪಾಲಿನ ಮೀನು ಬಂದಂತಾಗುವುದಲ್ಲಾ? ಇದು ಸರಿಯಾಗಲೊಲ್ಲದು—ಎಂದು ಒಮ್ಮೆ ಆಲೋಚಿಸಿದಳು. ಒಂದು ವೇಳೆಗೆ ಕಾಡ್ಯನೂ ಕೊಂಡು ಹೋಗದೆ, ತಾನೂ ಬಿಟ್ಟು ಹೋದಲ್ಲಿ ಪಾಲೇ ಇಲ್ಲದಂತಾಗುವುದಲ್ಲಾ?—ಎಂದು ಮತ್ತೊಮ್ಮೆ ಚಿಂತಿಸಿದಳು. ಏನು ಮಾಡಬೇಕೆಂದು ಅವಳಿಗೆ ಹೊಳೆಯಲಿಲ್ಲ. ಅಲ್ಲಿದ್ದ ಬಾಲಕನು ಯಾವ ಸಮಸ್ಯೆಗೂ ಉತ್ತರವೀಯುವಷ್ಟು ಪ್ರವೀಣನಾಗಿದ್ದಿಲ್ಲ. ಅಷ್ಟರಲ್ಲಿ, ಆ ಕಡೆಗೆ ಯಾರೋ ಬೀಡಿ

ನೇನುತ್ತಾ ಬರುವಂತಾಯಿತು. ವ್ಯಕ್ತಿ. ಹತ್ತಿರ ಹತ್ತಿರ ಬಂದ ಮೇಲೆ ಸೀತುಳಿಗೆ ಅವನ ಪರಿಚಯವಾಗಿ—"ಯಾರಮ್ಮ ಸೀನನೇ?" ಎಂದು ವಿಚಾರಿಸಿದಳು. "ಹೌದು. ಹೌದು ಯಾರದು? ಸೀತಕ್ಕನೇ? ಏನಿಷ್ಟು ತಡವಾಯಿತು?" ಎಂದು ಸೀನನು ಹತ್ತಿರಕ್ಕೆ ಬಂದನು.

"ಸಂತೆಗೆ ಹೋಗಿದ್ದೆ. ಬರುವಾಗ ಸ್ವಲ್ಪ ತಡವಾಯಿತು. ಇಲ್ಲಿ ಒಂದು ಪಾಲಿನ ಮೀನಿದೆ. ಅವರು ನಮ್ಮ ಪಾಲನ್ನು ಮನೆಗೆ ಕೊಂಡು ಹೋಗಿದ್ದಾರೋ ಇಲ್ಲವೊ? ಗೊತ್ತಿಲ್ಲ!" ಎಂದಳು.

"ಇಲ್ಲ. ಅವನು ಕೊಂಡು ಹೋಗಲಿಲ್ಲ. ನಾವು ಒಟ್ಟಿಗೇನೇ ಮನೆಗೆ ಹೋದುದು."

"ಹಾಗಾದರೆ ನೀವು ಎಲ್ಲಿಂದ ಹೋದುದು? ನನಗೆ ಸಿಕ್ಕಲಿಲ್ಲ. ನೇಕೆ?" ಎಂದು ಸೀತು ವಿಚಾರಿಸಿದಳು.

"ನಾವು ತೋಟದೊಳಗಿಂದ ಹೋಗಿದ್ದೆವು. ನೀನು ಸಮುದ್ರ ಕಿನಾರೆಯಿಂದ ಬಂದುದೆಂದು ಕಾಣುತ್ತಿದೆ. ಇದು ಪಾಲು ನಿಮ್ಮದೆ! ಬೇಗಬೇಗನೆ ಹೆಡಿಗೆಗೆ ತುಂಬಿಸು. ಮಳೆ ಬರಲಿಕ್ಕಾಯಿತು" ಎಂದು ಹೇಳಿ, ಸೀನನು ಮೀನನ್ನು ಹೆಡಿಗೆಗೆ ತುಂಬಲಾರಂಭಿಸಿದನು. ಈ ದೃಶ್ಯವನ್ನು ನೋಡಿದ ಬಾಲಕನು ಸ್ವಲ್ಪ ನಿರಾಕೆಯಿಲ್ಲೇ ಮನೆಗೆ ನಡೆದನು. ಮೀನನ್ನು ಹೆಡಿಗೆಗೆ ತುಂಬಿಸಿ ಆದಮೇಲೆ, ಸೀತು ಅದನ್ನು ಎತ್ತಿ ತಲೆಯಮೇಲೆ ಹೊತ್ತುಕೊಂಡು—"ಇನ್ನು ನೀನು ಹೋಗು ಸೀನ" ಎಂದಳು. ಸೀನನು ತನ್ನ ನಂಟರ ಮನೆಯಭಿಮುಖವಾಗಿ ನಡೆದನು. ಸೀತು ಸಮುದ್ರದ ಬದಿಗಿಳಿದು, ತನ್ನ ಮನೆಯ ದಾರಿ ಹಿಡಿದಳು.

ಹತ್ತಿರದಲ್ಲಿದ್ದರೂ, ಒಬ್ಬನಿಗೊಬ್ಬರು ಕಾಣದಿದ್ದಷ್ಟು ಕತ್ತಲೆ ಕವಿದಿತ್ತು. ಸೀತು ಬೇಗಬೇಗನೆ ನಡೆಯಲಾರಂಭಿಸಿದಳು. ಬೆಳಿಗ್ಗೆ ಸಂತೆಗೆ ಹೋಗುವಾಗ ಒಂದಿಷ್ಟು ಗಂಜಿ ಊಟ ಮಾಡಿದವಳು, ಸಂತೆಯಲ್ಲಿ ಒಂದು ಪಾವಾಣಿಯ ಬೆಲ್ಲ ತಿಂದು ಸ್ವಲ್ಪ ನೀರು ಕುಡಿದಿದ್ದಳು. ಅಷ್ಟೆ. ಒಂದು ಕಡೆಯಿಂದ ಹೆಸಿಗೆಯ ಜೋರಾದರೆ, ಮತ್ತೊಂದು ಕಡೆ ಕವಿದ ಕತ್ತಲು. ತಲೆಯ ಮೇಲೆ ಹೆಡಿಗೆ ತುಂಬಾ ತುಂಬಿದ ಮೀನಿನ ಭಾರ ಬೇರೆ. ತನ್ನ ಪತಿ ಕಾತ್ಯನನ್ನು ಮನಸಾರೆ ಹಳಿದಳು. ಗಂಡಸರು ನಿರ್ದಯಿಗಳೆಂದೂ ಒದರಿಕೊಂಡಳು. ಕತ್ತಲಲ್ಲಿ ನಡೆಯುತ್ತಾ ನಡೆಯುತ್ತಾ ಹೋದ ಅವಳಿಗೆ, ತನ್ನ ಮನೆಯು ಹಿಂದೆ ಉಳಿಯಿತೋ? ಮುಂದೆ ಬಂತೋ?—ಎಂದು ತಿಳಿಯಲಿಲ್ಲ. ಸ್ವಲ್ಪ ಸಮಯದ ತನಕ ಅಲ್ಲೇ ನಿಂತುಕೊಳ್ಳಬೇಕಾಯಿತು. ಮಳೆಯು ಮಿಂಚು ಗರ್ಜನೆಯಿಂದ ಮಿಂಚುತ್ತಿತ್ತು. ಆ ಬೆಳಕಿನ ಆಧಾರದಿಂದ ಸಮುದ್ರ ಕಿನಾರೆಯಿಂದ ತೋಟಕ್ಕೆ ಬರುವದಕ್ಕೆ ಸೀತು ಬಂದಳು. ಅದರೆ ಆ ಕವಿದ ಕತ್ತಲೆಯಲ್ಲಿ ತನ್ನ ಮನೆ ಎಲ್ಲಿ-ಎಂದು ಅವಳಿಗೆ ತೀರ್ಮಾನವಾಗಲಿಲ್ಲ. ಅಷ್ಟರಲ್ಲಿ ಮಳೆಯೂ ಬರಲಾರಂಭಿಸಿತು. ಆದರೊಟ್ಟಿಗೆ ರಪರಪನೆ ಗಾಳಿಯೂ ಬೀಸಲಾರಂಭಿಸಿತು. ಮಿಂಚಿನ ಬೆಳಕು ಜಾಸ್ತಿ ಹೆತ್ತು ಹೆಚ್ಚಿ ಬೇಗ ಬೇಗನೆ ನಡೆದರೆ ಮತ್ತೆ ಸ್ವಲ್ಪ ಸಮಯ ಅಲ್ಲೇ ನಿಲ್ಲಬೇಕಾಗುತ್ತಿತ್ತು. ಮುಂದೆ ಮುಂದೆ ಹೆಜ್ಜೆಯಿಕ್ಕುತ್ತಾ ಹೋದಾಗ, ಅವಳ ಕಾಲ ಬುಡಕ್ಕೆ ಮುಳ್ಳಿನ ಬಳ್ಳಿಯೊಂದು ಸಿಕ್ಕಿಕೊಂಡಿತು. ಮೀನನ್ನು ಅಲ್ಲೇ ಬಿಟ್ಟು ಹೇಗಾದರೂ ಮನೆಯನ್ನು ಸೇರಿಕೊಳ್ಳಬೇಕೆಂದು ಆಲೋಚನೆ ಮಾಡುತ್ತಿರುವಾಗ, ಯಾರೋ ಲಾಟಾನು ಹಿಡಿದುಕೊಂಡು ಬರುವಂತಾಯಿತು. ಬಂದವನು ಕಾತ್ಯ. "ಇಷ್ಟರ ತನಕ ಏನು ಮಾಡುತ್ತಿದ್ದಿ?" ಎಂದು ಕಾತ್ಯನು ವಿಚಾರಿಸಿದನು. "ಸಾಕು, ಬಾಯಿ ಮುಚ್ಚಿರಿ. ಪಾಲಿನ ಮೀನನ್ನು ಮನೆಯ ತನಕ ಕೊಂಡು ಹೋಗದೆ ಅಲ್ಲೇ ಬಿಟ್ಟು ಬಂದಿದ್ದೀರಿ. ಒಂದಿಷ್ಟೂ ದಯ-ದಾಕ್ಷಿಣ್ಯವಿಲ್ಲ ನಿಮಗೆ" ಎಂದು, ಉಕ್ಕಿಬಂದ ಗರ್ವದಿಂದ ಒದರಿಬಿಟ್ಟಳು. ಅವಳ ಸ್ವರದಲ್ಲಿ ದುಃಖವು ತುಂಬಿ ಬಂದಿತ್ತು. ಕಾತ್ಯನಿಗಾದ ಬೇಸರವು ಅಷ್ಟಿಷ್ಟಲ್ಲ. ಲಾಟನ್ನೂ ಕೊಡೆಯನ್ನೂ ಕೆಳಗಿಟ್ಟು ಅವಳ ತಲೆಯಿಂದ ಮೀನಿನ ಹೆಡಿಗೆಯನ್ನು ತೆಗೆದುಕೊಂಡು, ತನ್ನ ಹೆಗಲ ಮೇಲಿರಿಸಿಕೊಂಡನು. ಸೀತು, ಕಾಲಲ್ಲಿ ಸಿಕ್ಕಿಕೊಂಡಿರುವ ಮುಳ್ಳಿನ ಬಳ್ಳಿಯನ್ನು ತಪ್ಪಿಸಿ, ಕೊಡೆಯನ್ನೂ, ಲಾಟನನ್ನೂ ಹಿಡಿದುಕೊಂಡಳು. "ನೀನು ಸಂತೆಗೆ ಹೋಗುವವಳು, ನನಗೆ ಹೇಳುವುದೂ ಬೇಡವೆ? ನೀನು ಬರಲಿಲ್ಲವೆಂದು ನನಗೆ ಹೇಗೆ ಗೊತ್ತು?" ಎಂದನು ಕಾತ್ಯ. "ಬಂದಿದ್ದೇನಾ? ಇಲ್ಲವಾ? ಎಂದು ನೋಡುವುದು ಬೇಡವೆ? ಸಂತೆಯಿಂದ ಬರುವಾಗ ಸ್ವಲ್ಪ ತಡವಾಯಿತು" ಎಂದುತ್ತರವಿತ್ತಳು ಸೀತು.

ಮನೆಯ ಅಂಗಳದಲ್ಲಿ ಮೀನಿನ ಹೆಡಿಗೆಯನ್ನು ಕೆಳಗಿಟ್ಟು, "ನೀನು ಹೋಗು, ಮಗುವಿಗಿಷ್ಟು ಹಾಲೆಷ್ಟುಂಟೆಂದು ನೋಡು. ಒದ್ದೆಯಾದ ಬಟ್ಟೆಯನ್ನು ಬದಲಿಸು. ಮೀನನ್ನು ಮಣ್ಣಿನ ಮರಯಿಗೆ ಸುರಿದು, ಉಪ್ಪು ಹಾಕಿ, ನಾನು ಬಂದಂಬಸ್ತು ಮಾಡಿಡುತ್ತೇನೆ!" ಎಂದನು ಕಾತ್ಯ.

"ನಿಮಗದು ಪರಿಯಾಗಲೊಲ್ಲದು. ನಾಳೆ ಮೀನು ಹಾಳಾಗಿ ಹೋಗಬಹುದು!" ಎಂದು ಹೇಳಿ ಸೀತು ಕಾತ್ಯನನ್ನು ಮನೆಯೊಳಗೆ ಕಳುಹಿಸಿದಳು. ಮಣ್ಣಿನ ಮರಯಿಗೆ ಮೀನನ್ನು ಸುರಿದು, ಅದಕ್ಕೆ ನೀರು ಹೊಯಿದು ಶುದ್ಧ ಮಾಡಿ, ಶುದ್ಧವಾದ ಮೀನನ್ನು ಮತ್ತೊಂದು ಮರಯಿಗೆ ತುಂಬಿಸಿ, ಉಪ್ಪು ಬೆರಸಿ, ಭದ್ರವಾಗಿ ಬಾಯಿಕಟ್ಟಿ, ಮನೆಯೊಳಗೆ ಬರುವಾಗ ಸೀತು ಸಂಪೂರ್ಣ ಒದ್ದೆಯಾಗಿದ್ದಳು.

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ ನಿಮ್ಮ ಸರಕಿನ ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ!

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್ ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಅಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ

ಬಟ್ಟೆ ಬದಲಿಸಿ, ಮಗುವಿಗೆ ಹಾಲುಣ್ಣಿಸಲು ಎತ್ತಿಕೊಂಡಾಗ, ಅದರ ಮೈ ಸ್ವಲ್ಪ ಕಾಯುತ್ತಿತ್ತು. "ಮಗುವಿಗೆ ಶೀತವಾಗಿದೆಯೋ ಏನೊ? ಮೈ ಬೆಚ್ಚಗಿದೆ" ಎಂದಳು. "ಆ ಮಗುವಿನ ಪರಿವೆಯೇ ನಿನಗಿಲ್ಲ. ಅದಕ್ಕೆ ಹೊತ್ತಿಗೆ ಸರಿಯಾಗಿ ಹಾಲಿಲ್ಲ ನೀರಿಲ್ಲ" ಎಂದನು ಕಾಡ್ಯ.

ಮಾರನೆಯ ದಿನ ಬೆಳಿಗ್ಗೆ ಏಳುವಾಗ, ಸೀತುಳಿಗೆ ಸ್ವಲ್ಪ ಜ್ವರ ಬರುತ್ತಿತ್ತು. ಕಾಡ್ಯನು ಬೇಗನೆ ಎದ್ದುಕೊಂಡು ಕೈರಂಪಣಿಗೆ ಹೋಗಿದ್ದನು. ರಾತ್ರಿಗೆ ಬರಲಾರಂಭವಾದ ಮಳೆಯು ಒಂದಿಷ್ಟೂ ಬಿಡುವಿಲ್ಲದೆ ಸುರಿಯುತ್ತಿತ್ತು. ಉಳ್ಳು ಬೆರಸಿಟ್ಟ ಮೀನನ್ನು ಒಣಗಿಸುವುದೇ ಆಗಲಿಲ್ಲ. ಜ್ವರದ ತಾಪವು ಸ್ವಲ್ಪ ಹೆಚ್ಚಾದುದರಿಂದ ಸೀತು ಚಾಪೆ ಹಿಡಿದು ಮಲಗಬೇಕಾಯಿತು. ಒಂದು ಕಡೆಯಲ್ಲಿ ಮಗು ಮತ್ತೊಂದು ಕಡೆಯಲ್ಲಿ ತಾಯಿ. ಮಧ್ಯಾಹ್ನದ ಹೊತ್ತಿಗೆ ಕಾಡ್ಯನು ಮನೆಗೆ ಬಂದಾಗ, ಮನೆಯೊಳಗೆ ಮಲಗಿರುವ ಮಡದಿ ಮತ್ತು ಮಗುವನ್ನು ಕಂಡು ತಬ್ಬಿಬ್ಬಾದನು. ಸೀತುಳ ಹಣೆಗೆ ಕೈಯಿಟ್ಟಾಗ, ಕಾವ ಕೆಂಡಕ್ಕೆ ಕೈ ಇಟ್ಟಂತಾಯಿತು. ಜ್ವರದ ತಾಪದಿಂದ ಮಗು ಕೂಡಾ ಗಡಿ ಗಡಿ ಕೂಗುತ್ತಿತ್ತು. "ಮಳೆಯಲ್ಲಿ ನೆನೆಯಬೇಡವೆಂದರೆ ಕೇಳಿದೆಯಾ? ಈಗ ನೋಡು ಆಯಿತಲ್ಲ ಗತಿ?" ಎಂದು ಕಾಡ್ಯನು ಗೊಣಗುಟ್ಟಿದನು. ನೆರೆಮನೆಗೆ ಹೋಗಿ ಒಂದಿಷ್ಟು ಕಷಾಯ ಸೊಪ್ಪನ್ನು ತಂದು, ಕಷಾಯ ಮಾಡಿ ಕುಡಿಸಿದನು. ಮಗುವಿಗೂ ಸ್ವಲ್ಪ ಇತ್ತನು.

ಮಾರನೆಯ ದಿನ ಮಗುವಿಗೆ ಸ್ವಲ್ಪ ಜ್ವರವು ಕಮ್ಮಿಯಾಯಿತು ಆದರೆ ಸೀತು ಜ್ವರದ ತಾಪದಿಂದ ಏನೇನೋ ಮಾತನಾಡುತ್ತಿದ್ದಳು. ಕಾಡ್ಯನ ತಲೆಗೆ ಆಕಾಶ ಕಳಚಿ ಬಿದ್ದಂತಾಯಿತು. ಏನು ಮಾಡಬೇಕೆಂದು ಅವನ ಮನಸ್ಸಿಗೆ ಹೊಳೆಯಲಿಲ್ಲ. "ಡಾಕ್ಟರರ ಮದ್ದು ತಾ" ಎಂದು ನೆರೆಕರೆಯವರು ಹೇಳಿದರು. ಅವರ ಮಾತಿನಂತೆ ಅವನು ಎರಡು ಮದ್ದಿನ ಬಾಟ್ಲಿಗಳನ್ನೂ ಒಂದೆರಡು ರೂಪಾಯಿಗಳನ್ನೂ ಹಿಡಿದುಕೊಂಡು ಡಾಕ್ಟರರಲ್ಲಿಗೆ ಹೊರಟನು. ಮೂರು ಮೈಲು ದೂರದಲ್ಲಿರುವ ಡಾಕ್ಟರರ ಬಳಿಗೆ ಹೋಗುವಾಗ, ಅವರೆಲ್ಲೋ ರೋಗಿಯನ್ನು ನೋಡಲು ಹೋಗಿದ್ದಾರೆಂದಾಯಿತು. ಒಂದೆರಡು ಘಂಟೆಗಳ ತನಕ ಅಲ್ಲಿ ಕಾದು ಕುಳಿತು, ಕೊನೆಗೆ ಡಾಕ್ಟರರು ಬಂದಾಗ ಅವರಲ್ಲಿ ಎರಡು ಬಾಟ್ಲಿ ತುಬಾ ಮದ್ದು ಪಡೆದುಕೊಂಡು ಓತುತ್ತೋಡುತ್ತ ಮನೆಗೆ ಬಂದನು. ಬಂದವನೇ ಒಂದಿಷ್ಟು ಮದ್ದನ್ನು ಗ್ಲಾಸಿಗೆ ಸುರಿದು ಸೀತುಳಿಗಿತ್ತನು. ಮತ್ತೊಂದು ಬಾಟ್ಲಿಯಲ್ಲಿರುವ ಮದ್ದನ್ನು ಮಗುವಿಗಿತ್ತನು. ಸಂಜೆಯಾಗುವಾಗ ಸೀತು ಸ್ವಲ್ಪ ಗೆಲುವಾದಳು. ಕಾಡ್ಯನಿಗೆ ಅನಂದವಾಯಿತು. ಆದರೆ ರಾತ್ರಿಗೆ ಒಮ್ಮೆಲೇ ಅವಳ ಮೈ ಬೆಚ್ಚಗೇರಿತು. ಕಾಡ್ಯನು ಪುನಃ ಗಾಬರಿಗೊಂಡನು. ಜೀವನವೇ ಅವನ ಕಣ್ಣು ಮುಂದೆ ನಿಂತಂತಾಯಿತು. ಮಕ್ಕಳಂತೆ ಅತ್ತುಬಿಟ್ಟನು. "ಅಳಬೇಡಿರಿ" ಎಂದು ಸೀತೆ ಸನ್ನೆ ಮಾಡಿದಳು. ಕಾಡ್ಯನು ಸ್ವಲ್ಪ ಸಮಯಗಳ ತನಕ ಏನೋ ಆಲೋಚನೆ ಮಾಡಿದನು ಕುಳಿತಲ್ಲಿಂದ ಮೇಲೆದ್ದನು. ತಲೆ-ತಲಾಂತರದಲ್ಲಿ ಅವನ ಹಿರಿಯರು ನಂಬಿಕೊಂಡು ಬಂದಿದ್ದ ಪಂಜುರ್ಲಿ ಭೂತನ ಮಂಚವು ಬಳಿಯಲ್ಲಿ ತೂಗಾಡುತ್ತಿತ್ತು. ಅದರ ಮುಂದೆ ಕೈ ಮುಗಿದು ನಿಂತಾಗ ಅವನಿಗೆ ಮಾತೇ ಬಾರದಾಯಿತು. ಕಣ್ಣುಗಳಿಂದ ಕಣ್ಣೀರು ಧಾರಿಕಟ್ಟಿ ಸುರಿಯಲಾರಂಭಿಸಿತು. "ಸ್ವಾಮೀ, ಪಂಜುರ್ಲಿ, ನೀನು ನನ್ನ ಹಿರಿಯರಿಂದ ನಂಬಲ್ಪಟ್ಟ ದೈವವಾಗಿರುತ್ತಿ. ನಿನ್ನನ್ನು ನಾನು ಮರೆತಿಲ್ಲ. ನನ್ನ ಸಂಸಾರದ ಭಾರವು ನಿನ್ನ ಮೇಲೆ. ನಾನು ಗತಿವಿಹೀನನು. ಮನೆಯಲ್ಲಿ ಮಡದಿ ಜ್ವರದಿಂದ ಮಲಗಿದ್ದಾಳೆ. ಅವಳನ್ನು ಉಳಿಸಿ, ನನ್ನನ್ನು ಉದ್ಧಾರ ಮಾಡಿ ಕಾಪಾಡು" ಎಂದು ಸಾಷ್ಟಾಂಗವೆರಗಿದನು. ಅಲ್ಲಿಂದ ಎದ್ದುಕೊಂಡು ಸೀತುಳ ಕಿವಿಗಳಲ್ಲಿರುವ ಚಿನ್ನದ ಬೆಂಡೋಲೆ ಜೋಡಿಯನ್ನು ತೆಗೆದುತಂದು, ಪಂಜುರ್ಲಿಯ ಮಂಚದ ಮೇಲಿಟ್ಟು "ನಾನು ಮಾಡಿದ ಯಾವ ದಶದೋಷ ತಪ್ಪಿದ್ದರೂ, ಗ್ರಹಚಾರ ಕಷ್ಟವಿದ್ದರೂ ಈ ಬಂಗಾರದ ಮೇಲೆ ನಿಲ್ಲಬೇಕು. ಅವಳು ಜ್ವರದಿಂದ ಎದ್ದ ಕೂಡಲೆ ಅದಕ್ಕೆ ತಕ್ಕ ಬಿಳವಾರಿ ಮಾಡುತ್ತೇನೆ. ಆ ತನಕ ಬಡವನನ್ನು ಕಾಪಾಡಬೇಕೆಂದು ಮಗುದೊಮ್ಮೆ ಆಡ್ಡಬಿದ್ದನು. ಸೀತು ಮಲಗಿಕೊಂಡಲ್ಲೇ ಹತ್ತತ್ತು ಬಾರಿ ಕೈ ಮುಗಿದಳು.

ಹೊರಗೆ ಗಾಳಿ ಬೀಸುತ್ತಲಿತ್ತು. ಮಳೆಯೂ ಗರೆಯುತ್ತಿತ್ತು. ಕಾಡ್ಯನು ದೀಪವಿಟ್ಟು ಸುನ್ಮನೆ ಕುಳಿತುಕೊಂಡನು. ಮಗು ಗಡಿ ಗಡಿ ಕೂಗುತ್ತಿತ್ತು. ಅವನ್ನು ಸಮಾಧಾನ ಪಡಿಸಿ, ಅದಕ್ಕೆ ಮದ್ದು ಕುಡಿಸಿದನು. ಆ ನಡುರಾತ್ರಿಯ ಸಮಯದಲ್ಲಿ ಮನೆಯ ಹೊರಗಿಂದ ಬರ ಬರ, ಗರ ಗರ ಶಬ್ದವಾಗುತ್ತಲಿತ್ತು. ಕಾಡ್ಯನು ಆಲಿಸಿದನು. "ಸೀತು, ಅದೇನು ಶಬ್ದ! ಕೇಳಿದೆಯಾ?" ಎಂದು ಸೀತುಳೊಡನೆ ವಿಚಾರಿಸಿದನು. ಅವಳು ಕಿವಿಗೊಟ್ಟು ಆಲಿಸಿದಳು. "ಹೌದು, ಏನೋ ಶಬ್ದವಾಗುತ್ತಲಿವೆ. ಏನಿರಬಹುದು!" ಎಂದು ಪ್ರಶ್ನಿಸಿದಳು. ಆಗ ಕಾಡ್ಯನು—

"ನಾನು ಮೊದಲೇ ಹೇಳಿರುವೆನಲ್ಲಾ! ನಮ್ಮ ಪಂಜುರ್ಲಿ ಒಳ್ಳೇ ಭೂತವೆಂದು. ಅವನು ನಂಬಿದವರ ಕೈ ಬಿಡುವವನಲ್ಲ. ಇದು ಅವನದೇ ಆಜನೆ. ನಮ್ಮ ಪ್ರಾರ್ಥನೆಯು ಅವನ ಕಿವಿಗೆ ಮುಟ್ಟಿರಬಹುದು. ನಿನ್ನ ಜ್ವರವನ್ನು ಗುಣಪಡಿಸುವರೆ ಅವನೇ ಬಂದಿರುವನು. ನಾಳೆ ಸೌಖ್ಯವಾಗುವಿ" ಎಂದನು. ಸೀತು ಮೆಲ್ಲನೆ ಎದ್ದು ಕುಳಿತು ಕೈ ಮುಗಿದುಕೊಂಡು, "ಸ್ವಾಮೀ ಪಂಜುರ್ಲಿ" ಎಂದಳು. ಕಾಡ್ಯನು ಎದ್ದು, ಭೂತದ ಮಂಚದ ಬಳಿಗೆ ಹೋಗಿ— "ನನ್ನ ಮನೆಯ ಬೆಳಕನ್ನೂ ಉಳಿಸು. ನಿನ್ನ ಸೇವೆಯನ್ನೂ ತೆಗೆದುಕೊಳ್ಳು" ಎಂದು ಪುನಃ ಆಡ್ಡಬಿದ್ದನು. ಮಳೆಗಾಳಿಯು ಆಗಲೇ ನಿಂತಿತ್ತು. ಹೊರಗಿಂದ ಕೇಳುತ್ತಿದ್ದ ಬರ ಬರ, ಗರ ಗರ ಶಬ್ದವೂ ಕೇಳಿಸುತ್ತಿದ್ದಿಲ್ಲ.

"ಇನ್ನು ನೀವು ಮಲಗಿಕೊಳ್ಳಿ, ನನಗೆ ಏನೂ ಆಗಲಾರದು. ಪಂಜುರ್ಲಿ ಇವ್ವಾನೆ" ಎಂದು ಹೇಳಿ, ಕಾಡ್ಯನನ್ನು ಹೋಗಿ ಮಲಗಿಕೊಳ್ಳುವಂತೆ ಸೀತು ಒತ್ತಾಯಪಡಿಸಿದಳು. ಕಾಡ್ಯನು ಅಲ್ಲೇ ವಸ್ತ್ರ ಬಿಡಿಸಿ ಮಲಗಿಕೊಂಡನು.

ಮಾರನೆಯ ದಿನ ಮುಂಜಾನೆ ಎದ್ದಾಗ, ಸೀತು ಗೆಲವಾಗಿದ್ದಳು. ಜ್ವರವೂ ಇಳಿದಿತ್ತು. ಅವರ ಮಗುವಿನ ಶರೀರವು ತಣ್ಣಗಾಗಿ ನಿರ್ಜೀವವಾಗಿತ್ತು.

ಮಧುರಚೆನ್ನರ ನೆನಪಿಗೆ

ಡಾ. ಚೆನ್ನವೀರ ಕಣವಿ, ಧಾರವಾಡ

ಜಾನಪದ ಜೀವನದ ಸಂಗೀತಕೆದೆಯೋತು
ಹೂವುಹೂವಿನ ಜೇನುತೊಳೆಯ ಬಿಡಿಸಿ
ಹೊಸಬೆಳಕು ಕಸುವಾಗಿ ಸ್ನೇಹರಸದೊಳು ಮಾಗಿ
ಸುಗ್ಗಿಮಾಡಿದಿರಂದು ನಾಡನಲಿಸಿ!

ಅಂದಿನಿಂದೆನ್ನೆದೆಗೆ ಮೂಡಿಹುದು ಮಳೆಬಿಲ್ಲು
ಆಡಿಹವು ನಿಮ್ಮೂರ ನವಿಲ ಹೆಜ್ಜೆ!
ಕಾಳರಾತ್ರಿಯು ಬೆಳಗು-ಬೈಗುಗಳು ವಾಟಿದುವು
ಕಂಡೆನಾ ನಿಸ್ಸೀಮ ನಯದ ಓಜೆ!

ದೇಹ ಮೋಂಬತ್ತಿಯೊಲು ಮುಡಿದ ಬೆಳಕಿನ ಕುಡಿಗೆ
ಕರಗಿ ಮಿದುವಾಗಿತ್ತು ಅಂತರಂಗ,
ಬೆಳ್ಮುಗಿಲ ಕನಸುಗಳು ಸಚ್ಚಿದಾಕಾಶದಲಿ
ದೇವತಾ ಪೃಥಿವಿ ಮೈದಡವಿದಾಗ!

ಹರಿಗಡಿದ ಬಾಳನೊರತೆಯ ತೋಡಿ ಪ್ರೀತಿಜಲ
ಸೆಲೆಯೊಡೆದು ಬರಿ ಮಧುರಗೀತವಾಗಿ
ಹಲವನೆಸ್ಸಲನನುಳಿದು ಹಾಡಿ ಮೀಸಲುಗವಿತೆ
ಚಿಲುವನಲ್ಲಿಯೆ ಬೆರೆತೆ ಬಯಕೆ ಮಾಗಿ!

ನಿಶ್ಯಬ್ದ ನಿಶ್ಶಬ್ದ ಶಬ್ದದಾಚೆಯ ಶಬ್ದ "—
ಮೌನಕೋಕಿಲೆಯದನೆ ಧ್ಯಾನಿಸಿತ್ತು!
ಸೂರ್ಯಕಾಂತಿಯ ಚಿತ್ತವದರ ಸುಳಿವಿಗೆ ಹೊರಳಿ
ಬೆಳಗಿನೊಳಗಿನ ಬೆಳಕ ಹೀರುತಿತ್ತು!

ಇಲ್ಲಿ ಊರಿದ ಬೀಜವಲ್ಲಿ ಹಣ್ಣಾಗಿತ್ತು,
ಆಕಾಶದಡವಿಯಲಿ ಕೊಂಬೆ ಚಾಚಿ!
ಮರೆದ ನೆಲಲಿ ತನ್ನ ನೆಲನರಸಲುಬಹುದೆ?
ಅರಿತವರಿಗಂತಿದುವೆ ಆತ್ಮಸೂಚಿ!

ತನುವು ನಿಸದಿಗೆಗಲ್ಲು ಮನವು ಮಾಸತಿಕಲ್ಲು
ನಿಮ್ಮ ಸಾಧನೆಯೊಂದು ವೀರಗಲ್ಲು!
ಭಾವ ದೇವಾಲಯದಿ ನಿತ್ಯ ನಂದಾದೀಪ
ಶರಣು ಶರಣೆಂಬುದೇ ಕೊನೆಯ ಸೊಲ್ಲು!

ಮಧುರಚೆನ್ನರಿಗೆ

ಡಾ. ಭುಜೇಂದ್ರ ನುಹಿಸವಾಡಿ

ಜಗದೆಲ್ಲ ಭಾಷೆಗಳ ಧರ್ಮಗಳ ತಳತಿಳಿದು
ನೋಡಿ ನಲಿಯುವ ತವಕ ತೋರಿದ ತವಸಿಗಳೆ,
ತತ್ತ್ವದೊಳಮುತ್ತುಗಳನೆತ್ತಿದನುಭಾವಿಗಳೆ,
ಕಳೆದೊಗೆದಿರೀನಂಗದಂಗಿಯನು ನೀವಿಂದು!
ಕಾಳನಿರ್ಬೇಳೆನೇಹಿಗಳಾವು ಕಲಿತಿಹೆವು
ನಿಮ್ಮ ಪೂರ್ವರಂಗದೊಳನುಭಾವದಭಿನಯವ;
ಕಾಳರಾತ್ರಿಯ ಕಳೆದು ಬೆಳಗು ಕಂಡಿಹೆವು, ತವ
ಕಾರುಣ್ಯಕಡಲಿನಲಿ ಪರಿಶುದ್ಧಿ ಪಡೆದಿಹೆವು!

ಮನೆವರಿಗೆ ಬಂದೆಮ್ಮ ಹರಸಿಹೋಗಿಹ ಗುರುವೆ,
ನಿಮ್ಮಮರ ಸ್ಮೃತಿಯನು ಎಂದಾರೆ ಮರೆಯುವೆವೆ!
ಅಂದು ಬರುವುದಾಗದೆ ಉಳಿದೆಮ್ಮನಿನ್ನವರೆ
ಕರೆಯುತಿದೆ ನಿಮ್ಮ ಕರೆಯೋಲೆ; ಬರುವೆವಾದರೆ...
ಹೇಳುವಿರ, ನೀವಿರುವ ತಾಣವೆಲ್ಲಿದೆಯೆಂದು?
ನೀರ್ನೀಲಿಯಾಗಸವೆ? ನೆಲೆ ಸೇರುವೆನೆ ಬಂದು?

ನೋಂಪಿ

ಡಾ. ಜಿನದತ್ತ, ದೇಸಾಯಿ

ಮಾತೃಕೃಪೆ ಕರುವಿಟ್ಟ ಮೂರ್ತಿ ಮಧುಕರಿ ನಿನ್ನ
ನೇತ್ರಚಂದ್ರಿಕೆ ತಾಯ ನುಡಿಗಡಲ ಉಕ್ಕಿಸಿತು;
ಜಾನಪದ ಜೀವನದ ಹಾಡು ಹೂಗಳನಾಯ್ದು
ನಿಮ್ಮಮೃತಕರವೆತ್ತಿ ನಡಿದೇವಿಗರ್ಪಿಸಿತ್ತು.

ಅರವಿಂದ ಮಕರಂದ ತಂದ ಮಧುಕರ ನಿನ್ನ
ಭಕ್ತಿ ಜೇಂಗೊಡ ಕುಂಬಿ ಸುಧೆಯಾಗಿ ಸುರಿದಿತ್ತು;
ನಲ್ಲನಿಲ್ಲದೆ ಹೋದ ನಿರಹದುರಿ ನುಡಿಯೇರಿ
ನಲ್ಲನೆದೆಗುಡಿಯಲ್ಲಿ ಅರತಿಯನೆತ್ತಿತ್ತು.

ದಿವ್ಯದೀಪ್ತಿಯನಾಂತು ಶಾಂತಿಯಲಿ ನಿಹರಿಸಲು
ಮನನೋಂಪಿವಿಡಿದಿತ್ತು;
ಈ ದೀಪ ನಾದೀಪ ಸೇರಿಂದೋ ಮಧುರ
ಇಹನೋಂಪಿ ಸಂದಿತ್ತು.

ಎಸ್. ಎಸ್. ಸಿ. ಯಾತ್ರೆ

(ನಾಟ್ಯಛಟಾ)

ಬಿ. ಎಸ್. ಎಸ್. ಗದಗೆಳರ ಬಿ. ಎ. ಧಾರವಾಡ

●

[ರಾಮಸುಂದರನು ××× ಹಳ್ಳಿಯ ದೇಸಾಯರ ಕರಿಯ ಮಗ. ಎಸ್. ಎಸ್. ಸಿ.—ಹೈಸ್ಕೂಲಿನ ಕೊನೆಯ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲು ಭಗೀರಥ ಪ್ರಯತ್ನಪಟ್ಟರೂ, ಒಂದಿಲ್ಲೊಂದು ದೈವಿಕಘಟನೆ ಮುಂದಾಗಿ, ಅವನ ಪಾಸಿನ ಆಶೆಯನ್ನು ಎಂದಿನಂತೆ ಬಿಸಿಲುಗುದುರೆಯಾಗಿಸುತ್ತಿದ್ದುವು. ಇದೀಗ ಫೆಬ್ರುವರಿ ತಿಂಗಳ—ಬೇಸಿಗೆಯ—ಮುಂಜಾವು. ವೇಳೆ ಕೇವಲ ಒಂಬತ್ತಾಗಿದ್ದರೂ, ಸೂರ್ಯನ ಬಿಸಿಲು ಜುರುಬಾಗುವುದರಲ್ಲಿದೆ. ರಾಮನು ಮುಂಜಾವಿನ ತನ್ನ ವೈಭವಶಾಲಿ ಚಹಾಪಾರ್ಟಿ ಮುಗಿಸಿ, ತನ್ನ ಅಭ್ಯಾಸದ ಕೋಡಿಯಲ್ಲಿ ಹಾಯಾಗಿ ಕುಳಿತಿರುವನು. ಅವನ ವೇಷಭೂಷ ಅತ್ಯಾಧುನಿಕ ವೆನಿಸುವಷ್ಟು ಫ್ಯಾಶನೆಬಲ್ ಆಗಿರದಿದ್ದರೂ, ಹೊರಗೆ ಹೊರಡಲು ಮಾಡಿದ ಸಿದ್ಧತೆಗೆ ಹೆಸರಿಡುವಂತಿದ್ದಿಲ್ಲ. ಅವನು ಹಾಕಿದ್ದು ರೇಶಿಮೆಯ ಶರ್ಟು, ಬಿಳಿ ಪೈಜಾಮಾ. ತಲೆಯ ಮೇಲೆ ಟೊಪ್ಪಿಗೆ ಪಕ್ಕಾ. ಕಾಲಲ್ಲಿ ಮಿರಿಮಿರಿ ಮಿಂಚುವ ಪತಾಸಿ ಶೂಜ್. ಮನಸ್ಸಿನ ವಿಚಾರಗಳ ತಾಳಲಾಟದ ಪ್ರತೀಕ ವೆಂಬಂತೆ ಕ್ರಾಪಿನ ಕೂದಲು ಇಂದೇಕೊ ಅಸ್ತವ್ಯಸ್ತವಾಗಿವೆ. ರಾಮಸುಂದರನ ಕಣ್ಣು ನುಗ್ಗು, ನುಗ್ಗಿಗೆಯ ಛಾಟು ಚಲಚ್ಚಿತ್ರ ಪ್ರಪಂಚದ ನಟನಟರರಾದ ದೇವ ಆನಂದ, ದಿಲೀಪಕುಮಾರ, ಕರನ ದಿವಾಣರನ್ನು ನಾಚಿಸದಿದ್ದರೂ ಒಟ್ಟಿನಲ್ಲಿ ಪರವಾ ಇಲ್ಲ ಎನ್ನುವಂತಹ ಆಕರ್ಷಕ ಮೈಕಟ್ಟು, ತುಂಬಿದ ಆರೋಗ್ಯ. ತನ್ನ ಸಹಕಾರಿ (?) ರಾಮನಾಥನ ಆಗಮನ ನಿರೀಕ್ಷಿಸುತ್ತಿರುವನು. ನಿರಾಶೆಯ ನಿಟ್ಟುಸಿರಿಡುತ್ತ.....]

[ಆಕ್ಷೇಪದಿಂದ ಅಡಿಗೆಯ ಮನೆಯ ಕಡೆಗೆ ತಿರುಗಿ] ಛೆ! ನಿಂದರವ್ವಾ, ಎಷ್ಟು ಗಂಟಲ ಹರಿಯೊ ಸುದ್ದಿ ಇಲ್ಲದ್ರ ಒಂದ್ರ ಸವನ್ರ ಒದರತಿ! ಈ ನಮ್ಮ ಅವ್ವಗ ಯಾರಾದರೂ ಮನಿಗೆ ಬಂದರ ತೀರಿ ಹೋತು. ಇಂದ್ರನ ಪದವಿ ಸಿಕ್ಕ ಹಾಂಗ ಆಗತದ! ನಾವು-ಅವರು ಮನ್ಯಾಗ ಇರೋ ತನಕ—ಕಾಲುಕಸ. ತಾನೂ ಅತಿ ದುಡಿದು ದುಡಿದು ಹಣ್ಣು ಹಾಗಲಕಾಯಿ ಆಗತಾಳ. ನಮ್ದೂ ಪ್ರಾಣಾ ತಗೀತಾಳ. ಹಳೆಯ ಜನರ ಹಣೆಯಬರಹ ಇದು! ಆದರ, ನನಗ ಮಾತ್ರ ಹುಚ್ಚಾಪಟ್ಟ ಬಯ್ಯೂದಿಲ್ಲ. ಗುಣ! ಕುಸುಮಕ್ಕ ಬಂದಿದ್ದಾಳು ಪುಣೇದಿಂದ. ಆಕಿ ಏನು ಹೊರಗಿನಾಕೀನ? ಪುಣೆ ಏನು ಲಂಡನ್ನ್ರ ಪ್ಯಾರೀಸ್ರ?—ಅಸ್ಪಕ್ಕ ನಾವು ಪಲ್ಯಾದ ಪ್ಯಾಟಿ, ಕಿರಾಣಿ ಅಂಗಡಿ ತಿರುಗಬೇಕು. ಹೋಗಲಿಲ್ಲಾ ಅಂದರ ಧಡ್ಡಾ—ವಿನೇಕಿ ಅಲ್ಲಾ—ಅಂತ ಅಪ್ಪನ ತನಕಾ ತಕರಾರು ಹೋಗೋ ಸಂಭವ ಆದ. ಆ ಪ್ರಾಣಿ ಹ್ಯಾಂಗ ಅಂತೀರಿ? "ನಮ್ಮ ಫೇರಾಣೇದಾಗ ದೊಡ್ಡ ಪರೀಕ್ಷಾ ಯಾರೂ ಕೊಟ್ಟಿಲ್ಲ. ನಿಂದು ಏನು ಭರೋಸ" ಅಂತ ಮ್ಯಾಲಿಂದ ಮ್ಯಾಲೆ ಅಂದು, ಥಣ್ಣೀರು ಸುರುವಿದ ಹಾಂಗ ಮಾಡತಾನ ನನಗ. ನನ್ನ ಮಹತ್ವಾಕಾಂಕ್ಷೆ ಆಕಾಶ ಮುಟ್ಟೂ ಅಸ್ಟು ಇದ್ದರೂ, ಬುದ್ಧಿ ಮಾತ್ರ ಮೂಲಗಾಡೀ ಹಾಂಗ ಸಾವಕಾಶ ಹೊರಟಿದ ತೀರತು.....ಎತ್ತಲಾಗೊ! ಈಗ ನಾಲ್ಕು ವರ್ಷ ಆತು, ಸೋಕ್ಷ ಇಲ್ಲ, ನೋಕ್ಷ ಇಲ್ಲ. ಮನ್ಯಾಗ ಹೀಂಗ ಪ್ರೋತ್ಸಾಹ ಸಿಕ್ಕ ಮ್ಯಾಲೆ, ದೇವರ್ರ ನನ್ನ ಮರ್ಯಾದೀ ಉಳಿಸಿ ಮನಸ್ಯಾರ ಬಟ್ಯಾಗ ಇಡಬೇಕು. ಮನುಷ್ಯ ಯತ್ನ ಮೀರಿ ಹಳೆ ಮಾತು ಆತು.

[ಆನಂದಾತಿಶಯದಿಂದ] ಅಲಲಲಾಽ, ದೇವರು ಬಂದ್ಹಾಂಗ ಬಂದಿ ನೋಡು, ರಾಮನಾಥಾ! ನನ್ನ ತಲೀನೂ ಈ ಪರೀಕ್ಷಾದ ತಿರುಗಣೀ ಮಡುವಿನ್ಯಾಗ ಸಿಕ್ಕು, ಹರಗೋಲು ಇಲ್ಲದ ನಾವಿನ ಹಾಂಗ ಆಗಿತ್ತು. ನಿನ್ನ ನೋಡಿದ ಕೂಡಲೆ, ನಿಮ್ಮ ಮನ್ಯಾಗ, ನಾ ಅಭ್ಯಾಸಕ್ಕ ಹೊಂಟೆ ನಿನ್ನ ಸಂಗತಿ ಅಂತ ಎಲ್ಲಾರಿಗೂ ಗೊತ್ತು—ಅಳು ಮನೆ. ಸ್ಯಾರು ಮೊದಲು ಮಾಡಿ. ಆ ನೆವದಲೆ ಆದರೂ ಒಮ್ಮೊಮ್ಮೆ ಮನಿಯ ಕೆಲಸ ಕಡಿಮಿ ಆಗೋ ಸಂಭವ ಆದ. ಹೇಳಿ ಕೇಳಿ ರಾಮನಾಥಾ ನೀ ಮೊದಲನೆ ವರ್ಷದವ? ಮ್ಯಾಲೆ ಸ್ಕಾಲರ್! ಏನೋ ಪೂರ್ವಾರ್ಜಿತ ಪುಣ್ಯಾದಲೆ, ಗೆಳೆಯ ಆಗಿ ಸಿಕ್ಕೀದಿ. ನಮ್ಮಂಥವರನ್ನ ಪರೀಕ್ಷಾ ಸಾಗರದಿಂದ ದಾಟಸೋದು ದಯಾಮಯ ದೇವರಿಗೆ ಗೊತ್ತಿಲ್ಲ? ಎಂಥೆಂಥವರನ್ನ ಯಾರುಯಾರಿಗೋ ಗಂಟು ಹಾಕಿರತಾನ!

[ದೈನ್ಯದಿಂದ].....ಏನಂದಿ ರಾಮನಾಥಾ? ನಾ ಮೈಸೊಕ್ಕಿಲೆ ಎಸ್. ಎಸ್. ಸಿ. ನಾಪಾಸು ಆದೆನ್ನ? ಹೋದ ವರ್ಷಾ ಆಚೆ ವರ್ಷಾ ನಮಗ ಕಚ್ಚಾ ಇದ್ದ ವಿಷಯನ್ನ ವರ್ಷಾ ವರ್ಷಾ ಕಠಿಣ ಬಂದರ ಯಾರ ಕೈಯಾಗಿನ ಮಾತು? ನೀನs ತಪ್ಪು ತಗದರ ನಾ ಬದು, ಕೋದು ಹ್ಯಾಂಗ? ಅತು ಬೇಲೀನ್ನ ಹೊಲಾ ಮೇಯ್ದ ಹಾಂಗ ಆಗತ್ತದ! ಅಲ್ಲೊ, ನನ್ನ ಇಂಗ್ಲಿಶ್ ದುಬಾರೀ ಅಂತ ನಿನಗ ಗೊತ್ತಿಲ್ಲ? ಅದನ್ನು ದಾಟೋನರ ಸಲುವಾಗಿ, ಎಲ್ಲಾ ಮಾಸ್ತರರ ಮ್ಯಾಲೆ ಭಾಪು ಬ್ಯಾಡ್ತ? ಒಂದು ವ್ಯಾಳ್ಯಾ ಮೂರು ತಿಂಗಳ-ಆರು ತಿಂಗಳ ಪರೀಕ್ಷಾದಾಗ ನಾಪಾಸಾದೆ ಅನ್ನು; ಆಗ ನನ್ನ ಹೊರಗಿನ activities ನೋಡಿ ದಯಾ ತೋರಿಸತಾರ—'ಏ ಹುಡುಗ ಉತ್ಸಾಹೀರಿ, ಧಡ್ಡ ಆದರ ಏನಾತು!' ಅಂತಾರ! 'ನಮ್ಮ ಅಪ್ಪ ಅಂತೂ ರೊಕ್ಕಕ್ಕ ದರಕಾರ ಮಾಡೋವಾ ಅಲ್ಲಾ. ಹಾಂಗ ಆಂತ ನಾ ವರ್ಷಾ ವರ್ಷಾ ಲಾಗಾ ಹೊಡದರ ಏನ ಗತಿ? [ಅಚ್ಚರಿಯಿಂದ] ರಾಮನಾಥಾ, ನೀನೂ ಭಾಳ ಬೆರ್ಕಿ ನೋಡು. ಅಲ್ಲೊ, ಮೊನಲ 'ಗ್ಯಾದರಿಂಗಿನ ಸೆಕ್ರೆಟರಿ ಆಗು, ನಾಟಕದಾಗ ಹಿರಾಯನ್ ಪಾರ್ಟು ಮಾಡು' ಅಂತ ನನ್ನ ಹುರಿದುಂಬಿಸಿ, ಈಗ ನಾಪಾಸಾದೆ ಅಂತ ಛೇಡಸ್ತೀಯಾ? ಇನಾಮು ಸಿಕ್ಕರ ನನಗೇನರs ಕೊಡತೀಯಾ ಅದರಾಗ—ಅಂತೀಯಾ? ಛೆ! ನಾ ಅಷ್ಟು ಕೃತಘ್ನ ಅಲ್ಲೋ ರಾಮು! ಅಲ್ಲಾ, ನಾ ಮೊದಲಿನ ಸಾರಿ ಡಿಬೇಟಿನ್ಯಾಗ ಭಾಗ ವಹಿಸೊ ದಿನ, ನಿನ್ನ ಮುದತ ಎಷ್ಟು, ಏನು ತಾನು! ಮತ್ತ ನಾ ಆದರೂ ಅನ್ನನ ಕಡೆಯಿಂದ ಪುಸ್ತಕದ ನೆವಾ ಮಾಡಿ ಇಸಗೊಂಡ ರೊಕ್ಕಾ ಉಳಿಸಿಗೊಂಡೆನ? ಹೈಕ್ಲಾಸ್ ಪಾರ್ಟಿ ಹೊಡಿಸಿದೆ ನಿನಗ! ನೀ ಒಲ್ಲೆ ಅಂತ ಗಂಗನ ಗಲಗೊತ್ತರೂ, ಕೇಳದೆ ಕುಸ್ತಿ ಹಿಡಿದು, ಅಂಗಡಿಯೊಳಗ ಕರಕೊಂಡು ಹೋದೆ ಏನು ಮಾಡೋದು? ಆಗೆಲ್ಲಾ ನನಗ ಮೆಡಲ್ ಸಿಕ್ಕದ್ದು ಈಗ ನೆನಸಿಗೊಂಡರ ಮೈ ಉಬ್ಬತ್ತದ. ಅಂದು ನಾಟಕದಾಗ ನನ್ನ ಹಾಡಿಗೆ ವನ್ಸ್‌ಮೋರ ಬಿದ್ದದ್ದು ಕೇಳಿ, ಸುಡುಗಾಡು ಕಲಿಯೋದರಾಗ ಏನದ, ಕನಿಷ್ಟ ಸಿನೇಮಾದಾಗ ಹೋಗಬೇಕು—ಅಂತ ಅಂದುಕೊಂಡಿದ್ದೆ. ಆ ವ್ಯಾಳೆ ನನ್ನ ಅಣ್ಣಾ ಎಲ್ಲೆ ರೌದ್ರಾವತಾರ ತಾಳತಾನೋ ಅಂತ ಹೆದರಿಕೆ ಬಂತು.....

[ಔದಾಸೀನ್ಯದಿಂದ] ಒಲ್ಲೆ ಮಹಾರಾಯಾ, ಈ ಸಲ್ಲಣ್ಣಾ, ತಾ ಬಿ. ಎಸ್‌ಸಿ. ಆಗೋದರೊಳಗ, ನನಗ ಊರೆಲ್ಲಾ ಪಿರಿ ಪಿರಿ ತಿರುಗಿಸಿ ಮೈ ನುಗ್ಗು ನುಗ್ಗು ಮಾಡಿಸಿಬಿಡತಾನ. ಆಗಳೇ ಕಿರಾಣೀ ಸಾಮಾನು ತೊಗೊಂಡು ಬಾ; ಶಾ ಕಾಲೇಜಕ್ಕ ಹೋಗತೇನಿ ಎಕ್ಸಪೆರಿಮೆಂಟ್ ಅದ್ತ ಅಂದಾ. ಈಗ ಮೈಲುದ್ದ ನಡೆಯೂ ವಾಶಿಂಗ್ ಕಂಪನಿಗೆ ಹೋಗಿ ತೆಕ್ಕಿಗಟ್ಟಿ ಅರಿವಿ ಕೊಟ್ಟು ಬಾ ಅಂತಾನ. ಬರತ್ತ ಹಿಂದಿನ ಅರಿವಿ, ಕಾಯಿಸಲ್ಲಿ ಹೊತುಗೊಂಡು ಬರೋದು! ಬ್ಯಾಸತ್ತು ಹೋದೆ ಈ ಮನ್ಯೀ ಕೆಲಸವಾಗ! ಸಾಲಿಯ ಕೆಲಸ ಹಿಂದ ಬಿದ್ದು ಮನ್ಯೀ ತೊಗಿಸೋದು ಹೆಚ್ಚೆಂದು ಆಗೇದ. ಕಡೀ ಹುಟ್ಟಿದವಾ ಅದದ್ದs ಪಾಪ! 'ಶಾಮಾ. ಬರೇ ಅಭ್ಯಾಸಕ್ಕ ನಿಲ್ಲಸಾ' ಅಂತ ಒಬ್ಬರೂ ಅನ್ನೋವರಿಲ್ಲ ಈ ಮನ್ಯಾಗ! ಇದೇನು ಕಾಲಗುಣಾನೋ, ನೆಲದ ಗುಣಾನೊ, ನನ್ನ ತಲೀ ಗುಣಾನೊ ತಿಳಿಯುದ್ದಾಂಗ ಆಗೇದ! ಒಮ್ಮೊಮ್ಮೆ ಎಕ್ಸೆಂಶನದ ಸಮೀಪಕ್ಕ ತಂದುಬಿಟ್ಟ ಕನ್ನಡ ಟಿಕ್ಸ್‌ಬಸ್ ಮಾತಿನ್ಯಾಗ ಕೈ ಹಿಡೀತ್ತದ ನನಗ!

....ಮಸ್ತ ನೀ ಎಂದ ಮಾಡಿದ್ದಿ ಬಿಡಲೆ ಮನೀ ಕೆಲಸಾ, ಅಂತೀ ಏನು ರಾಮನಾಥಾ? ಹಾಂಗಲ್ಲಪಾ, ಹತ್ತು ಕೆಲಸದಾಗ ದಿನದಾಗ ಒಂದು ಮಾಡಿದರೂ ಜನಾಬ್ಬಾರೀ ಸುಳ್ಳೇನು ಮನೀದು? ಏ ಇನತ್ತು 'ಕ್ಯಾಫೆ ಈ ಲಾಯಿಟ್' ದಾಗ ನಿನಗ ಭರ್ಜರಿ ಚಪಾ ಅದ. ಪುಣೆದಿಂದ ಬಂದಾಕಿ ನಮ್ಮ ಕುಸುಮಕ್ಕನ ಪ್ಯಾಟಿಯ ಎಲ್ಲಾ ಕೆಲಸಾ ಮಾಡಿಕೊಟ್ಟಿ. ಖುಷೀಲೇ ಝುಣ್ಣಂತ ಒಂದು ರೂಪಾಯಿ ತೂರಿದಳು ನನಗ. ರಾಮನಾಥಾ, ನೀ ಅಂತಃ ನನ್ನಂಥಾ ಧಡ್ಡನ ಹಚ್ಚಿಕೊಂಡು ಸಂಸ್ಕೃತ, ಆಲ್ಜಿಬ್ರಾ ಹೇಳಿಕೊಡತಿ. ಇಲ್ಲದಿದ್ದರ ಹೋದ chance ನೋಡಿದ್ಯೋ ಇಲ್ಲೊ! ಸಂಸ್ಕೃತ ಟೆಕ್ಸ್‌ನ ಅಷ್ಟರ ಪೂರ್ತಿ ಬಿಡಿಸಿ, ಜನರಲ್ ಪ್ಯಾಸೇಜ್ ನೋಡಿ ಎದೀ ಓಡಿಕೊಂಡು ಬಿಟ್ಟದ್ದೆ. ಕಡೀಕ ಆ ಇಡೀ ಸೆಕ್ಯ್ಯನ್ನು ಬ್ಲ್ಯಾಂಕ್ ಕೊಡಬಾರದು ಅಂತ, ಕೊಟ್ಟ ಪ್ಯಾಸೇಜ್ ಬರೆದು ತಗದೆ ಮತ್ತೊಮ್ಮೆ! 'ತನ್ಯಾ, ಸಂಸ್ಕೃತ್ ಹ್ಯಾಂಗ ಬರದೀಯಪಾ,' ಅಂತ ಮನ್ಯಾಗ ಅಪ್ಪ ಕೇಳಿದಾಗ, ನಿನ್ನ ಕಡಿಯಿಂದ ಕೇಳಿ ಇಟ್ಟುಕೊಂಡಿದ್ದು ಎಲ್ಲಾ ಸರ ಸರ ಹೇಳಿದೆ. ಹುರುಪು ಆದಾ. ಮಗನ ಬುದ್ಧಿಪಂತಿಕೆ ರಿಯಲ್ಲ್ ಆದ ಮ್ಯಾಲೆ ತಿಳೀತು! ಪುಣ್ಯಕ್ಕ ಆ ವರ್ಷ ಎರಡು ವಿಷಯದಾಗ ಎಕ್ಸೆಂಶನ್ ಸಿಕ್ಕವು ಅಂತ ಅಪ್ಪ ಸಿಟ್ಟಿಗೇಳಲಿಲ್ಲ. ಇಂದಿಲ್ಲ ನಾಳೆ ತಮ್ಮ ಹುಡುಗ ಶಾಮಸುಂದರ ಪಾಸು ಆಪಾನು ಅಂತ ಖಾಯಾಸ ಕಟ್ಟತಾನ. ನಾವೂ ಅದನ್ನ ಸುಳ್ಳು ಮಾಡಬಾರದು!

ಏನದು? ಇಂಗ್ಲಿಷ್ ಪೇಪರಿನ ಸಲುವಾಗಿ ನಾ ಏನು ಮಾಡಿಯೂದಿಲ್ಲ ಅಂತೀಯಾ? ಅಲೆ! ನೀನೂ ನನ್ನ ಮ್ಯಾಲೆ ಸಂಶಯ ತೊಗೊಂಡರ ಹ್ಯಾಂಗ? ಅಲ್ಲೋ, ಆಟೊಬಾಯೋಗ್ರಾಫಿ ಬಾಯಿಪಾಠ ಮಾಡಿ ಇಟ್ಟುಕೊಂಡಿದ್ದೆ. ಇನ್ನು ಏನು ತಯಾರಿ ಬೇಕು?

(೧೯೭ನೆಯ ಪುಟ ನೋಡಿರಿ)

೫೫ ವರ್ಷಗಳಿಂದ ಅನುಭವಪಟ್ಟ
ಕರ್ೀ ಮತ್ತು ಕಂಪನಿಯ
ಜ್ವರಗಡ್ಡೆಯ ಗುಳಿಗೆಗಳು
ಬಾಟ್ಲಿಗೆ ೧-೪-೦
ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.
ವಿಳಾಸ:—
ಗಣೇಶ ರಾಮಚಂದ್ರ ಕರ್ೀ ಮತ್ತು ಕಂಪನಿ
ಗಿರಗಾಂವ, ಮುಂಬಯಿ. ೪

ಪಂಚವಾರ್ಷಿಕ ಯೋಜನೆ

ಡಿ. ವೀ. ಸಿ. ಹಿತ್ತಲಮನಿ, ಬಿ. ಎಸ್‌ಸಿ. (ಅಗ್ರಿ) ಆನರ್ಸ್, ಧಾರವಾಡ

ಲೇಖಾಂಕ ೫

ರಾಷ್ಟ್ರದ ಜನಜೀವನದಲ್ಲಿ ಮಾನವನ ದೇಹದ ಆರೋಗ್ಯ, ಮನಸ್ಸಿನ ವಿಕಾಸವಾಗುವಂತಹ ಶಿಕ್ಷಣ ಇವೆರಡೂ ತುಂಬ ಮುಖ್ಯವಾದುವುಗಳು ಪಂಚವಾರ್ಷಿಕ ಯೋಜನೆಯಲ್ಲಿ ಇವೆರಡಕ್ಕೂ ಸಾಕಷ್ಟು ಲಕ್ಷ್ಯವನ್ನು ಪೂರೈಸಲಾಗಿದೆ.

ಆರೋಗ್ಯ

ಭಾರತ ದೇಶದಲ್ಲಿ ಪಯೋಮಾನವು, ವಿಶ್ವದ ಇತರ ದೇಶಿಯರೊಂದಿಗೆ ತುಲನೆಮಾಡಿದಲ್ಲಿ ತೀರ ಕಡಿಮೆಯಿದ್ದುದು ಕಂಡು ಬರುತ್ತದೆ. ಸರಾಸರಿ ಮೂವತ್ತು ವರುಷ ಒಂಬತ್ತು ತಿಂಗಳು ಭಾರತೀಯರ ಪಯೋಮಾನ (೧೯೪೧ರ ಜನಗಣತಿಯ ಮೇಲಿಂದ). ಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿ ಮೃತರಾಗುತ್ತಾರೆ. ಬಾಣಂತಿಯರೂ ಸಾಯುತ್ತಾರೆ. ರೋಗ-ರುಜಿನಗಳಿಗೆ ತುತ್ತಾಗಿ ಸಾಯುವವರೂ ಅನೇಕರು; ತುಂಬುಜೀವನ ಪಡೆದು, ಬಾಳನ್ನು ಪೂರ್ತಿಯಾಗಿ ಅನುಭವಿಸಿ, ಇಳಿವಯಸ್ಸಿನಲ್ಲಿ ಸಾಯುವ ಸೌಭಾಗ್ಯ ಭಾರತೀಯರಲ್ಲಿ ಅನೇಕರಿಗಿಲ್ಲವೇ ಇಲ್ಲ. ಅನಾರೋಗ್ಯಕ್ಕೆ ಅನೇಕ ಕಾರಣಗಳು: ವಾಸಸ್ಥಾನಕ್ಕೆ ತಕ್ಕ ಸಾಕಷ್ಟು ಮನೆ ಮಠಗಳಿಲ್ಲ. ಕುಡಿಯಲಿಕ್ಕೆ ಸ್ವಚ್ಛ ನೀರಿನ ಸೌಕರ್ಯವಿಲ್ಲ; ಪೋಷಕ ಆಹಾರದ ಅಭಾವವಂತೂ ವರ್ಣಿಸಲಸದಳ! ಮಾನವ ಮಲವಿಸರ್ಜನೆಯ ಕಾರ್ಯವೂ ಅಪರಿಪೂರ್ಣ. ಔಷಧೋಪಚಾರದ ಮಾತಂತೂ ದೂರ; ಸಕಾಲದಲ್ಲಿ, ಎಲ್ಲರ ಆಳವಿಗೆ ನಿಲುಕುವ ವಸ್ತುವದಲ್ಲ. ದೇಶ ಆರ್ಥಿಕ ಪರಿಸ್ಥಿತಿಯಲ್ಲಿ ದರಿದ್ರವಾಗಿರುವಂತೆ, ನುರಿತು ತರಬೇತಿ ಹೊಂದಿದ ಜನತೆಯ ಅಭಾವದಿಂದ ಬಳಲುತ್ತಿರುತ್ತದೆ. ಸಕಾಲದಲ್ಲಿ ಸರ್ವರಿಗೆ ಔಷಧೋಪಚಾರ ದೊರೆಯುತ್ತಿರದುದು ಹೀನಾಯ ಸ್ಥಿತಿಗೆ ಮುಖ್ಯಕಾರಣವಾಗಿದೆ. ಈ ದಾರುಣ ಪರಿಸ್ಥಿತಿಯನ್ನರಿತು ಪಂಚವಾರ್ಷಿಕ ಯೋಜನೆಯಲ್ಲಿ ಆರೋಗ್ಯ ಸಂಪಾದನೆಗೆ ಕೆಲವೊಂದು ಅತ್ಯಾತುರವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ.

೧. ಸ್ವಚ್ಛ ನೀರಿನ ಪೂರಯಿಕೆ ಮತ್ತು ಆರೋಗ್ಯ ರಕ್ಷಣೆ
೨. ಚಳಿಜ್ವರ ನಿಯಂತ್ರಣ
೩. ಹಳ್ಳಿಗರ ಆರೋಗ್ಯ ರಕ್ಷಣೆ
೪. ಮಾತೆ ಮತ್ತು ಮಕ್ಕಳ ಆರೋಗ್ಯಪಾಲನೆ
೫. ಆರೋಗ್ಯ ವಿಷಯಕ ಶಿಕ್ಷಣ ಮತ್ತು ತರಬೇತಿ
೬. ಔಷಧ ಮತ್ತು ಸಾಮಗ್ರಿಗಳ ಸ್ವಾವಲಂಬನ
೭. ಕುಟುಂಬಯೋಜನೆ ಮತ್ತು ಜನಸಂಖ್ಯೆಯ ನಿಯಂತ್ರಣ

ಈ ಕಾರ್ಯಗಳಿಗೆ ೯೯.೫೫ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗುವುದು. ಅದರಲ್ಲಿ ಕೇಂದ್ರದ ಪಾಲು ೧೭.೮೭ ಕೋಟಿ ರೂಪಾಯಿಗಳಷ್ಟಿರುವುದು. ಒಟ್ಟು ವೆಚ್ಚದಲ್ಲಿ ನೂರರಲ್ಲಿ ೫೦ಕ್ಕಿಂತ ಹೆಚ್ಚು ಹಣವನ್ನು ಆಸ್ಪತ್ರೆ, ಚಿಕಿತ್ಸಾಲಯಗಳಿಗಾಗಿಯೂ ಸುಮಾರು ೪೦ರಷ್ಟು ಹಣವನ್ನು ಶಿಕ್ಷಣ, ತರಬೇತಿಗಾಗಿಯೂ ವೆಚ್ಚಮಾಡಲಾಗುವುದು. ಡಾಕ್ಟರಿಂದ ಮೊದಲು ಮಾಡಿಕೊಂಡು ಕಂಪೌಂಡರರು, ದಾಯಿಗಳು ಸೂಲಗಿತ್ತಿಯರು, ವೈದ್ಯ-ಹಕೀಮರು ಬಹು ಸಂಖ್ಯೆಯಲ್ಲಿ-ಪಂಚವಾರ್ಷಿಕ ಯೋಜನೆಯ ಕೊನೆಯಲ್ಲಿ, ಹೆಚ್ಚಾಗಿ ಹಳ್ಳಿ, ಪಟ್ಟಣಗಳಲ್ಲಿ, ಜನತೆಯ ಆರೋಗ್ಯ ರಕ್ಷಕರಾಗಿ ಕಾರ್ಯ ಮಾಡುವುದಲ್ಲದೆ ಆಸ್ಪತ್ರೆ, ಚಿಕಿತ್ಸಾಲಯಗಳೂ ಬೆಳೆದು ಬಹುಜನರಿಗೆ ಚಿಕಿತ್ಸೆಹೊಂದಲು ಅನುವು-ಅವಕಾಶ ದೊರೆಯುತ್ತದೆ.

ಭಾರತದಲ್ಲಿ ಸದ್ಯಕ್ಕೆ ಕೇವಲ ನೂರರಲ್ಲಿ ಆರರಷ್ಟು ಪಟ್ಟಣಗಳಿಗೆ ಮಾತ್ರ ಸಂರಕ್ಷಿತ ನೀರಿನ ಪೂರೈಕೆಯ ವ್ಯವಸ್ಥೆಯಿದೆ. ಇದು ಬರಿಯ ನೂರರಲ್ಲಿ ೪೮ರಷ್ಟು ಜನರಿಗೆ ಮಾತ್ರ ಸಾಲುವಷ್ಟಿದೆ. ಒಂದು ಲಕ್ಷ ಜನವಸತಿಗಿಂತ ಹೆಚ್ಚಿರುವ ೪೮ ಪಟ್ಟಣಗಳಲ್ಲಿ ಕೇವಲ ೨೩ ಪಟ್ಟಣಗಳಲ್ಲಿ ನೀರಿನ ನೆರವಿನಿಂದ ಮಲಸಾಗಿಸುವ ವ್ಯವಸ್ಥೆಯಿದೆ. ನೀರಿನ ಸೌಕರ್ಯಕ್ಕಾಗಿ ೨೩.೪೯ ಕೋಟಿ ರೂಪಾಯಿಗಳನ್ನು ವೆಚ್ಚಮಾಡಲಾಗುವುದು. ಇದರಲ್ಲಿ ಒಳಚರಂಡಿಯ ಯೋಜನೆಯೂ ಕೂಡಿದೆ. ೧೨.೧೨ ಕೋಟಿ ರೂಪಾಯಿಗಳನ್ನು ಪಟ್ಟಣಗಳಲ್ಲಿ, ೧೧.೩೭ ಕೋಟ್ಯ ರೂಪಾಯಿಗಳನ್ನು ಹಳ್ಳಿಗಳಲ್ಲಿ ವೆಚ್ಚ ಮಾಡಲಾಗುವುದು. ಅಲ್ಲದೆ ಸ್ಥಾನಿಕ ಸಂಸ್ಥೆಗಳಿಗೆ ಈ ಕಾರ್ಯ ಕೈಕೊಳ್ಳಲಿಕ್ಕೆ ೧೦ ಕೋಟಿ ರೂಪಾಯಿಗಳನ್ನು ಕೇಂದ್ರ ಸರಕಾರವು ಸಾಲ ಕೊಡುವ ವ್ಯವಸ್ಥೆಯನ್ನೂ ಮಾಡಿದೆ.

ಚಳಿಜ್ವರದ ಹಾವಳಿ ಹೇಳಿತೀರದು.; ಪ್ರತಿ ವರುಷ ೧೦ಕೋಟಿ ಜನರು ಚಳಿಜ್ವರದಿಂದ ಪೀಡಿತರಾಗುತ್ತಾರಲ್ಲದೆ, ೧೦ ಲಕ್ಷದಷ್ಟು

ಜನರು ಈ ರೋಗದಿಂದ ಸಾಯುತ್ತಾರೆ. ಈ ರೋಗವನ್ನು ನಿಯಂತ್ರಿಸುವುದು ತೀವ್ರ ಅವಶ್ಯಕ ಸುಧಾರಣೆಗಳಲ್ಲೊಂದಾಗಿದೆ. ಗಂಭೀರ ಸಾಮಾಜಿಕ ಸಮಸ್ಯೆಗಳನ್ನು ಸೃಷ್ಟಿಸುವ ಕೀಟಕ-ಮಾರಕಗಳನ್ನು ನಿಯಂತ್ರಿಸುವುದೂ, ಔಷಧೋಪಚಾರ ಪಡೆಯಿಸುವುದೂ ಮೊದಲಾದುವು ಗಳನ್ನೊಳಗೊಂಡ ಹೊಸ ಕಾರ್ಯಾಚರಣೆಯ ಪ್ರಯತ್ನಗಳು ೨೦ ಕೋಟಿ ಜನತೆಯನ್ನು ಸೇವಿಸಬಹುದಾಗಿದೆ. ಈ ಕಾರ್ಯಕ್ರಮಕ್ಕಾಗಿ ೧೫ ಕೋಟಿ ರೂಪಾಯಿಗಳನ್ನು ವೆಚ್ಚಮಾಡಲಾಗುತ್ತದೆ. ವಿಶ್ವ ಆರೋಗ್ಯಸಂಸ್ಥೆಯೂ ಈ ಕೆಲಸದಲ್ಲಿ ನೆರವು ನೀಡಲಿದೆ. ತಾಂತ್ರಿಕ ಸಹಕಾರ ಒಪ್ಪಂದವೊಂದರ ಕೆಲವೊಂದು ಹಣವೂ ಈ ಕಾರ್ಯಕ್ಕೆ ದೊರೆಯುವುದು.

ಭಾರತದ ಭಯಂಕರವಾದ ಇನ್ನೊಂದು ರೋಗವೆಂದರೆ ಕ್ಷಯ. ವರುಷ-ವರುಷ ೨೫ ಲಕ್ಷ ಜನತೆಯನ್ನು ಈ ರೋಗ ಬಾಧಿಸಿ ೫ ಲಕ್ಷ ಜನರನ್ನು ಆಹುತಿ ತೆಗೆದುಕೊಳ್ಳುತ್ತದೆ. ಬಿ. ಸಿ. ಜಿ. ಹುಟ್ಟುಹಾಕುವುದು, ಚಿಕಿತ್ಸಾಲಯಗಳು, ಶಿಕ್ಷಣ ಮತ್ತು ಪ್ರಾತ್ಯಕ್ಷಿಕೆ-ಕೇಂದ್ರ, ರೋಗಿಗಳ ಉಪಚಾರಕ್ಕಾಗಿ ವ್ಯವಸ್ಥೆ, ಅನಂತರ ಆರೈಕೆ ಇವೇ ಮೊದಲಾದವುಗಳನ್ನು ಕೈಕೊಳ್ಳಲಾಗುವುದು. ೪.೩೧ ಕೋಟಿ ರೂಪಾಯಿಗಳನ್ನು ಈ ಕಾರ್ಯಗಳಿಗಾಗಿ ವೆಚ್ಚಮಾಡಲಾಗುವುದು.

ಶರೀರಪೋಷಣೆಗೆ ತಕ್ಕ ಆಹಾರದ ಕೊರತೆ ಅತಿಯಾಗಿದೆ. ಸಾಕಷ್ಟು ಆಹಾರ ದೊರೆಯದಿದ್ದಾಗ, ಪೋಷಕ, ರಕ್ಷಣಾಹಾರ ದೊರೆಯುವ ಮಾತಂತೂ ಅತಿದೂರ. ಜನತೆಯ ದಾರಿದ್ರ್ಯವೂ ಈ ಮೂಲಾರ್ಥದಲ್ಲಿ ಬಲವಾದ ಅಡ್ಡಿಯಾಗಿದೆ. ತಾಯಂದಿರನ್ನೂ ಮಕ್ಕಳನ್ನೂ ಯೋಗ್ಯ ಆಹಾರವಿತ್ತು ರಕ್ಷಿಸುವುದು ಸಾರ್ವಜನಿಕ ಆರೋಗ್ಯ ಖಾತೆಯ ಕರ್ತವ್ಯವಾಗಿದೆ. ಜೀವಸತ್ತ್ವಗಳನ್ನು ಹೆಚ್ಚಿಬ್ಬು ಕಡಿಮೆ ಬೆಲೆಗೆ ದೊರೆಯುವಂತೆ ಸಿದ್ಧಪಡಿಸುವ ಸಂಶೋಧನೆ ಭರದಿಂದ ನಡೆಯುತ್ತದೆ. ತಾಯಿ-ಮಕ್ಕಳ ಪೋಷಣೆ ಅವಶ್ಯವಾಗಿದೆ. ಹೆರಿಗೆಯ ವ್ಯವಸ್ಥೆ ಹೆಚ್ಚಬೇಕು. ಪಟ್ಟಣಗಳಲ್ಲಿ ೧೦,೦೦೦ ಜನಸಂಖ್ಯೆಗೆ ಕನಿಷ್ಠ ಒಬ್ಬ ಆರೋಗ್ಯಾಧಿಕಾರಿ, ಇಬ್ಬರು ಸೂಲಗಿತ್ತಿಯರು, ಹಳ್ಳಿಗಳಲ್ಲಿ ೧೫,೦೦೦ ದಿಂದ ೧೫,೦೦೦ ಜನಸಂಖ್ಯೆಗೆ ಇಬ್ಬರು ಸ್ತ್ರೀ-ಡಾಕ್ಟರರು, ಇಬ್ಬರು ಆರೋಗ್ಯಾಧಿಕಾರಿಗಳೂ ಬೇಕು. ಈ ಕಾರ್ಯಕ್ರಮಕ್ಕಾಗಿ ೧೫ ಅಲಾಳಲ ಕೋಟಿ ರೂಪಾಯಿಗಳನ್ನು ವೆಚ್ಚಮಾಡಲಾಗುವುದು. ಆರೋಗ್ಯದ ಬಗೆಗೆ ಜನತೆಗೆ ಸರಿಯಾದ ಕಲ್ಪನೆ ಮಾಡಿಕೊಡಲು, ಚಲಚ್ಚಿತ್ರ, ಬಾನುಲಿ ಭಾಷಣಗಳ ಉಪಯೋಗ ಮಾಡಿಕೊಳ್ಳುವುದು ಅವಶ್ಯವಿದೆ. ಪತ್ರಿಕೆಗಳಲ್ಲಿ ಪ್ರಕಟಣೆ ಕೊಡಬೇಕು. ಚಿಕ್ಕಚಿಕ್ಕ ಹಸ್ತಪುಸ್ತಕ ಹೊರಡಿಸಬೇಕು. ಭಿತ್ತಿಪಟ, ಕರಪತ್ರಗಳನ್ನು ಹಚ್ಚಿಸಬೇಕು. ಶಾಲೆ, ಪ್ರದರ್ಶನ, ವಾಚನಾಲಯ ಮೊದಲಾದ ಸಾರ್ವಜನಿಕ ಸ್ಥಳಗಳಲ್ಲಿ ಇಂಥ ಪ್ರಕಟಣೆಗಳನ್ನು ಎಲ್ಲರಿಗೂ ಎದ್ದು ಕಾಣುವ ಸ್ಥಳಗಳಲ್ಲಿ ಇಡಬೇಕು. ಜನತೆಗೂ ತಿಳಿಸಿ ಹೇಳುವ ಏರ್ಪಾಡಿರಬೇಕು. ಈ ಕಾರ್ಯಕ್ರಮಕ್ಕಾಗಿ ೧೫ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಲಾಗುವುದು. ವೈದ್ಯಕೀಯ ಶಿಕ್ಷಣದ ಬಗ್ಗೆ ಅನುಕೂಲತೆ ಏರ್ಪಡಿಸುವುದೂ, ಸಂಶೋಧನೆ ನಡೆಯಿಸುವುದೂ ತುಂಬಾ ಮಹತ್ತ್ವದ ವಿಷಯಗಳಾಗಿವೆ. ಹೆಚ್ಚಿನ ಸಂಖ್ಯೆಗಳಲ್ಲಿ ಶಿಕ್ಷಣಮಂದಿರ, ಪ್ರಯೋಗಶಾಲೆಗಳನ್ನು ತೆರೆಯಬೇಕು. ಸದ್ಯ ವರುಷಕ್ಕೆ ೧೬೦೦ ಪದವೀಧರ ಡಾಕ್ಟರುಗಳನ್ನು ತಯಾರಿಸುತ್ತಿರುವ ಶಿಕ್ಷಣಮಂದಿರಗಳು ಯೋಜನೆಯ ಕೊನೆಗೆ ೪,೦೦೦ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಅವಕಾಶ ಮಾಡಿ ಕೊಡಲಿರುವುವು. ದೇಶೀಯ ಔಷಧದ ಮಹತ್ತ್ವವನ್ನೂ ಆರಿತು, ಯೋಜನೆಯಲ್ಲಿ ೩೭.೫ ಲಕ್ಷ ರೂಪಾಯಿ ಹಣವನ್ನು ಈ ಕೆಲಸಕ್ಕೆ ತೆಗೆದಿಡಲಾಗಿದೆ. ದೇಶೀಯ ಔಷಧಗಳಲ್ಲಿ ಸಂಶೋಧನೆ ಮುಂದುವರೆಯಿಸಲು ಕೇಂದ್ರ ಸರಕಾರವು ಜಾಮನಗರದಲ್ಲಿ ಒಂದು ಕೇಂದ್ರ ಸಂಶೋಧನಾಲಯ ತೆರೆಯಲಿದೆ. ಆಯುರ್ವೇದ ಶಿಕ್ಷಣ, ಔಷಧದ ಬಳಕೆ, ಇವುಗಳಿಗೂ ಸಾಕಷ್ಟು ಪ್ರೋತ್ಸಾಹನೀಯಲಾಗುವುದು. ದೇಶೀಯ ವೈದ್ಯರ ತರಬೇತಿಗಾಗಿ ೪೫.೨೩ ಲಕ್ಷ ರೂಪಾಯಿಗಳನ್ನೂ, ದೇಶೀ ಔಷಧ ಕೊಡುವ ದವಾಖಾನೆಗಳಿಗಾಗಿ ೧.೦೬ ಕೋಟಿ ರೂಪಾಯಿಗಳನ್ನೂ ವೆಚ್ಚಮಾಡಲಾಗುವುದು. ಭಸ್ಮ ಮತ್ತು ಮಾತ್ರೆಗಳ ಔಷಧದ ಬಳಕೆಗೂ ನೆರವು ನೀಡಲಾಗುವುದು. ಲಖನೌದಲ್ಲಿ ಈ ಬಗ್ಗೆ ಒಂದು ಸಂಶೋಧನ ಕೇಂದ್ರವನ್ನು ತೆರೆಯಲಾಗುವುದು.

ಅನೇಕ ಔಷಧಸಾಮಗ್ರಿಗಳಲ್ಲಿ ಭಾರತವು ಸ್ವಾವಲಂಬನ ಪಡೆದಿದ್ದರೂ, ಇನ್ನೂ ಅನೇಕ ಔಷಧ ಮತ್ತು ಕಚ್ಚಾಮಾಲನ್ನು ಹೊರಗಿನಿಂದ ತರಿಸುತ್ತಿದೆ. ಆದಕ್ಕಾಗಿ ವರುಷವರುಷ ೧೦ ಕೋಟಿ ರೂಪಾಯಿಗಳ ಅವಕಾಶ ಯೋಜನೆಯಲ್ಲಿದೆ. ವಿಶ್ವಆರೋಗ್ಯಸಂಸ್ಥೆಯಿಂದ ಔಷಧಗಳ ತಯಾರಿಕೆಯಲ್ಲಿ ಭಾರತವು ನೆರವು ಪಡೆಯಲಿದೆ. ಪೆನಸೀಲಿಯನ್, ಡಿ. ಡಿ. ಟಿ. ಇತ್ಯಾದಿ ವಸ್ತುಗಳ ತಯಾರಿಕೆಯ ಕಾರಖಾನೆಗಳನ್ನು ಪ್ರಾರಂಭಿಸಿದೆ. ಸದ್ಯಕ್ಕೆ ಭಾರತದಲ್ಲಿನ್ನೂ ೧೧ ಲಕ್ಷ ಪೌಂಡು ಕ್ವಿನೀನಿನ ಉತ್ಪಾದನೆಯಾಗುತ್ತದೆ. ನಮಗೆ ಬೇಕಾಗಿರುವದು ೧೫ ಲಕ್ಷ ಪೌಂಡು ಕ್ವಿನೀನು. ತೀವ್ರದಲ್ಲಿಯೇ ಅಷ್ಟನ್ನೂ ಉತ್ಪಾದಿಸಲಾಗುವುದು.

ಬೆಳೆಯುತ್ತಿರುವ ಜನಸಂಖ್ಯೆ ಮತ್ತು ಮಿತವಾದ ಗಳಿಕೆಗಳು ಕುಟುಂಬಯೋಜನೆ ಮಾಡಲು ಒತ್ತಾಯಪಡಿಸುತ್ತವೆ. ಕುಟುಂಬವು ಆರೋಗ್ಯದಿಂದ ಬಾಳಿ, ನೆಮ್ಮದಿ ಪಡೆಯಬೇಕು. ಸರಿಯಾದ ಲಾಲನೆ ಪಾಲನೆಯಾಗಬೇಕಿದ್ದರೆ, ತಾಯಿಯು ಆರೋಗ್ಯ ಒಳ್ಳೆಯ ಸ್ಥಿತಿಯಲ್ಲಿರಬೇಕಿದ್ದರೆ, ಎರಡು ಹೆರಿಗೆಗಳಲ್ಲಿ ಹೆಚ್ಚಿನ ಅಂತರವಿರಬೇಕು. ಜನತೆಗೆ ಇದರ ಬಗೆಗೆ ಸರಿಯಾದ ತಿಳಿವಳಿಕೆ ಮಾಡಿಕೊಟ್ಟು ಕುಟುಂಬಯೋಜನೆಯ ಮಹತ್ತ್ವ ಮನದಟ್ಟುಮಾಡಿಸುವುದು ಅವಶ್ಯವಿದೆ. ಈ ಕಾರ್ಯಕ್ರಮಕ್ಕಾಗಿ ೬೫ ಲಕ್ಷ ರೂಪಾಯಿಗಳನ್ನು ವಿನಿಯೋಗಿಸಲಾಗಿದೆ.

ಶಿಕ್ಷಣ

ಆರೋಗ್ಯವಂತನಾಗಿ ಬಾಳಿದ ಮನುಷ್ಯನು ಉತ್ತಮ ಶಿಕ್ಷಣ ಪಡೆದು ಮಾದರಿಯ ನಾಗರಿಕನಾಗಬೇಕು. ಶಿಕ್ಷಣ ಸಂಸ್ಕೃತಿಯ ಸಾಧನವು. ಪ್ರಜಾಪ್ರಭುತ್ವದ ಗೆಲವು ಕೂಡ ಉತ್ತಮ ಶಿಕ್ಷಣವನ್ನೇ ಅವಲಂಬಿಸಿದೆ. ಶಿಕ್ಷಣ ಪಡೆದ ಮನುಷ್ಯ ತನ್ನ ಹಕ್ಕು ಬಾಧ್ಯತೆಗಳ

ುವು ಮಾಡಿಕೊಂಡು ಇತರರ ಕಲ್ಯಾಣಕ್ಕೆ ಹೆಣಗಿ, ರಾಷ್ಟ್ರದ ಂತಿಮ ಕಲ್ಯಾಣ ಸಾಧಿಸಬೇಕು.

ಸದ್ಯಕ್ಕೆ ಭಾರತದಲ್ಲಿ ಸಾಕಷ್ಟು ಶಿಕ್ಷಣಮಂದಿರಗಳಿಲ್ಲ. ದೊರೆ ುವ ಶಿಕ್ಷಣವೂ ಪರಿಪೂರ್ಣವಾದುದಾಗಿರುವುದಿಲ್ಲ. ೬ ರಿಂದ ೨೩ ರುಷದ ಒಳಗಿನ ಹುಡುಗರಲ್ಲಿ ನೂರರಲ್ಲಿ ೫೦.೯ ರಷ್ಟು ಮಾತ್ರ ಿಯಲಿಕ್ಕೆ ಅವಕಾಶವಿದೆ. ಅದರಲ್ಲಿಯೂ ೬ ರಿಂದ ೧೧ ವರ್ಷ ವರೇ ಹೆಚ್ಚು; ನೂರಕ್ಕೆ ೪೦ ರಷ್ಟು. ೧೭ ರಿಂದ ೨೩ ವರುಷದವ ್ಲಿ ಕೇವಲ ನೂರಕ್ಕೆ ೦.೯ ರಷ್ಟು ಮಾತ್ರ ಕಲಿಯಲಿಕ್ಕೆ ಅವಕಾಶವಿದೆ. ದು ಹೆಚ್ಚಾಗಿ ಕಾಲೇಜಿನ ಶಿಕ್ಷಣದ ಮಾತು. ಭಾರತದ ರಾಜ್ಯ-ಟನೆಯಲ್ಲಿ ೧೪ ವರುಷದ ಒಳಗಿನ ಮಕ್ಕಳಿಗೆಲ್ಲ ಹತ್ತುವರುಷಗಳಲ್ಲಿ ಕ್ಕಟಿ, ಒತ್ತಾಯದ ಶಿಕ್ಷಣದ ಯೋಜನೆಯನ್ನು ಬಳಕೆಯಲ್ಲಿ ರಲಾಗುವುದೆಂದು ಹೇಳಿದೆ. ಹೆಣ್ಣುಮಕ್ಕಳ ಶಿಕ್ಷಣವು ಕೂಡ ಲಕ್ಷಿಸಲ್ಪಟ್ಟಿದೆ. ಶಿಕ್ಷಕರಲ್ಲಿ ಅನೇಕರು ತರಬೇತಿ ಹೊಂದಿರುವುದಿಲ್ಲ.

ಹೊಸ ಪದ್ಧತಿಯ ಪೇರೆಗೆ ೬ ರಿಂದ ೧೪ ವರ್ಷಗಳ ವರೆಗಿನ ುವತ್ತೂ ಮಕ್ಕಳಿಗೆ ಶಿಕ್ಷಣಕೊಡಲು ಪ್ರತಿ ವರುಷ ೪೦೦ ಕೋಟಿ ರೂಪಾಯಿಗಳೂ, ಅಲ್ಲದೆ ಶಿಕ್ಷಕರನ್ನು ತರಬೇತಿಗೊಳಿಸಲು ೨೦೦ ೋಟಿ ರೂಪಾಯಿಗಳೂ, ಶಾಲೆಗಳನ್ನು ನಿರ್ಮಿಸಲಿಕ್ಕೆ ೨೬೦ಕೋಟಿ ೂಪಾಯಿಗಳೂ ಬೇಕಾಗುತ್ತವೆಂದು ತಜ್ಞಸಮಿತಿಯು ಅಂದಾಜು ಮಾಡಿದೆ; ಅಷ್ಟು ಹಣವನ್ನು ವೆಚ್ಚಮಾಡುವುದು ಸದ್ಯಕ್ಕೆ ಸಾಧ್ಯವಿಲ್ಲ. ರ್ಷ–ಜಂನೆಯ ವರುಷ ಶಿಕ್ಷಣದ ವೆಚ್ಚ ೧೦೦ ಕೋಟಿ ರೂಪಾಯಿ ಳಿಸ್ಟಿತ್ತು. ಪಂಜವಾರ್ಷಿಕಯೋಜನೆಯಲ್ಲಿ ಶಿಕ್ಷಣದ ಬೆಳೆವಣಿಗೆಗೆ ೫೬ ಕೋಟಿ ರೂಪಾಯಗಳನ್ನು ಖರ್ಚುಮಾಡಲಾಗುವುದು. ಅದ ಲ್ಲಿ ೩೯ ಕೋಟಿ ರೂಪಾಯಿಗಳನ್ನು ಕೇಂದ್ರವೂ ೧೧೭ ಕೋಟಿ ೂಪಾಯಿಗಳನ್ನು ರಾಜ್ಯಸರಕಾರಗಳೂ ನಿರ್ವಹಿಸುತ್ತಿವೆ. ಸರಕಾರದ ಹಾಯ ಒಂದರಿಂದಲೇ ಶಿಕ್ಷಣದಂತಹ ಮಹತ್ತರ ಕಾರ್ಯವು ೈಗೂಡಲಾಗದು. ಜನತೆಯು ಇದರ ಮಹತಿಯನ್ನು ಮನನ ಮಾಡಿಕೊಂಡು ತನು, ಮನ, ಧನಗಳಿಂದ ಸಹಾಯ ಮಾಡುವದು ವಶ್ಯವಿದೆ. ಹಣ ಕೊಡಬಹುದು; ಭೂಮಿ ಕೊಡಬಹುದು. ಶ್ರಮ ದಾನ ಮಾಡಲಿ! ಕಟ್ಟಡಗಳನ್ನು ಕೊಟ್ಟರಂತೂ ಬಂಗಾರ!!

ಸದ್ಯದ ಶಿಕ್ಷಣಪದ್ಧತಿಯಲ್ಲಿ ಸುಧಾರಣೆ ಮಾಡುವುದಲ್ಲದೆ ೊಸ ಪದ್ಧತಿಗಳ ಬಗ್ಗೆ ಸಂಶೋಧನೆ ನಡೆಯುತ್ತದೆ. ಮಕ್ಕಳಿಂದ ಡಿದು ಮುಪುಕರೆಲ್ಲರಿಗೂ ಕೊಡಬೇಕಾದ ಶಿಕ್ಷಣದ ಪುನರ್ವಿವೇಚನೆ ಸೆಯುವುದು. ಮೂಲ, ಸಾಮಾಜಿಕ, ತಾಂತ್ರಿಕ, ೌದ್ಯೋಗಿಕ ಕ್ಷಣಗಳ ಏರ್ಪಾಡಾಗುವುದಲ್ಲದೆ, ವಿಶ್ವವಿದ್ಯಾಲಯಗಳಲ್ಲಿಯ ಕ್ಷಣಮಟ್ಟ ಸುಧಾರಿಸಿ, ಸ್ನಾತಕೋತ್ತರ ಮತ್ತು ಸಂಶೋಧನೆ ಭ್ಯಾಸಗಳಿಗೆ ಎಡೆಮಾಡಿಕೊಡಲಾಗುವುದು.

ಐದು ವರುಷಗಳ ಯೋಜನೆಯ ಅವಧಿಯಲ್ಲಿ ಪ್ರಾಥಮಿಕ ಕ್ಷಣದ ಮಟ್ಟದಲ್ಲಿ ೬ ರಿಂದ ೧೧ ವರುಷದ ಸಾಮಾಜಿಕ ಶಿಕ್ಷಣ ೪ ರಿಂದ ೪೦ ವರುಷದವರಲ್ಲಿ ನೂರಕ್ಕೆ ಇಂಭತ್ತು ಜನರಿಗೆ ಶಿಕ್ಷಣ ಕೊಡುವ ಗುರಿಯನ್ನಿಟ್ಟುಕೊಳ್ಳಲಾಗಿದೆ. ಇದರಲ್ಲಿ ಕ್ರಮವಾಗಿ ನೂರ ರಲ್ಲಿ ೪೦, ೧೦ ಮತ್ತು ೧೦ ರಷ್ಟು ಹೆಣ್ಣು ಮಕ್ಕಳು ಪುತ್ತು ಪುಹಿಳೆ ಯರಿಗೆ ಶಿಕ್ಷಣ ಕೊಡುವ ಗುರಿಯೂ ಸೇರ್ಪಡೆಯಾಗಿದೆ.

ಶಿಕ್ಷಣದ ಕಾರ್ಯಕ್ರಮವನ್ನು ಕೇಂದ್ರ, ರಾಜ್ಯಸರಕಾರ ಗಳಲ್ಲದೆ ಸ್ಥಾನಿಕಸಂಸ್ಥೆ ಮತ್ತು ಖಾಸಗೀ ಸಂಸ್ಥೆಗಳೂ ಮುಂದುವರೆ ಯಿಸುತ್ತವೆ. ಘಟನೆಯ ಪೇರೆಗೆ ಶಿಕ್ಷಣ ರಾಜ್ಯ ಸರಕಾರದ ಕಾರ್ಯಕಕ್ಷೆಯದು ಮಾತ್ರ. ಕೇಂದ್ರವು ಸಮನ್ವಯಗೊಳಿಸಿ ಮಾರ್ಗ ದರ್ಶಿಸುವುದು.

ಪ್ರಾಥಮಿಕ ಶಿಕ್ಷಣ

೬ ರಿಂದ ೧೪ ವರುಷಗಳವರೆಗೆ ಶಿಕ್ಷಣವನ್ನು ಮೂಲ ಶಿಕ್ಷಣದ ಪದ್ಧತಿಯನ್ವಯ ಕೊಡಲಾಗುವುದು ಕೆಲವು ಮೂಲ ಶಿಕ್ಷಣ ಶಾಲೆಗಳನ್ನು ಪಟ್ಟಣಗಳ ಅಗತ್ಯತೆಗಳನ್ನು ಪೂರಯಿಸಲು ಪಟ್ಟಣ ಪ್ರದೇಶಗಳಲ್ಲಿ, ಗ್ರಾಮಾಣ ಮೂಲ ಶಿಕ್ಷಣಾಲಯಗಳನ್ನು ತೆರೆಯ ಲಾಗುವುದು. ತೀರ ಕಡಿಮೆ ಅವಧಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಕರನ್ನು ತರಬೇತುಗೊಳಿಸುವುದೇನೂ ಸಾಮಾನ್ಯ ಮಾತಲ್ಲ. ಮೊದಲಿಗೆ ದೊಡ್ಡ ಪ್ರಮಾಣದಲ್ಲಿ ಶಿಕ್ಷಕರನ್ನು ಕೈಗಾರಿಕೆಯ ಪದ್ಧತಿ ಯಲ್ಲಿ ತರಬೇತಿಗೊಳಿಸಿ ಅನೇಕ ಶಾಲೆಗಳಲ್ಲಿ ಕೈಗಾರಿಕೆಯನ್ನು ಬಳಕೆಯಲ್ಲಿ ತರಬಹುದು.

ಮಾಧ್ಯಮಿಕ ಶಿಕ್ಷಣ

ಪ್ರಾಥಮಿಕ ಶಾಲೆಯಲ್ಲಿಯ ಮೂಲ ಶಿಕ್ಷಣದ ಆಧಾರದ ಮೇಲೆಯೇ ಮುಂದೆಸಾಗಿ ಮಾಧ್ಯಮಿಕ ಶಿಕ್ಷಣಪದ್ಧತಿಯನ್ನೂ ಮಾರ್ಪಡಿಸಿ, ಪ್ರಾಥಮಿಕ ಶಾಲೆ ಮಾಧ್ಯಮಿಕ ಶಾಲೆಗಳ ಶಿಕ್ಷಣ ಪದ್ಧತಿಗಳಲ್ಲಿ ಪರಸ್ಪರ ಬಾಂಧವ್ಯ ಉಳಯುವುಂತೆ ಏರ್ಪಡಿಸ ಲಾಗುವುದು.

ವಿಶ್ವವಿದ್ಯಾಲಯದ ಶಿಕ್ಷಣ

ವಿಶ್ವವಿದ್ಯಾಲಯಗಳನ್ನು ಸಮರ್ಥರೀತಿಯಲ್ಲಿ ನಡೆಯಿಸಿ ಕೊಂಡೊಯ್ಯುವುದಕ್ಕೆ ಬಹಳ ಹಣ ಬೇಕಾಗುತ್ತದೆ. ನಮ್ಮಲ್ಲಿ ಬಹಳ ವಿಶ್ವವಿದ್ಯಾಲಯಗಳಿಗೆ ಸಾಕಷ್ಟು ಹಣದ ನೆರವಿಲ್ಲ. ರಾಜ್ಯ ಸರಕಾರಗಳು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣಪೆಚ್ಚ ಹೊರುತ್ತಿರುವುದರಿಂದ, ವಿಶ್ವವಿದ್ಯಾಲಯಗಳ ಪೆಚ್ಚ ಕೇಂದ್ರ ಸರಕಾರ ವೇ ನಿರ್ವಹಿಸಬೇಕಾಗುತ್ತದೆ. ಇತ್ತೀಚೆಗೆ ಕಾಲೇಜುಗಳಲ್ಲಿ ಕಲಿಯ ಲಿಕ್ಕೆಂದು ಬರುವವರ ಸಂಖ್ಯೆ ತೀರ ಹೆಚ್ಚಾಗಿದೆ. ಕಾಲೇಜು ಶಿಕ್ಷಣ ವನ್ನು ಅನೇಕರು ಗೊತ್ತುಗುರಿಗಳಲ್ಲದೆ ಪಡೆಯತ್ತಿದ್ದಾರೆ. ಇನ್ನು ಮುಂದೆ ಇವನ್ನು ತಡೆಯುವದಕ್ಕಾಗಿ, ಯಾರಿಗೆ ಆ ಶಿಕ್ಷಣದಿಂದ ಲಾಭ ವಿಲ್ಲವೋ ಅಂಥವರಿಗೆ ಅವಕಾಶವನ್ನೆ ಕೊಡಬಾರದೆಂದು ಒಂದು ತೆರ ನಾದ ಆಯ್ಕೆಯ ಪರೀಕ್ಷೆಯನ್ನೇ ಪ್ರವೇಶಕಾಲಕ್ಕೆ ನಡೆಯಿಸುವುದು ಅನಿವಾರ್ಯವಾದೀತು. ಬೇರೆ ಬೇರೆ ತರಗತಿಯ ಸರಕಾರೀ ಕೆಲಸ ಗಳಿಗೆ ಪರೀಕ್ಷೆಗಳ ಪದವಿಗಳೇ ಆಧಾರಗಳಾಗದಿದ್ದರೆ, ಪುತ್ತು ವಿಶ್ವವಿದ್ಯಾಲಯದ ಪುಟ್ಟಕ್ಕಿಂತ ಕೆಳಗಿನ ಶಿಕ್ಷಣವು ಪರಿಪೂರ್ಣವೂ

ಉದ್ದೇಶಸಿದ್ಧಿಯದೂ ಆಗಿದ್ದರೆ, ಕಾಲೇಜುಗಳಲ್ಲಿ ತನ್ನಿಂದ ತಾನೇ ಒತ್ತಡ ಕಡಿಮೆಯಾದೀತು. ಕೇವಲ ಕೆಲಸ ಮೊರೆಕಿಸುವುದಕ್ಕಾಗಿ ಪದವಿ ಪಡೆಯುವುದರಿಂದ, ವಿಶ್ವವಿದ್ಯಾಲಯದ ಶಿಕ್ಷಣ ಮಟ್ಟವೂ ಕೆಳಗಿಳಿಯುವುದು. ಕೆಲಸ ಕೊಡುವುದಕ್ಕಾಗಿ ಸ್ಪರ್ಧಾಪರೀಕ್ಷೆಗಳನ್ನೇರ್ಪಡಿಸಬೇಕು; ಪದವಿಯಿಲ್ಲವೆಂಬುದೊಂದೇ ಕಾರಣದಿಂದ ಇಂಥ ಸ್ಪರ್ಧಾಪರೀಕ್ಷೆಗಳಲ್ಲಿ ಸ್ಪರ್ಧಿಸುವದನ್ನು ನಿರ್ಬಂಧಿಸಬಾರದು.

ಗ್ರಾಮಾಣ ಜನತೆಗೆ ಶಿಕ್ಷಣ ಕೊಡುವುದಕ್ಕಾಗಿ ಗ್ರಾಮಾಣ ವಿಶ್ವವಿದ್ಯಾಲಯಗಳನ್ನೂ ತೆರೆಯಲಾಗುವುದು. ಇದೊಂದು ಶಿಕ್ಷಣ ಪದ್ಧತಿಯಲ್ಲಿ ಹೊಸ ಯತ್ನ. ಇಂಥ ಒಂದಾದರೂ ವಿಶ್ವವಿದ್ಯಾಲಯವನ್ನು ಯೋಜನೆಯ ಅವಧಿಯಲ್ಲಿ ಕೇಂದ್ರವು ತೆರೆಯಲಿದೆ.

ಸಾಮಾಜಿಕ ಶಿಕ್ಷಣ

ಪ್ರೌಢರಿಗೆ ಕೇವಲ ಓದುಬರೆಹ ಕಲಿಸುವುದೊಂದೇ ಈ ಶಿಕ್ಷಣದ ಗುರಿಯಾಗಬಾರದು; ಆರೋಗ್ಯದ ತಿರುಳು, ಬಿಡುವಿನ ಅವಧಿಯ ಉಪಯುಕ್ತತೆ ಉತ್ತಮ ನಾಗರೀಕನ ಅವಶ್ಯಕತೆಗಳನ್ನು ಅವರಲ್ಲಿ ಬಿಂಬಿಸಬೇಕು. ಸಾಮಾಜಿಕ ಶಿಕ್ಷಣವು ನಿಜವಾದ ಜೀವನ ಶಿಕ್ಷಣವಾಗಬೇಕು. ಸಮಾಜದ ಉನ್ನತಿಗೆ ಅದು ನಿಚ್ಚಣಿಕೆಯಾಗಬೇಕಲ್ಲದೆ, ವ್ಯಕ್ತಿಗಳನ್ನು ಸುಸಂಸ್ಕೃತರನ್ನಾಗಿಮಾಡಬೇಕು. ಕೇಂದ್ರ ಸರಕಾರ ೬.೫ ಕೋಟಿ ರೂಪಾಯಿಗಳನ್ನು ಈ ಕಾರ್ಯಕ್ಕೆ ವೆಚ್ಚ ಮಾಡುವುದು. ರಾಜ್ಯ ಸರಕಾರಗಳೂ ತಮ್ಮ ತಮ್ಮ ಯೋಗ್ಯತೆ-ಅವಶ್ಯಕತೆಗನುಗುಣವಾಗಿ ವೆಚ್ಚ ಮಾಡಲಿರುತ್ತವೆ. ಪಳ್ಳಿಯ ಪಂಚಾಯತಿ, ಸಹಕಾರೀ ಸಂಘ-ವ್ಯಾಪಾರೀ ಸಂಘಗಳು ಈ ಕಾರ್ಯಗಳಲ್ಲಿ ಮಹತ್ತರವಾದ ಪಾತ್ರವಹಿಸಬೇಕಾಗಿದೆ. ಪ್ರತಿ ಶಾಲೆ-ಕಾಲೇಜುಗಳು ಸಾಮಾಜಿಕ ಶಿಕ್ಷಣದ ವಿಸ್ತರಣೆಯ ವಿಧಾನಗಳಾಗಿ ಕೆಲಸ ಮಾಡಬೇಕು.

ಔದ್ಯೋಗಿಕ ಶಿಕ್ಷಣ

ತಾಂತ್ರಿಕ ಶಿಕ್ಷಣದ ಮಹತ್ತ್ವ ಹೇಳ ತೀರದಷ್ಟು. ರಾಜ್ಯದ ನಿರ್ಮಾಣಕ್ಕೆ, ತರಬೇತಿ ಹೊಂದಿದ ತಂತ್ರಜ್ಞರು ಬಹುಸಂಖ್ಯೆಯಲ್ಲಿ ಬೇಕಾಗಿದ್ದಾರೆ. ವಿವಿಧ ಉದ್ಯೋಗ, ಕೈಗಾರಿಕೆ, ಗ್ರಾಮೋದ್ಯೋಗಗಳಲ್ಲಿ ತರಬೇತಿ ಪಡೆಯಲು ಅನೇಕರಿಗೆ ಅವಕಾಶ ಮಾಡಿಕೊಡಲಾಗುವುದು.

ಸ್ತ್ರೀ ಶಿಕ್ಷಣ

ಹೆಣ್ಣು ಮಕ್ಕಳು ಸ್ವಭಾವಕ್ಕನುಗುಣವಾಗಿ ಹೆಚ್ಚಾಗಿ ಶಿಕ್ಷಕಿಯರೋ ದಾಯಿಗಳೋ, ಆಗಲಿಕ್ಕೆ ಯೋಗ್ಯರಾಗಿದ್ದರೂ, ಗಂಡುಸರೊಂದಿಗೆ ಇತರ ಬಗೆಯ ಶಿಕ್ಷಣ ಪಡೆಯಲು ಅನುವಿದೆ. ಹೆಣ್ಣು ಮಕ್ಕಳ ಶಿಕ್ಷಣವು ಹೆಚ್ಚಾಗಿ ಉದ್ಯೋಗ, ಧಂದೆಗಳಿಗೆ ಸಂಬಂಧಿಸಿದ್ದಾದರೆ ಹೆಚ್ಚು ಅನುಕೂಲವಾಗುತ್ತದೆ. ಗೃಹಕೃತ್ಯ, ಮಕ್ಕಳ ಲಾಲನೆಪಾಲನೆ, ಮಿತವ್ಯಯ ತಂತ್ರಗಳಲ್ಲಿ ಉತ್ತಮ ತರಬೇತಿ ದೊರೆತದ್ದಾದರೆ ಹೆಚ್ಚಿನ ಪ್ರಯೋಜನವುಂಟು.

ಶಿಕ್ಷಣ ಪದ್ಧತಿಯ ಹೀನಾಯ ಸ್ಥಿತಿಗೆ, ಶಿಕ್ಷಕರಿಗೆ ದೊರೆಯುತ್ತಿರುವ ಅಲ್ಪ ಸಂಬಳವೂ ಬಹುಮಟ್ಟಿಗೆ ಕಾರಣವೆಂಬುದನ್ನು ಸರಕಾರ ಅರಿತಿದೆ. ಅವರ ನವಕರಿಯ ಅತೃಪ್ತಿಕರ ಸ್ಥಿತಿ-ಗತಿಗಳು ಕೂಡ ಅನಾಸ್ಥೆ ಹುಟ್ಟಿಸುವಂಥವಿವೆ. ಈ ಕುಂದು-ಕೊರತೆಗಳನ್ನೂ ಹೋಗಲಾಡಿಸಲಾಗುವುದು.

ವಿದ್ಯಾರ್ಥಿಗಳು ಸಾಮಾಜಿಕ ಸೇವೆಯ ಅಂಗವಾಗಿ ದೈಹಿಕ ಕಾರ್ಯಮಾಡಿ, ರಾಷ್ಟ್ರಕಾರ್ಯಕ್ಕೆ ಕಾಣಿಕೆ ಅರ್ಪಿಸಬೇಕು. ಈ ಕಾರ್ಯದ ಸಂಘಟನೆಗಾಗಿ ೧ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗುವುದು. ಆರು ತಿಂಗಳಿಂದ ಒಂದು ವರುಷದ ಅವಧಿಯವರೆಗೆ ದಿನದಿನವೂ ಕೆಲವು ಸಮಯ ದೈಹಿಕ ಶ್ರಮ ಮಾಡುವ ಅವಕಾಶ, ಶಿಕ್ಷಣಮಂದಿರಗಳ ವೇಳಾಪತ್ರಿಕೆಯಲ್ಲಿ ಸಮಾವೇಶಗೊಳ್ಳಬೇಕು. ಸಫಾಯಿ, ರಸ್ತೆ, ನೀರಾವರಿ ಕೆಲಸ, ಮೊದಲಾದ ಕಾರ್ಯಗಳಲ್ಲಿ ವಿದ್ಯಾರ್ಥಿಗಳು ಶ್ರಮದಾನ ಮಾಡಬಹುದಾಗಿದೆ.

ಕಾರ್ಯ—ಫಲ

ಕೇಂದ್ರ ಸರಕಾರವು ವೆಚ್ಚಮಾಡಲಿರುವ ೩೯ ಕೋಟಿ ರೂಪಾಯಿಗಳಲ್ಲಿ ೨೦ ಕೋಟಿ ರೂಪಾಯಿಗಳನ್ನು ವಿಶ್ವವಿದ್ಯಾಲಯ ಪೂರ್ವದ ಮೂಲ ಮತ್ತು ಸಾಮಾಜಿಕ ಶಿಕ್ಷಣ, ೨.೯೨ ಕೋಟಿ ರೂಪಾಯಿ ವಿಶ್ವವಿದ್ಯಾಲಯದ ಶಿಕ್ಷಣ, ೧೧ ಕೋಟಿ ವಿಜ್ಞಾನ ಮತ್ತು ತಾಂತ್ರಿಕ ಶಿಕ್ಷಣ ಮತ್ತು ೧ ಕೋಟಿ ತರುಣಸಂಘ ಮತ್ತು ಶ್ರಮದಾನಗಳಿಗಾಗಿ ವೆಚ್ಚ ಮಾಡಲಾಗುವುದು. ಸಾಮಾಜಿಕ ಕಲ್ಯಾಣಕ್ಕಾಗಿ ೪ ಕೋಟಿ ರೂಪಾಯಿಗಳನ್ನೂ ಇದೇ ೩೯ ಕೋಟಿಯಲ್ಲಿ ವೆಚ್ಚಮಾಡಲಾಗುವುದು. ರಾಜ್ಯಸರಕಾರಗಳು ೧೧೭ ಕೋಟಿ ರೂಪಾಯಿಗಳನ್ನು ಹೆಚ್ಚಾಗಿ ನಿಶ್ವವಿದ್ಯಾಲಯ ಪೂರ್ವದ ಶಿಕ್ಷಣಕ್ಕಾಗಿಯೇ ವೆಚ್ಚ ಮಾಡುತ್ತವೆ.

ಪಂಚವಾರ್ಷಿಕ ಯೋಜನೆಯ ಅವಧಿಯ ನಂತರ ರಾಷ್ಟ್ರದಲ್ಲಿ ನೂರಕ್ಕೆ ೧೭ ರಷ್ಟು ಪ್ರಾಥಮಿಕಶಾಲೆಗಳೂ ೨೫ ರಷ್ಟು ವಿದ್ಯಾರ್ಥಿಗಳೂ ಹೆಚ್ಚಾಗಿರುತ್ತಾರೆ. ಕಿರಿಯ ಮೂಲ ಉದ್ಯೋಗ ಶಾಲೆಗಳು ೨೨ರಷ್ಟು, ವಿದ್ಯಾರ್ಥಿಗಳು ೪೧ರಷ್ಟು ಹೆಚ್ಚಾಗುವರು. ೧೯೫೦–೫೧ರಲ್ಲಿ ೬ರಿಂದ ೧೧ ವರುಷದವರು ನೂರರಲ್ಲಿ ೪೨.೯ರಷ್ಟು ಶಾಲೆಗೆ ಹೋಗುತ್ತಿದ್ದರೆ, ೧೯೫೫–೫೬ರಲ್ಲಿ ನೂರರಲ್ಲಿ ೫೫.೭ರಷ್ಟಾಗುವರು. ಇನ್ನೂ ಅಷ್ಟು ಪ್ರಯತ್ನ ಮಾಡಿದಲ್ಲಿ, ಈ ಸಂಖ್ಯೆ ೬೦ಕ್ಕೆ ಬರಲಿಕ್ಕೆ ಸಂದೇಹವಿಲ್ಲ. ಈ ಕಾರ್ಯಕ್ಕೆ ಸ್ಥಾನಿಕ ನೆರವನ್ನೆಲ್ಲ ಪಡೆಯಬೇಕು. ಮಾಧ್ಯಮಿಕ ಶಾಲೆಗಳು ನೂರಕ್ಕೆ ೧೮ರಷ್ಟು, ವಿದ್ಯಾರ್ಥಿಗಳು ೩೨ರಷ್ಟು ಹೆಚ್ಚಾಗುವರು. ತಾಂತ್ರಿಕ ಮತ್ತು ಔದ್ಯೋಗಿಕ ವಿಭಾಗದಲ್ಲಿ ನೂರಕ್ಕೆ ೫೭ ರಷ್ಟು ಸಂಸ್ಥೆಗಳೂ, ೬೩ರಷ್ಟು ತರಬೇತಿ ಹೊಂದಿದ ವಿದ್ಯಾರ್ಥಿಗಳೂ ಹೆಚ್ಚಾಗುವರು. ನೂರಕ್ಕೆ ೧೫ರಷ್ಟು ಪ್ರಾಥಮಿಕ ಮತ್ತು ೫೪ರಷ್ಟು ಮೂಲಶಿಕ್ಷಣ ಶಿಕ್ಷಕರೂ ಪ್ರತಿವರುಷವೂ ಹೆಚ್ಚಾಗುವರು; ಅಲ್ಲದೆ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಮಹತ್ತ್ವ ಕೊಟ್ಟಿರುವುದರಿಂದ, ಸ್ತ್ರೀಯರಲ್ಲಿ ಕಲಿತವರ ಸಂಖ್ಯೆಯೂ ಹೆಚ್ಚುವುದು.

ಉರ್ಮಿಳಾ

(ಗೀತರೂಪಕ)

ಪಾತ್ರ ಪರಿಚಯ

ಉರ್ಮಿಳಾ:— ರಾಮಾಯಣದಲ್ಲಿಯ ಲಕ್ಷ್ಮಣನ ಹೆಂಡತಿ
ಕೌಸಲ್ಯಾ:— ಶ್ರೀರಾಮನ ತಾಯಿ
ಸುಮಿತ್ರಾ:— ಲಕ್ಷ್ಮಣನ ತಾಯಿ
ಅಲ್ಲದೆ ಮೇಳಕಾತಿಯರು.

—●—

(ಕೋಲಾಟದ ಗೆಜ್ಜೆಯ ಹೆಜ್ಜೆಯ ಸಪ್ಪಳದೊಂದಿಗೆ)

ಮೇಳಕಾತಿಯರು

ಕಿರುತಾಯಿ ಕೈಕೆಯ ಚಲಕಾಗಿ ಶ್ರೀರಾಮ
ಸತಿ ಸೀತಾ-ಸೌಮಿತ್ರಿ ಸಹಿತ.....
ತೆರಳಿದ ಹದಿನಾಲ್ಕು ವರುಷದ ಕಾಡಿನ
ಇರುಹಿಗೆ ನಾರುಡೆಯುಡುತ.
ದೊರೆ ದಶರಥ ಪುತ್ರವಿರಹದುರಿಗೆ ಬೆಂದು
ತೊರೆದನು ಬುವಿಯ ಜೀವನವ.....
ಭರತನು ರಾಮನ ಕರೆತಹೆನೆನ್ನುತ
ತೆರಳಿ ಸಾರಿದನು ಕಾನನವ.
ತಂದೆಯ ಭಾಷೆಯ ಸಲಿಸಲು ಶ್ರೀರಾಮ
ಹಿಂದಿರುಗದೆ ಮುಂದೆ ನಡೆದ.....
ಬಂಧು ಭರತರಾಯ ಶ್ರೀರಾಮಪಾದುಕೆ
ಪೊಂದಿ ಅಯೋಧ್ಯೆಗೈತಂದ.

ಅಯೋಧ್ಯೆಯ ಜನಜಂಗುಳಿ

(ಕರುಣಾಸ್ವರಗಳು ಮಿಡಿಯುವ ರಾಗದಲ್ಲಿ)

ಭರತದೇವ ವನಕೆ ಹೋಗಿ ಬರಿದೆ ಮರಳಿ ಬಂದ.....
ಸಿರಿರಾಮನು ಇರದಯೋಧ್ಯೆಗೆಂತು ಬಹುದು ಚೆಂದ ?
ರಾಮ ಸೀತೆ ಸೌಮಿತ್ರಿಯರಿರದ ಪುರದ ಬಾಳು
ಹೈನುಕಿರಣನಿರದ ರಾತ್ರಿಯಂತೆ ಕಾಳುಗೋಳು !
ಬಾರ ರಾನು, ಬಾ ಲಕ್ಷ್ಮಣ ಬಾರೆ ದೇವಿ ಸೀತೇ.....
ಪೌರರ ಬಾಯ್-ಕಿವಿಗಳಲ್ಲಿ ನಿಮ್ಮ ಮಾತು ಮಾತೇ !
ನಿಮ್ಮ ಮಾತು ಮಾತೇ !

(ಕೊನೆಯ ಸಾಲುಗಳು ಕರುಣೋತ್ಕಟವಾದ ಉಚ್ಚೈಃಸ್ವರತೆ ಹೊಡದು ಏಳ್ಬೇಕು)

ಮೇಳಕಾತಿಯರು

ಪುರವೆಲ್ಲ ಕರಡಿದೆ ಕರುಣೆಯ ಕಿಚ್ಚಿಂದೆ
ಕರುಳಿನ ಕುದಿತಕೆ ಇಲ್ಲ ಮಿತಿ.....
ಅರಸಿ ಕೌಸಲ್ಯಾ-ಸುಮಿತ್ರಾ ದೇವಿಯರಲ್ಲಿ
ಬರುತಿಹಳಿವಳಾರು ಭಾಗ್ಯವತಿ ?
ಸುಂದರ ಮುಖವಿದು ಶಾಂತಿಸಿರಿಯ ನೆಲೆ
ಚೆಂದುಟಿ ತಳೆದಿದೆ ಮೊಲುನಗೆಯ;
ಕಂದೆರೆಯುಗುತಿವೆ ಹೃದಯದಿ ಹುದುಗಿದ
ಸಂಯಮ ಸಹನೆಯ ಒಳಬಿಗಿಯ !
ಇವಳಿದೊ ಸೌಮಿತ್ರಿಯಂತರಂಗದ ಜ್ಯೋತಿ
ಉರ್ಮಿಳೆ ಶುಭಗುಣ ಮಣಿಮಾಲೆ.....
ಬಂದಳು ರಾಣಿಯರೆದುರಲ್ಲಿ ನಿಂದಳು
ನುಡಿವಳೀನನು ಕೇಳಿರೀ ಬಾಲೆ!

ಉರ್ಮಿಳೆ

(ಅವಿಚಲಭಾವದ ಶಾಂತಧ್ವನಿಯಲ್ಲಿ)

ಪೊಡಮಡುವೆ ತಾಯದಿರ ಅಡಿಗಳೆಡೆಗೆ.....
ಜಡಮನದಿ ಕೊರಗುವುದು ಏಸು ದಿನ ಹೀಗೆ?
ಬಡಮನುಜರೇ ನಾವು ? ರವಿವಂಶದವರು
ಪೊಡವಿಯೊಳು ಧರ್ಮ-ಸತ್ಯಗಳ ಹೊರೆಪವರು!

ಕೌಸಲ್ಯೆ

ಧನ್ಯೆಯೌ ಧನ್ಯೆಯೌ ನೀನುರ್ಮಿಳೆ
ಮಾನ್ಯ ಜನಕಂಗೆ ನೀನೇ ನಿಜದ ಹಸುಳೆ !
ನಿನ್ನ ಹೃದಯದ ಘನತೆಯೆಂತಹದು ಮಗಳೇ
ಬನ್ನವನು ನೀನು ಸುಂಗಿಹೆಯೆಂತು ಸೇಳೆ !
ಧನ್ಯಳೌ ಧನ್ಯಳೌ ನೀನುರ್ಮಿಳೆ !

ಕ್ರಾಂತಿಕಾರಿ ಕ್ರೋಪಾಟಕಿನ್

(ವ್ಯಕ್ತಿ ಪರಿಚಯದ ಪೂರ್ವಾರ್ಧ)

' ಕನುಲಕ '

—೦೦—

ಕ್ರೋಪಾಟಕಿನ್ನನ ಜೀವನ ತತ್ತ್ವಜ್ಞಾನ ಲೌಕಿಕವೆನಿಸುವಂತಹದಾದರೂ, ಅದಕ್ಕಾಗಿ ಅತ ನ್ಯೇಯುಷಾವಿಯಾಗಿಯೆ ಬದುಕನ್ನು ಕಳೆದ. ಕ್ರೊಪಾಟಕಿನ್ನನ್ನು ರಷ್ಯದ ಮಹಾತ್ಮಾಗಾಂಧಿಯೆಂದು ಹೇಳಬಹುದು.

ಜನಾಬ್ ಬ್ಲಾಡಿಮಿರ್ ಇಲಿಯಟ್, (ಲೆನಿನ್), ನವೀನ ಸತ್ಯದ ಪ್ರವಾದಿಯಾಗಬೇಕೆಂದೂ, ಹೊಸ ರಾಜ್ಯದ ಸಂಸ್ಥಾಪಕನಾಗಬೇಕೆಂದೂ ತಮ್ಮ ಆಕಾಂಕ್ಷೆಯಾಗಿರುವಾಗ, ಯಾರೋ ಅಪರಾಧಕ್ಕಾಗಿ ಅವನ ಬಂಧು-ಬಾಂಧವರನ್ನು ಬಂಧಿಸುವಂತಹ ಭೀಭತ್ಸ ಸರಕಾರೀ ಅನಾಚಾರಗಳಿಗೆ ಮತ್ತು ಅಸಹನೀಯ ರಾಜನೈತಿಕ ರೀತಿಗಳಿಗೆ ತಮ್ಮ ಸ್ವೀಕೃತಿಯನ್ನು ಹೇಗೆ ಕೊಡಬಲ್ಲಿರಿ? ಇದರಿಂದ ತಾವು ಝಾರಶಾಹಿಯ ವಿಚಾರಗಳಿಗೆ ಅಂಟಿಕೊಂಡಿರುವಿರೆಂಬುದು ವ್ಯಕ್ತವಾಗುತ್ತದೆ. ಆದುದರಿಂದ ಪ್ರಾಯಶಃ ಆ ನಿರಪರಾಧಿಗಳನ್ನು ಹಿಡಿದು ತಾವು ತಮ್ಮ ಆತ್ಮರಕ್ಷಣೆ ಮಾಡಿಕೊಳ್ಳಲು ಬಯಸುತ್ತೀರಿ. ತಮ್ಮಂತಹ ಯುರೋಪಿಯ ಸಾಮ್ಯವಾದದ ಅಗ್ರಣಿಗೆ ಈ ಕಾರ್ಯ (ಲಜ್ಜಾಜನಕ ರೀತಿಯಲ್ಲಿ ನಿರಪರಾಧಿಗಳ ಬಂಧನ)ವು, ಸರ್ವಥಾ ಅನಧಿಕಾರ ಚೇಷ್ಟೆಯೆನ್ನುವುದು ಹೊಳೆಯದಷ್ಟು ತಾವು ತಮ್ಮ " ಡಿಕ್ಟೇಟರ್‌ಶಿಪ್ "ನ ವಿಚಾರಗಳ ಗುಲಾಮರಾಗಿ ಅಂಧರಾಗಿದ್ದೀರಿ. ತಮ್ಮ ಈ ಕಾರ್ಯವು ಭಯಂಕರ ನ್ಯೂನತೆಗಳಿಂದೆಂತೂ ತುಂಬಿಯೇ ಇದೆ; ಅಲ್ಲದೆ ಇದರಿಂದ, ಸರ್ವಥಾ ತರ್ಕ ವಿಹೀನವಾದ ಮೃತ್ಯುವಿನ ಭಯವು ತಮಗಿದೆಯೆನ್ನುವುದು ವ್ಯಕ್ತವಾಗುತ್ತದೆ. ಯಾವ ಕಮ್ಯೂನಿಜಮಿನ ಒಬ್ಬ ಮಹತ್ತ್ವಪೂರ್ಣ ರಕ್ಷಕನು ಹೀಗೆ ನಂಬಿಗೆಯ ಪ್ರತಿಯೊಂದು ಭಾವನೆಯನ್ನು ಪದ-ದಲಿತಮಾಡುತ್ತಾನೋ—ಆ ಕಮ್ಯೂನಿಜಮಿನ ಬುನಾದಿಯಲ್ಲಿ ಏನು ಠೇಳಲಿ?"

ಯಾವ ಮಹತ್ತ್ವಪೂರ್ಣ ಪತ್ರವನ್ನು ತನ್ನ ಜೀವಮಾನದ ಅಂತಿಮ ದಿನಗಳಲ್ಲಿ (ಮರಣದ ಎರಡು ತಿಂಗಳ ಮೊದಲು) ಕ್ರೋಪಾಟಕಿನ್ ಲೆನಿನಿಗೆ ಬರೆದಿದ್ದನೋ, ಆ ಪತ್ರದ ಒಂದಂಶವಿದು. ಲೆನಿನ್ ಆ ದಿನಗಳಲ್ಲಿ ವಿಶಾಲ ರಷ್ಯಾರಾಜ್ಯದ ನಿರಂಕುಶ ಶಾಸಕನಾಗಿದ್ದನು. ಕ್ರೋಪಾಟಕಿನರು ಆಗ ವರ್ಷ ದೇಶಬಂದ ನಿರ್ವಾಸಿತರಾಗಿದ್ದು, ಆ ಮೇಲೆ ಆ ವರ್ಷ ತನ್ನ ಸಾಂತ್ಯಭೂಮಿಯು ಉಸಿರು ಕಟ್ಟಿಸುವಂತಹ ವಾತಾವರಣದಲ್ಲಿ ಕಳೆದು, ಪರಲೋಕಪ್ರಯಾಣದ ಸಿದ್ಧತೆಯನ್ನು ಮಾಡುತ್ತಿದ್ದರು. ಯಾರು ಅನ್ಯಾಯದೊಂದಿಗೆ ಒಪ್ಪಂದ ಮಾಡಿಕೊಳ್ಳುವುದನ್ನು ಎಂದೂ ಯೋಗ್ಯವೆಂದೆಣಿಸಲಿಲ್ಲವೋ, ಯಾರು ಸಾಧನೆ ಮತ್ತು ಸಾಧ್ಯಗಳೆರಡರಲ್ಲಿಯೂ ಪವಿತ್ರತೆಯು ಸಮಾನವಾಗಿರಬೇಕೆಂದು ಬಯಸುತ್ತಿದ್ದರೋ, ಯಾವುದರ ಉದಾಹರಣೆಯು ಪ್ರಪಂಚದ ರಾಜನೈತಿಕ ಕಾರ್ಯಕರ್ತರ ಇತಿಹಾಸದಲ್ಲಿ ದುರ್ಲಭವೋ, ಅಂತಹ ಪ್ರಾಮಾಣಿಕತೆ ಮತ್ತು ಅಪರಿಗ್ರಹದ ದೃಷ್ಟಾಂತವನ್ನು ಯಾರು ತೋರಿದರೋ, ಹತ್ತೊಂಬತ್ತು ಮತ್ತು ಇಪ್ಪತ್ತನೆಯ ಶತಮಾನದ ಆ ಮಹಾಪುರುಷನ ಆತ್ಮವು ಈ ಶಬ್ದಗಳಲ್ಲಿ ನುಡಿಯುತ್ತಿದೆ.

ಮಂತ್ರಿತ್ವಕ್ಕಿಂತ ಮೆಟ್ಟುಗಳ ಪಾಲಿಶ್!

ಕೆರೆನ್ಸ್ಕೀಯು ಕ್ರೋಪಾಟಕಿನನೊಡನೆ "ತಾವು ನಮ್ಮ ಸರಕಾರದ ಮಂತ್ರಿಮಂಡಲದಲ್ಲಿ ಯಾವುದೊಂದು ಪದವಿಯನ್ನಾರಿಸಿದರೂ, ಅದೇ ತಮಗೆ ಕೊಡಲ್ಪಡುವುದು" ಎಂದು ನಿವೇದಿಸಿಕೊಂಡಾಗ ಕ್ರೋಪಾಟಕಿನರು "ಮಂತ್ರಿತ್ವದ ಕಾರ್ಯಕ್ಕಿಂತ ಮೆಟ್ಟುಗಳ ಮೇಲೆ ಪಾಲಿಶ್ ಮಾಡುವ ಚರ್ಮಾರನ ಕೆಲಸವನ್ನು ನಾನು ಅಧಿಕ ಆದರಣೀಯ ಮತ್ತು ಪ್ರಯೋಜನಕಾರಿಯೆಂದು ತಿಳಿಯುತ್ತೇನೆ" ಎಂದು ಉತ್ತರ ಕೊಟ್ಟರು. ಹಾಗೆಯೇ ಹತ್ತು ಸಾವಿರ ರೂಬೆಲಿನ ಫೆನ್ಯನಿನ ಪ್ರಸ್ತಾಪವನ್ನು ತಿರಸ್ಕರಿಸಿದರು ಮತ್ತು ಝಾರನ ಶೀತಕಾಲೀನ ಕಟ್ಟಡದ ವಾಸವನ್ನೂ ಪೂರ್ಣ ಉಪೇಕ್ಷಿಸಿದರು. ಇವಾದರೋ ಲೆನಿನಿನ ಮೊದಲಿನ ಶಾಸಕರ ಕಾಲದ ಮಾತಾಯಿತು. ಸಾಮ್ಯವಾದೀ ಸರಕಾರದ ಶಿಕ್ಷಣಮಂತ್ರಿ ಅನಾಚರಸ್ಕೀಯು ಕ್ರೋಪಾಟಕಿನರಿಗೆ "ತಾವು ಸರಕಾರದಿಂದ ಎರಡೂವರೆ ಲಕ್ಷ ರೂಬೆಲ್‌ಗಳನ್ನು ತೆಗೆದುಕೊಂಡು ತಮ್ಮ ಪುಸ್ತಕಗಳನ್ನು ಮುದ್ರಿಸುವ ಅಧಿಕಾರವನ್ನು ನಮಗೆ ಕೊಡಿರಿ" ಎಂದು ಬರೆದಾಗ, ಕ್ರೋಪಾಟಕಿನರು "ನಾನೆಂದೂ ರಾಜ್ಯದಿಂದ ಹಣ ಪಡೆದಿಲ್ಲ. ಮತ್ತು ಈಗಲಾದರೂ ಸರಕಾರೀ ಸಹಾಯವನ್ನು ಸ್ವೀಕರಿಸಲಾರೆ" ಎಂದು ಉತ್ತರವಿತ್ತರು. ಇದು ಕ್ರೋಪಾಟಕಿನರ ವೈದ್ಧಾವಸ್ಥೆಗೆ ಯೋಗ್ಯವಾದ—ಕಳ್ಳಪ್ಪ ಭೋಜನವಿಲ್ಲದ,

ಬೆಳಕಿಲ್ಲದ, ಸಹಾಯಕರಾರೂ ಇಲ್ಲದೆ, ದಿನಗಳ ಮಾತು. ಆಗಾದರೆ ಆದರ್ಶವಾದವನ್ನು ಪರಮಾವಧಿಗೇರಿಸಿದ ಟಕಿನರು, ತಮ್ಮ ಜೀವನವನ್ನು ಹೇಗೆ ನಡೆಸುತ್ತಿದ್ದರೆಂಬ ಳುತ್ತದೆ. ನಿರ್ವಾಸಿತರಾಗಿದ್ದ ೪೧ ವರ್ಷವನ್ನು ತಮ್ಮ ು ಬಲಿದಿಂದಲೇ ಕಳೆದರು. ಅದರಲ್ಲೂ ಅರಾಜಕವಾದೀ ಳಿಂದ ಒಂದು ಸೈ ಸಹ ಸಂಪಾದಿಸಲಿಲ್ಲ. ಅವರು ಅತ್ಯಂತ ೀಟೆಯ ವೈಜ್ಞಾನಿಕರಾಗಿದ್ದರು. ಆದುದರಿಂದ ವೈಜ್ಞಾನಿಕ ುತ್ತು ಟಿಪ್ಪಣಿಗಳಿಂದ ಸ್ವಲ್ಪ ಪ್ರತಿಫಲ ದೊರೆಯುತ್ತಿತ್ತು. ನ್ನ ಆತ್ಮಚರಿತ್ರೆಯಲ್ಲಿ ಅತ್ಯಂತ ಸರಳತೆಯಿಂದ ಬರೆದಿರು ''ರಸ್ಯಾದಿಂದ ತಕ್ಕಷ್ಟು ಸಮಾಜಾರ ಬಂದರೆ, ಅಥವಾ ಕ ವಿಷಯಗಳಲ್ಲಿಯ ನನ್ನ ಟಿಪ್ಪಣಿ ಸ್ವೀಕೃತವಾದರೆ, ಕೊಟ್ಟ- ುದಿಗೆ ಬೆಣ್ಣೆ ಸಹ ಸಿಗುತ್ತಿತ್ತು; ಇಲ್ಲವಾದರೆ ಒಣರೊಟ್ಟಿ ೀ ಜೀವಿಸಬೇಕಿತ್ತು.''

ಅದ್ಭುತ ಆತಿಥ್ಯ

ಪ್ರಸಿದ್ಧ ಲೇಖಕ ಫೈಂಕ್ ಹೆರಿಸನು ಕ್ರೋಪಾಟಕಿನರ ಿನ ದಿನಗಳ ಆತಿಥ್ಯದ ಒಂದು ಉತ್ತಮ ಶಬ್ದಚಿತ್ರವನ್ನು ುರೆ.— ''ಕ್ರೋಪಾಟಕಿನರ ಧರ್ಮಪತ್ನಿ 'ಸೋಫೀ', ಪತಿ, ತ್ತು ತನಗಾಗಿ ಅಡಿಗೆ ಮಾಡುತ್ತಿದ್ದಾಗ ಅಕಸ್ಮಾತ್ ಅತಿಥಿ ುರೊಬ್ಬರು ಆಗಮಿಸಿದರು; ಕ್ರೋಪಾಟಕಿನರು ಒಡನೆ ೋಗಿ— ''ಸೋಫೀ, ಸ್ವಲ್ಪ ತೋವೆಗೆ ತುಸು ನೀರು ಎಂದರು. ಸ್ವಲ್ಪ ಹೊತ್ತಿನ ಅನಂತರ ಮತ್ತೊಬ್ಬ ಅತಿಥಿ ಪ್ರತ್ಯಕ್ಷರಾದರು ಮತ್ತು ಕ್ರೋಪಾಟಕಿನರಿಗೆ ಪುನಃ ಒಳಗೆ ''ಇನ್ನೂ ಸ್ವಲ್ಪ ನೀರು'' ಎಂದು ಹೇಳಬೇಕಾಗಿ ಬಂತು. ಲವು ಸಲ ಮಾಡಬೇಕಾಗುತ್ತಿತ್ತು. ಮತ್ತು ಸೋಫಿಗೆ ರಿ ಜನರ ಬದಲು ಆರೇಳು ಜನರಿಗೆ ಅಡಿಗೆ ಮಾಡಬೇಕಾ ಅತಿಥಿ ಸತ್ಕಾರ, ಕ್ರೋಪಾಟಕಿನರ ಅತ್ಯಂತ ಪ್ರಿಯಗುಣ ದಾಗಿತ್ತು. ಅಸಂಖ್ಯಾತ ಅಗಂತುಕನೂ ಅವರ ಮನೆಯಲ್ಲಿ ! ಸಂಕೋಚವನ್ನು ಅನುಭವಿಸುತ್ತಿರಲಿಲ್ಲ.''

ಸಂಚದಲ್ಲಿ ಅನೇಕ ಜನರು ರಾಜನೈತಿಕ ಮಹಾಪುರುಷರಾಗಿದ್ದಾರೆ. ಆಗಲಿರುವರು. ಆದರೆ ಮಾನಸಿಕ ವೈಶಾಲ್ಯ, ಹಾರ್ದಿಕ ಉದಾರತೆ, ಚಾರಿತ್ರಿಕ ಸ್ವಚ್ಛತೆ ಮತ್ತು ಜೀವನದ ಉಚ್ಚತೆಯ ವಿಚಾರದಲ್ಲಿ ಕ್ರೋಪಾಟಕಿನರ ವ್ಯಕ್ತಿತ್ವಾಂತವು ಪ್ರಾಯಶಃ ಅನುಪಮವಾದು ದೆಂಬುದು ಸಿದ್ಧ. ಪ್ರಾರಂಭಿಕ ಮತ್ತು ಯೌವನದ ವರ್ಷಗಳ ಕುರಿತು ಅವರ ಜೀವನದ ಸರ್ವೋತ್ತಮ ನೈತ್ರಾಂತವು, ಅವರ ಆತ್ಮ ಚರಿತ್ರೆ ಯಾದ ''ಮೆಮೋಯರ್ಸ್ ಆಫ್ ಎ ರಿವೋಲ್ಯೂಶನಿಸ್ಟ್'' ನಿಂದ ದೊರೆಯುತ್ತದೆ. ಆದರೆ ಆ ಗ್ರಂಥದಲ್ಲಿ ಸನ್ ೧೮೭೬ರ ತನಕ ಮಾತ್ರ ವಿದೆ. ಅನಂತರವೂ ಕ್ರೋಪಾಟಕಿನರು ೪೫ ವರ್ಷ ಜೀವಿಸಿದ್ದರು. ಆದುದರಿಂದ ಅವರ ವಿಸ್ತೃತ ಜೀವನಚರಿತ್ರೆಯ ಅವಶ್ಯಕತೆಯಿತ್ತು. ಅವನ್ನು ಜಾರ್ಜ್ ವುಡ್‌ಕಾಕ್ ಮತ್ತು ಅಇವನ್ ಅವಾಕುಮೋವಿಕ್ ಎಂಬ ಹೆಸರಿನ ಇಬ್ಬರು ಗ್ರಂಥಕಾರರು ಪೂರ್ತಿಗೊಳಿಸಿದರು. (''ಪ್ರಿನ್ಸ್ ಪೀಟರ್ ಕ್ರೊಪಾಟಕಿನ್''—ಪ್ರಕಾಶಕ—ಬೋರ್ಡ್‌ಮೆನ್)

ಕ್ರೋಪಾಟ್‌ಕಿನರ ಜನ್ಮ ಸನ್ ೧೮೪೨ರಲ್ಲಾಯಿತು; ಮರಣ ೧೯೨೧ರಲ್ಲಿ. ಅವರ ಜೀವನ ಚರಿತ್ರೆಯಲ್ಲಿ ಆಕಾಲದ ರಷ್ಯದ ಒಂದು ಜೀವಂತಚಿತ್ರವು ತೋರಿಬರುತ್ತದೆ. ಅವರ ಆತ್ಮ ಚರಿತ್ರೆಯು ಹತ್ತೊಂಭತ್ತನೆಯ ಶತಮಾನದ ಸರ್ವೋತ್ತಮ ಆತ್ಮಚರಿತ್ರೆಯೆನ್ನುವಷ್ಟು ಚೆನ್ನಾಗಿ ಬರೆಯಲ್ಪಟ್ಟಿದೆ. ಅವರ ಜೀವನವು ಏಕಾಂಗಿಯಾಗಿರಲಿಲ್ಲ. ಅದು ಬಹುಅಂಗೀಯವಾಗಿದ್ದಿತು. ಕ್ರಾಂತಿಕಾರಿ ಅರಾಜಕವಾದಿಯಾದರೂ ಅವರು ಇದ್ದೇ ಇದ್ದರು; ಅಲ್ಲದೆ ಪ್ರಪಂಚದ ಭೂಗೋಳಜ್ಞರಲ್ಲಿ ಅವರು ಶಿರೋವಣಿಗಳಾಗಿದ್ದರು; ಮತ್ತು ಸಮಾಜ ವಿಜ್ಞಾನದ ಮಾನ್ಯ ಆಚಾರ್ಯರಾಗಿದ್ದರು. ರಸ್ಯಾ ಮತ್ತು ಯುರೋಪಿನ ೬೦ ವರ್ಷದ ಇತಿಹಾಸದ ಮೇಲೆ ಸಹ ಅವರ ಜೀವನದಿಂದ ವಿಶೇಷ ಪ್ರಭಾವ ಬೀಳುತ್ತದೆ.

ಮಹಾತ್ಮಾ ಗಾಂಧೀ ಮತ್ತು ಪ್ರಿನ್ಸ್‌ಕ್ರೋಪಾಟಕಿನ್

ಕ್ರೋಪಾಟಕಿನರ ಈ ಜೀವನಚರಿತ್ರೆಯನ್ನು ಓದುವಾಗ ಮಹಾಪುರುಷರಾದ ಗಾಂಧೀಜಿಯ ಮತ್ತು ಇವರ ಜೀವನ ಹಾಗೂ ದೃಷ್ಟಿಕೋಣದಲ್ಲಿರುವ ಅದ್ಭುತ ಸಾಮ್ಯವು ಸ್ಪಷ್ಟವಾಗುತ್ತದೆ. ಸಾಧನಗಳ ಪವಿತ್ರತೆಯ ಕುರಿತು ಗಾಂಧೀಜೀಯವರಷ್ಟೆ ದೃಢನಿಶ್ಚಯಿಯಾಗಿದ್ದರು. ಮೇರೀ ಗೋಲ್ಡ್‌ಸ್ಮಿಥ್ ಎನ್ನುವ ಒಬ್ಬರು ಯಹೂದೀ ಅರಾಜಕವಾದಿಗಳು ಹೀಗೆ ಬರೆದಿದ್ದಾರೆ:— "ಯಾವ ನವಯುವಕನು ಕ್ರೋಪಾಟಕಿನ್ನರನ್ನು ಸಂದರ್ಶಿಸಹೋದರೂ, ಅವನ ಮಾತನ್ನು ಅವರು ಪ್ರೇಮಪೂರ್ಣ ಮಂದಸ್ಮಿತ ಮತ್ತು ಸೌಮ್ಯಭಾವನೆಯಿಂದ ಕೇಳುತ್ತಿದ್ದರು. ಆದರೆ ಒಂದು ವಿಷಯ: ಪ್ರತಿಯೊಬ್ಬ ವಿಶ್ವಾಸೀ ಮತ್ತು ಉತ್ಸಾಹೀತರುಣನ ಕುರಿತು ಅವರ ವ್ಯವಹಾರವು ಉದಾರತೆಯಿಂದ ತುಂಬಿದ್ದಾಗಲೂ, ಸಾಧನಗಳ ಆರಿಸುವಿಕೆಯಲ್ಲಿ ಸಾಕಷ್ಟು ಕಠೋರತೆಯಿಂದಲೇ ವರ್ತಿಸುತ್ತಿದ್ದರು. ಪ್ರಚಾರದ ಕೆಲವು ರೀತಿಗಳನ್ನು ಅವರು ಸಹಿಸುತ್ತಿರಲಿಲ್ಲ. ಅನುಚಿತ ಸಾಧನಗಳ ಕುರಿತು ಚರ್ಚಿಸುತ್ತಾ ಅವರ ಸ್ವರವು ಕಠೋರವಾಗುತ್ತಿತ್ತು; ಮತ್ತು ಅನ್ಯಗಳ ನಿಂದೆಯನ್ನು ಯಾವ ಸಂಕೋಚವೂ ಇಲ್ಲದೆ ಮಾಡುತ್ತಿದ್ದರು. ''ಕೆಟ್ಟ ಸಾಧನದಿಂದಾದರೂ ತನ್ನ ಲಕ್ಷ್ಯ ಸಿದ್ಧಿಸಿದರೆ ಸರಿ'' ಎನ್ನುವ ಸಿದ್ಧಾಂತದ ಕುರಿತು ಅವರಿಗೆ ಘೋರ ತಿರಸ್ಕಾರವಿತ್ತು. ಸಂಘಟನೆಯ, ಧನಸಂಗ್ರಹದ, ವಿರೋಧಿಗಳೊಡನೆಸಗುವ ವ್ಯವಹಾರದ, ಅಥವಾ ಇತರ ಸಕ್ಷಣಗಳೊಂದಿಗೆ ಸಂಬಂಧ ಸ್ಥಾಪಿಸುವ ಸಾಧನೆಗಳ ಪವಿತ್ರತೆಯನ್ನು ಯಾರಾದರೂ ಗಣಿಸದಿದ್ದರೆ, ಅವನನ್ನು ಅವರು ತಿರಸ್ಕಾರದ ದೃಷ್ಟಿಯಿಂದ ನೋಡುತ್ತಿದ್ದರು, ಮತ್ತು ಅವನನ್ನು ಫೈಡಿತನೆಂದೆಣಿಸುತ್ತಿದ್ದರು.'' ಶ್ರೀ ಜವಾಹರಲಾಲರ ಹೇಳಿಕೆಯೊಂದು ಹೀಗಿದೆ— "ಸಾಧನಗಳ ಪವಿತ್ರತೆ''ಯ ಕುರಿತು ಲಕ್ಷಿಸಿ ಮಹಾತ್ಮಾಜಿಯವರು ರಾಜನೀತಿಯನ್ನು ಬಹಳ ಉತ್ತಮ ಮಟ್ಟಕ್ಕೆ ತಂದಿತ್ತರು. ಪ್ರಪಂಚದ ರಾಜನೀತಿಗೆ ಇದೊಂದವರ ವೈಯಕ್ತಿಕ ದಾನವಾಗಿದೆ; ಮತ್ತು ಈ ವಿಷಯದಲ್ಲಿ ಕ್ರೋಪಾಟಕಿನರು ಅವರ ಅಗ್ರಣಿಯೇ ಆಗಿದ್ದರು."

ಶಿಕ್ಷಣ, ಕೃಷಿ, ಶಾರೀರಿಕ ಶ್ರಮದ ಮಹತ್ತ್ವ ಮತ್ತು ವಿಕೇಂದ್ರೀಕರಣದ ಸಿದ್ಧಾಂತಗಳ ಕುರಿತು ಇಬ್ಬರೂ ಮಹಾಪುರುಷರ ವಿಚಾರಗಳು ಸಂಪೂರ್ಣ ಹೋಲುತ್ತವೆ. ಸನ್ ೧೯೧೮ರಲ್ಲಿ ಟಾಯಿನ್‌ಸಾಇಡಿನ ಕೆಲವು ಕಾರ್ಯಕರ್ತರು ಒಂದು ಕೃಷಿಸಂಘವನ್ನು

ಸುಮಿತ್ರೆ
(ಅಳಲು ತುಂಬಿದ ಕಂಸಿತ ಸ್ವರದಲ್ಲಿ)

ಯಾವ ಸೌಖ್ಯವ ನೆನೆದು ನುನೆವುದು
ತೀವಿರುವ ಶೋಕಾಗ್ನಿಯ.....
ಯಾವ ಮುಖವನು ಎದುರು ನಿಲ್ಲುತ
ಪಯಣ ಬಾಳಲಿ ಸುಗ್ಗಿಯ ?
ದೊರೆಯು ಬಾರದ ಊರ ಸೇರಿದ,
ಹಿರಿಯ ಜೀವ ಸಿರಿರಾಮನು.....
ತರಳೆಯೊಂದಿಗೆ ಕಾಡ ಸಾರಿಹ
ಬರಲಿಹನೆ ಬೇಗಾತನು ?
ಇಲ್ಲ ಬಾಯನು ಇಲ್ಲ ಸೀತೆಯು
ಇಲ್ಲ ಮನೆಯಲಿ ಲಕ್ಷ್ಮಣ.
ಎಲ್ಲಿ ನೋಡಿದರೆಲ್ಲ ಶೂನ್ಯವು.
ಮನೆ-ಮನಂಗಳು ಭಣ ಭಣ !

ಊರ್ಮಿಳೆ
(ಭಕ್ತಿಭರಗಳು ವ್ಯಕ್ತವಾಗುವ ಸ್ವರದಲ್ಲಿ)

ತಾಯದಿರೆ ಕಮ್ಮಿ ಹಿರಿತನವು ನನಗಿಲ್ಲ.....
ಬಲ್ಲೆನೇ ನಿಮ್ಮನಿತು ಅನುಭವದ ಸೊಲ್ಲ ?
ಆದರೆಯು ನಲ್ಲನಾಣತಿ ನುಡಿಸುತಿಹುದು.....
ನನ್ನ ಕರ್ತವ್ಯಗಳ ಎಚ್ಚರಿಸುತಿಹುದು !
ಅಳಬಾರದಂತೆ ನಾನಳಬಾರದಂತೆ.....
ಅಳುವವರ ತೆಳಲ ಸಂತಯಿಸಬೇಕಂತೆ !

ಕೌಸಲ್ಯೆ
(ಕರುಣಾ ಕಂಠದಲ್ಲಿ)

ಅಹದಹುದು ತಾಯೆ ನುಡಿಯಲ್ಲವಿದು ಸುಳ್ಳು.....
ದಹಿಸುವುದನರಿಯೆನೇ ನಿನ್ನೊಳಗನಳಲು !
ಮನದೊಳಗೆ ಉರಿಯ ಬೆಂಕಿಯನು ಹೂತಿರುವೆ,
ಎನಿತೊ ತಾಳ್ಮೆಯ ತೆರೆಯ ಪದರ ಹೊದಿಸಿರುವೆ !
ಸೌಮಿತ್ರಿಪುರಾಣತಿಯು ನಿನಗೊಂದು ಕೋಂಟೆ.....
ಎದೆಯುಳಲು ಅದನು ಭೇದಿಸಿ ಬರುವುದುಂಟೆ ?

ಊರ್ಮಿಳೆ

ಬೇಡ ಬಿಡಿ ಇನ್ನಿಂಥ ನುಡಿಗಳು.
ದೂಡಿ ನಿಮ್ಮೊಳು ದುಃಖವ.....
ಬೇಡರೇ ರವಿವಂಶ ಜಾತರು ?
ಮುನ್ನಿನವರನು ಮಿಕ್ಕುವ !
ಸತ್ಯದಾ ಸಂರಕ್ಷಣೆಯೆ ಸಂ-
ಪತ್ತಿ ರಘುಸಂತಾನಕೆ.....

ಸತ್ಯದೇವಿಗೆ ಸರಿಯೆ ಸಗ್ಗದ
ಕಂಭಿ ಊರ್ವಸಿ ಮೇನಕೆ ?
ಜನನಿಯರಿ ನಿಮ್ಮಣುಗ ತಿಳುಹಿದ
ಗುಣದ ನುಡಿಗಳನುಸುರಿಹೆ.....
ಮುನಿಯಲಾಗದು ಕ್ಷಮಿಸಿ ಹರಸುವು-
ದೆನುತೆ ನಾ ತಲೆಬಾಗಿಹೆ !
ಸೊಸೆ-ಮಗಳು ನಾನಾಗಿಹೆ !

ಕೌಸಲ್ಯಾ

ಧನ್ಯ ಧನ್ಯವು ರವಿಯ ಕುಲವು ಧನ್ಯ !
ಊರ್ಮಿಳೆಯೆ ನೀ ಸೊಸೆಯೆ ? ನಮ್ಮಗಳ ಪುಣ್ಯ !

(ಸುಮಿತ್ರೆಗೆ)

ತಂಗೆ ನೋಡಿದೊ-ನೋಡು ಧೈರ್ಯಮೇರುವನು.....
ನಿನ್ನ ಲಕ್ಷ್ಮಣನ ಸಂಸಾರಸಾರವನು !

ಸುಮಿತ್ರೆ
(ದುಃಖಭರಪೂರಣಗಾಗಿ)

ಇನ್ನೆಲ್ಲಿ ಲಕ್ಷ್ಮಣನ ಸಂಸಾರ ಸಾರ ?
ಇನ್ನು ನಾ ನೋಡುವೆನೆ ಆ ಸುಖದ ಪೂರ ?
ಪತಿಯನಗಲಿದ ಸತಿಗೆ ಸಂಸಾರವಿಹುದೆ ?
ಇಂಥ ದುರ್ದೈವದೊಳೆ ಬಾಳನೂಕುವುದೆ ?
ಒಂದಲ್ಲ, ಎರಡಲ್ಲ ವರುಷ ಹದಿನಾಲ್ಕು !
ಅಂದಿನಂವರೆಗಿಂತು ಬೆಂಕಿಯೊಳಿ ಬದುಕು !

ಊರ್ಮಿಳೆ

ತಾಯೆ ನಿಮ್ಮಯ ಮಗನ ಮಹಿಮೆಯ
ನೀವೆ ಮರೆತಿಹಿರೇನು ?
ಬೆಂಕಿಯನು ಬಾವನ್ನ ಮಾಡುವ
ಮೋಡಿಕಾರನೆ ಅತನು !
ತ್ಯಾಗದೊಳೆ ಜೀವನಿಯ ಮಹೋನ್ನತಿ
ಎಂಬುದನ್ನನ ಬಲ್ಲ.....
ಭೋಗದಾಶೆಯ ಬಿಡಿಸಿ ಬಾಳನ
ಗುರಿಯ ತೋರಿದ ನಲ್ಲ !

ಕೌಸಲ್ಯಾ

ಗುರಿಯೇನ ತೋರಿದನೆ ಸಾಮಿತ್ರಿ ನಿನಗೆ ?
ಅತನನು ಮರೆದು ನೀನಿರುವ ಬಗೆ ಹೇಗೆ ?

ಊರ್ಮಿಳೆ

ಕರ್ತವ್ಯ ಕರ್ತವ್ಯ ಕರ್ತವ್ಯ ಕರ್ತವ್ಯ !

ಲೋಕಕಲ್ಯಾಣ ಶ್ರೀರಾಮರಿಗೆ ಕರ್ತವ್ಯ !
ಪತಿಯ ಯೋಗಕ್ಷೇಮ ಜಾನಕಿಗೆ ಕರ್ತವ್ಯ !
ಶ್ರೀರಾಮ ಸೀತೆಯರ ಸೇವೆಯೇ ತನಗೆ
ಕರ್ತವ್ಯವೆಂದು ಹೇಳಿಹ ನಲ್ಲ ನನಗೆ !

ಕೌಸಲ್ಯಾ

ಇನ್ನೇನು ಹೇಳಿಹನು ನಿನ್ನ ಕರ್ತವ್ಯವನು ?

ಊರ್ಮಿಳೆ

ತಾಯದಿರೆ ತಮ್ಮ ಯೋಗಕ್ಷೇಮಗಳನು
ಆರಯ್ತುತಿರುವ ಹಿರಿಕರ್ತವ್ಯವನ್ನು
ನನ್ನ ತಲೆಯೊಳು ಹೊರಿಸಿ ಬನಕೆ ತೆರಳಿಹನು
ಪತಿಯ ಮಾತನು ಮೀರಿ ನಡೆಯಲೇ ನಾನು ?

ಕೌಸಲ್ಯಾ

ಧನ್ಯ ಧನ್ಯಳು ನೀನೆ ಊರ್ಮಿಳೆಯೆ ಧನ್ಯ
ನೀನು ಬರಿಹೆಣ್ಣಲ್ಲ ರಘುಕುಲದ ಪುಣ್ಯ !
ಜಾನಕಿಯ ಪತಿತನವದೊಂದು ರೀತಿ—
ಮಾನಿನಿಯೆ ನಿನ್ನದಿನ್ನೊಂದು ವಿಧ ನೀತಿ !
ಪತಿಗಾಗಿ ಜಾನಕಿಯು ಕಾಡ ಸೇರಿದಳು
ಪತಿಗಾಗಿ ಊರ್ಮಿಳೆಯು ನಾಡಿಗುಳಿದಿಹಳು !

ಊರ್ಮಿಳಾ

ಹೊಗಳಿಕೆಯಲ್ಲದೆ ಹರಕೆಯಾಗಲಿ ತಾಯೇ
ಸೊಗಸೊಂದಿದೀ ನಿನ್ನ್ಮ ನುಡಿಯು—
ದುಗುಡಕೆ ಎಡೆಬೇಡ, ಒಳಹೊರಗೆಲ್ಲಿಯು
ನಗುವೇ ಮೆರೆಯಲೆಲ್ಲಾ ಕಡೆಯು

ಕೌಸಲ್ಯಾ–ಸುಮಿತ್ರಾ

(ಸಂಭ್ರಮ ಭಾವದಿಂದ)

ಧನ್ಯಧನ್ಯವು ನಮ್ಮ ರವಿವಂಶ ಧನ್ಯ
ಊರ್ಮಿಳೆಯು ಬರಿಹೆಣ್ಣೆ ? ರಾಜ್ಯದಾ ಪುಣ್ಯ !

ಮೇಳಗಾತಿಯರು

ಊರ್ಮಿಳೆ ಬರಿ ಹೆಣ್ಣೆ ? ಸೂರ್ಯವಂಶದ ಪುಣ್ಯ
ಮನೆಯಲಿ ಶಾಂತಿಯ ನಿಲಿಸಿದಳು.....
ವನದರಮನೆಯಲಿ ಯೋಗಿನಿಯಂತಿದ್ದು
ದಿನಗಳ ಧ್ಯಾನದಿ ಕಳೆಯುವಳು.

ಕಾಲರಾಯನ ಚಕ್ರ ಚಲಿಸದೆ ನಿಲುವುದೆ ?
ಸೂಳು–ಸೂಳಿನ ಸುತ್ತ ಮುಗಿಸಿಹುದು.....
ಶಿಶಿರವ ಕಳೆದಿದೆ ಸುಗ್ಗಿಯ ಕರೆದಿದೆ
ಬನಕೆಲ್ಲಾ ತಳಿರನು ಮಿಗಿಸಿಹುದು.

ಕೂವೂ ಕೂವೂ ಎಂದು ಕೋಗಿಲೆಯಿದೊ ಇದೊ !
ಮಾವಿನ ಜೊಂಪಲಿ ಹಾಡುತಿದೆ
ಪೂವಿಂದ ಪೂವಿಗೆ ಬಂಡುಜಿ ತಂಡವು
ಗುಂಯೆಂದು ಮೊರೆದು ಹಾರಾಡುತಿದೆ !

ಕಿರುಗತೆಗಳು

ಶ್ರೀ. ದೇವೆಂದ್ರ ಹಳಕಾರಿ ಬಿ. ಎ. ಹೈದ್ರಾಬಾದ್

೧. ಹಲಗೆ

ಬೆಂಕಿ ಹತ್ತಿದುದರಿಂದ ಓಣಿಯೆಲ್ಲ ಸುಟ್ಟಿತು. ಬರಿಯ ಒಂದೇ-ಒಂದು ಅಂಗಡಿ ಮಾತ್ರ ಮೂಲೆಯಲ್ಲಿ ಉಳಿದಿತ್ತು. ಅದರ ಹೆಬ್ಬಾಗಿಲ ಮೇಲೆ ಒಂದು ದೊಡ್ಡ ಹಲಗೆ ಸ್ಪುಟವಾಗಿ ಕಾಣುತ್ತಿತ್ತು. 'ಇಲ್ಲಿ ಇಮಾರತಿ ಕಟ್ಟಿಸುವುದಕ್ಕಾಗಿ ಎಲ್ಲ ಸಾಮಾನು ಜೋರೆಯುತ್ತದೆ.

೨. ಜೋಕೆ

ಹಳ್ಳಿಗಾರರು ಮನೆಯ ಒಡೆಯನನ್ನು ಬಹುಕಷ್ಟದಿಂದ ಹೊರಕ್ಕೆ ಎಳೆ ತಂದರು. ಬಟ್ಟೆಗಳನ್ನು ಕೊಡುವುತ್ತ ಅವನು ಎದ್ದು ಹಳ್ಳಿಗಾರರಿಗೆ ಹೇಳಿದ: 'ಬೇಕಾದರೆ ನನ್ನನ್ನು ಕೊಲ್ಲಿರಿ. ಆದರೆ ನನ್ನ ದುಡ್ಡುದುಗ್ಗಾಣಿಗೆ ಕೈಹಚ್ಚಿದರೆ ಜೋಕೆ !'

೩. ದಯೆ

'ಅಯ್ಯೋ ನನ್ನ ಕಣ್ಣೆದುರಿಗೇ ನನ್ನ ಹರೆಯದ ಮಗಳನ್ನು ಕೊಲ್ಲಬೇಡಿ'

'ಪಾಪ....ಪಾಪ ! ಅವನ ಮಾತನ್ನೇ ಒಪ್ಪಿಬಿಡಿ. ಅವಳ ಬಟ್ಟೆ ಕಳೆದುಕೊಂಡು, ಇವನಿಗೆ ಕಾಣದಂತೆ ಮೊದಲು ಅವಳನ್ನು ಒಂದುಕಡೆ ದೂಡಿರಿ !

ಕ್ರಾಂತಿಕಾರಿ ಕ್ರೋಪಾಟಕಿನ್

(ವ್ಯಕ್ತಿ ಪರಿಚಯದ ಪೂರ್ವಾರ್ಧ)

' ಕಮಲಳ '

—ಂ●ಂ—

ಕ್ರೋಪಾಟಕಿನ್ನನ ಜೀವನ ತತ್ವಜ್ಞಾನ ಲೌಕಿಕವೆನಿಸುವಂತಹದಾದರೂ, ಅದಕ್ಕಾಗಿ ಅತ ಸ್ಥೈಯವಾದಿಯಾಗಿಯೆ ಬದುಕನ್ನು ಕಳೆದ. ಕ್ರೊಪಾಟಕಿನ್ನನ್ನು ರಷ್ಯದ ಮಹಾತ್ಮಾಗಾಂಧಿಯೆಂದು ಹೇಳಬಹುದು.

"ಜನಾಬ್ ಬ್ಲಾಡಿಮಿರ್ ಇಲಿಯಟ್, (ಲೆನಿನ್), ನವೀನ ಸತ್ಯದ ಪ್ರವಾದಿಯಾಗಬೇಕೆಂದೂ, ಹೊಸ ರಾಜ್ಯದ ಸಂಸ್ಥಾಪಕನಾಗಬೇಕೆಂದೂ ತಮ್ಮ ಆಕಾಂಕ್ಷೆಯಾಗಿರುವಾಗ, ಯಾರದೋ ಅಪರಾಧಕ್ಕಾಗಿ ಅವನ ಬಂಧು-ಬಾಂಧವರನ್ನು ಬಂಧಿಸುವಂತಹ ಭೀಭತ್ಸ ಸರಕಾರೀ ಅನಾಚಾರಗಳಿಗೆ ಮತ್ತು ಅಸಹನೀಯ ರಾಜನೈತಿಕ ರೀತಿಗಳಿಗೆ ತಮ್ಮ ಸ್ವೀಕೃತಿಯನ್ನು ಹೇಗೆ ಕೊಡಬಲ್ಲಿರಿ? ಇದರಿಂದ ತಾವು ಝಾರಶಾಹಿಯ ವಿಚಾರಗಳಿಗೆ ಅಂಟಿಕೊಂಡಿರುವಿರೆಂಬುದು ವ್ಯಕ್ತವಾಗುತ್ತದೆ. ಆದುದರಿಂದ ಪ್ರಾಯಶಃ ಆ ನಿರಪರಾಧಿಗಳನ್ನು ಹಿಡಿದು ತಾವು ತಮ್ಮ ಆತ್ಮರಕ್ಷಣೆ ಮಾಡಿಕೊಳ್ಳಲು ಬಯಸುತ್ತೀರಿ. ತಮ್ಮಂತಹ ಯುರೋಪಿಯ ಸಾಮ್ಯವಾದಿ ಅಗ್ರಣಿಗೆ ಈ ಕಾರ್ಯ (ಲಜ್ಜಾಜನಕ ರೀತಿಯಲ್ಲಿ ನಿರಪರಾಧಿಗಳ ಬಂಧನ)ವು, ಸರ್ವಥಾ ಅನಧಿಕಾರ ಚೇಷ್ಟೆಯೆನ್ನುವುದು ಹೊಳೆಯದಷ್ಟು ತಾವು ತಮ್ಮ "ಡಿಕ್ಟೇಟರ್‌ಶಿಪ್"ನ ವಿಚಾರಗಳ ಗುಲಾಮರಾಗಿ ಅಂಧರಾಗಿದ್ದೀರಿ. ತಮ್ಮ ಈ ಕಾರ್ಯವು ಭಯಂಕರ ನ್ಯೂನತೆಗಳಿಂದೆಂತೂ ತುಂಬಿಯೇ ಇದೆ; ಅಲ್ಲದೆ ಇದರಿಂದ, ಸರ್ವಥಾ ತರ್ಕವಿಹೀನವಾದ ಮೃತ್ಯುವಿನ ಭಯವು ತಮಗಿಪೆಯೆನ್ನುವುದು ವ್ಯಕ್ತವಾಗುತ್ತದೆ. ಯಾವ ಕಮ್ಯೂನಿಜಮಿನ ಒಬ್ಬ ಮಹತ್ವಪೂರ್ಣ ರಕ್ಷಕನು ಹೀಗೆ ನಂಬಿಗೆಯ ಪ್ರತಿಯೊಂದು ಭಾವನೆಯನ್ನು ಪದವಲಿತಮಾಡುತ್ತಾನೋ—ಆ ಕಮ್ಯೂನಿಜಮಿನ ವಿಷಯದಲ್ಲಿ ಏನು ಹೇಳಲಿ?"

ಯಾವ ಮಹತ್ವಪೂರ್ಣ ಪತ್ರವನ್ನು ತನ್ನ ಜೀವನದ ಅಂತಿಮ ದಿನಗಳಲ್ಲಿ (ಮರಣದ ಎರಡು ತಿಂಗಳ ಮೊದಲು) ಕ್ರೋಪಾಟಕಿನ್ ಲೆನಿನಿಗೆ ಬರೆದಿದ್ದನೋ, ಆ ಪತ್ರದ ಒಂದು ಶಕಲ. ಲೆನಿನ್ ಆ ದಿನಗಳಲ್ಲಿ ವಿಶಾಲ ರಷ್ಯಾರಾಜ್ಯದ ನಿರಂಕುಶ ಶಾಸಕನಾಗಿದ್ದನು. ಕ್ರೋಪಾಟಕಿನರು ಆಗ ಪರ್ಷ ದೇಶದಿಂದ ನಿರ್ವಾಸಿತರಾಗಿದ್ದು, ಆ ಮೇಲೆ ಳ ವರ್ಷ ತನ್ನ ಮಾತೃಭೂಮಿಯ ಉಸಿರು ಕಟ್ಟಿಸುವಂತಹ ವಾತಾವರಣದಲ್ಲಿ ಕಳೆದು, ಪರಲೋಕಪ್ರಯಾಣದ ಸಿದ್ಧತೆಯನ್ನು ಮಾಡುತ್ತಿದ್ದರು. ಯಾರು ಅನ್ಯಾಯದೊಂದಿಗೆ ಒಪ್ಪಂದ ಮಾಡಿಕೊಳ್ಳುವುದನ್ನು ಎಂದೂ ಯೋಗ್ಯವೆಂದೆಣಿಸಲಿಲ್ಲವೋ, ಯಾರು ಸಾಧನೆ ಮತ್ತು ಸಾಧ್ಯಗಳೆರಡರಲ್ಲಿಯೂ ಪವಿತ್ರತೆಯು ಸಮಾನವಾಗಿರಬೇಕೆಂದು ಬಯಸುತ್ತಿದ್ದರೋ, ಯಾವುದರ ಉದಾಹರಣೆಯು ಪ್ರಪಂಚದ ರಾಜನೈತಿಕ ಕಾರ್ಯಕರ್ತರ ಇತಿಹಾಸದಲ್ಲಿ ದುರ್ಲಭವೋ, ಅಂತಹ ಪ್ರಾಮಾಣಿಕತೆ ಮತ್ತು ಅಪರಿಗ್ರಹದ ದೃಷ್ಟಾಂತವನ್ನು ಯಾರು ತೋರಿದರೋ, ಹತ್ತೊಂಬತ್ತು ಮತ್ತು ಇಪ್ಪತ್ತನೆಯ ಶತಮಾನದ ಆ ಮಹಾಪುರುಷನ ಆತ್ಮವು ಈ ಶಬ್ದಗಳಲ್ಲಿ ನುಡಿಯುತ್ತಿದೆ.

ಮಂತ್ರಿತ್ವಕ್ಕಿಂತ ಮೆಟ್ಟುಗಳ ಪಾಲಿಶ್!

ಕೆರೆನ್ಸ್ಕೀಯು ಕ್ರೋಪಾಟಕಿನನೊಡನೆ "ತಾವು ನಮ್ಮ ಸರಕಾರದ ಮಂತ್ರಿಮಂಡಲದಲ್ಲಿ ಯಾವುದೊಂದು ಪದವಿಯನ್ನಾರಿಸಿದರೂ, ಅದೇ ತನಗೆ ಕೊಡಲ್ಪಡುವುದು" ಎಂದು ನಿವೇದಿಸಿಕೊಂಡಾಗ ಕ್ರೋಪಾಟಕಿನರು "ಮಂತ್ರಿತ್ವದ ಕಾರ್ಯಕ್ಕಿಂತ ಮೆಟ್ಟುಗಳ ಮೇಲೆ ಪಾಲಿಶ್ ಮಾಡುವ ಚಮ್ಮಾರನ ಕೆಲಸವನ್ನು ನಾನು ಅಧಿಕ ಆದರಣೀಯ ಮತ್ತು ಪ್ರಯೋಜನಕಾರಿಯೆಂದು ತಿಳಿಯುತ್ತೇನೆ" ಎಂದು ಉತ್ತರ ಕೊಟ್ಟರು. ಹಾಗೆಯೇ ಹತ್ತು ಸಾವಿರ ರೂಬೆಲಿನ ಫೆನ್ಯನಿನ ಪ್ರಸ್ತಾಪವನ್ನು ತಿರಸ್ಕರಿಸಿದರು ಮತ್ತು ಝಾರನ ಶೀತಕಾಲೀನ ಕಟ್ಟಡದ ವಾಸವನ್ನೂ ಪೂರ್ಣ ಉಪೇಕ್ಷಿಸಿದರು. ಇವಾದರೋ ಲೆನಿನಿನ ಮೊದಲಿನ ಶಾಸಕರ ಕಾಲದ ಮಾತಾಯಿತು. ಸಾಮ್ಯವಾದೀ ಸರಕಾರದ ಶಿಕ್ಷಣಮಂತ್ರಿ ಅನಾಚರಸ್ಕೀಯು ಕ್ರೋಪಾಟಕಿನರಿಗೆ "ತಾವು ಸರಕಾರದಿಂದ ಎರಡೂವರೆ ಲಕ್ಷ ರೂಬೆಲ್‌ಗಳನ್ನು ತೆಗೆದುಕೊಂಡು ತಮ್ಮ ಪುಸ್ತಕಗಳನ್ನು ಮುದ್ರಿಸುವ ಅಧಿಕಾರವನ್ನು ನಮಗೆ ಕೊಡಿರಿ" ಎಂದು ಬರೆದಾಗ, ಕ್ರೋಪಾಟಕಿನರು "ನಾನೆಂದೂ ರಾಜ್ಯದಿಂದ ಹಣ ಪಡೆದಿಲ್ಲ. ಮತ್ತು ಈಗಲಾದರೂ ಸರಕಾರೀ ಸಹಾಯವನ್ನು ಸ್ವೀಕರಿಸಲಾರೆ" ಎಂದು ಉತ್ತರವಿತ್ತರು. ಇದು ಕ್ರೋಪಾಟಕಿನರ ವೈದ್ಧಾವಸ್ಥೆಗೆ ಯೋಗ್ಯವಾದ—ತಕ್ಕಷ್ಟು ಭೋಜನವಿಲ್ಲದ,

ಸಾಕಷ್ಟು ಬೆಳಕಿಲ್ಲದ, ಸಹಾಯಕರಾರೂ ಇಲ್ಲದ, ದಿನಗಳ ಮಾತು.

ಹಾಗಾದರೆ ಆದರ್ಶವಾದವನ್ನು ಪರಮಾವಧಿಗೇರಿಸಿದ ಕ್ರೋಪಾಟಕಿನರು, ತಮ್ಮ ಜೀವನವನ್ನು ಹೇಗೆ ನಡೆಸುತ್ತಿದ್ದರೆಂಬ ಪ್ರಶ್ನೆಯೇಳುತ್ತದೆ. ನಿರ್ವಾಸಿತರಾಗಿದ್ದ ೪೧ ವರ್ಷವನ್ನು ತಮ್ಮ ಲೇಖನಿಯ ಬಲದಿಂದಲೇ ಕಳೆದರು. ಅದರಲ್ಲೂ ಅರಾಜಕವಾದೀ ಲೇಖನಗಳಿಂದ ಒಂದು ಪೈ ಸಹ ಸಂಪಾದಿಸಲಿಲ್ಲ. ಅವರು ಅತ್ಯಂತ ಉಚ್ಚಕೋಟಿಯ ವೈಜ್ಞಾನಿಕರಾಗಿದ್ದರು. ಆದುದರಿಂದ ವೈಜ್ಞಾನಿಕ ಲೇಖನ ಮತ್ತು ಟಿಪ್ಪಣಿಗಳಿಂದ ಸ್ವಲ್ಪ ಪ್ರತಿಫಲ ದೊರೆಯುತ್ತಿತ್ತು. ಅವರು ತಮ್ಮ ಆತ್ಮಚರಿತ್ರೆಯಲ್ಲಿ ಅತ್ಯಂತ ಸರಳತೆಯಿಂದ ಬರೆದಿರುತ್ತಾರೆ— "ರಸ್ಯಾದಿಂದ ತಕ್ಕಷ್ಟು ಸಮಾಚಾರ ಬಂದರೆ, ಅಥವಾ ವೈಜ್ಞಾನಿಕ ವಿಷಯಗಳಲ್ಲಿಯ ನನ್ನ ಟಿಪ್ಪಣಿ ಸ್ವೀಕೃತವಾದರೆ, ರೊಟ್ಟಿ-ಚಹದೊಂದಿಗೆ ಬೆಣ್ಣೆ ಸಹ ಸಿಗುತ್ತಿತ್ತು; ಇಲ್ಲವಾದರೆ ಒಣರೊಟ್ಟಿಯಿಂದಲೇ ಜೀವಿಸಬೇಕಿತ್ತು."

ಅದ್ಭುತ ಅತಿಥ್ಯ

ಸುಪ್ರಸಿದ್ಧ ಲೇಖಕ ಫ್ರೆಂಕ್ ಹೆರಿಸನು ಕ್ರೋಪಾಟಕಿನರ ಯುರೋಪಿನ ದಿನಗಳ ಆತಿಥ್ಯದ ಒಂದು ಉತ್ತಮ ಶಬ್ದಚಿತ್ರವನ್ನು ಚಿತ್ರಿಸಿದ್ದಾರೆ.— "ಕ್ರೋಪಾಟಕಿನರ ಧರ್ಮಪತ್ನಿ 'ಸೋಫೀ', ಪತಿ, ಪುತ್ರಿ ಮತ್ತು ತನಗಾಗಿ ಅಡಿಗೆ ಮಾಡುತ್ತಿದ್ದಾಗ ಅಕಸ್ಮಾತ್ ಅತಿಥಿ ಮಹಾಶಯರೊಬ್ಬರು ಆಗಮಿಸಿದರು; ಕ್ರೋಪಾಟಕಿನರು ಒಡನೆ ಒಳಗೆ ಹೋಗಿ— "ಸೋಫೀ, ಸ್ವಲ್ಪ ತೋವೆಗೆ ತುಸು ನೀರು ಸೇರಿಸು" ಎಂದರು. ಸ್ವಲ್ಪ ಹೊತ್ತಿನ ಅನಂತರ ಮತ್ತೊಬ್ಬ ಅತಿಥಿ ದೇವರು ಪ್ರತ್ಯಕ್ಷರಾದರು ಮತ್ತು ಕ್ರೋಪಾಟಕಿನರಿಗೆ ಪುನಃ ಒಳಗೆ ಹೋಗಿ "ಇನ್ನೂ ಸ್ವಲ್ಪ ನೀರು" ಎಂದು ಹೇಳಬೇಕಾಗಿ ಬಂತು. ಹೀಗೆ ಕೆಲವು ಸಲ ಮಾಡಬೇಕಾಗುತ್ತಿತ್ತು. ಮತ್ತು ಸೋಫಿಗೆ ಎರಡೂವರೆ ಜನರ ಬದಲು ಆರೇಳು ಜನರಿಗೆ ಅಡಿಗೆ ಮಾಡಬೇಕಾಗುತ್ತಿತ್ತು. ಅತಿಥಿ ಸತ್ಕಾರ, ಕ್ರೋಪಾಟಕಿನರ ಅತ್ಯಂತ ಪ್ರಿಯಗುಣಗಳಲ್ಲೊಂದಾಗಿತ್ತು. ಅಪರಿಚಿತ ಆಗಂತುಕನೂ ಅವರ ಮನೆಯಲ್ಲಿ ಯಾವುದೇ ಸಂಕೋಚವನ್ನು ಅನುಭವಿಸುತ್ತಿರಲಿಲ್ಲ."

ಪ್ರಪಂಚದಲ್ಲಿ ಅನೇಕ ಜನರು ರಾಜನೈತಿಕ ಮಹಾಪುರುಷರಾಗಿದ್ದಾರೆ. ಅಗಲಿರುವರು. ಆದರೆ ಮಾನಸಿಕ ವೈಶಾಲ್ಯ, ಹಾರ್ದಿಕ ಉದಾರತೆ, ಚಾರಿತ್ರಿಕ ಸ್ವಚ್ಛತೆ ಮತ್ತು ಜೀವನದ ಉಚ್ಚತೆಯ ವಿಚಾರದಲ್ಲಿ ಕ್ರೋಪಾಟಕಿನರ ವ್ಯಕ್ತಿತ್ವಾಂತರವು ಪ್ರಾಯಶಃ ಅನುಪಮವಾದುದೆಂಬುದು ಸಿದ್ಧ. ಪ್ರಾರಂಭಿಕ ಮತ್ತು ಯೌವನದ ವರ್ಷಗಳ ಕುರಿತು ಇವರ ಜೀವನದ ಸರ್ವೋತ್ತಮ ವೃತ್ತಾಂತವು, ಅವರ ಆತ್ಮಚರಿತ್ರೆಯಾದ "ಮೆಮೋಯರ್ಸ್ ಆಫ್ ಎ ರಿವೋಲ್ಯೂಶನಿಸ್ಟ್" ನಿಂದ ದೊರೆಯುತ್ತದೆ. ಆದರೆ ಆ ಗ್ರಂಥದಲ್ಲಿ ಸನ್ ೧೮೭೨ರ ತನಕ ಮಾತ್ರ ವಿವೆ. ಅನಂತರವೂ ಕ್ರೋಪಾಟಕಿನರು ೪೮ ವರ್ಷ ಜೀವಿಸಿದ್ದರು. ಆದುದರಿಂದ ಅವರ ವಿಸ್ತೃತ ಜೀವನಚರಿತ್ರೆಯ ಅವಶ್ಯಕತೆಯಿತ್ತು. ಅವನ್ನು ಜಾರ್ಜ್ ವುಡ್‌ಕಾಕ್ ಮತ್ತು ಅಇವನ್ ಅವಾಕುಮೋವಿಕ್ ಎಂಬ ಹೆಸರಿನ ಇಬ್ಬರು ಗ್ರಂಥಕಾರರು ಪೂರ್ತಿಗೊಳಿಸಿದರು. ("ಪ್ರಿನ್ಸ್ ಪೀಟರ್ ಕ್ರೋಪಾಟಕಿನ್"—ಪ್ರಕಾಶಕ—ಬೋರ್ಡ್‌ಮನ್)

ಕ್ರೋಪಾಟ್‌ಕಿನರ ಜನ್ಮ ಸನ್ ೧೮೪೨ರಲ್ಲಾಯಿತು; ಮರಣ ೧೯೨೧ರಲ್ಲಿ. ಅವರ ಜೀವನ ಚರಿತ್ರೆಯಲ್ಲಿ ಆಕಾಲದ ರಸ್ಯದ ಒಂದು ಜೀವಂತಚಿತ್ರವು ತೋರಿಬರುತ್ತದೆ. ಅವರ ಆತ್ಮ ಚರಿತ್ರೆಯು ಹತ್ತೊಂಭತ್ತನೆಯ ಶತಮಾನದ ಸರ್ವೋತ್ತಮ ಆತ್ಮಚರಿತ್ರೆಯೆನ್ನುವಷ್ಟು ಚೆನ್ನಾಗಿ ಬರೆಯಲ್ಪಟ್ಟಿದೆ. ಅವರ ಜೀವನವು ಏಕಾಂಗಿಯಾಗಿರಲಿಲ್ಲ. ಅದು ಬಹುಅಂಗೀಯವಾಗಿದ್ದಿತು. ಕ್ರಾಂತಿಕಾರಿ ಅರಾಜಕವಾದಿಯಾದರೂ ಅನರು ಇದ್ದೇ ಇದ್ದರು; ಅಲ್ಲದೆ ಪ್ರಪಂಚದ ಭೂಗೋಳಜ್ಞರಲ್ಲಿ ಅವರು ಶಿರೋವಣಿಗಳಾಗಿದ್ದರು; ಮತ್ತು ಸಮಾಜ ವಿಜ್ಞಾನದ ಮಾನ್ಯ ಆಚಾರ್ಯರಾಗಿದ್ದರು. ರಸ್ಯಾ ಮತ್ತು ಯುರೋಪಿನ ೭೦ ವರ್ಷದ ಇತಿಹಾಸದ ಮೇಲೆ ಸಹ ಅವರ ಜೀವನದಿಂದ ವಿಶೇಷ ಪ್ರಭಾವ ಬೀಳುತ್ತದೆ.

ಮಹಾತ್ಮಾ ಗಾಂಧೀ ಮತ್ತು ಪ್ರಿನ್ಸ್‌ಕ್ರೋಪಾಟಕಿನ್

ಕ್ರೋಪಾಟಕಿನರ ಈ ಜೀವನಚರಿತ್ರೆಯನ್ನು ಓದುವಾಗ ಮಹಾಪುರುಷರಾದ ಗಾಂಧೀಜಿಯ ಮತ್ತು ಇವರ ಜೀವನ ಹಾಗೂ ದೃಷ್ಟಿಕೋಣದಲ್ಲಿರುವ ಅದ್ಭುತ ಸಾಮ್ಯವು ನೈಕ್ಷವಾಗುತ್ತದೆ. ಸಾಧನಗಳ ಪವಿತ್ರತೆಯ ಕುರಿತು ಗಾಂಧೀಜೀಯವರಷ್ಟೆ ದೃಢನಿಶ್ಚಯಿಯಾಗಿದ್ದರು. ಮೇರೀ ಗೋಲ್ಡ್‌ಸ್ಮಿಥ್ ಎನ್ನುವ ಒಬ್ಬರು ಯಹೂದೀ ಅರಾಜಕವಾದಿಗಳು ಹೀಗೆ ಬರೆದಿದ್ದಾರೆ:— "ಯಾವ ನವಯುವಕನು ಕ್ರೋಪಾಟಕಿನ್ನರನ್ನು ಸಂದರ್ಶಿಸಲೋದರೂ ಅವನ ಮಾತನ್ನು ಅವರು ಪ್ರೇಮಪೂರ್ಣ ಮಂದಸ್ಮಿತ ಮತ್ತು ಸೌಮ್ಯಭಾವನೆಯಿಂದ ಕೇಳುತ್ತಿದ್ದರು. ಅದರೆ ಒಂದು ವಿಷಯ: ಪ್ರತಿಯೊಬ್ಬ ವಿಶ್ವಾಸೀ ಮತ್ತು ಉತ್ಸಾಹೀತರುಣನ ಕುರಿತು ಅವರ ವ್ಯವಹಾರವು ಉದಾರತೆಯಿಂದ ತುಂಬಿದ್ದಾಗಲೂ, ಸಾಧನಗಳ ಆರಿಸುವಿಕೆಯಲ್ಲಿ ಸಾಕಷ್ಟು ಕಠೋರತೆಯಿಂದಲೇ ವರ್ತಿಸುತ್ತಿದ್ದರು. ಪ್ರಚಾರದ ಕೆಲವು ರೀತಿಗಳನ್ನು ಅವರು ಸಹಿಸುತ್ತಿರಲಿಲ್ಲ. ಅನುಚಿತ ಸಾಧನಗಳ ಕುರಿತು ಚರ್ಚಿಸುತ್ತಾ ಅವರ ಸ್ವರವು ಕಠೋರವಾಗುತ್ತಿತ್ತು; ಮತ್ತು ಅನ್ಯರಗಳ ನಿಂದೆಯನ್ನು ಯಾವ ಸಂಕೋಚವೂ ಇಲ್ಲದೆ ಮಾಡುತ್ತಿದ್ದರು. "ಕೆಟ್ಟ ಸಾಧನದಿಂದಾದರೂ ತನ್ನ ಲಕ್ಷ್ಯ ಸಿದ್ಧಿಸಿದರೆ ಸರಿ" ಎನ್ನುವ ಸಿದ್ಧಾಂತದ ಕುರಿತು ಅವರಿಗೆ ಘೋರ ತಿರಸ್ಕಾರವಿತ್ತು. ಸಂಘಟನೆಯ, ಧನಸಂಗ್ರಹದ, ವಿರೋಧಿಗಳೊಡನೆಸಗುವ ವ್ಯವಹಾರದ, ಅಥವಾ ಇತರ ಪಕ್ಷಗಳೊಂದಿಗೆ ಸಂಬಂಧ ಸ್ಥಾಪಿಸುವ ಸಾಧನೆಗಳ ಪವಿತ್ರತೆಯನ್ನು ಯಾರಾದರೂ ಗಣಿಸದಿದ್ದರೆ, ಅವನನ್ನು ಅವರು ತಿರಸ್ಕಾರದ ದೃಷ್ಟಿಯಿಂದ ನೋಡುತ್ತಿದ್ದರು, ಮತ್ತು ಅವನನ್ನು ಧೃಡಚಿತನೆಂದೆಣಿಸುತ್ತಿದ್ದರು." ಶ್ರೀ ಜವಾಹರಲಾಲರ ಹೇಳಿಕೆಯೊಂದು ಹೀಗಿದೆ— "ಸಾಧನಗಳ ಪವಿತ್ರತೆ"ಯ ಕುರಿತು ಲಕ್ಷಿಸಿ ಮಹಾತ್ಮಾಜಿಯನರು ರಾಜನೀತಿಯನ್ನು ಬಹಳ ಉತ್ತಮ ಮಟ್ಟಕ್ಕೆ ತಂದಿತ್ತರು. ಪ್ರಪಂಚದ ರಾಜನೀತಿಗೆ ಇದೊಂದವರ ವೈಯಕ್ತಿಕ ದಾನವಾಗಿದೆ; ಮತ್ತು ಈ ವಿಷಯದಲ್ಲಿ ಕ್ರೋಪಾಟಕಿನರು ಅವರ ಅಗ್ರಣಿಯೇ ಆಗಿದ್ದರು."

ಶಿಕ್ಷಣ, ಕೃಷಿ, ಶಾರೀರಿಕ ಶ್ರಮದ ಮಹತ್ತ್ವ ಮತ್ತು ವಿಕೇಂದ್ರೀಕರಣದ ಸಿದ್ಧಾಂತಗಳ ಕುರಿತು ಇಬ್ಬರೂ ಮಹಾಪುರುಷರ ವಿಚಾರಗಳು ಸಂಪೂರ್ಣ ಹೋಲುತ್ತವೆ. ಸನ್ ೧೯೧೭ರಲ್ಲಿ ಟಾಯಿನ್ ಸಾಇಡಿನ ಕೆಲವು ಕಾರ್ಯಕರ್ತರು ಒಂದು ಕೃಷಿಸಂಘವನ್ನು

ಸ್ಥಾಪಿಸಿ ಬೇಸಾಯ ಮಾಡಲು ಬಯಸಿದಾಗ, ಕ್ರೋಪಾಟಕಿನರು ಅವರಿಗೊಂದು ಪತ್ರ ಬರೆದು ಅವರನ್ನು ಪ್ರೋತ್ಸಾಹಿಸಿದ್ದರು; ಮತ್ತು ಆ ಮಾರ್ಗದ ಬಾಧೆಗಳನ್ನು ಕುರಿತು ಎಚ್ಚರಿಸಿದ್ದರು. ಸಣ್ಣ ಪಂಗಡಗಳಲ್ಲಿ ಜಗಳಗಳಾಗುತ್ತವೆಂದೂ, ನಗರದ ಕಾರ್ಯಕರ್ತರಿಗೆ ಬೇಸಾಯ ಮಾಡಲು ಕಷ್ಟವಾಗುವುದೆಂದೂ, ಅಲ್ಲದೆ ಆರ್ಥಿಕ ಸಂಪತ್ತಿನ ಕೊರತೆ ಬೇರೆ ಇರುವುದೆಂದೂ ಮತ್ತು ಸಂನ್ಯಾಸತ್ವದ ಭಾವನೆಯು ತಪ್ಪು ದಾರಿಯಲ್ಲಿ ಒಯ್ಯುವುದೆಂದೂ ಅವರು ತಿಳಿಸಿದ್ದರು ಅನಂತರ ಅವರು ಹೀಗೆ ಬರೆದಿದ್ದರು:— " ಕೃಷಿಯ ಕೆಲಸವು ನಿಮಗೆ ಆಕರ್ಷಕವಾಗುವುದಾದರೆ ಅದನ್ನೇ ಸ್ವೀಕರಿಸಿರಿ. ನಿಮಗಿದರಲ್ಲಿ ನಿಮಗಿಂತ ಮೊದಲಿನವರಿಗಿಂತ ಸಫಲತೆಯ ಆಕೆಯು ಅಧಿಕವಿದೆ. ಕಣಿನೆಯೆಂದರೆ ಸಹಾನುಭೂತಿಯು ಸಿಕ್ಕಿದೆಯೇ ಸಿಕ್ಕುವುದು. ಮತ್ತು ನನ್ನ ಸಹಾನುಭೂತಿ ಯಾದರೆಲ್ಲೋ ಎಡೆಬಿಡದೆ ನಿಮ್ಮೊಂದಿಗೆ. " ಇದರ ಮೊದಲಿನ ಒಂದು ಪತ್ರದಲ್ಲಿ ಕ್ರೋಪಾಟಕಿನರು ತನ್ನ ಮಿತ್ರ ರೋಬಿನರಿಗೆ ಬರೆದಿದ್ದರು: " ಬೌದ್ಧಿಕ ಶ್ರಮ ಮಾಡುತ್ತಾ ನಾನು ದಣಿದಿದ್ದೇನೆ. ನನ್ನ ಲೇಖನಿಯ ಮುಖಾಂತರ ಜೀವಿಸುವುದು ನನಗೆ ಕಷ್ಟವಾಗುತ್ತಿದೆ. ನಾನದರ ಭಾರದಿಂದ ಒತ್ತಲ್ಪಡುತ್ತಿದ್ದೇನೆ. ಇದರ ಬದಲಾಗಿ ನಾನು ತರಕಾರಿಯನ್ನಾಗಲೀ ಧಾನ್ಯವನ್ನಾಗಲೀ ಬೆಳೆಸುತ್ತಿದ್ದರೆ ಇತರರಿಗೂ ತುಸು ಕಲಿಸುತ್ತಿದ್ದೆ. "

ಈಗ ಕ್ರೋಪಾಟಕಿನರ ಈ ಪತ್ರವನ್ನು ೧೯೩೦ರಲ್ಲಿ ಮಹಾತ್ಮಾಜೀಯವರು ಪಂಡಿತ್ ತೋತಾರಾಮಜೀ ಸನಾಢ್ಯರಿಗೆ ಬರೆದ ಪತ್ರದೊಂದಿಗೆ ಹೋಲಿಸಿ. ಆ ಪತ್ರದ ಪ್ರತಿಲಿಪಿಯು ಹೀಗಿದೆ:—" ಬಂಧು ವರ್ಯ ತೋತಾರಾಮ್‌ಜೀ.....ನಮಗೆ ಬೇಕಾಗುವಷ್ಟು ಹಣ್ಣು ಮತ್ತು ತರಕಾರಿಯನ್ನು ಉತ್ಪಾದಿಸಬೇಕೆಂಬುದೇ ನನ್ನ ಆಕಾಂಕ್ಷೆ: ಗೋಮಾತೆಗಾಗಿ ಹುಲ್ಲನ್ನೂ, ಆಶ್ರಮಕ್ಕಾಗಿ ಧಾನ್ಯವನ್ನೂ ಬೆಳೆಸಿದೆವಾದರೆ ಕೃಷಿಯು ಪೂರ್ಣ ಆದರ್ಶವನ್ನು ನಾವು ಸೇರಿದಂತೆಯೇ. ಅದನ್ನೆ ಇವೆಲ್ಲವೂ ಮೂರ್ಖನ ಬಕವಾದವೆನ್ನುವುದನ್ನು ನಾನು ಬಲ್ಲೆನು. ಗದ್ದೆಯ ಕೆಲಸವನ್ನು ಎಲ್ಲದಕ್ಕಿಂತ ಕಮ್ಮಿ ಮಾಡಿ, ಆ ವಿಷಯದಲ್ಲಿ ಮಾತನ್ನು ಎಲ್ಲದಕ್ಕಿಂತಲೂ ಹೆಚ್ಚು ಆಡಿದನು. ಏನು ಮಾಡಲಿ ? ಬೇಸಾಯವೂ ಅರ್ಧ ಪ್ರಾಯ ಕಳೆದ ಮೇಲೆ ಮಾಡುವ ವಿಚಾರ ಬಂದ ವಿಷಯಗಳಲ್ಲಿಯೇ ಇದೆ— ಬಾಪೂ.—ಎರಡೂ ಪತ್ರಗಳಲ್ಲಿ ಎಷ್ಟು ಹೋಲಿಕೆಯಿದೆ ! ಕ್ರೋಪಾಟಕಿನರು ಕೃಷಿಯ ವಿಷಯದಲ್ಲಿಯೂ ಸಂಶೋಧನೆಯನ್ನೆಸಗಿದ್ದರು. ಅವರು ಫ್ರಾನ್ಸಿನ ಜೈಲಿನಲ್ಲಿದ್ದಾಗ ಸರಕಾರವು ಅವರಿಗೆ ಅಪರ ಕೃಷಿ ಸಂಬಂಧವಾದ ಸಂಶೋಧನೆಗಳನ್ನು ಮಾಡಲು ಒಂದು ಗದ್ದೆಯನ್ನು ಕೊಟ್ಟಿದ್ದಿತು. ಅಲ್ಲಿ ಅವರು ಮಾಡಿದ ಅನುಸಂಧಾನವು ಕೃಷಿಜಗತ್ತಿನಲ್ಲೇ ಒಂದು ಕ್ರಾಂತಿಯನ್ನುಂಟು ಮಾಡಿತೆಂದು ಹೇಳಲ್ಪಡುತ್ತದೆ. ಈ ಪ್ರಯೋಗಗಳ ಆಧಾರದಿಂದಲೇ ಅವರು ತನ್ನ ಪ್ರಸಿದ್ಧ ಪುಸ್ತಕ " ಫೀಲ್ಡ್, ಫೆಕ್ಟರೀ, ಎಂಡ್ ವರ್ಕ್‌ಶಾಪ್ " ಬರೆದರು ವಾರ್ಧಾಶಿಕ್ಷಣದ ಅನೇಕ ಮೂಲ ಸಿದ್ಧಾಂತಗಳು ಈ ಪುಸ್ತಕದಲ್ಲಿವೆ.

"ಕ್ರೋಪಾಟಕಿನ್ ಮತ್ತು ಅವರ ಸಂಗಡಿಗರೊಳಗೆ ಆತಂಕವಾದದ ಕುರಿತು ತುಂಬಾ ಮತಭೇದವಿತ್ತು" ಎಂದು ಅವರ ಜೀವನಚರಿತ್ರೆ ಲೇಖಕರು ಬರೆದಿದ್ದಾರೆ. ಸ್ವತಹ ಕ್ರೋಪಾಟಕಿನರೇ ಒಂದೆಡೆ ಹೀಗೆ ಬರೆದಿದ್ದಾರೆ— "ಆತಂಕದ ಗೌರವವನ್ನು ಒಂದು ಸಿದ್ಧಾಂತದ ರೂಪದಲ್ಲಿ ಮಾಡುವುದು ಮೂರ್ಖತೆಯಿಂದ ತುಂಬಿದೆಯೆಂದು ಹೇಳುವುದು ಸಾಧಾರಣತಃ ಸರಿಯಾಗಿದೆ." ಈ ಕುರಿತು ಸನ್ ೧೯೧೩ರ ಒಂದು ಮಹತ್ವಪೂರ್ಣ ಘಟನೆಯು ಉಲ್ಲೇಖನೀಯವಾಗಿದೆ. ಕಲ್ಲಿದ್ದಲಿನ ಗಣಿಗಳಲ್ಲಿ ಮುಷ್ಕರವಾಗಿದ್ದಿತು. ವಿಲಾಯತಿಯ ಕೂಲಿಕಾರ ಮುಖಂಡರು ಒಂದು ಹೋಟೆಲಿನಲ್ಲಿ ಸೇರಿದ್ದರು; ಅಲ್ಲಿಗೆ ಕ್ರೋಪಾಟಕಿನರಿಗೂ ಆಮಂತ್ರಣವಿತ್ತಿದ್ದರು. ಗಣಿಯ ಕೆಲಸಗಾರರ ಕಷ್ಟಗಳ ಕುರಿತು ಚರ್ಚಿಸುತ್ತಿದ್ದಾಗ ಎಲ್ಲರೂ, ಒಬ್ಬರು ಇನ್ನೊಬ್ಬರ ವಿಷಯದಲ್ಲಿ ಸಮ್ಮತಿಯಿಂದಿದ್ದರು. ಅದರ ಪರಿಹಾರದ ವಿಷಯವು ಚರ್ಚಿಸಲ್ಪಟ್ಟಾಗ ಕ್ರೋಪಾಟಕಿನರ 'ಶಾಂತಿಪ್ರಿಯತೆ"ಯು ಮೇಜಿನ ಮೇಲೆ ವಿಸ್ಫೋಟದ ಕೆಲಸವನ್ನೆಸಗಿತು. ಕೂಲಿಕಾರದಳದ ಎಲ್ಲಾ ಮುಖಂಡರು ಸರಕಾರದ ವಿರುದ್ಧ ಕಠೋರ ಉಪಾಯವನ್ನು ಕಾರ್ಯರೂಪಕ್ಕೆ ತರುವಂಥವರಿದ್ದರು. ಇದರ ವಿರುದ್ಧವಾಗಿ ಕ್ರೋಪಾಟಕಿನರು "ನಮಗೆ ಸತ್ಯಾಗ್ರಹ, ಮಧ್ಯೆ ಮಾರ್ಗ, ಮತ್ತು ಪ್ರಚಾರದಿಂದ ಕಾರ್ಯಸಾಧಿಸಿಕೊಳ್ಳಬೇಕು" ಎನ್ನುತ್ತಿದ್ದರು. ಈ ವಾದ-ವಿವಾದದ ಪರಿಣಾಮವಾಗಿ ಆ ಸಭೆಯು ಭಂಗವಾಯಿತು. 'ಟಾಮಸ್ ಮೆನ್' ಎನ್ನುವ ನೆಕೂಲಿಕಾರ ಮುಖಂಡನು ಆಗಾಗ ಬೊಬ್ಬಿಡುತ್ತಿದ್ದನು:—"ನಮಗೆ ವಿಧ್ವಂಸ ರೀತಿಯನ್ನು ಆಶ್ರಯಿಸಬೇಕು, ವಸ್ತುಗಳನ್ನು ನಾಶಪಡಿಸಬೇಕು; ಅತ್ಯಾಚಾರಿಗಳನ್ನು ಕೊಸೆಗೊಳಿಸಬೇಕು." ಆದರೆ ತುಸು ಶಾಂತಿಯಾಗುತ್ತಲೇ ಪ್ರಿನ್ಸ್ ಕ್ರೋಪಾಟಕಿನರು ತನ್ನ ವೈದೇಶಿಕ ಶಬ್ದಗಳಲ್ಲಿ ಬಹಳ ವಿನಮ್ರತೆಯಿಂದ ಸದಾ ಹೀಗೆ ಹೇಳುವುದು ಕೇಳಿಬರುತ್ತಿತ್ತು— "ಇಲ್ಲ, ವಿನಾಶವಲ್ಲ; ನಮಗೆ ನಿರ್ಮಾಣ ಮಾಡಲಿಕ್ಕಿದೆ; ನಮಗೆ ಮನುಷ್ಯರ ಹೃದಯವನ್ನು ನಿರ್ಮಾಣ ಮಾಡಲಿಕ್ಕಿದೆ; ನಮಗೆ ಈಶ್ವರ ರಾಜ್ಯವನ್ನು ನಿರ್ಮಾಣ ಮಾಡಲಿಕ್ಕಿದೆ." ಈ ಶಬ್ದಗಳಾದರೋ ಪೂರ್ಣ ಗಾಂಧಿಜೀಯವರ ಶಬ್ದಗಳಂತೆಯೇ ತೋರುತ್ತವೆ. ಮತ್ತು ಆ ದಿನಗಳಲ್ಲಿ— ೧೯೨೩ರಲ್ಲಿ— ಮಹಾತ್ಮಾಜೀಯವರು ದಕ್ಷಿಣಾಫ್ರಿಕಾದಲ್ಲಿ ವಕಾಲತ್ತಿಗಾಗಿ ಪ್ರವೇಶಿಸಿದ್ದರಷ್ಟೇ.

ಕ್ರೋಪಾಟಕಿನರ ಜೀವನಚರಿತ್ರೆಯ ಲೇಖಕರು ಕೂಡಾ ಕೊನೆಗೆ, ಪ್ರಪಂಚದ ವಿಳಿಗೆಯು "ಸಂಘಟಿತ ಹಿಂಸೆ"ಯ ಮೂಲಕ ಆಗಲಾರದು. ಬದಲಾಗಿ ಒಬ್ಬರಿನ್ನೊಬ್ಬರ ಸಮಸ್ಯೆಯನ್ನು ತಿಳಿಯುವುದರ ಮೂಲಕವಾಗುವುದೆಂಬ ಪರಿಣಾಮಕ್ಕೆ ಬಂದಿರುವರೆಂಬುದನ್ನು ಗಮನಿಸಬೇಕು. ಶಾಸನ ಅಥವಾ ರಾಜ್ಯದಿಂದಾಗದು; ಆದರೆ ಪಾರಸ್ಪರಿಕ ಸಹಕಾರದ ಆಧಾರದಿಂದಿರುವ ಸಾವಿರಾರು ಸಮಿತಿಗಳಿಂದಾಗುವುದು. ಕೇಂದ್ರೀಕರಣದ ಮೂಲಕವಲ್ಲ; ವಿಕೇಂದ್ರೀಕರಣದ ಮೂಲಕ! ದೇಶದ-ದೇಶದ್ದೇ ಅಲ್ಲ, ಪ್ರಪಂಚದ-ದುರ್ಭಾಗ್ಯವೆಂದರೆ ನಮ್ಮಲ್ಲಿ ತುಲನಾತ್ಮಕ ಅಧ್ಯಯನಸೂಡಿ. ಪ್ರಪಂಚದ ಸುಪ್ರಸಿದ್ಧ-ಪ್ರಸಿದ್ಧ ವಿಚಾರಕರ ವಿಚಾರಗಳ ಸಾರಾಂಶ ಹೊರಗೆಡಹುವ ವಿದ್ವಾಂಸರು ಕಡಿಮೆಯೆಂಬುದೇ. ಕ್ರೋಪಾಟಕಿನ್ ರಾಗೂ ಗಾಂಧೀಜಿಯವರ ವಿಚಾರಗಳ ತುಲನಾತ್ಮಕ ಅಧ್ಯಯನವು ಅತ್ಯಂತ ಆಕರ್ಷಕವಿದೆ. ಮತ್ತು ವಿಶೇಷವಾಗಿ, ಪ್ರಪಂಚವು ಹಲವು ಮಾರ್ಗಗಳು ಸೇರಿದಲ್ಲಿ ನಿಂತು, ಸರಿಯಾದ ಮಾರ್ಗಗ್ರಹಣ ಮಾಡುವ ಕುರಿತು ವಿಚಾರಿಸುವ ಈ ಕಾಲದಲ್ಲಿ ಮತ್ತಷ್ಟು ಮಹತ್ವಪೂರ್ಣವಾಗಿದೆ. ಗಾಂಧೀಜೀ ಮತ್ತು ಕ್ರೋಪಾಟಕಿನರ ಮಾರ್ಗ ಒಂದಾದರೆ ಮಾರ್ಕ್ಸ್ ತಥಾ ಸ್ಟಾಲಿನರ ಜೀವನ ಮತ್ತೊಂದು.

ಕಲಿಯುಗದ ಮುದುಕಿ

(ಒಂದು ಹಳೆಯ ಕತೆ)

ಡಿ. ವಸಂತ ಕುಷ್ಟಗಿ

ದಾನಬುದ್ಧಿಯೇ ಮಾನವವರ್ಗದ ಸುಖ-ಶಾಂತಿಯ ಮೂಲ ಎಂಬುದನ್ನು ನಮ್ಮ ನಾಡಿನ ಸಂಸ್ಕೃತಿ ಮತ್ತೆ ಮತ್ತೆ ಒತ್ತಿ-ಒತ್ತಿ ಹೇಳುತ್ತಿದೆ. ಅದಕ್ಕಾಗಿ ರಚಿತವಾದ ಕರುಗತೆ-ಹೀಳಗತೆಗಳು, ನಮ್ಮ ನಾಡಿಗರ ಜೀವನದಲ್ಲಿ ಎಂಥೆಂಥ ವಿಲುಳದನ್ನು ದೊರೆಯುತ್ತವೆ.

ರಾಜಮಾರ್ಗದ ಎಡಕ್ಕೆ ಕೆಂಪು ಭೂಮಿ. ಬಲಕ್ಕೆ ಕರಿಯ ಭೂಮಿ. ಬೆಳೆಗಳಿಲ್ಲದಿದ್ದರೂ ಕೂಡ ಸಂತೋಷದಿಂದ ಕುಣಿಯುತ್ತಿ ನಂತೆ ಹೊಲಗಳು ಕಂಗೊಳಿಸುತ್ತವೆ. ಅವುಗಳಿಗೆ ನಾಳೆಯಾದರೂ ನಾವು ತುಂಬಿಕೊಂಡು ಕಲಿಯಂತೆ ಕಾಣಬಲ್ಲವೆಂಬ ಆಶೆ ಪೂರ್ಣ ಇವೆ. ನ್ದರಿಂದಲೇ ಸುಂದಸ್ಮಿತವಾಗಿರುವವು. ಕರುಣೆಯಿಂದ ನೋಡುವವು.

ಬಂಡಿಯು ಹೋಗುತ್ತಿತ್ತು. ಆಗ ರಣರಣ ಬಿಸಿಲು. ಪಕ್ಷಿಗಳು ಕೂಡ ಬಾಳೆಯ ಬನದಲ್ಲಿ ಅಡಗಿರುವ ಸಮಯ. ಲಿಂಗಸೂಗೂರಿನಿಂದ ಛಾವಣಿಯ ಕಡೆಗೆ ಹೊರಟಿನು. ಆದರೆ ದಾರಿಯಲ್ಲಿ ನನ್ನ ಅಜ್ಜಿಯು ಬಂಡಿಯೊಳಗೆ ತೌರೂರಿಗೆ ಹೋಗುತ್ತಿದ್ದುದು ಕಾಣಿಸಿತು. ನನಗೂ ಹೋಗಬೇಕೆಂಬ ಬಯಕೆ ತಕ್ಷಣ ಮನದಲ್ಲಿ ಬಂದಿತು. ಕುರುಡನೇನು ಬಯಸುವುದು? ಎರಡು ಕಣ್ಣು! ಆಕೆಯೂ ನನಗೆ ಬರಲು ಕರೆದಳು; ನಾನೂ ಹೊರಟೆ. ದಾರಿಯಲ್ಲಿ ನನಗೆ ಖುಂಬಾ ಬಾಯಾರಿಕೆ ಯಾಯಿತು. ದಾರಿಯಲ್ಲಿ ಒಂದು ಹಸಿಯೂ ನೀರಿಲ್ಲ. ಮಾಡುವು ದೇನು? ಹೊತ್ತು ಬಂದಂತೆ ನಡೆಯಬೇಕಷ್ಟೇ! ಅದ್ದರಿಂದ ಹಾಗೆಯೇ ಕುಳಿತೆ 'ರಾಮಾ' ಎಂದು. ಬೇಸರಿಕೆ ಪ್ರಾರಂಭವಾ ಯಿತು. ಬಂಡಿಯ ದಕ್ಕಡಿಯನ್ನು ತಡೆಯಲಾಗಲಿಲ್ಲ ನನಗೆ. ಬಂದ ಬೇಸರಿಕೆಯನ್ನೂ, ಆದ ಬಾಯಾರಿಕೆಯನ್ನೂ ಮರೆಸುವುದಕ್ಕೋಸುಗ, ಒಂದು ಯತ್ನವನ್ನು ಹೂಡಿದೆನು. ಅದು ಒಂದು ಸ್ಪರ್ಧೆಯೇ ಸರಿ. ಆ ಸ್ಪರ್ಧೆ ಕತೆ ಹೇಳುವ ಸ್ಪರ್ಧೆ. ಅಜ್ಜ, ಅಜ್ಜಿಯರಿಂದರೆ ಕತೆ ಗಳಿಂದ ತುಂಬಿದ ಆಗರ. ಅಜ್ಜ ಅಜ್ಜಿಯರಲ್ಲಿ ಸ್ಪರ್ಧೆ ನಡೆಯಿತು. ಸ್ಪರ್ಧೆ ನಡೆಯುವುದಕ್ಕೆ ಮುಂಚೆ ಒಂದು ನಗುವಿನ ಪ್ರವಾಹ ಹರಿ ಯಿತು. ಅದನ್ನು ಹೇಳುವುದು ಸೂಕ್ತವೆಂದು ತೋರುತ್ತದೆ. 'ಯಾರ್ಯಾರು ಎಷ್ಟೆಷ್ಟು ಬಟ್ಟಲು ಬೀರು ಕುಡಿಯುತ್ತಾರೋ, ಅಷ್ಟಷ್ಟು ಕತೆಗಳನ್ನು ಹೇಳಬೇಕು' ಎಂದರು ಬಂಡಿಯಲ್ಲಿದ್ದ ಒಬ್ಬರು. ಈ ತರಾ ವಿನಂತೆ ಅಜ್ಜಿ ೧೨ ಬಟ್ಟಲುಗಳನ್ನೂ, ಅಜ್ಜನು ೧೦ ಬಟ್ಟಲುಗಳನ್ನೂ ಕುಡಿಯುತ್ತೇವೆಂದು ಲಿಲಾವು ನಡೆಸಿ, ಕೊನೆಗೆ ಇಲ್ಲಿಗೆ ಬಂದು ತಲುಪಿ ದರು. ಅಜ್ಜನು ತಾನು ವಚನ ಕೊಟ್ಟಂತೆ ಎಲ್ಲ ಕತೆಗಳನ್ನು ಹೇಳಿ ಮುಗಿಸಿದನು. ಆದರೆ ಅಜ್ಜಿಯಿಂ ಒಂದು ಬಾಕಿ ಉಳಿದಿತ್ತು. ಆಕೆ ವಿಶ್ವಪ್ರಯತ್ನ ಮಾಡಿದಳು. ಒಂದಾದರೂ ಕತೆ ನೆನಪಿಗೆ ಬರಲಿಲ್ಲ. ಮಾತಿಗೆ ಸೋಲುವ ವೇಳೆ ಬಂತೆಂದು ಹೆದರಿದಳು. ದೇವರು ಭಕ್ತರ ಸೇವಕನಲ್ಲವೇ? ನನ್ನ ಅಜ್ಜಿಯ ಹೆಸರು ದ್ರೌಪದಿ ಎಂದಮೇಲೆ, ತಂಗಿ ಯ ಮೇಲೆ ಅವನಿಗೆ ಮಮತೆ ಹೆಚ್ಚು. ಓಡಿಬಂದ! ಯಾರಿಗೂ ಕಾಣ ಲಿಲ್ಲ. ತಾನು ಮಾತ್ರ ಮಂದನಾಗಿ ಹೋಗುತ್ತಿದ್ದ ಬಂಡಿಯನ್ನು ಕೆಂಪು ಜೋಡುಕಲ್ಲು' ಗಳ ಹತ್ತಿರ ತಂದು ನಿಲ್ಲಿಸಿ. ಅಜ್ಜಿಯ ವೃಷ್ಟಿಯನ್ನು ಅವುಗಳ ಮೇಲೆ ಹರಿಯುವಂತೆ ಮಾಡಿದ ನಿರ್ವಿಣ್ಣಳಾದ ಅಜ್ಜಿಯ ಮುಖ ಬೆಳಗಾದ ಕೂಡಲೆ ಕಮಲ ಅರಳುವಂತೆ ಅರಳಿತು.

ನಾವು ಹೋಗುತ್ತಿದ್ದ ಊರು ಸಂತೆಕೆಲೂರು. ಇದು ಲಿಂಗಸೂ ಗೂರಿಗೆ ನಾಲ್ಕು ಮೈಲು ಆಗುತ್ತದೆ. ಆ ಊರಿಗೆ ಹೋಗುವ ದಾರಿ ಯಲ್ಲಿ ಒಂದು ಹೊಲದೊಳಗೆ, ಎರಡು ಕೆಂಪಾಗಿ ಕೆಂಡದಂತೆ ಕಾಣಿ ಸುವ ಕಲ್ಲುಗಳಿವೆ. ಅವೇ ಕಲ್ಲುಗಳು ಅಜ್ಜಿಗೆ ಕಾಣಿಸಿದುವು. ಆಕೆಗೆ ಹೋದ ಜೀವ ಬಂದಂತಾಯಿತು. ಈ ಕಲ್ಲುಗಳಲ್ಲಿ ಒಂದು ಸಣ್ಣದು ಒಂದು ದೊಡ್ಡದು-ಹೀಗೆ ಇವೆ. ಮುಂದೆ ಹೇಳುತ್ತಿರುವ ಕತೆ ನಿಜ ವಾದ ಕಥೆಯೆಂದು ಅಜ್ಜಿ ಹೇಳಿದಳು. ನಾನು ನಿಮಗೆ ಹೇಳಿದೆನು. ಈ ಕಥೆ ನನ್ನ ಕಲ್ಪನೆಯ ಕಥೆಯಲ್ಲ.

ಈಗ ೨೦೦೦ ವರ್ಷಗಳ ಮಾತು: ಒಂದು ಮುದುಕಿ ಸಂತೆ ಕೆಲೂರಿನಲ್ಲಿ ವಾಸವಾಗಿದ್ದಳು. ಆಕೆ ಬಡವಿ. ಶ್ರಮವನ್ನು ಮಾಡುವುದರಲ್ಲಿ ಬಲು ಹಿರಿದು. ಆಕೆಗೆ ಹಿಡಿದ ಕೆಲಸವನ್ನು ಪೂರ್ಣ ಮಾಡುವವರೆಗೆ ಊಟದ ನೆನಪು ಸಹ ಇರುತ್ತಿರಲಿಲ್ಲ. ಮುದುಕಿ ವಾಸಿಸುತ್ತಿದ್ದುದು ಒಂದು ಅಲಸಿ ಮರದ ಕೆಳಗೆ ಮಳೆಗಾಲದಲ್ಲಿ ಮಾತ್ರ ಊರ ಹನುಮನ ಮಂದಿರವೇ ಆಕೆಯ ಬಿದಾರ. ಈಕೆಯನೇ ಆದ ವಸ್ತುಗಳೆಂದರೆ ಮುಕ್ಕಾದ ಪರಿಯಾಣ, ಹರಕು ಕಪ್ಪದ. ಅಂಕುಡೊಂಕಾದ ಒಂದು ಕೋಲು ಮತ್ತು ಗಂಜಿ ಛಿದ್ರಗಳಿದ್ದ ಒಂದು ಜೋಳಿಗೆ-ಹಾಗೂ ಮರ್ಯಾದೆ ಮುಚ್ಚಿಕೊಳ್ಳುವುದಕ್ಕೆ ಬರುವಂಥ ಸೀರೆ-ಇವೇ. ಮುಖವೆಲ್ಲವೂ ಬಾಡಿ ಹೋಗಿತ್ತು ಎಂದು ಹೇಳಿದರೆ ನಗಬಹುದು. ಏಕೆಂದರೆ ಮುದುಕಿ; ಮುಖ ಬಾಡಿ ಹೋಗಿತ್ತು ಎಂದು ಹೇಳಬಹುದೇ? ಎಂದು. ಅದ್ದರಿಂದ ಕಳೆಗುಂದಿತ್ತು ಎಂದು ಹೇಳೋಣ. ಕೈಗಳು ಕಬ್ಬಿನ ಗಣಿಕೆಗಳಿಗಿಂತಲೂ ಕಡೆಯಾಗಿದ್ದುವು. ಗೂಡುಗಟ್ಟಿ ಕೊಂಡ ಎದೆ, ಪಡವಲಕಾಯಂತೆ ಕಾಣುವ ಕಾಲುಗಳು, ಮುಖವೆಲ್ಲಿ ಹರಡಿಹೋದ ಕೂದಲುಗಳು, ಮುಂತಾದವುಗಳನ್ನು ನೋಡಿದರೆ, ಮಕ್ಕಳು ಹೆದರುವಂತೆ ಇದ್ದಿತು ಆಕೆಯ ರೂಪು. ಆಕೆಗೆ ಭಿಕ್ಷೆ, ಸಿಕ್ಕೆ ಲಾರದ ದಿನಗಳೇ ಅನೇಕ ಇರುತ್ತಿದ್ದುವು. ಎಷ್ಟೇ ಉಪವಾಸ ಮಾಡುವ ದಿನಗಳು ಬರಲಿ, ನಿಟ್ಟುಸುರು ಬಿಡದೆ ಸಹಿಸುತ್ತಿದ್ದಳು. ಅದರೆ ಒಂದು ದಿನ ಭಜನೆ ಬಿಡು ಎಂದರೆ ಸಹಿಸುತ್ತಿರಲಿಲ್ಲ. ಬೇಕಾ ದರೆ, ಪಂಥ ಬಿದ್ದರೆ ಗಾಳಿಯನ್ನು ಕೂಡ ಬಿಡಬಹುದು. ಒಮ್ಮೊಮ್ಮೆ ಭಜನೆ ಮಾಡುತ್ತ ಕುಳಿತರೆ, ತನ್ನನ್ನು ತಾನೇ-ಅಲ್ಲ ಈ ಲೋಕವನ್ನೇ ಮರೆತುಬಿಡುತ್ತಿದ್ದಳು. ಭಕ್ತಿಗೆ ಅಷ್ಟು ವಶವಾಗಿದ್ದಳು. ಎಚ್ಚರವಾದ ಮೇಲೆ ಆಕೆಗೆ ತಾನು ಆಹುದೋ ಅಲ್ಲವೋ?-ಎಂಬ ಶಂಕೆ ಉಪ್ಪನ್ನ ವಾಗುತ್ತಿತ್ತು. ದೇವರು ಪರೀಕ್ಷಿಸುತ್ತಾ ಹೋದರೆ ಬಹಳ ಪರೀಕ್ಷಿಸು ತ್ತಾನೆ. ಅಳಿ-ಬಳಿಯಾಗುವವರೆಗೂ ಬಿಡುವುದಿಲ್ಲ. ತನ್ನ ನಿಜವಾದ ಭಕ್ತರಿಗೆ ಎಷ್ಟೇ ಕಷ್ಟಗಳು ಬಂದರೂ ಬಲು ಹಿಗ್ಗು ಅತನಿಗೆ. ಯಾಕೆಂದರೆ "ಎಷ್ಟೊಂದು ಕಷ್ಟಗಳನ್ನು ನಾನು ಕೊಟ್ಟೆ ಆದರೂ ನನ್ನನ್ನು ಮರೆತಿಲ್ಲವಲ್ಲ" ಎಂದು. ಕಷ್ಟಗಳನ್ನು ತಾಳಲಾರದೆ ಭಕ್ತಾದಿ ಗಳು "ಇರಲಾರೆವೊ ಕೃಷ್ಣಾ! ನಮ್ಮಪ್ಪ! ಪಾರು ಮಾಡು" ಎನ್ನು ವರು. ಆದರೆ ಅವರ ಈ ಕೂಗಿಗೆ ಅತನು ಕಿವಿಗೊಡುವುದಿಲ್ಲ. ಕಷ್ಟ ಗಳ ಪರೀಕ್ಷೆಯಲ್ಲಿ ಭಕ್ತಾದಿಗಳು ತೇರ್ಗಡೆ ಹೊಂದಿದ ಮೇಲೆ ಸಂಪತ್ತು, ಐಶ್ವರ್ಯಗಳನ್ನು ಕೊಟ್ಟು ಪರೀಕ್ಷಿಸುತ್ತಾನೆ. ಈಗ ಬಹುಶಃ ಬಹಳ ಜನರು ಉತ್ತೀರ್ಣರಾಗುವುದಿಲ್ಲ. ದೇವರನ್ನು ನುರೆ

ಮಾಡಿಕೊಂಡಿದ್ದ ಸಂಬಂಧಿಕರು ಮತ್ತು ಸ್ನೇಹಿತರು ಅವರ ಮನೆಗೆ ಬಂದು ಹೋಗುತ್ತಿದ್ದರು. ಅವರಲ್ಲಿ ಕೆಲವರು ಅವರ ಮನೆಯಲ್ಲಿ ಒಂದೆರಡು ದಿನ ಉಳಿದುಕೊಳ್ಳುತ್ತಿದ್ದರು. ಅವರಿಗೆ ಅಡುಗೆ ಮಾಡಿ ಬಡಿಸುವುದು ಮತ್ತು ಅವರ ಉಪಚಾರ ಮಾಡುವುದು ಅವರ ಹೆಂಡತಿಯ ಕೆಲಸವಾಗಿತ್ತು. ಅವರ ಹೆಂಡತಿಯು ಅವರಿಗೆ ಅಡುಗೆ ಮಾಡಿ ಬಡಿಸುವುದರಲ್ಲಿ ಮತ್ತು ಅವರ ಉಪಚಾರ ಮಾಡುವುದರಲ್ಲಿ ಸಂತೋಷ ಪಡುತ್ತಿದ್ದಳು. ಅವರು ಹೊರಡುವಾಗ ಅವರಿಗೆ ಬಟ್ಟೆ ಮತ್ತು ಹಣ ಕೊಟ್ಟು ಕಳುಹಿಸುತ್ತಿದ್ದರು. ಅವರ ಹೆಂಡತಿಯು ಅವರಿಗೆ ಬಟ್ಟೆ ಮತ್ತು ಹಣ ಕೊ

ನಿತ್ಯ ಮುಂದೆ ನಿಮ್ಮ ಆಂತೀದಿ? ೨೫ ಸಾಲು ಕೇಳಿದ್ದೀರಿ ೫೦ ಸಾಲು ಬರಿಸ್ತೀನಿ. ಅಲ್ಲಿಲ್ಲೀ ನಾಲ್ಕಾರು ಸ್ಟೆಲಿಂಗು ಹೊಗಿದ್ದಾವೆ; ಅಕ್ಷರ ಸ್ಪಷ್ಟ; ವ್ಯಾಕರಣದ ತಪ್ಪು ಆಗಿದ್ದಾವೆ. ಆ ನೇವರ ಪೆಟರಿಗೆ ನಾ ಪಾರಿಂಗ್ ಸ್ಟಿಕ್ಕಿದ ಆತ್ಮ ಚರಿತ್ರೆ ಪಾಠ ಮಾಡಿಸ್ತೀನಿ—ಅಂತ ಕನಸು ಬೀಳೋಕ? 'ಸ್ಟೇಟ್ ಪಾಗ್' ಅಂತ ಕೇಳಿದಾ! ಛೇ! ನಾ ಏನು ಗ್ರಹಾಚಾರಿ ಅಂತ ತಿಳಿದಿ ಏನು ಧಾಮುಣ್ಣಾ! ಕಾಲ್ಗಾ ಪೇಪರಾಗ ಸ್ಟ್ಯ ಸಾರೆ ಬಿಸ್ಕಿ ಲಕ್ಷ ಸಾರೆ ಪಾಠಾದವ! ಹಾ ಹಾ ಆಕ್ಸ್ಫೋರ್ಡ್ ಡಿಕ್ಷನರಿ, ಸ್ಟಿಕ್ಕಾದ ಬದಲೆ ಪಾಗ್ ಪಾಠ, ಪಾಠ ಮಾಡಿಸ್ತಿ ಎಲ್ಲಾ ಪಾಠೇಷೊ ಇಳಿಸಿಬಿಟ್ಟೆ. ಬಡಾಸ್ಕೂರ ಹೆಮ್ಮಾಗ! ಆದಕಾ ನಾನಾ. ನನೆ ಅಂತೀ ಏನು ಮತ್ತೆ? ಇದ್ದಿದ್ದರು, ಯಾರು ಕಾಣಾರ! ಆದರೂ ಈ ರಾಜೆ ಆತಿ ಚಾಣಾಕ್ಷ ಆಗೀನಿ. ನಾನು ಮಾತೆಯಾ ಒಂದು! Examination hall ಒಳಗೆ ಹೇವರು ಏನ್ ಬುದ್ಧಿ ಕೊಪ್ಪು ಪಾಸೊ. ಹಾಂಗ್ಯಲ್ಲೀ ಕಾಣಿಸಿ ಬಿಡೋಣು!

'ಇಷ್ಟು ವರ್ಷಾತಾಡೊರಾ ಹೊಸಬರೆಯು ಇವರ ಮನಕ ಮಿಡಿಯು ಬರದಾಗಿತ್ತು. ಪರೀಕ್ಷೆದ ಕಲುಪಾಗಿ!—ಅಂದ್ಯಾ? ಹೌದರಾ ನಮ್ಮ, ಆದರ ಪರೀಕ್ಷೆ ಆರು ದಿವಸ ಆದ ಆಂತರಲಿಕ್ಕೆ, ನಮ್ಮ ಅಣ್ಣ ನನ್ನ ಮುಂದು ದಿನಾ ಬಾವಡೇ ತೆಗಿಸಿದ ವರ್ಸೂಲ್ಲ, ಕಲುಪಾಗಿ ಹೆಳ್ಳೆಗೆ ಕರೆದೊಂಡು ಹೋಗುಮೇಕ್ಕ—ಒಟ್ಟಿನ ಎತ್ತಿ ಹೋಗೋದು ಬ್ಯಾಡ ಅಂದ! ನನಗ ಅಡಿಗಿ ಬಿಡೋದು ಮುಖ ಆಗಿತ್ತು. ಹಾಂ! ನನ್ನ ತಿತಿ. ಹಾಡ ವಿಷಯು ಆದರ ನೀನು ಅಂತ ತಿಳಿದಿದಿ? ನೆನಪಿನ ಕಲುಪಾ ಗಿಲೀ ನನಗ ಹೋಗಿಲೆ ಬಹುಮಾನ ಹೊರಿಯುದೇಕು...ನಿಜಾನ್ರ. ನಾವ ಹಾಕಾಯಾಗ ಹೊರಕೊಂಡಾಮ್ಮಿ! ಆದರ ಕೇಳಿದ್ದಕ್ಕೆ ಬಾತ್ರಾ ಹೊಂಡಿಸಿ ಬಿಡಿಯೋ ತೊಡಕು ಬ್ಯಾಡಿ! ಹೇಗೇನ್ರಿ ಆ ಅನ್ನಾದಿನ್ನ ಘೂಗೋಳು, ಸಾಮುನ್ನು, ನನಗೆ ಗಿಲೆ ಗಿಲೆ ಪದ್ಯಳು ಪ್ರೀಲು ಕಾಡಿಸಿ. ಮುವ್ವ. ತಿತಿಯಾದಾಗ ಎಕ್ಸ್ಟ್ರಾನ್ ಏಕ್ಸ್ಟ್ರಾನ್ ಬಿಡಿಯೋಪಾಗಿ ಆತು! ಮೋಡಿ ಆ ವರ್ಷ ಲೀಲ್ಲೆ ಮಾಗಾಗಿ ಕಾಣಿಯಿಂದ ರಾಮೇಶ್ವರಕ್ಕೆ ಲೇಡೋಮು ಒಂದು ಬಾಕೇ ಬುಳಿಸಿದ್ದಾರು. ಸಾಯುಂಕ್ಕಾನಾಗ ಕೆಲವು ಲಿಂಗ ಪ್ರಶ್ನೆ—ಹೆಣ್ಣಾ compulsory! ಒಟ್ಟೀನು? ಬಂಗೋಲಿ ಪರಿಯೊ ಗಾಳಿ, ಪ್ರಾಪ್ತಿಯಿಲ್ಲಾ, ಸ್ಯಾಕ್ಟಿಸ್ಸಿ ಏನ್ನ ಕಡಿಯಿಂದ ಕೇಳಿದ್ದೆ ಆತ ಅಲ್ಲಾನ್ರಾ ಎಕ್ಸ್ಟ್ರಾನ್ರಾ ತಿಟ್ಟಿದಿದ್ದರ ಯಾವ ನಿಮಿಷ ತೊಡ್ಡಲಿ ಆಗಿಬಿಟ್ಟೆನೋ ಏನೊ!

ಹಾಂ ಏನು ರಾಮಣ್ಣಾರಾ, ನಾ ಬ್ಯಾಂಕು ಪೇಪರು ಕೊಟ್ಟುಮಾ ಪಾಸಾಗೋದು ಖಚ್ಚಿತ ಈ ಸಾರೆ ಆತ ಆ ಖಂಡಿತ ಮಾತ್ರ ಹೊಯಿಸ ಪೇಪ್ಪರ್ ಆತ ಕಾಗದಾಪತ್ರೇನ? ಇರುಮೆಮು. ಆದರ ನಾ ಯಾರ ಬ್ಯಾಂಕು ಕೊಟ್ಟಿದ್ದೆನಿ! ಎಲ್ಲಾ ಪ್ರಶ್ನೆ ಮುಗಿಸಿ ತಕ್ಷ ಬರಾಗಾಗ ಪೆಟ್ಟೆ. ಈ ಸಾರೆ ನಾ ಪಾಸಾದೆ, ನಮ್ಮಪ್ಪನ ಕರೆಯಿಂದ ಹೆಣ ಮಣ್ಣಾಗ ಕೈಯಿಸ್ಕೆ. ಕತ್ತಲಾಗಾಯಿಂದ ಪೂಜಾ ಆಗೋದು ಒಂದೆ! ಕಾಯಿಸ್ಕೆ ಪೇಪರು. ನಮ್ಮ ಹೆಂಡತಿ ಮುಟ್ಟಿಸಿದ್ದೊಳಕ್ಕೆ ಅಂತ ಅದಾಗ ಬೆಂಕಿ ಇಟ್ಟು. ಪಾಸ್ ಮಾಡಿಯೇಕು ಅಕ್ಕಿನ್ನಾಮಿ.



(ಗಾಬರಿಯಿಂದ).... ...ಅಬಬ್ಬಾ ಇಷ್ಟೊತ್ತಿಗೆ ಮ್ಯಾಲೆ ಕೇಶವಾ ತಂದು ಕೊಡೋ ಮುಗಿಸಬೇಕ್ಕ ಅಲ್ಲಾ? ಬ್ಯಾಂಕು, ಬ್ಯಾಮಣ್ಣಾ, ಬ್ಯಾಮು. ಮುಂದಿನ' ಅಂತ ನಮ್ಮ ಅಪ್ಪಾ ನನ್ನ ರಸಿಟು ಕೆಲಸಾ ತೊಗೊಳ್ಳಲಿಕ್ಕೆ ಬಲು ಘಟ್ಟಿ. ಆತು ಪರೀಕ್ಷಾ ಸಮೀಪಕ್ಕ ಬಂದಬುಟ್ಟಾ ನನ್ನ ಮೊಲೆ ಕೇಳೊವರು ಯಾರೂ ಉಳೀಲಿಲ್ಲ ಈ ಮನ್ಯಾಗ. ನನ್ನ ಅಭ್ಯಾಸ ನೆಟ್ಟಗಿದ್ದಾ, ಪದಾರೂ ಮಾಡಾರ ಇರತಿದ್ದಿಲ್ಲ. ಮನೇ ಕೆಲಸಕ್ಕೆಬ ಸೂದಾಡತಿದ್ದೆ ಎಲಬ್ಬಿ ಬಿಟ್ಟು. ಆದರ ವಿಷಯ ಮೊದಲಿನಷ್ಟಬ strong ಬುಳಿಯಾಕ! ಮೊತ್ತ ಕೇಳು!

[ಆಕ್ಷರಶಃ ಪಠಾಲು ಬಂದಮ್ಮ ಓದಿ] ಅಯ್ಯೊ, ಎಷ್ಟು ವಿಶ್ವ-ನನ್ನ ಪರೀಕ್ಷಾ ಸಮೀಪಕ್ಕ ಬಂದಬಂದ್ಹಾಂಗ! ನಮ್ಮ ಅಣ್ಣಿಗ ಕಳ್ಳಾ ಗೊತ್ತಿ ಆಗಿ, ಮುಂದಿನ ಸಾಲನ್ನ ಮುಂಬಯಿಯಾಗ ಲಗ್ನ ಆತಿ. ಎರಡು ತಿಂಗಳು ಮುಂದ ಮಳಬಾರದಿತ್ತ! ಈ ಗದ್ಲದಾಗ ನನ್ನ ಪರೀಕ್ಷಾ ಪಾಸು ಕೇಳತಾರ? ರಾಮನಾಥಾ, ಸ್ವಾರಬ್ಬ ಪಾಗ ಇದ್ದಮ್ಮ ಆಗಲಿ. ಮೊದಲು ಇವತ್ತ ನಮ್ಮ ಚಹಾ ಪಾರ್ಟಿ ಮುಗಿಸಿ. ಕೊಳ್ಳೋಣು ನಡಿ. ಪರೀಕ್ಷಾ ಪಾಠಾ ಪಾಂಗು ನಡಿಸೋದs! ನಿಲಾಪಾಗ ಆಮೂಲ ಕಳಕೊಂಡಾರದು .....

[ಎಂದು ರಾಮಣ್ಣಾಂದನು ರಾಮಣ್ಣಾಪ್ಪನಿಂದನೆ ನಾವಪ್ಪಾಪಿಂದ ಮೊದಲೆ ಪಾಸಾಗಿ, ಆವರಿಗೆ ಆಶೀರ್ವಾದಗಳೆ ಮಂಜಪ್ಪಾಪೆ—]

ತಿಲಿ:

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದ ಮೇರೆಗೆ, ಈ ಸಲದ ಮೇಲಾಟದಲ್ಲಿ ಹೆಚ್ಚು ಜನರು ಭಾಗವಹಿಸಿಲ್ಲ. 'ಅಡಿಗೆಯವಳು' ಕತೆಯನ್ನು ಕುರಿತ ವಿಮರ್ಶೆಗಳು ನಾಲ್ಕು ಮಾತ್ರ ಬಂದಿವೆ. 'ಜೀರ್ಣೋದ್ಧಾರ'ವು ಎಂಬ ನಾಟಕವನ್ನು ಕುರಿತು ಒಂದೆ ಒಂದು ವಿಮರ್ಶೆ ಬಂದಿದೆ.

'ಅಡಿಗೆಯವಳು' ಕತೆಯನ್ನು ವಿಮರ್ಶಿಸಿ ಬರೆದವರ ಅನುಕ್ರಮ ಹೀಗಿದೆ :

೧. ಶ್ರೀ. ಕೆ. ನಾರಾಯಣನ್ ಬಿ ಕಾಮ್., ಕಾಮರ್ಸ್ ಕಾಲೇಜು, ಹುಬ್ಬಳ್ಳಿ. ೨. ಶ್ರೀ. ಕೆ. ಶ್ರೀನಿವಾಸ ಶರ್ಮಾ ವಿದ್ವಾನ್' ಕಾಸರಗೋಡು. ೩. ಶ್ರೀ. ಮ. ಗ. ಯಾಜಿ, ಮಾಳಕೋಡ, ಶಾಲೆಯ ಹೆಡ್‌ಮಾಸ್ತರು. ೪. ಶ್ರೀ 'ಮುರಡೇವ' ಬಿ. ಎ., ಕೆ. ಇ. ಬೋರ್ಡ್ಸ್ ಕಾಲೇಜ್ ಧಾರವಾಡ.

'ಜೀರ್ಣೋದ್ಧಾರ' ನಾಟಕವನ್ನು ವಿಮರ್ಶಿಸಿದವರು :

೧. ಶ್ರೀ. ಕೆ. ಎಸ್. ಶರ್ಮಾ 'ವಿದ್ವಾನ್' ಕಾಸರಗೋಡು.

ಈ ಸಲದ ವಿಮರ್ಶೆಗಳನ್ನು ಪರೀಕ್ಷಿಸುವುದಕ್ಕೆ ಸುಪ್ರಸಿದ್ಧ ವಿಮರ್ಶಕರೊಬ್ಬರ ಕಡೆಗೆ ಕೊಡಲಾಗಿತ್ತು. ಅವರು ತಮ್ಮ ಅಭಿಪ್ರಾಯವನ್ನು ಹೀಗೆ ಬರೆದುಕೊಟ್ಟಿದ್ದಾರೆ :

'ಈ ಸಲ ಬಂದ ವಿಮರ್ಶೆಗಳ ಸಂಖ್ಯೆ ತೀರ ಕಡಿಮೆ. ಇದು ವಿಷಾದದ ಸಂಗತಿಯೆನ್ನಬೇಕೋ ಸಂತೋಷದ ಸಂಗತಿಯೆನ್ನಬೇಕೋ ತಿಳಿಯದಂತಾಗಿದೆ. ಸ್ಪರ್ಧೆಗೆ ನಿಲ್ಲುವ ಅಹಮಹಮಿಕೆ ನಮ್ಮ ತರುಣರಲ್ಲಿ ಕಡಿಮೆಯಿರುವುದು ವಿಷಾದದ ಸಂಗತಿ ಹೆಚ್ಚು ಸಂಖ್ಯೆಯ ವಿಮರ್ಶಾಲೇಖನಗಳನ್ನು ಓದಬೇಕಾದ ಶ್ರಮ ನನಗೆ ತಪ್ಪಿದುದು ಸಂತೋಷದ ಸಂಗತಿ. ಬಂದುವುಗಳೆಲ್ಲೆಲ್ಲ ಶ್ರೀ. ಕೆ ಎಸ್. ಶರ್ಮಾ ಅವರ ಎರಡೂ ವಿಮರ್ಶೆಗಳು ಉತ್ತಮವಾಗಿವೆ. ಹೆಚ್ಚಾಗಿ ಕತೆಗಳ ವಿಮರ್ಶೆಯನ್ನೇ ನೀವು ಪ್ರಕಟಿಸುವಿರಾದುದರಿಂದ, ಈ ಸಲ 'ಜೀರ್ಣೋದ್ಧಾರ' ನಾಟಕದ ವಿಮರ್ಶೆಯನ್ನು ಪ್ರಕಟಿಸಬೇಕು. ವಾಚಕರಲ್ಲಿ ಹೊಸ ವಿಷಯವೆನಿಸಿ ಹೆಚ್ಚು ಆಕರ್ಷಣೆಯನ್ನುಂಟು ಮಾಡೀತೆಂದು ನನ್ನ ಅಭಿಪ್ರಾಯ. (ಅವರ ಅಭಿಪ್ರಾಯದಂತೆಯೆ ನಡೆದುಕೊಳ್ಳಲಾಗಿದೆ.)'

ಮುಂದಿನ ಸಲದ ವಿಮರ್ಶೆಗಾಗಿ ಜಯಂತಿಯ ಅಕ್ಟೋಬರ್ ಸಂಚಿಕೆಯನ್ನೇ ತೆಗೆದುಕೊಳ್ಳಬೆಕು ವಾಚಕರಿಂದ ಹೆಚ್ಚು ಸಂಖ್ಯೆಯಲ್ಲಿ ವಿಮರ್ಶೆಗಳು ಬಂದರೆ, ನಮ್ಮ ವಾಚಕ ವರ್ಗಕ್ಕೆ ಜಯಂತಿ ಬೇಕಾದುದನ್ನು ಕೊಡುತ್ತದೆಯೋ, ಬೇಡವಾದುದನ್ನು ಕೊಡುತ್ತದೆಯೋ—ಎಂಬ ಮಾತು ನಮಗೆ ಚೆನ್ನಾಗಿ ಗೊತ್ತಾದೀತು.

ಸಂ. ಜ. ಧಾ.

'ಜೀರ್ಣೋದ್ಧಾರ'

(ಏಕಾಂಕ ನಾಟಕದ ವಿಮರ್ಶೆ)

ಶ್ರೀ. ಕೆ. ಎಸ್. ಶರ್ಮಾ ವಿದ್ವಾನ್
ಕಾಸರಗೋಡು

ಇದೊಂದು—ಸುಂದರವಾದ ಎರಡು ದೃಶ್ಯಗಳಿಂದ ಯೋಜಿತವಾದ, ಸಾಮಾಜಿಕ ಚಿತ್ರವನ್ನೊಳಗೊಂಡ ಏಕಾಂಕ ನಾಟಕ. ನಾಟಕವೆನ್ನುವುದಕ್ಕಿಂತ ಒಂದು ಚಿಕ್ಕ ಪ್ರಹಸನವೆಂದರೆ ಬಹು ಚೆನ್ನಾಗಬಹುದು. ಪ್ರಹಸನದಲ್ಲಿರತಕ್ಕ ಹಾಸ್ಯರಸವು ಈ ಭಾಗದಲ್ಲಿದ್ದು, ಜೀರ್ಣೋದ್ಧಾರದ ಅಂಗಾಂಗಗಳಲ್ಲಿಯೂ ಪ್ರವಹಿಸಿ ನಿಂತಿದೆಯೆಂದರೆ ಅದು ಅತಿಶಯೋಕ್ತಿಯಾಗಲಾರದು. ಹೇಗೆ ಬಾಹ್ಯದಲ್ಲಿ ಇದು ಹಾಸ್ಯರಸದಿಂದ ಮಿನುಗಿ ನಿಂತಿದೆಯೋ, ಹಾಗೆಯೆ—ರಸಾನುಗುಣವಾದ ಈ ಸನ್ನಿವೇಶವು ಒಂದು ವಾಸ್ತವಿಕಚಿತ್ರವನ್ನೇ ರೂಪಿಸಿ ನಿಂತಿದೆಯೆಂದು ಧಾರಾಳವಾಗಿ ಹೇಳಬಹುದು.

ಕಥೆಯಲ್ಲಾಗಲಿ, ರೂಪಕದಲ್ಲಾಗಲೀ ನಿರೂಪಿಸಿದ ವಿಚಾರಗಳು ಕೇವಲ ತಾತ್ಕಾಲಿಕವಾಗಿರದೆ—ಚಿರಂತನವಾಗಿ ಮನೋವೇದಿಕೆಯಲ್ಲಿ ನಿಲ್ಲುವವುಗಳಾಗಬೇಕು. ಅಲ್ಲದೆ ಅವೇ ವಿಚಾರಗಳು ಪ್ರಚಲಿತ ಜೀವನಗತಿಯ ಚಿತ್ರವನ್ನು ಯಥಾವತ್ತಾಗಿ ನಿರೂಪಿಸಿ ಮನೋವೇದಿಕೆಯಲ್ಲಿ ವಿಚಾರದ ಕ್ರಾಂತಿಯನ್ನೆಬ್ಬಿಸಬೇಕು; ಹಾಗೆಯೇ ಸಮಾಜಕ್ಕೂ ತನ್ನ ಇತಿವೃತ್ತವನ್ನು ಎತ್ತಿ ತೋರಬೇಕು. ಜೀವನದಲ್ಲಿ ವೈವಿಧ್ಯವು ಮೂಡಿಬಂದಂತೆ, ಜನಾಂಗದಲ್ಲಿ ಅಲ್ಲಲ್ಲಿ ಜೀವನದೊಡನೆ ಸ್ವಾರ್ಥವು 'ಉದರ ನಿಮಿತ್ತ' ವಾಗಿ ನಾನಾ ರೂಪುಗಳನ್ನು ಹೊಂದಿಕೊಂಡು ಬರುತ್ತವೆಯೆಂಬುದನ್ನು ನಾವರಿಯಲು ಮರೆಯಬಾರದು. ಅಂತಹ ಬಹುಕೃತವೇಷದ—ಮಾದರಿಯು ಜೀರ್ಣೋದ್ಧಾರದಲ್ಲಿ ಬಿಂಬಿತವಾಗಿದೆ.

ಭೀಮರಾಯರೆಂಬ ವಕೀಲರು ತಮ್ಮ ಋಜುಮಾರ್ಗದಲ್ಲಿ, ಇಂದಿನದಿನವೆಲ್ಲಿ ಸಾಕಷ್ಟು ಸಂಪಾದನೆಯನ್ನು ಮಾಡಲು ಅಶಕ್ತರಾಗುವರು. ಆಗ ಅವರ ಧರ್ಮಪತ್ನಿ ಕಮಲಕ್ಕ ನೆರೆಮನೆಯ ಸುಂದ್ರಾಬಾಯಿಯ ಗಂಡನು ವಿದ್ವಾಂಸನಲ್ಲದಿದ್ದರೂ ಸಂಪಾದಿಸಿ ಮನೆಗೆ ತಂದು, ಹೆಂಡತಿಯ ಕೈತುಂಬುವ ವಿಧಾನವನ್ನು ಹೇಳಿ ಭೀಮರಾಯರೂ ಅಂತಹದೇ ಮಾರ್ಗವನ್ನನುಸರಿಸಲು ಬೋಧಿಸುವಳು. ಭೀಮರಾಯರು ಧರ್ಮಸಂಕಟದಲ್ಲಿ ಬಿದ್ದರೂ—ತನ್ನ ಗೆಳೆಯನೇ ಆದ ತಿಮ್ಮಣ್ಣನ ಜತೆಗೂಡಿ ಅದೇ ಊರಿನ ಹಾಳು

ಿದ್ದ ಹನುಮಪ್ಪನ ಗುಡಿಯ ಜೀರ್ಣೋದ್ಧಾರದ ವ್ಯವಸ್ಥೆಗೆ ಹಣ ಕೂಡಿಸುವ ಯೋಚನೆಗೆ ಬರುವರು. ಇದು ವೈರಾಗ್ಯದಿಂದ ಹೊಟ್ಟೆ ತುಂಬುವ ಶ್ರೇಷ್ಠ ವಿಧಾನ. ಈ ವಿಧಾನದಿಂದ ತಿಮ್ಮಣ್ಣನು ಊರ ಸೊರಗೆ ಸಾಗಿ ತನ್ನ ಮನೆ ತುಂಬಿದರೆ, ಭೀಮರಾಯರು ಊರಲ್ಲೇ ಇದ್ದು ಜೀರ್ಣೋದ್ಧಾರದ ಪುಣ್ಯಕಾರ್ಯಕ್ಕಾಗಿ ಕಾಲಬುಡಕ್ಕೇ ಬಂದ ಹಣದಿಂದ ಕಮಲಕ್ಕನಿಗೆ ಶಹಾಪುರಿ ಸೀರೆಯನ್ನು ತರುವರು. ಜೀರ್ಣೋದ್ಧಾರದ ಗುರುತಾಗಿ ಹನುಮಪ್ಪನಿಗೆ ದೊರೆಯುವುದು ನಾಲ್ಕು ಭಕಡಿ ಕಲ್ಲಾದರೂ, ಭೀಮರಾಯರು ತನ್ನ ವ್ಯವಸ್ಥೆಯಿಂದ ಗಂಟು ಮೋರೆಗೈವ ಕಮಲಕ್ಕನಿಂದ ಮೋಹಕದೃಷ್ಟಿಯನ್ನು ಪಡೆದು ಜೀರ್ಣೋದ್ಧಾರ ಮಾಡುವರು."

ಪ್ರಚಲಿತ ವಾತಾವರಣಕ್ಕೆ ಈ ಚಿತ್ರವು ಹೊಸತಲ್ಲ. ಇಂತಹ ಜೀರ್ಣೋದ್ಧಾರ ಸಮಿತಿಗಳು ಇಂದು ಬೇಕಾದಷ್ಟಿವೆ. ಜನತೆ–ದೇಶ–ಕಾಲ ಇವುಗಳನ್ನನುಸರಿಸಿ ಈ ಜೀರ್ಣೋದ್ಧಾರಗಳು ವಿವಿಧ–ವರ್ಣಗಳನ್ನು ಅಳವಡಿಸಿಕೊಳ್ಳುವವು. ಲೇಖಕರು ನಿರೂಪಿಸಿದಂತೆ ಈ ಸೋಗು ತಳೆವಾಗಲೂ ಸ್ವಲ್ಪ ಮುಂದಾಲೋಚನೆ ಬೇಕಾಗುತ್ತದೆ ಈ ಸೋಗನ್ನು ತಳೆವ ಮಂದಿ ಸಾಮಾನ್ಯ ಜನತೆಯಾದರೆ, ಅದಕ್ಕೆ ಬೆಲೆ ಇಲ್ಲ ಸುಳ್ಳು ಕೊಳ್ಳೆಯಾದರೂ ಅದು ಸತ್ಯದ ಧ್ವನಿಯೆಲ್ಲಿರಬೇಕಾದರೆ ಆ ಸೋಗನ್ನು ತಳೆವ ಮಂದಿ ತುಸು ಭಾರದಲ್ಲಿರಬೇಕು. ಆದುದರಿಂದಲೆ ಈ ಕತೆಯಲ್ಲಿ ಜೀರ್ಣೋದ್ಧಾರಸಮಿತಿಯಲ್ಲಿ ಭೀಮರಾಯರಂತಹ ವಕೀಲರೆ, ಅಧ್ಯಕ್ಷರಾಗಿದ್ದಾರೆ. ಈ ಮಂತ್ರವನ್ನು ಬಲ್ಲವನಾದುದರಿಂದಲೇ ತಿಮ್ಮಣ್ಣನು, ತನ್ನ ಪಾಲಿಗೆ ಬಂದ ಅಧ್ಯಕ್ಷ ಪದವಿಯನ್ನು "ನೀವು ವಕೀಲರು, ವಜನದಾರ್ರು" ಎಂದೆಂದು ತಪ್ಪಿಸಿ ಬಿಟ್ಟು, ಕಾರ್ಯಸಾಧಕನಾದನು. ಕಮಲಕ್ಕನಿಗೂ ಈ ಮಂತ್ರದ ಹಿರಿಮೆ ಗೊತ್ತಿತ್ತು. ಆದುದರಿಂದಲೆ, ಆಕೆ ತಿಮ್ಮಣ್ಣನ ಮಾತನ್ನು ಅಲ್ಲಗಳೆಯಲಿಲ್ಲ. ಈ ಮಂತ್ರವು ಲೋಕವಿರುದ್ಧವೂ ಅಲ್ಲ. ಹಿರಿಯ ಸ್ಥಾನದಲ್ಲಿದ್ದ ವ್ಯಕ್ತಿಗಳು ಮುಂದಾದರೆ ತಾನೇ—ಜನತೆಗೂ ಆ ಬಗ್ಗೆ ವಿಶ್ವಾಸ ಹುಟ್ಟುತ್ತದೆ. ಅದಿಲ್ಲವಾದರೆ "ಯಥಾರ್ಥವನ್ನೇ ಮುಂದೊಡ್ಡಿದರೂ ಕಾರ್ಯಗತವಾಗಿಸಿದರೂ—ಜನತೆಯು ನಂಬುವುದಿಲ್ಲ. ಆದರೆ ಸ್ಥಾನಗೌರವದಿಂದ ಹೊರಟು ಜೀರ್ಣೋದ್ಧಾರದಲ್ಲಿ ಮಂದಿ ಒಮ್ಮೆ ಕುಸಿದು ಬಿದ್ದರೂ—ಮತ್ತೊಮ್ಮೆ ಅದೇ ಜೀರ್ಣೋದ್ಧಾರ ವೇಷಾಂತರದಿಂದ ಬಂದಾಗಲೂ, ಮುಂದು ಬರಲು ಉದಾಸೀನವಾಗದು. ಗರತಿಯ ಹಣೆಯಲ್ಲಿರಿಸಿದ ಕುಂಕುಮಶ್ರೀಯಂತೆ, ಈ ಶಿಲೋಲೇಖನವು ಈ ರೂಪಕಕ್ಕೆ ಸರ್ವಾತ್ಮನಾ ಒಪ್ಪುತ್ತದೆ. ರೂಪಕದ ಪಠನಾನಂತರ ಮತ್ತೊಮ್ಮೆ ಈ ಶಿರೋಲೇಖನವನ್ನು ಓದುಬೇಕು. ಆಗಲೇ ಅದರ ಸವಿ ಮನಸ್ಸನ್ನು ತುಂಬುವುದು. ಜೀರ್ಣೋದ್ಧಾರದ ವ್ಯಂಗ್ಯವು ಆಗಲೇ ಹೊರ ಧುಮುಕುವುದು. ಈ ವ್ಯಂಗ್ಯದ ಉದ್ದೀಪಕಗಳಾಗಿ" ಭಾವಿಕರು ನಾಳು ದುಡ್ಡು ಕೊಟ್ಟರ ನಮಗಽ ಉಪಯೋಗ ಬೇಳತದ.—ಇದರಾಗ ಇಹಾನೂ ಸಾಧಸ್ತದ, ಪರಾನೂ ಸಾಧಸ್ತದ" "ಅಂತೂ ವೈರಾಗ್ಯದಿಂದನಽ ಹೊಟ್ಟೆ ತುಂಬತಿದ್ರ ನಾವು ಅದನ್ನಽ ಯಾಕೆ ಹಿಡೀಬಾರದೂ ಅಂತೀನಿ" ಈ ಮಾತುಗಳು ಅಲ್ಲಲ್ಲಿ ಕತೆ ಬೀರಿವೆ. ಅಂತೂ ಈ ಜೀರ್ಣೋದ್ಧಾರವು ವಾಚ್ಯವಾಗಿ ಸಾಗಿದ—ಜೀವನದ ಬಹುವೇಷದ ಒಂದು ವ್ಯಂಗ್ಯಮಾರ್ಗವು.

ಕಥಾಮಾರ್ಗದಲ್ಲಿ ಪ್ರಧಾನವಾಗಿ ಸುಳಿದಾಡುವ ಪಾತ್ರಗಳು ಮೂರು. ಭೀಮರಾಯ, ತಿಮ್ಮಣ್ಣ, ಕಮಲಕ್ಕ. ಅಂಗತ್ವೇನೆ ಭಾವಿಕರಾದ ನಾರಾಯಣರಾಯರ ಪ್ರವೇಶವಿದೆ. ಅದು ಕೇವಲ ತಿಮ್ಮಣ್ಣನ ಉದ್ಯಮವನ್ನೂ—ಜನತೆಯ ಶ್ರದ್ಧೆಯನ್ನು ಸೂಚಿಸಲನು ಗೊಳಿಸಿದೆ ಪಾತ್ರ. ಈ ಚಿಕ್ಕ ರೂಪಕದಲ್ಲಿ ಎತ್ತಿಕೊಂಡ ಮೂರು ಪಾತ್ರಗಳನ್ನು ಲೇಖಕರು ಸಮರ್ಪಕವಾಗಿ ತುಂಬಿದ್ದಾರೆ. ಅಲ್ಪಾವಧಿಯಲ್ಲಿ ಕೊನೆಗಾಣುವ ರೂಪಕದಲ್ಲಿ ಉಳಿದ ಪಾತ್ರಗಳನ್ನು ಪೂರ್ಣತೆಗೊಯ್ಯುವುದು–ಅದು ಲೇಖಕರ ಜಾಣ್ಮೆ. ಭೀಮರಾಯರಂತಹ ಮಜುಮಾರ್ಗದ ವ್ಯಕ್ತಿಯು, ತನ್ನ ಪತ್ನಿಯ ಜೀವನ ಸೌಲಭ್ಯದ ಮಾರ್ಗದಲ್ಲಿ ಕಾಲಿಡಲೊಪ್ಪಿದೆ ಅವೆಲ್ಲ 'ಉದರ ನಿಮಿತ್ತ' ವೆಂದು ಅಲ್ಲಗಳೆದು, ಕೊನೆಗೆ ತಿಮ್ಮಣ್ಣ ಹಾಗೂ ಪತ್ನಿಯು ಮಾತಿನಂತೆ ಜೀರ್ಣೋದ್ಧಾರಕ್ಕೆ ಮನದಂದು ಕಾರ್ಯೋನ್ಮುಖವಾಗಿ, ಕಾರ್ಯಸಾಧಕವಾಗಿ ವೈರಾಗ್ಯವೂ ಹೊಟ್ಟೆತುಂಬುತ್ತಿದೆಯೆಂದೆನ್ನುವಾಗ ನಾವು ನಗುತ್ತೇವೆ. ಕಮಲಕ್ಕನು ಆರಂಭದಿಂದಲೇ ಪತಿಯ ಮೇಲೆ ಅಧಿಕಾರವೆತ್ತಿ ಸಾಗಿ, ಆಗಾಗ ಸಲಹೆಯಿತ್ತು ತನ್ನ ಗಂಡನನ್ನು ಜೀರ್ಣೋದ್ಧಾರಕ್ಕೆ ಸಾಗಿಸಿ ಮೋಹಕ ದೃಷ್ಟಿ ಬೀರುವಾಗ— "ಗಂಡನ ಮೇಲೆ ಕೈವಾಡ ನಡೆಸಿದ ಕಮಲಕ್ಕನ ಪೂರ್ಣ ಸ್ವರೂಪವನ್ನು" ನಾವು ಕಾಣುತ್ತೇವೆ. ತಿಮ್ಮಣ್ಣನ ವ್ಯಕ್ತಿರೇಖೆಯನ್ನು "ನಾವು ಫಿರ್ತೀ ಮ್ಯಾಲೆ ಹೋದಾಗ ನಮಗ ತಿಳಿದ್ಹಾಂಗ ನಾವು ಮಾಡಿದ್ರಾತು!" ಎಂಬ ನುಡಿಯಿಂದಲೇ ಅರಿಯಬಹುದು. ಅವನು ಕಾರ್ಯ ಸಾಧಕ. ಅಂತೂ ತಿಮ್ಮಣ್ಣ ಭೂಲೋಕವನ್ನೇ ನುಂಗಿದರೆ, ಭೀಮರಾಯ–ಕಮಲಕ್ಕ ಇವರು ಯಮಲೋಕವನ್ನೂ ಬಿಡಲಾರರು.....

ಪ್ರಹಸನಕ್ಕೊಪ್ಪಿದ ಹಾಸ್ಯರಸದ ಅಭಿವ್ಯಕ್ತಿಯು ಭೀಮರಾಯರ—ಮತ್ತು ಕಮಲಕ್ಕರ ಸಂಭಾಷಣೆಯಲ್ಲಿ ಬಹು ಸುಂದರವಾಗಿ ತೋರುತ್ತಿದೆ. ಪತಿ–ಪತ್ನಿಯರ ಸರಸ ಸಲ್ಲಾಪದ ನುಣುಪು ಇಲ್ಲಿದೆ. ಆ ಬಳಿಕ ಹನುಮಪ್ಪನ ನೆನಪಾದಾಗ ತಿಮ್ಮಣ್ಣನ ಸಂತೋಷವನ್ನು ಕಂಡ ಭೀಮರಾಯರ ಮಾತು, ತಿಮ್ಮಣ್ಣ "ನಮಗ ತಿಳಿದ್ಹಾಂಗ ನಾವು ಮಾಡಿದ್ರಾತು—ಎಂಬ ಮಾತನ್ನು ತಪ್ಪಿಸಿ" ಇಲ್ಲೇನು ಮನ್ಯಾಗೇನು ಒಟ್ಟು ಊಟಾ ಮಾಡಿದ್ರಾತು" ಎಂದೆನ್ನುವಾಗ ತಿಮ್ಮಣ್ಣನ ಚಾಕ–ಚಕ್ಯತೆಗೆ ಮೆಚ್ಚದಂತೆ ರೂಪಕದ ಕಥನ ಕೌಶಲಕ್ಕೂ ಮೆಚ್ಚಬೇಕು. ಹೀಗೆ ಪ್ರತಿಯೊಂದೆಡೆಯಲ್ಲೂ ಹಾಸ್ಯವೂ ಮಿನುಗುತ್ತಿದೆ.

ಅಂತೂ ಲೇಖಕರು ಸಂಭಾಷಣೆಯಲ್ಲಿ ಅಡಕವಾಗಿರಬೇಕಾದ ಸಾಧನಸಂಪತ್ತನ್ನು ತುಂಬಿದ್ದಾರೆಂದು ಮಾತ್ರವಲ್ಲ; ಪ್ರಕೃತಕ್ಕೆ ಬೇಕಾದಷ್ಟೇ ಉಪಕರಣಗಳೊಡನೆ ಈ ಚಿತ್ರವನ್ನು ಪೂರ್ಣ ತೆಗೆದೊಯ್ದಿದ್ದಾರೆ. ಆದುದರಿಂದಲೆ ಇದು ಕಾಲಕ್ಕೊಪ್ಪುವ, ಕಾಲಗುಣಾತೀತವಲ್ಲದ ಒಂದು ಸತ್ಯ ಚಿತ್ರ.

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದ ಮೇರೆಗೆ, ಈ ಸಲದ ಮೇಲಾಟದಲ್ಲಿ ಹೆಚ್ಚು ಜನರು ಭಾಗವಹಿಸಿಲ್ಲ. 'ಅಡಿಗೆಯವಳು' ಕತೆಯನ್ನು ಕುರಿತ ವಿಮರ್ಶೆಗಳು ನಾಲ್ಕು ಮಾತ್ರ ಬಂದಿವೆ. 'ಜೀರ್ಣೋದ್ಧಾರ'ವು ಎಂಬ ನಾಟಕವನ್ನು ಕುರಿತು ಒಂದೆ ಒಂದು ವಿಮರ್ಶೆ ಬಂದಿದೆ.

'ಅಡಿಗೆಯವಳು' ಕತೆಯನ್ನು ವಿಮರ್ಶಿಸಿ ಬರೆದವರ ಅನುಕ್ರಮ ಹೀಗಿದೆ :

೧. ಶ್ರೀ. ಕೆ. ನಾರಾಯಣನ್ ಬಿ ಕಾಮ್., ಕಾಮರ್ಸ್ ಕಾಲೇಜು, ಹುಬ್ಬಳ್ಳಿ. ೨. ಶ್ರೀ. ಕೆ. ಶ್ರೀನಿವಾಸ ಶರ್ಮಾ ವಿದ್ವಾನ್' ಕಾಸರಗೋಡು. ೩. ಶ್ರೀ. ಮ. ಗ. ಯಾಜಿ, ಮಾಳಕೋಡ, ಶಾಲೆಯ ಹೆಡ್‌ಮಾಸ್ಟರು. ೪. ಶ್ರೀ 'ಮುರಿದೇವ' ಬಿ. ಎ., ಕೆ. ಇ. ಬೋರ್ಡ್ಸ್ ಕಾಲೇಜ್ ಧಾರವಾಡ.

'ಜೀರ್ಣೋದ್ಧಾರ' ನಾಟಕವನ್ನು ವಿಮರ್ಶಿಸಿದವರು :

೧. ಶ್ರೀ. ಕೆ. ಎಸ್. ಶರ್ಮಾ 'ವಿದ್ವಾನ್' ಕಾಸರಗೋಡು.

ಈ ಸಲದ ವಿಮರ್ಶೆಗಳನ್ನು ಪರೀಕ್ಷಿಸುವುದಕ್ಕೆ ಸುಪ್ರಸಿದ್ಧ ವಿಮರ್ಶಕರೊಬ್ಬರ ಕಡೆಗೆ ಕೊಡಲಾಗಿತ್ತು. ಅವರು ತಮ್ಮ ಅಭಿಪ್ರಾಯವನ್ನು ಹೀಗೆ ಬರೆದುಕೊಟ್ಟಿದ್ದಾರೆ :

'ಈ ಸಲ ಬಂದ ವಿಮರ್ಶೆಗಳ ಸಂಖ್ಯೆ ತೀರ ಕಡಿಮೆ. ಇದು ವಿಷಾದದ ಸಂಗತಿಯೆನ್ನಬೇಕೋ ಸಂತೋಷದ ಸಂಗತಿಯೆನ್ನಬೇಕೋ ತಿಳಿಯದಂತಾಗಿದೆ. ಸ್ಪರ್ಧೆಗೆ ನಿಲ್ಲುವ ಅಹಮಹಮಿಕೆ ನಮ್ಮ ತರುಣರಲ್ಲಿ ಕಡಿಮೆಯಿರುವುದು ವಿಷಾದದ ಸಂಗತಿ. ಹೆಚ್ಚು ಸಂಖ್ಯೆಯ ವಿಮರ್ಶಾಲೇಖನಗಳನ್ನು ಓದಬೇಕಾದ ಶ್ರಮ ನನಗೆ ತಪ್ಪಿದುದು ಸಂತೋಷದ ಸಂಗತಿ. ಬಂದುವುಗಳಲ್ಲೆಲ್ಲ ಶ್ರೀ. ಕೆ. ಎಸ್. ಶರ್ಮಾ ಅವರ ಎರಡೂ ವಿಮರ್ಶೆಗಳು ಉತ್ತಮವಾಗಿವೆ. ಹೆಚ್ಚಾಗಿ ಕತೆಗಳ ವಿಮರ್ಶೆಯನ್ನೇ ನೀವು ಪ್ರಕಟಿಸುವಿರಾಪುದರಿಂದ, ಈ ಸಲ 'ಜೀರ್ಣೋದ್ಧಾರ' ನಾಟಕದ ವಿಮರ್ಶೆಯನ್ನು ಪ್ರಕಟಿಸಬೇಕು. ವಾಚಕರಲ್ಲಿ ಹೊಸ ವಿಷಯವೆನಿಸಿ ಹೆಚ್ಚು ಆಕರ್ಷಣೆಯುಷ್ಟುಂಟು ಮಾಡೀತೆಂದು ನನ್ನ ಅಭಿಪ್ರಾಯ. (ಅವರ ಅಭಿಪ್ರಾಯದಂತೆಯೆ ನಡೆದುಕೊಳ್ಳಲಾಗಿದೆ.)'

ಮುಂದಿನ ಸಲದ ವಿಮರ್ಶೆಗಾಗಿ ಜಯಂತಿಯ ಅಕ್ಟೋಬರ್ ಸಂಚಿಕೆಯನ್ನೇ ತೆಗೆದುಕೊಳ್ಳಬೆಕು ವಾಚಕರಿಂದ ಹೆಚ್ಚು ಸಂಖ್ಯೆಯಲ್ಲಿ ವಿಮರ್ಶೆಗಳು ಬಂದರೆ, ನಮ್ಮ ವಾಚಕ ವರ್ಗಕ್ಕೆ ಜಯಂತಿ ಬೇಕಾದುದನ್ನು ಕೊಡುತ್ತದೆಯೋ, ಬೇಡವಾದುದನ್ನು ಕೊಡುತ್ತದೆಯೋ—ಎಂಬ ಮಾತು ನಮಗೆ ಚೆನ್ನಾಗಿ ಗೊತ್ತಾದೀತು.

ಸಂ. ಜ. ಧಾ.

'ಜೀರ್ಣೋದ್ಧಾರ'

(ಏಕಾಂಕ ನಾಟಕದ ವಿಮರ್ಶೆ)

ವಿ. ಕೆ. ಎಸ್. ಶರ್ಮಾ ವಿದ್ವಾನ್
ಕಾಸರಗೋಡು

ಇದೊಂದು—ಸುಂದರವಾದ ಎರಡು ದೃಶ್ಯಗಳಿಂದ ಯೋಜಿತವಾದ, ಸಾಮಾಜಿಕ ಚಿತ್ರವನ್ನೊಳಗೊಂಡ ಏಕಾಂಕ ನಾಟಕ. ನಾಟಕವೆನ್ನುವುದಕ್ಕಿಂತ ಒಂದು ಚಿಕ್ಕ ಪ್ರಹಸನವೆಂದರೆ ಬಹು ಚೆನ್ನಾಗಬಹುದು. ಪ್ರಹಸನದಲ್ಲಿರಶಕ್ಯ ಹಾಸ್ಯರಸವು ಈ ಭಾಗದಲ್ಲಿದ್ದು, ಜೀರ್ಣೋದ್ಧಾರದ ಅಂಗಾಂಗಗಳಲ್ಲಿಯೂ ಪ್ರವಹಿಸಿ ನಿಂತಿದೆಯೆಂದರೆ ಅದು ಅತಿಶಯಕಥನವಾಗಲಾರದು. ಹೇಗೆ ಬಾಹ್ಯದಲ್ಲಿ ಇದು ಹಾಸ್ಯರಸದಿಂದ ಮಿನುಗಿ ನಿಂತಿದೆಯೋ, ಹಾಗೆಯೆ—ರಸಾನುಗುಣವಾದ ಈ ಸನ್ನಿವೇಶವು ಒಂದು ವಾಸ್ತವಿಕಚಿತ್ರವನ್ನೇ ರೂಪಿಸಿ ನಿಂತಿದೆಯೆಂದು ಧಾರಾಳವಾಗಿ ಹೇಳಬಹುದು.

ಕಥೆಯಲ್ಲಾಗಲಿ, ರೂಪಕದಲ್ಲಾಗಲೀ ನಿರೂಪಿಸಿದ ವಿಚಾರಗಳು ಕೇವಲ ತಾತ್ಕಾಲಿಕವಾಗಿರದೆ—ಚಿರಂತನವಾಗಿ ಮನೋವೇದಿಕೆಯಲ್ಲಿ ನಿಲ್ಲುವವುಗಳಾಗಬೇಕು. ಅಲ್ಲದೆ ಅವೇ ವಿಚಾರಗಳು ಪ್ರಚಲಿತ ಜೀವನಗತಿಯ ಚಿತ್ರವನ್ನು ಯಥಾವತ್ತಾಗಿ ನಿರೂಪಿಸಿ ಮನೋವೇದಿಕೆಯಲ್ಲಿ ವಿಚಾರದ ಕ್ರಾಂತಿಯನ್ನೆಬ್ಬಿಸಬೇಕು; ಹಾಗೆಯೇ ಸಮಾಜಕ್ಕೂ ತನ್ನ ಇತಿವೃತ್ತವನ್ನು ಎತ್ತಿ ತೋರಬೇಕು. ಜೀವನದಲ್ಲಿ ವೈವಿಧ್ಯವು ಮೂಡಿಬಂದಂತೆ, ಜನಾಂಗದಲ್ಲಿ ಅಲ್ಲಲ್ಲಿ ಜೀವಪೋಷಣೆ ಸ್ವಾರ್ಥವು 'ಉದರ ನಿಮಿತ್ತ' ವಾಗಿ ನಾನಾ ರೂಪುಗಳನ್ನು ಹೊಂದಿಕೊಂಡು ಬರುತ್ತವೆಯೆಂಬುದನ್ನು ನಾವರಿಯಲು ಮರೆಯಬಾರದು. ಅಂತಹ ಬಹುಶ್ರುತವೇಷದ—ಮಾದರಿಯು ಜೀರ್ಣೋದ್ಧಾರದಲ್ಲಿ ಬಿಂಬಿತವಾಗಿದೆ.

ಭೀಮರಾಯರೆಂಬ ವಕೀಲರು ತಮ್ಮ ಋಜುಮಾರ್ಗದಲ್ಲಿ, ಇಂದಿನದಿನವಲ್ಲಿ ಸಾಕಷ್ಟು ಸಂಪಾದನೆಯನ್ನು ಮಾಡಲು ಅಶಕ್ತರಾಗುವರು. ಆಗ ಅವರ ಧರ್ಮಪತ್ನಿ ಕಮಲಕ್ಕ ನೆರೆಮನೆಯ ಸುಂದ್ರಾಬಾಯಿಯ ಗಂಡನು ವಿದ್ಯಾವಂತನಲ್ಲದಿದ್ದರೂ ಸಂಪಾದಿಸಿ ಮನೆಗೆ ತಂದು, ಹೆಂಡತಿಯ ಕೈತುಂಬುವ ವಿಧಾನವನ್ನು ಹೇಳಿ ಭೀಮರಾಯರೂ ಅಂತಹದೇ ಮಾರ್ಗವನ್ನನುಸರಿಸಲು ಬೋಧಿಸುವಳು. ಭೀಮರಾಯರು ಧರ್ಮಸಂಕಟದಲ್ಲಿ ಬಿದ್ದರೂ—ತನ್ನ ಗೆಳೆಯನೇ ಆದ ತಿಮ್ಮಣ್ಣನ ಜತೆಗೂಡಿ ಅದೇ ಊರಿನ ಹಾಳು

ದ್ದ ಹನುಮಪ್ಪನ ಗುಡಿಯ ಜೀರ್ಣೋದ್ಧಾರದ ವ್ಯವಸ್ಥೆಗೆ ಹಣ ಕೂಡಿಸುವ ಯೋಚನೆಗೆ ಬರುವರು. ಇದು ವೈರಾಗ್ಯದಿಂದ ಹೊಟ್ಟೆ ತುಂಬುವ ಶ್ರೇಷ್ಠ ವಿಧಾನ. ಈ ವಿಧಾನದಿಂದ ತಿಮ್ಮಣ್ಣನು ಊರ ಹೊರಗೆ ಸಾಗಿ ತನ್ನ ಮನೆ ತುಂಬಿದರೆ, ಭೀಮರಾಯರು ಊರಲ್ಲೇ ಇದ್ದು ಜೀರ್ಣೋದ್ಧಾರದ ಪುಣ್ಯಕಾರ್ಯಕ್ಕಾಗಿ ಕಾಲಬುಡಕ್ಕೇ ಬಂದ ಕಣದಿಂದ ಕಮಲಕ್ಕನಿಗೆ ಶಹಾಪುರಿ ಸೀರೆಯನ್ನು ತರುವರು. ಜೀರ್ಣೋದ್ಧಾರದ ಗುರುತಾಗಿ ಹನುಮಪ್ಪನಿಗೆ ದೊರೆಯುವುದು ನಾಲ್ಕು ಭಕ್ತಿ ಕಲ್ಲಾದರೂ, ಭೀಮರಾಯರು ತನ್ನ ವ್ಯವಸ್ಥೆಯಿಂದ ಗಂಟು ಹೋರೆಗೈವ ಕಮಲಕ್ಕನಿಂದ ಮೋಹಕದೃಷ್ಟಿಯನ್ನು ಪಡೆದು ಜೀರ್ಣೋದ್ಧಾರ ಮಾಡುವರು."

ಪ್ರಚಲಿತ ವಾತಾವರಣಕ್ಕೆ ಈ ಚಿತ್ರವು ಹೊಸತಲ್ಲ. ಇಂತಹ ಜೀರ್ಣೋದ್ಧಾರ ಸಮಿತಿಗಳು ಇಂದು ಬೇಕಾದಷ್ಟಿವೆ. ಜನತೆ–ದೇಶ–ಕಾಲ ಇವುಗಳನ್ನನುಸರಿಸಿ ಈ ಜೀರ್ಣೋದ್ಧಾರಗಳು ವಿವಿಧ–ವರ್ಣಗಳನ್ನು ಅಳವಡಿಸಿಕೊಳ್ಳುವವು. ಲೇಖಕರು ನಿರೂಪಿಸಿದಂತೆ ಈ ಸೋಗು ತಳೆವಾಗಲೂ ಸ್ವಲ್ಪ ಮುಂದಾಲೋಚನೆ ಬೇಕಾಗುತ್ತದೆ ಈ ಸೋಗನ್ನು ತಳೆಪ ಮಂದಿ ಸಾಮಾನ್ಯ ಜನತೆಯಾದರೆ, ಅದಕ್ಕೆ ಬೆಲೆ ಇಲ್ಲ ಸುಳ್ಳು ಕೊಳ್ಕೆಯಾದರೂ ಅದು ಸತ್ಯದ ಧ್ವನಿಯೆಲ್ಲಿರಬೇಕಾದರೆ ಆ ಸೋಗನ್ನು ತಳೆವ ಮಂದಿ ತುಸು ಭಾರದಲ್ಲಿರಬೇಕು. ಆದುದರಿಂದಲೆ ಈ ಕತೆಯಲ್ಲಿ ಜೀರ್ಣೋದ್ಧಾರಸಮಿತಿಯಲ್ಲಿ ಭೀಮರಾಯರಂತಹ ವಕೀಲರೆ, ಅಧ್ಯಕ್ಷರಾಗಿದ್ದಾರೆ. ಈ ಮಂತ್ರವನ್ನು ಎಲ್ಲವನಾದುದರಿಂದಲೇ ತಿಮ್ಮಣ್ಣನು, ತನ್ನ ಪಾಲಿಗೆ ಬಂದ ಅಧ್ಯಕ್ಷ ಪದವಿಯನ್ನು "ನೀವು ವಕೀಲರು, ವಜನದಾರ್ರು" ಎಂದೆಂದು ಕಿಪ್ಪಿಸಿ ಬಿಟ್ಟು, ಕಾರ್ಯಸಾಧಕನಾದನು. ಕಮಲಕ್ಕನಿಗೂ ಈ ಮಂತ್ರದ ಹಿರಿಮೆ ಗೊತ್ತಿತ್ತು. ಆದುದರಿಂದಲೆ, ಆಕೆ ತಿಮ್ಮಣ್ಣನ ಮಾತನ್ನು ಅಲ್ಲಗಳೆಯಲಿಲ್ಲ. ಈ ಮಂತ್ರವು ಲೋಕವಿರುದ್ಧವೂ ಅಲ್ಲ. ಹಿರಿಯ ಸ್ಥಾನದಲ್ಲಿದ್ದ ವ್ಯಕ್ತಿಗಳು ಮುಂದಾದರೆ ತಾನೇ—ಜನತೆಗೂ ಆ ಬಗ್ಗೆ ವಿಶ್ವಾಸ ಹುಟ್ಟುತ್ತದೆ. ಅದಿಲ್ಲವಾದರೆ "ಯಥಾರ್ಥವನ್ನೇ ಮುಂದೊಡ್ಡಿದರೂ ಕಾರ್ಯಗತವಾಗಿಸಿದರೂ—ಜನತೆಯು ನಂಬುವುದಿಲ್ಲ. ಆದರೆ ಸ್ಥಾನಗೌರವದಿಂದ ಹೊರಟು ಜೀರ್ಣೋದ್ಧಾರದಲ್ಲಿ ಮಂದಿ ಒಮ್ಮೆ ಕುಸಿದು ಬಿದ್ದರೂ—ಮತ್ತೊಮ್ಮೆ ಅದೇ ಜೀರ್ಣೋದ್ಧಾರ ವೇಷಾಂತರದಿಂದ ಬಂದಾಗಲೂ, ಮುಂದು ಬರಲು ಉದಾಸೀನವಾಗದು. ಗರತಿಯು ಹಣೆಯಲ್ಲಿರಿಸಿದ ಕುಂಕುಮತ್ರೀಯಂತೆ, ಈ ಶಿರೋಲೇಖನವು ಈ ರೂಪಕಕ್ಕೆ ಸರ್ವಾತ್ಮನಾ ಒಪ್ಪುತ್ತದೆ. ರೂಪಕದ ಪಠನಾನಂತರ ಮತ್ತೊಮ್ಮೆ ಈ ಶಿರೋಲೇಖನವನ್ನು ಓದುಬೇಕು. ಆಗಲೇ ಅದರ ಸವಿ ಮನಸ್ಸನ್ನು ತುಂಬುವುದು. ಜೀರ್ಣೋದ್ಧಾರದ ವ್ಯಂಗ್ಯವು ಆಗಲೇ ಹೊರ ಧುಮುಕುವುದು ಈ ವ್ಯಂಗ್ಯದ ಉದ್ದೀಪಕಗಳಾಗಿ" ಭಾವಿಕರು ನಾಳು ದುಡ್ಡು ಕೊಟ್ಟರ ನಮಗಕ ಉಪಯೋಗ ಬೇಳತದ,—ಇದರಾಗ ಇಹಾನೂ ಸಾಧಸ್ತದ, ಪರಾನೂ ಸಾಧಸ್ತದ" "ಅಂತೂ ನೈರಾಗ್ಯದಿಂದನೂ ಹೊಟ್ಟೆ ತುಂಬತಿದ್ರ ನಾವು ಅದನ್ನತಿಯಾಕೆ ಹಿಡೀಬಾರದೂ ಅಂತೀನಿ" ಈ ಮಾತುಗಳು ಅಲ್ಲಲ್ಲಿ ಕಳೆ ಬೀರಿವೆ. ಅಂತೂ ಈ ಜೀರ್ಣೋದ್ಧಾರವು ವಾಚ್ಯವಾಗಿ ಸಾಗಿದ—ಜೀವನದ ಬಹುವೇಷದ ಒಂದು ವ್ಯಂಗ್ಯಮಾರ್ಗವು.

ಕಥಾಮಾರ್ಗದಲ್ಲಿ ಪ್ರಧಾನವಾಗಿ ಸುಳಿದಾಡುವ ಪಾತ್ರಗಳು ಮೂರು. ಭೀಮರಾಯ, ತಿಮ್ಮಣ್ಣ, ಕಮಲಕ್ಕ. ಅಂಗತ್ವೇನ ಭಾವಿಕರಾದ ನಾರಾಯಣರಾಯರ ಪ್ರವೇಶವಿದೆ. ಅದು ಕೇವಲ ತಿಮ್ಮಣ್ಣನ ಉದ್ಯಮವನ್ನೂ—ಜನತೆಯ ಶ್ರದ್ಧೆಯನ್ನು ಸೂಚಿಸಲನು ಗೊಳಿಸಿದೆ ಪಾತ್ರ. ಈ ಚಿಕ್ಕ ರೂಪಕದಲ್ಲಿ ಎತ್ತಿಕೊಂಡ ಮೂರು ಪಾತ್ರಗಳನ್ನು ಲೇಖಕರು ಸಮರ್ಪಕವಾಗಿ ತುಂಬಿದ್ದಾರೆ. ಅಲ್ಪಾವಧಿಯಲ್ಲಿ ಕೊನೆಗಾಣುವ ರೂಪಕದಲ್ಲಿ ಉಳಿದ ಪಾತ್ರಗಳನ್ನು ಪೂರ್ಣತೆಗೊಯ್ಯುವುದು–ಅದು ಲೇಖಕರ ಜಾಣ್ಮೆ. ಭೀಮರಾಯರಂತಹ ಋಜುಮಾರ್ಗದ ವ್ಯಕ್ತಿಯು, ತನ್ನ ಪತ್ನಿಯ ಜೀವನ ಸೌಲಭ್ಯದ ಮಾರ್ಗದಲ್ಲಿ ಕಾಲಿಡಲೊಪ್ಪಿದೆ ಅವೆಲ್ಲ 'ಉದರ ನಿಮಿತ್ತ' ವೆಂದು ಅಲ್ಲಗಳೆದು, ಕೊನೆಗೆ ತಿಮ್ಮಣ್ಣ ಹಾಗೂ ಪತ್ನಿಯು ಮಾತಿನಂತೆ ಜೀರ್ಣೋದ್ಧಾರಕ್ಕೆ ಮನದಂದು ಕಾರ್ಯೋನ್ಮುಖವಾಗಿ, ಕಾರ್ಯಸಾಧಕವಾಗಿ ವೈರಾಗ್ಯವೂ ಹೊಟ್ಟೆತುಂಬುತ್ತಿದೆಯೆಂದೆನ್ನುವಾಗ ನಾವು ನಗುತ್ತೇವೆ. ಕಮಲಕ್ಕನು ಆರಂಭದಿಂದಲೇ ಪತಿಯ ಮೇಲೆ ಅಧಿಕಾರವೆತ್ತಿ ಸಾಗಿ, ಆಗಾಗ ಸಲಹೆಯಿತ್ತು ತನ್ನ ಗಂಡನನ್ನು ಜೀರ್ಣೋದ್ಧಾರಕ್ಕೆ ಸಾಗಿಸಿ ಮೋಹಕ ದೃಷ್ಟಿ ಬೀರುವಾಗ— "ಗಂಡನ ಮೇಲೆ ಕೈವಾಡ ನಡೆಸಿದ ಕಮಲಕ್ಕನ ಪೂರ್ಣ ಸ್ವರೂಪವನ್ನು" ನಾವು ಕಾಣುತ್ತೇವೆ. ತಿಮ್ಮಣ್ಣನ ವ್ಯಕ್ತಿರೇಖೆಯನ್ನು "ನಾವು ಫರ್ತೀ ಮ್ಯಾಲೆ ಹೋದಾಗ ನಮಗ ತಿಳಿದ್ಹಾಂಗ ನಾವು ಮಾಡಿದ್ರಾತು!" ಎಂಬ ನುಡಿಯಿಂದಲೇ ಅರಿಯಬಹುದು. ಅವನು ಕಾರ್ಯ ಸಾಧಕ. ಅಂತೂ ತಿಮ್ಮಣ್ಣ ಭೂಲೋಕವನ್ನೇ ನುಂಗಿದರೆ, ಭೀಮರಾಯ–ಕಮಲಕ್ಕ ಇವರು ಯಮಲೋಕವನ್ನೂ ಬಿಡಲಾರರು.....

ಪ್ರಹಸನಕ್ಕೊಪ್ಪಿದ ಹಾಸ್ಯರಸದ ಅಭಿವ್ಯಕ್ತಿಯು ಭೀಮರಾಯರ—ಮತ್ತು ಕಮಲಕ್ಕರ ಸಂಭಾಷಣೆಯಲ್ಲಿ ಬಹು ಸುಂದರವಾಗಿ ತೋರುತ್ತಿದೆ. ಪತಿ–ಪತ್ನಿಯರ ಸರಸ ಸಲ್ಲಾಪದ ನುಣುಪು ಇಲ್ಲಿದೆ. ಆ ಬಳಿಕ ಹನುಮಪ್ಪನ ನೆನಪಾದಾಗ ತಿಮ್ಮಣ್ಣನ ಸಂತೋಷವನ್ನು ಕಂಡ ಭೀಮರಾಯರ ಮಾತು, ತಿಮ್ಮಣ್ಣ "ನಮಗ ತಿಳಿದ್ಹಾಂಗ ನಾವು ಮಾಡಿದ್ರಾತು—ಎಂಬ ಮಾತನ್ನು ತಪ್ಪಿಸಿ" ಇಲ್ಲೇನು ಮಣ್ಣಾಗೇನು ಒಟ್ಟು ಊಟಾ ಮಾಡಿದ್ರಾತು" ಎಂದೆನ್ನುವಾಗ ತಿಮ್ಮಣ್ಣನ ಚಾಕ–ಚಕ್ಯತೆಗೆ ಮೆಚ್ಚದಂತೆ ರೂಪಕದ ಕಥನ ಕೌಶಲಕ್ಕೂ ಮೆಚ್ಚಬೇಕು. ಹೀಗೆ ಪ್ರತಿಯೊಂದೆಡೆಯಲ್ಲೂ ಹಾಸ್ಯವೂ ಮಿನುಗುತ್ತಿದೆ.

ಅಂತೂ ಲೇಖಕರು ಸಂಭಾಷಣೆಯಲ್ಲಿ ಅಡಕವಾಗಿರಬೇಕಾದ ಸಾಧನಸಂಪತ್ತನ್ನು ತುಂಬಿದ್ದಾರೆಂದು ಮಾತ್ರವಲ್ಲ; ಪ್ರಕೃತಕ್ಕೆ ಬೇಕಾದಷ್ಟೇ ಉಪಕರಣಗಳೊಡನೆ ಈ ಚಿತ್ರವನ್ನು ಪೂರ್ಣ ತೆಗೆದೊಯ್ದಿದ್ದಾರೆ. ಆದುದರಿಂದಲೆ ಇದು ಕಾಲಕ್ಕೊಪ್ಪುವ ಕಾಲಗುಣಾತೀತವಲ್ಲದ ಒಂದು ಸತ್ಯ ಚಿತ್ರ.

(೧೬ನೆಯ ಪುಟದಿಂದ ಬಂದುದು)

ರೀತಿಗಳಿಂದ ಅಲ್ಲಿ ನಡೆಯುತ್ತಲಿದ್ದಿತು. ಭಾರತದಲ್ಲಿರುವ ಕುರೂಪಿಕಾಹು ಜನರು, ಅವರ ಆಚಾರ-ವಿಚಾರಗಳು ಅಂದು ತಿರಸ್ಕಾರೋದ್ಗಾರಗಳಿಗಾಗಿ ಪಶ್ಚಿಮದೇಶದಲ್ಲಿ ಪ್ರದರ್ಶಿತವಾಗುತ್ತಲಿದ್ದುವು. ಕುಮಾರಿ ಮೇಯೋನಂತಹವರಿಂದ, ಭಾರತದ ಅನಾಗರಿಕತೆ-ಅಸಭ್ಯತೆಗಳು ಪ್ರಕಟವಾಗುವಂತಹ ಸುಳ್ಳು ಸಂಗತಿಯನ್ನೊಳಗೊಂಡು ಗ್ರಂಥಗಳನ್ನು ಬರೆಯಿಸಿ ಪ್ರಕಟಿಸಲಾಗುತ್ತಿದ್ದಿತು. ಆದರೆ ಭಾರತೀಯರು ಸ್ವಾತಂತ್ರ್ಯ ಯುದ್ಧವನ್ನು ನಡೆಯಿಸಿ, ಪರಕೀಯರನ್ನು ದೇಶದಿಂದ ಓಡಿಸಿ, ತಮ್ಮ ರಾಷ್ಟ್ರವನ್ನು ಬಿಡುಗಡೆಗೊಳಿಸಿದರು. ಭಾರತವು ಸ್ವತಂತ್ರವಾದ ಮರುದಿನವೇ ಅದಕ್ಕೊಂದು ವೈಶಿಷ್ಟ್ಯ ಪ್ರಾಪ್ತವಾಗಿ ಬಿಟ್ಟಿದೆ.

ಅಂದು ಜಗತ್ತಿನಲ್ಲೆಲ್ಲ ತಿರಸ್ಕೃತವಾಗಿ ನಿಂತ ಭಾರತವು, ಇಂದು ಜಗತ್ತಿಗೆಲ್ಲ ಮಹತ್ತ್ವದ್ದಾಗಿ ತೋರಲಿಕ್ಕೆ ಕಾರಣವೆಂದರೆ, ಭಾರತದ ಭವ್ಯವೂ ದಿವ್ಯವೂ ಆದ ಪ್ರಾಚೀನಸಂಸ್ಕೃತಿ; ಅಕ್ಷಯವಾಗಿರುವಂತಹ ಜ್ಞಾನನಿಧಿ. ಪೂರ್ವದ ಜಗತ್‌ಖಂಡದಲ್ಲಿ ಅದಕ್ಕಿರುವ ಒಂದು ಸ್ಥಾನಬಲದ ವೈಶಿಷ್ಟ್ಯ. ಮಹಾತ್ಮಾಗಾಂಧೀಯವರು ತೋರಿಸಿಹೋದ ಜೀವನಮಾರ್ಗದ ಫಲವಾಗಿ, ಭಾರತವು ಇಂದು ಅನುಸರಿಸುತ್ತ ಹೊರಟಿರುವ ಲೌಕಿಕ ರಾಜನೀತಿಯೂ ಜಗತ್ತಿನ ಜನರನ್ನು ಆಕರ್ಷಿಸಿ ಬಿಟ್ಟಿರುವುದು. ಹಿಂದೆ ಅಜಾತಶತ್ರುಗಳೆಸಿಕೊಂಡು ಮೆರೆದ ಧರ್ಮರಾಜ, ಗೌತಮಬುದ್ಧರು ಭಾರತೀಯರ ರಾಜಕೀಯದ ಆದರ್ಶ ಗುರುಗಳು. ಎಂತಲೇ ಭಾರತ ರಾಷ್ಟ್ರವು ಇಡಿಯಾಗಿ ಅಜಾತಶತ್ರುತ್ವವನ್ನು ಸಾಧಿಸಬೇಕೆಂಬ ರಾಜಕೀಯ ಗುರಿಯನ್ನು ಕಣ್ಣೆದುರು ಇರಿಸಿಕೊಂಡಿದೆ. ಆ ಗುರಿಯನ್ನು ಸಾಧಿಸಬೇಕೆಂದೇ ಪ್ರತಿಯೊಂದು ಹೆಜ್ಜೆಯನ್ನು ಮುಂದಿಡುತ್ತಲಿದೆ. ಭಾರತದ ಈ ಮುಂದಡಿ, ಪೂರ್ವ ಪಶ್ಚಿಮ ರಾಷ್ಟ್ರಗಳನ್ನೆಲ್ಲ ಮರುಳುಗೊಳಿಸಿಬಿಟ್ಟಿದೆ.

ಸಾರಸ್ವತರಿಬ್ಬರಿಗೆ ಶ್ರದ್ಧಾಂಜಲಿ.

ಶ್ರೀ. ಹಲಸಂಗಿ ಚೆನ್ನಮಲ್ಲಪ್ಪ ಮತ್ತು ಶ್ರೀ. ರಾಜಪುರೋಹಿತರನ್ನು ಕಳೆದುಕೊಂಡ ಕಂಬನಿಗಳು, ಅರು-ಅರುವುದರಲ್ಲಿಯೆ, ಇನ್ನಿಬ್ಬರು ಕನ್ನಡದ ಸಾರಸ್ವತರ ಅಗಲಿಕೆಗಾಗಿ ಕಂಬನಿಗರೆಯುವ ಸಂದರ್ಭ ಒದಗಿದುದು ದುರ್ದೈವದ ಸಂಗತಿ.

ಉಡುಪಿಯ ಕಡೇಕಾರ್ ರಾಜಗೋಪಾಲಕೃಷ್ಣರಾಯರೆಂದರೆ, ಕನ್ನಡದ ಅಭಿಮಾನದ ಹಳೆಯ ಹುಲಿಗಳು. ಉಡುಪಿಗೆ ಹೋದ ಕನ್ನಡ ಸಾಹಿತ್ಯಿಕರಿಗೆ, ರಾಯರ ಮನೆಯೆಂದರೆ ಆದರಾತಿಥ್ಯಗಳ ತಂಗುದಾಣವಾಗಿತ್ತು. ಈ ಸಂಸ್ಕೃತಿಸಂಪನ್ನ ಹಿರಿಯರು ಕಳೆದ ಸಪ್ಟಂಬರ್ ತಿಂಗಳ ೧೭ನೆಯ ತಾರೀಖಿನಂದು ಕನ್ನಡ ತಾಯಿಯ ತೊಡೆಯಿಂದಿಳಿದು ಹೊರಟುಹೋದುದು ತುಂಬ ದುಃಖದಾಯಕವಾದ ಸಂಗತಿ.

ಶ್ರೀಮಾನ್ ಎಂ. ಆರ್. ಶ್ರೀನಿವಾಸಮೂರ್ತಿಯವರ ಹೆಸರು ವರ್ತಮಾನ ಕನ್ನಡಿಗರ ಮನೆಗಳಲ್ಲಿ ಹಿರಿಯರಿಗೂ ಕಿರಿಯರಿಗೂ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಮನೋಹರ ನೀಲ ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ ಬೆಳಿಸುತ್ತದೆ. ಬಾಲನರಿಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ ಜೀವಿನಿ ಟಾನಿಕ್

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯ ಬಂಜೆತನಕ್ಕೆ ಸಿದ್ಧಯೋಗ

ಅಜೀರ್ಣ ವಿಕಾರಗಳಿಗೆ ಪಂಚವಟಿ ರಾಮಬಾಣ

ಸದ್ವೈದ್ಯ ಶಾಲಾ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರಖಾನೆ.

ಸಾಹಿತ್ಯ ಪರಿಚಯವುದ್ದಾಗಿದೆ. ಕನ್ನಡಿಗರ ಹಿರಿಯ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿಗೆ ಅಧ್ಯಕ್ಷರಾಗಿದ್ದುಕೊಂಡು, ಸಜೀವವಾಗಿ ಕನ್ನಡದ ಸೇವೆಯನ್ನು ಮಾಡುತ್ತಿದ್ದವರು. ಸಹೃದಯ ಸಾಹಿತ್ಯಿಕರು. ಕನ್ನಡ ಸಾಹಿತ್ಯದ ವಿವಿಧಾಂಗಗಳನ್ನೂ ಆಳವಾಗಿ ಅಭ್ಯಾಸಿಸಿದವರು.

ಆಕರ್ಷಕವಾದ ವ್ಯಕ್ತಿತ್ವ. ಮಾತಿನಲ್ಲಿ ಮೆಲ್ಲು ಇದ್ದರೂ ಕನ್ನಡಕ್ಕಾಗಿ ಕಾದಾಡಬೇಕಾದಾಗ ಅವಶ್ಯಕವಿದ್ದ ಬಲ್ಲೂ ಇವರ ನುಡಿಯಲ್ಲಿತ್ತು. ಒಳ್ಳೆಯ ವಾಗ್ಮಿಗಳು. ಸಂದರ್ಭಕ್ಕೆ ಬೇಕಾಗುವ ಅವತರಣಿಕೆಗಳೆಲ್ಲ ಅವರ ನಾಲಗೆಯ ತುದಿಯ ಮೇಲೆ ನಲಿಯುತ್ತಿದ್ದುವು. ಕನ್ನಡಕ್ಕಾಗಿ ಇನ್ನೂ ದುಡಿಯಬೇಕೆಂಬ ಉತ್ಸಾಹವಿರುವಾಗಲೇ, ಆಕಸ್ಮಾತ್ತಾಗಿ ಕಾಲರಾಯನು ಕಬ್ಬಳಿಸಿಕೊಂಡು ಹೋದ. ತಾ. ೧೬-೯-೫೫ರ ಇರುಳು, ಮೃತ್ಯುದೇವತೆ ಅವರನ್ನು ಕನ್ನಡಿಗರಿಂದ ಅಗಲಿಸಿಬಿಟ್ಟಿತು. ದಿವಂಗತ ಎಂ. ಆರ್. ಶ್ರೀಯವರ ಅಕಾಲ ಮರಣವು ಕನ್ನಡಿಗರನ್ನು ಹೆಚ್ಚಿನ ವ್ಯಥೆಗೆ ಗುರಿಮಾಡಿದೆ.

ಇವರಿಬ್ಬರ ಅಗಲಿಕೆಯು ನಾಡಿಗೆ ತುಂಬಾರಾದರೂ ನಷ್ಟ. ಇಬ್ಬರಿಗೂ ಶ್ರದ್ಧಾಂಜಲಿಗಳನ್ನು ಸಮರ್ಪಿಸುವುದು ಅಖಿಲಕರ್ನಾಟಕದ ಕರ್ತವ್ಯವಾಗಿದೆ.

ಬಾಗಲಕೋಟೆಯಲ್ಲಿ ನಮ್ಮ ಏಜಂಟರು:
ಮೆಹಬೂಬ ನ್ಯೂಜ್‌ಪೇಪರ ಏಜನ್ಸಿ

ನಿಮ್ಮ ಮೆಚ್ಚಿಗೆಯ ಕನ್ನಡ ಧ್ವನಿಮುದ್ರಿಕೆಗಳು.

ಭೀಮಸೇನ ಜೋಶಿ

N 91026	ಬಾ ಭೃಗಂವೆ ಬಾ ಏ ಬಾ ಬಾರೆ ಗುಣವಂತಿ

ಸ್ರಾ. ಜಯವಂತಿ ಹಿರೇಬೇಟಿ

N 91022	ಸೋಮನಾಥಪುರದ ದೇವಾಲಯ ಕಂಡತಪ್ಪ.

ಗಂಗೂಬಾಯಿ ಎಡ್ಯಾಂವಿ

N 91015	ಸೊಸೆಯರ ನೀತಿ. ಸಮಾಜ ನೀತಿ.

ಶಾರದಾ ನಾಡಕರ್ಣಿ, ಮೀನಾಕ್ಷಿ ಶ್ರಾಸಿ ಮತ್ತು ಪಾರ್ಟಿ

N 91016	ಸಿದ್ಧರಾಮೇಶ್ವರ ಸ್ತುತಿ ಸಿದ್ಧರಾಮೇಶ್ವರನ ಆರತಿ.

ಎ. ಜಿ. ನೀಲಗಾರ

N 91010	ಹುಬ್ಬಿನಮ್ಯಾಲೆ ಕೈ ಇಟ್ಟಕೊಂಡ ಚಂದ್ರವದನೆಯರು.

ಪ್ರೊ. ಬಸವರಾಜ ರಾಜಗುರು

N 91014	ಜಾರುತಿದೆ ಜೀವನದ ದೇವರ ಮನೆಕಡೆ ನೋಡುತ್ತಿರೆನಾ.

ಭೀಮರಾಯಪ್ಪ ಮತ್ತು ಬಾಳಪ್ಪ

N 88016	ಬೀಸುವ ಪದ ಭಾಗ ೧–೨

ಗಂಗೂಬಾಯಿ ಎಡ್ಯಾಂವಿ ಮತ್ತು ಗಂಗೂಬಾಯಿ ಮಾವೀಕಟ್ಟಿ

N 91012	ಕೋಲಿನ ಪದ ಭಾಗ ೧–೨

ಬಸಪ್ಪ ಮಾಸ್ತರ ಹುಲಕುಂದ ಮತ್ತು ಪಾರ್ಟಿ

FT 17360	ಹಳ್ಳಿಯ ತರುಣ. ಹಳ್ಳಿಯ ಹುಡುಗ.

ಮಧ್ವರಾಜ ಉಸ್ಮುರ್ಜಿ, ಬೀಳಗಿ

GE 23603	ನಾವು ನೀವು ಕೂಡಿದ್ದೇವ. ಬಂದದ ಸೂರ್ಯನ ಹೊಳಿ.

ಪಿ. ಆರ್. ಭಾಗವತ

GE 23606	ರಾಯರು ಬಂದರು. ಭಾಗ ೧–೨

ಮೀರಾ ಗೋಳೀಕೇರಿ

GE 23613	ಬಾ, ರಸಿಕನೆ ಬಾ. ನೀನೆ ಅಕ್ಕಾ ನಾನೇ ತಂಗಿ.
GE 23615	ರಾಘವೇಂದ್ರಸ್ತುತಿ ತುಂಗಾತೀರ ವಿರಾಜಂ.

ರಾಜೀವ ಪುರಂಧರೆ

GE 23614	ನಗ ನಗತ ನಡದಿಯಲ್ಲೆ, ಎಲ್ಲಿ ಹೋದ್ಹರು ನನ್ನ ಕಡೆಕಣ್ಣಾ.

ಕಮಲ ಹಾಗೆ

GE 23616	ದಾಟಸೂ, ಮಾಯಾಸಾಗರವಾ. ನನಗ ಬೇಕಾದ ಗಂಡನ ಮಾಡಿಕೊಂಡೆ

ಶ್ರೀಮತಿ ಸುಶೀಲಾ ಟೇಂಬೆ

GE 23604	ಶಿವಸ್ತುತಿ. ರತಿವಿಲಾಪ

ಬಿ. ಜಿ. ರಾಘವೇಂದ್ರ

GE 23601	ತನುವು ನಿನ್ನದು. ದೂರಾ! ಬಹುದೂರಾ!

ಸಂಗಪ್ಪಾ ಬಸಪ್ಪಾ ಬೆಟಗೇರಿ ಮತ್ತು ಪಾರ್ಟಿ

RL 2733	ದ್ರೌಪದಿ ಸತ್ವಪರೀಕ್ಷೆ. ಭಾಗ ೧–೨

ಕನ್ನಡ ಧ್ವನಿಮುದ್ರಿಕೆಗಳೆಲ್ಲಾ ನಮ್ಮ ಡೀಲರ ಕಡೆಗೆ ಕೇಳಲು ದೊರೆಯುತ್ತವೆ.

ISSUED BY

THE GRAMOPHONE COMPANY LTD.
COLUMBIA GRAMOPHONE CO. LTD.

CALCUTTA.... BOMBAY.... MADRAS — DELHI

ಶರತ್‌ಪ್ರಕಾಶನ ಮಂದಿರ. ಧಾರವಾಡ

(ಪುಸ್ತಕ ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು)

ಕನ್ನಡ ನಾಡಿನ ವಾಚನಾಲಯಗಳ ಸಂಚಾಲಕರು ಜ್ಞಾಪಕದಲ್ಲಿ ಇರಿಸಿಕೊಳ್ಳಬೇಕು!
ತಮ್ಮ ವಾಚನಾಲಯಕ್ಕೆ ಬೇಕಾಗುವ ಯಾವ ಕನ್ನಡ ಪುಸ್ತಕಗಳನ್ನೂ ಯೋಗ್ಯ ಬೆಲೆಗೆ ಸಮಯಕ್ಕೆ ಸರಿಯಾಗಿ ಪೂರಯಿಸಲಾಗುವುದು.

'ಆನಂದಕಂದ'ರ ಕಥೆ, ಕಾದಂಬರಿ, ಕವನಸಂಕಲನ, ನಾಟಕಸಂಕಲನ, ಸಾಹಿತ್ಯ ಸಂಸ್ಕೃತಿಯ ಗ್ರಂಥಗಳು ಎಲ್ಲವೂ ನಮ್ಮಲ್ಲಿ ದೊರೆಯುವವು. ವ್ಯಾಪಾರಿಗಳಿಗೆ ಅನುಕೂಲ ದರದ ಕಮೀಶನ್ ಕೊಡಲಾಗುವುದು. ಎಲ್ಲರೂ ನಮ್ಮೊಡನೆ ವ್ಯವಹಾರ ಬೆಳೆಯಿಸಬೇಕು.

ನಮ್ಮ ಮಂದಿರ ಪ್ರಕಟಿಸಿದ 'ಆನಂದಕಂದ'ರ ಸಾಮಾಜಿಕ ಕಾದಂಬರಿ:

ಮುಗಿಲ ಮದುವೆ

೧೯೩೦ನೆಯ ಸತ್ಯಾಗ್ರಹ ಚಳವಳಿಯ ಹಿನ್ನೆಲೆಯಲ್ಲಿ ಉತ್ತರಕರ್ನಾಟಕದ ಸಾಮಾಜಿಕ ಜೀವನವನ್ನು ವಿವಿಧ ಮುಖದಲ್ಲಿ ಚಿತ್ರಿಸಿ ತೋರಿಸಿದ ರಮ್ಯ ಕಥಾನಕ. ಓದಲು ಕೈಯ್ಯಲ್ಲಿ ತೆಗೆದುಕೊಂಡರೆ, ಮುಗಿಸುವ ವರೆಗೂ ಪುಸ್ತಕವನ್ನು ಕೆಳಗೆ ಇರಿಸಲಿಕ್ಕಾಗದಂತಹ ಆಕರ್ಷಕವಾದ ಕತೆಗಾರಿಕೆ. ಓದಿದ ನಂತರವಂತೂ ಧನ್ಯವಾದಗಳ ಸುರಿಮಳೆ!

ಕ್ರೌ. ಅ. ೩೫೦ ಪುಟಗಳು ಸಾದಾ ಪ್ರತಿಗೆ ೪-೦-೦; ಸುಂದರ ಪ್ರತಿಗೆ ೪-೮೨-೦.

ಬೆಳವಡಿ ಮಲ್ಲಮ್ಮ
(ಶರಂಗನಾಟಕ ಸಂಕಲನ)
ಕ್ರೌ. ಅ. ೧೧೬ ಪುಟಿ. ಬೆಲೆ ೧-೮-೦

ಕಾರಹುಣ್ಣಿವೆ
(ಕವನಸಂಕಲನ)
ಕ್ರೌ. ಅ. ೧೨೮ ಪುಟಿ. ಬೆಲೆ ಸಾದಾ ೨-೦-೦
ಸುಂದರ ೨-೮-೦

ಸದ್ಯ ನಮ್ಮಲ್ಲಿ ದೊರೆಯುವ 'ಆನಂದಕಂದ'ರ ಬೇರೆ ಗ್ರಂಥಗಳು

ಕಾದಂಬರಿ	ಕವನ ಸಂಕಲನ	ಕಥಾಸಂಕಲನ	ಇತರ ಗ್ರಂಥಗಳು
ರಾಜಯೋಗಿ	ವಿರಹಿಣಿ	ಬಡತನದ ಬಾಳು	ಕರ್ನಾಟಕ ಜನಜೀವನ
ಸುದರ್ಶನ	ಒಡನಾಡಿ	ನಮ್ಮ ಬದುಕು	ಜೀವನ ಚರಿತ್ರ
ಅಶಾಂತಿಪರ್ವ		ಸಂಸಾರ ಚಿತ್ರ	ಶ್ರೀ ಬಸವಣ್ಣನವರು
ಮುಗಿಲ ಮದುವೆ		ಮಾತನಾಡುವ ಕಲ್ಲು	

ಅಲ್ಲದೆ ಶ್ರೀ ಹುದ್ದಾರರ 'ಚಿತ್ರಕಲಾಪ್ರವೇಶ'ವೂ ಚಾಣಕ್ಯನ 'ಜಾತೀಯ ಸಮಸ್ಯೆ' 'ಕರ್ನಾಟಕ ವಿಭೀಕರಣ' ಈ ಕಿರಿಹೊತ್ತಿಗೆಗಳೂ ದೊರೆಯುವವು.

ಶರತ್‌ಪ್ರಕಾಶನ ಮಂದಿರಕ್ಕೆ ಈ ರೂ. ಸಲ್ಲಿಸಿ ಗ್ರಾಹಕಸದಸ್ಯರಾದವರಿಗೆ ವಿಶೇಷ ಸವಲತ್ತುಗಳು. ಬೇಗನೆ ಪತ್ರವ್ಯವಹಾರವನ್ನು ಮಾಡಿರಿ.

ಸಂಚಾಲಕ:
ಎಸ್. ಡಿ. ಧರಮಟ್ಟಿ, ಶರತ್‌ಪ್ರಕಾಶನ ಮಂದಿರ, ಧಾರವಾಡ

Printed by N. A. Hoskeri at the Vijaya Press, Dharwar, and published forhet Proprietors Jayanti Publications, by S. D. Dharmatti at the Jayanti Office, Dharwar

ನವಂಬರ್
೧೯೫೩

ಈ ಸಂಚಿಕೆಯಲ್ಲಿ :

ತಿರುಳರ ತಂಡದ ಹಾವಳಿ (ಸಂಪಾದಕೀಯ)	ಸಂಪಾದಕರು	೨೦೧
ನಾಡನಡೆ (ಸಾಂದರ್ಭಿಕ ಟಿಪ್ಪಣಿ)	'ಕಾಲಭೈರವ'	೨೦೩
ಪುಣ್ಯಭೂಮಿ (ಸಣ್ಣಕತೆ)	ಕು. ಮೀರಾ ರಾತೋಡ, ಹುಬ್ಬಳ್ಳಿ	೨೦೫
ಕ್ರಾಂತಿಕಾರಿ ಕ್ರೋಪಾಟಕಿನ್ (ವ್ಯಕ್ತಿಪರಿಚಯ)	'ಅಮಲಕ'	೨೦೯
ತಲೆತಿರುಕನ ಹಾಡು (ನವ್ಯಕವನ)	ಶ್ರೀ. ಶಾಂತಿನಾಥ ದೇಸಾಯಿ ಎಂ. ಎ. ಮುಂಬಯಿ	೨೧೩
ಹುಡುಗರ ಆಟ (ಚಿಕ್ಕವರಿಗಾಗಿ ನಗೆಯಾಟ)	ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ	೨೧೪
ಸಂಚವಾರ್ಷಿಕ ಯೋಜನೆ (ಲೇಖಾಂಕ ೬)	ಶ್ರೀ. ವಿ. ಸಿ. ಹಿತ್ತಲಮನಿ, ಬಿ. ಎಸ್‌ಸಿ. (ಅಗ್ರಿ)	೨೧೬
ಕೋರಿಯಾ (ಕವನ)	ಶ್ರೀ. ಮಂಗೇಶ ನಾಡಕರ್ಣಿ ಬಿ ಎ. ಧಾರವಾಡ	೨೧೯
ತೆರೆದ ಪರದೆ (ಸಣ್ಣಕತೆ)	ಶ್ರೀ. ಜೇಂದ್ರೆ ಲಕ್ಷ್ಮಣರಾಯರು, ಧಾರವಾಡ	೨೨೦
ಕಾಟುಂಬಿಕ ಚಿತ್ರಗಳು (ಸ್ವಭಾವಚಿತ್ರ)	ಶ್ರೀಮತಿ ಸರೋಜಿನಿ ಮಹಿಷಿ ಎಂ. ಎ. ಬೆಳಗಾಂವಿ	೨೨೫
ಮೂರು ಭಾವರೂಪಗಳು (ಕಿರುಗತೆ)	ಶ್ರೀ. ಎಚ್. ವಿ. ನಾಗೇಶ, ಕಲಬುರ್ಗಿ	೨೨೮
ಕನ್ನಡ ಜನಪದ ಗೀತಗಳು (ಛಂದೋವಿಚಾರ)	ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ	೨೩೯
ಮುದುವೆಯ ತೆರವಿನ ಪದ್ಧತಿ	ಶ್ರೀ. ಸಂಜೀವ ಅಕ್ಕೋಶ್ವರ, ಧಾರವಾಡ	೨೩೨
ಸಾಹಿತ್ಯ ವಿಹಾರ (ವ್ಯಾಕರಣ ಚರ್ಚೆ)	ಶ್ರೀ. ಎಂ. ಕೇಶವಭಟ್ಟ 'ವಿದ್ವಾನ್' ಕಾಸರಗೋಡು	೨೩೪
ಸಾಹಿತ್ಯ ವಿಮರ್ಶೆಯ ಶಿಕ್ಷಣದಂಗ	ಶ್ರೀ. ಎಸ್. ವಿ. ಹೊಸಮನಿ, ಉಡುಪಿ	೨೩೭
ಸಾದರ ಸ್ವೀಕಾರ	ಹೊದಿಕೆಯ ೩ನೆಯ ಪುಟ	

ಸಂಪುಟ ೧೩
ಸಂಚಿಕೆ ೬
ಬೆಲೆ ೮ ಆಣೆ

JAYANTI

ಶರತ್‌ಪ್ರಕಾಶನ ಮಂದಿರ. ಧಾರವಾಡ

(ಪುಸ್ತಕ ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು)

ಕನ್ನಡ ನಾಡಿನ ವಾಚನಾಲಯಗಳ ಸಂಚಾಲಕರು ಜ್ಞಾಪಕದಲ್ಲಿ ಇರಿಸಿಕೊಳ್ಳಬೇಕು!
ತಮ್ಮ ವಾಚನಾಲಯಕ್ಕೆ ಬೇಕಾಗುವ ಯಾವ ಕನ್ನಡ ಪುಸ್ತಕಗಳನ್ನೂ ಯೋಗ್ಯ
ಬೆಲೆಗೆ ಸಮಯಕ್ಕೆ ಸರಿಯಾಗಿ ಪೂರಯಿಸಲಾಗುವುದು.

'ಆನಂದಕಂದ'ರ ಕಥೆ, ಕಾದಂಬರಿ, ಕವನಸಂಕಲನ, ನಾಟಕಸಂಕಲನ, ಸಾಹಿತ್ಯ ಸಂಸ್ಕೃತಿಯ ಗ್ರಂಥಗಳು ಎಲ್ಲವೂ ನಮ್ಮಲ್ಲಿ ದೊರೆಯುವವು. ವ್ಯಾಪಾರಿಗಳಿಗೆ ಅನುಕೂಲ ದರದ ಕಮೀಶನ್ ಕೊಡಲಾಗುವುದು. ಎಲ್ಲರೂ ನಮ್ಮೊಡನೆ ವ್ಯವಹಾರ ಬೆಳೆಯಿಸಬೇಕು.

ನಮ್ಮ ಮಂದಿರ ಪ್ರಕಟಿಸಿದ 'ಆನಂದಕಂದ'ರ ಸಾಮಾಜಿಕ ಕಾದಂಬರಿ:

ಮಗಳ ಮದುವೆ

೧೯೩೦ನೆಯ ಸತ್ಯಾಗ್ರಹ ಚಳವಳಿಯ ಹಿನ್ನೆಲೆಯಲ್ಲಿ ಉತ್ತರಕರ್ನಾಟಕದ ಸಾಮಾಜಿಕ ಜೀವನವನ್ನು ವಿವಿಧ ಮುಖದಲ್ಲಿ ಚಿತ್ರಿಸಿ ತೋರಿಸಿದ ರಮ್ಯ ಕಥಾನಕ. ಓದಲು ಕೈಯ್ಯಲ್ಲಿ ತೆಗೆದುಕೊಂಡರೆ, ಮುಗಿಸುವ ತನಕ ಪುಸ್ತಕವನ್ನು ಕೆಳಗೆ ಇರಿಸಲಿಕ್ಕಾಗದಂತಹ ಆಕರ್ಷಕವಾದ ಕತೆಗಾರಿಕೆ. ಓದಿದ ರಸಿಕರಿಂದ ಧನ್ಯವಾದಗಳ ಸುರಿಮಳೆ!

ಕ್ರೌ. ಅ. ೩೫೦ ಪುಟಗಳು ಸಾದಾ ಪ್ರತಿಗೆ ೪-೦-೦; ಸುಂದರ ಪ್ರತಿಗೆ ೪-೦೨-೦.

ಬೆಳವಡಿ ಮಲ್ಲಮ್ಮ

(ತರಂಗನಾಟಕ ಸಂಕಲ)

ಕ್ರೌ. ಅ. ೧೧೬ ಪುಟ. ಬೆಲೆ ೧-೮-೦

ಕಾರಹುಣ್ಣಿವೆ

(ಕವನಸಂಕಲನ)

ಕ್ರೌ. ಅ. ೧೨೮ ಪುಟ. ಬೆಲೆ ಸಾದಾ ೨-೦-೦
ಸುಂದರ ೨-೮-೦

ಸದ್ಯ ನಮ್ಮಲ್ಲಿ ದೊರೆಯುವ 'ಆನಂದಕಂದ'ರ ಬೇರೆ ಗ್ರಂಥಗಳು

ಕಾದಂಬರಿ	ಕವನ ಸಂಕಲನ	ಕಥಾಸಂಕಲನ	ಇತರ ಗ್ರಂಥಗಳು
ರಾಜಯೋಗಿ	ವಿರಹಿಣಿ	ಬಡತನದ ಬಾಳು	ಕರ್ನಾಟಕ ಜನಜೀವನ
ಸುದರ್ಶನ	ಒಡನಾಡಿ	ನಮ್ಮ ಬದುಕು	ಜೀವನ ಚರಿತ್ರ
ಅಶಾಂತಿಪರ್ವ		ಸಂಸಾರ ಚಿತ್ರ	ಶ್ರೀ ಬಸವಣ್ಣನವರು
ಮಗಳ ಮದುವೆ		ನೂತನಾಡುವ ಕಲ್ಲು	

ಅಲ್ಲದೆ ಶ್ರೀ ಹುದ್ದಾರರ 'ಚಿತ್ರಕಲಾಸ್ಪರ್ಧೇಶ'ವೂ ಚಾಡಿಯ ಚಾಣಕ್ಯನ 'ಜಾತೀಯ ಸಮಸ್ಯೆ' 'ಕರ್ನಾಟಕ ವಿಭೀಕರಣ' ಈ ಕಿರಿಹೊತ್ತಿಗೆಗಳೂ ದೊರೆಯುವವು.

ಶರತ್‌ಪ್ರಕಾಶನ ಮಂದಿರಕ್ಕೆ ಈ ದಿನ ಸಲ್ಲಿಸಿ ಗ್ರಾಹಕಸದಸ್ಯರಾದವರಿಗೆ ವಿಶೇಷ
ಸವಲತ್ತುಗಳು. ಬೇಗನೆ ಪತ್ರವ್ಯವಹಾರವನ್ನು ಮಾಡಿರಿ.

ಸಂಚಾಲಕ:

ಎಸ್. ಡಿ. ಧರಮಟ್ಟಿ, ಶರತ್‌ಪ್ರಕಾಶನ ಮಂದಿರ, ಧಾರವಾಡ

Printed by N. A. Hoskeri at the Vijaya Press, Dharwar, and published forhet Proprietors Jayanti Publications, by S. D. Dharmatti at the Jayanti Office, Dharwar

ನವಂಬರ್
೧೯೫೩

ಈ ಸಂಚಿಕೆಯಲ್ಲಿ :

ತಿರುಕರ ತಂಡದ ಹಾವಳಿ (ಸಂಪಾದಕೀಯ)	ಸಂಪಾದಕರು	೨೦೧
ನಾಡನಡೆ (ಸಾಂದರ್ಭಿಕ ಟಿಪ್ಪಣಿ)	'ಕಾಲಭೈರವ'	೨೦೩
ಪುಣ್ಯಭೂಮಿ (ಸಣ್ಣಕತೆ)	ಕು. ಮೀರಾ ರಾತೋಡ, ಹುಬ್ಬಳ್ಳಿ	೨೦೫
ಕ್ರಾಂತಿಕಾರಿ ಕ್ರೋಪಾಟಕಿನ್ (ವ್ಯಕ್ತಿಪರಿಚಯ)	'ಅಮಲಕ'	೨೦೯
ತಲೆತಿರುಕನ ಹಾಡು (ನವ್ಯಕವನ)	ಶ್ರೀ. ಶಾಂತಿನಾಥ ದೇಸಾಯಿ ಎಂ. ಎ. ಮುಂಬಯಿ	೨೧೩
ಹುದುಗರ ಆಟ (ಚಿಕ್ಕವರಿಗಾಗಿ ನಗೆಯಾಟ)	ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ	೨೧೪
ಪಂಚವಾರ್ಷಿಕ ಯೋಜನೆ (ಲೇಖಾಂಕ ೬)	ಶ್ರೀ. ವಿ. ಸಿ. ಹಿತ್ತಲಮನಿ ಬಿ. ಎಸ್‌ಸಿ. (ಆಗ್ರಿ)	೨೧೬
ಕೋರಿಯಾ (ಕವನ)	ಶ್ರೀ. ಮಂಗೇಶ ನಾಡಕರ್ಣಿ ಬಿ ಎ. ಧಾರವಾಡ	೨೧೯
ತೆರೆದ ಹರದೆ (ಸಣ್ಣಕತೆ)	ಶ್ರೀ. ಜೇಂದ್ರೆ ಲಕ್ಷ್ಮಣರಾಯರು, ಧಾರವಾಡ	೨೨೦
ಕೌಟುಂಬಿಕ ಚಿತ್ರಗಳು (ಸ್ವಭಾವಚಿತ್ರ)	ಶ್ರೀಮತಿ ಸರೋಜಿನಿ ಮಹಿಷಿ ಎಂ. ಎ. ಬೆಳಗಾಂವಿ	೨೨೫
ನೂರು ಭಾವರೂಪಗಳು (ಕಿರುಗತೆ)	ಶ್ರೀ. ಎಚ್. ವಿ. ನಾಗೇಶ, ಕಲಬುರ್ಗಿ	೨೨೮
ಕನ್ನಡ ಜನಪದ ಗೀತಗಳು (ಶುದ್ಧೋವಿಚಾರ)	ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ	೨೩೯
ಮದುವೆಯ ತೆರವಿನ ಪದ್ಧತಿ	ಶ್ರೀ. ಸಂಜೀವ ಅಕ್ಕೈಕ್ಕೇಶ್ವರ, ಧಾರವಾಡ	೨೪೨
ಸಾಹಿತ್ಯ ವಿಹಾರ (ವ್ಯಾಕರಣ ಚರ್ಚೆ)	ಶ್ರೀ. ಎಂ. ಕೇಶವಭಟ್ಟ 'ವಿದ್ವಾನ್' ಕಾಸರಗೋಡು	೨೪೪
ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ	ಶ್ರೀ. ಎಸ್. ವಿ. ಹೊಸಮನಿ, ಉಡುಪಿ	೨೪೭
ಸಾದರ ಸ್ವೀಕಾರ		ಹೊದಿಕೆಯ ೩ನೆಯ ಪುಟ

ಸಂಪುಟ ೧೩
೫
ಸಂಚಿಕೆ ೬
೫
ಬೆಲೆ ೮ ಆಣೆ

JAYANTI

ಆನಂದ ಗ್ರಂಥಮಾಲಾ, ಹುಬ್ಬಳ್ಳಿ

(ಸಂ.: **ಶ್ರೀ. ಪಿ. ವೆಂಕೋಬಾಚಾರ್ಯ ಬಿ. ಎ. ಬಿ. ಟಿ.**)

೧ ಪುಷ್ಪಹಾರ (ಕಾದಂಬರಿ)	೧-೧೫-೦
೨ ಇನೆತ್ (ಮೋಪಾಸಾ ಕಾದಂಬರಿ)	೧-೧೨-೦
೩ ಸೈಮನ್ನನ ತಂದೆ (ಮೋಪಾಸಾನ ಕತೆಗಳು)	೨-೪-೦
೪ ಪೂರ್ಣಿಮಾ (ಸಂಸಾರ ಸುಖದ ಚಿತ್ರಗಳು)	೨-೪-೦
೫ ಮನೋರಾಜ್ಯ (ಮೂರಂಕದ ನಾಟಕ)	೨-೪-೦
೬ ಮೋಪಾಸಾನ ಓಲೆಗಳು (ಜೀವನ ಚರಿತ್ರೆ)	೨-೦-೦
೭ ಮುಡಿಯದ ಹೂ (ಮೋಪಾಸಾನ ಕತೆಗಳು)	೧-೪-೦
೮ ಕಲ್ಪನಾ ವಿಲಾಸ (ಸಣ್ಣ ಕತೆಗಳು)	೧-೪-೦
	೧೫-೪-೦

ಈ ಎಂಟು ಪುಸ್ತಕಗಳನ್ನು ಕೇವಲ ರೂ. ೧೨-೪-೦ ಅಂಚೆ ವೆಚ್ಚ ಸಹಿತ ಕಳಿಸಿಕೊಡುವೆವು. ಶಾಲೆ, ಮತ್ತು ವಾಚನಾಲಯಗಳಿಗೆ ಒಳ್ಳೆ ಸುಸಂಧಿ. ಇಂದೇ ಬರೆಯಿರಿ.

೬೦೬೦ ಗೌಳೀಗಲ್ಲಿ **ಪಿ. ವಿ. ಆಚಾರ್ಯ & ಕಂ.**

ಹುಬ್ಬಳ್ಳಿ ಸಂಚಾಲಕರು, ಆನಂದ ಗ್ರಂಥಮಾಲಾ.

---

೧. ಸಿನೇಮಾ ತಾರೆಯರ ದ್ವಿವರ್ಣರಂಜಿತ **ಮುಖಪುಟ.**

೨. ಹಳ್ಳಿಗರಿಗೆ ಬೋಧಪ್ರದವಾದ **ಸಂಭಾಷಣೆ.**

೩. ದೇಶ-ವಿದೇಶಗಳ ನಾವಿನ ಘಟನೆಯನ್ನು ತಿಳಿಸುವ **ವಾರದ ವರದಿ.**

೪. ಮಕ್ಕಳಿಂದಲೇ ಬರೆಯಲ್ಪಡುವ **ಮಕ್ಕಳಸೋಜು.**

೫. ಪ್ರತಿ ಸಂಚಿಕೆಯಲ್ಲಿ ಕನಿಷ್ಠ ೧೫ ಚಿತ್ರಗಳು.

೬. ಭವಿಷ್ಯ, ಸಿನೇಮಾ, ರಾಜಕೀಯ ವಿನೋದ, ನಗೆಮಾತುಗಳು, ವಾರದ ಕಥೆ, ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ ಇತ್ಯಾದಿ.

ಬೆಲೆ ಕೇವಲ ೦-೨-೦

"ಸ್ವತಂತ್ರ"

ಸುದ್ದಿ ಮತ್ತು ಅಭಿಪ್ರಾಯಗಳ ಕನ್ನಡ ವಾರಪತ್ರಿಕೆ.

ಹೊಸಪೇಟೆ. (ಜಲ್ಲಾ ಬಳ್ಳಾರಿ)

ಏಜೆಂಟರುಗಳಿಲ್ಲದ ಸ್ಥಳದಲ್ಲಿ ಏಜೆಂಟರು ಬೇಕು.

ವಾರ್ಷಿಕ ಚಂದಾ ೩-೦-೦ ಆರು ತಿಂಗಳಿಗೆ ೧-೮-೦

(ಟಪ್ಪಾಲು ಸೂಲಕ)

ಹೊಸ ಕಥಾಸಂಕಲನ ತಯೀಗ ಪ್ರಕಟವಾಗಿದೆ!

"ಜೀವನ ರಂಗ"

ಲೇಖಕರು:- ಶ್ರೀ. ಜಿ. ಆರ್. ಪಾಡಿಗ್ಗಿ ಎಂ. ಎ. ಬಿ ಟಿ.

ಸುಪ್ರಸಿದ್ಧ ಕತೆಗಾರರಾದ "ಆನಂದಕಂದ"ರ ವಿಚಾರಪರ ಮುನ್ನುಡಿಯೂ ಇದೆ. ಬೆಲೆ ೧-೪-೦ ಮಾತ್ರ!

ಇದೇ ಲೇಖಕರ "ಯಾರು ಹೊಣೆ" ಹಾಗೂ **"ಗಾಳಿಗುದರಿ"** ಪುಸ್ತಕಗಳನ್ನು ತಪ್ಪದೇ ಓದಿರಿ.

ಮನೋಹರ ಗ್ರಂಥ ಭಾಂಡಾರ, ಧಾರವಾಡ

ಜಯಂತಿ

ಸಣ್ಣ ಕತೆಗಳ ಮೇಲಾಟ

ಆಕರ್ಷಕವಾದ ನೂರು ಬಹುಮಾನಗಳು

೩೦ ರೂ. ೧೫ ರೂ. ೧೦ ರೂ.

೧೯೫೩ನೆಯ ಫೇಬ್ರುವರಿ ೧೫ನೆಯ ದಿನಾಂಕದೊಳಗೆ ತಲ್ಪುವಂತೆ ಕತೆಗಳನ್ನು ಕಳುಹಬೇಕು.

ಮೇಲಾಟದ ವಿಧಿಯುಗಳು:

೧ ಕತೆಯ ಸ್ವತಂತ್ರವಾಗಿದ್ದು ಕರ್ನಾಟಕದ ಸಾಮಾಜಿಕ ಹಿನ್ನೆಲೆಯಿಂದ ಕೂಡಿದುದಾಗಿರಬೇಕು.

೨ ಜಯಂತಿಯ ಮುದ್ರಿತ ಪುಟ ೫ಕ್ಕಿಂತ ಹೆಚ್ಚಿಗಾಗಬಾರದು ಎಂದರೆ ಫೂಲ್‌ಸ್ಕ್ಯಾಪ್ ಅರ್ಧಹಾಳೆ ೮ರಲ್ಲಿ ಮುಗಿದಿರಬೇಕು.

೩ ವಯಸ್ಸಿನ ನಿರ್ಬಂಧವಿಲ್ಲ. ಹಿರಿಯರು ಕಿರಿಯರು ಎಲ್ಲರೂ ಮೇಲಾಟದಲ್ಲಿ ಭಾಗವಹಿಸಬಹುದು.

೪ ಒಬ್ಬರೇ ಲೇಖಕರು ೨-೩ ಕತೆಗಳನ್ನೂ ಮೇಲಾಟಕ್ಕೆ ಕಳುಹಬಹುದು. ಆದರೆ, ಒಬ್ಬರೇ ಎಲ್ಲ ಬಹುಮಾನಗಳನ್ನು ಪಡೆಯಲಾರರು.

೫ ಮೇಲಾಟಕ್ಕಾಗಿ ಕತೆಗಳನ್ನು ಕಳುವವರು ತಮ್ಮ ಪ್ರತಿಯೊಂದು ಕತೆಗೆ ೪ ಆಣೆಯಂತೆ ಪ್ರವೇಶ ಧನವನ್ನು ಕಳುಹಬೇಕು.(ಅಂಚೆಯ ಟಿಕೀಟು, ನಗದುಹಣ, ಪೋಸ್ಟಲ್ ಆರ್ಡರ್ ರೂಪದಲ್ಲಿ ಕಳುಹಬಹುದು.) ಪ್ರವೇಶಧನವಿಲ್ಲದೆ ಬಂದ ಕತೆಗಳನ್ನು ಮೇಲಾಟದಲ್ಲಿ ಸೇರಿಸಿಕೊಳ್ಳುವುದಿಲ್ಲ.

೬ ಕತೆಯನ್ನು ಕಳುಹಬಹುದಾದ ಕೊನೆಯ ದಿನವೆಂದರೆ ೧೯೫೩ನೆಯ ಫೇಬ್ರುವರಿ ಹದಿನೈದನೆಯ ತಾರೀಖು. ಮೇಲಾಟದಲ್ಲಿ ಮೇಲಿನ ಕ್ರಮಾಂಕ ಪಡೆದ ಕತೆಗಳನ್ನೆಲ್ಲ ಏಪ್ರಿಲ್ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

೭ ಬಹುಮಾನಕ್ಕೆ ಕಳ್ಳ ಕತೆಗಳು ಬಾರದಿದ್ದಲ್ಲಿ, ಬಹುಮಾನ-ಕೊಡುವ ಇರುವುದಕ್ಕೂ ಬಂದುವುಗಳಲ್ಲಿ ಒಳ್ಳೆಯವೆಂದು ತೋರಿದ ಕತೆಗಳಿಗೆ ತಕ್ಕ ಮನ್ನಣೆ ಸಲ್ಲಸಲಿಕ್ಕೂ ಜಯಂತಿಯ ಸಂಪಾದಕ ಮಂಡಲಿ ತನ್ನ ಕಡೆಗೆ ಕೊನೆಯ ಅಧಿಕಾರವನ್ನಿರಿಸಿಕೊಂಡಿದೆ.

ಕನ್ನಡ ಕತೆಗಾರರೆಲ್ಲ ಉತ್ಸಾಹದಿಂದ ಭಾಗವಹಿಸಬೇಕು.

ಸಂಪಾದಕರು 'ಜಯಂತಿ' ಧಾರವಾಡ

ಜಯಂತಿ

ಸಂಪುಟ ೧೬ ಸಂಚಿಕೆ ೬

ಕುಟುಂಬದಲ್ಲಿಯ
ಪ್ರತಿಯೊಬ್ಬರೂ ಓದಿ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

* *
*

ವ್ಯವಸ್ಥಾಪಕರು:
ಮತ್ತು
ಪ್ರಕಾಶಕರು:
ಶ್ರೀ. ಡಿ. ಶರತ್‌ಚಂದ್ರ

**

ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು

**

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ

**

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

**

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

●

ತಿರುಕರ ತಂಡದ ಹಾವಳಿ

ಯಾವುದೇ ದೇಶದಲ್ಲಿಯ ತಿರುಕರ ಸಂಖ್ಯೆ ಆ ನಾಡಿನ ಜನರ ಹೃದಯ–ಮನಸ್ಸುಗಳ ವಿಕಾಸ–ಅವಿಕಾಸಗಳ ಅಳತೆಗೋಲಾಗಿರುವುದು. ತಿರುಕರ ಸಂಖ್ಯೆ ಹೆಚ್ಚು ಇರುವುದು ಹೃದಯ–ಮನಸ್ಸುಗಳ ಅವಿಕಾಸದ ಲಕ್ಷಣ; ಕಡಿಮೆಯಿರುವುದು ವಿಕಾಸದ ಲಕ್ಷಣ. ದೇಶದ ಸಮಾಜ–ಸರಕಾರಗಳು, ದೇಶದಲ್ಲಿಯ ಜನರು ತಿರಿದುಕೊಳ್ಳುವ ಮನಸ್ಸಿನವರಾಗದಂತೆ ಎಚ್ಚರ ತೆಗೆದುಕೊಳ್ಳುವುದು ಅನಿವಾರ್ಯವಾಗಿದೆ. ಹೀಗೆ ಎಚ್ಚರು ತೆಗೆದುಕೊಳ್ಳುವುದೆಂದರೆ, ಬದುಕಿಗೆ ಅತ್ಯಾವಶ್ಯಕವಾದ ಅನ್ನ–ಬಟ್ಟೆ–ಬೀಡುಗಳ ವಿತರಣೆಯು ಸರಿಯಾಗಿ ಆಗುವಂತೆ ನೋಡಿ ಕೊಳ್ಳುವುದು.

ಸುಸಂಸ್ಕೃತ ದೇಶದ ಸಮಾಜವೂ ಸರಕಾರವೂ ತನ್ನ ಜನರನ್ನು ತಿರಿದುಕೊಳ್ಳುವಂತಹ ದುರ್ದಶೆಗೆ ಎಂದೂ ಇಳಿಸಬಾರದು. ಅಂಗಹೀನ ಜನರಲ್ಲಿ ಕೂಡ ಒಂದಿಲ್ಲೊಂದು ಬಗೆಯ ಪ್ರಯೋಜನಕಾರಿಯಾದ ಶಕ್ತಿಯಿರುವುದೆಂದಮೇಲೆ, ಸಂಪೂರ್ಣಾಂಗರಲ್ಲಿ ಅಂತಹ ಶಕ್ತಿ ಎಷ್ಟಿರಬೇಡ? ಸಮಾಜವೂ ಸರಕಾರವೂ ಔಚಿತ್ಯವರಿತು, ಈ ಶಕ್ತಿಗಳನ್ನು ಉಪಯೋಗಿಸಿಕೊಂಡು ಪ್ರತಿಫಲವನ್ನು ಸಲ್ಲಿಸುತ್ತ ಹೋದರೆ, ತಿರಿದುಕೊಂಡು ತಿನ್ನಬೇಕೆಂಬ ಬುದ್ಧಿ ಯಾರಲ್ಲಿ ಏತಕ್ಕಾಗಿ ಹುಟ್ಟುವುದು? ಆದರೆ ಸಮಾಜದಲ್ಲಿಯ ಸಮರ್ಥ ಜನರ ಸ್ವಾರ್ಥವೃತ್ತಿಯೂ ಸರಕಾರದ ಅಧಿಕಾರಿ ವರ್ಗದ ಔದಾಸೀನ್ಯವೂ ಸೇರಿಕೊಂಡು, ಇಂದು ನಮ್ಮ ನಾಡಿನಲ್ಲಿ ತಿರಿವವರ ಸಂಖ್ಯೆಯನ್ನು ದಿನದಿನಕ್ಕೆ ಹೆಚ್ಚಿಸುತ್ತಲಿವೆ. ಎಲ್ಲಿ ನೋಡಿದಲ್ಲಿ ತಿರುಕರ ತಂಡಗಳು. ಬೆಳಗಿನಲ್ಲೆದ್ದು ಬಾಗಿಲು ತೆರೆದರೆ ಮೊದಲು ನಾವು ಕಾಣುವುದು ತಿರುಕರ ವಿಕಾರವಾದ ರೂಪುಗಳನ್ನು; ಕೇಳುವುದು ಅವರ ದೈನ್ಯದ ಕಿರುಚನ್ನು. ಬೆಳಗಿನಿಂದ ಸಂಜೆಯ ವರೆಗೂ ವಿವಿಧ ವೇಷದ ವಿವಿಧ ಭಾಷೆಯ ತಿರುಕರ ನಿತ್ಯಯಾತ್ರೆ. ಅಂಗ ವಿಕಲರಿಗಿಂತ ಪೂರ್ಣಾಂಗರೇ ಬಹುಸಂಖ್ಯಾಕರು. ರಾತ್ರಿಯಲ್ಲಿ ಬಾಗಿಲು ಇಕ್ಕಿ ಮಲಗಿದಾಗೆಲೂ ಹೊರಗೆ ಕೂಗುತ್ತಿರುವ ಅವರ ಕರುಣಾಧ್ವನಿ ಕಿವಿಗಳನ್ನು ಕೊರೆಯುವುದು.

ದಾರಿಯ ಅಕ್ಕ ಪಕ್ಕದಲ್ಲಿ ತಿರುಕರು. ಸೇಟಿಯ ಕೂಟಗಳಲ್ಲಿ ತಿರುಕರು. ಹೋಟಲು–ನಾಟಕ ಶಾಲೆಗಳ ಮುಂದೆ ತಿರುಕರು. ಮೋಟರು–ರೈಲುನಿಲ್ದಾಣಗಳಲ್ಲಿ ತಿರುಕರು. ರೈಲು-ಬಂಡಿಗಳಲ್ಲಿ ಕುಳಿತರೆ ಅಲ್ಲಿಯೂ ತಿರುಕರ ತಂಡ. ಇದನ್ನೆಲ್ಲ ನೋಡುತ್ತಿರುವಾಗ, ನಮ್ಮ ನಾಡಿನಲ್ಲಿ ನೀಡುವ ಜನರಿಗಿಂತ ತಿರಿದುಕೊಳ್ಳುವ ಜನರ ಸಂಖ್ಯೆಯೇ ಹೆಚ್ಚಿಗಿರುವುದೇನೋ ಎಂದು ಯಾರಿಗೂ ಸಂದೇಹವುಂಟಾಗುವಂತಿದೆ. ಎಷ್ಟೊಂದು ಮಾನವ ಶಕ್ತಿಯ ಹ್ರಾಸ? ಈ ಬಗೆಯ ಶಕ್ತಿಯ ಹ್ರಾಸದಿಂದ ದೇಶವು ಯಾವ ಬಗೆಯ ಅಭ್ಯುದಯ ಹೊಂದೀತು?

ನಮ್ಮ ದೇಶದಲ್ಲಿ ಒದಗಿದ ಸಾಮಾಜಿಕ, ಧಾರ್ಮಿಕ, ರಾಜಕೀಯ ಸ್ಥಿತ್ಯಂತರಗಳ ಮೂಲಕ, ಇಂದು ಅನೇಕ ಪಂಗಡಗಳು ಯಾವ ಬಗೆಯ ಉದ್ಯಮ–ವ್ಯವಸಾಯಗಳೂ ಇಲ್ಲದೆ, ಜೋಳಿಗೆಗೇ ಶರಣು ಹೋಗಬೇಕಾಗಿದೆ. ಅವುದರಿಂದಲೇ ಪರಂಪರಾಗತ ತಿರುಕರ ತಂಡಗಳಲ್ಲದೆ, ಇಂದು ಹೊಸ ಹೊಸ ತಿರುಕರ ತಂಡಗಳೂ ಹುಟ್ಟುತ್ತಲಿವೆ. ಪರಂಪರಾಗತ ತಿರುಕರ ತಂಡದವರೂ ಒಂದು ಕಾಲದಲ್ಲಿ ಕೇವಲ ತಿರುಕರಾಗಿ ಇರಲಿಲ್ಲ. ಸಮಾಜೋಪಯುಕ್ತವಾದ ಕೆಲವೊಂದು ಕೆಲಸಗಳ ಹೊಣೆಯನ್ನು ಅವರ ಕಡೆಗೆ ಒಪ್ಪಿಸಿಕೊಟ್ಟು, ಸಾಮಾಜಿಕರು ಅವರ ಹೊಟ್ಟೆ–ಬಟ್ಟೆಯ ಹೊಣೆಯನ್ನು ತಾವು ವಹಿಸಿಕೊಳ್ಳುತ್ತಿದ್ದರು. ಇದರ ಸತ್ಯತೆಯನ್ನು ಅರಿತುಕೊಳ್ಳಬೇಕಾದರೆ ಪರಂಪರಾಗತ ತಿರುಕರೆನ್ನಿಸಿಕೊಳ್ಳುವ ಗೊಲ್ಲರು, ಕುಂಚಿಗೆಕೂರವರು, ವಾಸರು, ಡೊಂಬರು ಇಂಥ ಪಂಗಡದ ಪೂರ್ವ ಪರಂಪರೆಯನ್ನು ಅಭ್ಯಾಸಮಾಡಿ ನೋಡಬೇಕು. ಇವರಾರೂ ಕೇವಲ

ತಿರುಕರಾಗಿರಲಿಲ್ಲ. ಸಮಾಜವು ಕೆಲವೊಂದು ಕೆಳತರಗತಿಯ ಕೆಲಸಗಳನ್ನು ಇವರಿಗೆ ಒಪ್ಪಿಸಿಕೊಟ್ಟಿತ್ತು. ಅವರ ದುಡಿಮೆಗೆ ತಕ್ಕ ಪಡಿಯನ್ನು ಸಲ್ಲಿಸುತ್ತಿತ್ತು. ಅವರೆ ಬರುಬರುತ್ತ ಅವರಿಗೆ ಕೆಲಸ ಇಲ್ಲದಂತಾಯಿತು. ಹೊಟ್ಟೆ-ಬಟ್ಟೆಗಾಗಿ ತಿರುಕೊಳ್ಳಲು ತೊಡಗಿದರು. ಸಮಾಜದಲ್ಲಿ ದಾನಬುದ್ಧಿ ಜಾಗೃತವಾಗಿದ್ದುದರಿಂದ ಅವರಿಗೆ ತಿರುಪೆಯೂ ದೊರೆಯತೊಡಗಿತು. ಅವರಿಂದಲೇ ಜವರೆಲ್ಲ-ಪರಂಪರಾಗತ ತಿರುಕರಾಗಿ ಬಿಟ್ಟರು.

ಇದರಂತೆಯೆ ನಮ್ಮ ಸಾಮಾಜಿಕರಲ್ಲಿಯು ಜಾಗೃತ ಧಾರ್ಮಿಕ ಬುದ್ಧಿ ಪುರೋಹಿತರು, ಜ್ಯೋತಿಷರು, ಜಂಗಮರು, ಜೋಗಿಗಳು ಗೊಂದಲಿಗರು, ಸುಡುಗಾಡುಸಿದ್ಧರು ರಂಪಿನಯ್ಯ, ಪುರಾಣಕರು, ಕೀರ್ತನಕಾರರು,— ಇವರ ಕಡೆಗೆ ಧಾರ್ಮಿಕ ಸಂಪ್ರದಾಯಗಳ ಒಂದೊಂದು ಕಾರ್ಯವನ್ನು ಒಪ್ಪಿಸಿ, ಅವರ ಯೋಗ-ಕ್ಷೇಮವನ್ನು ತಾನು ನೋಡಿಕೊಳ್ಳುತ್ತಿದ್ದಿತು. ಹಿಂದಿನ ಕಾಲವು ಅವರನ್ನು ತಿರುಕರೆಂದು ಪರಿಗಣಿಸುತ್ತಿರಲಿಲ್ಲವಾದರೂ, ಇಂದಿನ ಕಾಲ ಅನಿವಾರ್ಯವಾಗಿ ಅವರನ್ನು ತಿರುಕರೆಂದು ಕರೆಯಲು ಹಚ್ಚಿದೆ.

ಕೊಲ್ಲಾಪುರಿಗರು, ಕಿಳ್ಳಿಕ್ಯಾತರು, ನಬ್ಬಾವರು, ಮೋಡಿಕಾರರು, ಕವಲಿಬಿಸವಣ್ಣನವರು, ಕರಡಿಯಾಡಿಸುವವರು, ಹಾವಾಡಿಗರು— ಇವರೆಲ್ಲ ಸಾಮಾಜಿಕರ ಮನೋರಂಜನೆ ಮಾಡಿ, ಅವರು ಕೊಟ್ಟ ಮೆಚ್ಚಿನಿಂದ ಹೊಟ್ಟೆತುಂಬಿಕೊಳ್ಳುತ್ತಿದ್ದರು. ಇಂದಿನ ಮನೋರಂಜನ ಸಾಧನಗಳು ಬೇರೆಯಾದುದರಿಂದ, ಅವರೆಲ್ಲ ಇಂದು ತಿರುಕರಾಗಿ ನಿಂತಿದ್ದಾರೆ.

ನಮ್ಮ ದೇಶದ ಐತಿಹಾಸಿಕ ಕಾಲದಲ್ಲಿ ದಂಡಿಗೆ ಬೇಕಾಗುವ ಶಸ್ತ್ರಾಸ್ತ್ರಗಳನ್ನು ಒದಗಿಸಿಕೊಡುತ್ತಿದವರೂ, ಕುದುರೆ-ಆನೆಗಳ ಜಲ್ಲಾಣಗಳನ್ನು ಸಿದ್ಧಗೊಳಿಸಿಕೊಡುತ್ತಿದ್ದವರೂ, ದಂಡಿಗೆ ಅವಶ್ಯಕವಾದ ಬೇರೆ ಬೇರೆ ಲೂಳಗ ಮಾಡುತ್ತಿದ್ದವರೂ, ಕಾಲಪ್ಯೆಪರೀತ್ಯದ ಮೂಲಕ ನಿರುದ್ಯೋಗಿಗಳಾಗುತ್ತ, ತಿರಿದುಕೊಂಡು ತಿನ್ನುವ ಉದ್ಯೋಗವನ್ನು ಕೈಕೊಳ್ಳಬೇಕಾಯಿತು. ಬ್ರಿಟಿಷರ ವ್ಯಾಪಾರೀ ವೃತ್ತಿಯ ಆಳಿಕೆಯ ಮೂಲಕ, ಇನ್ನೂ ಹಲವರು ತಮ್ಮ ಕುಲಪರಂಪರಾಗತ ಉದ್ಯೋಗವನ್ನು ಕಳೆದುಕೊಂಡವರಾಗಿ ಭಿಕ್ಷೆಯ ಜೀವನವನ್ನು ಹತ್ತಬೇಕಾಯಿತು.

ಇವೆಲ್ಲ ಕಾರಣಗಳ ಮೂಲಕ ಭಾರತವು ಭಿಕ್ಷುಕರ ಬೀಡಾಯಿತು. ಆದರೂ ಆರ್ಥಿಕ ಸಂಕಷ್ಟವಿಲ್ಲದ ಮುಕಾಲು ಸಾಮಾಜಿಕರಲ್ಲಿ ಇವ್ವ ದಾನಬುದ್ಧಿ ಇಪ್ಪುಗೆಳಿಂದ, ಇದುವರೆಗೂ ನಮ್ಮ ತಿರುಕರ ತಂಡ ಹೇಗೋ ಬದುಕಬಂದಿತು. ಅವರ ಜೋಳಿಗೆಯನ್ನು ಬಿಡಿಸಬೇಕೆಂಬ ವಿಚಾರವನ್ನು ಯಾರೂ ಮಾಡಲಿಲ್ಲ. ಮಾಡುವುದರ ಅವಶ್ಯಕತೆಯೂ ತೋರಲಿಕ್ಕಿಲ್ಲ.

ಇಂದಿನ ಆರ್ಥಿಕ ವಿಷಮಪರಿಸ್ಥಿತಿಯ ಮೂಲಕ ನಮ್ಮ ನಾಡಿನ ಪಳೆಯ ಹೊಸ ತಿರುಕರೆಲ್ಲ ಜನರಿಗೆ ತಲೆನೊರೆಯಾಗಿ ಪರಿಣಮಿಸಲು ತೊಡಗಿದ್ದಾರೆ. ಇವ್ವವರಿಗೆ ದಾನಬುದ್ಧಿಯಿಲ್ಲ; ಇಲ್ಲದ ಬಡವರ ಗುಡಿಸಲಲ್ಲಿ ತಿರುಪೆದೊರೆಯುವುದು ಶಕ್ಯವೇ ಇಲ್ಲ. ಇವ್ವವರ ಮನೆಯ ಆಳುಗಳೂ ಕಾಸಿನ ನಾಯಿಗಳೂ ತಿರುಕರನ್ನು ಬಾಗಿಲ ಬಳಿ ನಿಲ್ಲಗೊಡುವುದಿಲ್ಲ. ಇಲ್ಲದ ಬಡವರ ಬಾಗಿಲಿಗೆ ತಿರುಕರು ಸುಳಿಯುವುದಿಲ್ಲ. ಹೀಗಾಗಿ ಮಧ್ಯಮ ತರಗತಿಯ ಜನರ ಮನೆಗಳ ಮೇಲೆಯೇ ಈ ತಿರುಕರ ತಂಡದ ಹಾವಳಿಯು ನಡೆದಿರುವುದು. ಆದರೆ ಈ ಕ
ದಲ್ಲಿ ಮಧ್ಯಮ ತರಗತಿಯವರಿನಿಸಿಕೊಳ್ಳುವರಿಗೆ, ಬಂದ ತಿರುಕರಿ
ಭಿಕ್ಷೆ ಹಾಕುವಂತಹ ಶಕ್ತಿ ಉಳಿದಿದೆಯೆ? ಭಿಕ್ಷೆ ಹಾಕಬೇಕೆ
ಬುದ್ಧಿಯಿದ್ದರೂ, ಅದು ಅಸಾಧ್ಯವಾಗಿ ಪರಿಣಮಿಸುತ್ತಿರುವುದರಿಂ
ಅಂತರ್ಯದಲ್ಲಿಯೇ ಅಸಮಾಧಾನಪಟ್ಟುಕೊಳ್ಳುವರು; ಬರಿಜೋಳಿ
ಯಿಂದ ತಿರುಗಿಸಬೇಕಾಗಿ ಬರುವ ತಿರುಕರಿಂದ ಬೈಗಳನ್ನು ತಿಂದು ಕ
ಳವಳಪಡುವರು. ಬಹಳ ಜನ ಮಧ್ಯಮತರಗತಿಯವರ ಮನೆಗಳಿಂ
ತಮ್ಮ ಜೋಳಿಗೆಯಂತೆಯೇ ಬರಿಯವಾಗಿರುವುವೆಂಬುದು, ಪಾ
ಆ ತಿರುಕರಿಗೆ ಏನು ಗೊತ್ತು? ದೊರೆತರೆ ಇನೇ ಮನೆಗಳಲ್ಲಿ ಒಂ
ತುತ್ತು ಕೂಳು ದೊರೆಯುವುದೆಂಬುದು ತಿರುಕರ ಬಲುದಿನದ ಅನುಭ
ಈಗ ಕೂಡ ತಮ್ಮ ಹೊಟ್ಟೆಗೆ ಕಡಿಮೆ ಮಾಡಿಕೊಂಡಾದರೂ ಒಂ
ತುತ್ತು ನೀಡಬೇಕೆಂಬ ವಿಶಾಲಹೃದಯ ಇವರದು! ಆದರೆ ಎಷ
ಜನರಿಗೆ ನೀಡಲು ಸಾಧ್ಯವಿದೆ?

ಸರಕಾರ ಈ ಮಧ್ಯಮ ತರಗತಿಯವರಿಗೆ ಕೊಡುವ ಆ
ಸಾಮಗ್ರಿ ಆರಹೊಪ್ಪೆಗೂ ಸಾಲದಂತಹದು. ಅದರಲ್ಲಿಯೂ ಕಸಕಡ್ಡಿ
ಮಣ್ಣು-ಕಲ್ಲುಗಳು ಸೇರಿ, ಕೊರತೆಯ ಪ್ರಮಾಣವನ್ನು ಇನ್ನೂ ಹೆ
ಸುವುದು. ಕಳ್ಳಬೇಟೆಯಲ್ಲಿ ದೊರಕಿಸಿ, ಕೊರತೆಯನ್ನು ಕಳೆದ
ಕೊಂಡಾರೆಂದರೆ, ಆದಾಯದ ಹಣವು ಒಪ್ಪಿಗೆ ಕೊಡುವುದಿಲ್ಲ. ಇಂ
ಹರಲ್ಲಿ ಉಳಿಸಿಕೊಳ್ಳಬೇಕೆಂದರೂ ಉದಾರ ಬುದ್ಧಿ ಉಳಿಯುವ ಬ
ಹೇಗೆ? ಆದರೆ ಬಹುದಿನದಿಂದ ಹಿಂದ ಪೈಪಯಸಂಪನ್ನರ, ತಿರು
ನೀಡಲಾಗದ ತಮ್ಮ ಅಸಾಮರ್ಥ್ಯಕ್ಕಾಗಿ ಇವರನ್ನು ಕ್ಷಣಕ್ಷಣಕ
ಕಳವಳಗೊಳಿಸುತ್ತಲಿದೆ, ತಿರುಕರ ತಂಡವನ್ನು ನೋಡಿ ಮನಸ
ಕೆರಳಿನಿಲ್ಲುತ್ತಿದೆ.

ಸುಸಂಘಟನೆಯಿಲ್ಲದ ನಮ್ಮ ಸಮಾಜವು, ಇಂದಿನ ತಿರುಕ
ತಂಡದ ಹಾವಳಿಯ ಸಮಸ್ಯೆಯನ್ನು ಬಿಡಿಸುವುದೆಂದರೆ ಸಾಧ್ಯ
ಇಲ್ಲ. ನಮ್ಮದೇ ಆದ ಪ್ರಜಾಪ್ರಭುತ್ವವು ಈ ಸಮಸ್ಯೆಯ ಮಹತ್ವ
ವನ್ನು ಗುರುತರಿಕೆ ಮಾಡಿಕೊಂಡು, ಇದನ್ನು ಬಿಡಿಸಲು ಉಪಾಯ
ಮಾಡಬೇಕು. ಬರೀ 'ದೇಶದಲ್ಲಿ ತಿರುಕರು ಇರಲಾಗದು' ಎಂ
ಕಾಯಿದೆ ಮಾಡಿ ಕುಳಿತುಕೊಂಡರೆ ಏನೂ ಆಗುವುದಿಲ್ಲ. ಹಾಗಾ
ಇರುವ ತಿರುಕರೆಲ್ಲ ಎಲ್ಲಿಗೆ ಹೋಗಬೇಕು? ಸರಕಾರವ ಕಾಯ
ಯನ್ನು ಪಾಲಿಸಲು, ಅವರು ದೇಶವನ್ನು ಬಿಟ್ಟುಹೋಗಿ ಸಮುದ್ರದ
ನುಳಗಾಗಿ ಸಮಾಧಿ ಪಡೆಯಬೇಕೆ? ತಿರುಕರಾದರೂ ಭಾರತದ ಪ್ರ
ಗಳು. ಭಾರತವಲ್ಲಿ ಬದುಕಿರುವ ಅಧಿಕಾರ ಅವರಿಗೂ ಉಂ
ಆದರೆ ಬದುಕಲು ಮಾರ್ಗ? ಎಲ್ಲರನ್ನೂ ಸುಖ-ಸಮಾಧಾನಗಳಿಂ
ಬದುಕಿಸಬೇಕೆನಿಸುವ ಸರಕಾರವೇ ತಿರುಕರ ಬದುಕಿನ ಕಡೆಗೆ ನೋಡ
ಹೋದರೆ, ಅವರು ಇನ್ನೇನು ಮಾಡಬೇಕು? ಬದುಕಲೇಬೇಕೆಂ
ಆಶೆಯಿದ್ದ ಅವರು, ತಮಗೆ ಅನುಕೂಲವಾಗಿ ತೋರುವ ಎಡೆಗಳ
ಹಾವಳಿಯನ್ನು ನಡೆಯಿಸುವರು! ಇದೇ ತಲೆಮಾರಿಗೆ ಅವರ ತಿರು
ತನವನ್ನು ಕಳೆದರೆ, ಅವರ ಮುಂದಿನ ತಲೆಮಾರಿನವರಾದರೂ ತಿರು
ಪೆಯ ಹಾವಳಿಯನ್ನು ನಿಲ್ಲಿಸಬಹುದು. ಇಲ್ಲವಾದರೆ, ಮುಂದ
ಮುಂದೆ ಒಂದಕ್ಕೆ ಹತ್ತರಷ್ಟು ಅವರ ಸಂಖ್ಯೆ ಬೆಳೆದು, ಅವರ ಹಾವಳಿ
ಹೆಚ್ಚಾಗಬೀತು.

ನಾಡನಡೆ

ಪಂಡಿತ ಜವಾಹರರು, ಕರ್ನಾಟಕ ಪ್ರಾಂತೀಕರಣ

ಭಾರತದ ಮುಖ್ಯಪ್ರಧಾನ ಪಂಡಿತ ಜವಾಹರಲಾಲರು ಇತ್ತೀಚೆಗೆ ಅಲ್ಲಲ್ಲಿ ಆಡುತ್ತಿರುವ ಮಾತುಗಳನ್ನು ಕೇಳಿದರೆ, ಭಾಷಾನ್ವಯ ಪ್ರಾಂತ್ಯನಿರ್ಮಾಣದ ವಿಷಯದಲ್ಲಿ ಅವರ ಅಭಿಪ್ರಾಯ ಬಧಲಾದಂತೆ ತೋರುತ್ತಲಿದೆ. ಆಂಧ್ರಪ್ರಾಂತ್ಯ ಪ್ರತ್ಯೇಕೀಕರಣಕ್ಕಿಂತ ಮೊದಲು ಭಾಷಾನುಗುಣಪ್ರಾಂತರಚನೆಯ ಪ್ರಶ್ನೆ ಬಂದಾಗ, ರೀಗಿದ ಧ್ವನಿಯಲ್ಲಿಯೇ ತಮ್ಮ ವಿರೋಧಾಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದರು. ಪ್ರಾಂತ್ಯ ಪ್ರತ್ಯೇಕೀಕರಣವನ್ನು ಅಪೇಕ್ಷಿಸುವವರೆದುಮ. ನೀಗಲಾರದಂತಹ ಕರಾರುಗಳನ್ನು ಒಡ್ಡಿ, ಅವನನ್ನು ನಿರುಪಾಯರನ್ನಾಗಿಸುತ್ತಿದ್ದರು. ಆತರೆ ಆಂಧ್ರದ ಜನರು ಒಟ್ಟುಗೂಡಿ ಮಾಡಿದ ಚಳವಳಿಯು ಕಾವು, ಅವರ ಅಭಿಪ್ರಾಯದ ಗಟ್ಟಿತನವನ್ನು ಕರಗಿಸಿದೆಯೆಂದು ತೋರುವುದು. ಹಿಂದೊಮ್ಮೆ ಬೆಳಗಾಂವಿಗೆ ಬಂದಾಗ, ಕನ್ನಡಿಗರ ಪ್ರಾಂತೀಕರಣ ಚಳವಳಿಯ ಬಗೆಗೆ ಆಡಿದ ಸಿಡಿನುಡಿಗಳಿಗೂ ಇಂದು ಅಲ್ಲಲ್ಲಿಯ ಸಭೆಗಳಲ್ಲಿ ಮಾತನಾಡುತ್ತಿರುವ ಪ್ರಾಂತ್ಯ ಪ್ರತ್ಯೇಕೀಕರಣದ ವಿಚಾರದಲ್ಲಿ ಆಡುತ್ತಿರುವ ಸಂಯಮ-ಸಜ್ಜಾನುಭೂತಿಯ ಮಾತುಗಳಿಗೂ, ತುಂಬ ಅಂತರವನ್ನು ತೋರುತ್ತಲಿದೆ. ಕ. ಪ್ರಾ. ಕಾಂಗ್ರೆಸ್ ಕಮಿಟಿಯು ಅಧ್ಯಕ್ಷರಿಗೆ ಬರೆದ 'ಖಸಗೀ' ಪತ್ರದಲ್ಲಿಯೂ ಪ್ರಾಂತ್ಯಪ್ರತ್ಯೇಕೀಕರಣದ ವಿಚಾರದಲ್ಲಿ ಅವರ ಧೋರಣೆ ಬದಲಾದುದು ಸ್ಪಷ್ಟವಾಗಿ ಕಂಡುಬರುತ್ತದೆ. ಹೀಗಾಗಲು ಕಾರಣವೇನಿರಬಹುದು ?

ಪಂಡಿತರ ಈ ಬದಲಾವಣೆಯು, ರಾಜಕಾರಣಿಯೊಬ್ಬನ ಧೂರ್ತತನವಾಗಿದೆಯೆಂದು ಯಾರಾದರೂ ಹೇಳಿದರೆ ಅದು ಒಪ್ಪತಕ್ಕ ಸಂಗತಿಯೇನೂ ಅಲ್ಲ. ಇತ್ತೀಚೆಗೆ ನಮ್ಮ ನಾಡಿನಲ್ಲಿ ನಡೆದ ಎರಡೂ ಚುನಾವಣೆಗಳಲ್ಲಿ ಕಾಂಗ್ರೆಸ್ ಹುರಿಯಾಳುಗಳು ಸೋತು, ವಿರೋಧ ಪಕ್ಷದ ಹುರಿಯಾಳುಗಳು ಗೆದ್ದದ್ದು ಪಂ. ಜವಾಹರಲಾಲರಲ್ಲಿ ಒಂದು ಮಾತಿನ ಎಚ್ಚರಿಕೆಯನ್ನು ಉಂಟುಮಾಡದೆ ಬಿಟ್ಟೀತೆಲಾರದು. ಅಲ್ಲವೆ ಆಂಧ್ರರಿಗೆ ಪ್ರತ್ಯೇಕ ಪ್ರಾಂತ್ಯವನ್ನು ನಿರ್ಮಿಸಿಕೊಟ್ಟಿರುವಾಗ ಮಿಕ್ಕವರಿಗೇಕೆ ಆ ಅನುಕೂಲತೆಯನ್ನು ಒದಗಿಸಿಕೊಡಬಾರದು?— ಎಂಬ ನ್ಯಾಯಬುದ್ಧಿಯೂ ಅವರಲ್ಲಿ ಜಾಗೃತವಾಗಿರಬಹುದು. ಇನ್ನೂ ಒಂದು ಮಾತೆಂದರೆ, ಕರ್ನಾಟಕ ಪ್ರಾಂತ್ಯದ ಕಾಂಗ್ರೆಸ್ಸಿನ ನಾಯಕರು, ಪ್ರಾಂತ್ಯದ ಪ್ರತ್ಯೇಕೀಕರಣವಾಗದೆ ಹೋದರೆ, ತಾವು ಅಸಹಾಯರೂ ನಿಷ್ಪ್ರಯರೂ ಆಗುವೆನೆಂಬ ಮಾತನ್ನು, ಮುಖ್ಯಮಂತ್ರಿಗಳೂ ಕಾಂಗ್ರೆಸ್ಸಿನ ಅಧ್ಯಕ್ಷರೂ ಆದ ಪಂಡಿತರ ಮನಸ್ಸಿನ ಮೇಲೆ ಬಿಂಬಿಸುವಂತೆ ಹೇಳಿರಬಹುದು ಯಾವುದೇ ಕಾರಣವಿರಲಿ, ಈಗ ಅವರು ಪ್ರಾಂತ್ಯದ ಪ್ರತ್ಯೇಕೀಕರಣಕ್ಕೆ ಅವಿನೋಧಭಾವನೆಯನ್ನು ತೋರಿಸುತ್ತಿರುವುದು ಸಮಾಧಾನದ ಸಂಗತಿಯೇ ಆಗಿದೆ. ಪಂಡಿತರ ಸ್ವಭಾವವನ್ನೂ ಇದುವರೆಗಿನ ಕಾರ್ಯಪದ್ಧತಿಯನ್ನೂ ಕಣ್ಣಿಟ್ಟು ನೋಡುವಂಬಂದವರಿಗೆ, ಅವರು ಕುಬಲ ರಾಜಕಾರಣಿಯು ಧೂರ್ತವೃತ್ತಿಗೆ ಮನಸ್ಸು ಮಾಡುವಂತಹರಲ್ಲವೆಂಬುದು ಕಂಡುಬಾರದಿರದು. ಯಾವ ಅವರ ಅಭಿಪ್ರಾಯವೂ ಅವರ ಪ್ರಾಮಾಣಿಕ ಅಭಿಪ್ರಾಯವಾಗಿರುವುದು.

ಕೆಲವು ತಿಂಗಳಲ್ಲಿ ಕರ್ನಾಟಕ ಪ್ರಾಂತವೆ ?

ಈಗ ಜವಾಹರಲಾಲರ ಅಭಿಪ್ರಾಯವು ಬದಲಾದುದನ್ನು ಕಂಡ ನಮ್ಮ ಕರ್ನಾಟಕದ ಕಾಂಗ್ರೆಸ್ ಧುರೀಣರಿಗೆ ಒಂದು ಬಗೆಯ ಬಲವು ಬಂದಂತಾಗಿದೆ ಅದುವರೆಂವಲೇ ಅವರು ಉಲ್ಲಾಸದಲ್ಲಿ ಮೈಮರೆತವರಾಗಿ, 'ಕೆಲವು ತಿಂಗಳುಗಳಲ್ಲಿಯೇ ಕನ್ನಡಿಗರಿಗೆ ಪ್ರತ್ಯೇಕ ಪ್ರಾಂತ್ಯವು ದೊರೆತೇ ತೀರುವುದು' ಎಂಬಂತಹ ಮಾತುಗಳನ್ನು ಸಾರುತ್ತ ಹೊರಟಿದ್ದಾರೆ. ಇವೇ ನಂಬುಗೆಯಿಂದಲೇ ಮೊನ್ನೆ ಹುಬ್ಬಳ್ಳಿಯಲ್ಲಿ ಸೇರಿದ ಕೆ. ಪಿ ಸಿ. ಸಿ. ಸಭೆಯಲ್ಲಿ. ಹಿಂದೆ ಗೊತ್ತು ಮಾಡಿದ್ದ ರಾಜೀನಾಮೆಯ ನಿರ್ಣಯವನ್ನು ಉಪಸಂಹರಿಸುವ ಗೊತ್ತುವಳಿಯನ್ನು ಮಾಡಲಾಗಿದೆ. ಕಾಂಗ್ರೆಸ್ಸಿನ ವರಿಷ್ಠರ ಮನಸ್ಸಿನಲ್ಲಿ ನಿಜವಾಗಿಯೂ ಬದಲಾವಣೆಯಾಗಿದ್ದರೆ ಕರ್ನಾಟಕಕ್ಕೆ ಪ್ರತ್ಯೇಕ ಪ್ರಾಂತ್ಯ ಸಿಕ್ಕಲೂಬಹುದು. ಆದರೆ, ಕೆಲವು ನಮ್ಮ ಧುರೀಣರು ಸಾರುತ್ತ ಹೊರಟಿರುವಂತೆ 'ಕೆಲವು ತಿಂಗಳುಗಳಲ್ಲಿಯೇ' ಅದು ಸಾಧಿಸಬಹುದೆ? ಕೇಂದ್ರ ಸರಕಾರವು ನಿಯಮಿಸಿದ ಉಚ್ಚ ಮಟ್ಟದ ಆಯೋಗ ಸಮಿತಿಯು ತನ್ನ ವಿಚಾರಣೆಯ ಕಾರ್ಯ ಭಾರವನ್ನು ಮುಗಿಸಬೇಕು. ಅವರೆನುರು ಕರ್ನಾಟಕ ಪ್ರಾಂತ್ಯದ ವಿಚಾರಣೆಯ ಕಾರ್ಯವೊಂದೇ ಇಲ್ಲ. ಇಂತಹ ಅನೇಕ ಪ್ರಾಂತ್ಯಗಳ ಸಮಸ್ಯೆಯನ್ನು ಕುರಿತು ಅದು ಕಾರ್ಯಭಾರವನ್ನು ನಡೆಯಿಸಬೇಕಾಗಿದೆ. ಎಷ್ಟೇ ಅವಸರಪಟ್ಟು ಅದು ತನ್ನ ಕರ್ತವ್ಯವನ್ನು ಮುಗಿಸಬೇಕೆಂದರೂ ಕಾಲಾವಧಿ ಸಾಕಷ್ಟು ಬೇಕಾಗುವುದು. ಇಷ್ಟೇ ಅಲ್ಲದೆ, ಈ ಆಯೋಗ ಸಮಿತಿಯಲ್ಲಿದ್ದ ವ್ಯಕ್ತಿಗಳ ಭಾವಲಹರಿ ಯಾವ ಕಡೆಗೆ ಹರಿದೀತೆಂಬುದರ ನಿಯಮವಿಲ್ಲ. ಕರ್ನಾಟಕದ ಪ್ರತ್ಯೇಕೀಕರಣಕ್ಕೆ ಅವರಿಂದ ಅನುಕೂಲವಾದ ಅಭಿಪ್ರಾಯವೇ ದೊರೆತೀತೆಂಬುದರ ನಿಯಮವಿಲ್ಲ. ಒಂದು ವೇಳೆ ಅವರು ಅನುಕೂಲಾಭಿಪ್ರಾಯಸಟ್ಟರೂ, ಅದು ಪಾರ್ಲಿಮೆಂಟಿನಲ್ಲಿ ಬಹುಮತದ ಒಪ್ಪಿಗೆ ಪಡೆಯಬೇಕು: ಇಷ್ಟೆಲ್ಲ ವಿಧಿವಿಧಾನಗಳು ಆಗಬೇಕಾದರೆ ಕಾಲದ ಅವಕಾಶ ಕಡಿಮೆಯೇನೂ ಹಿಡಿಯಲಾರದು. ಆಯೋಗಸಮಿತಿಯ ನಿರ್ಣಯದಲ್ಲಿ ನಂಬುಗೆಯಿಟ್ಟು ನಡೆಯುವುದಾದರೆ, ಕೆಲವೆ ತಿಂಗಳಲ್ಲಿ ಕನ್ನಡಿಗರಿಗೆ ಪ್ರತ್ಯೇಕ ಪ್ರಾಂತ್ಯ ದೊರೆಯುವುದು ಸಾಧ್ಯವೇ ಇಲ್ಲ. ದೊರೆಯುವ ಸಮಯದಲ್ಲಿ ಅದು ದೊರೆಯಬಹುದಾದರೂ, ಅದರ ಸಲುವಾಗಿ ರಭಸದಿಂದ ಮುಂದುವರೆದು ಕಾರ್ಯ ಮಾಡಿದೆ, ನಿಷ್ಪ್ರಯೋಜಕವಾಗಿ ಕುಳಿತು ಪ್ರಯೋಜನವಿಲ್ಲ. ಕನ್ನಡನಾಡಿನ ಲಗ್ನಕುಂಡಲಿಯಲ್ಲಿ ದುಷ್ಟ ಗ್ರಹಗಳು ಅಲ್ಲಲ್ಲಿ ಮನೆಹಿಡಿದುಕೊಂಡು ಕುಳಿತಿವೆ. ಈ ಗ್ರಹಗಳ ಸ್ಥಾನ ಪಲ್ಲಟವಾಗುವಂತೆ ಕನ್ನಡಿಗರೆಲ್ಲರೂ ಸೇರಿ ಒಮ್ಮನದಿಂದ ಮಾಡಬೇಕಾಗಿರುವ ಕಾರ್ಯಗಳು ತುಂಬ ಇವೆ.

ತಿರುಕರಾಗಿರಲಿಲ್ಲ. ಸಮಾಜವು ಕೆಲವೊಂದು ಕೆಳತರಗತಿಯ ಕೆಲಸಗಳನ್ನು ಇವರಿಗೆ ಒಪ್ಪಿಸಿಕೊಟ್ಟಿತ್ತು. ಅವರ ದುಡಿಮೆಗೆ ತಕ್ಕ ಪಡಿಯನ್ನು ಸಲ್ಲಿಸುತ್ತಿತ್ತು. ಆವರೆ ಬರುಬರುತ್ತ ಅವರಿಗೆ ಕೆಲಸ ಇಲ್ಲವೆಂತಾಯಿತು. ಹೊಟ್ಟೆ-ಬಟ್ಟೆಗಾಗಿ ತಿರುಕುಕೊಳ್ಳಲು ತೊಡಗಿದರು. ಸಮಾಜದಲ್ಲಿ ನಾನಬುದ್ಧಿ ಜಾಗೃತವಾಗಿದ್ದುದರಿಂದ ಅವರಿಗೆ ತಿರುಪೆಯೂ ದೊರೆಯತೊಡಗಿತು. ಅವರಿಂದಲೇ ಅವರೆಲ್ಲ-ಪರಂಪರಾಗತ ತಿರುಕರಾಗಿ ಬಿಟ್ಟರು.

ಇದರಂತೆಯೆ ನಮ್ಮ ಸಾಮಾಜಿಕರಲ್ಲಿಯು ಜಾಗೃತ ಧಾರ್ಮಿಕ ಬುದ್ಧಿ ಪುರೋಹಿತರು, ಜೋಯಿಸರು, ಜಂಗಮರು, ಜೋಗಿಗಳು ಗೊಂದಲಿಗರು, ಸುಡುಗಾಡುಸಿದ್ಧರು ಶಂಖಿನಯ್ಯ, ಪುರಾಣಕರು, ಕೀರ್ತನಕಾರರು,— ಇವರ ಕಡೆಗೆ ಧಾರ್ಮಿಕ ಸಂಪ್ರದಾಯಗಳ ಒಂದೊಂದು ಕಾರ್ಯವನ್ನು ಒಪ್ಪಿಸಿ, ಅವರ ಯೋಗ-ಕ್ಷೇಮವನ್ನು ತಾನು ನೋಡಿಕೊಳ್ಳುತ್ತಿದ್ದಿತು. ಹಿಂದಿನ ಕಾಲವು ಅವರನ್ನು ತಿರುಕರೆಂದು ಪರಿಗಣಿಸುತ್ತಿರಲಿಲ್ಲವಾದರೂ, ಇಂದಿನ ಕಾಲ ಅನಿವಾರ್ಯವಾಗಿ ಅವರನ್ನು ತಿರುಕರನ್ನಾಗಿ ಮಾಡಿಬಿಟ್ಟಿದೆ.

ಕೊಲ್ಲುಬಡಿಗರು, ಕಿಳ್ಳಿಕೇತರು, ನಟ್ಟುವರು, ಮೋಡಿಕಾರರು, ಕವಲಿಬಸವಣ್ಣನವರು, ಕರಡಿಯಾಡಿಸುವವರು, ಹಾವಾಡಿಗರು— ಇವರೆಲ್ಲ ಸಾಮಾಜಿಕರ ಮನೋರಂಜನೆ ಮಾಡಿ, ಅವರು ಕೊಟ್ಟ ಮೆಚ್ಚಿನಿಂದ ಹೊಟ್ಟೆತುಂಬಿಕೊಳ್ಳುತ್ತಿದ್ದರು. ಇಂದಿನ ಮನೋರಂಜನ ಸಾಧನಗಳು ಜೀವಂತವಾಗಿರುವುದರಿಂದ, ಅವರೆಲ್ಲ ಇಂದು ತಿರುಕರಾಗಿ ನಿಂತಿದ್ದಾರೆ.

ನಮ್ಮ ದೇಶದ ಐತಿಹಾಸಿಕ ಕಾಲದಲ್ಲಿ ದಂಡಿಗೆ ಬೇಕಾಗುವ ಶಸ್ತ್ರಾಸ್ತ್ರಗಳನ್ನು ಒದಗಿಸಿಕೊಡುತ್ತಿದ್ದವರೂ, ಕುದುರೆ-ಆನೆಗಳ ಹಲ್ಲಾಣಗಳನ್ನು ಸಿದ್ಧಗೊಳಿಸಿಕೊಡುತ್ತಿದ್ದವರೂ, ದಂಡಿಗೆ ಅವಶ್ಯಕವಾದ ಬೇರೆ ಬೇರೆ ಊಳಿಗ ಮಾಡುತ್ತಿದ್ದವರೂ, ಕಾಲವೈಪರೀತ್ಯದ ಮೂಲಕ ನಿರುದ್ಯೋಗಿಗಳಾಗುತ್ತ, ತಿರಿಮಂತ್ರಾಂಡು ತಿನ್ನುವ ಉದ್ಯೋಗವನ್ನು ಕೈಕೊಳ್ಳಬೇಕಾಯಿತು. ಬ್ರಿಟಿಷರ ವ್ಯಾಪಾರೀ ವೃತ್ತಿಯ ಆಳಿಕೆಯ ಮೂಲಕ, ಇನ್ನೂ ಹಲವರು ತುತರ್ಕ ಕಾಲಪರಂಪರಾಗತ ಉದ್ಯೋಗವನ್ನು ಕಳೆದುಕೊಂಡವರಾಗಿ ಭಿಕ್ಷೆಯ ಜೆನ್ನನ್ನು ಹತ್ತಬೇಕಾಯಿತು.

ಇನ್ನೆಲ್ಲ ಕಾರಣಗಳ ಮೂಲಕ ಭಾರತವು ಭಿಕ್ಷುಕರ ಬೀಡಾಯಿತು. ಆದರೂ ಆರ್ಥಿಕ ಸಂಕಟವಿಲ್ಲದ ಸುಕಾಲ, ಸಾಮಾಜಿಕರಲ್ಲಿ ಇವ್ವ ದಾನಬುದ್ಧಿ ಇವುಗಳಿಂದ, ಇವುವರೆಗೂ ನಮ್ಮ ತಿರುಕರ ತಂಡ ಹೇಗೋ ಬದುಕಬಂದಿತು. ಅವರ ಜೋಳಿಗೆಯನ್ನು ಬಿಡಿಸಬೇಕೆಂಬ ವಿಚಾರವನ್ನು ಯಾರೂ ಮಾಡಲಿಲ್ಲ. ಮಾಡುವುದರ ಆವಶ್ಯಕತೆಯೂ ತೋರಲಿಲ್ಲ.

ಇಂದಿನ ಆರ್ಥಿಕ ವಿಷಮಪರಿಸ್ಥಿತಿಯು ಮೂಲಕ ನಮ್ಮ ನಾಡಿನ ಪಳೆಯ ಹೊಸ ತಿರುಕರೆಲ್ಲ ಜನರಿಗೆ ತಲೆಹೊದೆಯಾಗಿ ಪರಿಣಮಿಸಲು ತೊಡಗಿದ್ದಾರೆ. ಇವ್ವವರಿಗೆ ದಾನಬುದ್ಧಿಯಿಲ್ಲ; ಇಲ್ಲದ ಬಡಪರ ಗುಡಿಸಲಲ್ಲಿ ತಿರುಪೆದೊರೆಯುವುದು ಶಕ್ಯವೇ ಇಲ್ಲ. ಇವ್ವವರ ಮನೆಯ ಆಳುಗಳೂ ಕಾಟಿನ ನಾಯಿಗಳೂ ತಿರುಕರನ್ನು ಬಾಗಿಲ ಬಳಿ ನಿಲ್ಲಗೊಡುವುದಿಲ್ಲ. ಇಲ್ಲದ ಬಡವರ ಬಾಗಿಲಿಗೆ ತಿರುಕರು ಸುಳಿಯುವಂತಿಲ್ಲ. ಹೀಗಾಗಿ ಮಧ್ಯಮ ತರಗತಿಯ ಜನರ ಮನೆಗಳ ಮೇಲೆಯೇ ಈ ತಿರುಕರ ತಂಡದ ಹಾವಳಿಯು ನಡೆದಿರುವುದು. ಆದರೆ ಈ ಕಾಲದಲ್ಲಿ ಮಧ್ಯಮ ತರಗತಿಯವರೆನಿಸಿಕೊಳ್ಳುವರಿಗೆ, ಬಂದ ತಿರುಕರಿಗೆಲ್ಲ ಭಿಕ್ಷೆ ಹಾಕುವಂತಹ ಶಕ್ತಿ ಉಳಿದಿದೆಯೆ? ಭಿಕ್ಷೆ ಹಾಕಬೇಕೆಂಬ ಬುದ್ಧಿಯಿದ್ದರೂ, ಅದು ಅಸಾಧ್ಯವಾಗಿ ಪರಿಣಮಿಸುತ್ತಿರುವುದರಿಂದ, ಆಂತರ್ಯದಲ್ಲಿಯೇ ಅಸಮಾಧಾನಪಟ್ಟುಕೊಳ್ಳುವರು; ಬರಿಜೋಳಿಗೆಯಿಂದ ತಿರುಗಿಸಬೇಕಾಗಿ ಬರುವ ತಿರುಕರಿಂದ ಬೈಗಳನ್ನು ತಿಂದು ಕಳವಳಪಡುವರು. ಬಹಳ ಜನ ಮಧ್ಯಮತರಗತಿಯವರ ಮನೆಗಳಂದು ತಮ್ಮ ಜೋಳಿಗೆಯಂತೆಯೇ ಬರಿಯವಾಗಿರುವುದೆಂಬುದು, ಪಾಪ, ಆ ತಿರುಕರಿಗೆ ಏನು ಗೊತ್ತು? ದೊರೆತರೆ ಇನೇ ಮನೆಗಳಲ್ಲಿ ಒಂದು ತುತ್ತು ಕೂಳು ದೊರೆಯುವುದೆಂಬುದು ತಿರುಕರ ಬಲುದಿನದ ಅನುಭವ. ಈಗ ಕೂಡ ತನ್ನ ಹೊಟ್ಟೆಗೆ ಕಡಿಮೆ ಹಾಡಿಕೊಂಡಾದರೂ ಒಂದು ತುತ್ತು ನೀಡಬೇಕೆಂಬ ವಿಶಾಲಹೃದಯ ಇವರದು! ಆದರೆ ಎಷ್ಟು ಜನರಿಗೆ ನೀಡಲು ಸಾಧ್ಯವಿದೆ?

ಸರಕಾರ ಈ ಮಧ್ಯಮ ತರಗತಿಯವರಿಗೆ ಕೊಡುವ ಅನ್ನ ಸಾಮಗ್ರಿ ಅರಹೊಟ್ಟೆಗೂ ಸಾಲದುಬಹುದು. ಅದರಲ್ಲಿಯೂ ಕಸಕಡ್ಡಿ, ಮಣ್ಣು-ಕಲ್ಲುಗಳು ಸೇರಿ, ಕೊರತೆಯು ಪ್ರಮಾಣವನ್ನು ಇನ್ನೂ ಹೆಚ್ಚಿಸುವುದು. ಕಳ್ಳಪೇಟೆಯಲ್ಲಿ ದೊರತೆಸಿ, ಕೊರತೆಯನ್ನು ಕಳೆದುಕೊಂಡರೆಂದರೆ, ಅದಾಯದ ಪಾಲವು ಒಪ್ಪಿಗೆ ಕೊಡುವುದಿಲ್ಲ. ಇಂತಹರಲ್ಲಿ ಉಳಿಸಿಕೊಳ್ಳಬೇಕೆಂದರೂ ಉದಾರ ಬುದ್ಧಿ ಉಳಿಯುವ ಬಗೆ ಜೇಗೆ? ಆದರೆ ಬಹುದಿನದಿಂದ ಬಂದ ಹೃದಯಸಂಸ್ಕಾರ, ತಿರುಪೆ ನೀಡಲಾಗದ ತನ್ನ ಅಸಾಮರ್ಥ್ಯಕ್ಕಾಗಿ ಇವರನ್ನು ಕ್ಷಣಕ್ಷಣಕ್ಕೂ ಕಳವಳಗೊಳಿಸುತ್ತಲಿದೆ, ತಿರುಕರ ತಂಡವನ್ನು ನೋಡಿ ಮನಸ್ಸು ಕೆರಳಿನಿಲ್ಲುತ್ತಿದೆ.

ಸುಸಂಘಟನೆಯಿಲ್ಲದ ನಮ್ಮ ಸಮಾಜವು, ಇಂದಿನ ತಿರುಕರ ತಂಡದ ಹಾವಳಿಯ ಸಮಸ್ಯೆಯನ್ನು ಬಿಡಿಸುವುದೆಂಬ ಸಾಧ್ಯತೆ ಇಲ್ಲ. ನಮ್ಮದೇ ಆದ ಪ್ರಜಾಪ್ರಭುತ್ವವು ಈ ಸಮಸ್ಯೆಯ ಮಹತ್ವವನ್ನು ಗುರುತರಿಕೆ ಮಾಡಿಕೊಂಡು, ಇದನ್ನು ಬಿಡಿಸಲು ಉಪಾಯ ಮಾಡಬೇಕು. ಬರೀ 'ದೇಶದಲ್ಲಿ ತಿರುಕರು ಇರಲಾಗದು' ಎಂದು ಕಾಯಿದೆ ಮಾಡಿ ಕುಳಿತುಕೊಂಡರೆ ಏನೂ ಆಗುವುದಿಲ್ಲ. ಹಾಗಾದರೆ ಇರುವ ತಿರುಕರೆಲ್ಲ ಎಲ್ಲಿಗೆ ಹೋಗಬೇಕು? ಸರಕಾರದ ಕಾಯಿದೆಯನ್ನು ಪಾಲಿಸಲು, ಅವರು ದೇಶವನ್ನು ಬಿಟ್ಟುಹೋಗಿ ಸಮುದ್ರದಲ್ಲಿ ಮುಳುಗಿ ಸಮಾಧಿ ಪಡೆಯಬೇಕೆ? ತಿರುಕರಾದರೂ ಭಾರತದ ಪ್ರಜೆಗಳು. ಭಾರತದಲ್ಲಿ ಬದುಕಿರುವ ಅಧಿಕಾರ ಅವರಿಗೂ ಉಂಟು ಆದರೆ ಬದುಕಲು ಪಾರಿ? ಎಲ್ಲರನ್ನೂ ಸುಖ-ಸಮಾಧಾನಗಳಿಂದ ಬದುಕಿಸಬೇಕೆನಿಸುವ ಸರಕಾರವೇ ತಿರುಕರ ಬದುಕಿನ ಕಡೆಗೆ ನೋಡದೆ ಹೋದರೆ, ಅವರು ಇನ್ನೇನು ಮಾಡಬೇಕು? ಬದುಕಲೇಬೇಕೆಂದ ಆಶೆಯಿಟ್ಟ ಅವರು, ತಮಗೆ ಅನುಕೂಲವಾಗಿ ತೋಕುವ ಎಡೆಗಳಲ್ಲಿ ಹಾವಳಿಯನ್ನು ನಡೆಯಿಸುವರು! ಇದೇ ತಲೆಮಾರಿಗೆ ಅವರ ತಿರುತನವನ್ನು ಕಳೆದರೆ, ಅವರ ಮುಂದಿನ ತಲೆಮಾರಿನವರಾದರೂ ತಿರುಪೆಯ ಹಾವಳಿಯನ್ನು ನಿಲ್ಲಿಸಬಹುದು. ಇಲ್ಲವಾದರೆ, ಮುಂದೆ ಮುಂದೆ ಒಂದಕ್ಕೆ ಹತ್ತರಷ್ಟು ಅವರ ಸಂಖ್ಯೆ ಬೆಳೆದು, ಅವರ ಹಾವಳಿ ಹೆಚ್ಚಾದೀತು.

ನಾಡನಡೆ

ಪಂಡಿತ ಜವಾಹರರು, ಕರ್ನಾಟಕ ಪ್ರಾಂತೀಕರಣ

ಭಾರತದ ಮುಖ್ಯಪ್ರಧಾನ ಪಂಡಿತ ಜವಾಹರಲಾಲರು ಇತ್ತೀಚೆಗೆ ಅಲ್ಲಲ್ಲಿ ಆಡುತ್ತಿರುವ ಮಾತುಗಳನ್ನು ಕೇಳಿದರೆ, ಭಾಷಾನ್ವಯ ಪ್ರಾಂತ್ಯನಿರ್ಮಾಣದ ವಿಷಯದಲ್ಲಿ ಅವರ ಅಭಿಪ್ರಾಯ ಬಧಲಾದಂತೆ ತೋರುತ್ತಲಿದೆ. ಆಂಧ್ರಪ್ರಾಂತ್ಯ ಪ್ರತ್ಯೇಕೀಕರಣಕ್ಕಿಂತ ಮೊದಲು ಭಾಷಾನುಗುಣಪ್ರಾಂತರಚನೆಯ ಪ್ರಶ್ನೆ ಬಂದಾಗ, ರೇಗಿದ ಧ್ವನಿಯಲ್ಲಿಯೇ ತಮ್ಮ ವಿರೋಧಾಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದರು. ಪ್ರಾಂತ್ಯ ಪ್ರತ್ಯೇಕೀಕರಣವನ್ನು ಅಪೇಕ್ಷಿಸುವವರೆಂದು, ನೀಗಲಾರದಂತಹ ಕರಾರುಗಳೆನ್ನು ಒಡ್ಡಿ, ಅವರನ್ನು ನಿರುಪಾಯರನ್ನಾಗಿಸುತ್ತಿದ್ದರು. ಆತರೆ ಆಂಧ್ರದ ಜನರು ಒಟ್ಟುಗೂಡಿ ಮಾಡಿದ ಚಳವಳಿಯು ಕಾವು, ಅವರ ಅಭಿಪ್ರಾಯದ ಗಟ್ಟಿತನವನ್ನು ಕರಗಿಸಿದೆಯೆಂದು ತೋರುವುದು. ಹಿಂದೊಮ್ಮೆ ಬೆಳಗಾಂವಿಗೆ ಬಂದಾಗ, ಕನ್ನಡಿಗರ ಪ್ರಾಂತೀಕರಣ ಚಳವಳಿಯ ಬಗೆಗೆ ಆಡಿದ ಸಿಡಿನುಡಿಗಳಿಗೂ ಇಂದು ಅಲ್ಲಲ್ಲಿಯ ಸಭೆಗಳಲ್ಲಿ ಮಾತನಾಡುತ್ತಿರುವ ಪ್ರಾಂತ್ಯ ಪ್ರತ್ಯೇಕೀಕರಣದ ವಿಚಾರದಲ್ಲಿ ಆಡುತ್ತಿರುವ ಸಂಯಮ-ಸಜ್ಜಾನುಭೂತಿಯ ಮಾತುಗಳಿಗೂ, ತುಂಬ ಅಂತರವನ್ನು ತೋರುತ್ತಲಿದೆ. ಕ. ಪ್ರ. ಕಾಂಗ್ರೆಸ್ ಕಮಿಟಿಯು ಅಧ್ಯಕ್ಷರಿಗೆ ಬರೆದ 'ಖಸಗೀ' ಪತ್ರದಲ್ಲಿಯೂ ಪ್ರಾಂತ್ಯಪ್ರತ್ಯೇಕೀಕರಣದ ವಿಚಾರದಲ್ಲಿ ಅವರ ಧೋರಣೆ ಬದಲಾದುದು ಸ್ಪಷ್ಟವಾಗಿ ಕಂಡುಬರುತ್ತದೆ. ಹೀಗಾಗಲು ಕಾರಣವೇನಿರಬಹುದು ?

ಪಂಡಿತರ ಈ ಬದಲಾವಣೆಯು, ರಾಜಕಾರಣಿಯೊಬ್ಬನ ಧೂರ್ತತನವಾಗಿದೆಯೆಂದು ಯಾರಾದರೂ ಹೇಳಿದರೆ ಅದು ಒಪ್ಪತಕ್ಕ ಸಂಗತಿಯೇನೂ ಅಲ್ಲ. ಇತ್ತೀಚೆಗೆ ನಮ್ಮ ನಾಡಿನಲ್ಲಿ ನಡೆದ ಎಡೂರು ಚುನಾವಣೆಗಳಲ್ಲಿ ಕಾಂಗ್ರೆಸ್ ಹುರಿಯಾಳುಗಳು ಸೋತು, ವಿಕೇಂದ್ರೀಕರಣ ಪಕ್ಷದ ಹುರಿಯಾಳುಗಳು ಗೆದ್ದದ್ದು ಪಂ. ಜವಾಹರಲಾಲರಲ್ಲಿ ಒಂದು ನೂತನ ಎಚ್ಚರಿಕೆಯನ್ನು ಉಂಟುಮಾಡದೆ ಬಿಟ್ಟಿರಲಾರದು. ಅಲ್ಲದೆ ಆಂಧ್ರಿಗೆ ಪ್ರತ್ಯೇಕ ಪ್ರಾಂತ್ಯವನ್ನು ನಿರ್ಮಿಸಿಕೊಟ್ಟಿರುವಾಗ ಬೇಕ್ಕವನಿಗೇಕೆ ಆ ಅನುಕೂಲತೆಯನ್ನು ಒದಗಿಸಿಕೊಡಬಾರದು?— ಎಂಬ ನ್ಯಾಯಬುದ್ಧಿಯೂ ಅವರಲ್ಲಿ ಜಾಗೃತವಾಗಿರಬಹುದು. ಇನ್ನೂ ಒಂದು ಮಾತೆಂದರೆ, ಕರ್ನಾಟಕ ಪ್ರಾಂತ್ಯದ ಕಾಂಗ್ರೆಸ್ಸಿನ ನಾಯಕರು, ಪ್ರಾಂತ್ಯದ ಪ್ರತ್ಯೇಕೀಕರಣವಾಗದೆ ಹೋದರೆ, ತಾವು ವಿಸಹಾಯರೂ ನಿಷ್ಕ್ರಿಯರೂ ಆಗುವೆವೆಂಬ ಮಾತನ್ನು, ಮುಖ್ಯಮಂತ್ರಿಗಳೂ ಕಾಂಗ್ರೆಸ್ಸಿನ ಅಧ್ಯಕ್ಷರೂ ಆದ ಪಂಡಿತರ ಮನಸ್ಸಿನ ಮೇಲೆ ಬಿಂಬಿಸುವಂತೆ ಹೇಳಿರಬಹುದು ಯಾವುದೇ ಕಾರಣವಿರಲಿ, ಈಗ ಅವರು ಪ್ರಾಂತ್ಯದ ಪ್ರತ್ಯೇಕೀಕರಣಕ್ಕೆ ಅವಿರೋಧಭಾವವನ್ನು ತೋರಿಸುತ್ತಿರುವುದು ಸಮಾಧಾನದ ಸಂಗತಿಯೇ ಆಗಿದೆ. ಪಂಡಿತರ ಸ್ವಭಾವವನ್ನೂ ಇದುವರೆಗಿನ ಕಾರ್ಯಸದ್ಧತಿಯನ್ನೂ ಕಣ್ಣಿಟ್ಟು ನೋಡುವಂಬಂದವರಿಗೆ, ಅವರು ಕುಟಿಲ ರಾಜಕಾರಣಿಯ ಧೂರ್ತವೃತ್ತಿಗೆ ಮನಸ್ಸು ಮಾಡುವಂತಹರಲ್ಲವೆಂಬುದು ಕಂಡುಬಾರದಿರದು. ಯಾವ ಅವರ ಅಭಿಪ್ರಾಯವೂ ಅವರ ಪ್ರಾಮಾಣಿಕ ಅಭಿಪ್ರಾಯವಾಗಿರುವುದು.

ಕೆಲವು ತಿಂಗಳಲ್ಲಿ ಕರ್ನಾಟಕ ಪ್ರಾಂತವೆ ?

ಈಗ ಜವಾಹರಲಾಲರ ಅಭಿಪ್ರಾಯವು ಬದಲಾವುದನ್ನು ಕಂಡ ನಮ್ಮ ಕರ್ನಾಟಕದ ಕಾಂಗ್ರೆಸ್ ಧುರೀಣರಿಗೆ ಒಂದು ಬಗೆಯ ಬಲವು ಬಂದಂತಾಗಿದೆ. ಅದುದರಿಂದಲೇ ಅವರು ಉಲ್ಲಾಸದಲ್ಲಿ ಮೈಮರೆತವರಾಗಿ, 'ಕೆಲವು ತಿಂಗಳುಗಳಲ್ಲಿಯೇ ಕನ್ನಡಿಗರಿಗೆ ಪ್ರತ್ಯೇಕ ಪ್ರಾಂತ್ಯವು ದೊರೆತೇ ತೀರುವುದು' ಎಂಬಂತಹ ಮಾತುಗಳನ್ನು ಸಾರುತ್ತ ಹೊರಟಿದ್ದಾರೆ. ಇದೇ ನಂಬುಗೆಯಿಂದಲೇ ಮೊನ್ನೆ ಹುಬ್ಬಳ್ಳಿಯಲ್ಲಿ ಸೇರಿದ ಕೆ. ಪಿ. ಸಿ. ಸಿ. ಸಭೆಯಲ್ಲಿ, ಹಿಂದೆ ಗೊತ್ತು ಮಾಡಿದ್ದ ರಾಜೀನಾಮೆಯ ನಿರ್ಣಯವನ್ನು ಉಪಸಂಹರಿಸುವ ಗೊತ್ತುವಳಿಯನ್ನು ಮಾಡಲಾಗಿದೆ. ಕಾಂಗ್ರೆಸ್ಸಿನ ವರಿಷ್ಠರ ಮನಸ್ಸಿನಲ್ಲಿ ನಿಜವಾಗಿಯೂ ಬದಲಾವಣೆಯಾಗಿದ್ದರೆ ಕರ್ನಾಟಕಕ್ಕೆ ಪ್ರತ್ಯೇಕ ಪ್ರಾಂತ್ಯ ಸಿಕ್ಕಲೂಬಹುದು. ಆದರೆ, ಕೆಲವು ನಮ್ಮ ಧುರೀಣರು ಸಾರುತ್ತ ಹೊರಟಿರುವಂತೆ 'ಕೆಲವು ತಿಂಗಳುಗಳಲ್ಲಿಯೇ' ಅದು ಸಾಧಿಸಬಹುದೆ? ಕೇಂದ್ರ ಸರಕಾರವು ನಿಯಮಿಸಿದ ಉಚ್ಚ ಮಟ್ಟದ ಆಯೋಗ ಸಮಿತಿಯು ತನ್ನ ವಿಚಾರಣೆಯ ಕಾರ್ಯ ಭಾರವನ್ನು ಮುಗಿಸಬೇಕು. ಆದರೆಮೂರು ಕರ್ನಾಟಕ ಪ್ರಾಂತ್ಯದ ವಿಚಾರಣೆಯ ಕಾರ್ಯವೊಂದೇ ಇಲ್ಲ. ಇಂತಹ ಅನೇಕ ಪ್ರಾಂತ್ಯಗಳ ಸಮಸ್ಯೆಯನ್ನು ಕುರಿತು ಅದು ಕಾರ್ಯಭಾರವನ್ನು ನಡೆಯಿಸಬೇಕಾಗಿದೆ. ಎಷ್ಟೇ ಅವಸರಪಟ್ಟು ಅದು ತನ್ನ ಕರ್ತವ್ಯವನ್ನು ಮುಗಿಸಬೇಕೆಂದರೂ ಕಾಲಾವಧಿ ಸಾಕಷ್ಟು ಬೇಕಾಗುವುದು. ಇಷ್ಟೇ ಅಲ್ಲದೆ, ಈ ಆಯೋಗ ಸಮಿತಿಯಲ್ಲಿದ್ದ ವ್ಯಕ್ತಿಗಳ ಭಾವಲಹರಿ ಯಾವ ಕಡೆಗೆ ಹರಿದೀತೆಂಬುದರ ನಿಯಮವಿಲ್ಲ. ಕರ್ನಾಟಕದ ಪ್ರತ್ಯೇಕೀಕರಣಕ್ಕೆ ಅವರಿಂದ ಅನುಕೂಲವಾದ ಅಭಿಪ್ರಾಯವೇ ದೊರೆತೀತೆಂಬುದರ ನಿಯಮವಿಲ್ಲ. ಒಂದು ವೇಳೆ ಅವರು ಅನುಕೂಲಾಭಿಪ್ರಾಯಪಟ್ಟರೂ, ಅದು ಪಾರ್ಲಿಮೆಂಟಿನಲ್ಲಿ ಬಹುಮತದ ಒಪ್ಪಿಗೆ ಪಡೆಯಬೇಕು: ಇಷ್ಟೆಲ್ಲ ವಿಧಿವಿಧಾನಗಳು ಆಗಬೇಕಾದರೆ ಕಾಲದ ಅವಕಾಶ ಕಡಿಮೆಯೇನೂ ಹಿಡಿಯಲಾರದು. ಆಯೋಗಸಮಿತಿಯ ನಿರ್ಣಯದಲ್ಲಿ ನಂಬುಗೆಯಿಟ್ಟು ನಡೆಯಬಹುದಾದರೆ, ಕೆಲವೆ ತಿಂಗಳಲ್ಲಿ ಕನ್ನಡಿಗರಿಗೆ ಪ್ರತ್ಯೇಕ ಪ್ರಾಂತ್ಯ ದೊರೆಯಬಹುದಾದರೂ ಅದರ ಸಲುವಾಗಿ ರಭಸದಿಂದ ಮುಂದುವರೆದು ಕಾರ್ಯ ಮಾಡಿದೆ, ನಿಷ್ಕ್ರಿಯವಾಗಿ ಕುಳಿತು ಪ್ರಯೋಜನವಿಲ್ಲ. ಕನ್ನಡನಾಡಿನ ಲಗ್ನಕುಂಡಲಿಯಲ್ಲಿ ದುಷ್ಟ ಗ್ರಹಗಳು ಇಲ್ಲಲ್ಲಿ ಮನೆಹಿಡಿದುಕೊಂಡು ಕುಳಿತಿವೆ. ಈ ಗ್ರಹಗಳ ಸ್ಥಾನ ಪಲ್ಲಟನಾಗುವಂತೆ ಕನ್ನಡಿಗರೆಲ್ಲರೂ ಸೇರಿ ಒಮ್ಮನಸಿಂದ ಮಾಡಬೇಕಾಗಿರುವ ಕಾರ್ಯಗಳು ತುಂಬ ಇವೆ.

ಬೆಳಗಾಂವಿಯ ಕನ್ನಡಿಗರೇ ಸಂಘಟಿತರಾಗಿರಿ

ಬಳ್ಳಾರಿನಗರವನ್ನು ಕರ್ನಾಟಕಕ್ಕೆ ಉಳಿಸಿಕೊಳ್ಳಬೇಕಾದರೆ, ಕನ್ನಡಿಗರೆಲ್ಲ ಎಷ್ಟೊಂದು ಸಾಹಸ ಮಾಡಬೇಕಾಯಿತು? ಅದು ಕರ್ನಾಟಕಕ್ಕೆ ಉಳಿದುದು ಬಳ್ಳಾರಿಯ ಕನ್ನಡಿಗರ ಇಚ್ಛಾಶಕ್ತಿಯ ಫಲವೇ ಹೊರತು, ಮಿಕ್ಕವರ ಸಾಹಸ ಅಲ್ಲಿ ಯಾವ ಪ್ರಯೋಜನಕ್ಕೂ ಬರುವಂತಿರಲಿಲ್ಲ. ಬೆಳಗಾಂವಿ ನಗರವೂ ಬಳ್ಳಾರಿಯ ತೆರದಲ್ಲಿಯೇ, ಅಲ್ಲಿಯ ಕನ್ನಡಿಗರ ಉತ್ಕಟವಾದ ಇಚ್ಛಾಶಕ್ತಿ–ಕಾರ್ಯಶಕ್ತಿಗಳಿಂದ ಕರ್ನಾಟಕಕ್ಕೆ ಉಳಿಯಬೇಕಾಗಿದೆ. ಬೆಳಗಾಂವಿ ಹದಿನಾರಾಣೆ ಕನ್ನಡಿಗರ ನಗರವಾದರೂ, ಕನ್ನಡಿಗರ ಔದಾಸೀನ್ಯ, ಹುಚ್ಚು ಔದಾರ್ಯ, ನಿಷ್ಕ್ರಿಯತೆಗಳ ಮೂಲಕ ಅದು ವಾದಗ್ರಸ್ತ ನಗರವಾಗುವ ಸಂದರ್ಭ ಬಂದಿದೆ. ಇಷ್ಟೇ ಅಲ್ಲ; ಅಲ್ಲಿ ಕನ್ನಡಿಗರು ಇದುವರೆಗೆ ತಮ್ಮ ಹಕ್ಕುಗಳ ವಿಷಯವನ್ನು ದುರ್ಲಕ್ಷಿಸಿ ನಡೆದುಕೊಂಡು ಬಂದುದರಿಂದ ಇನ್ನಾರೋ ಬಂದು ಆಕ್ರಮಣ ಮಾಡಿ, ಕನ್ನಡಿಗರ ಹಕ್ಕುಗಳನ್ನೇ ಹುಡಿಗೂಡಿಸಿಬಿಟ್ಟಿದ್ದಾರೆ. ಪ್ರಯತ್ನಪಟ್ಟರೆ ಸೊಲ್ಲಾಪುರದಂತಹ ನಗರದಲ್ಲಿಯೂ ಸುರಕ್ಷಿತವಾಗಿ ಉಳಿಯಬಹುದಾದಂತಹ ಕನ್ನಡಿಗರ ಜನ್ಮಸಿದ್ಧ ಹಕ್ಕುಗಳೂ ಇಂದು ಬೆಳಗಾಂವಿಯ ಕನ್ನಡಿಗರಿಗೆ ಜೊರೆಯದಂತಹ ದಬ್ಬಾಳಿಕೆ ಅಲ್ಲಿ ನಡೆದಿದೆ. ಮೊನ್ನೆಮೊನ್ನೆಯೇ, ಬೆಳಗಾಂವಿಯ ನಗರಸಭೆಯಲ್ಲಿ ಕನ್ನಡಕ್ಕೆ ಸ್ಥಾನ ಕೊಡಬೇಕೆ?—ಎಂಬ ವಿಚಾರದಲ್ಲಿ ಚರ್ಚೆ ನಡೆದು, ಕನ್ನಡ ಭಾಷೆಗೆ ವಿರೋಧವನ್ನು ತಂದೊಡ್ಡುವ ಗೊತ್ತುವಳಿ ಬಹುಮತದಿಂದ ಪಾಸಾಗಿರುವುದನ್ನು ನೋಡಿದರೆ, ಅಲ್ಲಿಯ ಪ್ರತಿಕೂಲ ಪರಿಸ್ಥಿತಿಯ ಕಲ್ಪನೆಯು ನಮಗಾಗುವಂತಿದೆ. ಅಲ್ಲಿ ಕನ್ನಡಿಗರಲ್ಲಿಯ ಹಲವರೇ ಕನ್ನಡದ ಕತ್ತನ್ನು ಈ ಮೊದಲೇ ಹಿಸುಕಿದ್ದಾರೆ; ಈಗ ಸಂದರ್ಭ ಬಂದರೆ ಅವರು ಕತ್ತನ್ನು ಕೊಯ್ಯುವುದಕ್ಕೂ ಹಿಂದಿರಿಯಲಾರರು. ಅದುದರಿಂದ ಕರ್ನಾಟಕ ಪ್ರಾಂತ್ಯ ಪ್ರತ್ಯೇಕೀಕರಣದ ಪೂರ್ವಸಿದ್ಧತೆಗೆಂದು ಬೆಳಗಾಂವಿಯ ಕನ್ನಡಿಗರು—ತಮ್ಮ ತಮ್ಮಲ್ಲಿಯ ವಿಷಮತೆಯನ್ನು ಹೊಡೆದೋಡಿಸಿ— ಸುಸಂಘಟಿತರಾಗಿ ಕಾರ್ಯಸನ್ನದ್ಧರಾಗಬೇಕು. 'ಕನ್ನಡಿಗರ ಕೈಯನ್ನು ಬಿಟ್ಟು ಬೆಳಗಾಂವಿ ಹೋಗುವುದು ಹೇಗೆ? ಎಂಬ ಹುಚ್ಚು ನಂಬುಗೆಯಿಂದ ಕಾರ್ಯಮಾಡದೆ ಕುಳಿತರೆ, ಬೆಳಗಾಂವಿ ಕನ್ನಡಿಗರಿಂದ ದೂರಸಿಡಿದು ನಿಂತೀತು. ಅದಕ್ಕಾಗಿ ಇಂದು ಕನ್ನಡಿಗರು ತಮ್ಮತಮ್ಮಲ್ಲಿಯ ಪಕ್ಷ-ಪಂಗಡಗಳ ಭೇದವನ್ನು ಮರೆತು, ಒಂದೆ ಕಾರ್ಯಕ್ಷೇತ್ರದಲ್ಲಿ ಮನಮುಟ್ಟಿ ದುಡಿಯಬೇಕಾಗಿದೆ.

ಕನ್ನಡಿಗರ ಸರ್ವಪಕ್ಷೀಯ ಪರಿಷತ್ತು

ಇಂದಿನ ಸಂದರ್ಭದ ಸೂಕ್ಷ್ಮತೆಯನ್ನರಿತು, ಕೆ.ಪಿ.ಸಿ.ಸಿ. ಅಧ್ಯಕ್ಷರಾದ ಶ್ರೀಮಾನ್ ನಿಜಲಿಂಗಪ್ಪನವರು, ಕನ್ನಡಿಗರ ಸರ್ವಪಕ್ಷೀಯ ಸಮ್ಮೇಳನವನ್ನು ಕೂಡಿಸಬೇಕೆಂದು ಮನಸ್ಸುಮಾಡಿದುದು ತುಂಬ ಸಮಂಜಸ ವಿಚಾರವಾಗಿದೆ. ನಮ್ಮನಾಡಿನಲ್ಲಿ ಕಾಣುತ್ತಿರುವ ರಾಜಕೀಯ ಪಕ್ಷಗಳು ಮೂಲತಃ ಭಿನ್ನಭಿನ್ನವಾದುವುಗಳಲ್ಲ. ಒಂದೇ ಮರದ ಬೊಡ್ಡೆಗಳಿಂದ ಒಡೆದ ಶಾಖೆಗಳಾಗಿವೆ. ಕಮ್ಯುನಿಸ್ಟ್ ಪಕ್ಷವೊಂದನ್ನು ಬಿಟ್ಟರೆ, ಮಿಕ್ಕವರೆಲ್ಲರೂ ಮಹಾತ್ಮರ ರಾಜಕೀಯ ತತ್ತ್ವವನ್ನು ಎತ್ತಿ ಹಿಡಿಯುವವರೇ ಆಗಿದ್ದಾರೆ. ಅಧಿಕಾರಲುಬ್ಧತೆಯು ಹೂಲಕ-ವ್ಯಕ್ತಿ-ವ್ಯಕ್ತಿಗಳಲ್ಲಿ ಉಂಟಾಗಿರುವ ಮನಸ್ತಾಪಗಳೂ, ಕರ್ನಾಟಕ ಪ್ರಾಂತ್ಯ ನಿರ್ಮಾಣದ ಮಹಾಕಾರ್ಯವನ್ನು ಸಾಧಿಸಬೇಕಾಗಿರುವ ಈ ಕಾರ್ಯದಲ್ಲಿ ಮರೆಯಾಗಲೇ ಬೇಕಾಗಿದೆ. ಕರ್ನಾಟಕ ಪ್ರಾಂತವು ಪ್ರತ್ಯೇಕವಾದ ನೇಲೆ, ಕನ್ನಡಿಗರದೇ ಆದ ಯಾವ ರಾಜಕೀಯ ಪಕ್ಷದವರ ಕಡೆಗೂ ಅಡಳಿತದ ಸೂತ್ರಗಳು ಹೋಗಲೊಲ್ಲವೇಕೆ! ಕನ್ನಡಿಗರಲ್ಲದವರ ಅಡಳಿತ ಸೂತ್ರಕ್ಕೆ ಕನ್ನಡಿಗರು ಸಿಕ್ಕಿಕೊಳ್ಳಬಾರದೆಂಬ ತತ್ತ್ವವನ್ನು ಎಲ್ಲರೂ ಇಂದು ಒಪ್ಪಿಕೊಂಡು ಹೊರಡಬೇಕು. ಯಾವ ರಾಜಕೀಯ ತತ್ತ್ವವೂ ನಾಡಿನ ಜನರ ಸುಖ-ಶಾಂತಿಗಳ ಜೀವನಸಿದ್ಧಿಯನ್ನೇ ಆದರ್ಶವಾಗಿ ಇಟ್ಟುಕೊಂಡಿರುವುದು. ಕರ್ನಾಟಕವನ್ನು ಕಾಂಗ್ರೆಸ್ಸಿಗರೇ ಆಳಲಿ, ಸಮಾಜವಾದಿಗಳೇ ಆಳಲಿ, ಕಮ್ಯುನಿಸ್ಟರೇ ಆಳಲಿ; ಆದರೆ ಅಡಳಿತದ ಸೂತ್ರ ಕನ್ನಡಿಗರ ಕೈಯಲ್ಲಿಯೇ ಇರಲಿ! ಯಾವ ಪಕ್ಷದ ಕನ್ನಡಿಗರಕಡೆಗೆ ಅಡಳಿತದ ಸೂತ್ರಗಳು ಬಂದರೂ, ಇಂದಿನಂತೆ, ಕನ್ನಡ ಜನಸಾಮಾನ್ಯರ ಹಿತಸಂಬಂಧ ವಿಷಯಗಳು ದುರ್ಲಕ್ಷ್ಯಿತವಾಗಲಾರವು. ಬಹಳವಾದರೆ ಅಡಳಿತದ ವಿವರಗಳ ವಿಷಯದಲ್ಲಿ ವಿರೋಧಿ ಪಕ್ಷದ ಮುಂದಾಳುಗಳು ತಮ್ಮ ಅಪೇಕ್ಷೆಯನ್ನು ತೋರಿಸಬಹುದಿಷ್ಟೇ! ಭಾರತೀಯರಾದ ನಾವೆಲ್ಲರೂ ಸೇರಿ ಜನತಾ ರಾಜ್ಯಪದ್ಧತಿಯನ್ನು ಒಪ್ಪಿಕೊಂಡಿದ್ದೇವೆಂದ ಮೇಲೆ, ಬಹುಸಂಖ್ಯೆಯ ಯಾವ ರಾಜಕೀಯ ಪಕ್ಷದ ಅಧಿಕಾರವನ್ನೂ ನಾಡಿನ ಜನತೆಯೆಲ್ಲ ಒಪ್ಪಿಕೊಂಡು ನಡೆಯಲೇ ಬೇಕಾಗುವುದು. ಕನ್ನಡಿಗರೆಲ್ಲ ಈ ವಿಶಾಲ ರಾಜಕೀಯ ಭಾವನೆಯನ್ನು ಮನದಲ್ಲಿ ತಂದುಕೊಂಡು ನಡೆಯಲು ಕನ್ನಡಿಗರ ಸರ್ವಪಕ್ಷೀಯ ಸಮ್ಮೇಳನದಲ್ಲಿ ಒಟ್ಟುಗೂಡಬೇಕು. ಎಲ್ಲರಿಗೂ ಗಮ್ಯನಾಗಿರುವ ಕರ್ನಾಟಕ ಪ್ರಾಂತ ಪ್ರತ್ಯೇಕೀಕರಣಕ್ಕಾಗಿ ಒಮ್ಮನದಿಂದ ಕಾರ್ಯವನ್ನು ಮಾಡಲಾರಂಭಿಸಬೇಕು. ಇಂದು ಕಾಣುತ್ತಿರುವ ವ್ಯಕ್ತಿ–ವ್ಯಕ್ತಿಗಳಲ್ಲಿಯ ಪಂಗಡಗಳಲ್ಲಿಯ—ಮನಸ್ತಾಪ–ಹೃದಯಕಷಾಯಗಳು ಹಾಗೆಯೆ ಉಳಿದುಕೊಂಡು ಬಿಟ್ಟರೆ, ಸರ್ವಪಕ್ಷೀಯ ಪರಿಷತ್ತಿನಿಂದ ಯಾವ ಪ್ರಯೋಜನವೂ ದೊರೆಯಲಾರದು; ಕರ್ನಾಟಕ ಪ್ರಾಂತ್ಯಪ್ರಾಪ್ತಿಯ ಮಾರ್ಗವು ಹೆಚ್ಚು ಹೆಚ್ಚು ದುರ್ಗಮವಾಗುವುದು.

ಪುಣ್ಯಭೂಮಿ

(ಸಣ್ಣ ಕತೆ)

ಕು. ಮಿಸಾರಾ ರಾತೋಡ, ಹುಬ್ಬಳ್ಳಿ *

●

ಭಾರತದ ಪುಣ್ಯಭೂಮಿಸ್ಥ ಇಂತಹ ದುರ್ದಿನಗಳಲ್ಲಿಯೂ ಅಲ್ಲಲ್ಲಿ ಕಂಡುಬರುವುದು. ಅಲ್ಲಲ್ಲಿ ಕಂಡುಬರುವ ಈ ಪುಣ್ಯಭೂಮಿಸ್ಥ ಎಲ್ಲೆಲ್ಲಿಯೂ ಕಂಡು ಬರುವಂತೆ ಅದರೆಯೇ ಭಾರತದ ಪುನರುಜ್ಜೀವನದ ಆಶೆಯಿದೆ.

●

ಸಾಮಾನ್ಯವಾಗಿ ಒಬ್ಬ ತರುಣನು ಪಡೆಯಬಹುದಾದ ಪದವೀಧರ ಪದವಿಯನ್ನು ಹೊಂದಿ ನನ್ನೂರಿನಲ್ಲಿದ್ದೆನು. ನೌಕರಿಯ ಬೇಟಿಗಾಗಿ ನನ್ನ ಅರ್ಹತಾಪತ್ರಗಳನ್ನು ಅಲ್ಲಲ್ಲಿಗೆ ಕಳುಹಿಸಿದ್ದೆನು. ನನ್ನ ಹಿತಬಂಧುಗಳಿಗೆ ಪಟ್ಟಣಕ್ಕೆ ಹೋಗಿ ನೌಕರಿಯನ್ನು ಮಾಡುವುದೇಕೋ ಜೆಪ್ಪಾಗಿ ತೋರುತ್ತಿರಲಿಲ್ಲ.

" ತೋಟ-ಗದ್ದೆಗಳನ್ನು ನೋಡಿಕೊಂಡು, ಮಿಲ್ಲಿನ ಮೇಲೆ ಸ್ವಸ್ಥವಾಗಿ ಕುಳಿತುಕೊಂಡಿರಬಾರದೇ ? " ಎಂದು ರಾಗ ಎಳೆಯುತ್ತಿದ್ದರು. ಆದರೆ ಹಳ್ಳಿಯ ಮುಗ್ಧ ವಾತಾವರಣದಿಂದ ನನ್ನ ಬಿಸಿರಕ್ತದ, ಕ್ರಾಂತಿಕಾರಕ ಮನಸ್ಸು ಮುದುಡುತ್ತಿತ್ತು. ಹಳ್ಳಿಯನ್ನು ದಿಳ್ಳಿ ಮಾಡಬೇಕೆಂಬ ನನ್ನ ಹುಮ್ಮಸ್ಸಿಗೆ ನನ್ನ ಸಹೋದ್ಯೋಗಿಯು ಪ್ರೇರಣೆ ಜೆನ್ನಾಗಿ ಸಿಕ್ಕಿತ್ತು. ಅಕಸ್ಮಾತ್ತಾಗಿ ಡೆಲ್ಲಿಯಿಂದ ' ಇಂಟರವ್ಯೂ ' ಗಾಗಿ ಕರೆ ಬಂದಿತು. ಹೊರಟೇ ಬಿಟ್ಟೆ.

ನವಭಾರತದ ರಾಜಧಾನಿ ಡೆಲ್ಲಿ ಹತ್ತಿರ ಹತ್ತಿರ ಬಂದಂತೆ, ನನ್ನ ರಕ್ತ ಜೆಮ್ಮುವಂತೆ ಭಾಸವಾಗುತ್ತಿತ್ತು. ಮನಸ್ಸು ತಲ್ಲಣಿಸುತ್ತಿತ್ತು. ಆದರೆ, ಆ ಭವ್ಯ ನಗರದಲ್ಲಿಯ ಜನರ ಕೃತ್ರಿಮಜೀವನ ಜುಗುಪ್ಸೆಗೊಳಿಸಿತು. ಡೆಲ್ಲಿಯ ಅಶಾಂತ ವಾತಾವರಣ, ನನ್ನ ಹುಮ್ಮಸ್ಸೆಲ್ಲವನ್ನು ಕಸಿದುಕೊಂಡಿತು. ಭವ್ಯ ಕೆಂಪುಕೋಟೆಯ ಮೇಲೆ ವಿರಾಜಿಸುತ್ತಿರುವ ಶಾಂತಿಪತಾಕೆಯ ಧಡಧಡಾಟವು, ನನಗಾವ ಸಂದೇಶವನ್ನೂ ಸಾರಲಿಲ್ಲ. ರಕ್ತವನ್ನು ಕುದಿಸಿದೆ. ಕಳವಳವನ್ನು ಕ್ಕಿಸಿದೆ. ' ಶತಮಾನಗಳಿಂದ ರಾಜಕಾರಣಿಗಳ ಎದೆಯ ರಕ್ತವನ್ನು ಹೀರಿದ, ಡೆಲ್ಲಿಯ ನೆಲದ ದಾಹವಿನ್ನೂ ಅಡಗಿಲ್ಲವೇ ? ' ಎಂದುಕೊಂಡೆ. ಸ್ವಮಿತದ ಸೆಳವಿಗೆ ಸಿಕ್ಕದ ನನ್ನ ಮನಸ್ಸು ' ಅಹಿಂಸಾಯುತ ಶಾಂತಿ ಎಲ್ಲಿ ? ' ಎಂದು ಅರಸಲು ತೊಡಗಿತು. ' ಇದೇ ಡೆಲ್ಲಿಯ ನೆಲಗಟ್ಟಿನ ಮೇಲೆ ಶಾಂತಿ ಮಂದಿರ ಸ್ಥಾಪಿತವಾಗಬಹುದೆ ? ' ಎಂದುಕೊಂಡೆ. ಅಂತೆಯೇ ಶಾಂತಿ-ಅಶಾಂತಿಗಳನ್ನು ನಿರ್ಣಯಿಸದೆ ಡೆಲ್ಲಿಯನ್ನು ಬೀಳ್ಕೊಟ್ಟೆ.

ಮದರಿಯ ಸರಿಗೆ ಸಿಕ್ಕು ಕೆಂಪಡರಿದ ಕಣ್ಣಿಳಿಂದ ಕಿಡಿಕಾರುತ್ತ, ಮದೋನ್ಮತ್ತನಂತೆ ಹೊಯ್ದಾಡುತ್ತ, ಬಿಸಿಯುಸಿರನ್ನು ಬಿಡುತ್ತ, ಮನಬಂದಂತೆ ಚೀರಾಡುತ್ತ, ಗುರಿ ಇಲ್ಲದೆ ಸಾಗುವ ನಿರುದ್ಯೋಗಿಯಂತೆ ಉಗೆಬಂಡಿ ಸಾಗುತ್ತಲಿತ್ತು. ಸುತ್ತುಮುತ್ತಲಿನ ಅರಿವಿಲ್ಲದಂತೆ ಮುಂದೋಡುತ್ತಿರುವ ಉಗೆಬಂಡಿಯಲ್ಲಿ ನಾನೊಬ್ಬನೇ ಕುಳಿತಿದ್ದೆ.

ಅದೊಂದು ಮಂಜಿನ ರಾತ್ರಿ. ನನ್ನ ಉಗೆಬಂಡಿ ಒಂದು ನಿಲ್ದಾಣದಲ್ಲಿ ನಿಂತಿತು. ಚಳಿಗಾಳಿ ಕೊರೆಯುತ್ತಲಿತ್ತು. ಮಂಜಿನ ಚಳಿಯನ್ನು ಸೈರಿಸಿ ಕೂಲಿಗಳು ಕೂಗುತ್ತಿರುವ ' ವರ್ಧಾ ' ' ವರ್ಧಾ ' ಎಂಬ ಕೂಗು ಸಾವಕಾಶವಾಗಿ ಕೇಳಿಸುತ್ತಲಿತ್ತು. ಶಾಂತಿದೂತನಾದ ಮಹಾತ್ಮಾಗಾಂಧಿಯ ಸ್ಮರಣೆ ಬಂತು. ದುಗುಡದಿಂದ ತುಂಬಿದ ಮನಸ್ಸು ಹೊರಗೆ ಕಣ್ಣುಬಿಟ್ಟು ನೋಡಲವಕಾಶವನ್ನೀಯಲಿಲ್ಲ. ನಾನು ಸವಡಿಸಿದ್ದ ಕಿರುಕೋಣೆ ನನಗಾಗಿ ಕಾಯ್ದಿರಿಸಲಾಗಿತ್ತು. ಅದರಿ ಬಾಗಿಲನ್ನು ಸರಿಸಿ, ಅರಡಿ ಎತ್ತರದ ಒರ್ವ ಪಾಶ್ಚಾತ್ಯವ್ಯಕ್ತಿ ಒಳಕ್ಕೆ ಬಂದು, ತೊಂದರೆಗಾಗಿ ಕ್ಷಮಿಸಲು ಕೋರಿದ. ಅವನ ಹೊಂಗೆಂವು — ನೀಲಿ ಕಣ್ಣಾಳು ನನ್ನನ್ನು ಸೆರೆಹಿಡಿದುವು. ಗಾಡಿ ಹೊರಟಿತು. ಅವನು ಛಕ್ಕನೇ ಕಿಟಕಿಯೆಡೆಗೆ ತಿರುಗಿ, ಹೊರಗೆ ನೋಡಲಾರಂಭಿಸಿದ. ಕೆಲವು ನಿಮಿಷಗಳನಂತರ ಮುಖತಿರುವಿ ಭರದಿಂದ ಗಾಳಿ ಪ್ರವೇಶಿಸುತ್ತಿದ್ದ ಕಿಟಕಿಯನ್ನು ಮುಚ್ಚಿದ. ಅವನ ಮುಖ ಅಶಕ್ತವಾಗಿತ್ತು. ಕಣ್ಣಾಳಲ್ಲಿ ಉದಾಸೀನತೆ ತುಂಬಿತ್ತು.

' ನೀವೊಬ್ಬರೇ ? ' ಎಂದು ಸುತ್ತುಮುತ್ತು ನೋಡುತ್ತ ಪ್ರಶ್ನಿಸಿದ. ನಾನೂ ನಗುತ್ತ ' ನೀವೂ ಒಬ್ಬರೇ ಪ್ರವಾಸದಲ್ಲಿದ್ದೀರಲ್ಲ ! " ಎಂದೆ. ಅತ ತತ್‌ಕ್ಷಣ ಉತ್ತರಕೊಟ್ಟ : ' ನನ್ನ ದೇಶದಲ್ಲಾಗಿದ್ದರೆ ನನ್ನ ಸಹಚರಿಯನ್ನು ಬಿಟ್ಟು ಎಂದಿಗೂ ಒಂಟಿಯಾಗಿ ಪ್ರವಾಸ ಮಾಡುತ್ತಿರಲಿಲ್ಲ. ಆದರೆ ನಿಮ್ಮ ಇಂಡಿಯಾ ದೇಶವೆಂದರೆ, ಜೊತೆಗೆ ತರಲು ಸಂಕೋಚವಾಯ್ತು ! " ನಾನು ಆಶ್ಚರ್ಯದಿಂದ ಕೇಳಿದೆ : ' ಏಕೆ ? '

ಕೆಲವು ನಿಮಿಷಗಳ ವರೆಗೆ ಅವನು ಸುಮ್ಮನೆ ಕುಳಿತಿದ್ದು ಹೇಳಲುಪಕ್ರಮಿಸಿದ : " ಚಿಕ್ಕಂದಿನಿಂದಲೂ ನಿಮ್ಮ ದೇಶದ ವಿಚಾರವಾಗಿ ನನಗೆ ಕುತೂಹಲವಿತ್ತು. ನನ್ನ ತಾತಂದಿರು ತಮ್ಮ ಜೀವನದ ಹೆಚ್ಚು ಭಾಗವನ್ನು ಇಲ್ಲಿಯೇ ಕಳೆದಿದ್ದರು. ಅವಿಸ್ಮೃತ ವಿಷಯಗಳನ್ನು ಅವರಿಂದ ಕೇಳಿ ಅರಿಯುತ್ತಿದ್ದೆ. ನನ್ನ ದೃಷ್ಟಿಯಲ್ಲಿ ನಿಮ್ಮ ದೇಶ, ಒಂದು ಅಪೂರ್ವವಾಗಿತ್ತು. ಇತ್ತೀಚೆಗಂತೂ ನನ್ನ ಕುತೂಹಲ ಪ್ರಬಲತರವಾಯ್ತು. ಆದರೆ ಸ್ವಾತಂತ್ರ್ಯಪೂರ್ವದಲ್ಲಿ, ಮಹಾತ್ಮಾಗಾಂಧೀ ಜೀವಿಸಿದ್ದಾಗ, ನಾನು ಪ್ರವಾಸವನ್ನು ಕೈಕೊಂಡಿದ್ದರೆ ನನಗೆ ಫಲಸಿಕ್ಕುತ್ತಿತ್ತೇನೋ ಎಂದೆನಿಸುತ್ತದೆ. ಇಲ್ಲಿಯ ಪ್ರಮುಖ ಪಟ್ಟಣಗಳನ್ನೆಲ್ಲ ತಿರುಗಿ ಬಂದಿರುವೆ. ಅವು ಅಲ್ಪ-ಸ್ವಲ್ಪವಾಗಿ ಪಾಶ್ಚಿಮಾತ್ಯರ ಅನುಕರಣೆಯನ್ನು ಅನುಸರಿಸಿವೆ. ಆದರೆ ಅವುಗಳನ್ನು ನೋಡುವುದರಲ್ಲಿ ನನ್ನ ದಾಹವಡಗಿಲ್ಲ. ಹೆಂಗುಸರ ಮುಖದಲ್ಲಿಯ ತೊತ್ತುಭಾವನೆ

* ಕತೆಯು ಸಂಪೂರ್ಣ ಸ್ವತಂತ್ರವಾಗಿ ಬರೆದುದೆಂದು ವಿಶೇಷವಾಗಿ ಕಾಗದ ಬರೆದು ತಿಳಿಸಿದ್ದಾರೆ. ಸಂ. ಜ. ಘ.

ಯನ್ನು ಕಾಣದೆ ಹೋಗಿರುವೆ. ಮನೆಯ ದೇವತೆಯಂತೆ ಅವರು ಚಲಿಸುತ್ತಿರುವುದನ್ನೂ ಕಾಣದೇ ಹೋಗಿರುವೆ ವರ್ಧಾದಲ್ಲಿಯ ಹುತಾತ್ಮನ ಶಿಲೆಗಲ್ಲಿನಲ್ಲಿಯೂ ಯಾವ ಹುರುಳನ್ನೂ ಕಾಣದೇ ಹೋಗಿರುವೆ. ಆದರೂ ಬಾಪೂರವರ ಕಾರ್ಯರಂಗನಾದ ವರ್ಧಾ ಅದೇತಕ್ಕೋ ನನ್ನನ್ನು ಎಳೆಯುತ್ತಿದೆ. ಈ ಭಾವನೆ ನನ್ನನ್ನು ಬಾಧಿಸುತ್ತಿದೆ. " ನಾನು ಎವೆಮುಚ್ಚದೆ ಅವನ ಮಾತುಗಳನ್ನು ಕೇಳುತ್ತಿದ್ದೆ ಅವನ ಅಂತರಾಳದಿಂದ ಬಂದ ಪ್ರತಿಮಾತೂ ನನಗೆ ಆಶ್ಚರ್ಯವನ್ನುಂಟುಮಾಡುತ್ತಿತ್ತು.

ವಿಜ್ಞಾನದ ಬೆನ್ನುಹತ್ತಿ ಅಶಾಂತಿಯಿಂದ ಕ್ಷೋಭೆಗೊಂಡು ವಿನಾಶದ ಮೆಟ್ಟಿಲಿನ ಮೇಲೆ ನಿಂತ ಪಾಶ್ಚಿಮಾತ್ಯಜನ, ಶಾಂತಿಧಾಮವನ್ನು ಅರಸುವುದು ಸಹಜವೇ! ಅವನ ಮುದುಡಿದ ಮನದ ಪ್ರತಿಬಿಂಬ, ಕಾಂತಿಹೀನ ಮುಖದಲ್ಲಿ ಗೋಚರಿಸುತ್ತಲಿತ್ತು. ನನ್ನ ಹಸಿದ ಕಣ್ಣುಗಳು ಅವನಲ್ಲಡಗಿದ ಭಾವನೆಯನ್ನು ಕೆದಕುತ್ತಿದ್ದುವು. ಅವನು ಇಂಗ್ಲಂಡಿನವ. ಕಾರಣಾನೆಯೊಂದರಲ್ಲಿ 'ಕೆಮಿಸ್ಟ್'ನಾಗಿ ಕೆಲಸಕ್ಕಿದ್ದ. ಅಲ್ಲಿಯ ಅಶಾಂತ ವಾತಾವರಣ ಅವನನ್ನು ಪ್ರಯಾಣಕ್ಕೆ ಸನ್ನದ್ಧಗೊಳಿಸಿತ್ತು. ಮನುಷ್ಯತ್ವವನ್ನು ಕಾಯ್ದುಕೊಂಡ ಒಂದೇ ಒಂದು ದೇಶವೆಂದರೆ 'ಇಂಡಿಯಾ' ಎಂಬ ಭಾವನೆಯನ್ನು ಹೇನ್ರಿ ಮನಗಂಡು, ಇಲ್ಲಿಗೆ ಬಂದಿದ್ದ. ಆದರೆ ಅವನು ಇಲ್ಲಿ ಕಂಡದ್ದೇನು? ಭಾರತ ಮನುಷ್ಯತ್ವ ಮತ್ತು ಪಶುತ್ವಗಳೆರಡರಲ್ಲಿ ನೇತಾಡುತ್ತಿತ್ತು. ತಮ್ಮವರ ಅನುಕರಣೆಯಲ್ಲಿ ಅಸಕ್ತರಾದ ಭಾರತೀಯರನ್ನು ಕಂಡು, ಅವನು ಅಚ್ಚರಿಗೊಂಡು, ಸ್ಥೈರ್ಯವನ್ನು ಕಳೆದುಕೊಂಡಿದ್ದ. ನಿರಾಶೆಯ ಛಾಯೆಯಲ್ಲಿ ಶಾಂತಿದೂತನಾಗಿ ಇಳಿಗಳದು ಬಂದ ಮಹಾತ್ಮನ ಶಿಲೆಗಲ್ಲಿನೆಡೆಗೆ ಧಾವಿಸಿದ್ದ. ಆದರೆ ಅಲ್ಲಿಯೂ ಅವನ ಅಶೆಗೆಡೆ ಸಿಕ್ಕಿರಲಿಲ್ಲ. ವರ್ಧಾ ಬಟ್ಟಮೇಲೆ. ಅವನ ಮನೋಮಂದಿರದಲ್ಲಿ ಕೋಲಾಹಲ. ವೆದ್ದಿತ್ತು. ಹಾತೊರೆದ ಕಣ್ಣುಗಳಿಂದ ಸುತ್ತಲಲ್ಲಿ ಮುಳುಗುತ್ತಿರುವ ವರ್ಧಾವನ್ನು ನೋಡುತ್ತಿದ್ದ. ಅಲ್ಲಿ ನೆಲಸಿದ್ದ ಮೌನ ಸಾಮ್ರಾಜ್ಯದಲ್ಲಿ ನನ್ನ ಯೋಚನಾತರಂಗ ಸುರುಳಿ-ಸುರುಳಿಯಾಗಿ ಮನವನ್ನು ಕವಡಿಸುತ್ತಿತ್ತು. ಈ ಪಾಶ್ಚಿಮಾತ್ಯನು ಮಹಾತ್ಮನ ವಿಷಯವಾಗಿ ನುಡಿದ ಆದರದ ಮಾತುಗಳು, ನನ್ನ ದುರ್ಬಲಮನವನ್ನು ಅಣಕವಾಡುತ್ತಿದ್ದುವು. 'ಸ್ವಾಭಿಮಾನವಿಲ್ಲದ ಪಶು' ಎಂದು ಮನಸ್ಸು ಬಿರಿಯುತ್ತಿತ್ತು. ಹಟಾತ್ತಾಗಿ ಆ ಸಂದಿಗ್ಧ ವಾತಾವರಣವನ್ನು ಭೇದಿಸಿ ಕೇಳಿದೆ: "ನೀವು ಇಲ್ಲಿಯ ಒಂದಾದರೂ ಮಂದಿರವನ್ನು ನೋಡಿದ್ದೀರಾ?" "ಇಲ್ಲಿಯ ತಾಜಮಹಲನ್ನು ನೋಡಿದೆ. ನಿಜವಾಗಿಯೂ ಜಗತ್ತಿನ ಅದ್ಭುತ ಕಟ್ಟಡಗಳಲ್ಲೊಂದು ಎಂದು ಹೇಳಬಹುದು. ಭಾರತೀಯರು ಕುಶಲ ಶಿಲ್ಪಕಾರರು ಇಂಡಿಯಾ ದೇಶದ ಮಂದಿರಗಳು ಮಾನವನ ಚಂಚಲತೆಯನ್ನು ನಿರೋಧಿಸಿದು ಅಧ್ಯಾತ್ಮದೆಡೆಗೆ ಎಳೆದೊಯ್ಯುತ್ತವಂತೆ; ಆದರೆ ಆ ಮಂದಿರದ ಕುಶಲ ಶಿಲ್ಪಕಲೆ ಸಶ್ವತತೆಯನ್ನು ಎತ್ತಿ ತೋರಿಸಿ, ಶಾಂತಿಯನ್ನೀಯುವುದರ ಬದಲು ಅಶಾಂತಿಯನ್ನು ಹೆಚ್ಚಿಸಿತು.." ಅವನ ಧ್ವನಿಯಲ್ಲಿ ಕಂಪನವಿತ್ತು. ದೇವಮಂದಿರವನ್ನು ನೋಡಿಲ್ಲವೆಂದುಕೊಂಡೆ. ಈಗಿನ ದೇವರ ಗುಡಿಯಲ್ಲಿಯ ಡಂಭಾಚಾರವನ್ನು ನೋಡಿದ್ದ ನಾನು, ಇದನ್ನು ಹೇಳಲಪೇಕ್ಷಿಸಲಿಲ್ಲ.

ನಮ್ಮನ್ನು ಹೊತ್ತುಕೊಂಡು ಹೊಯ್ದಾಡುತ್ತ ಗಿರಿಕಂದರಗಳನ್ನು ಹಿಂದಕ್ಕಟ್ಟುತ್ತ ನಮ್ಮ ಉಗೆಬಂಡಿ ಹೊರಟಿತ್ತು. ಒಂದರ ಹಿಂದೊಂದರಂತೆ ಗಳಿಗೆಗಳು ಕಳೆದುಹೋದುವು. ಆಗಲೇ ನಮ್ಮ ಉಗೆಬಂಡಿ ಕಪ್ಪುನೆಲವನ್ನು ಛೇದಿಸುತ್ತ ಹೊರಟಿತ್ತು. ಹಟಾತ್ತನೇ ನಮ್ಮ ಉಗೆಬಂಡಿ ಉಸಿರುಬಿಡುತ್ತ ನಿಂತಿತು. ಎಲ್ಲರೂ ಅಚ್ಚರಿಯಿಂದ ಕೂಗಿಕೊಂಡರು. ಒದಗಿಬಂದ ಅನನುಕೂಲತೆಗಾಗಿ, ಉಗೆಬಂಡಿ ಅಲ್ಲಿಯೇ ಸಾಯಂಕಾಲದ ವರೆಗೆ ನಿಲ್ಲುವುದಾಗಿ ತಿಳಿದು ಬಂತು. ದೂರದ ಒಂದು ಗುಡ್ಡದ ಇಳುಕಲಿನಲ್ಲಿ ಚಿಕ್ಕ ಹಳ್ಳಿ ನೆಲಸಿರುವುದಾಗಿ ಕಂಡು ಬಂತು. ನಮ್ಮ ಸರಕುಗಳನ್ನು ಮುಂದಿನ ನಿಲ್ದಾಣದಲ್ಲಿ ಕಾಯ್ದಿಡಲು ಹೇಳಿ, ಹೇನ್ರಿಯನ್ನು ಕರೆಮಕೊಂಡು ಆ ಗ್ರಾಮಾಭಿಮುಖನಾಗಿ ಹೊರಟೆ. ಸುತ್ತಲೂ ಮಲೆನಾಡಿನ ಮನವನ್ನದುರಿಸುವ ಸೌಂದರ್ಯ ಚೆಲ್ಲುವರಿದಿದ್ದಿಲ್ಲ. ಬೈಲುಸೀಮೆಯ ರಾಣಿ, ಸಹಜ ಸುಂದರ ಮೆಲುನಗೆಯನ್ನು ನಗುತ್ತ ನಿಂತಿದ್ದಳು. ಹೇನ್ರಿ ಸುತ್ತಲಿನ ಸೌಂದರ್ಯವನ್ನು



ಕಣ್ಣುಜೊಂಪೆಯಲ್ಲಿ ಮೂಡಿಸುತ್ತ ಹೊರಟಿದ್ದ. ಅದಾವುದೋ ಅಶಿ, ಕುತೂಹಲ, ಭರವಸೆಗಳು ಎಳೆಯೆಳೆಯಾಗಿ ನನ್ನನ್ನು ಎಳೆದೊಯ್ಯುತ್ತಿದ್ದುವು. ನಾವಿಬ್ಬರೂ ಗುಡ್ಡದ ಇಳುಕಲನ್ನು ತಲುಪಿದಾಗ, ಸೂರ್ಯ ಪಶ್ಚಿಮಾಂಬುಧಿಗಿಳಿದಿದ್ದ.

ದೂರದಲ್ಲಿಯ ದನಕರುಗಳ ಕೊರಳಲ್ಲಿಯ ಘಂಟೆಯ ನಿನಾದ, ನಡೆದು ನಡೆದು ಬಳಲಿದ್ದ ನಮ್ಮನ್ನು ಆಹ್ವಾನಿಸುತ್ತಿದ್ದುವು. ಊರ ಅಂಚನ್ನು ನಾವು ತಲುಪಿದಾಗ, ಅಲ್ಲಿಯೇ ಪ್ರವಹಿಸುತ್ತಿದ್ದ ನದಿ ಗೋಚರಿಸಿತು. ಕೈಬಳೆಗಳ ಕಣ್‌ಕಣರವ ಗೈಯುತ್ತ, ಕುಲುಕುಲು ನಗುತ್ತ, ಕೊಡದ ಭಾರವನ್ನು ಕಡಿಮೆಮಾಡಿಕೊಳ್ಳುತ್ತ ಹೆಂಗುಸರು ನಡೆಯುತ್ತಿದ್ದರು. ಅವರ ಬಿನ್ನಾಣ, ಆಶ್ಚರ್ಯದಿಂದ ಅರಳಿದ ಕಂಗಳು ಮಧುಳುಮಾಡುತ್ತಿದ್ದುವು. ಹೇಸ್ರಿ ನುಡಿದ: "ನನ್ನ ತಾತ ನುಡಿದ ಮಾತು ನಿದರ್ಶನಕ್ಕೆ ಬಂತು. ನಿವ್ಮ ಹೆಂಗುಸರೆಷ್ಟು ಚೇತೋಹಾರಿಯರು!"

ಸ್ವಲ್ಪ ದೂರದಲ್ಲಿ ಒಂದು ದೊಡ್ಡ ಅರಳೀಮರ. ಅದರ ಕೆಳಗೆ ಒಂದು ವಿಸ್ತಾರವಾದ ಕಟ್ಟೆ. ಅದರ ಮೇಲೆ ಜನರು ನೆರೆದಿದ್ದರು. ತುಸು ಎತ್ತರದ ಮೇಲೆ ಒಬ್ಬ ಮುದುಕ ಲೋಡಿಗಾತುಕೊಂಡು ಕುಳಿತಿದ್ದ. ಅವನ ತೀಕ್ಷ್ಣ ಕಣ್ಣುಗಳು ನೆರೆತ ಗಡ್ಡಮಿಾಸೆಗಳು ಎದ್ದೇ ನಡುಗಿಸುತ್ತಿದ್ದವು. ಅವನು ನಮ್ಮನ್ನು ಬರಮಾಡಿ, ಅಲ್ಲಿಯೆ ಕಟ್ಟೆಯ ಮೇಲೆ ಕುಳ್ಳಿರಿಸಿದ. ಆವೂರಿನ ಗೌಡ. ಒಂದು ಜಗಳವನು ತೀರ್ಮಾನಿಸುತ್ತಿದ್ದ. ಹೇಸ್ರಿ ನುಡಿದ: "ಈ ಜನರು ಅದೆಷ್ಟು ಸ್ವಸಂತೋಷದಿಂದ ತಮ್ಮ ಕರ್ತಾಧಿಕಾರವನ್ನು ಅವನಿಗೆ ಅರ್ಪಿಸಿದ್ದಾರೆ!" ಗೌಡ ತನ್ನ ತೀರ್ಮಾನವನ್ನು ಮುಂದುವರೆಸಿದ್ದ. ಭಾರತೀಯ ನ್ಯಾಯಾಧೀಶರಿಗೆ ಯಾವ ಕಾಯದೆ-ಕಾನೂನಿನ ಹೊತೀಗೆಯೂ ಅವಶ್ಯವಿಲ್ಲ. ನ್ಯಾಯ-ಅನ್ಯಾಯಗಳನ್ನು ಮನದ ಸಾಣೆ; ಕಲ್ಲಿಗೆ ಹಚ್ಚಿ ಸತ್ಯವನ್ನು ಹೊರಗೆಡಹುತ್ತಾರೆ.

ಗೌಡನ ಪಕ್ಕದಲ್ಲಿಯ ಒಂದು ಮಣ್ಣಿನ ಪಾತ್ರೆಯಲ್ಲಿ ನೀರಿತ್ತು. ಗಂಟಲು ಒಣಗಿದಾಗ ಬೆಲ್ಲದ ಜೊತೆಗೆ ನೀರನ್ನು ಕುಡಿಯುವುದಕ್ಕೆಟ್ಟಿದ್ದರು. ಒಂದು ಹರಿವಾಣದಲ್ಲಿ ಧಾನ್ಯಗಳ ರಾಶಿ ಇಡಲ್ಪಟ್ಟಿತ್ತು. ಹತ್ತಿರ ಹಕ್ಕಿ ಪಕ್ಕಿಗಳು ಬಂದರೆ, ಗೌಡನು ಸ್ವಹಸ್ತಗಳಿಂದ ಕಾಳನ್ನೆಸೆಯುತ್ತಿದ್ದ. ನೀರಡಿಸಿದ ದನಗಳಿಗಾಗಿ ಅಲ್ಲಿಯೇ ಒಂದು ತೊಟ್ಟಿಯಲ್ಲಿ ನೀರಿತ್ತು. ಹೇಸ್ರಿಗೆ ನಾನು ಎಲ್ಲವನ್ನೂ ವಿವರಿಸಿದೆ. ದಾಯಾದಿಗಳಲ್ಲಿ ವ್ಯಾಪ್ತವಾದ ಜಗಳವನ್ನು ತೀರಿಸಿ ಸ್ವಾರಸ್ಯವಾಗಿ ಬುದ್ಧಿ ಹೇಳಿ, ಗೌಡ ಅಂದಿನ ಸಭೆಯನ್ನು ಮುಗಿಸಿದ. ನಮ್ಮಿಬ್ಬರ ಬೆನ್ನನ್ನು ಚಿಪ್ಪರಿಸಿದ. ಹೇಸ್ರಿ ಪುಲಕಿತನಾಗಿ ನುಡಿದ: "ಆತ್ಮೀಯಭಾವವನ್ನು ಅದೆಷ್ಟು ಸುಲಭವಾಗಿ ವ್ಯಕ್ತಪಡಿಸಿದ!" ನಾನು ಮಾತಿಲ್ಲದೇ ಮೂಕನಾಗಿದ್ದೆ. ಗೌಡ ತನ್ನ ಮನೆಗೆ ಕರೆದುಕೊಂಡು ನಡೆದ. ಅದೊಂದು ಭವ್ಯವಾದ ಮಣ್ಣಿನ ಮನೆ. ಮನೆಯ ಮುಂದೆ ದೊಡ್ಡ ಜಗುಲಿ. ಅಲ್ಲಿ ಕುಳಿತ ಮೇಲೆ ಅಳುಗಳು ಕಳಿತ ಬಾಳೆಯ ಹಣ್ಣು, ಬೆಲ್ಲ. ಹೊಗೆಯಾಡುತ್ತಿರುವ ಹಾಲನ್ನು ತಂದಿಟ್ಟರು. ಈ ಸತ್ಕಾರಕ್ಕಿಂತಲೂ ಅವರ ಆತ್ಮೀಯಭಾವ ನಮ್ಮನ್ನು ಹೆಚ್ಚು ತೃಪ್ತಿಗೊಳಿಸಿತ್ತು. ಗೌಡನಿಗೆ ನನ್ನ ಜೊತೆಗಿದ್ದ ಕೆಂಪು ಮನುಷ್ಯನ ವಿಚಾರವಾಗಿ ಹೇಳಿ, ಭಾರತದ ಆಧ್ಯಾತ್ಮವನ್ನು ತೋರಿಸಲು ಇಲ್ಲಿಗೆ ಕರೆದುಕೊಂಡು ಬಂದುದಾಗಿ ತಿಳಿಸಿದೆ. ಬಿಸಿನೀರಿನ ಸ್ನಾನದ ವ್ಯವಸ್ಥೆಯಾಯ್ತು. ಸ್ನಾನ ತೀರಿದ ಬಳಿಕ, ಭಾರತೀಯರ ಸ್ನಾನ ವಿಶೇಷ ನೈಶಿಷ್ಟ್ಯಪೂರ್ಣವಾಗಿದೆಯೆಂದು ಅಭಿಪ್ರಾಯ ಪಟ್ಟ. ಊಟಕ್ಕೆ ಹೊಂದಿಸಿಟ್ಟ ಮಣೆಗಳ ಮೇಲೆ ಮಂಡಿಸಿದೆವು. ಹೊಳೆಯುವ ಬೆಳ್ಳಕಟ್ಟಿಗಳಲ್ಲಿ ನಾನಾತರದ ಪಾಕ್ವಾನ್ನಗಳು ಬಡಿಸಲ್ಪಟ್ಟಿದ್ದುವು. ಘಮಘಮಿಸುವ ಮುಡಿದ ಮಲ್ಲಿಗೆಯನ್ನು ಸೆರಗನಿಂದ ಮುಚ್ಚಿಕೊಂಡು, ಝಣ್‌ಝಣ್‌ಕೆಂಬ ಬಳೆಗಳ, ಹಸನ್ಮುಖದ, ಬಳುಕುವ ಗೃಹಲಕ್ಷ್ಮಿ ಪ್ರೀತಿಯಿಂದ ಬಡಿಸುತ್ತಿದ್ದಳು. ಅವಳ ಚೆಂದುಟಿಗಳಲ್ಲಿ ಲಾಸ್ಯವಾಡುತ್ತಿದ್ದ ಮೆಲುನಗೆ, ಅವರೆದ ನುಡಿಗಳು ನಮ್ಮನ್ನು ಸಂತೋಷಸಾಗರದಲ್ಲಿ ಲೋಲಾಡಿಸಿದ್ದುವು. ಹೇಸ್ರಿ ಜನ್ಮದಲ್ಲಿಯೇ ಕಂಡರಿಯದ ರುಚಿಯನ್ನು ಸಂತೋಷದಿಂದ ಸ್ವೀಕರಿಸುತ್ತಿದ್ದ. "ಇವಳೇ ಅಲ್ಲವೇ ಗೃಹಲಕ್ಷ್ಮಿ!" ಎಂದ. ಜನ್ಮ ಸಾರ್ಥಕವಾಯ್ತು

ಮಕ್ಕಳ ಸದೃಢತೆಗಾಗಿ "ಬಗನ ಬಾಲಾಮೃತ"

ಹೆಲ್ಲು ಬರುವಾಗ "ಎಸ್ಪೂನ್ಸ್ ಗ್ರಾಇಪ್ ಹೀಲರ್"

ಜಂತು ಆದರೆ "ಪರ್ಮ ಆಯಿಲ್"

ಉಪಯೋಗಿಸಿರಿ. ಇವು ಪತ್ರಿಯೊಬ್ಬ ಕುಟುಂಬಸ್ಥರಿಗೆ ಉಪಯೋಗಬೀಳುವ ವಿಷಧಗಳು.

The National Pharmacies & Pharmaceuticals Ltd, Dharwar.

ಎಂದುಕೊಂಡೆ. ನಿರುದ್ಯೋಗಿ ಸಾಧಿಸಿದ ಕೆಲಸಕ್ಕೆ ಅಪರಿಮಿತವಾದ ಆನಂದವಾಯ್ತು.

ಬೆಳಗ್ಗೆ ನಮ್ಮ ಕಣ್ಣುಗಳಲ್ಲಿ ನಿದ್ರಾದೇವಿ ನಾಟ್ಯವಾಡುತ್ತಿರುವಾಗಲೇ, ಮಂಡುಳನಾದದಿಂದ ಹಾಡುತ್ತ, ಕೈಬಳೆಗಳ ಝಣತ್ಕಾರದ ತಾಳವನ್ನು ಬಾರಿಸುತ್ತ, ಬೀಸುವ ಕಲ್ಲಿನ ಮೇಲೆ ಮುಗುದೆಯರು ಬೀಸುತ್ತಿದ್ದುದನ್ನು ಕೇಳಿ, "ಇವರ ಉದಯರಾಗನೆಪ್ಪು ಅಲ್ಲಾದಕರ!" ಎಂದ. ಬೆಳಗಿನ ಚಟುವಟಿಕೆಯನ್ನು ಕಂಡು ಹೇನ್ರಿ ನುಡಿದ: "ಈ ಮಾನವಯಂತ್ರಗಳಲ್ಲಿ ಅದೆಷ್ಟು ಮಾರ್ದವವಿದೆ! ಆ ಯಂತ್ರಗಳ ನೆನಪು ನನಗೆ ಈಗ ಒಂದು ದುಃಸ್ವಪ್ನದಂತೆ ಭಾಸವಾಗುತ್ತದೆ ನೋಡು." ಸ್ನಾನವಾದ ಮೇಲೆ ನಮ್ಮ ಪ್ರಸನ್ನತೆಯನ್ನು ಹೆಚ್ಚಿಸುವಂತೆ ದೇವರಪದಗಳನ್ನು ಹೇಳುವ ಮಧುರನಾದವು ಕೇಳಬಂತು. "ದೇವರನ್ನು ಸ್ತುತಿಸುವ ಗೀತೆ." ಎಂದು ಹೇಳಿದೆ. ಹೇನ್ರಿ ಕೇಳಿದ: "ಗೃಹದೇವತೆ ಅದಾವ ದೇವತೆಯನ್ನು ಸ್ತುತಿಸುತ್ತಾಳೆ? ಓಡಿಯಾಡುವ ಉಸಿರಾಡಿಸುವ ದೇವತೆಗಿಂತ ಹೆಚ್ಚಿನ ದೇವತೆ ಇರುವಳೇ?" ಅವನ ಈ ಮಾತು ಸರಿದೋರದಿದ್ದರೂ ಕೇಳಿ ಮುಗ್ಧನಾದೆ. ಗೌಡ ನಮ್ಮನ್ನು ದೇವಾಲಯಕ್ಕೆ ಕರೆದುಕೊಂಡು ಹೊರಟ. ಸುಣ್ಣದ ಶುಭ್ರ ಗೋಪುರದ ಭವ್ಯ ಮಂದಿರ ಹತ್ತಿರ ಹತ್ತಿರ ಬಂದಂತೆ, ಗಂಟೆಯನಾದ ನಮ್ಮನ್ನು ಪ್ರೇಮದಿಂದ ಆಹ್ವಾನಿಸುತ್ತಿತ್ತು. ಶುಭ್ರ ಗೋಪುರದ ಮೇಲೆ ಥಳಥಳಿಸುವ ಕಲಶದ ಹತ್ತಿರ ಹಕ್ಕಿಗಳ ಒಂದು ಸಾಲು ಕಿಲಕಿಲ ಗೈಯುತ್ತ ಸಾಗಿಹೋಯ್ತು. ಒಂದು ಕ್ಷಣದಲ್ಲಿ ಸರಿದು ಹೋದ ಆ ದೃಶ್ಯವನ್ನು ನಿರೂಪಿಸುವುದು ಒಬ್ಬ ಶ್ರೇಷ್ಠ ಕಲಾಕಾರನಿಗೂ ಅಸಾಧ್ಯವಾಗಿತ್ತು.

ಅವ್ಯಕ್ತವಾಗಿ ಬರುವ ಸುಗಂಧದ್ರವ್ಯಗಳ ವಾಸನೆ ನಮ್ಮ ಹೃದಯ ಕಲ್ಮಷವನ್ನು ಕಿತ್ತೊಗೆಯುವಂತೆ ಭಾಸವಾಗುತ್ತಿತ್ತು. ಅದೊಂದು ದುರ್ಗೆಯ ದೇವಾಲಯ. ಥಳ ಥಳ ಹೊಳೆಯುವ ಅಭರಣಗಳನ್ನು ಧರಿಸಿ ಖಡ್ಗತೆರೆದು ಅನೇಕಗೊಂಡು ನಿಂತ ಆ ಮೂರ್ತಿ, ನನ್ನ ಮನವನ್ನೊಮ್ಮೆ ಕಡುಗಿಸಿತು. ಅರ್ಚಕರ ಸ್ತೋತ್ರಗಳ ಉಚ್ಚಾರಣೆ, ಗರ್ಭಗುಡಿಯನ್ನು ಹೊಕ್ಕು ಪುನರುಚ್ಚಾರಣೆಯನ್ನೀಯುತ್ತಿತ್ತು. ಗಂಟೆಯು ನಾದ ಬರುಹೋಗುವ ಜನರ ಮನವನ್ನಾಕರ್ಷಿಸುತ್ತಿದ್ದರೂ, ನಾನು ಹಿಂದೆಂದೂ ನೋಡದ ಶಾಂತಿಗೃಹವಾಗಿತ್ತು. ಅವ್ಯಕ್ತ ಶಾಂತಿ ಹೃದಯಕ್ಕೆ ತುಬ್ಬುತ್ತಿತ್ತು. ನಾನು ಶಾಂತಿಯನ್ನು ಅರಿಸಿದ್ದು ಈಗ ಸಫಲವಾದಂತೆ ತೋರಿತು. ನನಗರಿವಿಲ್ಲದಂತೆ ಒಂದು ಪಲ ಶಾಂತಿದೇವಿಗೆ ತಲೆಬಾಗಿದೆ. ಗೌಡನ ಕಣ್ಣಲ್ಲಿ ಧಾರಾಕಾರವಾಗಿ ನೀರು ಹರಿಯುತ್ತಿತ್ತು. ಹೇನ್ರಿ ಮೆಲ್ಲನೇ ಕೇಳಿದ: "ನೀನು ಈ ಆನಂದವನ್ನು ಪಡೆದಿರುವೆಯಾ?" ನಾನು ಕಳವಳದಿಂದ ನುಡಿದೆ. "ಹೇನ್ರಿ, ನಾನು ನಿನಗಿಂತಲೂ ನಿರ್ಭಾಗ್ಯ. ನನಗೆ ಈ ತೆರನ ಆನಂದ ತಿಳಿಯದು; ಪಡೆಯಲು ಆಶೆ ಉತ್ಪನ್ನಮಾಡಿದ ನಿನಗೆ ನನ್ನ ಸಹಸ್ರ ಪ್ರಣಾಮಗಳು. ನೀನು ಈ ಆನಂದವನ್ನು ನನಗಿಂತಲೂ ಬೇಗ ಪಡೆಯಬಲ್ಲೆ. ಹೇಗೆಂದರೆ ನಾನು ಅಸಕ್ತ-ಅಕಾಂಕ್ಷೆ ಇಲ್ಲದ ಪಕ್ಷ...."

ಮನೆ ತಲ್ಪಿದ ಮೇಲೆ ಹೇನ್ರಿ ನುಡಿದ: "ಈ ದೇವತೆಗಳು ಅಕ್ಷಯ ಸೂತ್ರಗಳು. ಇವಕ್ಕಿಂತಲೂ ಹೆಚ್ಚಿನ ಪ್ರಾಶಸ್ತ್ಯ ಸಿಕ್ಕಲಾರದು." ಆ ಊರನ್ನು ಬಿಡುವ ಮುನ್ನ ಹೇನ್ರಿ ಹೇಳಿದ: "ಈ ರಮ್ಯಸುಂದರ ಸುವರ್ಣಭಾರತವನ್ನು ಬಿಡುತ್ತಿದ್ದೇನೆ. ಮತ್ತೆ ಭೋಗರ್ಗರಿಯುವ ಕಡಲನ್ನು ಸೇರದೆ ಗತ್ಯಂತರವಿಲ್ಲವೇ?" ಅವನ ಅಂತರಾಳದಿಂದ ಬಂದ ಈ ಉಕ್ತಿ ನನ್ನನ್ನು ಮೈಮರೆಸಿತ್ತು.

ಹೇನ್ರಿ ತನ್ನ ದೇಶದಿಂದ ಪತ್ರ ಬರೆದ: "ಸಮಸ್ತ ಭಾರತಕ್ಕೆ ಸ್ವರೂಪವಡಗಿದ ಆ ಹಳ್ಳಿಗೆ ಒಂದು ಸರಿಯಾದ ಕಾಲುದಾರಿ ಕೂಡ ಇಲ್ಲ. ಅಂಚೆಕಟ್ಟೆ ಇಲ್ಲ. ನವೀನ ಭೂತಸ್ವರೂಪಗಳಾದ ರೈಲು. ಮೋಟರುಗಳ ಕರ್ಕಶ ಅಪಸ್ವರಗಳ ಸೋಂಕಿಲ್ಲ. ಭಾರತೀಯರು 'ಹಳ್ಳಿಯಿಂದ ದಿಲ್ಲಿ'—ಎಂಬುದನ್ನು ಮನಗಾಣಲಿ! ನವಯುಗದ ನಿರ್ಮಾಣಕ್ಕೆ ಆ ಪುಟ್ಟಹಳ್ಳಿಯೇ ನಿದರ್ಶನವಾಗಲೆಂದು ಹಾರೈಸುತ್ತೇನೆ."

ಒರ್ವ ಹಸಿದ ಪಾಶ್ಚಿಮಾತ್ಯನಿಗೆ ನನ್ನ ಮಾತೃಭೂಮಿಯ ರುಚಿಕರ ಊಟವನ್ನಿಕ್ಕಿ ಸತ್ಕರಿಸಿದ್ದಕ್ಕಾಗಿ, ನನ್ನ ಕಣ್ಣಳಿಂದ ಆನಂದಾಶ್ರುಗಳುದುರಿದುವು. ಪುಣ್ಯಭೂಮಿಯಾದ ನನ್ನ ತಾಯ್ನಾಡಿನ ಆರವು ಮಾಡಿಕೊಟ್ಟ ಹೇನ್ರಿಗೆ ಮನದಲ್ಲಿಯೇ ವಂದಿಸಿದೆ.

ಭಸಗ್ರಸ್ತ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಮನೋಹರ ನೀಲ ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ ಬೆಳೆಸುತ್ತದೆ. ಬಾಲನರಿಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ ಜೀವಿನಿ ಟಾನಿಕ್

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯ ಬಂಜೆತನಕ್ಕೆ ಸಿದ್ಧಯೋಗ

ಅಜೀರ್ಣ ವಿಕಾರಗಳಿಗೆ ವಂಚಿವಟಿ ರಾಮಬಾಣ

ಸದ್ವೈದ್ಯ ಶಾಲಾ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರ್ಖಾನೆ.

ಕ್ರಾಂತಿಕಾರಿ ಕ್ರೋಪಾಟಕಿನ್

(ವ್ಯಕ್ತಿಪರಿಚಯ ಉತ್ತರಾರ್ಧ)

'ಅಮಲಳ'

ರಾಜಕೀಯ ಅಧಿಕಾರದ ಪರ್ವ, ಎಲ್ಲವನ್ನೂ ಒಂದು ಬಣ್ಣದ ಕನ್ನಡಕದಿಂದ ನೋಡುವುದು. ಲೋಕಕಲ್ಯಾಣಕ್ಕಾಗಿಯೇ ತನುಮನಗಳನ್ನು ತೇಯುವ ವ್ಯಕ್ತಿಯ ಬೆಲೆಯನ್ನೂ ಅದು ಅರಿಯದು. ರಷಿಯದ ಸೋವಿಯೆಟ್ ಆಡಳಿತದಲ್ಲಿಯೂ ಕ್ರೋಪಾಟಕಿನರಂತಹ ದಿವ್ಯವ್ಯಕ್ತಿತ್ವ ಬೆಲೆಯನ್ನು ಕಾಣದೆಹೋಯಿತು.

ಕ್ರೋಪಾಟಕಿನರ ದಿವ್ಯಜೀವನ

ಕ್ರೋಪಾಟಕಿನರ ಜೀವನವು ಹಲವು ಆಶ್ಚರ್ಯಕಾರಕ ಘಟನೆಗಳಿಂದ ತುಂಬಿಕೊಂಡಂತಹದಾಗಿದೆ. ವಿಚಿತ್ರ ಸಿನೆಮಾದಂತಹ ದೃಶ್ಯವನ್ನು ಅದು ನಮ್ಮೆದುರಿಗೆ ತಂದು ನಿಲ್ಲಿಸುತ್ತದೆ. ಒಂದು ಅತ್ಯಂತ ಪ್ರಾಚೀನ ಮತ್ತು ಉತ್ತಮ ವಂಶದಲ್ಲಿ ಜನನ, ಝಾರ್ ಪ್ರಭುತ್ವದ ಅತ್ಯಾಚಾರಗಳ ಅತ್ಯಂತ ಭಯಂಕರ ಅಂಧಕಾರ; ಗುಲಾಮ ಪದ್ಧತಿಯ ಪ್ರಬಲತೆ; ಎಂಟು ವರ್ಷ ಪ್ರಾಯದಲ್ಲಿ ಝಾರನ ಅಶ್ರಿತ ಬಾಲಕ; ಹನ್ನೆರಡು ವರ್ಷ ಪ್ರಾಯದಲ್ಲಿ ಫ್ರೆಂಚ್ ಭಾಷೆಯ ಅಧ್ಯಯನ ಮತ್ತು ರಷ್ಯದ ರಾಜನೀತಿಯಲ್ಲಿ ಅಭಿರುಚಿ; ತನ್ನಣ್ಣ ಅಲೆಕ್ಸಾಂಡರನೊಂದಿಗೆ ಪ್ರೀತಿ, ಸೈನಿಕ ಶಾಲೆಯಲ್ಲಿ ಶಿಕ್ಷಣ. ಸಾಯಿಬೇರಿಯುವ ಯಾತ್ರೆ; ಗವರ್ನರ್ ಜನರಲನ ಎ ಡಿ. ಸಿ. ಯಾಗಿ ಅಲ್ಲಿಂದ ತ್ಯಾಗಪತ್ರ, ಪುನಃ ಸೈಂಟ್ ಪೀಟರ್ಸ್‌ಬರ್ಗ್ ವಿಶ್ವವಿದ್ಯಾಲಯದಲ್ಲಿ ಐದು ವರ್ಷದ ತನಕ ಗಣಿತ ಮತ್ತು ಭೂಗೋಳದ ಅಧ್ಯಯನ; ಕ್ರಾಂತಿಕಾರಿ ದಳದಲ್ಲಿ ಸೇರುವಿಕೆ, ಯುರೋಪ ಯಾತ್ರೆ ಮತ್ತು ಅಲ್ಲಿನ ಅರಾಜಕವಾದೀ ಸಂಸ್ಥೆಗಳೊಂದಿಗೆ ಸಂಪರ್ಕ, ರಷ್ಯಕ್ಕೆ ಬಂದು ಕ್ರಾಂತಿಕಾರಿ ವಿಚಾರಗಳ ಪ್ರಚಾರ—ಇತ್ಯಾದಿ. ಅನಂತರದ ದೃಶ್ಯವನ್ನು ಎ ಜಿ ಗಾರ್ಡಿನರರ ರೇಖಾಚಿತ್ರದಲ್ಲಿ ನೋಡಿರಿ: —

" ನಾಟಕದ ಪರದೆಯು ಬದಲಾಗುತ್ತದೆ. ಝಾರ್ ನಿಕೋಲಸನ ಅಂಧಕಾರದ ರಾತ್ರಿ ದೂರವಾಯಿತು; ಆದರೆ ಅನಂತರ ದಾಸತ್ವ ಪದ್ಧತಿಯು ಕೊನೆಗೊಂಡುದರಿಂದ, ಸ್ವಲ್ಪಹೊತ್ತು ಉಂಟಾದ ಉಪಃಕಾಲದ ಶಾಂತತೆಯು ಪ್ರತಿಕ್ರಿಯೆಯ ಅಂಧಕಾರದಿಂದ ಪುನಃ ಆವರಿಸಲ್ಪಟ್ಟಿತು, ಮತ್ತು ರಷ್ಯನ ಪೋಲೀಸರ ಅತ್ಯಾಚಾರಗಳಿಂದ ತುಂಬಿತು. ಸೂರಾರು ನಿರಪರಾಧಿಗಳು ಫಾಸಿಯನ್ನನುಭವಿಸಿದರು; ಮತ್ತು ಸಾವಿರಾರು ಜನರು ಜೇಲಿನಲ್ಲಿ ತುಂಬಿಸಲ್ಪಟ್ಟರು—ಇಲ್ಲವೆ ಸೈಬೇರಿಯದಲ್ಲಿ ತಮ್ಮ ಸಮಾಧಿಯನ್ನಗೆಯಲು ನಿರ್ಬಾಸಿತರೆನ್ನಿಸಿಕೊಂಡರು. ಇಡೀ ರಷ್ಯದಲ್ಲಿ ಭಯ ಮತ್ತು ತೊಂದರೆಯ ರಾಜ್ಯವಿತ್ತು. ಆದರೆ ಒಳಗಿಂದೊಳಗೆ ರಷ್ಯವು ಜಾಗೃತವಾಗುತ್ತಿತ್ತು. ರಷ್ಯದ ಝಾರ್ ಎರಡ್ನಾಂಡರ್‌ದ್ವಿತೀಯನು, ತನ್ನ ಅಳಿಕೆಯ ಸೂತ್ರವನ್ನು ಟ್ರಿಪೋಫ್ ಮತ್ತು ಶುವಾಲೋಫ್ ಎನ್ನುವ ಇಬ್ಬರು ಪೋಲೀಸ ಅತ್ಯಾಚಾರಿಗಳಿಗೊಪ್ಪಿಸಿದ್ದನು. ಅವರು ಇಷ್ಟಬಂದವರನ್ನು ಕೊಲ್ಲುತ್ತಿದ್ದರು; ನಿರ್ವಾಸಿತಗೊಳಿಸುತ್ತಿದ್ದರು. ಆದರೂ ಅವರು ಕ್ರಾಂತಿಕಾರಿಗಳ ಗುಪ್ತಸಮಿತಿಯ ಕಾರ್ಯಗಳನ್ನು ತಡೆಯಲು ಅಸಮರ್ಥರಾದರು. ಈ ಸಮಿತಿಯು ಒಂದೇಸವನೆ ಕ್ರಾಂತಿಯ ಪುಸ್ತಕಗಳನ್ನು ಜನತೆಯಲ್ಲಿ ತುಂಬುತ್ತಿತ್ತು. ಇಂಥ ಘೋರ ಅಶಾಂತಿಮಯ ನಾಯು ಮಂಡಲದಲ್ಲಿ, ಕುರಿಯ ಚರ್ಮವನ್ನು ಹೊದ್ದುಕೊಂಡು ಒಬ್ಬ ಅದ್ಭುತ ಕೃಷಿಕನು ಅದೃಶ್ಯಭೂತದಂತೆ ಅತ್ತಿಂದಿತ್ತ ತಿರುಗುತ್ತಿರುವನು. ಅವನ ಹೆಸರು ಬೋರೋಡಿನ್. ಪೋಲೀಸ್ ಅಧಿಕಾರಿಯು ಕೈಕಿಕ್ಕುತ್ತ ಹೇಳುತ್ತಾನೆ:—" ಬೋರೋಡಿನನನ್ನೂ ಅವನ ಸಂಗಾತಿಗಳನ್ನೂ ಹೇಗಾದರೂ ಹಿಡಿದೆವೆಂದರೆ, ಕ್ರಾಂತಿಯ ಈ ಪರ್ವಣಿಯು ತಲೆಯೇ ನಾಶವಾದಂತಾಗುವುದು. " ಆದರೆ ಬೋರೋಡಿನನನ್ನು ಹಿಡಿಯುವುದು ಸುಲಭವಾದ ಕೆಲಸವಲ್ಲ. ಯಾವ ನೇಯ್ಗೆಯವಳ ಮತ್ತು ಕೂಲಿಯವರ ಮಧ್ಯೆ ಅವನ ಕೆಲಸ ಮಾಡುತ್ತಾನೋ, ಅವರು ವಿಶ್ವಾಸಘಾತ ಮಾಡಲು ಸಿದ್ಧರಿಲ್ಲ. ಅಷ್ಟಲ್ಲ ನೂರಾರು ಜನರು ಹಿಡಿಯಲ್ಪಟ್ಟು ಕೆಲವರು ಜೈಲಿನ ಶಿಕ್ಷೆಯನ್ನನುಭವಿಸುತ್ತಾರೆ, ಕೆಲವರು ಫಾಸಿಯನ್ನನುಭವಿಸುತ್ತಾರೆ; ಆದರೆ ಬೋರೋಡಿನನ ನಿಜವಾದ ಹೆಸರು ಮತ್ತು ಪತ್ತೆಯನ್ನು ಹೇಳಲು ಯಾರೂ ಶಕ್ತರಾಗಲಿಲ್ಲ

" ಸನ್ ೧೮೭೪ರ ವಸಂತ ಋತು, ಸಂಧ್ಯೆಯ ಸಮಯ. ಸೈಂಟ್ ಪೀಟರ್ಸ್‌ಬರ್ಗಿನ ಎಲ್ಲಾ ವಿದ್ವಾಂಸರೂ, ವಿಜ್ಞಾನ ಶ್ರೇಮಿಗಳೂ ಭೌಗೋಲಿಕ ಸಂಸ್ಥೆ (Geographical society)ಯ ಭವನದಲ್ಲಿ ಮಹಾ ವೈಜ್ಞಾನಿಕ ಪ್ರಿನ್ಸ್ ಕ್ರೋಪಾಟಕಿನರ ವ್ಯಾಖ್ಯಾನ

ಕೇಳಲು ಏಕತ್ರಿತರಾಗಿದ್ದಾರೆ ಫಿನ್‌ಲೇಂಡಿನ ಯಾತ್ರೆಯ ಪರಿಣಾಮುಗಳ ವಿಷಯ ಅವರ ಭಾಷಣವಾಗುತ್ತಿದೆ. ರಷ್ಯದ ಜಲಪ್ರಳಯ (ಡಾಲ್ಯೂವಿಯುಲ್) ಕಾಲದ ವಿಷಯದಲ್ಲಿ ವೈಜ್ಞಾನಿಕರು ಯಾವ ಸಿದ್ಧಾಂತವನ್ನು ಇದುವರೆಗೆ ಸ್ಥಾಪಿಸಿದ್ದಾರೋ, ಅವು ಒಂದರ ನಂತರ ಒಂದು ಖಂಡಿಸಲ್ಪಡುತ್ತಿವೆ; ಮತ್ತು ಅಕಾಟ್ಯತರ್ಕದ ಅಧಾರದಲ್ಲಿ ಒಂದು ಹೊಸ ಸಿದ್ಧಾಂತ ಸ್ಥಾಪನೆಯಾಗುತ್ತಿದೆ. ಇಡೀ ವೈಜ್ಞಾನಿಕ ಜಗತ್ತಿನಲ್ಲಿ ಕ್ರೋಪಾಟಕಿನನ ಪ್ರಭಾವವು ನೆಲೆಗೊಳ್ಳುತ್ತಿದೆ. ಈ ಮಹಾಪುರುಷನ ಮೆದುಳಿನ ವಿಸ್ತಾರದ ವಿಷಯ ಏನು ಹೇಳಲಿ! ಭಿನ್ನ ಭಿನ್ನ ಜ್ಞಾನ ಹಾಗೂ ವಿಜ್ಞಾನದ ಸಮಸ್ತ ಸಾಮ್ರಾಜ್ಯದಲ್ಲಿ ಅವನ ಅಧಿಕಾರವಿತ್ತು. ಅವನು ಮಹಾ ಗಣಿತಜ್ಞ ಮತ್ತು ಭೂಗರ್ಭ ವಿದ್ಯೆಯ ವಿಶೇಷಜ್ಞ; ಅವನು ಕೂಲಿಕಾರ ಮತ್ತು ಗ್ರಂಥಕಾರ. ಹನ್ನೆರಡು ವರ್ಷ ಪ್ರಾಯದಲ್ಲಿಯೇ ಕಾದಂಬರಿ ಬರೆದಿದ್ದ! ಅವನು ಸಂಗೀತಜ್ಞ ಹಾಗೂ ದಾರ್ಶನಿಕ. ಇಪ್ಪತ್ತು ಭಾಷೆಗಳ ಜ್ಞಾತನವನು. ಮತ್ತು ಏಳು ಭಾಷೆಗಳಲ್ಲಿ ಸುಲಭವಾಗಿ ಮಾತನಾಡಬಲ್ಲನು. ಮೂವತ್ತು ವರ್ಷ ಪ್ರಾಯದಲ್ಲಿ ರಷ್ಯದ ಮುಖ್ಯ ವಿದ್ವಾಂಸರಲ್ಲಿ, ಆ ಮಹಾರಾಷ್ಟ್ರದ ಕೀರ್ತಿಸ್ತಂಭರಲ್ಲಿ–ಪ್ರಿನ್ಸ್ ಕ್ರೋಪಾಟಕಿನನ ಗಣನೆಯಾಗತೊಡಗಿತು. ಪ್ರಿನ್ಸ್ ಕ್ರೋಪಾಟಕಿನನು ಬಾಲ್ಯಾವಸ್ಥೆಯಲ್ಲಿ ಸೈನಿಕ ಕಾರ್ಯಗಳನ್ನು ಕಲಿತಿದ್ದನು. ಐದು ವರ್ಷಗಳ ನಂತರ ಸ್ಥಾನಿಕ ಚುನಾವಣೆಯ ಪ್ರಶ್ನೆ ಬಂದಾಗ, ಇವನು ಸೈಬೇರಿಯಕ್ಕೆ ಅರಿಶಲ್ಪಟ್ಟಿದ್ದನು. ಅಲ್ಲಿ ಸುಧಾರಣೆಯ ಯಾವ ಯೋಜನೆಗಳನ್ನು ಮಂಡಿಸಿದ್ದನೋ, ಮತ್ತು ಅಮೂರಿನ ಯಾತ್ರೆ ಮಾಡಿ ಏಶಿಯದ ಭೂಗೋಲದ ಕೆಟ್ಟತಪ್ಪುಗಳ ಸಂಶೋಧನೆಯನ್ನು ಯಾವ ರೀತಿಯಲ್ಲಿ ಮಾಡಿದನೋ, ಅವುಗಳಿಂದ ಅವನ ಕೀರ್ತಿಯು ಮೊದಲೇ ಹರಡಿತ್ತು. ಅದರೆ ಇಂದು ಭೌಗೋಲಿಕ ಜಗತ್ತಿನ ವಿಜಯಮುಕುಟವು ಅವನ ಶಿರವನ್ನೇ ಅಲಂಕರಿಸಿತು. ಪ್ರಿನ್ಸ್ ಕ್ರೋಪಾಟಕಿನರು ಭೌಗೋಲಿಕ ಸಂಸ್ಥೆಯ 'ಪ್ರಾಕೃತಿಕ ಭೂಗೋಲ' (Fi ic l Geogrphy) ವಿಭಾಗದ ಸಭಾಪತಿಯೆಂದು ಗೌರವಿಸಲ್ಪಟ್ಟರು. ಭಾಷಣದ ನಂತರ ಅವರು ಗಾಡಿಯಲ್ಲಿ ಕುಳಿತುಕೊಂಡು ಹೊರಡುತ್ತಲೇ, ಅವರ ಹತ್ತಿರದಿಂದ ಮತ್ತೊಂದು ಗಾಡಿಯು ಹೋಯಿತು. ಆ ಗಾಡಿಯ ಒಬ್ಬ ನೇಯ್ಗೆಯವನು ಬಾಗಿ "ಮಿಸ್ಟರ್ ಬೋರೋಡೀನ್, ಸಲಾಮ್" ಎಂದನು. ಎರಡೂ ಗಾಡಿಗಳು ನಿಲ್ಲಿಸಲ್ಪಟ್ಟುವು. ನೇಯ್ಗೆಯವನ ಹಿಂದಿನಿಂದ ಒಬ್ಬ ಗುಪ್ತ ಪೋಲೀಸನು ಆ ಗಾಡಿಯಿಂದ ಹಾರಿ ಹೇಳಿದನು:–"ಮಿಸ್ಟರ್ ಬೋರೋಡೀನ್ ಯಾನೆ ಪ್ರಿನ್ಸ್ ಕ್ರೋಪಾಟಕಿನ್, ನಾನು ನಿನ್ನನ್ನು ಬಂಧಿಸುತ್ತೇನೆ." ಆ ಗುಪ್ತಚಾರನ ಸಂಜ್ಞೆಯಂತೆ ಪೋಲೀಸರು ಹಾರಿಬಂದರು. ಅವರನ್ನು ವಿರೋಧಿಸುವುದು ವ್ಯರ್ಥವಾಗಿದ್ದಿತು. ಕ್ರೋಪಾಟಕಿನರು ಬಂಧಿಸಲ್ಪಟ್ಟರು. ವಿಶ್ವವಿದ್ಯಾಲಯದ ತನಿಖೆ ನೇಯ್ಗೆಯವನು ಬೇರೆ ಗಾಡಿಯಲ್ಲಿ ಅವರ ಹಿಂದೆ ಹಿಂದೆ ಹೋದನು."

(ಅನಂತರ ಅವರು ಕೇಗೆ ಕೋಟೆಯ ಜೈಲಿನಲ್ಲಿ ಹಾಕಲ್ಪಟ್ಟರು, ಅಲ್ಲಿ ಅವರಿಗೆ ಯಾವ ಯಾವ ಯಾತನೆಗಳನ್ನು ಸಹಿಸಬೇಕಾಯಿತ್ತು, ಮತ್ತು ಅವರು ಅಲ್ಲಿಂದ ಹೇಗೆ ಓಡಿಹೋದರೆಂಬ ಅತ್ಯಂತ ಮನೋರಂಜಕ ವೃತ್ತಾಂತವು ಕ್ರೋಪಾಟಕಿನರ "ನೆನಪುಗಳು" (Memories) ಎಂಬ ಪುಸ್ತಕದಲ್ಲಿ ದೊರೆಯುತ್ತವೆ.)

೪೧ ವರ್ಷದ ಸಾಧನೆ

ಸನ್ ೧೮೭೨ ರಿಂದ ೧೯೧೭ರ ತನಕದ ೪೧ ವರ್ಷಗಳನ್ನು ಕ್ರೋಪಾಟಕಿನರಿಗೆ ಸ್ವದೇಶದ ಹೊರಗೆ ಕಳೆಯುಬೇಕಾಗಿ ಬಂತು. ಅತ್ಯಂತ ಕಠೋರ ಸಾಧನೆಯ ಈ ದೀರ್ಘ ಸಮಯವು, ಕೇವಲ ಅವರ ಜೀವನದ್ದೇ ಇಲ್ಲದೆ, ಪ್ರಪಂಚದ ರಾಜನೈತಿಕ ಇತಿಹಾಸದ ಒಂದು ಮಹತ್ತ್ವಪೂರ್ಣ ಅಧ್ಯಾಯವಾಗಿದೆ. ತನ್ಮಧ್ಯೆ ಸ್ವಿಜರ್ಲೆಂಡ್ ಮತ್ತು ಫ್ರಾನ್ಸಿನಲ್ಲಿದ್ದರು. ಮತ್ತು ಎರಡು ಎರಡೂವರೆ ವರ್ಷ ಫ್ರಾನ್ಸಿನ ಜೈಲಿನಲ್ಲೂ ಇರಬೇಕಾಗಿ ಬಂತು. ಅವರ ಎಲ್ಲಾ ಮಹತ್ತ್ವಪೂರ್ಣ ಗ್ರಂಥಗಳು ಇದೇ ಕಾಲದಲ್ಲಿ ಬರೆಯಲ್ಪಟ್ಟವು ಇವುಗಳಲ್ಲಿ "ಪರಸ್ಪರ ಸಹಕಾರ" ಮತ್ತು "ಅನ್ನದ ಪ್ರಶ್ನೆ" ಎಂಬ ವಿಶ್ವದ ಮನ್ನಣೆ ಪಡೆದ ಪುಸ್ತಕಗಳಿವೆ. ಅವರ ಕ್ರಾಂತಿಕಾರೀ ಲೇಖನಗಳೂ ಭಿನ್ನ ಭಿನ್ನ ಭಾಷೆಗಳಲ್ಲಿ ಮುದ್ರಿಸಲ್ಪಟ್ಟಿವೆ.

ಕ್ರೋಪಾಟಕಿನರೇ ಇಂಗ್ಲಾಂಡಿನಲ್ಲಿ ಸನ್ ೧೮೮೨ರಲ್ಲಿ 'ಫ್ರೀಡಮ್" (Freedom) ಎನ್ನುವ ಪತ್ರಿಕೆಯನ್ನು ಆರಂಭಿಸಿದರು. ಅದು ಇಂದೂ ನಡೆಯುತ್ತಿದೆ. ಅವರಣ್ಣ ಸೈಬೇರಿಯದಿಂದ ಮರಳುವಾಗ, ರಸ್ತೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಂಥ, ಕ್ರೋಪಾಟಕಿನರ ಜೀವನದ ಅತ್ಯಂತ ದುಃಖದ ಘಟನೆ ಇದೇ ವರ್ಷ ನಡೆಯಿತು. ಹನ್ನೆರಡು ವರ್ಷ ಸೈಬೇರಿಯದಲ್ಲಿ ಕಳೆಯಬೇಕಾದ ನಿರ್ವಾಸಿತತೆಯ ಸಜೆಯು ಅವರಿಗೂ (ಕ್ರೋಪಾಟಕಿನರ ಅಣ್ಣನಿಗೂ) ಸಿಕ್ಕಿತ್ತು. ಅವರ ಬಿಡುಗಡೆಯ ದಿನವು ಹತ್ತಿರ ಬಂದಾಗ, ಹೆಂಡತಿ ಮಕ್ಕಳನ್ನು ರಷ್ಯಕ್ಕೆ ಕಳುಹಿಸಿ, ಒಂದುದಿನ ನಿರಾಶೆಯಿಂದ ತನಗೆ ತಾನೇ ಗುಂಡು ಹೊಡೆದುಕೊಂಡರು. ಅವರೂ ಮಹಾ ಗಣಿತಜ್ಞರಾಗಿದ್ದರು. ಖಗೋಲ ಶಾಸ್ತ್ರದ ಅದ್ಭುತ ಪಂಡಿತರಾಗಿದ್ದರು. ಜ್ಯೋತಿಶ್ಶಾಸ್ತ್ರದ ದೊಡ್ಡ ದೊಡ್ಡ ಪಂಡಿತರೂ ಅವರ ಕಲ್ಪನಾಶಕ್ತಿಯ ಪ್ರತಿಭೆಯನ್ನು ಬಹಳ ಪ್ರಶಂಸಿಸಿದ್ದರು. ಕೇವಲ ಅಹಂಕಾರದಿಂದಲೇ—ಕ್ರಾಂತಿಕಾರಿದಲ್ದೊಂದಿಗೆ ಅವರ ಯಾವ ಸಂಬಂಧವಿಲ್ಲದಿದ್ದರೂ—ದೇಶದಿಂದ ಹೊರದೂಡುವ ಸಜೆಯು ಕೊಡಲ್ಪಟ್ಟಿತು. ಅವರಿಗೆ ಸ್ವತಂತ್ರವಾಗಿ ಖಗೋಲ ಶಾಸ್ತ್ರದಲ್ಲಿ ಸಂಶೋಧನೆ ಮಾಡಲು ಬಿಡುತ್ತಿದ್ದರೆ, ಆ ಶಾಸ್ತ್ರದ ಉನ್ನತಿಯಲ್ಲಿ ಅವರೆಷ್ಟು ಸಹಾಯಕರಾಗುತ್ತಿದ್ದರೋ? ಕ್ರೋಪಾಟಕಿನರ ಹೃದಯದಲ್ಲಿ ಅವರನ್ನು ಕುರಿತು ಅತ್ಯಂತ ಶ್ರದ್ಧೆಯಿತ್ತು. ಆ ಇಬ್ಬರೂ ಸಹೋದರರ ಪ್ರೇಮಪೂರ್ಣ ಹೃದಯವು ಅದರ್ಶವಾಗಿತ್ತು. ಆದರೆ ಕ್ರೋಪಾಟಕಿನರು ತನ್ನ ಹೃದಯವೇಧಕ ಈ ದುರ್ಘಟನೆಯ ಪ್ರಸ್ತಾಪವನ್ನು ಅತ್ಯಂತ ಸಂಯಮದೊಂದಿಗೆ ಒಂದೇ ವಾಕ್ಯದಲ್ಲಿ ಮಾಡಿದ್ದಾರೆ:–"ನಮ್ಮ ಗುಡಿಸಲಿನ ಮೇಲೆ ಕೆಲವು ತಿಂಗಳುಗ ಳತನಕ ದುಃಖದ ಮೋಡವು ಹರಡಿತ್ತು." ಪ್ರೇಮಸಾಕಾರ ಕ್ರೋಪಾಟಕಿನರು

ತನ್ನ ಅತ್ತಿಗೆ ಹಾಗು ಅವರ ಮಕ್ಕಳ ಸೇವೆಯನ್ನು ಯಥಾನುಶಕ್ತಿ ಮಾಡಿದರು.

ಕ್ರೋಪಾಟಕಿನರ ಮನುಷ್ಯತ್ವ

ಕ್ರೋಪಾಟಕಿನರ ಎಲ್ಲ ಶಿಕ್ಷಣದ ಅಧಾರ ಅವರ ಮಾನವತೆ' ವಾಸ್ತವವಾಗಿ ಅರಾಜಕತಾವಾದವು ಮಾರ್ಕ್ಸ್‌ವಾದಕ್ಕಿಂತ ಸರ್ವಥಾ ಭಿನ್ನವಾದುದು. ಮಾರ್ಕ್ಸ್‌ವಾದಿಗಳ ದೃಷ್ಟಿಯಲ್ಲಿ ವ್ಯಕ್ತಿಗೆ ಯಾವ ಮಹತ್ವವೂ ಇಲ್ಲ. ಮಾರ್ಕ್ಸ್‌ವಾದಿ ಅವನೊಂದಿಗೆ ಚದುರಂಗದ ಕಾಯಿಯಂತೆ ವ್ಯವಹರಿಸುತ್ತಾನೆ; ಅಲ್ಲದೆ ಸಿದ್ಧಾಂತದ ಕುರಿತು ಮತ. ಭೇದ ಉಂಟಾದಾಗ, ಅವನ ಶರೀರ ಮತ್ತು ಆತ್ಮವನ್ನು ಬೇರೆ ಬೇರೆ ಮಾಡುವುದರಲ್ಲಿಯೂ ಅವರಿಗೆ ಸಂಕೋಚವಿಲ್ಲ. ಆದರೆ ಅರಾಜಕವಾದಿಗೆ ಮನುಷ್ಯ ವಾಸ್ತವವಾಗಿ ಮನುಷ್ಯನೆ. ಅವನಿಗಾಗಿ ಅವನ ಹೃದಯವು ತುಂಬಿಬರುತ್ತದೆ. ಅರಾಜಕವಾದಿಗೆ "ಮನುಷ್ಯ"ನ ಚಿಂತೆಯಿದ್ದಾಗ, ಸಾಮ್ಯವಾದಿಗೆ ತನ್ನ "ಪದ್ಧತಿ"ಯ ಚಿಂತೆಯಿರುತ್ತದೆ. ತನ್ನ ವಿರುದ್ಧ ಪಂಥದವರ ಮೇಲಾದರೂ ಅನ್ಯಾಯ ಮತ್ತು ಅತ್ಯಾಚಾರವಾಗುತ್ತಿದ್ದರೆ, ಯಾವ ಭೇದಭಾವವಿಲ್ಲದೆ ಅದನ್ನು ವಿರೋಧಿಸುತ್ತಿದ್ದರು ಕ್ರೋಪಾಟಕಿನರು. ಅವರ ಶಬ್ದ ಕೇಳಿ— "ನಾವು ವ್ಯಕ್ತಿಯ ಪೂರ್ಣ ಸ್ವಾಧೀನತೆಯನ್ನು ಒಪ್ಪುತ್ತೇವೆ. ನಾವು ಅದಕ್ಕಾಗಿ ಜೀವನದ ವ್ಯಾಪಕತೆ ಹಾಗೂ ಅದರ ಸಮಸ್ತ ಪ್ರತಿಭೆಗಳ ಸ್ವತಂತ್ರ ವಿಕಾಸನವನ್ನು ಬಯಸುತ್ತೇವೆ ನಾವದರ ಮೇಲೆ ಏನನ್ನೂ ಹೇರಬಯಸುವುದಿಲ್ಲ. ಹೀಗೆ ನಾವು ಫರಿಯರನು ಧಾರ್ಮಿಕ ನೀತಿಜ್ಞಾನದ ವಿರೋಧದಲ್ಲಿ ಯಾವ ಸಿದ್ಧಾಂತವನ್ನು ಹೇಳಿದ್ದಾನೋ ಆ ಸಿದ್ಧಾಂತಕ್ಕೆ ಬರುತ್ತೇವೆ.—" ಮನುಷ್ಯನನ್ನು ಪೂರ್ಣ ಸ್ವತಂತ್ರನಾಗಿರಲು ಬಿಡು; ಅವನನ್ನು ಅಂಗಹೀನನನ್ನಾಗಿಸಬೇಡ; ಯಾಕೆಂದರೆ ಧರ್ಮವು ಅವನನ್ನು ಅಪಂಗನನ್ನಾಗಿ— ಬೇಕಾದುದಕ್ಕಿಂತ ಹೆಚ್ಚು ಅಪಂಗನನ್ನಾಗಿ – ಮಾಡಿಬಿಟ್ಟಿದೆ. ಅವನ ಮನೋವಿಚಾರಗಳಿಂದಲೂ ಹೆದರದಿರು; ಸ್ವತಂತ್ರ ಸನ್ನಾಜದಲ್ಲಿ ಅವರು ಅಪಾಯಕಾರಿಗಳಾಗುವುದಿಲ್ಲ."

ಫ್ರೆನ್ಚ್ ಕ್ರೋಪಾಟಕಿನರ ಗ್ರಂಥಗಳನ್ನೋದಿದವರಿಗೆ, ಅದರಲ್ಲಿ ಎಲ್ಲಿಯೂ ಯಾವ ಕ್ಷುದ್ರ ಭಾವನೆಯೂ ತೋರುವುದಿಲ್ಲ. 'ಕಮ್ಯೂನಿಸ್ಟ್' ಸಾಹಿತ್ಯದ ಶಾಬ್ದಿಕ ಜಂಜಾಟದ ಹೆಸರು ಸಹ ಇಲ್ಲ. ಕಮ್ಯೂನಿಸ್ಟರ ಸಾಹಿತ್ಯದ ಶಾಖವು ಯಾವನೊಬ್ಬ ಸಹೃದಯ ಮನುಷ್ಯನ ಆತ್ಮವನ್ನು ಸುಡುವಷ್ಟು ಅನರು ಅರ್ಥಕ್ಕೆ ಪ್ರಾಧಾನ್ಯವನ್ನು ಕೊಟ್ಟು ನೈತಿಕತೆಯನ್ನು ಲೆಕ್ಕಿಸಲೇ ಇಲ್ಲ. ಕ್ರೋಪಾಟಕಿನರ ಸಾಹಿತ್ಯವು ಇದಕ್ಕೆ ತೀರ ವಿರೋಧಿ. ಅದರಲ್ಲಿ ನೈತಿಕತೆಯ ಶೀತಲ ಮಂದ ಸಮೀರವು ಸದಾ ಹರಿಯುತ್ತಿರುತ್ತದೆ.

ಕ್ರೋಪಾಟಕಿನರ ಸಂತಪ್ರಕೃತಿಯ ಮೇಲೆ ಪ್ರಕಾಶ ಬೀಳುವಂತಹ ಎಷ್ಟೋ ಕಥೆಗಳೂ, ಸಂಸ್ಮರಣೆಗಳೂ, ಅವರ ೪೧ ವರ್ಷದ ದೇಶಾಂತರ ವಾಸದ ಜೀವನಚರಿತ್ರೆಯಲ್ಲಿ ದೊರೆಯುತ್ತವೆ. ಒಮ್ಮೆ

ಸ್ಟೈಂಕ್ ಹೆರಿಸನು ಅವರೊಂದಿಗೆ ಹೇಳಿದನು:—" ಆ ಅರಾಜಕ ನಾದಿಗಳು ಯೌವನಾವಸ್ಥೆಯಲ್ಲಿ ಚೆನ್ನಾಗಿ ಕೆಲಸ ಮಾಡಿದರು. ಆದರೆ ಈಗವರೇ ಅರ್ಥಲೋಲುಪರಾಗಿ, ಅದರ ಕೊಳ್ಳೆಯಾಗಿರುವುದನ್ನು ನೋಡಿದಿರಾ?" ಆಗ ಕ್ರೋಪಾಟಕಿನರು ಉತ್ತರನಿತ್ತರು:—"ಅವರು ತಾರುಣ್ಯದ ಸ್ಫೂರ್ತಿಯ ದಿನವನ್ನು - ತಮ್ಮ ಸರ್ವೋತ್ತಮ ವಸ್ತುವನ್ನು—ನಮಗೆ ಅರ್ಪಿಸಿದರು. ಈಗ ಇವಕ್ಕಿಂತ ಹೆಚ್ಚಿನ ವಸ್ತುವನ್ನು ಅವರಿಂದ ಕೇಳುವುದಾದರೂ ಹೇಗೆ ಸಾಧ್ಯ?" ಈ ಉದಾರತೆಯೇ ಕ್ರೋಪಾಟಕಿನರ ಸಂಪೂರ್ಣ ಜೀವನದ ಮಹತ್ವವಾಗಿತ್ತು.

ವಿಲಾಯತಿಯಲ್ಲಿರುವಾಗ ಕ್ರೋಪಾಟಕಿನರ ಮೈತ್ರಿಯು ಅಲ್ಲಿಯ ಸರ್ವಶ್ರೇಷ್ಠ ವಿಚಾರಕರ ಮತ್ತು ಕಾರ್ಯಕರ್ತರೊಂದಿಗೆ ಆಗಿದ್ದಿತು. ಅವರಲ್ಲಿ ಎಷ್ಟೋ ಜನರು ಅವರ ಪ್ರಶಂಸಕರು. ಹಿಂಡ್‌ಮೆನ್, ಬರ್ನಾರ್ಡ್ ಶಾ, ಟೆನ್ನಿಸನ್, ಎಡ್ವರ್ಡ್ ಕಾರ್ಪೆಂಟರ್, ನೆವಿನ್ಸನ್, ಮತ್ತು ಬ್ರೈಲ್ಸ್‌ಫೋರ್ಡ್ ಅದಿಯಾವರೊಂದಿಗೆ ಅವರ ನಿಕಟ ಸಂಬಂಧವಿತ್ತು. ಕ್ರೋಪಾಟಕಿನರು ೭೦ ವರ್ಷದವರಾದಾಗ ಅವರ ಗೌರವಾರ್ಥವಾಗಿ ಏರ್ಪಡಿಸಿದ ಒಂದು ಸಭೆಯಲ್ಲಿ, ಬರ್ನಾರ್ಡ್ ಶಾರು— "ನಾವಿಷ್ಟು ಸಮಯ ಹೋಗುತ್ತಿದ್ದ ದಾರಿಯು ತಪ್ಪಾದುದೆಂದೂ ಕ್ರೋಪಾಟಕಿನರ ದಾರಿಯೇ ಸರಿಯಾದುದೆಂದೂ ನನಗೀಗ ತೋರುತ್ತಿದೆ." ಎಂದು ಹೇಳುತ್ತಿದ್ದರು. ತಪಸ್ವಿ ಮತ್ತು ವಿಚಾರಕರ ವಿಚಾರಧಾರೆಯು ಬಹಳ ಮೆಲ್ಲಗೆ ಕೆಲಸ ಮಾಡುತ್ತದೆ. ಕ್ರೋಪಾಟಕಿನರು ತನ್ನ ಮಾತು ಮತ್ತು ಲೇಖನಿಯ ಮೂಲಕ ಮಾಡಿದ ಮಹತ್ಕಾರ್ಯವು ಇಂಗ್ಲಾಂಡ್ ಮಾತ್ರವಲ್ಲದೆ ಫ್ರಾನ್ಸ್, ಇಟಲೀ, ಸ್ವಿಜರ್ಲೆಂಡ್,

ಹಾಗೂ ಯುರೋಪಿನ ಅನ್ಯ ದೇಶಗಳ ವಿಚಾರಕರನ್ನೂ ಪ್ರಭಾವಿತರ-ನ್ನಾಗಿ ಮಾಡಿತು. ಅಲ್ಲದೆ ಅಂದು ನವೀನವೆನಿಸಿದ ವಿಚಾರಗಳು ಇಂದು ಸಾರ್ವಜನಿಕವೆನಿಸಿವೆ.

ರಷ್ಯಕ್ಕೆ ಪುನರಾಗಮನ

ಸನ್ ೧೯೧೭ ರ ರಷ್ಯದ ಕ್ರಾಂತಿಯ ನಂತರ, ಕ್ರೋಪಾಟಕಿನರು ಸ್ವದೇಶಕ್ಕೆ ಮರಳುವುದು ಉಚಿತವೆಂದೆಣಿಸಿದರು. ಈಗ ಅವರು ೭೫ ವರ್ಷದವರಾಗಿದ್ದರು. ಅವರೂ ಅವರ ಮನಸ್ಸಿನಲ್ಲಿ ಯುವಕರಲ್ಲಿರು-ವಂತಹ ಉತ್ಸಾಹವಿತ್ತು. ಪೆಟ್ರೋಗ್ರೇಡಿನಲ್ಲಿ ೬೦ ಸಾವಿರ ಜನರು ಅವರನ್ನು ಸ್ವಾಗತಿಸಿದರು. ರಷ್ಯ ಸರಕಾರದ ಪ್ರಧಾನಿ ಕೆರೆನ್ಸ್ಕೀ ಸಹ ಅವರ ಸ್ವಾಗತಾರ್ಥ ಬಂದಿದ್ದನು. ಕ್ರೋಪಾಟಕಿನರಿಗೆ ಯಾವ ಸರಕಾರದಲ್ಲಿಯೂ ವಿಶ್ವಾಸವಿರದುದರಿಂದ, ಅವರು ಯಾವ ಸರಕಾರಿ ಉದ್ಯೋಗವನ್ನೂ ಸ್ವೀಕರಿಸಲಿಲ್ಲ. ಕೆರೆನ್ಸ್ಕೀಯೊಂದಿಗೆ ಅವರ ಸಂಬಂಧ ಚೆನ್ನಾಗಿತ್ತು. ಅದರೆ ಲೆನಿನನ ಕೈವಶವಾದ ಮೇಲೆ, ಇವರು ಉಪೇಕ್ಷಿತ ರಾದರು.

ಅಂತಿಮ ದಿನ

ಕ್ರೋಪಾಟಕಿನರ ಅಂತಿಮ ದಿನಗಳ ಒಂದು ದೃಶ್ಯವು ಗೋಲ್ಡ್ ಮೆನರ ಆತ್ಮ ಚರಿತ್ರೆ "ಲಿವಿಂಗ್ ಮೈ ಲಾಯ್ಫ್" ನಲ್ಲಿ ದೊರೆಯು ತ್ತದೆ. ಅವರು ಹೀಗೆ ಬರೆದಿವ್ವಾರೆ: —"ನಾನು ರಷ್ಯಕ್ಕೆ ತಲುಪಿದ ಮೇಲೆ, ಕ್ರೋಪಾಟಕಿನರು ಬಹಳ ವಿಶ್ರಾಂತಿಯಿಂದ ದಿನ ಕಳೆಯುತ್ತಿ-ದ್ದಾರೆಂದೂ, ಅವರಿಗೆ ಅನ್ನವಸ್ತ್ರದ್ದಾಗಲೀ ಇತರ ವಸ್ತುಗಳದಾಗಲೀ ಚಿಂತೆಯಿಲ್ಲವೆಂದೂ ಕಮ್ಯುನಿಸ್ಟರು ನನಗೆ ಆಗಾಗ ವಿಶ್ವಾಸ ಕೊಡು-ತ್ತಿದ್ದರು. ಆದರೆ ನಾನು ಕ್ರೋಪಾಟಕಿನರ ಮನೆಸೇರಿದಾಗ, ಈ ಕಥನದ ವಿಪರೀತ ಸ್ಥಿತಿಯನ್ನೇ ನೋಡಿದೆನು. ಕ್ರೋಪಾಟಕಿನ್ ಅವರ ಪತ್ನಿ ಸೋಫೀ ಹಾಗೂ ಮಗಳು ಎಲೆಕ್ಸಾಂಡ್ರಾ ಮೂವರೂ ಒಂದು ಕೋಣೆಯಲ್ಲಿರುತ್ತಿದ್ದರು. ಆ ಕೋಣೆ ಸಹ ತಕ್ಕಷ್ಟು ಬೆಚ್ಚ-ಗಿರಲಿಲ್ಲ. ಹತ್ತಿರದ ಕೋಣೆಯ ತಾಪಮಾನವು ಶೂನ್ಯಕ್ಕಿಂತಲೂ ಕೆಳಗಿತ್ತು. ಅವರಿಗೆ ಸಿಗುತ್ತಿದ್ದ ಭೋಜನವು ಕೇವಲ ಜೀವಿಸಲು ಸಾಕಿತ್ತು. ಅದರೆ ಯಾವ ಸಹಕಾರ ಸಮಿತಿಯವರಿಂದವರಿಗೆ ಭೋಜನ ಸಿಗುತ್ತಿತ್ತೋ ಅದು ವಂಚಿತ್ತು. ಮತ್ತು ಅವರ ಪದಸ್ಥರು ಜೇಲಿಗೆ ಕಳುಹಿಸಲ್ಪಟ್ಟಿದ್ದರು. ನಾನು ಸೋಫಿಯೊಡನೆ ಕೇಳಿದೆ:— "ಜೀವನ ಹೇಗೆ ನಿರ್ವಾಹ ಸಾಗುತ್ತಿದೆ?" ಅವರುತ್ತರವಿತ್ತರು:— "ನಮ್ಮ ಬಳಿ ಒಂದು ದನವಿದೆ. ಮತ್ತು ತೋಟದಲ್ಲಿಯೂ ಸ್ವಲ್ಪ ಉತ್ಪತ್ತಿಯಾಗುತ್ತಿದೆ. ಸಂಗಡಿಗರೂ ಹೊರಗಿನಿಂದ ಸ್ವಲ್ಪ ಕಳುಹಿ-ಸುತ್ತಾರೆ. ಪೀಟರ್ (ಕ್ರೋಪಾಟಕಿನ)ನು ಕಾಯಿಲೆ ಬೀಳದಿದ್ದರೆ, ಅವರಿಗೆ ಅಧಿಕ ಪೌಷ್ಟಿಕ ಆಹಾರದ ಅಗತ್ಯವಿಲ್ಲದಿದ್ದರೆ, ನಮ್ಮೆಲ್ಲರ ಜೀವನ ನಿರ್ವಾಹ ಆಗುತ್ತದೆ."

ಜಾರ್ಜ್ ಲೆನ್ಸ್‌ಬರೀ ಇನ್ನೇ ದಿವಸಗಳಲ್ಲಿ ರಷ್ಯಕ್ಕೆ ಹೋಗಿದ್ದರು; ಅವರು ಎಮ್ಮಾ ಗೋಲ್ಡ್‌ಮೆನರೊಂದಿಗೆ ಹೇಳಿದ್ದರು:— "ಸೋವಿ-ಯೆಟ್ ಸರಕಾರದ ಉಚ್ಚಸಮಾಧಿಕಾರಿಗಳು; ಕ್ರೋಪಾಟಕಿನರಂಥ ಮಹಾ ವೈಜ್ಞಾನಿಕರನ್ನು ಈ ರೀತಿ ಹಸಿವೆಯಿಂದ ಸಾಯಲು ಬಿಡುವ-ರೆಂಬುದು ನನಗೆ ಅಸಂಭವವೆಂದು ತೋರುತ್ತದೆ! ನಾವು ಈ ರೀತಿಯ ಅನಾಚಾರವನ್ನು ಇಂಗ್ಲೆಂಡಿನಲ್ಲಿ ಅಸಹ್ಯವೆಂದು ತಿಳಿಯುವೆವು."

ಕ್ರೋಪಾಟಕಿನರು ಆ ದಿನಗಳಲ್ಲಿ ತನ್ನ ಅಂತಿಮ ಪುಸ್ತಕ "ನೀತಿ ಶಾಸ್ತ್ರ"ವನ್ನು ಬರೆಯುತ್ತಿದ್ದರು ಪುಸ್ತಕಗಳನ್ನು ಕೊಂಡುಕೊಳ್ಳಲು ಅವರ ಬಳಿ ಹಣವಿರಲಿಲ್ಲ. ಗುಮಾಸ್ತರನ್ನು ಅಥವಾ ಟಾಯಿಪಿಸ್ಟ್-ರನ್ನು ಇಡುವ ಕಲ್ಪನೆಯನ್ನು ಸಹ ಅವರು ಮಾಡಲಾರದವರಾಗಿದ್ದರು. ಆದುದರಿಂದ ಅವರಿಗೆ ತನ್ನ ಗ್ರಂಥದ ಪಾಂಡುಲಿಪಿಯನ್ನು ಸ್ವತಃ ತಯಾರಿಸಬೇಕಾಗುತ್ತಿತ್ತು. ಪುಷ್ಟಿಕರ ಭೋಜನವೂ ಅವರಿಗೆ ದೊರೆ-ಯದಿದ್ದುದರಿಂದ, ಅವರ ನಿರ್ಬಲತೆಯು ಜೀವಿಸುತ್ತಿತ್ತು. ಒಂದು ಮಿಣುಕುದೀಪದ ಬೆಳಕಿನಲ್ಲಿ ಅವರಿಗೆ ತನ್ನ ಗ್ರಂಥವನ್ನು ರಚಿಸ-ಬೇಕಾಗಿ ಬರುತ್ತಿತ್ತು.

ಕ್ರೋಪಾಟಕಿನರು ಮರಣಾಸನ್ನರಾದಾಗ, ಲೆನಿನ್ ಅವಶ್ಯವಾಗಿ ಮಾಸ್ಕೋವಿನಿಂದ ಸರ್ವಶ್ರೇಷ್ಠ ಡಾಕ್ಟರರನ್ನೂ ಆಹಾರ ಸಾಮಗ್ರಿ-ಗಳನ್ನೂ ಕಳುಹಿಸಿದ್ದನು. ಮತ್ತು ಅವರ ಸ್ವಾಸ್ಥ್ಯದ ಸಮಾಚಾರ-ವನ್ನು ತನಗೆ ಕಳುಹಿಸುತ್ತಿರಬೇಕೆಂದು ಆದೇಶವಿತ್ತಿದ್ದನು. ಜೀವನದ ಅಂತಿಮ ಸಮಯವನ್ನು ಅಸ್ವಾಸ್ಥ್ಯಕರ ವಾತಾವರಣವಿಲ್ಲಿ ಅನಿವಾ-ರ್ಯವಾಗಿ ತೆಗೆಸಿ, ಅವನ ಮೃತ್ಯುವಿನ ಸಮಯ ಇಷ್ಟು ಯೋಚನೆ ತೋರಿಸುವುದರ ಅರ್ಥವಾದರೂ ಏನು? ಫೆಬ್ರುವರಿ ೮, ೧೯೨೧ಕ್ಕೆ ಕ್ರೋಪಾಟಕಿನರ ಅಂತ್ಯವಾಯಿತು. ಲೆನಿನನ ಸರಕಾರವು ಸರಕಾರದ ರೀತಿಯಲ್ಲಿ ಅವನ ಅಂತ್ಯೇಷ್ಟಿ ಮಾಡುವ ವಿಚಾರವನ್ನು ಪ್ರಕಟಿಸಿತು. ಅದನ್ನು ಅವರ ಪತ್ನಿ, ತಥಾ ಸಂಗಡಿಗರು ಒಡನೆ ತಿರಸ್ಕರಿಸಿದರು. ಅರಾಜಕವಾದಿಗಳ "ಕೂಲಿಯವರ ಸಂಘ"ದ ಭವನದಿಂದ ಅವರ ಶವದ ಮೆರವಣಿಗೆಯು ಹೊರಟಿತು. ಅದರಲ್ಲಿ ೫೦ ಸಾವಿರ ಕೂಲಿ-ಯವರಿದ್ದರು ವಾದ್ಯಗಳು ಸಹ ಶುಂಬುನಷ್ಟು ಹಿತುನಿತ್ತು. ಜನರು ಕಪ್ಪುಧ್ವಜವನ್ನು ಹಿಡಿದುಕೊಂಡು— "ಕ್ರೋಪಾಟಕಿನರ ಸಂಗಡಿಗ-ರನ್ನು, ಅರಾಜಕವಾದೀ ಬಂಧುಗಳನ್ನು ಜೈಲಿನಿಂದ ಬಿಡಿರಿ" ಎಂದು ಬೊಬ್ಬಿಡುತ್ತಿದ್ದರು.

ಸೋವಿಯೆಟ್ ಸರಕಾರವು ದಿಮಿಟ್ರೋವಿನ ಸಣ್ಣ ಮನೆಯನ್ನು ಕ್ರೋಪಾಟಕಿನರ ವಿಧವೆಗೆ ಇರಲಿಕ್ಕೂ, ಅವರ ಮಾಸ್ಕೋವಿನ ಮನೆ-ಯನ್ನು ಅವರ ಮಿತ್ರ ಹಾಗೂ ಭಕ್ತರಿಗೂ ಬಿಟ್ಟುಕೊಟ್ಟರು. ಇದರಲ್ಲಿ ಅವರ ಕಾಗದಪತ್ರಗಳೂ, ಅನ್ಯವಸ್ತುಗಳೂ ಸುರಕ್ಷಿತವಾಗಿವೆ. ಸೋಫೀ ೧೯೨೫ರ ತನಕ ಜೀವಿಸಿದ್ದಳು; ಮತ್ತು ಕ್ರೋಪಾಟಕಿನರ ಹೆಸರಿನಲ್ಲಿ ಸ್ಥಾಪಿತವಾದ ವಸ್ತುಸಂಗ್ರಹಾಲಯದ ರಕ್ಷಣೆ ಮಾಡುತ್ತಿ-ದ್ದಳು. ಅನಂತರ ಆ ಸಂಗ್ರಹಾಲಯವೂ ಛಿನ್ನಭಿನ್ನವಾಯಿತು. ಆದರೆ ಸ್ವಾಧೀನತೆಯ ಈ ಅದ್ವಿತೀಯ ಪೂಜಾರಿಯು, ಯುಗ-ಯುಗಗಳ ತನಕ ಅಮರನಾಗಿರುವನು ಅವನ ವ್ಯಕ್ತಿತ್ವವು ಹಿಮಾಲಯದಂತೆ ಮಹತ್ತಾಗಿದೆ; ಅವನ ಆದರ್ಶವಾದವು ಗೌರೀಶಂಕರ ಶಿಖರದಂತೆ ಉಚ್ಚವಾಗಿದೆ.

ತಲೆತಿರುಕನ ಹಾಡು

(ಸರಸ ಕವನ)

ಡಾ. ಶಾಂತಿನಾಥ ದೇಸಾಯಿ, ಎಂ. ಎ. ಮುಂಬಯಿ

ಇದು ಹುಣ್ಣಿಮೆಯ ರಾತ್ರಿ
ಆಕಾಶದ ಹುಣ್ಣಿನೊಲು ಚಂದ್ರ ಹಣ್ಣಾಗಿರುವ
ಜಗದ ಕಣ್ಣಾಗಿರುವ....
ಜಗವೆಲ್ಲ ಮಲಗಿದೆ
ಅಲ್ಲ—
ಮಲಗಿದವರ ಮಲಗದವರ ಅಮಲಿನಲ್ಲಿದ್ದವರ
ಮಲಿನಾವಸ್ಥೆಯ ಹಾಯೆಂದು ಉಸಿರಿಡುವ
ಮಹನೀಯರ ಮಹಿಳೆಯರ
ಮೇಲೆ ಮಲಗಿದೆ ಇರುಳು :
'ಕೂಸೇಕೆ ಅಳುತಲಿದೆ? ಈ ಕೇಸರ, ತಲೆಬೇಸರ....
'ಕದ ತೆಬ್ಬುವ ಸದ್ದು....ಅತಂಕ .. ಹೊದ್ದುಕೊ .... ಈ
ಮುದುಕಿಗೆ ಕೆಮ್ಮು!'
'ಸ್ಟಾಡಿ ಬಂದಾಗುತಿವೆ. ಕೊಡಿರೆಂಟು ಪೆನಿಸಿಲನ್'
'ಕೆರಳಿರುವೆಯೇಕೆ? ಸರಿಯಲ್ಲ ಹತ್ತಿರಕೆ. ಇದೊ ನೋಡು
ಹೊಸಟೀಕೆ.'
'ನಗಿಗೀಸಳ ಹಾಡು—ಸೂರ್ಯೆಯ ಮರಣ—ಎಷ್ಟೊಂದು
ಚೆಂದ.....'
ಈ ವ್ಯಾಪಾರಕೆಲ್ಲ ಇದು ಒಂದು ತಲೆಬುರುಡೆ;
ಈ ನೀರವತೆ, ಈ ಮಲಗುವ ಸೋಗು, ಈ ರಾತ್ರಿ.
ಜಗವೆಲ್ಲ ಮಲಗಿದೆ.
ನನ್ನ ತಲೆಬುರುಡೆಯಲಿ ಬಡಿಯುತಿದೆ ತಮರು—
ಹುಚ್ಚೆದ್ದು ನರ್ತಿಸುವ ಶಂಕರನ ಡಮರು.
'ಜಗವೆಲ್ಲ ಎಚ್ಚರಿಸಿ, ಬೆಚ್ಚಗಿನ ಸೋಗನ್ನು
ಹರಿದೊಗೆದು ಪ್ರಕ್ಷುಬ್ಧಗೊಳಿಸಲೇಂ'
ಎಂಬ ಆಕ್ರಂದನ — ನನಗೇಕೆ ಬಂಧನ?
ಜಗವೇಕೆ ನನಗೆ? ಬೇಡ ಆ ವ್ಯಾಪಾರ
ಜಗವೊಂದು ಸಂತೆ....

ಆ ಸಂತೆಗದ್ದಲಲಿ ಕೈಕೊಸರಿಕೊಂಡಿರುವ ಕೂಸು ನಾನು
ಅತ್ತತ್ತರೇನು ಬಂತು?
'ಆ ಚಂದ್ರ, ಆ ಚಂದ್ರ ಬೇಕೆನಗೆ' ಅತ್ತಣಾ ರಾಮ!
'ಆ ಚಂದ್ರ ಬೇಕು. ಆ ಚಂದ್ರ ಬೇಕು'
ಕೆಲ ಜನರು ಕೇಳಿದರು ನನ್ನ ಆಕ್ರಂದನ;
'ಹುಚ್ಚು ಕೂಸು ಪಾಪ—ಬೇಕೇನು ಕಾಸು!' ಎಂದಂದು
ನಡೆದರು.
ಅದಂದೊ ಕೈಕೊಡುತಲಿಹ ಒರ್ವ ಬುದ್ಧಿವಂತ
ಅವನ ಕೈ ಕಡಿದೆನಹ—ಕೇಳಿ ಅವನ ಬೈಗುಳ
ನನಗೇಕೆ ಯಾರ ಕೈ?
ನನಗಿಲ್ಲವೇನು ಈ ನನ್ನದೇ ತಲೆಬುರುಡೆ, ಬುರುಡೆಯಲಿ
ಮೆದುಳು?
ಈ ತಲೆ ಬುರುಡೆಯ ವ್ಯಾಪಾರ ಈ ಜಗಕೂ ಮೀರಿಹುದು:
ಅಲ್ಲಿಹುದು ರೌರವದ ವ್ಯಾಪಾರ....
ದೂರದಲಿ ಸ್ವರ್ಗಕ್ಕೆ ಸೋಪಾನ ಮಿಂಚುವುದು
ಮುರಿಯುವುದು ಕರಗುವುದು...
ಮಧ್ಯದಲಿ ಸಂತತವು ನಡೆದಿಹುದು
ಮಹಾರುದ್ರನ....ನಗ್ನ....ನರ್ತನ—!
ಅಲ್ಲಿ–ನಿದ್ರೆಯು ಹಕ್ಕಳೆಯಿಲ್ಲ; ಇಲ್ಲ ಸ್ವಪ್ನದ ಮಲಾಮಪಟ್ಟಿ.
ಎಲ್ಲ ನಿಚ್ಚಳ, ತೊಳೆದ ಹುಣ್ಣಿನಂತೆ
ಈ ಚಂದ್ರನಂತೆ.
ಸುಡುತಲಿದೆ ತಲೆಬುರುಡೆ
ಶಿವನ ಕಣ್ಣಿನಂತೆ—ಸುಡುವ ಕೆಂಡದಂತೆ—ಉರಿವ
ಸುಣ್ಣದಂತೆ
ಹುಣ್ಣಿಮೆಯ ರಾತ್ರಿಯಲಿ—
ಎಲ್ಲಿಹಳು ಗಂಗೆ?

ಹುಡುಗರ ಆಟ

(ಚಿಕ್ಕವರಿಗಾಗಿ ಒಂದು ನಗೆಯಾಟ)

ಆ. ಬೆಟಗೇರಿ ಕೃಷ್ಣಶರ್ಮ, ಧಾರವಾಡ

ಪಾತ್ರಪರಿಚಯ

ಯಂಕ—ಮಂಕ—ಕಣಕ್ಕಾ—ರುಮಣಕ್ಕಾ

[ನಾಲ್ವರೂ ಒಂದೆ ತರಗತಿಯಲ್ಲಿ ಓದುವ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು. ಈ ಹೆಸರುಗಳು ಅವರ ನಿಜವಾದ ಹೆಸರುಗಳಲ್ಲ. ತರಗತಿಯಲ್ಲಿ ಒಬ್ಬರಿಗೊಬ್ಬರು ಚೇಷ್ಟೆಗಾಗಿ ಇಟ್ಟಿದ ಹೆಸರುಗಳು. ನಿಜವಾದ ಹೆಸರುಗಳು ಮರೆಯಾಗಿ, ಇವೇ ಹೆಸರುಗಳೇ ಇವರಿಗೆ ಬಿದ್ದು ಬಿಟ್ಟಿವೆ.]

(ರಂಗದ ಒಂದ ಪಕ್ಕದಿಂದ ಯಂಕ-ಮಂಕ ಇಬ್ಬರೂ ಹಾಡುತ್ತ ಬರುವರು)

ಯಂಕ-ಮಂಕ :— ಸೊಂಡೀ ಗಣಪ್ಪ ಬಂದಿದ್ದ....
ಉಂಡೀ ಕಡಬೂ ತಂದಿದ್ದ ...
ತಿನ್ನೂತನಕಾ ತಿಂದಿದ್ದ
ಕೆರ್ಯಾಗ ಧಡಂ ಬಿದ್ದಿದ್ದ.... ||

(ಇಬ್ಬರೂ ರಂಗದ ಕಡುಕೆ ನಿಂತು ನಗುವರು)

ಯಂಕ :— ಯಾಕಲೇ ಮಂಕ್ಯಾ, ನಿಮ್ಮ ಮನ್ಯಾಗ ಗಣಪ್ಪನ್ನ ಕೂಡಿಸಿದ್ದರೋ ಇಲ್ಲೋ?

ಮಂಕ :— (ಹುಚ್ಚುನುಡಿಯುಲ್ಲಿ) ನಮ್ಮ ಮನ್ಯಾಗ .... ನಮ್ಮ ಮನ್ಯಾಗ.....ನಮ್ಮ ಅಪ್ಪ ಕೂಡಿಸಿದ್ದನಲ್ಲಾ ಮಾಡದಾಗ!

ಯಂಕ :— ಯಾರನ್ನ? ನಿನ್ನ ಕೂಡಿಸಿದ್ದನೇನಲೇ ನಿಮ್ಮಪ್ಪ ಮಾಡದಾಗ?

ಮಂಕ :— ಛೇ, ಹೋಗೋನಿನ! ನನ್ನ ಹ್ಯಾಂಗ ಕೂಡಸತಾರೋ ಮಾಡದಾಗ? ನನ್ನ ಹಿಡಿಸುವಂಥಾ ಮಾಡ ನಮ್ಮ ಮನ್ಯಾಗ ಇಲ್ಲಽ ಇಲ್ಲ.

ಯಂಕ :— ಹಾಂಗಾದರ ಅಂಥಾ ಮಾಡ ಇದ್ದರ, ನಿನ್ನಽ ಕೂಡಿಸಿ ಬಿಡತಿದ್ದನನ್ನು ನಿಮ್ಮ ಅಪ್ಪ!

ಮಂಕ :— ಹೋಗೋ, ನನ್ನ ಹ್ಯಾಂಗ ಕೂಡಸತಾರೋ? ನನಗೇನು ಸೊಂಡಿ ಅದಽನಽ—ದೊಡ್ಡ ಹೊಟ್ಟೆ ಅದನಽ ... ನಾಕು ಕೈ ಅವನಽ....ನನಗ ಇಲೀ ಮ್ಯಾಲ ಕೂಡಲಿಕ್ಕೆ ಬರತಾದ?

ಯಂಕ :— ಇದ್ಯಾವುದೂ ಇಲ್ಲದಿದ್ದರೂ ಕಡಬು ತಿನ್ನಲಿಕ್ಕೆ ಬರತಽದೋ ಇಲ್ಲೋ ನಿನಗ? ಗಣಪ್ಪಗ ಇಪ್ಪತ್ತೊಂದು ಕಡಬು ಬೇಕಾದರ, ನಿನಗ ನಾಲ್ವತ್ತೈರಡು ಕಡಬು ಬೇಕಾಗ ತಾವಂತ!

ಮಂಕ :— ಹೋಗೋ ನಿನ! ಅಷ್ಟೇನು ತಿಂತೀನೋ ನಾನು! ನಿನಗ್ಯಾರು ಹೇಳಿದರು?

ಯಂಕ :— ನಿಮ್ಮ ಅವ್ವನಽ ಹೇಳತಿದ್ದಳು. 'ನಮ್ಮ ಮಂಕ ಕಡಬು ತಿನ್ನಲಿಕ್ಕೆ ಕೂತರ, ಇಪ್ಪು ಅಪ್ಪು ಅಂತ ಲೆಕ್ಕನ ಉಳಿಯೂದಿಲ್ಲ' ಅಂತ.

ಮಂಕ :— ಲೆಕ್ಕ ಉಳಿಯೂದಿಲ್ಲಂತ ಅಲ್ಲೋ.....ಲೆಕ್ಕನೂ ನನಗ ತಿಳಿಯೂದಿಲ್ಲ ಅಂತಾಳ ನಮ್ಮ ಅವ್ವ. ಮೊನ್ನೆ ಏನಾತಂತೀ? ನಮ್ಮ ಮನ್ಯಾಗ ಕಡಬು ಮಾಡಿದ್ದರಲಾ! ಮಧ್ಯಾಹ್ನಕ ಸಂಜೆಗೆ ಕೂಡಿಸಿ ಎಷ್ಟು ಕಡಬು ತಿಂದಿ?—ಅಂತ ಅವ್ವ ಕೇಳಿದಳು. ನನಗ ಬರಾಬರಿ ಸಂಖ್ಯಾ ಕೂಡಿಸಿ ಹೇಳಲಿಕ್ಕೆ ಬರಲಿಲ್ಲೇನಪಾ!

ಯಂಕ :— ನೀನೂ ಲೆಕ್ಕದಾಗ ಪಂಡಿತ ಮಗಾನಽ ಇದ್ದೀದಿ ಅಂಬೂದು ನಿಮ್ಮ ಅವ್ವಗೂ ಗೊತ್ತಾಗೇದ ಅಷ್ಟು. ಮೂರು ಕೋಳಿಗೆ ಕಾಲೆಷ್ಟು ಅಂತ ಕೇಳಿದರ, ಹನ್ನೊಂದು ಅಂತ ಹೇಳಿದ ಶಾಣ್ಯಾ ನೀನು! ಅದಾಯ್ತಪಾ, ಪಟಾಕ್ಷೀ-ಗಿಟಾಕ್ಷೀ ಹಾರಿಸಿದ್ಯೋ ಇಲ್ಲೋ?

ಮಂಕ :— ಅದರ ನೆನಪು ತಗೀಬ್ಯಾಡ ನೋಡು ನೀಕ್ಷು. ಪಟಾಕ್ಷೀ ಅಂಬೂ ಶಬ್ದ ನನ್ನ ಕಿವಿಗೆ ಬಿದ್ದರ, ನನ್ನ ಕೈಕಾಲು ಕಡಗ ತಾವ!

ಯಂಕ :— ಯಾಕೋ ಹೀಂಗ್ಯಾಕ? ಪಟಾಕ್ಷಿಗೆ ಹೆದರಾಂತ ಎಂಥಾ ಹುಡುಗನೋ ನೀನು?

ಮಂಕ :— ಬ್ಯಾಡ ಮಹರಾಯಾ,...ಅದರ ಸಂಗತೀನ ಬ್ಯಾಡ. ಅದಕ್ಕಽ ನನ್ನ ಪಾಲಿನ ಪಟಾಕ್ಷೀ ಎಲ್ಲಾ ನಮ್ಮ ಅಣ್ಣಾವ್ರಗ ಕೊಟ್ಟುಬಿಟ್ಟೆ. ಅಂವ ಅವನ್ನ ಹಾರಿಸೂವಾಗ, ನಾನು ಮನ್ಯಾಗ ಸುದ್ದಾ ಇರತಿದ್ದಿಲ್ಲ. ಅಲ್ಲೋ, ಯಂಕಾ! ಪಟಾಕ್ಷೀ-ಪಟಾಕ್ಷೀ-ಅಂತ ಅತ್ತು ಕರದು ಅಪ್ಪನ ಕಡಿಂದ ಕೊಂಡಿಸಿಕೊಂಡಿ; ಅದರ ಸಪ್ಪಳಕ್ಕ ನಿನಗ ಹೆದರಿಕಿ ಬರಲಿಲ್ಲೇನಲೆ!

ಯಂಕ :— ಹೋಗೋ ಮಳ್ಳ, ಪಟಾಕ್ಷೀ ಮೋಜು ನಿನಗೇನು ಗೊತ್ತು! ಬರೇ ಕತಬಿನ ಗೆಣ್ಯಾ ನೀನು! ಠಬ್ ಅಂತ ಸಪ್ಪಳಾದರ, ಹಾಂಗಽ ನನ್ನ ಮೈ ಉಬ್ಬಲಿಕ್ಕೆ ಹತ್ತೂದ! ಪಟಾಕ್ಷೀ ಆಟ....ಒಂದು ಎರಡು! ಮೊನ್ನೆ ಏನಾತಂತೀ! ಆ ರುಮಣಕ್ಕಾನ ಮನೀ ಕರೇನಾಯಿ ಇಲ್ಲ.? ಅದರ ಕೊರಳಿಗೆ ಪಟಾಕ್ಷೀ ಸರಾ ಕಟ್ಟಿದೆ. ಬಾಗಿಲ ಹತ್ತರ ನಿಲ್ಲಿಸಿ, ಊದಿನಕಡ್ಡೀ ಹಚ್ಚಿದೆ. ಕೇಳತೀಯಾ ಮೋಜು! ಠಬ್ ಠಬ್ ಅಂತ ಪಟಾಕ್ಷಿ ಹಾರಲಿಕ್ಕೆ ಹತ್ತಿದೂ. ನಾಯಿ ಫಾಬರ್ಯಾಗಿ ಮನಿತುಂಬಾ ಓಡಾಡಲಿಕ್ಕೆ ಹತ್ತಿತು. ಅಡಿಗೀಮನ್ಸಿ, ದೇವರಮನೀ ಒಂದೂ ಉಳಿಯಲಿಲ್ಲ. ರುಮಣಕ್ಕಾನ ಅವ್ವ ನನ್ನ ಬೈಯಲಿಕ್ಕೆ ಹತ್ತಿದರು.

ಮಂಕ :— ನೋಡಪಾ, ನಾಯಿಯಂಥಾ ನಾಯಿ ಹೆದರಿಕಿಂದ ಮ್ಯಾಲ ನಾನು ಹೆದರೂದರೊಳಗ ತಪ್ಪೇನು? ಅದಕ್ಕಽ ನಾ ಹೇಳದೆ ನಮ್ಮ ಅಣ್ಣಾವ್ರಗ....'ನನ್ನ ಪಾಲಿನ ಪಟಾಕ್ಷೀ ನೀ ತೊಗೋ, ನಿನ್ನ ಪಾಲಿನ ಕಡಬು ನನಗ ಕೊಡು' ಅಂತ. ಅಂವ ಬೆಂಕಿ

ಅಗಲೀ ಅಂತ ಪಟಾಕ್ಷೀ ಮಾತ್ರ ತೊಗೊಂಡ.... ಕಡಬು ಕೊಡಲೇ ಇಲ್ಲ.

ಂಗದ ಇನ್ನೊಂದು ಬದಿಯಿಂದ ಝುಣಕ್ಯಾ ಕಣಕ್ಯಾ ಹಾಡುತ್ತ ಬರುವರು

ಝುಣಕ್ಯಾ-ಕಣಕ್ಯಾನ ಹಾಡು

ಸಾಲೀ ಸಾಲೀ ಸಾಲೆವ್ವಾ — ಎಲ್ಲಾ
ಹುಡುಗರ ತಲೆಗೇ ಸೂಲೆವ್ವಾ !
ದಿನ ದಿನ ನಿಂದೊಂದು ಕಾಟವ್ವಾ — ನಿನ್ನ
ನೆನೆದರ ಎದೆಗೊಂದು ಏಟವ್ವಾ ॥

ಯಂಕ—ನೋಡೋ ಮಂಕ್ಯಾ! ಝುಣಕ್ಯಾ ಕಣಕ್ಯಾ ಬಂದರು. ಈ ಮಕ್ಕಳಿಗೆ ಸಾಲೆಂದರ ಬ್ಯಾಡ ನೋಡು! ಬೇಕವರಿಗೆ ಊಟ-ಆಟ!

ಂಕ- ಬಾರೋ ಝುಣಕಣಕ್ಯಾ, ಇಸ್ಕೊತ್ತಾ?ೃಳಕ ಆಯ್ತು? ಎರಡಕ್ಕ ಬರಲಿಕ್ಕೆ ಹೇಳಿಲ್ಲೇನಲೇ ಮಾಸ್ತರು ನಮಗ ?

ಝುಣಕ್ಯಾ— ಮುಂಜಾನಿಂದ ನೋಡತೀನಿ ...ನಮ್ಮ ಮನೀ ಗಡ್ಯಾಳ ಎರಡು ಹೊಡೆಯುತ್ತವೊಲ್ಲದು. ಅದು ಎರಡು ಹೊಡದ ಮ್ಯಾಲೆ ಹೊರಡಬೇಕಂತ ಮಾಡಿದ್ದೆ.....

ಯಂಕ-ಕಡೀಕ ಯಾರು ಎರಡು ಹೊಡದರಂತ ಹೊರಟ ? ಅಲ್ಲಲೇ, ನಿಮ್ಮ ಮನೀ ಗಡ್ಯಾಳ ನಿಂತುಹೋಗಿ ಎರಡು ವಾರಾತ್ಯು; ಅಧ್ಯಾಂಗ ಎರಡು ಹೊಡೀತ್ಯದಲೇ ?

ಝುಣಕ್ಯಾ— ಗಡ್ಯಾಳ ನಿಂದರತ್ತದ ಹ್ಯಾಂಗಲೇ ? ದಿನದ್ದಾಂಗ ಗೋಡೆಗೆ ಹೊಂದಿ ಕೂತ್ತದ! ನಿಂತರ ಗಡ್ಯಾಳ ಗಂಟೇ ಹೊಡಿಯೂದಿಲ್ಲೇನು? ಹಾಂಗಾದರ ನಮ್ಮ ಸಾಲೀ ಸಿಪಾಯಿ ಸಿದ್ದಪ್ಪ, ನಿಂತುಕೊಂಡೇ ಗಂಟೇ ಹೊಡೀತಾನಲಾ!

ಯಂಕ—ಭಪ್ಪರೆ, ಝುಣಕ್ಯಾ! ಝುಣಕಾ ಅನ್ನಾ ತಿಂದು ತಿಂದು, ನಿನ್ನ ಮಿದುಳೊಳಗ ಎಲ್ಲಾ ಕಡ್ಲೀ ಹಿಟ್ಟು ತುಂಬಿಕೊಂಡ್ಹಾಂಗ ಕಾಣಿಸತ್ತದ! ನಿಮ್ಮ ಮನೀ ಗಡ್ಯಾಳ ನಿಂತು ಹೋಗೂದಕ್ಕ, ಸಾಲೀ ಸಿದ್ದಪ್ಪ ನಿಂತು ಗಂಟೇ ಹೊಡಿಯೂದಕ್ಕ - ಏನು ಸಂಬಂಧೋ ?

ಕ್ಯಾ—ಏನು ಸಂಬಂಧ ಅಂದರ! ಇವರ ಮನೀ ಗಡ್ಯಾಳ ಹೊಡಿಯೂದು ಗಂಟೇನ್ನ.... ಸಾಲೀ ಸಿದ್ದಪ್ಪ ಹೊಡಿಯೂದೂ ಗಂಟೇನ್ನ! ಇವರ ಮನೀ ಗಡ್ಯಾಳ ಎರಡು ಹೊಡೀಲಿಲ್ಲಂತ; ಅದಕ್ಕ ನಾನೇ ಹೋಗಿ ಎರಡು ಹೊಡದು ಇವನ್ನ ಎಬ್ಬಿಸಿದೆ. ಎದ್ದ ಮ್ಯಾಲ ಅಂತಾನ: ಎರಡಕ್ಕ ಹೋಗಬೇಕೋ—ಅಂತ, ನಾನು ಅದಕ್ಕೇ ಬಂದೀನೋ ಅಂತ ಅಂದೆ. (ನಗುತ್ತ) ಆಗ ಝುಣಕ್ಯಾ ಏನಂದನಂತೀ: ನೀನೂ ಎರಡಕ್ಕ ಹೋಗಬೇಕ? ಹಾಂಗಾದರ ಮೊದಲು ನಾ ಹೋಗಿ ಬರತೀನಿ ... ಆ ಮ್ಯಾಲ ನೀನು ಹೋಗೀಯಂತ!

(ಯಂಕ-ಮಂಕ ಇಬ್ಬರೂ ಗಟ್ಟಿಯಾಗಿ ನಗುವರು.)

ಕ್ಯಾ-ಇನ್ನೂ ಮುಂದ ಕೇಳು! ಮಹಾರಾಯ, ಎಷ್ಟು ಝುಣಕಾ ತಿಂದಿದ್ದನೋ ಏನು ಮಣ್ಣೋ.... ...ಎರಡಕ್ಕ ಹೋದಾಂವ ಸೂರು ಹೊಡದರೂ ಹೊರಗ ಬರಲಿಲ್ಲ ಆ ಮ್ಯಾಲ ನಾನೇ ಹಿತ್ತಲಕ್ಕ ಹೋಗಿ, ಬಾಗಿಲಾ ಬಡಿದು ಎಬ್ಬಿಸಿದೆ.

ಯಂಕ—ಉಳದದ್ದ ನಿದ್ದೀ ಪಾಯಖಾನ್ಯಾಗ ಹುಗಿಸಿದಿ ಏನಲೇ ಝುಣಕ್ಯಾ !

ಝುಣಕ್ಯಾ— ಎಲ್ಲಿ ನಿದ್ದೆಲೇ! ನಾ ಹೊಂಟು ನಿಂತಾಗ, ಕುಂಟೆ ಕೋತ್ತ ಬಂದ ಈ ಕಣಕ್ಯಾ, ಇಲ್ಲಿ ಪಂಟು ಕೊಜ್ಜಲಿಕ್ಕೆ ಹತ್ಯಾನ! ಸಂಜಕೇನೋ ಇವರ ಮನ್ಯಾಗ ಗುಳ್ಳವ್ವಂದೋ ಜೋಕಮಾರಂದೋ ಪೂಜಿ ಅದ್ಕ ಅಂತ. ಅದಕ್ಕ ಕರಿಕಿ-ಪತ್ರಿ ತರಲಿಕ್ಕೆ ಕೆರೀದಂಡೀಕಡೆ ಕೋಗೋಣ ಅಂತ ನನ್ನ ಕರೀಲಿಕ್ಕೆ ಬಂದಿದ್ದ. ನಾನೇ ಸಾಲಿಗೆ ಹೋಗೂದರ ನೆನಪು ಮಾಡಿದೆ. ನಿರ್ವಾಹ ಇಲ್ಲದೇ ಹೊಂಟುಬಂದಾನ ಈಗ.

ಮಂಕ—ಇವನ್ನ ನೀ ಕರಕೊಂಡು ಬಾ೦ದಿ. ಮತ್ತ ಮನ್ಯಾಗ ಕರಿಕೀ ಪತ್ರಿ ?

ಯಂಕ—ಅಹಾ! ಕಣಕ್ಯಾನ ಮ್ಯಾಲ ನಂಬಿ ಕರಿಕೀ ಪತ್ರೀ ಬಿತ. ತಾರೇನ ಇವರ ಅಪ್ಪಾ ಅವ್ವಾ ? ಸಾಲೀ ತಪ್ಪಸಲಿಕ್ಕೆ ಏನಾದರೂ ಒಂದ ನೆವಾ ಬೇಕಂತ, ಕರಿಕೀ ಪತ್ರಿ ಬೇಕಾಗೇದ ಇವಗ!

ಕಣಕ್ಯಾ—ಭಪ್ಪರಿ, ಯಂಕ್ಯಾ! ನನ್ನ ಮನಸನ್ನ ಕಂಡು ಹಿಡಿದಾವ ನೀ ಒಬ್ಬನೇ ನೋಡಲಾ! ಸಾಲೀ ಪಾತಾನ: ಮಾಡಲಿಕ್ಕೆ ನನ್ನ ಕಡಿಂದ ಆಗೂದಿಲ್ಲ! ಇನ್ನ ನಾಟಕದೊಳಗಿನ ಮಾತು ಯಾಂವ ಪಾಠ ಮಾಡಬೇಕಪಾ

ಯಂಕ—ಇಂಥಾವಾ ಮಾಸ್ತರ ಮುಂದ ಒಪ್ಪಿಗೊಂಡಿ ಯಾಕಪಾ ನಾಟಕದೊಳಗ ನಾನೂ ಬರತೀನಂತ !

ಕಣಕ್ಯಾ—ಮುಂದಿ ನಾಟಕಾ ಮಾಡೂನುಂದ, ನನಗೂ ಅನಿಸತ್ತದ: ನಾನೂ ನಾಟಕದೊಳಗ ಭಾಗ ತೊಗೋಬೇಕಂತ. ಅವತ ನಾಟಕಾ ಮಾಡಿದ ಮ್ಯಾಲ ಮಾತು ಪಾಠ ಮಾಡಲಿಕ್ಕೇ ಬೇಕಲ್ಲಾ !

ಝುಣಕ್ಯಾ—ಯಂಕ್ಯಾ, ಮಾಸ್ತರಿಗೆ ಹೇಳಲೇ: ಈ ಸಾರೀ ಮಾತಿಲ್ಲದ ನಾಟಕಾ ಬರದು ಕೊಡ್ರೀ ಅಂತ! ಅಂದರ ಪಾಠ ಮಾಡೂ ಕಾಟಾನೇ ಇಲ್ಲ ಯಾರಿಗೂ !

ಮಂಕ—ಝುಣಕ್ಯಾನ ಮಾತಿಗೆ ನಂದೂ ಒಪ್ಪಿಗಿ ಅದ ಏನಪಾ !

ಯಂಕ—ಅಯ್ತು ಬಿಡ್ರಿ, ನಿಮ್ಮಂಥವರನ್ನ ಕಟಗೊಂಡು ನಮ್ಮ ಮಾಸ್ತರು, ನಾಟಕಾ ಅಡಿಸಿದ್ರು, ಜನಾ ನೋಡಿದರು—ಎಲ್ಲಾ ತಿಳಿದ್ಹಾಂಗ್ಯ ಆತು. ಯಾವಾಗ ಎರಡು ಗಂಟೇಕ್ಕ ನಮಗ ಬರಲಿಕ್ಕೆ ಹೇಳಿದ್ದರು; ಈಗ ನಾಕು ಹೊಡದರೂ ಇಲ್ಲೇ ಇದ್ದೀವಿ ಇಲ್ಲೇ ನಮ್ಮ ನಾಟಕ ಮುಗದ ಹೋತು ಮಂಕ್ಯಾ, ನೀ ಇನ್ನ ನಿಮ್ಮ ಮನೀ ಕಡೆ ಜಿಗಿ ಕಡಬಿನ ಲೆಕ್ಕಕ್ಕ. ಕಣಕ್ಯಾ; ನೀನು ಝುಣಕ್ಯಾನ್ನ ಕರಕೊಂಡು ಕರಿಕೀ ಪತ್ರೀ ತರಲಿಕ್ಕೆ ಹೋಗಿಬಿಡು! ನಾನು ಒಬ್ಬನೇ ಹೋಗಿ ಮಾಸ್ತರಿಗೆ ಹೇಳತೀನಿ: ' ಮಾಸ್ತರ, ವಿದ್ಯಾರ್ಥಿದಿನಾಚರಣೆಯೊಳಗ ಹುಡುಗರ ನಾಟಕಾ ಅಡೂದೇನೂ ಬ್ಯಾಡ.....ಪಾಂಗ: ಹುಡುಗರ ಆಟಾ ಅಡಿಸಿಬಿಡ್ರಿ ' ಅಂತ. ಇಲ್ಲಿ ಮಾತಾಡಿದ್ದನ್ನೆತ್ತ ಅಂದ ಅಲ್ಲಿಯೂ ಮಾತಾಡಿ ಬಿಡೂಣು ಆತು ಅಂದರ ಮಾತು ಪಾಠ ಮಾತೂ ಕಾರಣನೇ ಇಲ್ಲ ರೇ ಕೇಳಿ ಹುಡುಗರ ಆಟ!

(ತೆರೆ ಬೀಳುವುದು)

ಪಂಚವಾರ್ಷಿಕ ಯೋಜನೆ

ಶ್ರೀ. ವೀ. ಸಿ. ಹಿತ್ತಲಮನಿ, ಬಿ ಎಸ್‌ಸಿ. (ಆಗ್ರಿ) ಆನರ್ಸ್ ಧಾರವಾಡ

ಲೇಖಾಂಕ ೬

ರಾಷ್ಟ್ರದಲ್ಲಿ ಸರ್ವತೋಮುಖವಾದ ಶಾಂತಿಸಮೃದ್ಧಿಗಳು ನೆಲಸಬೇಕಾದರೆ, ಅದರಲ್ಲಿಯ ಜನತೆಯ ಜೀವನದ ಪ್ರತಿಯೊಂದು ಸೌಕರ್ಯದ ಕಡೆಗೂ ದೃಷ್ಟಿಯಿರಿಸಬೇಕಾಗುತ್ತದೆ. ಭಾರತದ ಪಂಚವಾರ್ಷಿಕ ಯೋಜನೆಯು ಈ ದೃಷ್ಟಿಯಿಂದಲೇ ನಿರ್ಮಾಣವಾದುದಾಗಿದೆ.

ಮಜದೂರ್

ಮಜದೂರರ ಕಲ್ಯಾಣ ಸಾಧಿಸಬೇಕು; ನಾಡಿನ ಆರ್ಥಿಕ ಸ್ಥಿತಿಯೂ ಬಲಗೊಳ್ಳಬೇಕು–ಈ ದೃಷ್ಟಿಗಳನ್ನಿಟ್ಟುಕೊಂಡು ಮಜದೂರ ಸಮಸ್ಯೆ ಬಿಡಿಸಬೇಕಾಗಿದೆ. ಅವಶ್ಯಕ ಮೂಲಭೂತ ಬೇಡಿಕೆಗಳಾದ ಅನ್ನ, ಅರಿವೆ, ಆಶ್ರಯಗಳ ವ್ಯವಸ್ಥೆ ಮಾಡಬೇಕು; ಆರೋಗ್ಯವಂತ-ನಾಗಿ ಮಜದೂರರು ಬಾಳಬೇಕು; ಸಾಮಾಜಿಕ ಭದ್ರತೆ ಬೇಕು; ಉತ್ತಮ ಶಿಕ್ಷಣ, ಮನೋರಂಜನ, ಸಾಂಸ್ಕೃತಿಕ ಸೌಕರ್ಯಗಳ ಏರ್ಪಾಡಾಗಬೇಕು. ಅವನ ಕೆಲಸದ ಪರಿಮಿತಿ ಆರೋಗ್ಯಕ್ಕೆ ಭಂಗ ತರಬಾರದು; ಗೌರವದಿಂದ ಒಡೆಯರು ನಡೆಯಿಸಿಕೊಳ್ಳಬೇಕು. ನಿಷ್ಪಕ್ಷಪಾತವಾದ ನ್ಯಾಯದಾನಕ್ಕೆ ಅಸ್ಪದವಿರಬೇಕು. ಕೊನೆಯ-ದಾಗಿ ಹಕ್ಕು ಮತ್ತು ಹಿತಸಂಬಂಧಗಳನ್ನು ಪಡೆಯಲು ಸಂಘಟನೆ ಮಾಡಿಕೊಳ್ಳಲಿಕ್ಕೂ, ನ್ಯಾಯಬದ್ಧ ಸಾಧನೆ ಉಪಯೋಗಿಸಲಿಕ್ಕೂ ಸ್ವಾತಂತ್ರ್ಯವಿರಬೇಕು. ಈ ಎಲ್ಲ ಹಕ್ಕುಗಳ ಉಲ್ಲೇಖ ರಾಜ್ಯ ಘಟನೆಯಲ್ಲಿದೆ. ಸರಕಾರ ಈ ಕಾರ್ಯದಲ್ಲಿ ಉತ್ಸುಕತೆಯಿಂದ ಕಾರ್ಯ ನಡೆಯಿಸಿದೆ. ಕಾರಖಾನೆ, ವ್ಯಾಪಾರೀ ಸಂಘಗಳವರು ದುರಂತ ಕಾಲದಲ್ಲಿ ಪರಿಹಾರನೀಡುತ್ತ ಬಂದಿದ್ದಾರೆ. ಭೂಮಿಯಿಲ್ಲದ ಮಜದೂರರಿಗೆ ಮನೆ, ವಸತಿಗಳಿಗೆ ಖರ್ಚು ಮಾಡುವ ಹಣವಲ್ಲದೆ ಯೋಜನೆಯ ಅವಧಿಯಲ್ಲಿ ಮಜದೂರ ಕಲ್ಯಾಣಕ್ಕಾಗಿ ೬-೭ ಕೋಟಿ ರೂಪಾಯಿ ವೆಚ್ಚ ಮಾಡಲಾಗುವುದು.

ಉಂಡವಾಳಗಾರರಕ್ಷೇಯೂ ಮಜದೂರರಲ್ಲಿಯೂ ಸಾಮರಸ್ಯ ಪೂರ್ಣ ಮಧುರ ಸಂಬಂಧವಿರಬೇಕು. ಔದ್ಯೋಗಿಕ ಶಾಂತಿಯನ್ನೇ ಆರ್ಥಿಕ ಪ್ರಗತಿ ಅವಲಂಬಿಸಿದೆ. ಒಬ್ಬರೊಬ್ಬರ ಸಂಬಂಧ ಪಾಲುಗಾರರಂತಿದ್ದು, ನಾಡಿನ ಆರ್ಥಿಕ ಗತ್ಯಶೀಪೂರಯಿಸಲು ಸದಾ ಹಂಬಲಿಸು-ವಂತಿರಬೇಕು. ಬಿಕ್ಕಟ್ಟು ಬಂದಲ್ಲಿ ಪರಸ್ಪರ ಚರ್ಚೆ ನಡೆಯಿಸಿ, ಇಲ್ಲವೆ ಮಧ್ಯಸ್ಥಿಕೆಗಾರರ ಸಲಹೆಯ ಮೇರೆಗೆ ನಡೆಯಬೇಕು. ಕೊನೆಯ ಗಳಿಗೆಯಲ್ಲಿ ಸರಕಾರವು ಕೂಡ ಕೈಹಾಕಿ ನ್ಯಾಯವಾ ಮಾಡಬೇಕು.

ಸರಕಾರೀ ಒಡೆತನ ಇಲ್ಲವೆ ಸಾರ್ವಜನಿಕ ಒಡೆತನದಲ್ಲಿ ಲಾ ಪ್ರಶ್ನೆಯೇ ಇಲ್ಲ. ಮಜದೂರ ಒಡೆಯನೂ ಆಹುದು; ಆ ಆಹುದು. ನಾಗರಿಕನಾಗಿ ಒಡೆಯನಾಗುತ್ತಾನೆ. ಕೆಲಸಗಾರ ಆಳಾಗುತ್ತಾನೆ.

ಮಜದೂರರ ಸಂಘಟನೆ, ಸಂಘ–ಸಂಸ್ಥೆ, ಕೂಲಿ, ಸಾಮಾ ಭದ್ರತೆ, ದುಡಿತದ ಅವಧಿ, ಬಿಡುವು, ತರಬೇತಿಗಳ ಬಗೆಗೂ ಯೋ ಅವಕಾಶವೀಯಲು ಯೋಜನೆಯಲ್ಲಿ ಒತ್ತಿ ಹೇಳಲಾಗಿದೆ. ಮಜದು ಉತ್ಪಾದನೆಯು ಕ್ರಮೇಣ ಕಡಿಮೆಯಾಗುತ್ತ ನಡೆದಿರುವುದು ತೊ ಬರುತ್ತದೆ. ಇದನ್ನು ಹೆಚ್ಚಿಸಲು ಉದ್ಯೋಗಾಂತರ್ಗತ ತರಬೆ ಯೋಜನೆಗಳನ್ನು ಸಂಘಟಿಸಬೇಕು

ವಸತಿ

ಜನರು ತಮಗೆ ಬೇಕುಬೇಕಾದಂತೆ ಮನೆಗಳನ್ನು ನಿರ್ಮಿಸ ತ್ತಿದ್ದರೂ ವಸತಿಸೌಕರ್ಯ ಸಾಕಷ್ಟಿಲ್ಲ. ಬಾಡಿಗೆ ನಿಯಂತ್ರಣ ಒತ್ತಾಯದಿಂದ ಕಟ್ಟಡ ಸ್ವಾಧೀನಪಡಿಸುವುದು ಇವೇ ಮೊದಲಾ ಕಾರ್ಯಗಳಿಂದ ಅನೇಕರು ಮನೆಗಳನ್ನು ಜೋರಿನಿಂದ ಕಟ್ಟಿಸುವುದು ಕಡಿಮೆ ಮಾಡಿದರು. ಯುದ್ಧದ ಪರಿಣಾಮವಾಗಿ ಕೂಲಿದರ, ಸಾ ಸಾಮಗ್ರಿಯ ದರ ಏರಿದ್ದರಿಂದಲೂ, ನಿರಾಯಾಸವಾಗಿ ದೊರೆಯು ರಿಂದಲೂ ಕಟ್ಟಡಗಳನ್ನು ಕಟ್ಟಿಸುವುದು ಕಡಿಮೆಯಾಯಿತು. ಹ ಗಳನ್ನುಳಿದು ಅನೇಕರು ಪಟ್ಟಣಗಳಿಗೆ ಜೋಗಲಿಕ್ಕೆ ಹತ್ತಿದ ಮನೆಗಳ ಕೊರತೆ ಪಟ್ಟಣಗಳಲ್ಲಿ ಅತಿಯಾಯಿತು. ರಾಷ್ಟ್ರದ ವಿಭ ದಿಂದ ಅನೇಕ ನಿರಾಶ್ರಿತರು ಬಂದುದರ ಪರಿಣಾಮವಾಗಿ ಈ ಸಮ ಅತಿ ಬಿಕ್ಕಟ್ಟಿಗೆಟ್ಟುಕೊಂಡಿತು. ಔದ್ಯೋಗಿಕ ಸ್ಥಳಗಳಲ್ಲಿ ಅನೇ ಗುಡಿಸಿಲು, ಚಿಕ್ಕ ಚಿಕ್ಕ ಅನಾರೋಗ್ಯ ಮನೆಗಳಲ್ಲಿ ವಾಸಿಸುತ್ತಿದ

ಸರಕಾರದವರೂ, ದೊಡ್ಡ ದೊಡ್ಡ ಕಾರಖಾನೆದಾರರೂ ತಮ್ಮ ಕೆಲಸಗಾರರಿಗಾಗಿ ವಸತಿಯ ಏರ್ಪಾಡು ಮಾಡಬೇಕಾಗಿ ಬಂದಿತು. ಮುಂಬೈ, ಉತ್ತರಪ್ರದೇಶ, ಮಧ್ಯಪ್ರದೇಶ, ಹೈದರಾಬಾದುಗಳಲ್ಲಿ ಸರಕಾರ ಅನೇಕ ಮನೆ ಕಟ್ಟಿಸಿದೆ. ಕೆಲವು ಸ್ಥಾನಿಕ ಸಂಸ್ಥೆಗಳೂ ಈ ಕಾರ್ಯದಲ್ಲಿ ಪ್ರಗತಿ ಸಾಧಿಸಿವೆ ಎಷ್ಟೋ ಕಡೆಗಳಲ್ಲಿ ಮನೆ ಕಟ್ಟುವ ಸಹಕಾರೀ ಸಂಘಗಳೂ ತಲೆಯೆತ್ತಿ ಶ್ಲಾಘನೀಯ ಕಾರ್ಯ ಮಾಡಿವೆ. ಯೋಜನಾ ಆಯೋಗದವರು, ೩೧ ಪಟ್ಟಣಗಳಲ್ಲಿಯ ಒಟ್ಟು ೨,೧೪,೫೦ ಕೆಲಸಗಾರರಲ್ಲಿ ೪,೫೪,೦೦೦ ಕೆಲಸಗಾರರಿಗೆ ತೀವ್ರದಲ್ಲಿ ಮನೆಗಳ ಅವಶ್ಯಕತೆಯಿದೆಯೆಂದು ಮನಗಂಡಿದ್ದಾರೆ. ಅಲ್ಲದೆ ಜನಸಂಖ್ಯೆ ಹೆಚ್ಚಿದ ಪರಿಣಾಮವಾಗಿ, ಒಂದು ಲಕ್ಷಕ್ಕಿಂತ ಹೆಚ್ಚಿನ ಜನ ವಸತಿಯಿರುವ ೬೪ ಪಟ್ಟಣಗಳಲ್ಲಿ ೪೩ ಲಕ್ಷ ಮನೆಗಳ ಕೊರತೆಯಿದೆಯೆಂದು ಅಂದಾಜು ಮಾಡಲಾಗಿದೆ.

ಯೋಜನೆಯ ಅವಧಿಯಲ್ಲಿ ಕೇಂದ್ರ ಸರಕಾರವು ಸಹಾಯಧನ ಮತ್ತು ಸಾಲವೆಂದು ಮನೆ ಕಟ್ಟಿಸುವ ಕೆಲಸಕ್ಕಾಗಿ ೩೮.೫ ಕೋಟಿ ರೂಪಾಯಿಗಳನ್ನೂ ರಾಜ್ಯ ಸರಕಾರಗಳು ೧೨.೧೯ ಕೋಟಿ ರೂಪಾಯಿಗಳನ್ನೂ ವೆಚ್ಚ ಮಾಡಲಿರುತ್ತವೆ.

ಪಟ್ಟಣಗಳ ಯೋಜನೆ, ಸಂದಿಗೊಂದಿಗಳನ್ನು ವಿಶಾಲಗೊಳಿಸಿ ವಿಸ್ತೀರ್ಣಗೊಳಿಸುವ ಕೆಲಸಗಳೂ ವಸತಿಸೌಕರ್ಯದಲ್ಲಿಯೇ ಬರುತ್ತವೆ. ಹಳ್ಳಿಗಳಲ್ಲಿಯೂ ಅಯೋಗ್ಯಕರ ಮನೆಗಳನ್ನು ಕಟ್ಟುವ ಆವಶ್ಯಕತೆ ಅತಿಯಾಗಿದೆ. ಇಂಥ ಕಾರ್ಯಗಳಿಗಾಗಿ ಬಡ್ಡಿಯಿಲ್ಲದ, ವಿಶಾಲ ಅವಧಿಯ ಸಾಲಗಳನ್ನು ಕೊಟ್ಟು, ಈ ಯೋಜನೆಯನ್ನು ಜನಪ್ರಿಯಗೊಳಿಸಬೇಕೆಂದು ಸೂಚಿಸಲಾಗಿದೆ. ಬೇರೆ ಬೇರೆ ತೆರನಾದ ಮನೆಗಳ ಬಗೆಗೆ ಸಂಶೋಧನೆಯೂ ನಡೆದಿದೆ. ಸಾಧನ ಸಾಮಗ್ರಿಗಳ ಕೊರತೆಯಿರುವಾಗ, ಬೇರೆ ಬೇರೆ ನಾನಾತರದ ವಸ್ತುಗಳ ಬಳಕೆ ಮಾಡಿ, ವಿತವ್ಯಯ ಸಾಧಿಸುವ ಮಾರ್ಗ ಕಂಡುಹಿಡಿಯಲಾಗುತ್ತಿದೆ; ಕೆಲಸಗಾರರಿಗೂ ತರಬೇತು ಕೊಡಲಾಗುವುದು. ಯೋಜನಾ ಆಯೋಗವು ರಾಷ್ಟ್ರದ ಬೇರೆ ಬೇರೆ ರಾಜ್ಯಗಳಲ್ಲಿ ಒಂದೇ ತೆರನಾದ ಬಾಡಿಗೆ ನಿಯಂತ್ರಣವಿರಬೇಕೆಂದೂ, ಹೆಚ್ಚಾಗಿ ಮನೆ ಕಟ್ಟಿಸಲು ಪ್ರೋತ್ಸಾಹಿಸಲು ಕೆಲವು ದಿನಗಳ ವರೆಗಾದರೂ ಹೊಸ ಮನೆಗೆ ಬಾಡಿಗೆ ನಿಯಂತ್ರಣ ಕಾಯಿದೆ ಹಚ್ಚಬಾರದೆಂದೂ ಶಿಫಾರಸು ಮಾಡಿದೆ. ಕಟ್ಟಿಸಿದ ವೆಚ್ಚದ ಪ್ರಕಾರ ದಿವಾಣೀ ಕೋರ್ಟಿನವರು ಬಾಡಿಗೆ ಗೊತ್ತುಮಾಡಬೇಕು. ಅಸಮಾದಾತ್ಮಕವಾಗಿ, ಅತ್ಯವಶ್ಯಬಿದ್ದಾಗ ಮಾತ್ರ, ಮನೆಗಳನ್ನು ಸರಕಾರವು ಸಾರ್ವಜನಿಕರಿಂದ ಒತ್ತಾಯವಾಗಿ ತನ್ನ ಬಳಕೆಗೆ ಪಡೆಯಬೇಕು. ಈ ತೆರನಾದ ಭರವಸೆಗಳಿವೆ. ಹೆಚ್ಚು ಪ್ರಮಾಣದಲ್ಲಿ ಮನೆಗಳ ನಿರ್ಮಾಣ ನಡೆಯುವುದೆಂದು ಯೋಜನಾ ಆಯೋಗದವರ ಅಭಿಪ್ರಾಯವಾಗಿದೆ.

ಉದ್ಯೋಗ

ಭಾರತದಲ್ಲಿ ನೆಲ, ಬಂಡವಾಳ ಮತ್ತು ಇತರ ಸಾಧನ ಸಂಪತ್ತುಗಳ ಕೊರತೆಯಿಂದಾಗಿ ಅನೇಕರು ನಿರುದ್ಯೋಗಿಗಳಾಗಿದ್ದಾರೆ. ಯಾವತ್ತೂ ಜನತೆಗೆ ಯೋಗ್ಯತೆಗನುಗುಣವಾಗಿ ಕೆಲಸ ದೊರೆತಲ್ಲಿ ದೇಶದ ಸಂಪತ್ತು ಹೆಚ್ಚಿ ಜೀವನದ ಮಟ್ಟ ಏರಬಹುದಾಗಿದೆ. ಇಂದು ಭಾರತದಲ್ಲಿ ತಾಂಡವನರ್ತಿಸುತ್ತಿರುವ ನಿರುದ್ಯೋಗ ಒಮ್ಮೆಲೇ ಮೊದಲನೆಯ ಸಲವಾಗಿ ಉದ್ಭವಿಸಿದ್ದಲ್ಲ. ಹಿಂದಿನ ಎರಡು ಯುದ್ಧಗಳ ಪರಿಣಾಮವಾಗಿ ಈ ಸ್ಥಿತಿ ಬಂದೊದಗಿದೆ. ಜನಸಂಖ್ಯೆ ಅಳತೆಮೀರಿ ಬೆಳೆದಿದೆ. ಗ್ರಾಮೀಣ ಉದ್ಯೋಗಗಳು ಮಾಯವಾಗಿವೆ. ಒಕ್ಕಲುತನವನ್ನು ಬಿಟ್ಟರೆ ಇತರ ಉದ್ಯೋಗಗಳು ಸಾಕಷ್ಟು ಜನರನ್ನು ಒಳಗೊಳ್ಳುವಷ್ಟಿಲ್ಲ. ಅಲ್ಲದೆ ನಾಡಿನ ಇಬ್ಭಾಗದ ಪರಿಣಾಮವಾಗಿ ಅನೇಕರು ಉದ್ಯೋಗರಹಿತರಾಗಿದ್ದಾರೆ.

ಹಳ್ಳಿಗಾಡಿನಲ್ಲಿಯೇ ಹೆಚ್ಚಾದ ಜನತೆ ವಾಸಿಸುತ್ತಿದೆ. ಆದಕ್ಕಾಗಿ ಅವರೆಲ್ಲರಿಗೆ ಮೊದಲು ಉದ್ಯೋಗ ದೊರಕಿಸಿಕೊಡಬೇಕಾಗಿದೆ. ಸಣ್ಣ ದೊಡ್ಡ ನೀರಾವರಿ ಯೋಜನೆಗಳನ್ನು ಕೈಕೊಳ್ಳಲಾಗುವುದು. ದೊಡ್ಡ ಪ್ರಮಾಣದ ಮೇಲೆ ಭೂಸುಧಾರಣೆ ಮಾಡಲಾಗುವುದು; ಹಳ್ಳಿಯ ಉದ್ಯೋಗ-ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸಿ ವಿಸ್ತರಿಸಲಾಗುವುದು. ಸಂಮಿಶ್ರ ಒಕ್ಕಲುತನದ ವಿಸ್ತರಣೆ ಮತ್ತು ಲೋಕೋಪಯೋಗಿ ಕಾರ್ಯಗಳನ್ನು—ಒಕ್ಕಲುತನದ ಬಿಡುವಿನ ಕಾಲದಲ್ಲಿ—ಬಳಕೆಯಲ್ಲಿ ತರಲು ಯತ್ನಿಸಲಾಗುವುದು. ಪಟ್ಟಣ ಪ್ರದೇಶಗಳಲ್ಲಿಯ ನಿರುದ್ಯೋಗ ಸಮಸ್ಯೆಯೂ ಅಷ್ಟೇ ಗಂಭೀರವಾದುದಾಗಿದೆ. ಭೂಮಿಯನ್ನು ಅವಲಂಬಿಸಿರುವವರ ಸಂಖ್ಯೆ ಹೆಚ್ಚುತ್ತ ನಡೆದು, ಅಧಿಕ ಒತ್ತಡದ ಪರಿಣಾಮವಾಗಿ ಹೊಟ್ಟೆತುಂಬದೆ ಅನೇಕರಿಂದು ಹಳ್ಳಿಗಳಿಂದ ಪಟ್ಟಣಗಳಿಗೆ ಸಾಗಿ ಕೆಲಸಗಳನ್ನು ಹುಡುಕುತ್ತಿದ್ದಾರೆ. ಪರಿಣಾಮವಾಗಿ ಕಾರಖಾನೆಗಳಲ್ಲಿಯ ಜಾಗೆಯು ಅವಶ್ಯವಿಲ್ಲದ ಕೆಲಸ ಮತ್ತು ಮನೆ-ಮಾರುಗಳಲ್ಲಿಯ ಕೆಲಸಗಳಿಗೆ ಅನೇಕರು ಹಂಬಲಿಸುತ್ತಿದ್ದಾರೆ. ಬಹಳ ಜನರು ಕೆಲಸಕ್ಕೆ ಹಾತೊರೆಯುವುದರ ಪರಿಣಾಮವಾಗಿ ಕೂಲಿಯ ದರವೂ ಇಳಿದಿದೆ. ಯುದ್ಧ ನಿರ್ಮಿಸಿದ ಸ್ಥಿತಿಯಿಂದಾಗಿ ಚಿಕ್ಕ ಚಿಕ್ಕ ಉದ್ಯೋಗಗಳೂ ಮುಚ್ಚಿಹೋಗಿವೆ. ಸದ್ಯದ ಉದ್ಯೋಗಗಳನ್ನು ವಿಸ್ತರಿಸುವುದರಿಂದಲೂ ಹೊಸ ಉದ್ಯೋಗ-

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ ನಿಮ್ಮ ಸರಕಿನ ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ !

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್ ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ

ಗಳನ್ನು ಪ್ರಾರಂಭಿಸುವುದರಿಂದಲೂ ಅನೇಕರಿಗೆ ಉದ್ಯೋಗ ದೊರಕಿಸಿ ಕೊಡಬಹುದಾಗಿದೆ.

ಯೋಜನೆಯಲ್ಲಿ ಕೆಳಗಿನ ಕಾರ್ಯಗಳಿಂದ ಕೆಳಗಿನಂತೆ ಜನತೆಗೆ ಉದ್ಯೋಗ ದೊರೆಯುವ ಅಂದಾಜು ಮಾಡಲಾಗಿದೆ.

೧.	ಉದ್ಯೋಗ—ಚಿಕ್ಕ ದೊಡ್ಡವು	೪	ಲಕ್ಷ ಪ್ರತಿವರುಷಕ್ಕೆ	
೨.	ದೊಡ್ಡ ನೀರಾವರಿ ಮತ್ತು ವಿದ್ಯುತ್ತಿನ ಯೋಜನೆಗಳು	೨.೫	,,	,,
೩.	ಒಕ್ಕಲುತನ –			
	ಹೆಚ್ಚಿನ ಕ್ಷೇತ್ರ ನೀರುಣ್ಣಿಸುವುದರಿಂದ	೧೪	,,	,,
	ಕೆರೆಗಳಲ್ಲಿ ಮರಸ್ತಿ ಮಾಡುವುದರಿಂದ	೧.೫	,,	,,
	ಭೂಸುಧಾರಣೆಯಿಂದ	೭.೫	,,	,,
೪.	ಕಟ್ಟಡ ಮತ್ತು ರಚನೆಗಳು	೧	,,	,,
೫.	ರಸ್ತೆ	೨	,,	,,
೬.	ಗೃಹಕೈಗಾರಿಕೆಗಳು	೫೦	,,	,,

(ಅಲ್ಲದೆ ಪೂರ್ತಿ ಉದ್ಯೋಗ ದೊರೆತಾಗ, ೭೬ ಹೆಚ್ಚಿನ ಜನತೆಗೆ ಕೆಲಸ ದೊರೆಯುವುದು.)

೭.	ಪ್ರಾದೇಶಿಕ ವಿಭಾಗ ಮತ್ತು ಸ್ಥಾನಿಕ ಕೆಲಸಗಳು (ಸಾಗಾಟ, ಬ್ಯಾಂಕು ಇತ್ಯಾದಿ)	ಅತಿ ಹೆಚ್ಚಿನ ಜನತೆಗೆ ಕೆಲಸ ಸಿಕ್ಕುವುದಾದರೂ, ಪದ್ಯಕ್ಕೆ ಇಂತಿಷ್ಟೇ ಎಂದು ಹೇಳಲು ಬರುವಂತಿಲ್ಲ.

ಎರಡೂ ಯುದ್ಧಗಳ ಕಾಲದಲ್ಲಿ ಸುಶಿಕ್ಷಿತರಾದವರಲ್ಲಿ ನಿರುದ್ಯೋಗ ತಲೆದೋರಿ, ಇಂದು ನಾನಾಮುಖವಾಗಿ ಬೆಳೆಯುತ್ತಲಿದೆ. ಯುದ್ಧ ಕಾಲದಲ್ಲಿ ತಾತ್ಪೂರ್ತಿಕವಾಗಿ ನಿರುದ್ಯೋಗ ಕಡಿಮೆಯಾಗಿತ್ತು. ತಾಂತ್ರಿಕ ಜನತೆಗಿಂತ ಕಾರಕೂನರಲ್ಲಿ ನಿರುದ್ಯೋಗ ಹೆಚ್ಚಿದೆ. ಉದ್ಯೋಗವಿನಿಮಯದ ಕಚೇರಿಗಳಲ್ಲಿ ರಜಿಸ್ಟರ್ ಮಾಡಿದ ೧೫೦ ತಂತ್ರಜ್ಞರಲ್ಲಿ ೧೫ ಜನರಿಗಾದರೂ ಕೆಲಸ ಸಿಕ್ಕಿದ್ದರೆ, ೧೫೦ ಜನ ಕಾರಕೂನರಲ್ಲಿ ೪ ಜನರಿಗೆ ಮಾತ್ರ ಕೆಲಸ ದೊರೆತಿದೆ.

ಒಕ್ಕಲುತನದ ಹಬ್ಬುವಳಿ ಹೆಚ್ಚಿದರೆ, ಮುಂಚೆ ಅನೇಕ ಉದ್ಯೋಗ ಬೆಳೆಯಿಸುವ ವಿಚಾರವಿದೆ. ಇದು ಬಹುದಿನಗಳ ನಂತರ ಸಾಧಿಸುವ ಕಾರ್ಯವು ಇಂದಿನ ನಿರುದ್ಯೋಗಿಗಳಾದ ಸುಶಿಕ್ಷಿತರಿಗೆ ಇದರಿಂದ ಪರಿಹಾರ ದೊರೆಯಲಾರದು. ಮಧ್ಯಂತರ ಅವಧಿಯಲ್ಲಿ ನಿರುದ್ಯೋಗತನ ಹೋಗಲಾಡಿಸಲು ಕೆಳಗಿನ ಕ್ರಮ ಕೈಕೊಳ್ಳಲು ಸೂಚಿಸಲಾಗಿದೆ.

೧ ಎಂಜಿನಿಯರರು, ಡಾಕ್ಟರುಗಳೇ ಮೊದಲಾದ ತಾಂತ್ರಿಕರಿಗೆ, ತರಬೇತಿಗೆ ಹತ್ತಿದ ವೆಚ್ಚಕ್ಕನುಗುಣವಾಗಿ ಪಗಾರ ಕೊಡಬೇಕು;

ಹಳ್ಳಿಗಳಲ್ಲಿ ಖಾಸಗೀ ಆಸ್ಪತ್ರೆ ತೆರೆಯಲು ಸಹಾಯಧನ ಕೊಡಬೇಕು.

೨ ಕಾಲೇಜುಗಳಲ್ಲಿ ಸಿಕ್ಕುವ ಶಿಕ್ಷಣ ವ್ಯಾಪಾರ ಇತ್ಯಾದಿಗಳಿಗೆ ಸಾಕಷ್ಟು ಉಪಯೋಗ ಬೀಳದಿದ್ದಲ್ಲಿ ಅವಶ್ಯಕ ತರಬೇತಿ ಕೊಡಬೇಕು.

೩ ಸುಶಿಕ್ಷಿತರನ್ನು ದೈಹಿಕಶ್ರಮದ ಕೆಲಸ ಮಾಡಲು ಮನವೊಲಿಸಬೇಕಲ್ಲದೆ ಅವಶ್ಯಕ ತರಬೇತು ಕೊಡಬೇಕು.

೪ ತರುಣರಿಗೆ ಸಾಕಷ್ಟು ಅನುಭವವಿಲ್ಲದಿದ್ದರೆ, ಕೆಲಸದ ತರಬೇತು ಪಡೆಯಬಹುದು. ವಯಸ್ಸಾದವರಿಗೆ ಸಾರ್ವಜನಿಕ ಮತ್ತು ಖಾಸಗೀ ಸಂಸ್ಥೆಗಳೆರಡರಲ್ಲಿಯೂ ಕೆಲಸ ದೊರೆಯುವುದು ಕಠಿಣವಾಗುತ್ತದೆ. ಅಂಥವರಿಗಾಗಿ ಕೆಲವೊಂದು ಸ್ಥಾನಗಳನ್ನು ಸಾರ್ವಜನಿಕ ಸಂಸ್ಥೆಗಳಲ್ಲಿ ಕಾಯ್ದಿರಿಸಬೇಕು. ಖಾಸಗೀ ಸಂಸ್ಥೆಗಳವರನ್ನು, ಮನೆತನವುಳ್ಳ ಅಂಥವರನೇಕರನ್ನು ನಿಯಮಿಸಿಕೊಳ್ಳಲು ಮನವೊಲಿಸಬೇಕು.

೫ ವಿವಿಧ ಉದ್ಯೋಗ, ಕೆಲಸಗಳಲ್ಲಿ ಕೆಲಸ ದೊರೆಕಿಸಲು ತರುಣರಿಗೆ ಆಗಾಗ್ಗೆ ಸಲಹೆ, ಮಾರ್ಗದರ್ಶನ ಮಾಡಬೇಕು. ಅಲ್ಲದೆ ಉದ್ಯೋಗಗಳನ್ನು ಕೈಕೊಳ್ಳಲೂ ಸಹಾಯ ಮಾಡಬೇಕು.

ಇದೆಲ್ಲಕ್ಕಿಂತಲೂ ಕೆಲಸ ದೊರಕಿಸುವವರ ಸಂಖ್ಯೆಯನ್ನೇ ಸಾಧ್ಯವಿದ್ದಷ್ಟು ಕಡಿಮೆ ಮಾಡಬೇಕಾದುದು ಅಗತ್ಯವಾಗಿದೆ. ಸುಶಿಕ್ಷಿತರನ್ನು ವ್ಯವಹಾರದಲ್ಲಿ ಮುಂದುವರಿಯಲು ಪ್ರೇರಿಸಬೇಕು. ೫೦೦ ರಿಂದ ೧೦೦೦ ರೂಪಾಯಿಗಳಲ್ಲಿ ನಡೆಯಬಹುದಾದ ಚಿಕ್ಕ ಉದ್ಯೋಗಗಳ ಯಾದಿ ತಯಾರಿಸಬೇಕು. ಸರಕಾರವು ಮೊದಲಿಗೆ ಬೇಕಾಗುವ ಬಂಡವಾಳದ ಮತ್ತು ತರಬೇತಿಯ ವ್ಯವಸ್ಥೆ ಮಾಡಬೇಕು. ಕಚ್ಚಾ ಮಾಲನ್ನು ಪೂರೈಸುವುದಕ್ಕೂ, ಪಕ್ಕಾ ಮಾಲನ್ನು ಮಾರುವುದಕ್ಕೂ ವ್ಯವಸ್ಥೆಯಾಗಬೇಕು. ಕಟ್ಟಡ, ವಿದ್ಯುತ್, ನೀರು, ಸಾಗಾಟ–ಸಾಧನ ಇತ್ಯಾದಿಗಳನ್ನು ಚಿಕ್ಕ ದೊಡ್ಡ ಕಾರಖಾನೆದಾರರಿಗೆ ಒದಗಿಸಬೇಕು. ಇದರಿಂದ ಸಣ್ಣ ಮತ್ತು ಮಧ್ಯಮ ತರಗತಿಯ ಕಾರಖಾನೆಗಳು ತಲೆಯೆತ್ತುವುವು. ಖಾಸಗೀ ಬಂಡವಾಳವನ್ನೂ ಅಲ್ಲಲ್ಲಿ ಉದ್ಯೋಗಗಳನ್ನು ಕೈಕೊಳ್ಳಲು ಉತ್ತೇಜಿಸುವುದರಿಂದ, ಅನೇಕರಿಗೆ ಕೆಲಸ ದೊರೆಯುತ್ತದೆ.

ಇತ್ತೀಚೆಗೆ ಈ ವಿಷಯದತ್ತ ಕೇಂದ್ರ ಮತ್ತು ರಾಜ್ಯ ಸರಕಾರಗಳು ವಿಶೇಷ ಲಕ್ಷ್ಯ ವಹಿಸಿ, ಅನೇಕ ಯೋಜನೆಗಳನ್ನು ಬಳಕೆಯಲ್ಲಿ ತಂದಿವೆ. ನೇಕಾರರಿಗೆ ಪರಿಹಾರ ಮತ್ತು ಸಹಾಯ ಕೊಡುವುದೂ, ನಾಡಿನ ತುಂಬೆಲ್ಲ ಶಾಲೆಗಳನ್ನು ತೆರೆಯುವುದೂ ಮೊದಲಾದ ಅತಿ ದೊಡ್ಡ ಪ್ರಮಾಣದ ಯೋಜನೆಗಳನ್ನು ಕಾರ್ಯರೂಪಕ್ಕೆಳಿಸುವ ಹೆಣಗಾಟ ನಡೆದಿದೆ. ಕೆಲಸ ಮಾಡುವೆನೆಂದು ಹಾತೊರೆಯುತ್ತಿರುವವನಿಗೆ ಒಂದಿಲ್ಲೊಂದು ತೆರನಾದ ಕೆಲಸ ದೊರೆತು, ತನ್ನ ಕಾಲಮೇಲೆ ತಾನು ನಿಲ್ಲುವಂತಾದಾಗಲೇ ಹಾಹಾಕಾರ ಕಡಿಮೆಯಾಗಿ ನಾಡಿನಲ್ಲಿ ಭದ್ರತೆ – ಶಾಂತಿಗಳು ನೆಲಸಿ ನೆಮ್ಮದಿ ದೊರೆಯುತ್ತದೆ.

ಕೋರಿಯಾ *

ಶ್ರೀ. ಮಂಗೇಶ ನಾಡಕರ್ಣಿ, ಬಿ ಎ. ಧಾರವಾಡ

ಯಾವ ಮಾತುಗಳಿಂದ
ಯಾವ ಬಗೆಯಿಂದ
ಸಂತೈಸಲಿ ನಿನ್ನ ಕೋರಿಯಾ ?

ಶಾಂತಿದೂತರಾವು ಎಂದು
ಶಾಂತಿಹವನ ಮಾಳ್ಪೆವೆಂದು
ನಿನ್ನ ಎದೆಯ ರಕುತಬಸಿಮು
ಹೋಮಕೆಂದು ಸ್ನಾನಗೈವರು.

ನಿನ್ನ ಬಸಿರಲ್ಲಿ ಕುಂಡವನು ಅಗೆದಿಹರು—
ನಿನ್ನ ಗುಡಿಗೋಪುರ ರಮ್ಯೋದ್ಯಾನಗಳು
ಕೆಂಡವಮು ಕಾರುವಾ ಇಂಧನವಾಗಿಹವು
ಕೋರಿಯಾ, ನೋಡು ಸಾಗಿದೆ ಶಾಂತಿಯಜ್ಞ!

ಸಮಿಧೆಗಳ ದರ್ಭೆಗಳ ತರ್ಪಣವದೋ ನೋಡು,
ನಿನ್ನ ಮಕ್ಕಳ ಕೈಕಾಲು ಉರಿಯುವುದ ನೋಡು,
ಯಜ್ಞದಾ ದೇವತೆಯ ಅಗ್ನಿನಾರಾಯಣನ ನೋಡು!
ಶಾಂತಿಯಾ ಕುಂಡದಲಿ ಧಗಧಗಿಪುದ ವಿಪ್ಲವವ ನೋಡು!

ಘೃತವೆಂದು ಜೇನೆಂದು
ಹೆಜ್ಜೇನಿಗೂ ತನಿದಾದ
ಹೆಸುಳೆಯರ ಎಳಮಾಂಸ
ಬಸಿರಕುತ ನೋಡು!

ಅನ್ನನೀರೆಂದು ಪರಿತಪಿಸುವವರೊರಲು
ಬತ್ತಿದಾ ತಾಯೆದೆಗೆ ಬಾಯೊಡ್ಡಿದಾ ಮಗುವಿನಾ ಚೀರು
ಎಲ್ಲೆಲ್ಲು ಜನರು ಮೃತ್ಯುವಿಗೆ ಹೊಯ್ಯುವಾ ಗೋಳು
ಕೋರಿಯಾ, ಇದೆ ಹವನದಾ ವೇದಘೋಷ ಕೇಳು!

ಇನ್ನುಳಿದುದೊಂದು ಪೂರ್ಣಾಹುತಿ
ಆದಕಾಯ್ತು ಮೀಸಲು
ಯುಗ-ಯುಗಗಳಿಂದ ತಪಗೈದು
ಬೆಳಸಿದಾ ಮಾನವತೆ
ಅಯ್ಯೊ ನಡೆದಿದೆ ಇಲ್ಲಿ
ಪವಿತ್ರ ಮಾನವ್ಯದಾಹುತಿ!

ಕೃಷ್ಣನೆರವಿನಿಂದಗಿ ಬರದ
ದುಶ್ಯಾಸನನ ಕೈಗೆ ಸಿಕ್ಕ
ಪಾಂಚಾಲಿಯರಾದರಲ್ಲ
ನಿನ್ನ ಕುವರಿಯರು—
ಕೋದಂಡಪಾಣಿ ರಾಮನಿರದ
ರಾವಣನಿಗೆ ಬೇಟೆಸಿಕ್ಕ
ಜಾನಕಿಯರಾದರಲ್ಲ
ನಿನ್ನ ಹೆಣ್ಣುಳು.

ಹೆಣ್ಣನೊಂದು ಮಹಾಮಾಯೆಯೆಂದು
ಸೌಹಾರ್ದ ಪ್ರಗತಿಮಂತ್ರವೆಂದು ಬಗೆದ ಮಾನವಾ,
ಇದು ನೋಡು ಕಣ್ತೆರೆದು ನೋಡು
ಕೋರಿಯದಲಿ ವಡೆದಿದೆ ನಿನ್ನ ಸರ್ವಸ್ವದಾಹುತಿ!

ಕೋರಿಯಾ, ಕೋರಿಯಾ,
ಯಾವ ಮಾತುಗಳಿಂದ
ಯಾವ ಬಗೆಯಿಂದ
ಸಂತೈಸಲಿ ನಿನ್ನ ಕೋರಿಯಾ?

ನವಗ್ರಹಗಳನೆ ಮೆಟ್ಟಿತುಳಿದ ರಾವಣನ
ಸುಟ್ಟುಮೆರೆವ ರಾಮನಾ ಬಾಣವಿಕ್ಕು,
ಬಲಿಯ ಮೆಟ್ಟಿತುಳಿವ ವಾಮನನ ಮೂರ್ತಿಯಿತ್ತು
ಕಂಸನಾ ಸದೆಬಡಿವ ಕೃಷ್ಣನಾ ಲೀಲೆಯಿತ್ತು—

ಕೋಟಿಕೋಟಿ ಮಾನವರ ತಪಸ್ಸಿದ್ಧಿಯ
ಹೋಳಿಮಾಡಿ
ಮಾನವನ ಬಾಳಿನಾಸೆಯ ಸತ್ತ್ವದ
ಪೂರಣವ ನೆಕ್ಕಿ
ದಿನಬೆಳಗು ಘೋರರಾತಿಘೋರ
ಚಂಡಿಚಾಮುಂಡಿಯಾಗಿ
ಸೋಕ್ಕೇರಿದೀ ಅಸುರತ್ವಕ್ಕೆ ಶಕ್ತಿಯಾವುದು?
ಮುಕ್ತಿಯಾವುದು?

* ಈ ಕವಿತೆ ಯುದ್ಧದ ಕಾಲದಲ್ಲಿ ಬರೆದುದಾದರೂ ಕೋರಿಯಾದ ರಾಜಕೀಯ ಪರಿಸ್ಥಿತಿಗೆ ಈಗಲೂ ಹೊಂದುವಂತಿದೆ. ಸಂ. ಜ.

ತೆರೆದ ಪರದೆ

(ಸಣ್ಣಕತೆ)

ಡಾ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ

●

ಬಹಳ ಸಂಸಾರಗಳಲ್ಲಿ ಸಮಾಧಾನದ ಪರದೆಯನ್ನು ಹೊತ್ತುಕೊಂಡ ಅತೃಪ್ತಿಯ ಆಟವೇ ನಡೆದಿರುವುದು. ಇದನ್ನರಿತ ಕನ್ನಡ ಜಾನಪದಹೃದಯವು 'ಗಂಡ-ಹೆಂಡರು ಮನ ಎರಡಾದರ ದಂಡತಪ್ಪದೋ ನುಲ್ಲಯ್ಯ' ಎಂದು ಅನುಭವನವ ಹಾಡುಹಾಡಿದೆ.

●

'ಮನುಷ್ಯ ಸುಖವೇ ಇರಲಿ, ದುಃಖವೇ ಇರಲಿ, ಅವನ ಸ್ವಭಾವದಲ್ಲಿ ಯಾವಾಗಲೂ ಸುಸಂಗತಿಯೇ ಇರುವುದಿಲ್ಲ; ಕೆಲವೊಂದು ಸಲ ವಿಸಂಗತಿಯೂ ಕಾಣಬರುತ್ತದೆ. ಹಾಗೆಯೆ ಜೀವನವೆಂಬುದು ಕೂಡ ಕೇವಲ ತರ್ಕದ ಒರೆಗಲ್ಲಿನ ಮೇಲೆಯೇ ನಿಂತಿರುವುದಿಲ್ಲ; ಅಕಲ್ಪಿತ ಘಟನೆಗಳ ಆಂದೋಲನವೂ ಅದರಲ್ಲಿ ಕೂಡಿದೆ.'

ಈ ಮಾತು ನನಗೆ ಎಷ್ಟೋ ಸಲ ಅನುಭವಕ್ಕೆ ಬಂದರೂ, ಮೊನ್ನೆ ನನಗೆ ಅದರ ಸತ್ಯತೆ ಕಂಡಷ್ಟು ಎಂದೂ ಕಂಡಿರಲಿಲ್ಲ. ಅಂದಿನ ಆ ಪ್ರಸಂಗ ನೆನೆಸಿದಷ್ಟೆ, ಇನ್ನೂ ನನ್ನ ಮೈ ನಡುಗುತ್ತದೆ. ಆದರೆ ಯಾವನು ಇಂಥ, ದುಃಖದ ಪ್ರಸಂಗಕ್ಕೆ ಕಾರಣನಾಗಿದ್ದಾನೋ ಅವನಿಗೆ ಮಾತ್ರ ಅದೊಂದು ಲೀಲಾವಿಲಾಸವೇ ಎನಿಸಿದೆ! ಈ ಮಾತು ಹೀಗೆ ಗುಂಭವಾಗಿ ನಿಮ್ಮೆದುರು ಇಡುವುದಕ್ಕಿಂತ ನಿಮಗೆ ಅದರ ಸಾದ್ಯಂತ ಸಂಗತಿಯನ್ನೇ ಹೇಳಿಬಿಡುತ್ತೇನೆ.

ಗಾಡಿಯಲ್ಲಿಯ ಗುರುತು ಗಾಡಿಯಿಂದಿಳಿದ ಮೇಲೆ ಹೇಗೆ ಉಳಿಯುವದಿಲ್ಲವೋ ಹಾಗೆ-ಕಾಲೇಜಿನ ಸ್ನೇಹ ಕಾಲೇಜಿನ ಜೊತೆಗೇ ಮುಗಿದುಹೋಗುತ್ತದೆ. ಇದಕ್ಕೆ ಹೊರತಾದ ಉದಾಹರಣೆಗಳ ಸಂಖ್ಯೆ ಇಲ್ಲವೆಂತಲ್ಲ. ನನ್ನ ಮತ್ತು ರಂಗಣ್ಣನ ಸ್ನೇಹ ಅದರಲ್ಲೊಂದು, ಕಟ್ಟಿ ಹರಿಯಿಸಿದ ಕಾಲುವೆಯಂತೆ, ಪ್ರಾರಂಭದಿಂದಲೂ ಆ ನಮ್ಮ ಮೈತ್ರಿ ಇಂದಿಗೂ ಸಂತತವಾಗಿ ಹರಿಯುತ್ತದೆ. ಅದಕ್ಕೆ ಬತ್ತುವ ಭೀತಿಯಿಲ್ಲ; ತೆರೆನೆರೆಗಳ ಹಾವಳಿಯಿಲ್ಲ.

ಮೊನ್ನೆ ನಾನು ರಂಗಣ್ಣನ ಊರಿಗೆ ಹೋದಾಗ ಬೆಳಗಿನ ಉಪಹಾರಕ್ಕೆ ಅತ್ತಿಗೆ ಒಂದು ಹೊಸ ತಿನಿಸನ್ನು ಮಾಡಿದ್ದಳು. ಅದರ ರುಚಿಯನ್ನು ನಾನು ಮನವಾರೆ ಹೊಗಳುತ್ತಿದ್ದೆ. ಅತ್ತಿಗೆ ಆಗ್ರಹ ಮಾಡಿ ನನ್ನ ತಟ್ಟೆಯಲ್ಲಿ ಆ ತಿನಿಸನ್ನು ಬಡಿಸುತ್ತಿದ್ದಳು. ರಂಗಣ್ಣ ಅರ್ಧ ಪೇಪರು ಓದುತ್ತ, ಅರ್ಧ ನನ್ನೊಡನೆ ಮಾತನಾಡುತ್ತ ತಿನ್ನುವದನ್ನೂ ನಡೆಯಿಸಿದ್ದ. ಆದರೆ ನನ್ನಿಂದ ಮಾತ್ರ ಒಂದೇ ಕಾಲಕ್ಕೆ ಹೀಗೆ ಎರಡೆರಡು ಕೆಲಸ ನೀಗುವುದಿಲ್ಲ. ಆದರಲ್ಲಿ ತಿನ್ನುಣ್ಣುವ ಕಾಲಕ್ಕೆ ದ್ವಿಧಾ ಮನಸ್ಸು ನಾನು ಮಾಡಿಕೊಳ್ಳುವುದಿಲ್ಲ. ಅಂತೇ ನಾನು ಮುಕ್ತಹಸ್ತದಿಂದ ತನ್ನ ತಿಳಿಸುಬಾಳತನಕ್ಕೆ ಮುಕ್ತದ್ವಾರ ಕೊಟ್ಟದ್ದೆ!

ನಮ್ಮ ರಂಗಣ್ಣನ ಮನೆಯೆಂದರೆ ಏನೆಂದು ತಿಳಿದಿದ್ದೀರಿ? 'ಸಮಾಧಾನ' ಎಂದು ಆ ಮನೆಗೆ ಕೊಟ್ಟಿರುವ ಹೆಸರು ಸಾರ್ಥಕ ಎಂದೆನಿಸುವುದು—ಬರಿ ಕಟ್ಟಡ ನೋಡಿ ಅಲ್ಲ, ಒಳಗೆ ಇರುವವರನ್ನು ನೋಡಿ. ರಂಗಣ್ಣನ ಕುಟುಂಬದಲ್ಲಿ ನಾಲ್ಕು ಮಕ್ಕಳು, ಅವರಿಬ್ಬರು ಗಂಡಹೆಂಡತಿ. ಎಲ್ಲರಂತೆ ರಂಗಣ್ಣನೂ ಕೆಲಸ ಮಾಡುತ್ತಾನೆ. ಅವನ ಪಾಲಿನ ಸಂಬಳ ಅವನಿಗೆ ಬರುತ್ತದೆ. ಅವರನ್ನು ನೋಡಿ ನಮಗೆನಿಸುವ ಸಮಾಧಾನ ಇದಕ್ಕಾಗಿಯಲ್ಲ; ಅವರ ಇರುವ ರೀತಿಗಾಗಿ. ತುಸು ಕಾಲ ಅವರ ಮನೆಯಲ್ಲಿ ಕುಳಿತರೆ ಸಾಕು, ನಾವೂ ಅವರಂತೆ ಇರಬೇಕು ಎನಿಸುವುದು. ನಾನು ಅವನ ಮನೆಗೆ ಹೋದಾಗಲೆಲ್ಲ ಹೊಸತೊಂದು ತಿಳಿವಳಿಕೆಯನ್ನು ಪಡೆದೇ ಮರಳಿ ಬಂದಿದ್ದೇನೆ. ನನ್ನ ಬಾಳುವೆಗೆ ಅದೆಂಥ ಬಂಡುವಾಳವಾಗಿದೆ! ಅದರಲ್ಲಿ ನನಗೆ ಮೂರ್ತಿಗೊಂಡು ಕಾಣುವುದಿಷ್ಟೆ: ರಂಗಣ್ಣನ ಮನಸ್ಸು ತಿಳಿದುಕೊಂಡು ಅತ್ತಿಗೆ ನಡೆಯುತ್ತಾಳೆ; ಅತ್ತಿಗೆ ಹಾಗೆ ನಡೆಯದೆ ಹೋದರೆ, ಆಕೆಯದೇ ಸರಿ ಇರಬೇಕು—ಎಂದು ರಂಗಣ್ಣ ತಿಳಿಯುತ್ತಾನೆ. ಇನ್ನೂ ಮಕ್ಕಳು ಅವು ಸಾಕಷ್ಟು ತಿಳುವಳಿಕೆ ಇಲ್ಲದುವು. ಅರಿವು ಬರುವ ವರೆಗೆ ಅವು ತಪ್ಪು ಮಾಡುವವೇ ಎಂದು ಇಬ್ಬರೂ ಭಾವಿಸುತ್ತಾರೆ. ಸಾಕು, ಮನೆಯ ಸಮಾಧಾನಕ್ಕೆ ಇದಕ್ಕೂ ಹೆಚ್ಚೇನು ಬೇಕು? ನಾನು ಮನಸೋತಿದ್ದರೂ, ನನಗೆ ದೊರೆಯುವ ಸಂತೋಷ ಆ ಅವರ ಸಮಾಧಾನದ ಸಂಸಾರ ನೋಡಿ!

ಆ ದಿವಸ ನಾವು ನೆಗ್ಗಳವಾಗಿ ತಿನ್ನುವದು, ಮನಸೇಚ್ಛೆ ಮಾತನಾಡುವುದು -- ಎಂದೇ ಕುಳಿತಿದ್ದೆವು. ಆದರೆ ಇಂಥ ರಸನಿಮಿಷದಲ್ಲಿರುವಾಗ 'ಟಕ್‌ಟಕ್' ಎಂದು ಬಾಗಿಲನ್ನುಡಿದ ಸಪ್ಪಳವಾಯಿತು. ರಂಗಣ್ಣ ಎದ್ದು ಹೋಗಿ ಬಾಗಿಲನ್ನು ತೆರೆದು, ಜೊತೆಗೆ ಒಬ್ಬ ಗೃಹಸ್ಥನನ್ನು ಕರೆತಂದ ಗೃಹಸ್ಥನೆಂದರೆ ಹೊಸಬನೇನು ಅಲ್ಲ, ನಮ್ಮ ಕಾಲೇಜ ಕಾಲದ ಗೆಳಯನೇ! ಅದರೆ ಕನಸುಮನಸಿನಲ್ಲಿಲ್ಲದೆ ಅಕಸ್ಮಾತ್ ಆತ ರಂಗಣ್ಣನ ಭೆಟ್ಟಿಗೆ ಬಂದಿದ್ದ. ಅವನ ಬಾಹ್ಯರೂಪದಲ್ಲಿ ಈಗ ತುಸು ಬದಲಾವಣೆಯಾದುದರಿಂದ, ಒಮ್ಮೆಲೇ ಅವನ ಗುರುತು ಸಿಕ್ಕಲಿಲ್ಲ. ಆದರೂ ಕೂಡಿ ಕಲಿತವರಾದ ನಾವೆಲ್ಲರೂ ಕಳೆದ ನಾಲ್ಕು ವರ್ಷದ ಮೈತ್ರಿ ಅದು ಒಮ್ಮೆಲೇ ಹೊರಹೊಮ್ಮಿತು. ಹತ್ತು ತಿಂಗಳು ಬತ್ತಿ ಬಿದ್ದ ಹಳ್ಳ, ಹನ್ನೊಂದನೆಯ ತಿಂಗಳ ಅಡ್ಡಮಳೆಗೆ ಮೈಮೇಲೆ ಜೀವತುಂಬಿ ಹರಿಯುವುದಿಲ್ಲವೇ? ನಮ್ಮ ಮೈತ್ರಿಗೂ ಆಗ ಮಹಾಪೂರ ಬಂದಿದ್ದರೆ ಆಶ್ಚರ್ಯವಲ್ಲ. ಪ್ರಾರಂಭದ ನಮಸ್ಕಾರ-ಚಮತ್ಕಾರಗಳು ನಡೆಯುತ್ತಿರುವಾಗಲೆ ರಂಗಣ್ಣ, 'ಶಕ್ಕೂ, ನಮ್ಮೊಬ್ಬ ಹಳೆಯ ಸ್ನೇಹಿತರು ಬಂದಾರ!' ಎಂದು ಬಾಗಿಲಕಡೆಗೆ ನೋಡಿ ಅತ್ತಿಗೆಗೆ ಹೇಳಿದ—ಅತ್ತಿಗೆ ಬಾಗಿಲಲ್ಲಿಯೇ ನಿಂತಿದ್ದಳು. ಕೂಡಲೇ ಚಹ-ತಿನಿಸು ಬಂದವು.

"ತಕ್ಕೊಳ್ರಿ, ಪಾಟೀಲ! ಇದೇನೋ ಒಂದು ಹೊಸ ತಿನಿಸು ಮಾಡಿದ್ದಾಳೆ....ಸ್ಯಾಂಪಲ್ ನೋಡ್ರಿ."

ಪಾಟೀಲರು ತಟ್ಟೆಯನ್ನು ಕೈಯಲ್ಲಿ ತಕ್ಕೊಳ್ಳುತ್ತ, "ಸ್ಯಾಂಪಲ್ ಕೊಟ್ಟಷ್ಟಕ್ಕೆ ನಿಕ್ಕರ ನಮಗೇನು ಊಡಾಗ್ತದ, ರಾಯರ? ರಾವಣನ್ನ ಕೊಟ್ಟೆಯವರು ನಾವು! ಅಲ್ಲ, ನೀವು ಮತ್ತ ತರ್ರಿ ಅಂತ ಒಳಗ ಹೇಳಬ್ಯಾಡ್ರಿ. ಥಮ್ಮ ಬಾಯಿ ಅಂದರೇನು? ಬಾಯಲರ್ ಇದ್ಹಾಂಗ! ಎಷ್ಟು ಹಾಕಿದ್ರೂ ಖಪ್ಪಸ್ತದ!" ಎಂದು ಒಂದು ಚಮಚೆಯನ್ನು ಬಾಯಲ್ಲಿ ಸೇರಿಸಿದರು.

"ಪಾಟೀಲ, ನೀವು ಅಭಿಮಾನಿಲ್ಲದೆ ತಕ್ಕೊಳ್ರಿ ನಿಮಗ ಸೇರ್ತದೋ ಇಲ್ಲೋ ಅಂತ ಸ್ಯಾಂಪಲ್ ಅಂದೆ. ನಮ್ಮಲ್ಲೆ ಒಂದನ್ನೇ ಮಾಡಿದರೂ ವೆಗ್ಗಳಾಗಿ ಮಾಡೋದು, ಎಗ್ಗಿಲ್ಲದೆ ತಿನ್ನೋದು! ತಿರಿಗಿ ಬಹುದಿವಸ ಅದನ್ನ ಬಯಿಸಿರಬಾರದು."

"ಅದ್ಯಾವಂತರ ಮಾತು ಹೀಂಗೂ ಇರ್ತದ. ನಾವು ಇಂಥಾದೇನಾದರೂ ಕಾಣಬೇಕು—ಅಂದರ, ಮಂದೀ ಮನ್ಯಾಗ ನೋಡ್ರಿ." ಪಾಟೀಲರು ನುಡಿದರು.

"ಯಾಕ? ಪಾಪ, ಹೆಂಗುಸರೇನು? ಅವರು ಹೇಳಿದ್ದನ್ನು ತಂದು ಹಾಕಿದರ, ನಾವು ಬೇಡಿದ್ದನ್ನ ಮಾಡಿ ಹಾಕ್ತಾರ." ನಾನೆಂದೆ.

"ಹೌದು, ಅಂಥಾ ಹೆಂಡರನ್ನ ನಾವು ಬೇಡಿಬಂದಿರಬೇಕಲ್ಲ! ನಮ್ಮ ಹೆಂಡರು ಹೀಗಿದ್ದಾರ: ಯಥೇಚ್ಛ ಮಾಡಿ ಮೊದಲು ತಮ ಒಡರಿಗೇ ಹಾಕ್ತಾರ! ಇದು ನಮ್ಮ ಮನೀ ಮಾತು ಹೇಳಿದೆ. ಮತ್ತ ನಿಮ್ಮ ಮನಿಯವರಿಗೆ ಸಿಟ್ಟು ಬಂದೀತ್ರೆಪಾ!" ಎಂದು ಪಾಟೀಲರು ರಂಗಣ್ಣನನ್ನುದ್ದೇಶಿಸಿ ಮಾತನಾಡಿದರು.

ಅಷ್ಟರಲ್ಲಿ ಅತ್ತಿಗೆ ಪಾಟೀಲರ ತಟ್ಟೆಯಲ್ಲಿ ಇನ್ನಿಷ್ಟು ತಿನಿಸನ್ನು ಹಾಕಲು ಬಂದಳು.

"ತಕ್ಕೊ, ಇವರು ನಮ್ಮ ಸ್ನೇಹಿತರು, ಪಾಟೀಲರು." ರಂಗಣ್ಣ ಪರಿಚಯ ಮಾಡಿಕೊಟ್ಟ.

"ಈ ಮಾತಿರಲಿ ಪಾಟೀಲ! ಈಗ ನೀವು ಇದ್ದೀರೆಲ್ಲೆ? ಏನೇನು? ಈ ಊರಿಗೆ ಬಂದದ್ದೆಂದು? ಎಲ್ಲಾ ಸಮಾಚಾರ ನಮಗ ಈಲೆಲ್ಲಾ—ಯಾಕಂದರ ಬಿ. ಎ. ಪರೀಕ್ಷಾದ ಪೇಪರ್ ಬರೆದು ಹೊರ ಬಿದ್ದ ಮ್ಯಾಲ, ನಮ್ಮ ನಿಮ್ಮ ಭೆಟ್ಟಿಯಿಲ್ಲ. ಆ ಮಾತಿಗೆ ಈಗ ಹದಿನೈದು ವರ್ಷ ಆಗಿರಬೇಕು!" ನಾನು ಕುತೂಹಲಿಯಾಗಿ ಕೇಳಿದೆ.

"ಆಗಿದ್ದಾವು ಬಿಡ್ರಿ. ನಾನೀಗ ಇದೇ ಊರಿಗೆ ವರ್ಗಾಗಿ ಬಂದು ಎರಡು ತಿಂಗಳಾತ್ಯು. ರಂಗಣ್ಣನ್ನ ಕಾಣಬೇಕು ಅಂತ ಸಂದಾಗಿನಿಂದ ಹವಣಿಸಿದರ, ಈವೊತ್ತು ಬರೋದಾತ್ಯು. ನೀವೂ ಈವೊತ್ತೇ ಇಲ್ಲೆ ಕೂಡಿದ್ದು ವಿಲಕ್ಷಣ ಯೋಗಾಯೋಗ! ನೀವೂ ಇದೇ ಊರಲ್ಲಿದ್ದೀರೇನು?"

"ಇಲ್ಲ" ಎಂದು ನಾನು ನನ್ನ ವಿಷಯವಾಗಿ ಹೇಳಬೇಕೆಂದಿನಿದ ಮಾತುಗಳನ್ನು ಹೇಳಿದೆ.

ಜಗ ವರ್ಷಗಳಿಂದ ಅನುಭವಪಟ್ಟ
ಕರೀ ಮುಸ್ತು ಕಂಪನಿಯ
ಜ್ವರಗಡ್ಡೆಯ ಗುಳಿಗೆಗಳು
ಬಾಟ್ಲಿಗೆ ೧-೮-೦
ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.
ವಿಳಾಸ:—
ಗಣೇಶ ರಾಮಚಂದ್ರ ಕರೀ ಮುಸ್ತು ಕಂಪನಿ
ಗಿರಗಾಂವ, ಮುಂಬಯಿ. ೪

ಮುಂದೆ ಸುಮಾರು ಎರಡು ಮೂರು ತಾಸು ನಾವು—ಸ್ವಂತದ ಬಗ್ಗೆ, ದೇಶದ ಬಗ್ಗೆ, ಜಗತ್ತಿನ ರಾಜಕಾರಣದ ಬಗ್ಗೆ, ಇಷ್ಟೇ ಅಲ್ಲ, ಬುಶ್‌ಕೋಟು ಮೊದಲು ಮಾಡಿಕೊಂಡು ಬ್ಲಾವುಜಿನ ವರೆಗೆ, ಅನೇಕ ವಿಷಯಗಳ ಮೇಲೆ ಹರಟೆ ಹೊಡೆದೆವು. ಕೊನೆಗೆ ಹರಿಕಥೆಯವರ ಪಲ್ಲವಿಯಂತೆ ಮಾತು ಮತ್ತೆ ಹೆಂಗುಸರ ಸ್ವಭಾವದ ಮೇಲೆಯೇ ಹೊರಳಿತು.

"ಅಲ್ರೀ ಪಾಟೀಲ, ನಿಮ್ಮ ಹೆಣ್ತಿ ಎಲ್ಲೀಯವರು? ಥಮ್ಮ ಮನಿಯವರ ಗುರುತು ಮಾಡಿಸಿಕೊಡ್ರೆಲ್ಲ?" ರಂಗಣ್ಣ ಕೇಳಿದ.

"ನಮ್ಮಂಥವರ ಮನೀಗೆ ಬರೋದು ಅಂದರ, ಎಲ್ಲಾ ಹಾಂಗ್ಹ ಬೇಕಾಗ್ತದ. ನಮ್ಮ ಕುಟುಂಬ ಡಿ. ಡಿ. ಸಿ. ಮಗಳು ಖರೆ. ಏನು ಮಾಡ್ತೀರಿ ತೊಗೊಂಡು?"

"ಯಾರು, ಡಿ. ಡಿ. ಸಿ.?" ನಾನು ಉತ್ಸುಕನಾಗಿ ಕೇಳಿದೆ.

"ವಿಜಾಪುರದ ಕುಲಕರ್ಣಿ ರಘುನಾಥರಾಯರ ಮಗಳು."

"ಅವರ ಮಗಳು ಅಂದರೆ, ಯಾದು, ಹೇಮಲತಾ?"

"ಹೌದು, ಅದs ಕನ್ಯಾನs ನಮ್ಮ ಕೊರಳಿಗೆ ಬಿದ್ದದ್ದು!"

"ಭಾಗ್ಯವಂತರು ನೀವು, ಪಾಟೀಲ!" ಒಮ್ಮೆಲೇ ಹೃನ್ಮ ಬಾಯಿಂದ ಹೊರಟಿತು. ಕೂಡಲೆ ನಾನು ಅಂತರ್ಮುಖನಾದೆ. ಆ ಕಾಲದ್ದೆಲ್ಲ ನೆನಪಾಯಿತು:

ನಾನು ಕಲಿಯುವಾಗ, ನಮ್ಮ ಮನೆಯ ಎದುರಿಗೇ ಅವರು ಇರುತ್ತಿದ್ದರು. ನಾನು ಅವರ ಮನೆಗೆ ಆಗ ಟ್ಯೂಶನ್ ಹೇಳಲು ಹೋಗುತ್ತಿದ್ದೆ. ಹೇಮಲತಾ ಅಂದರೆ ಬಂಗಾರದಂಥ ಹುಡುಗಿ. ನಮಗೆ ಒಡಹುಟ್ಟಿದ ತಂಗಿ ಇರಲಿಲ್ಲ ಅವಳನ್ನೇ ತಂಗಿ ಎಂದು ಭಾವಿಸಿ ಪ್ರೀತಿಸುತ್ತಿದ್ದೆವು. ದೀಪಾವಳಿಯಲ್ಲಿ ಕರೆದು ಅವಳಿಂದ ಆರತಿ ಮಾಡಿಸಿಕೊಳ್ಳುತ್ತಿದ್ದೆವು. ಹೇಮಾ ಆಗ ಹದಿನೈದು ಹದಿನಾರು ವರ್ಷದವಳಿರಬಹುದು. ಈಗಿನಷ್ಟು ಆಗ ಫ್ಯಾಶನ್ ಇರಲಿಲ್ಲ. ಆದರೂ ಆ ಕಾಲಕ್ಕೆ ಅಳೆಗೆ ಎಲ್ಲರೂ 'ಗ್ರೇಟಾಗಾರ್ಬೊ' ಎಂದು ಹಾಸ್ಯಮಾಡುತ್ತಿದ್ದರು. ಹಾಗೆ ಕರೆಯಿಸಿಕೊಳ್ಳುವ ಹಾಗೆ ಅವಳು

ಇದ್ದದ್ದೂ ಸುಳ್ಳಲ್ಲ. ರೂಪದ ಜೊತೆಗೆ ಎಂಥವರ ಮನಸ್ಸನ್ನೂ ಅಳಿಸಿಹಾಕಿಕೊಳ್ಳುವ ಜಾಣ್ಮೆ ಅವಳ ನಡೆನುಡಿಯಲ್ಲಿತ್ತು. ಬುದ್ಧಿಯಲ್ಲಿ ಮಾತ್ರ ಅವಳ ತೀಜ ಅಷ್ಟೊಂದು ಕಂಡುಬರುತ್ತಿರಲಿಲ್ಲ. ಆದರೆ ಅವಳನ್ನು ನೋಡಿದರೆ, ಬುದ್ಧಿಯ ವಿಚಾರನೇ ಯಾರ ತಲೆಯಲ್ಲಿಯೂ ಬರುತ್ತಿರಲಿಲ್ಲ! ಅಂಥ ಹೇಮಲತೆಯ ಗಂಡ ಈ ಪಾಟೀಲ! ಅದೇಕೋ ಒಮ್ಮೆಲೆ ಮೈ ಗುಗ್ಗರಿಗಟ್ಟಿತು; ಎದೆಯಲ್ಲಿ ಎಲ್ಲಿಯೋ ಅಳುಕಿದಂತಾಯಿತು.

"ಹಾಂಗಾದರ ನಮ್ಮ ಮನಿಯವರ ಪರಿಚಯ ನಿಮಗದ ಅಲಾ?"

"ಅಷ್ಟಿಷ್ಟಲ್ಲ, ಆಕೆಯನ್ನು ಕಂಡರ ನಮ್ಮ ತಂಗಿಯನ್ನು ಕಂಡಷ್ಟೆ ನನಗಾನಂದಾಗಬಹುದು." ನಾನು ಭಾವನಿರ್ಭರತೆಯಿಂದ ಅಂದೆ.

"ಪಾಟೀಲ, ನೀವು ಹಿಂಗ್ಯಾಕ ಮಾಡೂದಿಲ್ಲ? ಇಂದು ಅನಾಯಾಸ ಆದಿತ್ಯವಾರ. ನಿಮ್ಮ ಮನಿಯವರ್ನ ಇಲ್ಲೇ ಸಾಯಂಕಾಲ ಕರಕೊಂಡು ಬಾರಬಿಡ್ರಿ. ಎಲ್ಲರೂ ಸೇರಿ ಊಟ ಮಾಡೋಣ. ಪರಸ್ಪರ ಪರಿಚಯವೂ ಆಯಿತು, ಭೆಟ್ಟಿಯೂ ಆಯಿತು. ನಾವೂ ನಿಮ್ಮ ಮನೆಗೆ ಒಂದು ದಿನ ಬರ್ತೀವಿ." ರಂಗಣ್ಣ ಹುರುಪಿಗೆ ಬಂದು ಮಾತನಾಡಿದ.

ಆದರೆ ಪಾಟೀಲರಿಗೆ ಇದು ಒಪ್ಪಿಗೆಯಾಗಲಿಲ್ಲ. ಎನಿಸಿತು. ಅವರೆಂದರು:– "ನನ್ನ ಹೆಂಡತಿ ಮನೀ ಬಿಟ್ಟು ಒಬ್ಬಳೇ ಬರೋದು ಸಾಧ್ಯವಿಲ್ಲ. ಬರೋದು ಅಂದರ, ಸಂಗತೀಲೆ ಜರಿಜಟ್ಟಿಯಂಥಾ ಮಕ್ಕಳು ಬ್ಯಾರೆ! ಅದರಾಗ ಒಂದಕ್ಕ ಅಶಕ್ತತೆ. ಅದಕ್ಕಿಂತ ನೀನೇ ಇಂದು ಸಾಯಂಕಾಲ, ನಮ್ಮಲ್ಲೇ ಊಟಕ್ಕೆ ಬಂದುಬಿಡ್ರಿ. ಮುಂದೆ ನಾವೆಂದಾದರೂ ಬಂದೇನಂತ. ನಾ ಇವತ್ತು ಭೆಟ್ಟಿಗೆ ಅಂತ ಮುದ್ದಾಂ ಬರಲಿಲ್ಲೇನು? ನನ್ನಲ್ಲಿ ಬರಲಿಕ್ಕೆ ನಿಮಗ ಅನುಮಾನ ಯಾಕ? ಬಂದೇಬಿಡ್ರಿ!"

ಸ್ನೇಹ ಎಂದ ಮೇಲೆ ರಂಗಣ್ಣನಿಗೆ ತನ್ನ ಮನೆಯಷ್ಟೇ ಸಲುಗೆ. ಮೇಲಾಗಿ, ಹೇಮಲತೆಯನ್ನು ಕಾಣಬೇಕೆಂಬ ನನ್ನ ಲವಲವಿಕೆ ಅವನನ್ನು ಹೆಚ್ಚಾಗಿ ಹುರಿದುಂಬಿಸಿರಬೇಕು.

"ಒಳ್ಳೇದು ಪಾಟೀಲ! ನಾವಿಬ್ಬರೂ ಬರ್ತೀವಿ. ಹೆಂಗ—ಜೊಂಗುಸರ ಭೆಟ್ಟಿ ಇನ್ನೊಂದು ದಿವಸ ಆಗಲಿ!"

ರಂಗಣ್ಣನ ಈ ಮಾತಿಗೆ "ಅಗತ್ಯ ಆಗಲಿ" ಎಂದು ಹೇಳಿ ಪಾಟೀಲರು ಮನೆಗೆ ಹೊರಟರು.

ಮುಂದೆ ಎಷ್ಟೋ ಹೊತ್ತು, ನಾವಿಬ್ಬರೇ ಪಾಟೀಲನ ವಿಷಯ ಮಾತನಾಡುತ್ತ ಕುಳಿತಿದ್ದೆವು ಕಾಲೇಜಿನಲ್ಲಿರುವಾಗ ಚುರುಕು ವಿದ್ಯಾರ್ಥಿ ಎಂದು ಅವನು ಹೆಸರಾಗಿದ್ದ. ಡಿಬೇಟಿಂಗಿನಲ್ಲಿ. ನಾಟಕದಲ್ಲಿ ಚಟುವಟಿಕೆಯಲ್ಲಿ ಇರುವವನೇ ಅವನು. ತಾನು ಮಾಡಿದುದಷ್ಟೇ ಶ್ರೇಷ್ಠ, ಪರರು ಮಾಡಿದುದು ಹೀನ! ಅದರಲ್ಲಿ ಏನಾದರೊಂದು ಕುಂದು ಕಂಡುಹಿಡಿದು ಟೀಕಿಸುವವನೇ. ಅವನ ಬಾಯಿ ಸದಿಲು ಎಂಬುದು ಆಗ ಸರ್ವತೋಮುಖವಾಗಿತ್ತು. ನುಂದಿ ಹತ್ತು ಸಲ ಚಹ ಕುಡಿಸಿದರೆ, ಇವ ಒಂದು ಸಲ ಕುಡಿಸುವವ. ಅದು ಕೂಡ ಹೊತ್ತು ನೋಡಿ. ಬರಿ ಚಹದ ಮೇಲೆಯೇ ಸಾಗಿರಬೇಕು ಎಂದಿದ್ದಾಗ ಇವನ ಆಗ್ರಹ ಬಹಳ. ಗುಂಪಿನಲ್ಲಿರುವುದು ಇವನಿಗೆ ಪ್ರಿಯವಾದುದರಿಂದ, ಯಾರಾದರೂ ಹೆಚ್ಚು ಕಡಿಮೆ ಆಡಿದರೆ ಮರೆತುಬಿಡುವ. ಅವನ ಈ ಸ್ವಭಾವಕ್ಕೆ ಎಷ್ಟೋ ಜನರು 'ನಾಚಗ್ಗೇಡಿ' ಎಂದು ಕರೆಯುತ್ತಿದ್ದರು. ಈ ಹದಿನೈದು ವರ್ಷಗಳಲ್ಲಿ ಅವನ ಸ್ವಭಾವ ಹೇಗೆ ರೂಪುಗೊಂಡಿರಬಹುದು? ಹೆಂಡತಿ ಮಕ್ಕಳೊಡನೆ ಅವನು ಹೇಗೆ ಸಂಸಾರ ಮಾಡುತ್ತಿರಬಹುದು? ಇಂಥವನ ಹೆಂಡತಿಯಾಗಿರುವ ಹೇಮಲತೆ ಸುಖಿಯಾಗಿರಬಹುದೆ?

ಆ ದಿನವೆಲ್ಲ ಹೇಮಲತೆಗಾಗಿ ನಾನು ಅದೆಷ್ಟು ಚಿಂತಿಸಿದೆ? 'ಪಾಟೀಲ ಹೇಮಲತೆಗೆ ಒಪ್ಪಿಗೆಯಾಗುವ ಗಂಡನೆ' ಎಂಬ ವಿಚಾರ ಬಂದಾಗಲೆಲ್ಲ, ನನಗೇಕೋ ಸಮಾಧಾನವೆನಿಸುತ್ತಿರಲಿಲ್ಲ. ಆ ಕಾಲಕ್ಕೆ ಹೇಮಲತೆಯನ್ನು ಮದುವೆಯಾಗಬೇಕು ಎಂದು ಎಷ್ಟು ತರುಣರು ಆಕೆಯ ಗೋಪುರಗಳನ್ನು ಕಟ್ಟುತ್ತಿದ್ದರು! ಮುಂದೆ, ಅವಳು ಪಾಟೀಲರ ಕೊರಳಲ್ಲಿ ಹೇಗೆ ಮಾಲೆ ಹಾಕಿದಳೋ ಯಾರು ಬಲ್ಲರು? ನಿರಾಕರಿಸುವುದಕ್ಕಾದರೂ ಧೈರ್ಯ ಬೇಕಲ್ಲ! ಪ್ರೇಮದ ಜೇಡನ ಜಾಳಿಗೆಯಲ್ಲಿ ಮೊದಲೇ ಸೊಡರದೆ ಇದ್ದರೆ, ಯಾವ ಹೆಣ್ಣಾದರೂ 'ವರ' ಎಂದು ಬಂದವನನ್ನು ವರಿಸಲು ಸಾಮಾನ್ಯವಾಗಿ ಹಿಂದೆಗೆಯುವುದಿಲ್ಲ. ಎಂದ ಮೇಲೆ ಪಾಟೀಲನಂಥ ವರನನ್ನು ನಿರಾಕರಿಸುವುದು ಹೇಗೆ? ಶಿಕ್ಷಣ, ನವಳರಿ, ತುಸು ಮಟ್ಟಿಗೆ ಆಸ್ತಿ ಇವುಗಳೆಲ್ಲ ಇದ್ದ ಮೇಲೆ ಆಯಿತಲ್ಲ! ಆದರೆ ಗುಣ? ಗುಣ ಏನು? ಎಲ್ಲರಲ್ಲಿಯೂ ಇವ್ವೇ ಇರುತ್ತವೆ. ನಮ್ಮ ಮೈ ಜೊತೆಗೆ ಅವೂ ಬೆಳೆದಿರುತ್ತವೆ. ಅವು ಇವೆಯೋ ಇಲ್ಲವೋ ಎಂದು ನೋಡುವ ಕಾರಣವಿಲ್ಲ; ಎಂಥವಿದ್ದರೂ ಸರಿಯೆ!

ಇಂಥ ಏನೇನೋ ವಿಚಾರದ ಲಹರಿಯಲ್ಲಿ ನಿಲುತಿರುವಾಗ, ಸಾಯಂಕಾಲ ಹೇಗಾಯಿತೋ ನನಗೆ ಗೊತ್ತೇ ಆಗಲಿಲ್ಲ.

ಕೊಟ್ಟ ವಿಳಾಸದಂತೆ, ನಾನು ಮತ್ತು ರಂಗಣ್ಣ ಪಾಟೀಲರ ಮನೆಗೆ ಹೊರಟೆವು 'ಹದಿನೈದು ವರ್ಷಗಳ ಮೇಲೆ ಹೇಮಲತೆಯ ಭೆಟ್ಟಿಯಾಗುವದಲ್ಲ' ಎಂಬ ಲವಲವಿಕೆ ನನ್ನ ನಡಿಗೆಯನ್ನು ಒತ್ತರಗೊಳಿಸಿತ್ತು. ಅವಳನ್ನೂ, ಅವಳ ಮಕ್ಕಳನ್ನೂ ಬರಿಗೈಯಿಂದ ಕಾಣುವುದೇ? ಭಾವಿಸಿದ ತಂಗಿಯಾದರೂ ಭೆಟ್ಟಿಗೆ ಹೋಗುವಾಗ ಏನಾದರೂ ಒಯ್ಯುವುದು ಬೇಡವೆ? ಆದರೆ ಆಯತ ಹೊತ್ತಿಗೆ ಈ ವಿಚಾರ ಬಂದು ಉಪಯೋಗವೇನು? ಏನನ್ನಾದರೂ ತರಲು ವೇಳೆ ಎಲ್ಲಿತ್ತು? ಮೇಲಾಗಿ ಹೀಗೆ ಒಬ್ಬರಿ ಪಾಟೀಲರ ಮನಸಿಗೆ ಬರುವುದೋ ಇಲ್ಲವೋ ಯಾರಿಗೆ ಗೊತ್ತು? ಈ ವಿಚಾರದಲ್ಲಿರುವಾಗಲೆ, ಮನೆ ಸಮೀಪಿಸಿತು ಬಾಗಿಲಲ್ಲಿ ನಮ್ಮ ಹೆಜ್ಜೆಯ ಸಪ್ಪಳವಾಗುತ್ತಲೇ ಪಾಟೀಲರು ನಮ್ಮನ್ನು ಸ್ವಾಗತಿಸಿ ಒಳಗೆ ಕರೆದೊಯ್ದು ಕುರ್ಚಿಯಲ್ಲಿ ಕುಳ್ಳಿರಿಸಿದರು. ಸಣ್ಣದನಿಯಲ್ಲಿ ರೇಡಿಯೋ ನಡೆದಿತ್ತು. ಆ ಕೋಣೆಯನ್ನೊಮ್ಮೆ ಎಲ್ಲ ಪಾರ್ಶ್ವಗಳಿಂದಲೂ ಅವಲೋಕಿಸಿದೆ. ತಕ್ಕಮಟ್ಟಿಗೆ ಓರಣವಾಗಿತ್ತು.

ಪುಣೆಯಲ್ಲಿ ನಮ್ಮ ಏಜಂಟರು:
ಶ್ರೀ. ಎಸ್. ವಿ. ಮಹಳಕರೆ
೪೩ ರವಿವಾರಪೇಠ ಪುಣೆ ೨

"ಬಡವರ ಮನಿ ಅಸಹ್ಯಪಟ್ಟುಕೋ ಬ್ಯಾಡ್ರಿ, ಅತ್ಯ."

"ಹಾಂಗಿದ್ದರ ನಾವು ಬರ್ತಿದ್ದೆವೆಲ್ಲೆ? ಇಲ್ಲೇನು ನಾವು ನಿಮ್ಮ ಅದಾಯದ ಲೆಕ್ಕ ನೋಡಲಿಕ್ಕೆ ಬಂದಿಲ್ಲ!" ರಂಗಣ್ಣ ನಗುತ್ತ ಉತ್ತರಿಸಿದ.

"ಪಾಟೀಲ, ನಿಮ್ಮ ಹುಡುಗರಿಲ್ಲೆ ಕಾಣವೊಲ್ಲವು? ಸಂಜ್ಯಾ ಎಲ್ಲಿಗೆ ಬಂದ್ರದ?" ನಾನು ಉತ್ಸುಕನಾಗಿ ಕೇಳಿದೆ.

"ಇನ್ನೂ ಎರಡುತಿಂಗಳಿಗೇನೂ ಬಂದಿಲ್ಲ. ಅದು ಬರಲಿಕ್ಕೂ ಇಲ್ಲ. ಎಲ್ಲಕ್ಕೂ ಸಣ್ಣದು, ಅರೇಳು ತಿಂಗಳದ್ದಿತ್ತು; ಪೊನ್ನೆ ಸತ್ತು ಹೋತ್ಯು. ಅನೇನು, 'ಹೀಂಗಷ್ಟ ಹುಟ್ಟತಿರ್ತಾವ, ಸಾಯತಿರ್ತಾವ!"

ಪಾಟೀಲರ ಈ ಉತ್ತರ ಮಿಂಚು ಹೊಡೆದಂತೆ ನನ್ನ ಎದೆಯನ್ನು ನಡುಗಿಸಿತು. "ಉಳಿದ ಮಕ್ಕಳುರಷ್ಟ?" ನಾನು ಕೇಳಿದೆ.

"ಒಂದು ಸಾಯಲಿಕ್ಯಾಗೇದ. ಇನ್ನೊಂದು ಲಿವ್ವರ್ ಬೆಳೆದು ಹಾಸಿಗೀ ಹಿಡಿದ್ರದ. ಹೀಂಗಷ್ಟ ನಡದಿರ್ತದೇಲ್ರಿ. ಅದರಕಡೆ ಬಹಳ ಲಕ್ಷ್ಯಕೊಡೋ ಹಾಂಗಿಲ್ಲ."

ಆಷ್ಟರಲ್ಲಿ ಒಬ್ಬ ಏದಾರು ವರ್ಷದ ಹುಡುಗ—ಪಾಟೀಲರ ಮಗನೇ ಅವ—ಅವರ ಹತ್ತಿರ ಬಂದು—'ಅಪ್ಪಾ, ಅವ್ವ ಯಾಲಕ್ಕೀ ಬೇಡ್ತಾಳ.' ಎಂದು ಹೇಳಿದ.

ಪಾಟೀಲರು ಎದ್ದು ಕಪಾಟಿನೊಳಗಿಂದ ಯಾಲಕ್ಕಿ ತೆಗೆದು ತಾನೇ ಒಳಗೆ ಒಯ್ದರು.

ನಾನು ಆ ಹುಡುಗನನ್ನು ಮಾತನಾಡಿಸಿದೆ:

"ನಿನ್ನ ಹೆಸರೇನೋ?"

"ಸುಹಾಸ ಪಾಟೀಲ, ಮನಿ ನಂಬರ ೩೬, ಮಂಗಳವಾರ ಪ್ಯಾಟಿ." ಹೇಳಿತು ಹುಡುಗ; ತುಸು ದಿಟ್ಟನೇ ಕಾಣಿಸಿದ.

ಅವನು ಮನೆಯ ನಂಬರು, ಪೇಟೆ ಹೇಳಿದ್ದನ್ನು ಕೇಳಿ ನಮ್ಮಿಬ್ಬರಿಗೂ ನಗೆ ಬಂದಿತು. ನಾನು ಅವನನ್ನು ಹತ್ತಿರ ಕರೆದು ಮುದ್ದಾಡಿದೆ.

"ನಿನ್ನ ಹೆಸರಷ್ಟೇ ಹೇಳಬೇಕು. ಮನಿ ನಂಬರು, ಪ್ಯಾಟಿಯ ಹೆಸರು ಯಾಕ ಹೇಳ್ತೀ" ರಂಗಣ್ಣ ಕೇಳಿದ.

"ಅದು..... .....ಅದು ನಾ ಎಲ್ಲರಷ್ಟ ತಪ್ಪಿಸಿಕೊಂಡರ ಬೇಕಾಗ್ತದ."

"ತಪ್ಪಿಸಿಗೋತೀ ಯಾಕ? ಓಡಿ ಹೋಗ್ತಿಯೇನು?"

"ಉಂಹುಂ. ಸಾಲಿಗೆ ಹೋದಾಗ, ಆಡಲಿಕ್ಕೆ ಹೋದಾಗ ತಪ್ಪಿಸಿಕೊಂಡರ?"

"ಹಿಂಗ ಹೇಳಬೇಕು ಅಂತ ಯಾರು ಹೇಳಿಕೊಟ್ಟಾರ?"

"ಅವ್ವ. ಒನ್ಸೆ ಹಿಂಗ ತಪ್ಪಿಸಿಕೊಂಡಿದ್ದೆ; ಅದಕ್ಕ."

ಹೇಮಲತೆಯ ಹುಷಾರಿಯ ಬಗ್ಗೆ ಕೌತುಕವೆನಿಸಿತು. ಅವರೆ ಸಾವ! ಪೊನ್ನೆಯೇ ಮಗುವನ್ನು ಕಳೆದುಕೊಂಡಿದ್ದಾಳೆ! ಇಂಥ ಅನಳ ದುಃಖದಲ್ಲಿ ನಾವು 'ಗಮ್ಮತ್ತು' ಎಂದು ಊಟಕ್ಕೆ ಬಂದಿದ್ದೇನೆ.

"ಏಳ್ರಿ, ಕೈಕಾಲು ತೊಳೆದುಕೊಳ್ರಿ, ಒಳಗೇ ಬರ್ರಿ!" ಪಾಟೀಲರು ಕರೆದು ಮತ್ತೆ ಒಳಗೆ ಹೋದರು.

ಬಟ್ಟೆಗಳನ್ನು ಬಿಚ್ಚಿ ನಾವು ಒಳಗೆ ಹೋಗುವಾಗ, ಸುಹಾಸ ಅಲ್ಲಿಯೇ ನಿಂತಿದ್ದ. 'ನಡಿ ಊಟಕ್ಕ' ನಾನು ಕರೆದೆ. ಅವನು ಕತ್ತು ಅಲ್ಲಾಡಿಸಿ ನೆಲ್ಲಗೆ—"ಅಪ್ಪ ಬೈತಾನ, ನಾವು ಹಿಂದುಗಡೆ ಉಣ್ತೇವಿ."

"ಬಯ್ಯುವದಿಲ್ಲ, ಬಾ!"

"ಬ್ಯಾಡ. ಹಾಂಗ ಬಂದರ, ನೀವು ಹೋದಮ್ಯಾಲ ಅಪ್ಪ ಹೊಡೀತಾನ."

ನಾವು ಮುಂದೆ ಮಾತಾಡಲೇ ಇಲ್ಲ. ನಡುಮನೆಯೊಳಗಿಂದ ಬಚ್ಚಲು ಮನೆಗೆ ಹೋಗುವಾಗ, ಕಂಬಳಿಯ ಮೇಲೊಂದು ಮಗು; ದುಬಟೆಯ ಮೇಲೊಂದು ಮಗು—ಮಲಗಿದುದು ಕಾಣಿಸಿತು. ಒಂದು ಕೂಸಿನ ನೈಯಂತೂ ಎಲುಬಿನ ಹೆಂದರವೇ ಆಗಿತ್ತು. ಕಾಲು ತೊಳೆದುಕೊಂಡು ಎಲೆಯ ಮೇಲೆ ಕುಳಿತೆವು. ಅಡಿಗೆ ಮನೆಯಲ್ಲಿಯೇ ಎಲೆಯನ್ನು ಬಡಿಸಿದ್ದರು. ಹೇಮಲತೆ ನಮ್ಮ ಕಡೆಗೆ ಬೆನ್ನು ಮಾಡಿ ಬಾಗಿ, ಬಡಿಸಲು ಪದಾರ್ಥವನ್ನು ತಕ್ಕೊಳ್ಳುತ್ತಿದ್ದಳು. ದೊಡ್ಡ ಹುಡುಗನೊಬ್ಬ ನಮಗೆ ನೀರನ್ನು ತುಂಬಿಟ್ಟು, ಹೊರಗೆ ಹೋದ. ಬಡಿಸುವುದಾಯಿತು. ಹೇಮಲತೆಯ ಕಡೆಗೆ ನೋಡುವ ಧೈರ್ಯವೇ ನನಗಾಗಲೊಲ್ಲದು. ಕೆಳಗೆ ಮೋರೆ ಹಾಕಿಕೊಂಡು ಕುಳಿತೇ ಊಟಕ್ಕೆ ಪ್ರಾರಂಭ ಮಾಡಿದೆ. ಎಲೆಯಲ್ಲಿ ಅನೇಕ ಪದಾರ್ಥಗಳನ್ನು ಬಡಿಸಿದ್ದರು. ಯಾವುದನ್ನು ಬಾಯಲ್ಲಿಟ್ಟರೂ ಅಷ್ಟೇ, ಅದಕ್ಕೆ ರುಚಿಯೆಂಬುದೇ ಕಾಣಲೊಲ್ಲದು! ಪಾಟೀಲರು ನಮ್ಮಿಬ್ಬರಿಗೂ ಆಗ್ರಹ ಮಾಡಿಯೆ ಮಾಡುತ್ತಿದ್ದರು.

"ರಾಯರ, ನಿಮ್ಮ ಮನೀ ಹಾಂಗ ನಾಜೂಕು, ರುಚಿ ನಮ್ಮಲ್ಲಿಲ್ಲ. ಎತ್ಲಾಗ್ರರ ಕುಚ್ಚಿ ಇಡತಾರ. ನತುಗ ನಡೀತದ. ನಿಮ್ಮಂಥವರು ಬಂದಾಗ ಕಠಿಣ. ಇಂದು ಪೀರು ನಾನೇ ಮಾಡೀನಿ. ಹ್ಯಾಂಗ ಇದ್ದಾಂಗ ರುಚಿ ಮಾಡಿಕೊಂಡು ಉಣ್ರಿ ಅತ್ಯ....ಇವತ್ತೊಂದು ದಿವಸ! ನಾಳೆ ನಿನ್ನ ಮನೀ ರುಚಿ ರುಚಿ ಊಟ ನಿಮಗಿದ್ದs ಅದ."

"ಯಾವ ಪದಾರ್ಥ ಇದ್ದರೇನು? ರುಚಿ ಪದಾರ್ಥದಲ್ಲಿಲ್ಲ, ಉಣ್ಣುವವರ ನಾಲಿಗೆಯೊಳಗದ; ಉಣಿಸುವವರ ಮನಸಿನೊಳಗದ.'"

ರಂಗಣ್ಣ ಆಡಿದ ಈ ಮಾತು ಎಷ್ಟು ಸತ್ಯವಾಗಿತ್ತು!

"ಪಾಟೀಲ, ನಿಮ್ಮ ಎರಡೂ ಹುಡುಗರನ್ನ ನಮ್ಮ ಜೋತಿಗೆ ಊಟಕ್ಕ ಕೂಡಿಸಬೇಕಾಗಿತ್ತು." ನಾನು ತಡೆಯಲಾರದೆ ನುಡಿದೆ.

"ತಿಂದ ತಿಂತಾರ. ನಮ್ಮ ಊಟಾದ ಮ್ಯಾಲ ಎಲ್ಲಾ ಹಾಕ್ಕೊಂಡು ಬಳ್ಳರಸ್ತಾರ. ಅವರದ್ಯಾಕ ನೀವು ಕಾಳಜೀ ಮಾಡ್ತೀರಿ?"

ನನಗೆ ಊಟವೇ ಹೋಗಲೊಲ್ಲದು. ಪಾಟೀಲರ ಒಂದೊಂದು ಮಾತೂ ಚಾಟಿಯು ಎಟನಂತೆ ನನ್ನ ಹೃದಯದ ಮೇಲೆ ಬಾಸುಳಿ ಮೂಡಿಸುತ್ತಿತ್ತು.

"ಗುರುತು ಹತ್ತಿತೇನು ಇವರದು?" ನನ್ನ ಕಡೆಗೆ ಬೆರಳು ಮಾಡಿ ತೋರಿಸಿ, ಪಾಟೀಲರು ಹೆಂಡತಿಯನ್ನು ಕೇಳಿದರು.

ಒಂದೇ ಕ್ಷಣ, ನಾನು ಹೇಮಲತೆಯನ್ನು ನೋಡಿದೆ. ಹೇಮಲತೆ ನನ್ನನ್ನು ನೋಡಿದಳು. 'ಹುಂ' ಎಂಬುದಿಷ್ಟೇ ಅವಳ ಕತ್ತು ದಾಟಿ ಹೊರಬಂತು. ಅವಳನ್ನು ಆಗ ಮಾತನಾಡಿಸಲು ನನ್ನ ಮನಸ್ಸೇ ಸಿದ್ಧವಿರಲಿಲ್ಲ. ಅವಳೂ ಅಷ್ಟಕ್ಕೇ ಮೌನತಾಳಿದಳು.

ಹಾಗೂ ಹೀಗೂ ಊಟದ ಶಾಸ್ತ್ರ ಮುಗಿಯಿತು. ಒಂದೊಂದು ತುತ್ತೂ ಗಂಟಲನ್ನು ಹಿಡಿಯುತ್ತಿತ್ತು! ಪಾಟೀಲರು ಪದಾರ್ಥ-ಕ್ಕೊಮ್ಮೆ ಆಗ್ರಹ ಮಾಡುತ್ತಿದ್ದರು. ನಡುನಡುವೆ ಆ ಮಾತು ಈ ಮಾತು ಆಡುತ್ತಿದ್ದರು. ಅದಕ್ಕೆಲ್ಲ ರಂಗಣ್ಣನೇ ಉತ್ತರಕೊಡುತ್ತಿದ್ದ.

ನಾವು ಕೈತೊಳೆದು ಹೊರಬಂದೆವು. ಹೊರಕೋಣೆಯಲ್ಲಿ ಕುಳಿತ ಇಬ್ಬರೂ ಹುಡುಗರು ಒಳಗೆ ಹೋದರು. ತಾಂಬೂಲ ಸಿದ್ಧ-ವಾಗಿತ್ತು; ಆದರೆ ಸಿಗರೇಟು ಇರಲಿಲ್ಲ. ರಂಗಣ್ಣನಿಗೆ ಅದಿಲ್ಲದೆ ಆಗುವಹಾಗಿಲ್ಲ. ಅವನ್ನು ತರಲು ಪಾಟೀಲರು ಅವಸರದಿಂದ ಸಮೀ-ಪದ ಅಂಗಡಿಗೆ ಹೋದರು

ಹೇಮಲತೆಯನ್ನು ಮಾತನಾಡಿಸಲು ಇದೇ ಹೊತ್ತು ಎಂದು ನಾನು ರಂಗಣ್ಣನಿಗೆ ಹೇಳಿ, ಒಳಗೆ ಹೋದೆ. ಹೇಮಲತೆ ನೆಲದ ಮೇಲೆ ಅಂಗಾತ ಮಲಗಿ, ಹೊಟ್ಟೆಯನ್ನು ತಿಕ್ಕಿಕೊಳ್ಳುತ್ತಿದ್ದಳು. ನನ್ನನ್ನು ನೋಡಿ ಚಿಟ್ಟನೆ ಎದ್ದು, ಸೆರಗನ್ನು ಸಾವರಿಸಿಕೊಂಡು, ತುಟಿಯಲ್ಲಿ ನಗೆ ತಂದು—"ಎಸ್ಟು ದಿವಸದ ಮ್ಯಾಲ ಭೆಟ್ಟಿ ಆತು, ಶೀನಣ್ಣಾ. ಸುಖವಾಗಿದ್ದೀಯಾ?" ಎಂದು ಕೇಳಿದಳು. ಕೇಳುತ್ತಿರು-ವಾಗಲೇ ಅವಳ ಕಣ್ಣುಗಳು ನೀರಿನಿಂದ ತೊಯಿದುವು.

"ಇದ್ದೀನಿ, ಹೇಮಾ! ನಾವೆಲ್ಲರೂ ಸುಖವಾಗಿದ್ದೀವಿ. ನೀನು ಸುಖವಾಗಿದ್ದೀಯಾ?" ನಾನು ಇದನ್ನು ಕೇಳುತ್ತಿದ್ದೆನಷ್ಟೇ. ಆದರೆ ಅವಳು ಏನು ಹೇಳಬೇಕು? ಅವಳಿಗೆ ಸುಖವಿಲ್ಲದ್ದು ಕಣ್ಣಿಗೇ ಕಾಣು-ತ್ತಿತ್ತು. ದುಃಖದ ಬೇಗೆಯಲ್ಲಿ ಅವಳ ಆತ್ಮಾಹುತಿಯಾಗುತ್ತಿರುವು. ದನ್ನು ನಾನು ಕಣ್ಣಾರೆ ನೋಡುತ್ತಿದ್ದೆ. ಆದರೂ ಆ ಮಾತನ್ನು ಕೇಳಿದೆ. ಅವಳ ಬಾಯಿಂದ ಬಂತು:— "ಸುಖವಾಗಿದ್ದೀನಪಾ." ಅವಳನ್ನು ಕಾಲಿನಿಂದ ತಲೆಯ ವರೆಗೆ ನೋಡಿದೆ-ಎಂಥ ನಿಸ್ತೇಜ-ನಿಷ್ಪ್ರಭವಾದ ಮುಖ! ಅವಳ ಮುಂಚಿನ ಚೆಲುವಿಕೆ ಎಲ್ಲಿಯೋ ಮಾಯವಾಗಿದೆ. ಬಳುಪಿಟ್ಟ, ಬಡಕಲು ದೇಹ! ಹೈಯಲ್ಲಿ ತ್ರಾಣವಿಲ್ಲದುದರಿಂದ ಪ್ರಾಣವೆಲ್ಲ ಕಣ್ಣಿಲ್ಲಿಯೇ ಅವಿತುಕೊಂಡಿದೆ! ನನ್ನಿಂದ ಆ ದೃಶ್ಯ ನೋಡುವುದೇ ಆಗದಂತಾಯಿತು!

"ನಮ್ಮವರು ಹೊರಗಿದ್ದಾರೇನು" ಕಳ್ಳ ದನಿಯಲ್ಲಿ ಅಂಜಂ-ಜುತ್ತ ಕೇಳಿದಳು.

"ಇಲ್ಲ. ಸಿಗರೇಟು ತರಲಿಕ್ಕೆ ಅಂಗಡಿಗೆ ಹೋಗ್ಯಾರ."

"ಶೀನಣ್ಣಾ, ನಾ ಇನ್ನ ಬಹಳ ದಿವಸ ಬದಕೋದಿಲ್ಲ....." ಮಾತಿನೊಂದಿಗೆ ಅಳುವು ತುಂಬಿಬಂತು. ನಾನು ಗಾಬರಿಯ ಧ್ವನಿಯಲ್ಲಿ ಕೇಳಿದೆ:

"ಯಾಕೆ?... ....ಹೀಂಗ್ಯಾಕೆ ಹೇಮಾ?"

ಅಳುವಿನೊಡನೆಯೆ ಹೇಮಾ ಮಾತನಾಡಲು ತೊಡಗಿದಳು:

"ಶೀನಣ್ಣಾ....! ಹೆಣ್ಣಿಗೆ ಗಂಡ, ಮಕ್ಕಳು, ಸಂಸಾರ ಅಂದರ ಸುಖದ ಆಗರ ಅಗಿರತ್ತದಂತ. ಆದರ ನನ್ನ ಪಾಲಿಗೆ ಆ ಸುಖ ಎಲ್ಲಿ ಅದ್ಯಾನೋ ಏನೋ ಅಂಬೂದು ತಿಳಿಯದ್ದಾಂಗ ಆಗೇದ."

ಕಳವಳದಿಂದ ನಾನು ನುಡಿದೆ:

"ಹೌದು, ನಾನೂ ಕೇಳಿದೆ. ಮೊನ್ನೆಯೇ ನಿನ್ನ ಚಿಕ್ಕ ಮಗುವೊಂದು ಹೋಯ್ತಂತೆ, ಇನ್ನೆರಡು ಜಡ್ಡು ಬಿದ್ದಿವೆಯಂತೆ!"

"ಇದಷ್ಟೇ ಆಗಿದ್ದರೆ, ನಾನು ಹ್ಯಾಂಗಾದರೂ ಸಹಿಸಿಕೊಂಡು ಬದುಕಿರಲಿಕ್ಕೆ ಮನಸ್ಸು ಮಾಡತಿದ್ದೆ ಶೀನಣ್ಣಾ!"

"ಮತ್ತೇನಾಗೇಡ ನಿನಗ—...."

"ಮತ್ತೇನಾಗೇದಂತ ಕೇಳ್ತೀಯೂ? ನನಗ ಸುಖಾ ಆಗ-ಬೇಕೆಂಬೂ ಉದ್ದೇಶದಿಂದೇ ನಮ್ಮ ತಂದಿ, ಇವರ ಕೊರಳಿಗೆ ನನ್ನ ಕಟ್ಟಿದರು....."

ದುಃಖ ಉಮ್ಮಳಿಸಿ ಬಂತು ಹೇಮಲತೆಗೆ. ನಾನು ಕಂಗೆಟ್ಟವ-ನಂತೆ ಸುಮ್ಮನೆ ನಿಂತುಬಿಟ್ಟೆ. ಹೇಮಾ ತನ್ನ ಮಾತನ್ನು ಮುಂದು-ವರಿಸಿದಳು:

"ಇಮ್ಮನೇ ವರವಾದರೂ ಪಾಲಿಗೆ ಬಂದೆಮ್ಮು ಅಂದೆ. ಆದರೆ ಪಾಲಿಗೆ ಬಂದೆದ್ದು ಪಂಚಾಮೃತವಾಗಿಲ್ಲ; ಕಾಲಕೂಟ ವಿಷ ಆಗೇದ. ಶೀನಣ್ಣಾ, ನನ್ನ ದುಃಖ ಊರ ಮುಂದೆ ಹೇಳಿಕೊಳ್ಳಲಿ? ಅನ್ನ ಮುದ್ದಿ ಅತ್ಯ ಅಂತ, ಮೊನ್ನೆ ಝಾಕಣೇಲೆ ಹೊಡೆದರು. ಇದು ನೋಡು ಫಾಯು ಕಣ್ಣ ಮ್ಯಾಲ! ಈಗ ಮಾಯ್ದಿದೆ. ಹಿಂದಕ್ಕೊಮ್ಮೆ ಹೊರಗಿಂದ ಅನರು ಬಂದಾಗ ನಾ ಮನಿಯೊಳಗಿರಲಿಲ್ಲ ಅಂತ, ಮಂಗಳ ಸೂತ್ರ ಹರಕೊಂಡು ಮೂರು ದಿನಾ ನನ್ನ ಹೊರಗ ಹಾಕಿದ್ದರು! ಮೊನ್ನೆ ಕೂಸು ಒಂದು ಹೋತ್ಯಲಾ; ಇನ್ನೆರಡು ಜಡ್ಡಿಲೆ ಮಲಗ್ಯಾವ. ಅವು ಸಾಯೋದಕ್ಕ ಮುಂಚೆ ನಾನಷ್ಟ ಸತ್ತರ ನಿರಂಬಳಾಗ್ತೀದ. ನೀ ಹೋಗು, ಶೀನಣ್ಣಾ. ಅವರು ಬಂದುಗಿಂದಾರು. ಯಾರಾದರೂ ನನ್ನ ಜೋಡಿಗೆ ಮಾತಾಡಿದರ ಅವರಿಗೆ ಸೇರಿಕಿ ಬರೋದಿಲ್ಲ. ನನ್ನ ದುಃಖ ನನ್ನವರ ಮುಂದ ಹೇಳಿಕೊಳ್ಳಿಕ್ಕೂ ನನಗ ಸ್ವಾತಂತ್ರ್ಯ ಇಲ್ಲ."

ಹೇಮಾನ ಕೊರಳು ಬಿಗಿದು, ಮುಂದೆ ಮಾತನಾಡಲು ಆಗಲೇ ಇಲ್ಲ. ನನ್ನದೂ ಅದೇ ಸ್ಥಿತಿ ಆಗಿತ್ತು. ಹೊರಗೆ ಬಂದು ಕುಳಿತೆ. ನೋಡಿದ್ದನ್ನೆಲ್ಲ ಮರೆಯಬೇಕೆಂದು ಎಲೆ ಅಡಿಕೆ ನೆಪ್ಪುತ್ತ. ಅಲ್ಲಿ ಬಿದ್ದ ಪತ್ರಿಕೆಯನ್ನೆತ್ತಿ ನೋಡತೊಡಗಿದೆ. ಈ ಸಾಲುಗಳು ಕಣ್ಣಿಗೆ ಬಿದ್ದುವು:—

'The woman who nourishes her despair in her lonely silence, feeding it with mighty tears and covering it with the daily patient smile, is a widow from her birth.'

ನನ್ನ ಕಣ್ಣು ಅಲ್ಲಿಯೇ ಸ್ಥಿರವಾದುವು!

ಕೌಟುಂಬಿಕ ಜೀವನಚಿತ್ರಗಳು!

ಶ್ರೀಮತಿ ಸರೋಜಿನಿ ಮಹಿಷಿ ಎಂ. ಎ. ಬೆಳಗಾಂವಿ

●

[ಈ ಜೀವನಚಿತ್ರಗಳು ಯಾವುದೇ ವಿಶಿಷ್ಟವ್ಯಕ್ತಿಯನ್ನು ಉದ್ದೇಶಿಸಿ ಬರೆದುವುಗಳಲ್ಲ; ವಾಸ್ತವಿಕತೆಗೆ ಹೊಂದಿಕೊಂಡಿರುವಂತಹ ಕಲ್ಪನೆ ಇವುಗಳಲ್ಲಿವೆ. ಯಾರಾದರೂ ಇದಕ್ಕೆ ವಿರುದ್ಧವಾಗಿ ತೀರ್ಮಾನಿಸಿದಲ್ಲಿ ಅದಕ್ಕೆ ಲೇಖಕರು ಹೊಣೆಯಲ್ಲ. ಲೇ.]

—●—

೧

ಪುತ್ರಪ್ರೇಮ!

ಈ ಮಾತು ಇಂದಿನದಲ್ಲ ಬಿಡಿ; ಹಿಂದಿನದು!

ಶೀನೂ ಅಗಿನ್ನೂ ನಮ್ಮೂರಿನಲ್ಲಿಯೇ ಓದುತ್ತಿದ್ದ; ಶೀನಿಯ ದೆ ಶಾಸ್ತ್ರಿಗಳಿಗೆ, ಮಗನು ಬಿ. ಎ. ಆದುದನ್ನೂ, ಮನೆಗೆ ಸೊಸೆ ಂದಿರುವುದನ್ನೂ ಅದಷ್ಟು ಬೇಗ ನೋಡಬೇಕೆಂದು ತವಕ! ತಾಯಿ ಲ್ಲದ ಮಗುವೆಂದು ಮಗವನ್ನು ಅಂಗೈಯಲ್ಲಿಟ್ಟು ಬೆಳೆಸುತ್ತಿದ್ದರು. ಮನೆಯಲ್ಲಿ ಶಾಸ್ತ್ರಿಗಳ ಪಾಂಡಿತ್ಯ, ಔಷಧಜ್ಞಾನಗಳ ಪ್ರಭಾವ ಬಹಳ! ರ ಮಾತನ್ನು ಉಗುಳು ಹಾಕಿ ದಾಟುವವರು ಅಲ್ಲಿರಲೇ ಇಲ್ಲ! ಗೆ ಒಂದೇ ಆಗಿದ್ದ ಹೈಸ್ಕೂಲಿನಲ್ಲಿ, ಶಾಸ್ತ್ರಿಗಳು ಶೀನಿಯನ್ನು ಟ್ರಿಕ್ಕಿನ ಹಿಂಬದಿಗಿರುವ ವರ್ಗದಲ್ಲಿ, ಮೊದಲಿಗೇ ಸೇರಿಸಿಬಿಟ್ಟರು! ನೀನು ಶೀನಿ ಮೆಟ್ರಿಕ್ಕಿಗೆ ಬರಲು ಒಂದು ವರ್ಷ, ಪಾಸಾಗಲು, ಷ! ಒಂದು ವರುಷ ಉರುಳಿತು; ಶೀನಿ ಮುಂದಿನ ಕ್ಲಾಸಿಗೆ ರುಳಿದ! ಶಾಸ್ತ್ರಿಗಳಿಗೆ ಅಪಾರ ಸಂತೋಷವಾಯಿತು. ತಾವೇ ನ್ನ ಮಗನಿಂದ ಅಸುರಕೋಶವನ್ನು ಗಟ್ಟಿಮಾಡಿಸಿಕೊಳ್ಳುತ್ತಿದ್ದರು. ಯೈ ತೂಕಡಿಸಿದರೆ, ಅವನ ತಲೆ ಸವರಿ, ಬೆನ್ನ ಮೇಲೆ ಕೈಯಿಳಿದು, ತ್ತಿ ಮೆಲ್ಲನೆ ಎಚ್ಚರಿಸುತ್ತಿದ್ದರು! ಆದರೆ ಹಿಂದಿನ ಕ್ಲಾಸಿನಲ್ಲಿ ರುಳಿದಂತೆ, ಇಲ್ಲಿ ಒಂದೇ ವರ್ಷದಲ್ಲಿ ಉರುಳುವುದು ಶೀನಿಗೆ ಸಾಧ್ಯ ಗಲಿಲ್ಲ; ಮೂರು ವರುಷಗಳು ಬೇಕಾದುವು: ಶೀನಿಯ ವೇಪರನ್ನು ಕ್ಷೆಯಿಲ್ಲದೆ 'ಕರೆಕ್ಟ್' ಮಾಡಿದ್ದಕ್ಕಾಗಿ, ಶಾಸ್ತ್ರಿಗಳು ಪರೀಕ್ಷೆ ಗೆ ನೌನದಲ್ಲಿಯೇ ಶಾಸನ ವಿಧಿಸದಿರಲಿಲ್ಲ; ಅಂತೂ ಶೀನಿಯ ಸ್ಕೂಲು ಶಿಕ್ಷಣ ಮುಗಿಯಿತು!

ಮುಂದಿನ ಶಿಕ್ಷಣಕ್ಕೆ ಊರು ಬಿಡಬೇಕು! ಶಾಸ್ತ್ರಿಗಳಿಗೆ ದುಃಖ ದರೂ, ಮಗನ ಅಭ್ಯುದಯವನ್ನೇ ನೆನೆದು, ಕಳಿಸುವ ಸಿದ್ಧತೆಯಲ್ಲಿ ಡಗಿದರು: ರಾತ್ರಿಯ ಓದಿನಿಂದ ಮಗನ ತಲೆಗೆ ತ್ರಾಸವಾದೀತೆಂದು, ತೆಂತಹ ವನಸ್ಪತಿಗಳಿಂದಲೋ ದಿವ್ಯೌಷಧಿಯನ್ನು ತಯಾರಿಸಿ ಟು; ದಿನಾಲು (ಎಂತಹ ಸೆಕೆಯಿದ್ದರೂ) ಕಾಯ್ದ ನೀರನ್ನೇ ಡಿಯಬೇಕೆಂದು ಆಜ್ಞೆ ವಿಧಿಸಿದರು! ಪೋಲಿ ಹುಡುಗರೊಡನೆ ಚರಿಸಬೇಡವೆಂದು ಕಟ್ಟಪ್ಪಣೆ ಮಾಡಿದರು. ಹೊರಡುವ ದಿನ ಲದೇವರಿಗೆ, ಊರ ಹನುಮಪ್ಪನಿಗೆ ನೈವೇದ್ಯಮಾಡಿಸಿದರು. ಹೊರ- ವಾಗ ಮುತ್ತೈದೆಯರು ಇದಿರು ತುಂಬಿದ ಕೊಡ ತರುವಂತೆಯೂ ನೋಡಿಕೊಳ್ಳಲಾಗಿತ್ತು!

ಶೀನಿ, ಮನೆಯ ದೇವರಿಗೆ ಅಡ್ಡಬಿದ್ದು ಹೊರಬಂದ! ಶುಭ ಲಕ್ಷಣಗಳೆಲ್ಲ, ಮೊದಲೇ ಏರ್ಪಡಿಸಿದಂತೆ ಕಂಗೊಳಿಸಿದ್ದುವು! ಶಾಸ್ತ್ರಿ ಗಳು ಸಾಮಾನುಗಳನ್ನು ತಂದು ಗಾಡಿಯಲ್ಲಿಟ್ಟು ತಾವೂ ಕುಳಿತು ಕೊಂಡರು! ಕುದುರೆಯು ಗಾಡಿ ನಿಲ್ದಾಣದತ್ತ ಓಡಿತು; ನಿಲ್ದಾಣ ದಲ್ಲಿ, ಗಾಡಿ ಬೇಗನೇಕೆ ಬಾರದೋ ಎಂದು ಶೀನಿ ಕಳವಳಪಡು ತ್ತಿದ್ದ—, ಶಾಸ್ತ್ರಿಗಳ ಉಪದೇಶ ಸಾಗಿಯೇ ಇತ್ತು. ಶೀನಿಯನ್ನು ಮೊದಲ ಬಾರಿ ಕಳಿಸಿ, ಎಲ್ಲ ವ್ಯವಸ್ಥೆಯನ್ನು ಮಾಡಲು, ಅವನೊಡನೆ ಶಾಸ್ತ್ರಿಗಳೂ ಹೊರಟಿದ್ದರು!

x x x x x

ಪುಣೆ ದೊಡ್ಡ ಪಟ್ಟಣ: ಶಾಸ್ತ್ರಿಗಳು ಕಾಶಿಯವರೆಗೂ ಯಾತ್ರೆ ಮಾಡಿದ್ದರಿಂದ, ಪುಣೆಯ ದಟ್ಟಣೆಗೆ ಅವರೇನೂ ಹೌಹಾರಿದವರಂತೆ ಕಾಣಲಿಲ್ಲ. ಕೋಣೆಗೆ ಬಂದು ತಣ್ಣೀರುಸ್ನಾನ ಮಾಡಿ, ಒಯ್ದ ಸಾಮಾನುಗಳಿಂದ ಒಂದು ದಿನ ತಾವೇ ಅನ್ನ ಬೇಯಿಸಿದರು. ತಮ್ಮದೇ ಆದ ವೇಷದಲ್ಲಿ, ಸಂಜೆ ಕಾಲೇಜಿನ ಪ್ರಿನ್ಸಿಪಾಲರನ್ನೂ, ಹಾಸ್ಟೆಲಿನ ಮೇಲಧಿಕಾರಿಗಳನ್ನೂ ಕಂಡು ಶೀನಿಯ ವಿಷಯವನ್ನೆಲ್ಲ ಹೇಳಿದರು; ಹುಡುಗ ಅದಷ್ಟು ಬ್ರಾಹ್ಮಣ ಹುಡುಗರ ಜೊತೆಯಲ್ಲಿಯೇ ಇರುವಂತೆ ನೋಡಿಕೊಳ್ಳಬೇಕೆಂದು ಅವರಿಗೂ ಪ್ರಾರ್ಥಿಸಿದರು!! ಬಳಿಕ ಶೀನಿಗೆ ಹೇಳಬೇಕಾದುದನ್ನೆಲ್ಲ (ಎಷ್ಟನೆಯ ಬಾರಿಯೋ?) ಹೇಳಿ, ಕಾಯ್ದ ನೀರು ಕುಡಿಯಬೇಕೆಂದು ಮತ್ತೆ ಹೇಳಿ, ಜಡವಾದ ಹೆಜ್ಜೆಗಳನ್ನು ಕಿತ್ತಿದರು!

ಶೀನಿ ಒಂದು ಸಲ ಅಪ್ಪನ ಕಾಟ ತೊಲಗಿತೆಂದ! ಉಪದೇಶ ವನ್ನು ಕೇಳಿ, ಕೇಳಿ ಉಪದೇಶ ಮಾಡುವುದು ಬೇಕು, ಕೇಳುವುದು ಬೇಡ—ಎನಿಸಿಬಿಟ್ಟಿತ್ತವನಿಗೆ! ನಿತ್ಯ ಕಾಲೇಜು, ತನ್ನ ರೂಮು ಇವೆ ರಡೇ ಶೀನಿ ಪುಣೆಯಲ್ಲಿ ಬಲ್ಲಂಥವು! ಗೆಳೆಯರ ಸಂಗತಿಯೂ ಅವನಿಗೆ ಹೆಚ್ಚಾಗಿಲಿಲ್ಲ. ಸಿನೇಮಾ—ಸಿಗರೇಟುಗಳಿಲ್ಲದೆ, ಗೆಳೆಯರು ದೊರಕು ವುದೂ ದುರ್ಲಭ! ಅಲ್ಲದೆ ಅವನ 'ಪಿತೃವಚನ ಪಾಲನೆ, ಪರ್ವನ ಇತರರಿಗೆ ಹಿಡಿಸದೆ, ಬದುಬರುತ್ತ ನಗೆಯ ವಿಷಯವಾಯ್ತು! ಊಟದ ವಿಷಯದಲ್ಲಿ ಶೀನಿಗೇ ಸೇರಿದ ಕೆಲ ವಿಚಾರಗಳಿದ್ದುವು—ಹುಳಿ, ಕಾರ ಅವನು ಮುಟ್ಟುತ್ತಿರಲಿಲ್ಲ. ಹೇಗೋ ಬೇಯಿಸಿದ ಜೋಳ—ಗೋದಿಯ ರೊಟ್ಟಿಗಳನ್ನು ತಂದರೆ ಹೊಟ್ಟೆ ಕಡಿದೀತೆಂದು, ಅವನ್ನೂ ದೂರಸರಿಸಿ ಬಿಡುತ್ತಿದ್ದನು. ಅನ್ನ, ತುಪ್ಪ, ಲಿಂಬೆಯ ರಸ— ಮೇಲೆ ಕಾಯ್ದ

ಒಂದೇ ಕ್ಷಣ, ನಾನು ಹೇಮಲತೆಯನ್ನು ನೋಡಿದೆ. ಹೇಮಲತೆ ನನ್ನನ್ನು ನೋಡಿದಳು. 'ಹುಂ' ಎಂಬುದಿಷ್ಟೇ ಅವಳ ಕತ್ತು ನಾಟಿ ಹೊರಬಂತು. ಅವಳನ್ನು ಆಗ ಮಾತನಾಡಿಸಲು ನನ್ನ ನುನಸ್ಸೇ ಸಿದ್ಧವಿರಲಿಲ್ಲ. ಅವಳೂ ಅಷ್ಟರಲ್ಲೇ ಮೌನತಾಳಿದಳು.

ಹಾಗೂ ಹೀಗೂ ಊಟದ ಶಾಸ್ತ್ರ ಮುಗಿಯಿತು. ಒಂದೊಂದು ತುತ್ತೂ ಗಂಟಲನ್ನು ಹಿಡಿಯುತ್ತಿತ್ತು! ಪಾರ್ಟೀಲರು ಸನಾರ್ಥಕ್ಕೆನ್ನೆಮ್ಮೆ ಆಗ್ರಹ ಮಾಡುತ್ತಿದ್ದರು. ನಡುನಡುವೆ ಆ ಮಾತು ಈ ಮಾತು ಆಡುತ್ತಿದ್ದರು. ಅವಕ್ಕೆಲ್ಲ ರಂಗಣ್ಣನೇ ಉತ್ತರಕೊಡುತ್ತಿದ್ದ.

ನಾವು ಕೈತೊಳೆದು ಮೂರಬಂನೆವು. ಹೊರಕೋಣೆಯಲ್ಲಿ ಕುಳಿತ ಇಬ್ಬರೂ ಹುಡುಗರು ಒಳಗೆ ಹೋದರು. ತಾಂಬೂಲ ಸಿದ್ಧವಾಗಿತ್ತು; ಆದರೆ ಸಿಗರೇಟು ಇರಲಿಲ್ಲ. ರಂಗಣ್ಣನಿಗೆ ಅದಿಲ್ಲದೆ ಆಗುವಹಾಗಿಲ್ಲ. ಅವನ್ನು ತರಲು ಪಾರ್ಟೀಲರು ಅನಸರನಿಂದ ಸಮೀಪದ ಅಂಗಡಿಗೆ ಹೋದರು

ಹೇಮಲತೆಯನ್ನು ಮಾತನಾಡಿಸಲು ಇದೇ ಹೊತ್ತು ಎಂದು ನಾನು ರಂಗಣ್ಣನಿಗೆ ಹೇಳಿ, ಒಳಗೆ ಹೋದೆ. ಹೇಮಲತೆ ನೆಲದ ಮೇಲೆ ಅಂಗಾತ ಮಲಗಿ, ಹೊಟ್ಟೆಯನ್ನು ಎತ್ತಿಕೊಳ್ಳುತ್ತಿದ್ದಳು. ನನ್ನನ್ನು ನೋಡಿ ಟಿಪ್ಪನೆ ಎದ್ದು, ಸೆರಗನ್ನು ಸಾವರಿಸಿಕೊಂಡು, ತುಟಿಯಲ್ಲಿ ನಗೆ ತಂದು—"ಎಷ್ಟು ದಿವಸದ ವ್ಯಾಳ ಭೇಟ್ಟಿ ಆತು, ಶೀನಣ್ಣಾ. ಸುಖವಾಗಿದ್ದೀಯಾ?" ಎಂದು ಕೇಳಿದಳು. ಕೇಳುತ್ತಿರುವಾಗಲೇ ಅವಳ ಕಣ್ಣುಗಳು ನೀರಿನಿಂದ ತೊಯಿದುವು.

"ಇದ್ದೀನಿ, ಹೇಮಾ! ನಾವೆಲ್ಲರೂ ಸುಖವಾಗಿದ್ದೀವಿ. ನೀನು ಸುಖವಾಗಿದ್ದೀಯಾ?" ನಾನು ಇದನ್ನು ಕೇಳುತ್ತಿದ್ದೆನಷ್ಟೇ. ಆದರೆ ಅವಳು ಏನು ಹೇಳಬೇಕು? ಅವಳಿಗೆ ಸುಖವಿಲ್ಲದ್ದು ಕಣ್ಣಿಗೇ ಕಾಣುತ್ತಿತ್ತು. ದುಃಖದ ಬೇಗೆಯಲ್ಲಿ ಅವಳ ಆತ್ಮಾಹುತಿಯಾಗುತ್ತಿರುವು. ದನ್ನು ನಾನು ಕಣ್ಣಾರೆ ನೋಡುತ್ತಿದ್ದೆ. ಆದರೂ ಆ ಮಾತನ್ನು ಕೇಳಿದೆ. ಅವಳ ಬಾಯಿಂದ ಬಂತು:— "ಸುಖವಾಗಿದ್ದೀನಪಾ." ಅವಳನ್ನು ಕಾಲಿನಿಂದ ತಲೆಯ ವರೆಗೆ ನೋಡಿದೆ-ಎಂಥ ನಿಸ್ತೇಜ-ನಿಷ್ಪ್ರಭವಾನ ಮುಖ! ಅವಳ ಮುಂಚಿನ ಚೆಲುವಿಕೆ ಎಲ್ಲಿಯೋ ಮಾಯವಾಗಿದೆ. ಬಿಳುಪಿಟ್ಟ, ಬಡಕಲು ದೇಹ! ಹೃದಯಲ್ಲಿ ತ್ರಾಣವಿಲ್ಲದುದರಿಂದ ಪ್ರಾಣವೆಲ್ಲ ಕಣ್ಣಲ್ಲಿಯೇ ಅವಿತುಕೊಂಡಿದೆ! ನನ್ನಿಂದ ಆ ದೃಶ್ಯ ನೋಡುವುದೇ ಆಗದಂತಾಯಿತು!

"ನಮ್ಮವರು ಹೊರಗಿದ್ದಾರೇನು" ಕಳ್ಳ ದನಿಯಲ್ಲಿ ಅಂಜುಂಜುತ್ತ ಕೇಳಿದಳು.

"ಇಲ್ಲ. ಸಿಗರೇಟು ತರಲಿಕ್ಕೆ ಅಂಗಡಿಗೆ ಹೋಗ್ಯಾರ."

"ಶೀನಣ್ಣಾ, ನಾ ಇನ್ನ ಬಹಳ ದಿವಸ ಬದಕೋದಿಲ್ಲ....." ಮಾತಿನೊಂದಿಗೆ ಅಳುವು ತುಂಬಿಬಂತು. ನಾನು ಗಾಬರಿಯ ಧ್ವನಿಯಲ್ಲಿ ಕೇಳಿದೆ:

"ಯಾಕೆ?... ....ಹೀಂಗ್ಯಾಕೆ ಹೇಮಾ?"

ಅಳುನಿನೊಣನೆಯೆ ಹೇಮಾ ಮಾತನಾಡಲು ತೊಡಗಿದಳು:

"ಶೀನಣ್ಣಾ....! ಹೆಣ್ಣಿಗೆ ಗಂಡ, ಮಕ್ಕಳು, ಸಂಸಾರ ಅಂದರ ಸುಖನ ಆಗರ ಆಗಿರತಾದಂತ. ಆನರ ನನ್ನ ಪಾಲಿಗೆ ಆ ಸುಖ ಎಲ್ಲಿ ಅನ್ನುನೋ ಏನೋ ಅಂಬೂನು ತಿಳಿಯದ್ದಾಂಗ ಆಗೇದ."

ಕಳವಳದಿಂದ ನಾನು ನುಡಿದೆ:

"ಏನು, ನಾನೂ ಕೇಳಿದೆ. ಹೆಣ್ಣೆಯೇ ನಿನ್ನ ಚಿಕ್ಕ ಮಗುವೊಂದು ಹೋಯ್ತಂತೆ, ಇನ್ನೆರಡು ಜಡ್ಡು ಬಿದ್ದಿವೆಯಂತೆ!"

"ಇನಷ್ಟೇ ಆಗಿನ್ನರೆ, ನಾನು ಹ್ಯಾಂಗಾದರೂ ಸಹಿಸಿಕೊಂಡು ಬದುಕರಲಿಕ್ಕೆ ಮನಸ್ಸು ಮಾಡತಿದ್ದೆ ಶೀನಣ್ಣಾ!"

"ಮತ್ತೇನಾಗೇತ ನಿನಗ——...."

"ಮತ್ತೇನಾಗೇನಂತ ಕೇಳ್ತೀಯಾ? ನನಗ ಸುಖಾ ಆಗಬೇಕೆಂಬೂ ಉದ್ದೇಶದಿಂದೇ ನಮ್ಮ ತಂದಿ, ಇವರ ಕೊರಳಿಗೆ ನನ್ನ ಕಟ್ಟಿದರು....."

ನುಃಖ ಉಮ್ಮಳಿಸಿ ಬಂತು ಹೇಮಲತೆಗೆ. ನಾನು ಕಂಗೆಟ್ಟವನಂತೆ ಸುಮ್ಮನೆ ನಿಂತುಬಿಟ್ಟೆದ್ದೆ. ಹೇಮಾ ತನ್ನ ಮಾತನ್ನು ಮುಂದುವರಿಸಿದಳು:

"ಇಮ್ಮನೇ ವರವಾದರೂ ಪಾಲಿಗೆ ಬಂದದ್ದು ಅಂದೆ. ಆದರೆ ಪಾಲಿಗೆ ಬಂದನ್ದು ಪಂಚಾನೃತವಾಗಿಲ್ಲ; ಕಾಲಕೂಟ ವಿಷ ಆಗೇದ. ಶೀನಣ್ಣಾ, ನನ್ನ ದುಃಖ ಯಾರ ಮುಂದೆ ಹೇಳಿಕೊಳ್ಳಲಿ? ಅನ್ನ ಮುದ್ದಿ ಆತ್ಯ ಅಂತ, ನೊನ್ನೆ ಝಾಕಣೇಲೆ ಹೊಡೆದರು. ಇದು ನೋಡು ಛಾಯ ಕಣ್ಣ ಮ್ಯಾಲ! ಈಗ ಮಾಯ್ದುಹೋದ. ಹಿಂದಕ್ಕೊಮ್ಮೆ ಹೊರಗಿಂದ ಅವರು ಬಂನಾಗ ನಾ ಮನಿಯೊಳಗಿರಲಿಲ್ಲ ಅಂತ, ಮಂಗಳ ಸೂತ್ರ ಹರಕೊಂಡು ಮೂರು ದಿನಾ ನನ್ನ ಹೊರಗ ಪಾಕಿದ್ದರು! ನೊನ್ನೆ ಕೂಸು ಒಂದು ಹೋತ್ಯಲಾ; ಇನ್ನೆರಡು ಜಡ್ಡಿಲೆ ಮಲಗ್ಯಾವ. ಅವು ಸಾಯೋದಕ್ಕ ಮುಂಚೆ ನಾನಸ್ಸ ಸತ್ತರ ನಿರಂಬಳಾಗ್ತೀದ. ನೀ ಹೋಗು, ಶೀನಣ್ಣಾ. ಅವರು ಬಂದುಗಿಂದಾರು. ಯಾಂವಾದರೂ ನನ್ನ ಜೋಡಿಗೆ ಮಾತಾಡಿದರ ಅವರಿಗೆ ಸೇರಿಕಿ ಬರೋದಿಲ್ಲ. ನನ್ನ ದುಃಖ ನನ್ನವರ ಮುಂದ ಹೇಳಿಕೊಳ್ಳಿಕ್ಕೂ ನನಗ ಸ್ವಾತಂತ್ರ್ಯ ಇಲ್ಲ."

ಹೇಮಾನ ಕೊರಳು ಬಿಗಿದು, ಮುಂದೆ ಮಾತನಾಡಲು ಆಗಲೇ ಇಲ್ಲ. ನನ್ನದೂ ಅದೇ ಸ್ಥಿತಿ ಆಗಿತ್ತು. ಹೊರಗೆ ಬಂದು ಕುಳಿತೆ. ನೋಡಿದ್ದನ್ನೆಲ್ಲ ಮರೆಯಬೇಕೆಂದು ಎಲೆ ಅಡಿಕೆ ಜಿಲ್ಲುತ್ತ. ಅಲ್ಲಿ ಬಿದ್ದ ಪತ್ರಿಕೆಯನ್ನೆತ್ತಿ ನೋಡತೊಡಗಿದೆ. ಈ ಸಾಲುಗಳು ಕಣ್ಣಿಗೆ ಬಿದ್ದುವು:—

'The woman who nourishes her despair in her lonely silence, feeding it with mighty tears and covering it with the daily patient smile, a widow from her birth.'

ನನ್ನ ಕಣ್ಣು ಅಲ್ಲಿಯೇ ಸ್ಥಿರವಾದುವು!

ಕೌಟುಂಬಿಕ ಜೀವನಚಿತ್ರಗಳು!

ಶ್ರೀಯುತ ಸಿರಿಯಾಣಿ ಚಂದ್ರಿಕಾ ಎಂ. ಎ. ಶಿಕ್ಷಣಾಧಿಕಾರಿ

●

[ಈ ಸಂಚಿಕೆಯಲ್ಲಿ ಗಂಡಭೇರುಂಡ ಸಚಿತ್ರಪತ್ರಿಕೆಯನ್ನು ಪ್ರಾರಂಭಿಸಿ ಒಂದು ವರ್ಷವಾಗುತ್ತದೆ. ಆ ಸಂದರ್ಭದಲ್ಲಿ ಸಂಪಾದಕರು ಪತ್ರಿಕೆಯ ಬೆಳವಣಿಗೆಯ ಬಗ್ಗೆ ಕೆಲವು ಮಾತುಗಳನ್ನು ಹೇಳಿದ್ದಾರೆ. ಅವರ ಮಾತುಗಳು ಪತ್ರಿಕೆಯ ಬೆಳವಣಿಗೆಯ ಬಗ್ಗೆ ಅವರಿಗಿರುವ ಕಾಳಜಿಯನ್ನು ತೋರಿಸುತ್ತವೆ. ಅವರ ಮಾತುಗಳು ಹೀಗಿವೆ:]

●

೧

ಪೀಠಿಕೆ!

ಈ ಸಂಚಿಕೆಯು ಗಾಂಧಿಜಯಂತಿಯಂದು ಬಿಡುಗಡೆಯಾಗುತ್ತಿದೆ! ಪತ್ರಿಕೆಯ ಪ್ರಾರಂಭದಿಂದಲೂ ಅದರ ಬೆಳವಣಿಗೆಯಲ್ಲಿ ಆಸಕ್ತಿಯಿಟ್ಟುಕೊಂಡು ಬಂದಿರುವ ಓದುಗರಿಗೆ, ಬರಹಗಾರರಿಗೆ, ಚಂದಾದಾರರಿಗೆ, ಜಾಹೀರಾತುದಾರರಿಗೆ, ಪತ್ರಿಕಾ ವಿತರಕರಿಗೆ ಮತ್ತು ಪತ್ರಿಕೆಯ ಸಿಬ್ಬಂದಿಯವರಿಗೆ ಹಾರ್ದಿಕ ಅಭಿನಂದನೆಗಳು! ಪತ್ರಿಕೆಯ ಪ್ರಾರಂಭದ ಸಂದರ್ಭದಲ್ಲಿ ಕೆಲವು ಹಿತೈಷಿಗಳು ಪತ್ರಿಕೆಯ ಭವಿಷ್ಯದ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದರು. ಆದರೆ ಪತ್ರಿಕೆಯು ಒಂದು ವರ್ಷವನ್ನು ಪೂರೈಸಿರುವುದು ಅದರ ಜನಪ್ರಿಯತೆಗೆ ಸಾಕ್ಷಿಯಾಗಿದೆ. ಪತ್ರಿಕೆಯ ಪ್ರಾರಂಭದಲ್ಲಿ ಕೆಲವು ಬರಹಗಾರರು ಬರೆಯಲು ಹಿಂಜರಿಯುತ್ತಿದ್ದರು. ಆದರೆ ಇಂದು ಪತ್ರಿಕೆಯ ಬರಹಗಾರರ ಬಳಗ ಬೆಳೆದಿದೆ. ಪತ್ರಿಕೆಯ ಪ್ರಾರಂಭದಲ್ಲಿ ಕೆಲವು ಚಂದಾದಾರರು ಪತ್ರಿಕೆಯ ಬಗ್ಗೆ ಅಸಡ್ಡೆ ತೋರಿಸಿದ್ದರು. ಆದರೆ ಇಂದು ಚಂದಾದಾರರ ಸಂಖ್ಯೆ ಗಣನೀಯವಾಗಿ ಹೆಚ್ಚಿದೆ. ಪತ್ರಿಕೆಯ ಪ್ರಾರಂಭದಲ್ಲಿ ಕೆಲವು ಜಾಹೀರಾತುದಾರರು ಜಾಹೀರಾತು ನೀಡಲು ಹಿಂಜರಿಯುತ್ತಿದ್ದರು. ಆದರೆ ಇಂದು ಜಾಹೀರಾತುದಾರರ ಸಂಖ್ಯೆ ಹೆಚ್ಚಿದೆ. ಪತ್ರಿಕೆಯ ಪ್ರಾರಂಭದಲ್ಲಿ ಕೆಲವು ಪತ್ರಿಕಾ ವಿತರಕರು ಪತ್ರಿಕೆಯನ್ನು ವಿತರಿಸಲು ಹಿಂಜರಿಯುತ್ತಿದ್ದರು. ಆದರೆ ಇಂದು ಪತ್ರಿಕಾ ವಿತರಕರ ಸಂಖ್ಯೆ ಹೆಚ್ಚಿದೆ. ಪತ್ರಿಕೆಯ ಪ್ರಾರಂಭದಲ್ಲಿ ಕೆಲವು ಸಿಬ್ಬಂದಿಯವರು ಪತ್ರಿಕೆಯ ಬಗ್ಗೆ ಅಸಡ್ಡೆ ತೋರಿಸಿದ್ದರು. ಆದರೆ ಇಂದು ಸಿಬ್ಬಂದಿಯವರು ಪತ್ರಿಕೆಯ ಬಗ್ಗೆ ಆಸಕ್ತಿ ತೋರಿಸುತ್ತಿದ್ದಾರೆ. ಪತ್ರಿಕೆಯ ಪ್ರಾರಂಭದಲ್ಲಿ ಕೆಲವು ಓದುಗರು ಪತ್ರಿಕೆಯ ಬಗ್ಗೆ ಅಸಡ್ಡೆ ತೋರಿಸಿದ್ದರು. ಆದರೆ ಇಂದು ಓದುಗರ ಸಂಖ್ಯೆ ಹೆಚ್ಚಿದೆ. ಪತ್ರಿಕೆಯ ಪ್ರಾರಂಭದಲ್ಲಿ ಕೆಲವು ಹಿತೈಷಿಗಳು ಪತ್ರಿಕೆಯ ಭವಿಷ್ಯದ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದರು. ಆದರೆ ಇಂದು ಪತ್ರಿಕೆಯು ಒಂದು ವರ್ಷವನ್ನು ಪೂರೈಸಿರುವುದು ಅದರ ಜನಪ್ರಿಯತೆಗೆ ಸಾಕ್ಷಿಯಾಗಿದೆ. ಪತ್ರಿಕೆಯ ಪ್ರಾರಂಭದಲ್ಲಿ ಕೆಲವು ಹಿತೈಷಿಗಳು ಪತ್ರಿಕೆಯ ಭವಿಷ್ಯದ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದರು. ಆದರೆ ಇಂದು ಪತ್ರಿಕೆಯು ಒಂದು ವರ್ಷವನ್ನು ಪೂರೈಸಿರುವುದು ಅದರ ಜನಪ್ರಿಯತೆಗೆ ಸಾಕ್ಷಿಯಾಗಿದೆ!

ಪತ್ರಿಕೆ, ಮುಂದೆಯೂ ಯಶಸ್ವಿಯಾಗಿ ಹೊರಬರುತ್ತಿರಲಿ! ಪತ್ರಿಕೆಯ ಬೆಳವಣಿಗೆಯಲ್ಲಿ ನಿಮ್ಮ ಸಹಕಾರವೂ ಅಗತ್ಯವಾಗಿದೆ! ಪತ್ರಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ತಿಳಿಸಿ. ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ತಿಳಿಸಿ. ಪತ್ರಿಕೆಯ ಬೆಳವಣಿಗೆಗೆ ಸಲಹೆಗಳನ್ನು ನೀಡಿ. ಪತ್ರಿಕೆಯ ಬೆಳವಣಿಗೆಗೆ ನಿಮ್ಮ ಸಹಕಾರ ಅತ್ಯಗತ್ಯ. ಪತ್ರಿಕೆಯ ಬೆಳವಣಿಗೆಗೆ ನಿಮ್ಮ ಸಹಕಾರವನ್ನು ನಿರೀಕ್ಷಿಸುತ್ತೇವೆ!

* * * * *

ಪುಟಿದೆದ್ದ ಪಶ್ಚಿಮದ ಅಸ್ತಾಚಲದ ಅರುಣಿಮೆಯನ್ನೆರೆಯುತ ಭುವಿಗೆ, ಮಂಜಿನಿಳಿಯುತ್ತಿರುವ, ಪ್ರಶಾಂತ ಸಂಜೆಯಲ್ಲಿ ಪಕ್ಷಿಗಳು ಗೂಡುಗಳಿಗೆ ಹಿಂತಿರುಗುತ್ತಿರುವಂತೆ ಕಾರ್ಮಿಕರು ಕೆಲಸಕ್ಕೆ ಬಾಯಿ ಕೈಕಾಲು ತೊಳೆದುಕೊಂಡು ಹೊರಗೆ ಬರುತ್ತಿದ್ದಾರೆ. ಬೆಳಿಗ್ಗೆ ಅವರು ಕೆಲಸಕ್ಕೆ ಹೊರಡುವಾಗ ಅವರ ಮುಖದಲ್ಲಿ ಕಂಡುಬಂದ ಆತಂಕ, ಭಯ, ಅನಿಶ್ಚಿತತೆಗಳ ಛಾಯೆಗಳು ಈಗ ಕಾಣಿಸುತ್ತಿಲ್ಲ. ಅವರ ಮುಖಗಳಲ್ಲಿ ಸಂತೃಪ್ತಿಯ ಭಾವ ಮನೆಮಾಡಿದೆ. ಅವರು ಕೆಲಸಕ್ಕೆ ಹೊರಡುವಾಗ ಅವರ ಮನಸ್ಸಿನಲ್ಲಿ ಮೂಡಿದ್ದ ಪ್ರಶ್ನೆಗಳಿಗೆ ಉತ್ತರ ಸಿಕ್ಕಿದೆ.

ಒಂದೇ ಕ್ಷಣ, ನಾನು ಹೇಮಲತೆಯನ್ನು ನೋಡಿದೆ. ಹೇಮಲತೆ ನನ್ನನ್ನು ನೋಡಿದಳು. 'ಹುಂ' ಎಂಬುದಿಷ್ಟೇ ಅವಳ ಶಕ್ತಿ ದಾಟಿ ಹೊರಬಂತು. ಅವಳನ್ನು ಅಗ ಮಾತನಾಡಿಸಲು ನನ್ನ ಮನಸ್ಸೇ ಸಿದ್ಧವಿರಲಿಲ್ಲ. ಅವಳೂ ಅಷ್ಟಕ್ಕೇ ಮೌನತಾಳಿದಳು.

ಹಾಗೂ ಹೀಗೂ ಊಟದ ಶಾಸ್ತ್ರ ಮುಗಿಯಿತು. ಒಂದೊಂದು ತುತ್ತೂ ಗಂಟಲನ್ನು ಹಿಡಿಯುತ್ತಿತ್ತು! ಪಾಟೀಲರು ಪದಾರ್ಥ-ಕ್ಕೊಮ್ಮೆ ಅಗ್ರಹ ಮಾಡುತ್ತಿದ್ದರು. ನಡುನಡುವೆ ಆ ಮಾತು ಈ ಮಾತು ಆಡುತ್ತಿದ್ದರು. ಅದಕ್ಕೆಲ್ಲ ರಂಗಣ್ಣನೇ ಉತ್ತರಕೊಡುತ್ತಿದ್ದ.

ನಾವು ಕೈತೊಳೆದು ಹೊರಬಂದೆವು. ಹೊರಕೋಣೆಯಲ್ಲಿ ಕುಳಿತ ಇಬ್ಬರೂ ಹುಡುಗರು ಒಳಗೆ ಹೋದರು. ತಾಂಬೂಲ ಸಿದ್ಧ-ವಾಗಿತ್ತು; ಅದರೆ ಸಿಗರೇಟು ಇರಲಿಲ್ಲ. ರಂಗಣ್ಣನಿಗೆ ಅದಿಲ್ಲದೆ ಅಗುವಹಾಗಿಲ್ಲ. ಅವನ್ನು ತರಲು ಪಾಟೀಲರು ಅವಸರದಿಂದ ಸಮೀ-ಪದ ಅಂಗಡಿಗೆ ಹೋದರು

ಹೇಮಲತೆಯನ್ನು ಮಾತನಾಡಿಸಲು ಇದೇ ಹೊತ್ತು ಎಂದು ನಾನು ರಂಗಣ್ಣನಿಗೆ ಹೇಳಿ, ಒಳಗೆ ಹೋದೆ. ಹೇಮಲತೆ ನೆಲದ ಮೇಲೆ ಅಂಗಾತ ಮಲಗಿ, ಹೊಟ್ಟೆಯನ್ನು ತಿಕ್ಕಿಕೊಳ್ಳುತ್ತಿದ್ದಳು. ನನ್ನನ್ನು ನೋಡಿ ಚಿಟ್ಟನೆ ಎದ್ದು, ಸೆರಗನ್ನು ಸಾವರಿಸಿಕೊಂಡು, ತುಟಿಯಲ್ಲಿ ನಗೆ ತಂದು—"ಎಷ್ಟು ದಿವಸದ ಮ್ಯಾಲ ಭೆಟ್ಟಿ ಆತು, ಶೀನಣ್ಣಾ. ಸುಖವಾಗಿದ್ದೀಯಾ?" ಎಂದು ಕೇಳಿದಳು. ಕೇಳುತ್ತಿರು-ವಾಗಲೇ ಅವಳ ಕಣ್ಣುಗಳು ನೀರಿನಿಂದ ತೊಯ್ದುವು.

"ಇದ್ದೀನಿ, ಹೇಮಾ! ನಾವೆಲ್ಲರೂ ಸುಖವಾಗಿದ್ದೀವಿ. ನೀನು ಸುಖವಾಗಿದ್ದೀಯಾ?" ನಾನು ಇದನ್ನು ಕೇಳುತ್ತಿದ್ದೆನಷ್ಟೇ. ಅದರೆ ಅವಳು ಏನು ಹೇಳಬೇಕು? ಅವಳಿಗೆ ಸುಖವಿಲ್ಲದ್ದು ಕಣ್ಣಿಗೇ ಕಾಣು-ತ್ತಿತ್ತು. ದುಃಖದ ಬೇಗೆಯಲ್ಲಿ ಅವಳ ಅತ್ಮಾಹುತಿಯಾಗುತ್ತಿರುವು. ದನ್ನು ನಾನು ಕಣ್ಣಾರೆ ನೋಡುತ್ತಿದ್ದೆ. ಅದರೂ ಆ ಮಾತನ್ನು ಕೇಳಿದೆ. ಅವಳ ಬಾಯಿಂದ ಬಂತು:— "ಸುಖವಾಗಿದ್ದೀನಪಾ." ಅವಳನ್ನು ತಾಲಿನಿಂದ ತಲೆಯ ವರೆಗೆ ನೋಡಿದೆ–ಎಂಥ ನಿಸ್ತೇಜ–ನಿಸ್ಪ್ರಭವಾದ ಮುಖ! ಅವಳ ಮುಂಚಿನ ಜೀವಂತಿಕೆ ಎಲ್ಲಿಯೋ ಮಾಯವಾಗಿದೆ. ಬಿಳುಚಿಟ್ಟ, ಬಡಕಲು ದೇಹ! ಹೈಯಲ್ಲಿ ತ್ರಾಣವಿಲ್ಲದುದರಿಂದ ಪ್ರಾಣವೆಲ್ಲ ಕಣ್ಣಲ್ಲಿಯೇ ಅವಿತುಕೊಂಡಿದೆ! ನನ್ನಿಂದ ಆ ದೃಶ್ಯ ನೋಡುವುದೇ ಅಗದಂತಾಯಿತು!

"ನಮ್ಮವರು ಹೊರಗಿದ್ದಾರೇನು" ಕಳ್ಳ ದನಿಯಲ್ಲಿ ಅಂಜಂ-ಜುತ್ತ ಕೇಳಿದಳು.

"ಇಲ್ಲ. ಸಿಗರೇಟು ತರಲಿಕ್ಕೆ ಅಂಗಡಿಗೆ ಹೋಗ್ಯಾರ."

"ಶೀನಣ್ಣಾ, ನಾ ಇನ್ನ ಬಹಳ ದಿವಸ ಬದಕೋದಿಲ್ಲ....." ಮಾತಿನೊಂದಿಗೆ ಅಳುವು ತುಂಬಿಬಂತು. ನಾನು ಗಾಬರಿಯ ಧ್ವನಿಯಲ್ಲಿ ಕೇಳಿದೆ:

"ಯಾಕೆ?... ....ಹೀಂಗ್ಯಾಕೆ ಹೇಮಾ?"

ಅಳುವಿನೊಡನೆಯೆ ಹೇಮಾ ಮಾತನಾಡಲು ತೊಡಗಿದಳು:

"ಶೀನಣ್ಣಾ....! ಹೆಣ್ಣಿಗೆ ಗಂಡ, ಮಕ್ಕಳು, ಸಂಸಾರ ಅಂದರ ಸುಖದ ಆಗರ ಆಗಿರತ್ತದಂತ. ಅದರ ನನ್ನ ಪಾಲಿಗೆ ಆ ಸುಖ ಎಲ್ಲಿ ಅದ್ಯಾನೋ ಏನೋ ಅಂಬೂದು ತಿಳಿಯದ್ದಾಂಗ ಆಗೇದ."

ಕಳವಳದಿಂದ ನಾನು ನುಡಿದೆ:

"ಹೌದು, ನಾನೂ ಕೇಳಿದೆ. ಮೊನ್ನೆಯೇ ನಿನ್ನ ಚಿಕ್ಕ ಮಗುವೊಂದು ಹೋಯ್ತಂತೆ, ಇನ್ನೆರಡು ಜಡ್ಡು ಬಿದ್ದಿವೆಯಂತೆ!"

"ಇದಷ್ಟೇ ಆಗಿದ್ದರೆ, ನಾನು ಹ್ಯಾಂಗಾದರೂ ಸಹಿಸಿಕೊಂಡು ಬದುಕಿರಲಿಕ್ಕೆ ಮನಸ್ಸು ಮಾಡತಿದ್ದೆ ಶೀನಣ್ಣಾ!"

"ಮತ್ತೇನಾಗೇತಿ ನಿನಗ—....."

"ಮತ್ತೇನಾಗೇದಂತ ಕೇಳ್ತೀಯಾ? ನನಗ ಸುಖಾ ಆಗ-ಬೇಕೆಂಬೂ ಉದ್ದೇಶದಿಂದೇ ನಮ್ಮ ತಂದಿ, ಇವರ ಕೊರಳಿಗೆ ನನ್ನ ಕಟ್ಟಿದರು....."

ದುಃಖ ಉಮ್ಮಳಿಸಿ ಬಂತು ಹೇಮಲತೆಗೆ. ನಾನು ತಂಗಿಯ ವಿ-ನಂತಿ ಸುಮ್ಮನೆ ನಿಂತುಬಿಟ್ಟೆದ್ದೆ. ಹೇಮಾ ತನ್ನ ಮಾತನ್ನು ಮುಂದು-ವರಿಸಿದಳು:

"ಇಮ್ಮಸೇ ವರವಾದರೂ ಪಾಲಿಗೆ ಬಂದಮ್ಮ ಅಂದೆ. ಅದರೆ ಪಾಲಿಗೆ ಬಂದದ್ದು ಪಂಚಾಮೃತವಾಗಿಲ್ಲ; ಕಾಲಕೂಟ ವಿಷ ಆಗೇದ. ಶೀನಣ್ಣಾ, ನನ್ನ ದುಃಖ ಯಾರ ಮುಂದೆ ಹೇಳಿಕೊಳ್ಳಲಿ? ಅನ್ನ ಮುದ್ದಿ ಆತ್ಯ ಅಂತ, ಮೊನ್ನೆ ಝಾಳಣೇಲಿ ಹೊಡೆದರು. ಇದು ನೋಡು ಛಾಯಿ ಕಣ್ಣಮ್ಯಾಲ! ಈಗ ಮಾಯ್ತ್ತದ. ಹಿಂದಕ್ಕೊಮ್ಮೆ ಹೊರಗಿಂದ ಅವರು ಬಂದಾಗ ನಾ ಮನಿಯೊಳಗಿರಲಿಲ್ಲ ಅಂತ, ಮಂಗಳ ಸೂತ್ರ ಹರಕೊಂಡು ಮೂರು ದಿನಾ ನನ್ನ ಹೊರಗ ಹಾಕಿದ್ದರು! ಮೊನ್ನೆ ಕೂಸು ಒಂದು ಹೋತ್ಯಲಾ; ಇನ್ನೆರಡು ಜಡ್ಡಿಲೆ ಮಲಗ್ಯಾವ. ಅವು ಸಾಯೋದಶ್ಯ ಮುಂಜಿ ನಾನೂ ಸತ್ತರ ನಿರಂಬಳಾಗ್ತೀದ. ನೀ ಹೋಗು, ಶೀನಣ್ಣಾ. ಅವರು ಬಂದುಗಿಂದಾರು. ಯಾರಾದರೂ ನನ್ನ ಜೋಡಿಗೆ ಮಾತಾಡಿದರ ಅವರಿಗೆ ಸೇರಿತಿ ಬರೋದಿಲ್ಲ. ನನ್ನ ದುಃಖ ನನ್ನವರ ಮುಂದ ಹೇಳಿಕೊಳ್ಳಿಕ್ಕೂ ನನಗ ಸ್ವಾತಂತ್ರ್ಯ ಇಲ್ಲ."

ಹೇಮಾನ ಕೊರಳು ಬಿಗಿದು, ಮುಂದೆ ಮಾತನಾಡಲು ಆಗಲೇ ಇಲ್ಲ. ನನ್ನದೂ ಅದೇ ಸ್ಥಿತಿ ಆಗಿತ್ತು. ಹೊರಗೆ ಬಂದು ಕುಳಿತೆ. ನೋಡಿದ್ದನ್ನೆಲ್ಲ ಮರೆಯಬೇಕೆಂದು ಎಲೆ ಅಡಿಕೆ ಮೆಲ್ಲುತ್ತ, ಅಲ್ಲಿ ಬಿದ್ದ ಪತ್ರಿಕೆಯನ್ನೆತ್ತಿ ನೋಡತೊಡಗಿದೆ. ಈ ಸಾಲುಗಳು ಕಣ್ಣಿಗೆ ಬಿದ್ದುವು:—
'The woman who nourishes her despair in her lonely silence, feeding it with mighty tears and covering it with the daily patient smile, is a widow from her birth.'

ನನ್ನ ಕಣ್ಣು ಅಲ್ಲಿಯೇ ಸ್ಥಿರವಾದುವು!

ಕೌಟುಂಬಿಕ ಜೀವನಚಿತ್ರಗಳು!

ಶ್ರೀಮತಿ ಶಕೋಂತಿನಿ ಮುಹಿಂದ್ರ ಎಂ. ಎ. ಬೆಳಗಾಂವಿ

●

[ಈ ಜೀವನಚಿತ್ರಗಳು ಯಾವುದೇ ವಿಶಿಷ್ಟಶಕ್ತಿಯನ್ನು ಉರುಬರೆದುವುಗಳಲ್ಲ; ವಾಸ್ತವಿಕತೆಗೆ ಹೊಂದಿಕೊಂಡಿರುವಂಥ ಕಲ್ಪನೆ ಇರುವುದಷ್ಟೆ. ಯಾರಾದರೂ ಇದಕ್ಕೆ ವಿರುದ್ಧವಾಗಿ ತೀರದಲ್ಲಿ ಅದಕ್ಕೆ ಲೇಖಕರು ಹೊಣೆಯಲ್ಲ. ಲೇ.]

—●—

೧

ಪುತ್ರಪ್ರೇಮ!

ಈ ಮಾತು ಇಂದಿನದಲ್ಲ ಬಿಡಿ; ಹಿಂದಿನದು!

ತೀನೂ ಆಗಿನ್ನೂ ನಮ್ಮೂರಿನಲ್ಲಿಯೇ ಓದುತ್ತಿದ್ದ; ತೀನಿಯ ತಂದೆ ಶಾಸ್ತ್ರಿಗಳಿಗೆ, ಮಗನು ಬಿ. ಎ. ಆದುದನ್ನೂ, ಮನೆಗೆ ಸೊಸೆ ಬರುವುದನ್ನೂ ಅದಷ್ಟು ಬೇಗ ನೋಡಬೇಕೆಂದು ತವಕ! ತಾಯಿ ಇಲ್ಲದ ಮಗುವೆಂದು ಮಗಳನ್ನು ಅಂಗೈಯಲ್ಲಿಟ್ಟು ಬೆಳೆಸುತ್ತಿದ್ದರು. ಮನೆಯಲ್ಲಿ ಶಾಸ್ತ್ರಿಗಳ ಪಾಂಡಿತ್ಯ, ಔಷಧಜ್ಞಾನಗಳ ಪ್ರಭಾವ ಬಹಳ! ಅವರ ಮಾತನ್ನು ಉಗುಳು ಹಾಕಿ ದಾಟುವವರು ಅಲ್ಲಿರಲೇ ಇಲ್ಲ! ಊರಿಗೆ ಒಂದೇ ಆಗಿದ್ದ ಹೈಸ್ಕೂಲಿನಲ್ಲಿ, ಶಾಸ್ತ್ರಿಗಳು ತೀನಿಯನ್ನು ಪ್ರಕ್ಕಿನ ಹಿಂಬದಿಗಿರುವ ವರ್ಗದಲ್ಲಿ, ಮೊದಲಿಗೇ ಸೇರಿಸಿಬಿಟ್ಟರು! ತೀನು ತೀನಿ ಮೆಟ್ರಿಕ್ಕಿಗೆ ಬರಲು ಒಂದು ವರ್ಷ, ಐಸಾಗಲು, ಮೂರು! ಒಂದು ವರುಷ ಉರುಳಿತು; ತೀನಿ ಮುಂದಿನ ಕ್ಲಾಸಿಗೆ ನುಳಿದ! ಶಾಸ್ತ್ರಿಗಳಿಗೆ ಅಪಾರ ಸಂತೋಷವಾಯಿತು. ತಾವೇ ಮಗನಿಂದ ಅಮರಕೋಶವನ್ನು ಗಟ್ಟಿಮಾಡಿಸಿಕೊಳ್ಳುತ್ತಿದ್ದರು. ತೀನಿ ತೂಕಡಿಸಿದರೆ, ಅವನ ತಲೆ ಸವರಿ, ಬೆನ್ನ ಮೇಲೆ ಕೈಯಿಟ್ಟು, ಮೆಲ್ಲನೆ ಎಚ್ಚರಿಸುತ್ತಿದ್ದರು! ಆದರೆ ಹಿಂದಿನ ಕ್ಲಾಸಿನಲ್ಲಿ ನುಳಿದಂತೆ, ಇಲ್ಲಿ ಒಂದೇ ವರ್ಷದಲ್ಲಿ ಉರುಳುವುದು ತೀನಿಗೆ ಸಾಧ್ಯವಾಗಲಿಲ್ಲ; ಮೂರು ವರುಷಗಳು ಬೇಕಾದುವು; ತೀನಿಯ ಪೇಪರನ್ನು ನೋಡದೆಯಿಲ್ಲದೆ 'ಶರಿಕ್ಷಾ' ಮಾಡಿದ್ದಕ್ಕಾಗಿ, ಶಾಸ್ತ್ರಿಗಳು ಪರೀಕ್ಷೆಗೆ ಸೌನೊದಲ್ಲಿಯೇ ತಾಸನ ವಿಧಿಸದಿರಲಿಲ್ಲ; ಅಂತೂ ತೀನಿಯ ಸ್ಕೂಲು ಶಿಕ್ಷಣ ಮುಗಿಯಿತು!

ಮುಂದಿನ ಶಿಕ್ಷಣಕ್ಕೆ ಊರು ಬಿಡಬೇಕು! ಶಾಸ್ತ್ರಿಗಳಿಗೆ ದುಃಖವಾದರೂ, ಮಗನ ಅಭ್ಯುದಯವನ್ನೇ ನೆನೆದು, ಕಳಿಸುವ ಸಿದ್ಧತೆಯಲ್ಲಿ ತೊಡಗಿದರು: ರಾತ್ರಿಯೊದಿನಿಂದ ಮಗನ ತಲೆಗೆ ತ್ರಾಸವಾದೀತೆಂದು, ತಂತಹ ವನಸ್ಪತಿಗಳಿಂದಲೋ ದಿವ್ಯೌಷಧಿಯನ್ನು ತಯಾರಿಸಿ ಎರಡು ದಿನಾಲು (ಎಂತಹ ಸೆಕೆಯಿದ್ದರೂ) ಕಾಯ್ದು ನೀರನ್ನೇ ಕುಡಿಯಬೇಕೆಂದು ಆಜ್ಞೆ ವಿಧಿಸಿದರು! ಪೋಲಿ ಹುಡುಗರೊಡನೆ ತೀನಾಡಬೇಡವೆಂದು ಕಟ್ಟಪ್ಪಣೆ ಮಾಡಿದರು. ಹೊರಡುವ ದಿನ ದೇವರಿಗೆ, ಊರ ಹನುಮಪ್ಪನಿಗೆ ನೈವೇದ್ಯಮಾಡಿಸಿದರು. ಹೊರಡುವಾಗ ಮುತ್ತೈದೆಯರು ಇದಿರು ತುಂಬಿದ ಕೊಡ ತರುವಂತೆಯೂ ನೋಡಿಕೊಳ್ಳಲಾಗಿತ್ತು!

ತೀನಿ, ಮನೆಯ ದೇವರಿಗೆ ಅಡ್ಡಬಿದ್ದು ಹೊರಬಂದ! ಶುಭ ಲಕ್ಷಣಗಳೆಲ್ಲ, ಮೊದಲೇ ಏರ್ಪಡಿಸಿದಂತೆ ಕಂಗೊಳಿಸಿದ್ದುವು! ಶಾಸ್ತ್ರಿಗಳು ಸಾಮಾನುಗಳನ್ನು ತಂದು ಗಾಡಿಯಲ್ಲಿಟ್ಟು ತಾವೂ ಕುಳಿತುಕೊಂಡರು! ಕುದುರೆಯ ಗಾಡಿ ನಿಲ್ದಾಣದತ್ತ ಓಡಿತು; ನಿಲ್ದಾಣದಲ್ಲಿ, ಗಾಡಿ ಬೇಗನೇಕೆ ಬಾರದೋ ಎಂದು ತೀನಿ ಕಳವಳಪಡುತ್ತಿದ್ದ—, ಶಾಸ್ತ್ರಿಗಳ ಉಪದೇಶ ಸಾಗಿಯೇ ಇತ್ತು. ತೀನಿಯನ್ನು ಮೊದಲ ಬಾರಿ ಕಳಿಸಿ, ಎಲ್ಲ ವ್ಯವಸ್ಥೆಯನ್ನು ಮಾಡಲು, ಅವನೊಡನೆ ಶಾಸ್ತ್ರಿಗಳೂ ಹೊರಟಿದ್ದರು!

x x x x x

ಪುಣೆ ದೊಡ್ಡ ಪಟ್ಟಣ: ಶಾಸ್ತ್ರಿಗಳು ಕಾಶಿಯವರೆಗೂ ಯಾತ್ರೆ ಮಾಡಿದ್ದರಿಂದ, ಪುಣೆಯ ದಟ್ಟಣೆಗೆ ಅವರೇನೂ ಹೌಹಾರಿದವರಂತೆ ಕಾಣಲಿಲ್ಲ. ಕೋಣೆಗೆ ಬಂದು ತಣ್ಣೀರುಸ್ನಾನ ಮಾಡಿ, ಒಯ್ದ ಸಾಮಾನುಗಳಿಂದ ಒಂದು ದಿನ ತಾವೇ ಅನ್ನ ಬೇಯಿಸಿದರು. ತಮ್ಮದೇ ಆದ ವೇಷದಲ್ಲಿ, ಸಂಜೆ ಕಾಲೇಜಿನ ಪ್ರಿನ್ಸಿಪಾಲರನ್ನೂ, ಹಾಸ್ಟೆಲಿನ ಮೇಲಧಿಕಾರಿಗಳನ್ನೂ ಕಂಡು ತೀನಿಯ ವಿಷಯವನ್ನೆಲ್ಲ ಹೇಳಿದರು; ಹುಡುಗ ಆದಷ್ಟು ಬ್ರಾಹ್ಮಣ ಹುಡುಗರ ಜೊತೆಯಲ್ಲಿಯೇ ಇರುವಂತೆ ನೋಡಿಕೊಳ್ಳಬೇಕೆಂದು ಅವರಿಗೂ ಪ್ರಾರ್ಥಿಸಿದರು!! ಬಳಿಕ ತೀನಿಗೆ ಹೇಳಬೇಕಾದುದನ್ನೆಲ್ಲ (ಎಚ್ಚನೆಯ ಬಾರಿಯೋ?) ಹೇಳಿ, ಕಾಯ್ದ ನೀರು ಕುಡಿಯಬೇಕೆಂದು ಮುತ್ತೈ ಹೇಳಿ, ಜಡವಾದ ಹೆಜ್ಜೆಗಳನ್ನು ಕೆತ್ತಿದರು!

ತೀನಿ ಒಂದು ಸಲ ಅಪ್ಪನ ಕಾಟ ತೊಲಗಿತೆಂದೆ! ಉಪದೇಶವನ್ನು ಕೇಳಿ, ಕೇಳಿ ಉಪದೇಶ ಮಾಡುವುದು ಬೇಕು, ಕೇಳುವುದು ಬೇಡ—ಎನಿಸಿಬಿಟ್ಟಿತ್ತವನಿಗೆ! ನಿತ್ಯ ಕಾಲೇಜು, ತನ್ನ ರೂಮು ಇವೆರಡೇ ತೀನಿ ಪುಣೆಯಲ್ಲಿ ಬಲ್ಲಂಥವು! ಗೆಳೆಯರ ಸಂಗತಿಯೂ ಅವನಿಗೆ ಹೆಚ್ಚಾಗಿರಲಿಲ್ಲ. ಸಿನೇಮಾ—ಸಿಗರೇಟುಗಳಿಲ್ಲದೆ, ಗೆಳೆಯರು ದೊರಕುವುದೂ ದುರ್ಲಭ! ಅಲ್ಲದೆ ಅವನ ಪಿತೃವಚನ ಪಾಲನೆ, ವರ್ತನ ಇತರರಿಗೆ ಹಿಡಿಸದೆ, ಬರುಬರುತ್ತ ನಗೆಯ ವಿಷಯವಾಯ್ತು! ಊಟದ ವಿಷಯದಲ್ಲಿ ತೀನಿಗೇ ಸೇರಿದ ಕೆಲ ವಿಚಾರಗಳಿದ್ದುವು—ಹುಳಿ, ಕಾರ ಅವನು ಮುಟ್ಟುತ್ತಿರಲಿಲ್ಲ. ಹೇಗೋ ಬೇಯಿಸಿದ ಜೋಳ—ಗೋದಿಯ ರೊಟ್ಟಿಗಳನ್ನು ತಿಂದರೆ ಹೊಟ್ಟೆ ಕಡಿದೀತೆಂದು, ಅವನ್ನೂ ದೂರಸರಿಸಿಬಿಡುತ್ತಿದ್ದನು. ಅನ್ನ, ತುಪ್ಪ, ಲಿಂಬೆಯ ರಸ— ಮೇಲೆ ಕಾಯ್ದ

ನೀರು ಸೇರಿಸಿದ ಮಜ್ಜಿಗೆ— ಇವಿಷ್ಟೇ ಅವನ ಆಹಾರ! ಮುಂಜಾನೆ, ಸಂಜೆಗೆ! ಮಧ್ಯೆ ಹಸಿವೆನಿಸಿದರೆ, ಒಂದು ಗ್ಲಾಸು ಬಿಸಿ ಹಾಲು! ಸ್ನಾನ, ಊಟ, ಕಾಲೇಜಿನ ವೇಳೆಗಳನ್ನು ಬಿಟ್ಟರೆ, ಉಳಿದ ವೇಳೆಯಲ್ಲೆಲ್ಲ ಶೀನಿಯ ಕಣ್ಣುಮುಂದೆ ಪುಸ್ತಕವಿದ್ದೇ ಇರುತ್ತಿತ್ತು!

ಬಿಸಿನೀರು ಕುಡಿಯಲು ಶೀನಿಗೆ ಬೇಸರು! 'ಊರಲ್ಲಿದ್ದಾಗ ಬಾವಿಯ ತಣ್ಣೀರನ್ನೇ ಕುಡಿಯುತ್ತಿದ್ದೆ, ಈಗೇಕೆ ಬಿಸಿನೀರು?' ಎಂದು ಯೋಚಿಸಿ, ತಂದೆಗೆ ಪತ್ರ ಬರೆದ; 'ತಣ್ಣೀರನ್ನೇ ಕುಡಿಯಬೇಕೆಂದು ಮಾಡಿದ್ದೇನೆ' ಎಂದು ತನ್ನ ವಿಚಾರವನ್ನು ತಿಳಿಸಿದ. ಶಾಸ್ತ್ರಿಗಳು ಗಾಬರಿಯಾಗಿ, ಮರುದಿನವೇ ಉತ್ತರ ಬರೆದರು:— "ಪುಣೆಯ ತಣ್ಣೀರನ್ನು ಕುಡಿಯಬೇಡ. ನಾನು ಇಲ್ಲಿಯ ನೀರನ್ನು ದೊಡ್ಡ ಡಬ್ಬಿಯಲ್ಲಿ ಬೆಸಿಗೆ ಹಾಕಿಸಿ ಕಳಿಸುತ್ತಿದ್ದೇನೆ. ಅದು ಮುಟ್ಟುವವರೆಗೆ ಎರಡು ದಿನ ಮಾತ್ರ ಬಿಸಿನೀರನ್ನು ಕುಡಿ." ಶಾಸ್ತ್ರಿಗಳ ಜೀವ, ಮಗನು ನೀರು ಮುಟ್ಟುವಷ್ಟರಲ್ಲಿಯೇ ತಣ್ಣೀರನ್ನೆಲ್ಲಿ ಕುಡಿಯುವನೋ ಎಂದು ಗಾಬರಿಯಾಗಿತ್ತು!

ದೀಪಾವಳಿಯ ರಜೆಗೆ ಶೀನಿ ಊರಿಗೆ ಬಂದ; ಪುಣೆಯ ವಾತಾವರಣಕ್ಕೆ ಒಗ್ಗಿ, ಶೀನಿ ಹಳೆಯ ಸಂಸ್ಕಾರಗಳನ್ನೂ ಬಿಟ್ಟು, ಮೈತುಂಬಿಕೊಂಡಿರುವನೇನೋ ಎಂದು ಊರ ಜನ ನೋಡಿದರು! ಆದರೆ ಹಾಗಾಗಿರಲಿಲ್ಲ; ಮೈತುಂಬಿಕೊಂಡಿರದಿದ್ದರೂ, ಹಳೆಯ ಸಂಸ್ಕಾರಗಳನ್ನು ಬಿಡದೆ ಇದ್ದುದಕ್ಕೆ, ಶಾಸ್ತ್ರಿಗಳಿಗೂ ಅವರ ಮಿತ್ರರಿಗೂ ತುಂಬ ಸಂತೋಷವಾಯಿತು. ರಾತ್ರಿ ಊಟಕ್ಕೆ ಕುಳಿತಾಗ, ಅವನ ಚೆನ್ನು ಸವರಿ ಶಾಸ್ತ್ರಿಗಳಿಂದರು:— "ಹೇಗೆ ಮೈತುಂಬಿಕೊಂಡಾನು? ಓದಿನ ಭಾರವೇನು ತುಸುವೇ?" ಮಗನನ್ನು ನೋಡುತ್ತಿದ್ದಂತೆ ಅಭಿಮಾನದ ಮುಗುಳ್ನಗೆಯೊಂದು ಅವರ ಮುಖದ ಮೇಲೆ ಮೂಡಿ ಮಾಯವಾಯಿತು!

ರಜೆ ಮುಗಿದ ಮೇಲೆ ಶೀನಿ, ವೇಷವನ್ನು ಮೊದಲಿನಂತೆಯೇ ಬೀಳ್ಕೊಂಡು, ಮೊದಲಿನಂತೆಯೇ ಹೊರಟನು. ಉಳಿದುದೆಲ್ಲ ಮೊದಲಿನಂತೆಯೆ; ಆದರೆ ಶಾಸ್ತ್ರಿಗಳು ಮಾತ್ರ ಈ ಸಲ ಹೋಗಲಿಲ್ಲ! ಅಂತೂ ಶೀನಿ ಮುಂದೆ ಆರು ತಿಂಗಳು ಕಷ್ಟಪಟ್ಟು, ಮೂರನೆಯ ವರ್ಗದಲ್ಲಿ ಪಾಸಾಗಿದ್ದ!

ಆ ದಿನ ಶಾಸ್ತ್ರಿಗಳ ಆನಂದಕ್ಕೆ ಮೇರೆಯೇ ಇರಲಿಲ್ಲ!!

೨

ಪತ್ನಿಪ್ರೇಮ

ಶೀನಿ ಕಾಲೇಜಿನ ಇಂಟರಮಿಜಿಯೆಟ್ ತರಗತಿಯಲ್ಲಿ ಓದುತ್ತಿದ್ದ; ಅವನು ಮೆಟ್ರಿಕ್ ಪಾಸಾದಾಗಲೇ, ಶೀನಿಯನ್ನು ಮೆಚ್ಚಿದ ಅನೇಕ ಕನ್ಯೆಯರು ಮನೆಯ ಬಾಗಿಲವರೆಗೆ ಬಂದಿದ್ದರು! ಶಾಸ್ತ್ರಿಗಳು ಸಲಕ್ಷಣಳಾದ ಕನ್ಯೆಯನ್ನು ಸಂಪ್ರದಾಯಸ್ಥರ ಮನೆತನವನ್ನು—ವರದಕ್ಷಿಣೆಯ ಸಂಖ್ಯೆಯನ್ನು ನೋಡಿಯೂ ನೋಡವರಂತೆ—ನೋಡುತ್ತಿದ್ದರು. ಆಗಿದ್ದ ಪರಿಸ್ಥಿತಿಯಲ್ಲಿ ತಾವು ಆರಿಸಿದ ಕನ್ಯೆಯನ್ನೇ ಶೀನಿ ವರಿಸುವನೆಂಬ ವಿಷಯದಲ್ಲಿ ಶಾಸ್ತ್ರಿಗಳಿಗೆ ಎಷ್ಟೂ ಅವಿಶ್ವಾಸವಿರಲಿಲ್ಲ. ಕಾಲೇಜಿನಲ್ಲಿದ್ದರೂ ಶೀನಿಗೂ ಪ್ರೇಮವಿವಾಹಗಳಿಗೂ ತುಂಬಾ ದೂರದ ಅಂತರ! ಬಂದ ಕನ್ಯೆಯರನ್ನೆಲ್ಲ ಮಗನು ಬಿ. ಎ. ಆಗಲಿ ಎಂದು ಶಾಸ್ತ್ರಿಗಳು ಹಿಂದಕ್ಕೆ ಕಳಿಸಿದಂತೆ ಮಾಡಿದ್ದರು; ಇನ್ನೆರಡು ವರ್ಷಗಳು ಸರಿದರೆ, ಸಾವಿರಗಳ ಸಂಖ್ಯೆಯಲ್ಲಿ ಮಗನ ಬೆಲೆ ಏರುವುದೆಂಬ ಭರವಸೆ ಅವರಿಗೆ! 'ಏನಿದ್ದರೂ ದೇಸಾಯರ ಮನೆತನ ದೊಡ್ಡದು; ಕೊಡುಕೊಳ್ಳುವಂತೆಯೂ ಇದ್ದಾರೆ, ಅವರ ಕನ್ಯೆಯು (ಕಪ್ಪಿದ್ದರೇನಾಯಿತು?) ಸಲಕ್ಷಣಳಿದ್ದಾಳೆ; ಅವಳನ್ನೇ ತನಗೆ ಕೊಂಡರಾಯಿತು,— ಎಂದು ಮನಸ್ಸಿನಲ್ಲೇ ಲೆಕ್ಕ ಹಾಕಿದ್ದ. ಆದರೆ ಯಾರೆದುರೂ ಬಾಯಿಬಿಟ್ಟರಲಿಲ್ಲ!

ಒಂದು ದಿನ ದೇಸಾಯರು ಮನೆಯ ಬಾಗಿಲವರೆಗೆ ತಾವು ಬಂದು ಹೇಳಿದರು: "ಇನ್ನೆರಡು ವರುಷಗಳ ಮೇಲಾದರೂ ಮಾತು ಕೊಳ್ಳುವುದಾದರೆ, ನಾನು ಬೇರೆಲ್ಲಿಯೂ ನೋಡುವುದಿಲ್ಲ" ಎಂದ ದೇಸಾಯರು ದೊಡ್ಡವರೇನೋ ಸರಿ, ಆದರೇನಾಯಿತು? ಹೆಣ್ಣು ತಂದೆಯೆಂದ ಮೇಲೆ ಎಡತಾಕಲೇ ಬೇಕು! ಶಾಸ್ತ್ರಿಗಳು ಮಾತು ಬಿಚ್ಚಿದರು: "ಶೀನೂ ರಜೆಗೆ ಬರಲಿ; ವಿಚಾರ ಮಾಡಿ ತಿಳಿಸುತ್ತೇನೆ" ಎಂದು. ದೇಸಾಯರು ಆಲ್ಲಿಯವರೆಗೆ ಕಾಯದೆ ವಿಧಿಯಿಲ್ಲವೆಂದು ಹೊರಟು ಹೋದರು.

ರಜೆಗೆ ಬಂದಾಗ ಶೀನಿಯ ಎದುರು ವಿವಾಹದ ಪ್ರಸ್ತಾಪವನ್ನು ಎತ್ತಿದರೂ, ಅವನು ಉತ್ತರ ಕೊಡಲಿಲ್ಲ. 'ಹೋಗಲಿ, ಅಧ್ಯಯನವು ಈಗೇಕೆ ವಿಘ್ನ?— ಎಂದು ಶಾಸ್ತ್ರಿಗಳೂ ಸುಮ್ಮನಾದರು. "ದೇಸಾಯರ ಕನ್ಯೆಯಲ್ಲದಿದ್ದರೆ, ಇನ್ನೊಬ್ಬಳು ಬಂದಾಳು! ಕನ್ಯೆಯರಿಗೇನು ಕೊರತೆ?"

ಇಂಟರ್ ಮಿಜಿಯೆಟ್ ವರ್ಗ ಒಂದು ವರ್ಷಕ್ಕೆ ಶೀನಿಯನ್ನು ಬಿಡಲಿಲ್ಲ. ಶಾಸ್ತ್ರಿಗಳ ಮುಖ ಸಪ್ಪಗಾಯ್ತು! ಎರಡನೆಯ ವರುಷ ಶೀನಿ ಮುಂದುವರಿಯಲಿಲ್ಲ; ನೀರು ಕಳಿಸಿ ಕಳಿಸಿ ಅವರಿಗೆ ಸಾಕಾಗಿತ್ತು. ಬಿ. ಎ. ವರ್ಗದಲ್ಲಾದರೂ ಬಂದರೆ, ವಿವಾಹ ಮಾಡಬಹುದು-ಎಂದು ದಾರಿಯನ್ನು ಕಾಯ್ದರು; ಸೊಸೆಯ ಮುಖವನ್ನು ಎಂದು ನೋಡುವೆನೋ ಎಂದು ಹಂಬಲಿಸಿದರು. ಅವಳು ಬಂದರೆ ಮನೆಯಲ್ಲಿ ನನಗೆ ಜೊತೆಯಾಗುವುದೆಂದು ಎಣಿಕೆ ಹಾಕಿದರು. ಆದರೇನು, ಕೊನೆ ಬೇಸತ್ತು ಮೂರನೆಯ ವರ್ಷ, ಶೀನಿ ಇಂಟರಿನಲ್ಲಿರುವಾಗಲೆ ವಿವಾಹವನ್ನು ನಿಶ್ಚಯಿಸಿದರು. ವರದಕ್ಷಿಣೆ ಕೊಂಚ ಕಡಮೆಯೆಂದು ಶಾಸ್ತ್ರಿಗಳಿಗೆನಿಸಿದರೂ, ಕನ್ಯೆ ಕಪ್ಪಾಗಿರಲಿಲ್ಲವಾದ್ದರಿಂದ ಸಮಾಧಾನ ಪಟ್ಟುಕೊಂಡರು. ಮತ್ತೆ ಇಂಟರ್ ಮಿಜಿಯೆಟ್ ಪರೀಕ್ಷೆಗೆ ಕೂತ ಶೀನಿ ರಜೆಯ ದಿನಗಳಲ್ಲಿ ಮನೆಗೆ ಬಂದಾಗ, ವಿವಾಹದ ಸಮಾರಂಭವನ್ನೂ ಪೂರಯಿಸಿ ಬಿಟ್ಟರು. ಶೀನಿಯ ತಾಯಿಯ ಬಳಗವನ್ನೂ ಶಾಸ್ತ್ರಿಗಳು ಆಗ್ರಹದಿಂದ ಕರೆದರೂ, ಒಬ್ಬಿಬ್ಬರನ್ನು ಬಿಟ್ಟು ಯಾರೂ ಬಂದಿರಲಿಲ್ಲ. ಶಾಸ್ತ್ರಿಗಳ ಪುರ್ಜಿಯನ್ನು ಸಂಪಾದಿಸಲು, ಊರಿನಿಗಿನ ಜನರೆಲ್ಲ, ಶೀನಿಗೆ ಉಡುಗೊರೆಯನ್ನು ಕೊಟ್ಟಷ್ಟೇ ಕೊಟ್ಟರು. ಹುಡುಗಿಯ ಹಣೆಯ ತುಂಬ ಕುಂಕುಮ, ಕೈಯಲ್ಲಿ ಹಿಡಿಸಲಾರದ ಖಣಗಳು, ಬೆಳ್ಳಿಯ ಒಡವೆಗಳು! ತಂದೆಯು ಆಗ್ರಹದ ಮೇರೆ ಮದುವೆಯಾಗುತ್ತಿದ್ದರೂ, ಶೀನಿಯ ಲಕ್ಷ್ಯ ಸ್ವಲ್ಪಸ್ವಲ್ಪವಾಗಿ ಪ್ರೇಮದ ಕಡೆಗೆ ಹೊರಳಿತ್ತು; ಇಂಟರಮಿಜಿಯೆಟ್ಟಿನ ನಾಲ್ಕು ವರ್ಷಗ

ಇದಕ್ಕೆ ಸಹಾಯಕಾರಿಯಾಗಿದ್ದುವೆಂದೂ ಅನ್ನಬಹುದು. ತಾಯಿಯ ಪ್ರೇಮವನ್ನರಿಯದ ಶೀನಿ, ಮದುವೆಯಲ್ಲಿ ಹೆಣ್ಣುಮಕ್ಕಳ ಓಡಾಟದಿಂದ ಸ್ವಲ್ಪ ಸಂಕೋಚ ಪಟ್ಟುಕೊಂಡ; ಇನ್ನೂ ಹುಡುಗ ಎಂದು ಎಲ್ಲರೂ ಅವನ ಮೇಲೆ ಅಧಿಕಾರ ನಡಿಸುವವರೇ! ಏನಿದ್ದರೂ ಸರಸ್ವತಿಯ ದೃಷ್ಟಿಯಿಂದ ಅವನು ಶ್ರೀನಿವಾಸರಾಯನಾದ! ಅವಳ ನೋಟ, ಮಾಟ, ಎಲ್ಲವೂ ಅವಳಲ್ಲಿ ತನಗಾಗಿದ್ದ ಆದರದಿಂದ ಮೆಚಿಕ್ಕೆಯಾದುವು! ಶೀನಿಯ ಸಾಹಿತ್ಯಪ್ರೇಮ, ಗ್ರಂಥಜ್ಞಾನಗಳೆಲ್ಲ, ಅವಳ ಬಗ್ಗೆ ಅವನು ಕಟ್ಟಲಿರುವ ಮಂದಿರಕ್ಕೆ ಸಾಮಗ್ರಿಗಳನ್ನು ಪೂರಯಿಸಿದುವು. ಅವಳನ್ನು ಹೇಗೆ ನಯವಾಗಿ ಇರಿಸಿಕೊಳ್ಳಬೇಕು, ಹೇಗೆ ಪ್ರೇಮದಿಂದ ಸಲಹಬೇಕು–ಎಂದು ಶೀನಿ ಮನದಲ್ಲಿಯೇ ಎಣಿಕೆ ಹಾಕುತ್ತಿದ್ದ. ಶಾಸ್ತ್ರಿಗಳಿಗೇನೋ, ಅವಳು ಮನೆಯಲ್ಲಿ ಸೀರೆಯ ಸಪ್ಪಳ ಮಾಡುತ್ತ ಓಡಾಡುವುದನ್ನು ನೋಡಿಯೇ ಆನಂದವಾಗಿತ್ತು!

ಶೀನಿಯ ರಜೆಯ ದಿನಗಳು ಹೊಸ ರೀತಿಯಲ್ಲಿ ಹಾರಿದುವು. ಸರಸ್ವತಿಗೆ ಹೊಸ ಹೊಸ ಸೀರೆ-ರವಿಕೆಗಳನ್ನು ತಂದು ಕೊಡುವುದರಲ್ಲಿ, ಅಲಂಕರಿಸುವಲ್ಲಿ ಮಗ್ನನಾಗಿದ್ದ! ಅವಳು ಉಟ್ಟು-ತೊಟ್ಟು ಉಂಡು-ತಿಂದು ಅಡ್ಡಾಡಿದರೆ, ಅವನಿಗೆ ಬೇರೇನೂ ಬೇಡ! ಅವಳು ಯಾವ ಕೆಲಸವನ್ನು ಮಾಡದಿದ್ದರೂ ಶೀನಿ ಆಕ್ಷೇಪನನ್ನೆತ್ತುತ್ತಿರಲಿಲ್ಲ. ನಾಲ್ಕು ಜನ ಅಕ್ಕ-ತಂಗಿಯರ ಮಧ್ಯೆ, ಮಧ್ಯಮ ಕುಟುಂಬದಲ್ಲಿ ಬೆಳೆದದ್ದರಿಂದ ಸರಸ್ವತಿ ಮನೆಗೆಲಸಗಳನ್ನೆಲ್ಲ ಬಲ್ಲವಳಾಗಿದ್ದಳು. ಶಾಸ್ತ್ರಿಗಳು ಮಾಡುವುದನ್ನು ನೋಡಿ, ಅವಳು ತಾನು ಮಾಡುತ್ತೇನೆಂದು ಮುಂದಡಿಯಿಟ್ಟರೂ, ಶೀನಿ ಜೇಡವೆಂದು ಹಿಂದೆ ಜಗ್ಗುತ್ತಿದ್ದ; ಏನೋ ಮದುವೆಯಾದ ಹೊಸತರಲ್ಲಿ ಹುಡುಗನ ಆಶೆ–ಎಂದು ಶಾಸ್ತ್ರಿಗಳೂ ಅವಳಿಗೆ ಹೇಳುತ್ತಿರಲಿಲ್ಲ; ನಾಲ್ಕು ದಿನ ಕಳೆದ ಮೇಲೆ, ತಾನೇ ಎಲ್ಲ ಸರಿ ಹೋಗುವುದೆಂದು ಸುಮ್ಮನಿದ್ದು ಬಿಟ್ಟರು. ಆಲ್ಲದೆ ತಾವೇ ಸರಸ್ವತಿಯ ಯೋಗಕ್ಷೇಮವನ್ನು ವಿಚಾರಿಸಿಕೊಳ್ಳುತ್ತಿದ್ದರು. ಅವಳು ಕೊಂಚ ಕೆಮ್ಮಿದರೆ, ನೆಗಡಿಯಿಂದ ಬಳಲಿದರೆ, ಮರುದಿನವೇ ಒಂದೌಷಧಿಯನ್ನು ತಯಾರಿಸಿ, ಅವಳ ಪಥ್ಯವನ್ನೂ ತಾವೇ ನೋಡಿಕೊಳ್ಳುತ್ತಿದ್ದರು.

ಈ ಸಲವೂ ಪರೀಕ್ಷೆಯು ಫಲಿತಾಂಶ ಶೀನಿಯನ್ನು ಮತ್ತೆ ಮುಂದೆ ಬಿಡಲಿಲ್ಲ. ಅವನಾದರೂ ಅದರ ಬಗ್ಗೆ ಅಷ್ಟೊಂದು ಉತ್ಸುಕನಾಗಿರಲಿಲ್ಲ. ಶಾಸ್ತ್ರಿಗಳು ಮುಖ ಕೆಳಗೆ ಮಾಡಿದರು. ಶೀನಿ ಹೇಳಿದ: "ಅಪ್ಪಾ ಬಿ. ಎ. ಆಗಿಯಾದರೂ ಮಾಡುವುದೇನು? ಎಷ್ಟು ಜನ ಬಿ ಎ. ಆದವರು ಸುಮ್ಮನೆ ಕುಳಿತಿಲ್ಲ? ಅದಕ್ಕಿಂತ ಇದ್ದ ಮನೆವಾರುಗಳನ್ನು ನೋಡಿಕೊಂಡು ನನ್ನು ಮನೆತನದ ಉದ್ಯೋಗವಾದ ವೈದ್ಯಕಿಯನ್ನೇ ಮಾಡಿಕೊಂಡಿದ್ದರೆ ನೆಟ್ಟಗಲ್ಲವೇ? ಬಿ. ಎ. ಆದರೆ ನೌಕರಿಯ ಬೆನ್ನು ಹತ್ತಿ ಮತ್ತೆ ಊರು ಬಿಡಬೇಕಾದರೂ ಆದೀತು!" ಶಾಸ್ತ್ರಿಗಳಿಗೂ ಆ ವಿಚಾರ ಸರಿ ಕಂಡಿತು. ವನಸ್ಪತಿಗಳ ಪರಿಚಯವನ್ನೂ ವೈದ್ಯಕೀಯ ಜ್ಞಾನವನ್ನೂ ಮಗನಿಗೆ ಕ್ರಮೇಣ ಹೇಳಿಕೊಡತೊಡಗಿದರು. ಶೀನಿಯು ಮನೆಬಿಟ್ಟು ಆಗಲವೆ ಕುಳಿತಲ್ಲಿಯೇ ಉದ್ಯೋಗ ಪ್ರಾರಂಭಿಸಿದ. ಅವನ ವೈದ್ಯಕೀಯ ಮೊದಲನೆಯ ಪ್ರಯೋಗ ಹೆಂಡತಿಯ ಮೇಲೆಯೇ! ಅವಳಿಗೆ ಕೆಮ್ಮು, ನೆಗಡಿ, ಅಜೀರ್ಣ ಆಗದಿದ್ದರೂ ಆಗಿದೆಯೆಂದು ಬಾವಿಸಿ, ಔಷಧಿ ಕೊಡುತ್ತಿದ್ದ. ದಿನವಿಡೀ ಕುಳಿತಲ್ಲಿಯೇ ಕುಳಿತು ಅವಳಿಗೂ ಬೇಸರು; ಆದರೆ ಶೀನಿ ಯಾವ ಕೆಲಸವನ್ನೂ ಮಾಡಲು ಅವಳನ್ನು ಬಿಡುವಂತಿಲ್ಲ. ಮನೆಗೆ ಬಂದ ಹೆಂಗಳೆಯರೊಡನೆ — ಪುರುಷರೊಡನೆ ಮಾತನಾಡುವುದಂತೂ ದೂರವೇ ಉಳಿಯಿತು—ಕೂಡ ಅವಳು ಮಾತನಾಡುವಂತಿರಲಿಲ್ಲ, ಮನೆತನದ ಮರ್ಯಾದೆಗಾಗಿ! ಸಿಕ್ಕ ಹೆಂಗಳೆಯರೊಡನೆ ನೇರ, ಅವಳ ತಲೆಯಲ್ಲಿಯೂ ಸಲ್ಲದ ವಿಚಾರಗಳು ಸೇರಿಕೊಂಡಾವೆಂದು ಶೀನಿಗೆ ಆಂಜಿಕೆ! ಸರಸ್ವತಿಗೆ ಶೀನಿಯ ಈ ಪ್ರೇಮವೂ, ಔಷಧಿಗಳ ಪ್ರಯೋಗವೂ ಸಾಕುಬೇಕೆನಿಸಿತು! ತವರುಮನೆಯವರು ಇವನ ಮನೆಗೆ ಬಂದರೆ, ಸರಸ್ವತಿಯ ಭಾಗ್ಯವೇ ಭಾಗ್ಯವೆಂದು ಕೊಂಡಾಡುತ್ತಿದ್ದರು. ಇನ್ನು ಅವಳು ಯಾರೆಮರಿಗೆ ಹೇಳಬೇಕು? ಶೀನಿ ಯಾದರೋ ಊರಿಗೆ, ಕೇರಿಗೆ, ಹೊಲ ಮನೆಗಳನ್ನು ನೋಡಲು—ಎಲ್ಲಿಯೂ ಹೋಗುತ್ತಿರಲಿಲ್ಲ. ಶಾಸ್ತ್ರಿಗಳೇ ಹೋಗುತ್ತಿದ್ದರು. ಅವರು ಹೋದಾಗ ನಾಲ್ಕು ದಿನ ಅಡಿಗೆ ಮಾಡಬೇಕೆಂದರೆ, ಶೀನಿ ತಾನೇ ಅನ್ನವನ್ನು ಬೇಯಿಸಿಡುತ್ತಿದ್ದ. ಅಪ್ಪನ ಪಾತನೆಂಬಂತೆ ಸರಸ್ವತಿಗೆ ದಿನಾಲು ಬಿಸಿ ನೀರು! ಉಪ್ಪು ಹುಳಿ ತಿನ್ನಬೇಕೆಂಬ ಅವಳ ಬಯಕೆ ಏನಾದರೂ ಸಾಧಿಸುತ್ತಿರಲಿಲ್ಲ. ಈಗಂತೂ ಅವಳಿಗೆ ಮೂರು ತಿಂಗಳು! ಶೀನಿಯ ಜೋಪಾಸನೆ ಇನ್ನೂ ಹೆಚ್ಚಾಯಿತು. ಶಾಸ್ತ್ರಿಗಳಿಗೆ ಈ ವಿಚಾರ ತಿಳಿದು ಮೊಮ್ಮಗನನ್ನು ಆಡಿಸುವ ಭಾಗ್ಯ ತಮ್ಮದಾಯಿತಲ್ಲ, ಎಂದು ತುಂಬಾ ಸಂತೋಷಪಟ್ಟರು. ಅವಳಿಗೆ ಬಾಯಿಂದ ಕೆಲಸ ಹೇಳುವುದನ್ನು ಬಿಟ್ಟುಬಿಟ್ಟರು. ಸರಸ್ವತಿಗೆ ತುಂಬ ಬೇಸರವಾಗಿ, ನಾಲ್ಕು ದಿನ ತವರು ಮನೆಗಾದರೂ ಹೋಗಿ ಬರೋಣವೆಂದು ಶಾಸ್ತ್ರಿಗಳನ್ನು ಕೇಳಿದಳು. 'ಏನು ಬಯಕೆಯೋ! ಹೆಣ್ಣು ಮಕ್ಕಳಿಲ್ಲದ ಮನೆ, ಹೋಗಿ ಬಾ,' ಎಂದು ಕೂಡಲೇ ಒಪ್ಪಿಗೆ ಕೊಟ್ಟರು. ಅವಳು ಮೆಲ್ಲಗೆ ಶೀನಿಯ ಬಳಿ ಈ ಪ್ರಸ್ತಾಪವನ್ನೆತ್ತಿದಳು. ಶೀನಿಗೆ ಅಲ್ಲಿ ಔಷಧವನ್ನು ಯಾರು ಕೊಡುವವರೆಂದು ದಿಗಿಲು! ಮತ್ತೊಂದು ಶಂಕೆಯೂ ಅವನ ತಲೆಯಲ್ಲಿ ಸುಳಿಯಿತು. ಸರಸ್ವತಿಯನ್ನು ಕೇಳಯೇ ಬಿಟ್ಟ, 'ಯಾಕೆ. ನನ್ನ ಸಹವಾಸ ನಿನಗೆ ಬೇಸರವಾಯಿತೇ, ಸರಸ?' ಎಂದು ಮುಖ ಸಣ್ಣನು ಮಾಡಿದ: 'ನನ್ನನ್ನು ಬಿಟ್ಟು ಹೋಗುವಿಯಾ?'

ಸರಸ್ವತಿ, 'ಇಲ್ಲ' ವೆಂದು ತಲೆಯಲ್ಲಾಡಿಸಿದಳು!

ಇಬ್ಬರ ಕಣ್ಣುಗಳೂ ತೊಯ್ದಿದ್ದುವು—ಒಂದೊಂದು ವಿಧದಲ್ಲಿ!

ಮರುದಿನ ಶಾಸ್ತ್ರಿಗಳು ಹೇಳಿದರು, 'ಶೀನಿ, ಇವತ್ತು ಮೂಹೂರ್ತ ಚೆನ್ನಾಗಿದೆ, ಅವಳನ್ನು ತವರುಮನೆಗೆ ಕಳಿಸುವುದಾದರೆ ಕಳಿಸಿ ಬಾ,' ನಾಲ್ಕು ದಿನ ಇರುವ ಬಯಕೆಯನ್ನು ತೀರಿಸಿಕೊಂಡು ಬರಲಿ.'

ಇಬ್ಬರೂ ಪೌನ!

"ಯಾಕೆ ಸರಸೂ ಇಂದು ಹೇಳುನಿಯಾ? ಅಥವಾ ಪತ್ರ ಬರೆಯಲೋ?" ಶಾಸ್ತ್ರಿಗಳು ಕೇಳಿದರು. 'ಜೇಡ' ಸರಸೂ ಹೇಳಿದಳು.

"ಯಾಕೆ ಶೀನಿ?" ಶಾಸ್ತ್ರಿಗಳು ಆಶ್ಚರ್ಯದಿಂದ ನೋಡಿದರು. ಶೀನಿ ಇದ್ದ ವಿಷಯವನ್ನೆಲ್ಲ ಸಾಧ್ಯಂತವಾಗಿ ವಿವರಿಸಿದ.

ಶಾಸ್ತ್ರಿಗಳು ಸರಸ್ವತಿಯ ಕಡೆಗೆ ನೋಡಿ ಮುಗುಳ್ನಗೆ ನಕ್ಕರು!

ಈ ಚಿತ್ರಗಳನ್ನು ಕುರಿತು ಓದುಗರು ದಯವಿಟ್ಟು ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾದರೆ, ಉಪಕಾರವಾಗುವುದು. ಲೇ.

ಮೂರು ಭಾವರೂಪಕಗಳು

(ಕಲ್ಪನಾ ವಿಲಾಸ)

ಶ್ರೀ. ಜಾ. ವೆ. ನಾಗೇಶ, ಕಲಬುರ್ಗಿ

೧

ಜೀವನ ಮಾಧುರ್ಯ

"ಜೀವನ ಮಾಧುರ್ಯವೆಲ್ಲಿದೆ?" ಎಂದು ನಾನವಳ ಕೇಳಿದೆನು ಅವಳು ಮುಗುಳ್ನಕ್ಕಳು. ನನಗರ್ಥವಾಗಲಿಲ್ಲ. ತಿರುಗಿ ಅವ ಕೊಡನೆ ಕೇಳಿದೆ. " ಜೀವನ ಮಾಧುರ್ಯವೆಲ್ಲಿ ಅಡಗಿದೆ.? "

ನೀಲಾಲಕೆಯು ತನ್ನ ಕೇಶರಾಶಿಯನ್ನು ತೋರಿಸುತ್ತ "ಇಲ್ಲಿ ಇದೆಯೇ ನೋಡಿರಿ." ಎಂದುಸುರಿದಳು. ಕೇಶರಾಶಿಯನ್ನು ಕೆದರಿ ಜೀವನ ಮಾಧುರ್ಯದ ಶೋಧ ನಡಿಸಿದೆ. ಆದರೆ ಎಲ್ಲಿಯೂ ಅದರ ಸುಳಿವಿಲ್ಲ. ನಿರಾಶನಾಗಿ ಅವಳತ್ತ ನೋಡಿದೆ. ಆಕೆ ಮುಗುಳ್ನಕ್ಕಳು.

ತನ್ನ ಮದಿರೋನ್ಮಾದಿತ ನಯನಗಳನ್ನು ಗುರುತಿಸಿ "ಇಲ್ಲಿ ಇದೆಯೇ ನೋಡಿರಿ " ಎಂದಾಕೆ ಬೆಸಸಿದಳು. " ಹುಂ. ಇಲ್ಲಿದ್ದರೂ ಇರಬಹುದು " ಎಂದೆಂದು ಅದರ ಅನ್ವೇಷಣೆ ನಡೆಸಿದೆ. ಕೃತಕೃತ್ಯ ನಾಗಲಿಲ್ಲ. ಈ ಬಾರಿಯೂ ಸೋತೆ. ಮಾನಿನಿ ತಿಲಕ್ಕನೆ ನಕ್ಕಳು.

" ಹುಂ. ಇಲ್ಲಿದೆಯೇ ಕಾಣಿರಲ್ಲ ! " ಎಂದು ತನ್ನ ಪಯೋಧರ ದ್ವಯವನ್ನು ಸೂಚಿಸಿದಳು ಮನೋಹರಿ.

" ಹಾ ! ಸಿಕ್ಕಿತು. ! " ಎಂದೆಂದು ಭರವಸೆಯಿಂದ ನಾಗಿದೆ. ಆದರೆ ಜೀವನ ಮಾಧುರ್ಯ ಅಲ್ಲಿಯೂ ಕಾಣದಾಯಿತು. ಸೋಲಿನಿಂದ ಹತಾಶನಾದ ನಾನು ಅವಳ ಮುಖಪದ್ಮದತ್ತ ನೋಡಿದೆ– ಅಲ್ಲಾದರೂ ಅದು ಅಡಗಿರಬೇಕೆಂದು ಭ್ರಮಿಸಿದೆ. ಅಲ್ಲೂ ಹತಾಶನಾದೆ. ಆಕೆ ಪರಿಹಾಸದೊಂದು ಮೆಲ್ನಗೆ ನಕ್ಕಳು.

" ಚೆನ್ನೆ ! ಅದು ಬೇರೆಲ್ಲಿ ಅಡಗಿದೆ? ನಿನ್ನ ಅಂಗ ಸೌಷ್ಠವದಲ್ಲೆ?" ಎಂದೆ. " ಇರಬಹುದು. ನೀನೇ ಕಾಣಿರಲ್ಲ. " ಎಂದು ಅನುಮತಿಯಿತ್ತಳಾಕೆ. ಲತಾಂಗಿಯ ಅಂಗ ಸೌಷ್ಠವಗಳನ್ನೆಲ್ಲ ಬಡದೆ ಜೀವನಮಾಧುರ್ಯದ ಶೋಧ ನಡೆಸಿದೆ. ಎಲ್ಲಿಯೂ ಅದರ ಹೊಳವು ಸಿಗಲಿಲ್ಲ. ಛೀ! ಇದೇನು ! ಎಂದು ನನ್ನ ಸೋಲು ನನ್ನನ್ನು ಧಿಕ್ಕರಿಸಿತು.

ದೈನ್ಯ ಭಾವದಿಂದ ಈಗ " ಪರಿಹಾಸ ಬೇಡ. ಸಹಜವಾಗಿ ಹೇಳು; ಜೀವನ ಮಾಧುರ್ಯವೆಲ್ಲಿ ಅಡಗಿದೆ ? ಗುರುತಿಸಲಾರದ ವನಾಗಿದ್ದೇನೆ " ಎಂದಾಗ, ನನ್ನ ಅನುನಯ ವಿನಯಗಳನ್ನು ಕಂಡಾಕೆ ಗಹಗಹಿಸಿದಳು.; " ಬರಿದೇ ವ್ಯರ್ಥ ಶೋಧ ನಡಿಸಿದಿರಿ. ಜೀವನಮಾಧುರ್ಯ ಬೇರೆಲ್ಲಿಯೂ ಇಲ್ಲ. ಇಲ್ಲಿದೆ.... ಇಕೋ ನೋಡಿರಿ—" ಎಂದು ತನ್ನ ಹೃದಯವನ್ನು ಮುಂದಿಟ್ಟಳು. ಬಿಚ್ಚಿ ನೋಡಿದೆ. ಜೀವನಮಾಧುರ್ಯದ ನಿಧಿಯೇ ಅಲ್ಲಿತ್ತು. 'ಈಂಟಲೇ?" ಎಂದೆ. " ಯಥೇಷ್ಟ!" ಎಂದಾಕೆ ಅಂದಳು. ಮನ್ಮನದ ಕಣಕಣವೂ ತಣಿಯುವಂತೆ ಆ ಅಮೃತೋಪಮ ರಸರಾಶಿಯನ್ನಾ ಸ್ವಾದಿಸಿದೆ.

೨

ಮದ--ಮದಿರೆ

(ಕೀರ್ತಿ ಮದಿರೆ)

ಮದಿರಾ ಸಮೂಹದಲ್ಲಿ ಹೆಚ್ಚು ಮತ್ತೇರಿಸುವ ಮದಿರೆಯಾವುದೆಂದು ನಾನು ಕೇಳಿದೆ.

ಅವರು " ಕೀರ್ತಿ ಮದಿರೆ" ಎಂದುತ್ತರಿಸಿದರು.

ಅವರ ವಿಚಾರಹೀನತೆಯನ್ನು ನೋಡಿ ನಕ್ಕೆ. ಏಕೆಂದರೆನವರು. " ಧನವೆಂಬ ಮದಿರೆ ಮತ್ತು ಬರಿಸುವವುಗಳಲ್ಲಿ ಅಗ್ರಗಣ್ಯ! ರಾಜ್ಯ ಮದಿರಾನಂದವು ಉನ್ಮತ್ತಕಾರಿಣಿ. ಪುತ್ರಮದ ಮದಿರೆಯು ಹೆಚ್ಚು ಮತವಾಲಿ. ಯುವತಿಮದವೆಂಬ ಮದಿರೆಯ ಸೇವಕನು ಉಳಿದೆಲ್ಲವನ್ನೂ ಮರೆತು ಬಿಡುವನು. ಮದಿರೆಯ ಭಕ್ತನು ಮತ್ತಿನ ಹುಚ್ಚನು. ಅವೆಲ್ಲವನ್ನು ಬಿಟ್ಟು ಕೀರ್ತಿಯನ್ನೇಕೆ ಮೊದಲಾಗಿಸಿದಿರಿ?.... ಅಮಮ ನಿಮ್ಮ ಸೂಚನೆಯೇ ! " ಎಂದು ಗೆದ್ದೆನೆಂಬ 'ಅಹಂ'ಭಾವದಿಂದ ವಿಡಂಬಿಸಿದೆ.

"ಇದರ ಸತ್ಯಾಸತ್ಯತೆಯನ್ನು ನಿರ್ಧರಿಸಬೇಕೆಂದಿರುವೆಯಾ?" ಎಂದವರು ಗಂಭೀರವಾಗಿ ಕೇಳಿದರು.

" ಅಲ್ಲದೆ ನುತ್ತೇನು? ಇರಲಿ, ನೀವೆಂದುದನ್ನು ತೋರಿಸಿರಿ." ಎಂದು ಅವರಲ್ಲಿ ಪಣತೊಟ್ಟವರಂತೆ ಮಾತಿಟ್ಟೆ.

ಮರುಕ್ಷಣ ಅವರು ನನ್ನೆದುರಿಗೆ ಮದಿರಾಪಾತ್ರಗಳನ್ನಿಟ್ಟು ಕೊಂಚ ಕೊಂಚ ಸವಿದು ನೋಡಿ ನಿರ್ಧರಿಸೆಂದರು. ಪರೀಕ್ಷಾರ್ಥವಾಗಿ ಒಂದೊಂದರ ಒಂದೊಂದೇ ಹನಿಯನ್ನು ಬಾಯಿಗಿಟ್ಟು ಸವಿ ನೋಡಿದೆ. ಧನಮದಿರೆಯ ಸವಿಯನ್ನು ನೋಡಿ ನನಗೆ ಮತ್ತೇರಲಿಲ್ಲ. ಸಂತಾನ ಮದಿರೆಯ ಸ್ವಾದ ನೋಡಿದೆ—ಅದರಿಂದ ಮದೋನ್ಮತ್ತನಾಗಲಿಲ್ಲ. ರಾಜ್ಯಮದ ಸೌಮ್ಯಮದಿರೆಯಾಗಿತ್ತೇ ಹೊರತು ಅದರ ಸೇವನೆಯು ನನ್ನನ್ನು ಹುಚ್ಚಾಗಿಸಲಿಲ್ಲ. ಯುವತಿ ಮದಿರೆಯ ಸ್ವಾದದ ನಂತರವೂ ನಾನು ಉನ್ಮತ್ತನಾಗಿ ಕಾಣದು ಪರಿಹಾಸಕ್ಕೊಳಗಾಗಲಿಲ್ಲ. ಕೊನೆದೆ ನೋಡುವೆನೆಂದುಕೊಂಡು ಕೀರ್ತಿಮದಿರಾನಂದದ ಸವಿ ನೋಡಿದೆ. ಅದರ ಕ್ಷುದ್ರ ಕಣಕಣಗಳೂ ನನ್ನನ್ನು ಮಹಾನ್ ಮುರ್ಖನನ್ನಾಗಿ ಮಾಡಿದುವು. ಜನರೆಲ್ಲ ನನ್ನ ವ್ಯವಸ್ಥೆಯನ್ನು ನೋಡಿ ಪರಿಹಾಸಗೈದರು.

ಮತ್ತಿಳಿದಾಗ ಅವರು ನನ್ನನ್ನು ನೋಡಿ ಕನಿಕರದ ನಗೆ ನಕ್ಕರು. ನಾನು ತಗ್ಗಿಸಿದ ತಲೆಯನ್ನು ಮೇಲೆತ್ತದೆ ಆತ್ಮರಕ್ಷಣೆ ಮಾಡಿಕೊಳ್ಳುವ ಹವ್ಯಾಸಕ್ಕೆ ತೊಡಗಿದೆ. ——

೩

ಅಪ್ಪಣೆ

ನೀನು ಸೃಷ್ಟಿಸಿದ ನಾದದಲ್ಲಿ ನನಗೆ ಇಷ್ಟವಿಲ್ಲ ಎಂದು ಮೊದಲ ಮಾನವನು ಮಹಾದೇವನಲ್ಲಿ ಹೋಗಿ ಮೊರೆಯಿಟ್ಟನಂತೆ.

(೨೪೯ ನೆಯ ಪುಟ ನೋಡಿರಿ)

ಕನ್ನಡ ಜನಪದಗೀತಗಳ ಛಂದಸ್ಸು

(ಛಂದೋ ವಿಚಾರ) *

ಲೇ. ಬೆಟಗೇರಿ ಕೃಷ್ಣಶರ್ಮ, ಧಾರವಾಡ

—●—

ಕನ್ನಡ ನಾಡಿನ ಜನಸಾಮಾನ್ಯರಲ್ಲಿ ರೂಢವಾಗಿರುವ ಪದ್ಯಸಾಹಿತ್ಯ ವಿವಿಧಗತಿಯೆಂದಾಗಿ ಕಾಣುವುದು. ಅದಕೆ ಅದರ ಛಂದಸ್ಸನ್ನು ಕುರಿತು ವಿಚಾರಮಾಡಿದಾಗ, ಅದೆಲ್ಲವೂ ಅಂತಗಣದ ಇಟ್ಟಿಗೆಗಳಿಂದಲೇ ಕಟ್ಟಿದ ಕಟ್ಟಡವೆಂದು ಕಾಣದಿರದು!

—○○●○○—

ಕನ್ನಡ ನಾಡು ಎಂದರೆ ಹಾಡುಗಳ ಬೀಡು. ನಮ್ಮ ನಾಡವರ ಬಾಳಿನಲ್ಲಿ ಹಾಡುಗಳು ಹಾಸುಹೊಕ್ಕಾಗಿ ಇವೆ. ನಮ್ಮ ದೈನಂದಿನ ಜೀವನದಲ್ಲಿ—ಬೆಳಗಿನಲ್ಲಿ ಹಾಸಿಗೆ ಬಿಟ್ಟು ಎದ್ದಾಗಿನಿಂದ ಮರಳಿ ಇರುಳಲ್ಲಿ ನಿದ್ದೆ ಹೋಗುವ ವರೆಗೂ—ಪ್ರತಿಯೊಂದು ಕಾರ್ಯದ ಗಳಿಗೆಯಲ್ಲಿಯೂ ಹೇಳಬಹುದಾದ ಹಾಡುಗಳು ಇರುವುವು. ಸಂಸ್ಕೃತ ಸಾಹಿತ್ಯದ ಧಾಟಿಯಿಂದ ಹೊರಟ ನಮ್ಮ ಅಭಿಜಾತ ಸಾಹಿತ್ಯದ ನಿರ್ಮಾತೃಗಳು, ಬಹಳ ದಿನಗಳ ವರೆಗೆ, ಈ ಕನ್ನಡ ನಾಡವರ ಹಾಡುಗಳ ಕಡೆಗೆ ತಮ್ಮ ಗಮನವನ್ನು ಹರಿಸಿರಲಿಲ್ಲವೆಂದು ತೋರುವುದು. ಅದರೆ ರಾಜ–ಮಹಾರಾಜರ ವಿದ್ವತ್‌ಸಭೆಯನ್ನು ಬಿಟ್ಟು, ಜನ ಸಾಮಾನ್ಯರ ಜೀವನವನ್ನು ಮೇಲೆತ್ತುವ ದೃಷ್ಟಿಯಿಂದ ಕಾರ್ಯ ಮಾಡಲು ಹೊರಟ ಸಾಹಿತ್ಯಿಕ ವರ್ಗಕ್ಕೆ ಕನ್ನಡ ನಾಡವರ ಹಾಡು—ಹಾಡುಗಬ್ಬಗಳ ಕಡೆಗೆ ಮನಸ್ಸನ್ನು ಕೊಡಲೇ ಬೇಕಾಯಿತು. ವೀರಶೈವ ಶರಣರು, ವೈಷ್ಣವ ದಾಸರು—ಇವರೆಲ್ಲ ತಮ್ಮ ಕೃತಿಗಳನ್ನು ಹಾಡುಗೊಳಿಸಲಿಕ್ಕೆ, ಕನ್ನಡ ನಾಡಹಾಡುಗಳ ಜಾಡನ್ನೇ ಹಿಡಿಯ ಬೇಕಾಯಿತು. ಕ್ರಿ. ಶ. ೧೬ನೆಯ ಶತಮಾನದಲ್ಲಿ ಬದುಕಿ ಬಾಳಿದ ಪುರಂದರದಾಸರು, ತಮ್ಮ 'ಮೋಹನ ತರಂಗಿಣಿ' ಎಂಬ ಹಾಡುಗಬ್ಬವನ್ನು ಹೇಗೆ ಬರೆದಿದ್ದೇನೆ—ಎಂಬುದನ್ನು ಹೇಳುವಾಗ, ಹೀಗೆ ಹೇಳಿದ್ದಾರೆ:

"ನಾಡೊಳಗುಳ್ಳ ಜಾಣರು ಜಾಣೆಯರೊಡ-| ನಾಡುವ ಸವಿ ಮಾತುಗಳ–ಪಾಡುಗಬ್ಬವ ಪರುಠವಿಸಿದ ಬಗೆಯ ನೀ | ನೋಡು ಮನಸಿನ ಮುಂದೆ ಮುಂದೆ!"

ಜಾನಪದ ಕಾವ್ಯದ ದಾರಿಯನ್ನು ಅನುಸರಿಸಿದ ರತ್ನಾಕರ ವರ್ಣಿ ಎಂಬ ಕಾವ್ಯಯೋಗಿಯು, ತನ್ನ ರೀತಿಯನ್ನು ಕುರಿತು ಪ್ರಸ್ತಾವನೆ ಬರೆಯುವಾಗ:

"ರಳಕುಲ ಶಿಥಿಲ ಸಮಾಜ ಮುಂತಾದವ–ರೊಳಗಿಲ್ಲಿ ಕೆಲವುಳ್ಳೊಡುಂಟು |

ಕೆಲವಿಲ್ಲಾದರು ಇಲ್ಲವೇಕೆಂದರವರ ಕೋ | ಟಲೆಯೇಕೆ ಹಾಡು ಹಾಡುಗಬ್ಬದೊಳು |"

ಎಂದು ಹೇಳಿ, ಹಾಡುಗಬ್ಬವೆಂದರೇನೆಂಬುದನ್ನು ವಿವರಿಸುವಾಗ:

"ಕಬ್ಬಿಗರೋದುಗಬ್ಬವ ಹಾಡುಗಬ್ಬವ ಕಬ್ಬದೊಳೊರೆವರಿ ವೆರಡು |

ಕಬ್ಬನಂತಿರಬೇಕು — ಬಿದಿರಂತೆ ರಚಿಸಲೇ ಕಬ್ಬ ಹೇಳಿಲೆ ಸರಸ್ವತಿಯೆ!"

ಎಂದು ಪರ್ಯಾಯವಾಗಿ, ಅಭಿಜಾತಮಾರ್ಗದ ಕವನವನ್ನು ಬಿದಿರಂತೆ ವೀರಸವಾದುದೆಂದು ಹೇಳಿ, ಹಾಡುಗಬ್ಬವು ಕಬ್ಬಿನಂತೆ ರಸಪೂರ್ಣವಾಗಿರುವುದೆಂದು ಉಗ್ಗಡಿಸಿದ್ದಾನೆ. ಮಧ್ಯಕಾಲದಲ್ಲಿ ಹಾಡುಗಬ್ಬವನ್ನು ಎತ್ತಿ ಹಿಡಿದು ಹೊಗಳಿದ ಕನ್ನಡ ಕವಿಗಳು ತುಂಬ ಜನರು. ಹಾಡುಗಬ್ಬದ ರೀತಿ–ನೀತಿಗಳೆಂದರೆ ಕನ್ನಡ ನಾಡವರ ಹಾಡು–ಕವನಗಳ ಶೈಲಿ–ಸಾರಲ್ಯಗಳ ಮರ್ಮವನ್ನು ಮನನರಿಕೆ ಮಾಡಿಕೊಂಡು, ಅವುಗಳ ತಳಹದಿಯ ಮೇಲೆ ನಿರ್ಮಿಸಿಕೊಂಡುದು. ಇದೇ ಕಾಲದಲ್ಲಿಯೇ ಇರಬಹುದು....ಅಭಿಜಾತ ಮಾರ್ಗದ ಕಾವ್ಯವು 'ವಸ್ತುಕ' ಎಂದೂ, ದೇಶೀಯ ದಾರಿಯ ಹಾಡುಗಬ್ಬವು 'ವರ್ಣಕ' ಎಂದೂ ಹೆಸರನ್ನು ಪಡೆದಿವೆ.

"ಸಕಲ ಲಕ್ಷಣವು ವಸ್ತುಕಕೆ ವರ್ಣಕಕಿಷ್ಟು ವಿಕಳವಾದರು ದೋಷವಿಲ್ಲ;

ಸಕಲ ಲಕ್ಷಣಕಾಗಿ ಬಿರುಸು ಮಾಡಿದಕೆ ಪುಸ್ತಕದ ಬದನೇ ಕಾಯಹುದು!!!

ಎಂದು ಹೇಳಿರುವ ರತ್ನಾಕರ ವರ್ಣಿಯ ಮಾತುಗಳನ್ನು ನೋಡಿದರೆ, ನಾಡವರಲ್ಲಿ ರೂಢವಾಗಿರುವ ಹಾಡುಗಬ್ಬಗಳ ವಿಷಯಕ

* ಈ ವಿಷಯವು ಧಾರವಾಡ ಅಖಿಲಭಾರತ ಆಕಾಶವಾಣಿ ಕೇಂದ್ರದ ತಾ. ೨೪–೯–೫೫ರಂದು ಬಿತ್ತರಿಸಲ್ಪಟ್ಟಿತು. ಸಂ. ಜ.

ನಾಗಿ ಆ ಕಾಲದಲ್ಲಿ ಉಂಟಾಗಿದ್ದ ರಸಿಕರ ಸದಭಿಪ್ರಾಯವು ಸೂಚಿತ ಸಾಗುವುದು.

ಕನ್ನಡ ನಾಡಿಗರ–ನಾಡಾಡಿಗರ–ಸಾಹಿತ್ಯವೆಲ್ಲ ಹಾಡುಗಳಾಗಿ ಯೇ ಹರಿದಿರುವುದೆಂಬುದನ್ನು ಈ ಮೊದಲೆ ಹೇಳಲಾಗಿದೆ. ಈ ಹಾಡು ಗಳಿಗೆ ಒಂದೊಂದಕ್ಕೂ ಒಂದು ಧಾಟಿ ಇದ್ದೇ ಇರುವುದು ಧಾಟಿಯಿಂದ ಹಾಡುವುದೆಂದರೆ ಹಾಡಿಗೆ ರಾಗ ಬೇಕು—ತಾಳವೂ ಬೇಕು ತಾಳ ಬೇಕೆಂದ ಮೇಲೆ ಹಾಡುಗಳಲ್ಲಿಯ ಮಾತುಗಳು ಒಂದು ಸಮಾನವಾದ ಗತಿಯಲ್ಲಿ ನಡೆಯಬೇಕಾಗುವುದು. ಮಾತುಗಳಲ್ಲಿಯ ಒಂದು ಕ್ರಮ-ಬದ್ಧವಾದ ನಡಿಗೆಯ ರೀತಿಗೇ ಛಂದಸ್ಸು ಎಂದು ಹೇಳುವರು. ಕನ್ನಡ ನಾಡವರ ಎಲ್ಲ ಹಾಡುಗಳಿಗೂ ಒಂದು ಕ್ರಮಬದ್ಧವಾದ ನಡಿಗೆ ಯಿದ್ದುದು ಕಾಣುತ್ತಿದೆಯೆಂದ ಮೇಲೆ, ಅವೆಲ್ಲ ಒಂದು ಬಗೆಯ ಛಂದಸ್ಸಿನ ತತ್ತ್ವದ ತಳಹದಿಯ ಮೇಲೆಯೆ ರಚನೆಗೊಂಡಿವೆಯೆಂದು ಬೇರೆ ಹೇಳಬೇಕಾಗಿಲ್ಲ. ಆದರೆ, ಕನ್ನಡನಾಡವರು ತಮ್ಮ ಹಾಡು ಗಳಿಗಾಗಿ ಅನುಸರಿಸಿದ ಛಂದೋನಿಯಮಗಳು ಎಂತಹವೆಂಬುದನ್ನು ಕೂಲಂಕಷವಾಗಿ ಕಂಡುಹಿಡಿಯಬೇಕಾದ ಕಾರ್ಯ ಇನ್ನೂ ನಮ್ಮಲ್ಲಿ ನಡೆಯಬೇಕಾಗಿದೆ. ಈಗ ನಡೆದಿರುವ ಕೆಲಸ ಅತ್ಯಲ್ಪ.

ಕನ್ನಡ ಜಾನಪದ ಗೀತಗಳನ್ನು ಛಂದೋಗತಿಯ ದೃಷ್ಟಿ ಯಿಂದ ವಿಶ್ಲೇಷಣ ಮಾಡಿ ನೋಡಿದರೆ ತ್ರಿಪದಿ, ಸಾಂಗತ್ಯ, ಹಾಡು, ಕೀರ್ತನ, ಲಾವಣಿ—ಹೀಗೆ ಐದು ವಿಭಾಗಗಳು ಮುಖ್ಯವಾಗಿ ಕಾಣು ವುವು. ಜೀವನದಲ್ಲಿಯ ಗಂಭೀರ ತತ್ತ್ವದ ರಹಸ್ಯವನ್ನು ಹೇಳು ವಂತಹ ತ್ರಿಪದಿಗಳು, ಗತಿಪ್ರಧಾನವಾಗಿರದೆ ಅಲಾಪನ ಪ್ರಧಾನ ವಾಗಿರುವುವು. ಆದುದರಿಂದ ನಮ್ಮ ನಾಡಿಗರು, ತತ್ತ್ವ ಪ್ರಧಾನವಾದ ತ್ರಿಪದಿಗಳನ್ನು ತಾಳದಲ್ಲಿ ಹೇಳದೆ, ಲಯಬದ್ಧವಾದ ಗದ್ಯದಲ್ಲಿ ಹೇಳುವುದು ರೂಢಿಯಾಗಿದೆ. ಜೀವನದ ಲೌಕಿಕ ವಿಚಾರದ ಹಗುರು-ಮಾತುಗಳನ್ನು ಹೇಳಬೇಕಾದಾಗ, ಈ ತ್ರಿಪದಿಯನ್ನು ಹಿಗ್ಗಿಸಿ ಚೌಪದಿಯನ್ನಾಗಿ ಮಾಡಿಕೊಂಡಿದ್ದಾರೆ. ಈ ಚೌಪದಿಯನ್ನು ಒಂದು ಸ್ವಷ್ಟಗತಿಯ ಲಯದಲ್ಲಿಯೂ ನಡೆಯಿಸುತ್ತಾರೆ. ಈ ಚೌಪದಿ ಯೇ 'ಸಾಂಗತ್ಯ' ಎಂದು ಹೆಸರನ್ನು ಪಡೆದು ನಿಂತಿದೆ.

ನಮ್ಮ ನಾಡಿಗರ ಜೀವನದ ವಿವಿಧಸಂದರ್ಭಗಳಲ್ಲಿ ಬಳಕೆ ಯಾಗುತ್ತಿರುವ ತುಂಡುಗವನಗಳು ತ್ರಿಪದಿಗಳೇ ಆಗಿರುತ್ತವೆ ಒಂದು; ಇಲ್ಲವೆ ತ್ರಿವಳಿ ಆರಳಿ ಚೌಪದಿಯಾಗಿ ತಾಳಗತಿಯನ್ನು ಪಡೆದ ಸಾಂಗತ್ಯಗಳಾಗಿರುತ್ತವೆ ಒಂದು. ಜೋಗುಳ, ಬೀಸು-ಕುಟ್ಟುವ ಹಾಡು, ಮದುವೆ-ಸೋಬಾನೆ ಹಾಡು, ಕೋಲುಹಾಡು, ಹಂತಿಯ ಪದ,! ಬಂಡಿ ಜೊಡೆಯುವಾಗಿನ ಬಲೂರಿ, ಯಾಂತ ಹೊಡೆಯುವಾಗಿನ ತುಂಡುಗವನ, ಹೋಳಿಯ ಪದ ಇವೆಲ್ಲ ತ್ರಿಪದಿ ಅಥವಾ ಸಾಂಗತ್ಯ ವೃತ್ತಗಳಾಗಿರುವುವು.

ತ್ರಿಪದಿಯೇ ಹಿಗ್ಗಿ ಸಾಂಗತ್ಯವಾಗಿ ಹೇಗೆ ಪರಿಣಮಿಸುವುದೆಂಬು ದಕ್ಕೆ ಇಲ್ಲಿ ಒಂದು ಉದಾಹರಣೆಯನ್ನು ಕೊಡುತ್ತೇನೆ, ನೋಡಿ.

"ಹಸುಗೂಸು ಹುಟ್ಟಲಿ ಹೊಸ ಪ್ಯಾಟೆ ಕಟ್ಟಲಿ
ರಸ ಬಾಳೆ ಕಬ್ಬು ಬೆಳೆಯಲಿ
ಬಸವನಾ ತೇರು ಎಳೆಯಲಿ"

ಇದು ತ್ರಿಪದಿ, ಇದು ಚೌಪದಿಯಾಗುವುದು ಹೇಗೆಂಬುದನ್ನು ನೋಡಿ:

"ಹಸುಗೂಸು ಹುಟ್ಟಲಿ ಹೊಸ ಪ್ಯಾಟೆ ಕಟ್ಟಲಿ
ರಸ ಬಾಳೆ ಕಬ್ಬು ಬೆಳೆಯಲಿ
ರಸ ಬಾಳೆ ಕಬ್ಬು ಬೆಳೆಯಾಲಿ ನಮ್ಮೂರ
ಬಸವನಾ ತೇರು ಎಳೆಯಲಿ!"

ತ್ರಿಪದಿ ಸಾಂಗತ್ಯವಾಗಿ ಆರಳಿದ ರೀತಿಯಿದು. ಮುಂಬೆ ಸಾಂಗತ್ಯಕ್ಕೊಂದು ಪ್ರತ್ಯೇಕ ಸ್ಥಾನವು ದೊರೆಯಲು, ಅದು ಎರಡ ನೆಯ ಚರಣದ ಕೊನೆಯ ಭಾಗದ ಪುನರುಕ್ತಿಯಿಂದ ಪ್ರಾರಂಭ ವಾಗುವ ಮೂರನೆಯ ಚರಣವನ್ನು ಸ್ವತಂತ್ರ ಚರಣವನ್ನೇ ಮಾಡಿ ಕೊಂಡು ಬಿಟ್ಟಿತು. ಪುನರುಕ್ತವಾಗುತ್ತಿದ್ದ ಪದಗಳ ಸ್ಥಾನವು ಸ್ವತಂತ್ರ ಶಬ್ದ ಮಾಲೆಯಿಂದಲೇ ತುಂಬಿಕೊಂಡಿತು. ಈ ಬಗೆಯ ಸ್ವತಂತ್ರ ಸಾಂಗತ್ಯ ವೃತ್ತಕ್ಕೆ ಉದಾಹರಣೆಯಿದು :

"ಅಪ್ಪಾ ಸೀರಿಯ ಕೊಡೊ, ಅಣ್ಣಾ ಸೀರಿಯ ಕೊಡೊ,
ಅಪ್ಪನ ಮಗ ತಮ್ಮಾ ಸೀರೀ ಕೊಡೋ |
ಅಪ್ಪನು ನಾನಲ್ಲ, ಅಣ್ಣನು ನಾನಲ್ಲ
ಅಪ್ಪನ ಅಳಿಯನೆ ಗೊಲ್ಲಭಾಮೆ!

ನಮ್ಮ ನಾಡವರ ಸಾಹಿತ್ಯದಲ್ಲಿಯ ಬಹುಭಾಗವು ಈ ಸಾಂಗತ್ಯ ವೃತ್ತದಲ್ಲಿಯೆ ರಚಿತವಾದುದಾಗಿರುವುದು. ಈ ವೃತ್ತವು ಒಂದು ಕ್ರಮಬದ್ಧವಾದ ನಡಿಗೆಯಲ್ಲಿ ನಡೆಯುವುದು; ನಡಿಗೆಯ ಹೆಜ್ಜೆ ಗೊಂದು ತಾಳದ ಏಟು ಬೀಳುವುದು; ಈ ಸಮಾನ ಗತಿಯ ತಾಳ ಗಳಿಗೆ ಒಂದೊಂದಕ್ಕೂ ಸಮಾನಪ್ರಮಾಣದಲ್ಲಿ ಹಾಡಿನ ಮಾತು ಗಳಲ್ಲಿಯ ಅಕ್ಷರಗಳು ಒಂದು ಕ್ರಮದಲ್ಲಿ ಒಳಗೊಳ್ಳುತ್ತ ಹೋಗು ವುವು. ಸಮಾನಾಕ್ಷರಗಳಿಂದ ಕೂಡಿದ ಕಾಲಪ್ರಮಾಣಕ್ಕೆ 'ಅಕ್ಷರ ಗಣ' ಎಂದು ಹೇಳುವರು. ಸಮಾನ ಮಾತ್ರೆಗಳಿಂದ ಕೂಡಿದ ಕಾಲ ಪ್ರಮಾಣಕ್ಕೆ 'ಮಾತ್ರಾಗಣ' ಎಂದು ಹೇಳುವರು. ಸಾಂಗತ್ಯದ ಲಯದ ಕಾಲಪ್ರಮಾಣವನ್ನು ಕುರಿತು ವಿಚಾರಮಾಡಿ ನೋಡಿದರೆ ಇದರ ಗಣಗಳನ್ನು ಅಕ್ಷರಗಣಕ್ಕೆ ಸೇರಿಸಲೂ ಬರುವುದಿಲ್ಲ; ಮಾತ್ರಾ ಗಣವರ್ಗಕ್ಕೆ ಸೇರಿಸಲೂ ಬರುವುದಿಲ್ಲ. ಕನ್ನಡ ಜಾನಪದ ಗೀತ ಗಳ ಛಂದಸ್ಸಿನ ವೈಶಿಷ್ಟ್ಯವೆಂದರೆ ಈ ಗಣವಿಚಾರಕ್ಕೆ ಸಂಬಂಧಿಸಿ ದುದೇ ಆಗಿದೆ ಈ ಹಾಡುಗಳ ಗಣಪದ್ಧತಿ ಶುದ್ಧ ದೇಶೀಯವೆನಿಸಿ ಕೊಳ್ಳುತ್ತದೆ. ಈ ಗಣಗಳಲ್ಲಿ ಅಕ್ಷರ ಸಂಖ್ಯಾ ಸಮಾನತೆಯೂ ಇರ ವುದಿಲ್ಲ, ಮಾತ್ರಾಸಮಾನತೆಯೂ ಇರುವುದಿಲ್ಲ. ಆದರೆ ಲಯದೊಂದಿಗೆ ಹೇಳುವಾಗ ಈ ವಿಷಮಾಕ್ಷರದ—ವಿಷಮಮಾತ್ರೆಯ—ಗಣಗಳೂ ಒಂದು ಸಮಾನಕಾಲ ಪರಿಮಿತಿಯನ್ನು ಪಡೆಯುತ್ತವೆ. ಹೀಗೆ ಕಾಲಪರಿಮಿತಿಯನ್ನು ಪಡೆಯುವಾಗ ಗಣದಲ್ಲಿರುವ ಹ್ರಸ್ವ-ದೀರ್ಘಾಕ್ಷರಗಳಲ್ಲಿ ಹಿಗ್ಗಾಟ–ಮುಗ್ಗಾಟಗಳನ್ನು ನಡೆಯಿಸಬೇಕಾಗು

ಯ. ಸಾಂಪ್ರದಾಯಿಕ ಲಾಕ್ಷಣಿಕರು ಈ ಗಣಪದ್ಧತಿಯ ಯಮಿತತೆಯು ದೋಷಪೂರ್ಣವಾದದ್ದೆಂದು ಹೇಳಬಹು ದಾದರೂ, ನಮ್ಮ ನಾಡವರ ಹಾಡು ಹೇಳುವ ಪದ್ಧತಿಗೆ, ಈ ಗಣ ದ್ಧತಿಯಿಂದ ಒಂದು ಬಗೆಯ ಸೌಂದರ್ಯಸಿದ್ಧಿ ದೊರೆತಂತಾಗಿದೆ ೀರದು, ದೋಷದೂಷಿತವಾಗಿಯೇನೂ ಅದು ಕಂಡುಬರುವುದಿಲ್ಲ.

ಗಣಪದ್ಧತಿಯನ್ನು ನಮ್ಮ ದಕ್ಷಿಣ ದೇಶದಲ್ಲೆಲ್ಲ 'ಅಂಶಗಣ ದ್ಧತಿ' ಎಂಬ ಹೆಸರಿನಿಂದ ಕರೆಯುವರು. ತಮಿಳಿನಲ್ಲಿ ಒಂದರಿಂದ ಲ್ಕರವರೆಗೆ ಅಂಶಗಳನ್ನೊಳಗೊಂಡ ನಾಲ್ಕು ಬಗೆಯ ಅಂಶಗಣ ಗಳುವುವು. ಕನ್ನಡದಲ್ಲಿ ಎರಡರಿಂದ ನಾಲ್ಕರವರೆಗೆ ಅಂಶಗಳನ್ನು ಳಗೊಂಡ ಮೂರು ಬಗೆಯ ಅಂಶಗಣಗಳಿರುವುವು. ಈ ಮೂರು ಗೆಗಳನ್ನೇ ಬ್ರಹ್ಮಗಣ ವಿಷ್ಣುಗಣ ರುದ್ರಗಣ ಎಂಬ ಹೆಸರಿನಿಂದ ೀಳುವರು. ಬ್ರಹ್ಮಗಣದ ಒಂದೊಂದು ಗಣವು ಎರಡು ಅಂಶಗಳಿಂದ ೂಡಿದ್ದು, ಹ್ರಸ್ವದೀರ್ಘಾಕ್ಷರಗಳ ಮುಂದು ಹಿಂದಿನ ಉಪಯೋಗಕ್ಕ ನುಸಾರವಾಗಿ, ಇದು ನಾಲ್ಕು ರೀತಿಯಾಗಿರುವುದು. ವಿಷ್ಣುಗಣವು ಮೂರು ಅಂಶಗಳಿಂದ ಕೂಡಿದುವಾಗಿದ್ದು, ಎಂಟು ಬಗೆಯದಾಗಿರು ದು. ರುದ್ರಗಣವು ನಾಲ್ಕು ಅಂಶಗಳಿಂದ ಕೂಡಿದ್ದು, ಹದಿನಾರು ಗೆಯಲ್ಲಿ ರೂಪಗೊಂಡಿರುವುದು. ಕನ್ನಡನಾಡವರ ಬಳಕೆಯಲ್ಲಿರುವ ್ರಪದಿ-ಸಾಂಗತ್ಯಗಳೆಲ್ಲ, ಈ ಬ್ರಹ್ಮ-ವಿಷ್ಣು-ರುದ್ರಗಣಗಳ ಉಚಿತ ನ್ಯಾಸದಲ್ಲಿ ರಚಿತವಾಗಿದ್ದು, ಬೇರೆ ಬೇರೆ ತಾಳಗತಿಯಲ್ಲಿ ಹೇಳಲು ಹಕಾರಿಗಳಾಗಿರುವುವು.

ತ್ರಿಪದಿ, ಸಾಂಗತ್ಯಗಳಾದ ಮೇಲೆ, ಇನ್ನುಳಿದುವು ಹಾಡು-ೀರ್ತನ-ಲಾವಣಿಗಳು. ಇವೆಲ್ಲವೂ ಲಯಪ್ರಧಾನವಾದುವು. ಸಂಗೀತ ಾಸ್ತ್ರದಲ್ಲಿ ಹೇಳಿದ ಏಳು ಪ್ರಮುಖತಾಳಗಳ ಗತಿಗಳಲ್ಲಿಯೂ ನಡೆ ುವ ಬೇರೆ ಬೇರೆ ಹಾಡು-ಕೀರ್ತನಗಳು, ಕನ್ನಡ ನಾಡವರಲ್ಲಿ ಸಂಖ್ಯಾವಾಗಿ ಪ್ರಚಾರದಲ್ಲಿವೆ. ಗಣನಿಯಮದ ದೃಷ್ಟಿಯಿಂದ ಹೆಚ್ಚು ನಷ್ಟೆಯ ಹಾಡುಗಳೆಲ್ಲ, ಅಂಶಗಣದಲ್ಲಿಯೆ ರಚಿತವಾದುವುಗಳಿರು ವೆವು. ಕಡಮೆ ಸಂಖ್ಯೆಯ ಹಾಡು ಕೀರ್ತನಗಳು ತಾಲಶಾಸ್ತ್ರವನ್ನನು ರಿಸಿದ ಮಾತ್ರಾಗಣಗಳಲ್ಲಿ ರಚಿತವಾಗಿವೆಯೆಂದು ಎನಿಸುತ್ತಿದ್ದರೂ, ಸೂಕ್ಷ್ಮದೃಷ್ಟಿಯಿಂದ ವಿಮರ್ಶೆಮಾಡುತ್ತ ಹೋದರೆ, ಅವು ಕೂಡ ಂಶಗಣಗಳಿಂದಲೇ ಬೆಳೆದು ಬಂದುವುಗಳೆಂಬುದು ತಿಳಿಯದೆ ೀಗದು ನಮ್ಮಲ್ಲಿಯ ದೇವರ ಸ್ತುತಿ-ಸ್ತೋತ್ರದ ಹಾಡು-ಕೀರ್ತನ ಗಳು, ಲೌಕಿಕ ಭಾವಗೀತಗಳು, ಅಟ್ಟಹಾಟ-ಬಯಲಾಟಗಳೊ ಣಗಿನ ನಾಟ್ಯಗೀತಗಳು, ಜಾವಡಿಯಂತಹ ಶೃಂಗಾರಗೀತಗಳು, ಾಸರ ಕೀರ್ತನ-ಸುಳಾದಿ-ಉಗಾಭೋಗಗಳು, ಶರಣರ ಶಿವ ಭಜ ನೆಯ ಪದಗಳು, ಇಜೆಲ್ಲವುಗಳ ಕಟ್ಟಪದಕ್ಕೂ ಮೂಲ ಇಟ್ಟಗೆಗಳೆಂದರೆ ಂಶಗಣಗಳವೇ.

ನಮ್ಮ ನಾಡಿನಲ್ಲಿ ರೂಢವಾಗಿರುವ ಲಾವಣಿಗಳನ್ನು ಛಂದ ಶ್ಶಾಸ್ತ್ರದ ದೃಷ್ಟಿಯಿಂದ ವಿಚಾರಿಸಿದಾಗ, ಇದು ಅಂಶಗಣ ಪದ್ಧತಿ ಗಿಂತ ಹೆಚ್ಚಾಗಿ ಮಾತ್ರಾಗಣ ಪದ್ಧತಿಯನ್ನು ಅನುಸರಿಸಿ ರಚಿತವಾದು ದೆಂದು ತೋರು ಬರುತ್ತದೆ. ಕಾರಣವೆಂದರೆ ಲಾವಣಿಗಳ ಪರಂಪರೆಯು ಉತ್ತರ ದೇಶದಿಂದ ಆ ಮೇಲೆ ಬಂದು ನಮ್ಮಲ್ಲಿ ಸೇರಿಕೊಂಡು ದಾಗಿದೆ 'ಲಾವಣಿ' ಎಂದಿರುವ ಹೆಸರೇ ವಿಶೇಷವಾಗಿದೆ. ಯಾವುದಾದರೊಂದು ವಿಶಿಷ್ಟ ಘಟನೆಯನ್ನಾಗಲಿ, ವಿಶಿಷ್ಟ ವ್ಯಕ್ತಿಯ ಪವಾಡಗಳನ್ನಾಗಲಿ ಬಣ್ಣಿಸಿ ಹೇಳುವ ದೀರ್ಘವಾದ ಹಾಡುಗಳನ್ನು 'ಲಾವಣಿ' ಎಂಬ ಹೆಸರು ಸಲ್ಲುವುದು. ಐತಿಹಾಸಿಕ ಕಾಲದಲ್ಲಿ ಸೈಗೆ ಕರನ್ನು ಹುರುಪುಗೊಳಿಸಲಿಕ್ಕೆ, ವೀರಚರಿತ್ರ, ಯುದ್ಧವೃತ್ತಗಳ ನ್ನೊಳಗೊಂಡ ಲಾವಣಿಗಳನ್ನು-ಖಂಜರಿ-ಡೋಲು-ತಪ್ಪಟೆ ಮೊದ ಲಾದ ವಾದ್ಯಗಳ ವಾದನ ಗತಿಯೊಂದಿಗೆ-ಹೇಳಿಸುವ ಪದ್ಧತಿ ಹೆಚ್ಚಾಗಿ ಉತ್ತರದ ದೇಶಗಳಲ್ಲಿ ಇದ್ದಿತು. ಅದರಲ್ಲಿರುವ ಗುಣಗಳನ್ನುಕಂಡು, ಕನ್ನಡಿಗರೂ ತಮ್ಮ ನಾಡಿನಲ್ಲಿ ಲಾವಣಿ ಪದ್ಧತಿಯನ್ನು ಪ್ರಾರಂಭಿಸಿರಬಹುದು. ಹೆಚ್ಚಾಗಿ ಇವು ನಾಲ್ಕು ಮಾತ್ರೆಯ ಏಕ ತಾಳದ ಗಣಗಳಲ್ಲಿ ರಚಿತವಾದುವುಗಳಿರುವುವು ಒಂದು ಉದಾಹರಣೆ ನೋಡಿ:

" ಕಟ್ಟೇ ಚೆನ್ನಪ್ಪನ ಪ್ರಬಲ ಎಷ್ಟಂತ್ಹೇಳಲಿ ಜಂವ
ಶ್ರೀಕ್ಷೇತ್ರಾಗೀ ಹ್ವಾದಾನೀ ಮತ್ಯಾರೊಳಗ-ಡಂಪ್ಟ
ದುರ್ಯೋದನನ ಕಿಂತಾ-ಕೋಪ ಜಗನ ಜೊಬ್ಯಾಗ-
ಜಾತಿಯಿಂದ ಲಿಂಗಾಯತ, ಯಾತರ ಮ್ಯಾಲೂ ಇಲ್ಲ ಚಿತ್ತ
ಚಮತಭಾಳ ದಾಂಡಪಟ್ಟೇ ಆಡೂದ್ರೊಳಗ,
ಜಗಿದು ಕಡತಾ ಕೊಡತಿದ್ದನೋ ತನ್ನ ನೈರಿಯಿದ್ದವಗ!"

ಇನ್ನೊಂದು ಬಗೆಯ ಲಾವಣಿಯನ್ನು ನೋಡಿರಿ:

" ಹೆಸರಿಗಾನಂದನಾಮ ಸಂವತ್ಸರಾ-ತಪ್ಪರಿಲ್ಲ ಬರಾ-
ಮಳೀಪ್ವಾದೂ ಆರಾ
ನೋಡತಾರ ಮುಗಲಾ ||
ಶ್ರಾವಣದ ಮಾಸ ಕಡಿತನಕ ಭೂಮಿ ಬಿತ್ತಲೀಲ್ಲಾ ! || "

ಯಾವ ಲಾವಣಿಯನ್ನು ನೋಡಿದರೂ ಹೀಗೆಯೇ ದ್ರುತಗತಿಯ ಮಾತ್ರಾಗಣದಲ್ಲಿಯೆ ಇರುವುವು.

ನಮ್ಮ ನಾಡಿನಲ್ಲಿ ಕವಿಲಿ ಬಸವಣ್ಣನವರು, ದುರುಗಮುರುಗಿ ಯವರು, ಶಂಬದಯ್ಯಗಳು, ಸುಡುಗಾಡುಸಿದ್ಧರು, ಖಡಖುಪಕೆ ಯವರು, ಕಿನ್ನರ ಹೋಗಿಗಳು ಮೊದಲಾದ್ಯವಿಶಿಷ್ಟಕಾಯಕದ ಪಿರು ಪೆಯವರಿರುವರು. ಇವರೆಲ್ಲ ತಂತಮ್ಮ ಭಕ್ತಿಯ ಕಾಯಕವನ್ನು ನಡೆಸುವಾಗ, ಬೇರೆ ಬೇರೆ ಲಯಬದ್ಧವಾದ ಗತಿಯಲ್ಲಿ ರಾಗವಾಗಿ ಆಶು ಕವನಗಳನ್ನು ಹೇಳುತ್ತಿರುವರು. ಈ ಆಶುಕವನಗಳ ನಡಿಗೆಯೂ ಕಿವಿಗೆ ಹಿತವಾಗಿರುವುದು. ಇವುಗಳಲ್ಲಿ ಅವರು ಕೂಡಿಸಿ ಹೇಳುವ ಮಾತುಗಳ ಕ್ರಮವನ್ನು ನೋಡಿದರೆ, ಅದರಲ್ಲಿಯ ಒಂದೊಂದು ಪದವೂ ಬ್ರಹ್ಮಗಣವೋ ವಿಷ್ಣುಗಣವೋ ರುದ್ರಗಣವೋ ಇದೆ ಯೆಂಬುದು ಗೊತ್ತಾಗುವುದು. ವೃತ್ತಗಂಧಿಯೆಲ್ಲಿ ಬರೆದಂತೆ ಕಾಣುವ ವೀರಶೈವ ಶರಣರ ವಚನಗಳಲ್ಲಿಯ ಪದಗಳು ಕೂಡ, ಅಂಶಗಣಪದ್ಧತಿ ಅಳವಡುವುವಾದುದರಿಂದ, ಅನೇಕ ವಚನಗಳನ್ನು ಲಯಬದ್ಧವಾಗಿ

(೨೭ ನೇ ಪುಟ ನೋಡಿರಿ)

ಮದುವೆಯ ತೆರವಿನ ಪದ್ಧತಿ

(ಸಾಮಾಜಿಕ ಸಂಪ್ರದಾಯ ಪರಿಚಯ)

ಡಾ. ಸಂಜೀವ ಲಕ್ಷ್ಮೇಶ್ವರ, ಕರ್ನಾಟಕ ಕಾಲೇಜ ಧಾರವಾಡ

●

ಹಿಮ್ಮ ಸಮಾಜದಲ್ಲಿ ಹೆಣ್ಣಿನ ತೆರವು, ವರದಕ್ಷಿಣೆ ಇವು ಯಾರಿಗೂ ಅಪರಿಚಿತವಾದ ವಿಷಯಗಳಲ್ಲ ಒಂದು ಕಾಲದಲ್ಲಿ ಜೀವಪದ ಅನುಕೂಲತೆಗೆಂದು ಮುಂದೆ ಬಂದ ಈ ಪದ್ಧತಿಗಳು ಈ ತಲೆಹೊರೆಯಾಗಿ ಕುಳಿತಿವೆ.

●

ವರದಕ್ಷಿಣೆ, ಎಂದರೆ ಏನು? ಎಂಬುದು ಎಲ್ಲರಿಗೂ ಗೊತ್ತಿದ್ದರೂ, ಅದರ ಪ್ರಾಚೀನ ಇತಿಹಾಸ ಅರಿತವರು ಸ್ವಲ್ಪೇ ಜನ ಎಂದು ಹೇಳ ಬಹುದು. ವರದಕ್ಷಿಣೆಯು ಪದ್ಧತಿಯಲ್ಲಿ ಬರುವ ಮುನ್ನ, ಕನ್ಯಾ ದಕ್ಷಿಣೆಯು ಅಥವಾ ಕನ್ಯಾಮಾರಾಟವು ರೂಢಿಯಲ್ಲಿದ್ದಿತು. ಮದುವೆ-ಯಾಗ ಬಯಸುವವನು, ಕನ್ಯಾಪಿತೃವಿಗೆ ಹಮ್ಮಿಣಿ ಸಲ್ಲಿಸಬೇಕಾಗು ತ್ತಿದ್ದಿತು.

ಇದಕ್ಕೆ ಅನೇಕ ಕಾರಣಗಳಿರುವುವು. ಮುಖ್ಯವಾದುವುಗಳೆಂದರೆ: (೧) ಕನ್ಯೆಯ ಪಾಲನೆ ಪಾಲನೆ ಮಾಡಿ ಬೆಳಿಸಿದ ಬಗ್ಗೆ ಅವಳ ತಂದೆ ತಾಯಿಗಳಿಗೆ ಆದ ವೆಚ್ಚವನ್ನು ತೀರಿಸುವುದಕ್ಕಾಗಿ (೨) ಹೆತ್ತು ಬೆಳ ಸಿದ ತಂದೆ-ತಾಯಿಗಳಿಗೆ, ಅವಳಿಂದ ಮದುವೆಯನಂತರ ಯಾವುದೇ ತರದ ಸೇವೆಗಳು ದೊರೆಯಲಾರವು-ಅವರಿಗಾಗುವ ಈ ಹಾನಿ ಯನ್ನು ತುಂಬಿ ಕೊಡುವುದಕ್ಕಾಗಿ ಅವಳನ್ನು ಮದುವೆಯಾಗುವವನು ಕೆಲ ಹಣ ಕೊಡಬೇಕಾಗುತ್ತಿದ್ದಿತು. (೩) ಅವಳಿಂದ ದೊರೆಯ ಬಹುದಾದ ಸಂತತಿಯ ಮೇಲೆ ತನ್ನ ಹಕ್ಕನ್ನು ಪ್ರಸ್ತಾಪಿಸಲು ಈ ಹಣ ತೆರಬೇಕಾಗುತ್ತಿದ್ದಿತು. ಆದರೆ ಅವಳಿಗೆ ಸಂತತಿಯಾಗದ ಪಕ್ಷದಲ್ಲಿ ಕನ್ಯಾಪಿತೃವು ಆ ಹಣವನ್ನು ತಿರುಗಿ ಕೊಡಲೊಪ್ಪಬೇಕಾಗು ವುದು.

ಹಣದ ಪರಿಮಾಣ:— ಕನ್ಯಾದಕ್ಷಿಣೆಯು ಇಷ್ಟೇ ಹಣ ಎಂದು ನಿರ್ದಿಷ್ಟವಾದ ಅಂಕಿ-ಸಂಖ್ಯೆಗಳಿರಲಿಲ್ಲ. ಹಣದ ಪರಿಮಾಣ ಅನೇಕ ಸಂಗತಿಗಳ ಮೇಲೆ ಅವಲಂಬಿಸಿರುವುದು (೧) ಕನ್ಯಾಪಿತೃ ವಿನ ಮನೆತನದ ಸಾಮಾಜಿಕ ಸ್ಥಾನ ಹೂನ. ಸಿರಿವಂತರಿದ್ದಲ್ಲಿ ಹೆಚ್ಚು ಹಣ, ಬಡವರಿದ್ದಲ್ಲಿ ಕಡಿಮೆ ಹಣ. (೨) ಕನ್ಯೆಯ ರೂಪ-ಗುಣಗಳು ಈ ಹಣದ ನಿರ್ಣಯದಲ್ಲಿ ಸುಹತ್ತ್ವದಾಯಿಗಿರುವುದು. (೩) ಗಂಡ ಬಿಟ್ಟವಳಿಗೆ, ವಿಧವಾ ಸ್ತ್ರೀಯಳಿಗೆ ಕಡಿಮೆ ಹಣ. ಕುಮಾರಿ ಇದ್ದ ಪಕ್ಷದಲ್ಲಿ ಈ ಹಣವು ಹೆಚ್ಚು ಇದ್ದಿತು.

ಹಣ ಕೊಡಲಾರದಂಥ ಪರಿಸ್ಥಿತಿಯುಳ್ಳವನು, ತನ್ನ ಭಾವೀ ಮಾವನ ಮನೆಯಲ್ಲಿ ಸೇವೆ ಮಾಡಿ ಕನ್ಯಾದಕ್ಷಿಣೆಯನ್ನು ತೀರಿಸು ವುದು ರೂಢಿಯಲ್ಲಿದ್ದಿತು. ಮದುವೆಯಾಗಬಕ್ಕ ಕನ್ಯೆಯ ರೂಪ-ಗುಣ ಗಳ ನೋಲೆ ಎಷ್ಟು ವರುಷ ಸೇವೆ ಮಾಡಬೇಕೆಂಬುದು ಅವಲಂಬಿ ಸಿದ್ದಿತು. ಅಷ್ಟು ಕಾಲ ಸೇವೆ ಮಾಡಿದ ನಂತರವೇ ಮದುವೆಯ ವಿಚಾರ. ಈ ಸೇವಾಕಾಲಕ್ಕೆ ಪರಿಮಿತಿ ಇರಲಿಲ್ಲ. ಒಂದು ವರುಷ ದಿಂದ ಹದಿನೈದು ವರುಷಗಳ ಅವಧಿ ರೂಢಿಯಲ್ಲಿದ್ದಿತು. ಈ ಅವ ಧಿಯು ವರನ ಪರೀಕ್ಷಾಕಾಲವೆಂದೇ ಹೇಳಬಹುದು. ಈ ಅವಧಿಯು ಯಶಸ್ವಿಯಾಗಿ ಮುಗಿದು, ಕನ್ನೆಯ ತಂದೆಯು ಪ್ರೀತನಾದರೆ, ಮದುವೆ ನೆರವೇರುವುದು. ಈ ಅವಧಿಯಲ್ಲಿ ವರನ ಕಾರ್ಯಕ್ಷಮತೆ, ಸಾಮರ್ಥ್ಯ, ಶಿಸ್ತು, ಸಂಯಮನಗಳನ್ನು ನೋಡುತ್ತಿದ್ದರು, ಮತ್ತು ಈ ಅವಧಿ ಯಲ್ಲಿ ಅವನನ್ನು ಅಳು ಮನುಷ್ಯನೆಂದೇ ಗಣಿಸುತ್ತಿದ್ದರು.

ಕನ್ಯಾದಕ್ಷಿಣೆ ಕೊಡುವ ಬಗೆ:— ಇದನ್ನು ಹಣದ ರೂಪ ದಲ್ಲಿಯಾಗಲಿ, ವಸ್ತುವಿನ ರೂಪದಲ್ಲಿಯಾಗಲಿ, ಕೊಡಬಹುದು. ರಾಜಮನೆತನದವರು ಭೂನಿಯನ್ನಾಗಲಿ, ಆನೆ ಮುಂತಾದ ಬೆಲೆ ಯುಳ್ಳ ವಸ್ತುಗಳನ್ನಾಗಲಿ, ಕೊಡುತ್ತಿದ್ದರು. ಸಾಮಾನ್ಯರು ದನ, ಕುರಿ, ಮುಂತಾದುವನ್ನು ಕೊಡುತ್ತಿದ್ದರು. ಈ ಹಣವನ್ನು ಒಮ್ಮೆಲೆ ಕೊಡ ಬಹುದು ಇಲ್ಲವೇ ಕಂತಿನ ಮೇಲೆ ಕೊಡಬಹುದು. ಮೊದಲನೆಯ ಸಂತತಿಯನ್ನು ಕನ್ಯಾದಕ್ಷಿಣೆಯೆಂದು ಕೊಡುವುದು ರೂಢಿಯಲ್ಲಿದ್ದಿತು. ಕನ್ಯಾ ದಕ್ಷಿಣೆಯ ಹಣ ಹೆಚ್ಚು ಒರಲಿ ಎಂದು, ಕನ್ಯಾ ಪ್ರದರ್ಶನಗಳು ನಡೆಯುತ್ತಿದ್ದುವು. ಇಂದಿಗೂ ಕೂಡ ಜರ್ಮನಿಯ ಕೆಲ ಪ್ರದೇಶ ಗಳಲ್ಲಿ, ಇಂಥ ಪ್ರದರ್ಶನಗಳು ನಡೆಯುವುವು. ಇನ್ನೊಂದು ಕಡೆಗೆ ಮದುವೆಗೆ ಮುನ್ನ ಎಂಟು ದಿನಗಳ ವರೆಗೆ ಈ ಪ್ರದರ್ಶನ ನಡೆಯು ವುದು. ಕನ್ಯೆಯನ್ನು ನೋಡಬಯಸುವವರು ಹಣ ಕೊಟ್ಟು ನೋಡ ಬೇಕಾಗುತ್ತಿದ್ದಿತು.

ಈ ಹಣವನ್ನು ಕೊಡುವುದಕ್ಕೆ ವೇಳೆಯ ಮಿತಿ ಇರಲಿಲ್ಲವಾದು ದರಿಂದ, ಎಷ್ಟೋ ಸಲ ಮಕ್ಕಳು ತಮ್ಮ ತಾಯಿಯ ಮದುವೆಯ ಕಾಲಕ್ಕೆ ಕೊಡಬೇಕಾದ ಹಣವನ್ನು ಕೊಡುವುದು ಕಂಡುಬರುವುದು. ಆದರೆ ವಿವಾಹವಿಚ್ಛೇದನವಾದರೆ, ಕನ್ಯೆಯ ತಂದೆಯು ತಾನು

ಪಡೆದ ಹಣವನ್ನಾಗಲಿ ವಸ್ತುಗಳನ್ನಾಗಲಿ ತಿರುಗಿ ಕೊಡಬೇಕಾಗುತ್ತಿದ್ದಿತು.

ಈ ಪದ್ಧತಿಯ ಉದ್ದೇಶ:— ಈ ತರವೆ ಕನ್ಯಾ ಮಾರಾಟವು ಪುರಾತನ ಕಾಲದಲ್ಲಿ ಬಹಳವಾಗಿ ಪ್ರಚಾರದಲ್ಲಿ ಇದ್ದಿತು. ಇದಲ್ಲದೆ, ಈ ತರದ ವಿವಾಹವೇ ಮರ್ಯಾದೆಯುಳ್ಳ ಪದ್ಧತಿಯೆಂದು ಗಣಿಸಲ್ಪಡುತ್ತಿದ್ದಿತು. ಕನ್ಯಾವಕ್ಷಿಣೆ ತೆಗೆದುಕೊಳ್ಳದೆ ಮದುವೆ ಯಾಗುವುದೆಂದರೆ ಕನ್ಯೆಗೆ ಕಲಂಕವೆಂದು ಭಾವನೆ ಇದ್ದಿತು ಹಿಂದು ಗಳಲ್ಲಿ ಕೂಡ ಈ ಪದ್ಧತಿಯು ಇದ್ದುದು ಕಂಡು ಬರುವುದು.

ಮನು ಹೇಳಿದ ೮ ವಿವಾಹ ಪದ್ಧತಿಗಳಲ್ಲಿ ಒಂದಾದ "ಆಸುರ" ಪದ್ಧತಿಯಲ್ಲಿ, ಕನ್ನೆಯನ್ನು ಕ್ರಯಕೊಟ್ಟು ಪಡೆದುಕೊಳ್ಳಬೇಕಾಗುವುದು. ಅದರಂತೆ "ಆರ್ಷ" ಎಂಬ ಪದ್ಧತಿಯಲ್ಲಿ ವರನು ಕನ್ಯಾ ಪಿತೃವಿಗೆ ಒಂದು ಆಕಳ ಜೋಡಿಯನ್ನು ಕೊಡಬೇಕಾಗುವುದು.

ಮದುವೆಯಾಗತಕ್ಕವನಿಗೆ ಹೆಂಡತಿಯನ್ನು ಸುಖವಾಗಿ ಇಡುವ ಯೋಗ್ಯತೆ ಇದೆಯೋ ? ಇಲ್ಲವೋ ?—ಎಂಬುದನ್ನು ಪರೀಕ್ಷಿಸಲು ಕನ್ಯಾದಕ್ಷಿಣೆಯು ರೂಢಿಯಲ್ಲಿದ್ದಿತು. ಅದರೆ ಕಾಲ ಬದಲಾದಂತೆ ಉಪಜೀವನದ ರೀತಿಯು ಸುಲಭವಾಗುತ್ತ ನಡೆಯಿತು. ಆ ಸಮಯ ದಲ್ಲಿ ಹಣ ತೆಗೆದುಕೊಂಡು ಮಗಳನ್ನು ಮಾರಿಕೊಳ್ಳುವುದು ತಪ್ಪು ಎಂದು ತಿಳಿಯಲಾರಂಭಿಸಿತು. ಅದುದರಿಂದ ಕನ್ಯಾದಕ್ಷಿಣೆಯ ಪದ್ಧ ತಿಯು ನಿಂತಿತು. ಅದರ ಬದಲು ವರನಿಗೆ ಕಾಣಿಕೆಯ ರೂಪದಲ್ಲಿ ಹಣ–ವಸ್ತುಗಳನ್ನು ಕೊಡುವುದು ಪ್ರಾರಂಭವಾಯಿತು.

ಅನೇಕ ಜನರಲ್ಲಿ, ಮನೆತನದಲ್ಲಿ ಹೆಣ್ಣು ಹುಟ್ಟಿದೊಡನೆ ಒಂದು ಗಿಡ ನೆಡುವುದು ಮತ್ತು ಆ ಗಿಡವನ್ನು ಅನಂತರ ವಿವಾಹದಲ್ಲಿ ವರನಿಗೆ ಕಾಣಿಕೆ ಕೊಡುವುದು ರೂಢಿಯಲ್ಲಿದ್ದಿತು. ಇನ್ನೊಂದು ಪಂಗಡದಲ್ಲಿ ಒಂದು ಹೊಸ ಪದ್ಧತಿಯು ಕಂಡು ಬರುವುದು. ಹೆಂಡತಿಯೊಡನೆ ವರದಕ್ಷಿಣೆ ಎಂದು ಬಂದೆ ಹಣದಸ್ಟೇ ರಕಮನ್ನು, ಪತಿಯು ತನ್ನ ಆಸ್ತಿಯೆಂದು ಕೊಡುವನು. ಹೀಗೆ ಇಬ್ಬರಿಂದಲೂ ಸಮವಾಗಿ ಬಂದ ಹಣವನ್ನು ಉಪಯೋಗಿಸದೆ ಇಡುವರು. ಈ ಹಣವು ಇವರಿಬ್ಬರಲ್ಲಿ ಯಾರಾದರೂ ಒಬ್ಬರು ಮೊದಲು ನಿಧನ ಹೊಂದಿದರೆ, ಬದುಕಿದ್ದವರಿಗೆ ದೊರೆಯುವುದು.

ವರದಕ್ಷಿಣೆ ಎಂದು ಕೊಡಬೇಕಾದ ಈ ಹಣವನ್ನು ಗಳಿಸುವು ದಕ್ಕಾಗಿ ಕನ್ನೆಯು ವೇಶ್ಯಾಜೀವನವನ್ನು ನಡಿಸಬೇಕಾಗುತ್ತಿದ್ದಿತು ಕೆಲವು ದೇಶದಲ್ಲಿ. ಅವರೆ ವಿವಾಹವಿಚ್ಛೇದನವಾದರೆ ಈ ಹಣ ವನ್ನು ಮದುವಯಾದವನು ತಿರುಗಿ ಕೊಡಬೇಕಾಗುವುದು. ವರದಕ್ಷಿಣೆ ಎಂದು ಕೊಟ್ಟ ಹಣವಾಗಲಿ, ವಸ್ತುಗಳಾಗಲಿ, ಹೆಂಡತಿಯ ಆಸ್ತಿ ಎಂದು ಗಣಿಸಲ್ಪಡುತ್ತಿದ್ದಿತು. ಈಗಲೂ ಕೂಡ ಈ ಪದ್ಧತಿಯು ಹಿಂದುಗಳಲ್ಲಿ "ಸ್ತ್ರೀ ಧನ" ಎಂಬ ಹೆಸರಿನಲ್ಲಿ ರೂಢಿಯಲ್ಲಿರುವುದು ಕಂಡು ಬರುವುದು.

ವರದಕ್ಷಿಣೆ ಮತ್ತು ಕನ್ಯಾದಕ್ಷಿಣೆಗಳ ಸಂಬಂಧ:— ಇವೆರಡು ಮದುವೆಯಲ್ಲಿ ಬರುವ ಹಣದ ವಿಚಾರಗಳ ಎರಡು ಅಂಗಗಳು. ಒಂದ ರಲ್ಲಿ ಕನ್ಯಾಮಾರಾಟವಾದರೆ ಮತ್ತೊಂದರಲ್ಲಿ ವರನ ಮಾರಾಟ ವಾಗುವುದು. ಮದುವೆಯನ್ನು ಈ ರೀತಿ ವಿವರಿಸಲಾಗಿದೆ: Marriage has meant in all ages an association of Man and Woman for the struggle of livelihood and for the procreation of children within the limits and conditions and in the mode set by the morels of the gruop at a time. ಮದುವೆಯ ಮುಖ್ಯ ಉದ್ದೇಶವಾದ ಜನಾಂಗದ ಬೆಳೆ ವಣಿಗೆ ನೆರನೇರಬೇಕಾದರೆ, ಅದರಲ್ಲಿ ಒರುವ ವ್ಯಕ್ತಿಗಳ ಸಂಬಂಧ ಹೆಚ್ಚು ದೃಢವಿರಬೇಕಾಗುವುದು. ಅವರ ಈ ಸಂಬಂಧವು ಹೆಚ್ಚು ದೃಢವಾಗಲು ಪ್ರೀತಿ ಒಂದೇ ಸಾಲದು. ಇದಲ್ಲದೇ ಪ್ರೀತಿಯು ಕ್ಷಣಿಕವಾದದ್ದು. ಅದುದರಿಂದ ಮದುವೆಯಲ್ಲಿ ಹಣಕ್ಕೆ ಹೆಚ್ಚು ಪ್ರಾಮುಖ್ಯತೆ ಮೊದಲಿಂದಲೂ ಇದ್ದುದು ಕಂಡು ಬರುವುದು, ಮೊದಲು ಈ ಹಣದ ವಿಚಾರವು ಕನ್ಯಾದಕ್ಷಿಣೆಗೆ ಅಥವಾ ಕನ್ಯಾ ಮಾರಾಟದ ರೂಪದಲ್ಲಿದ್ದರೆ, ಇಂದು ವರದಕ್ಷಿಣೆಯ ರೂಪದಲ್ಲಿ ರೂಢಿ ಯಲ್ಲಿ ಇದೆ. ಅದುದಂದ ಇವೆರಡೂ ಬೇರೆ ಬೇರೆ ತರದ ಎರಡು ಪದ್ಧತಿಗಳಾಗದೆ, ಒಂದೇ ಪದ್ಧತಿ–ಒಂದೇ ಉದ್ದೇಶದ ಎರಡು ಮುಖಗಳೆಂದು ಹೇಳಬಹುದು.

ಇತ್ತೀಚ್ಚಲಾಗಿ ಶಿಕ್ಷಣದ ಅರ್ಹತೆಯೊಂದಿಗೆ ವರದಕ್ಷಿಣೆಯ ಹಣವು ಏರುತ್ತಲಿದೆ. ಬಂಗಾಲದ ಒಬ್ಬ ಕಾಯಸ್ಥ ಪದವೀಧರನ ವರದಕ್ಷಿಣೆಯ ಬೇಡಿಕೆಯು ಒಂದು ಸಾವಿರದಿಂದ ಹತ್ತು ಸಾವಿರದ ವರೆಗೆ ಇರುವುದು ಕಂಡುಬರುವುದು. ಇನ್ನು ಕೆಲವು ಸುಧಾರಕರು ವರದಕ್ಷಿಣೆ ತೆಗೆದುಕೊಳ್ಳುವುದು ತಪ್ಪು ಎಂದು ಹೇಳುವರು; ಆದರೂ ಸಾಲಂಕೃತ ಕನ್ಯಾದಾನ, ಅಥವಾ ನವಕರಿಯ ಅಭಾವದ ಈ ಕಾಲ ದಲ್ಲಿ ನವಕರಿಗಾಗಿ ಇಲ್ಲನೇ ವಿದೇಶಕ್ಕೆ ಹೋಗುವುದಕ್ಕಾಗಿ ಮದುವೆ ಮಾಡಿಕೊಳ್ಳುವ ಅನೇಕ ಘಟನೆಗಳು ಕಂಡು ಬರುವುವು. ಹೀಗಾಗಿ ಕನ್ಯೆಯ ಮಾರಾಟದಿಂದ ನೊದಲುಗೊಂಡು ಇಂದು ವರದಕ್ಷಿಣೆ ಎಂಬ ಹೆಸರಿನಲ್ಲಿ ಅನೇಕ ರೂಪದಲ್ಲಿದ್ದ ಈ ತೆರವಿನ ಪದ್ಧತಿಯು, ಮುಂದೆ ಯಾವ ರೂಪ ತಾಳುವುದೋ ಎಂಬುದನ್ನು ಹೇಳುವುದು ಅಸಾಧ್ಯವಾದ ಮಾತೇ ಸರಿ.

(೨೩ನೆ ನಯ ಪುಟದಿಂದ ಬಂದುದು)

ಹಾಡಿ ತೋರಿಸಲಿಕ್ಕೂ ಬರುವುದು. ನಮ್ಮ ಕನ್ನಡ ಜಾನಪದ ಛಂದಸ್ಸಿನ ವೈಶಿಷ್ಟ್ಯವಾದ ಅಂಶಗಣಪದ್ಧತಿಯು ಮಹಾರಾಷ್ಟ್ರದ ಜನತೆಯಿಂದಲೂ ಪುರಸ್ಕೃತವಾಗಿದೆಯೆಂಬುದಕ್ಕೆ, ಅಲ್ಲಿಯ ಜನ–ಸಾಮಾನ್ಯರಲ್ಲಿ ಹೆಚ್ಚಾಗಿ ರೂಢಿಯಲ್ಲಿರುವ ಓವಿ, ಅಭಂಗ, ಸವಾಯಿ, ಸಾಕೀ ವೃತ್ತಗಳು ಪ್ರತ್ಯಕ್ಷ ಸಾಕ್ಷಿಗಳಾಗಿವೆ. ಕನ್ನಡದ ಅಂಶಗಣದ ಕಲ್ಪನೆಯಿಲ್ಲದೆ ಆ ವೃತ್ತಗಳಿಗೆ ಲಕ್ಷಣವನ್ನು ಸೂಕ್ತವಾಗಿ ಹೇಳಲು ಬರುವಂತೆಯೆ ಇಲ್ಲ. ಕನ್ನಡ ಜನಪದ ಛಂದಸ್ಸಿನ ಜೀವಾಳವನ್ನು ಒಂದೇ ಮಾತಿನಲ್ಲಿ ಹೇಳುವುದೆಂದರೆ, ಆ ಗೀತಗಳ ವಿವಿಧಲಯ ಬದ್ಧತೆ; ಆ ಲಯಬದ್ಧತೆಗೆ ಪ್ರಮುಖ ಸಹಕಾರಿಯಾಗಿ ನಿಂತಿರುವ ಅಂಶಗಣ ಪದ್ಧತಿಯ ಛಂದಸ್ಸು.

ಸಾಹಿತ್ಯ ವಿಹಾರ

ಅಡಿಯಲ್ಲಿ ಕೊಟ್ಟಿರುವ ಬರಹವು ಕನ್ನಡ ನುಡಿಯ ವ್ಯಾಕರಣ ನಿಚಾರಕ್ಕೆ ಸಂಬಂಧಿಸಿದುದು. ಇಂದು ವ್ಯಾಕರಣದ ನಿಯಮಗಳನ್ನು ಕಟ್ಟು-ನಿಟ್ಟಾಗಿ ಇರಿಸಿಕೊಂಡು ಬರೆವವರ ಸಂಖ್ಯೆಯೇ ಕಡಿಮೆಯಾಗಿದೆ. ಭಾಷೆಯು ಸರ್ವಜನವೇದ್ಯವಾಗಬೇಕಾದರೆ, ಅದು ಒಂದು ಸರ್ವಸಾಮಾನ್ಯವಾದ ಕಟ್ಟನ್ನು ಇರಿಸಿಕೊಂಡು ನಡೆಯುವುದೇ ಚಿನ್ನು. ಇದರಿಂದ ಭಾಷೆಯು ಒಂದು ಬಗೆಯ ಸೌಂದರ್ಯ-ಗಾಂಭೀರ್ಯಗಳನ್ನು ಹೊಂದುವುದಲ್ಲದೆ, ಎಲ್ಲ ಜನರಿಗೂ ಸಮಾನವಾದ ಅರ್ಥವನ್ನು ಬೋಧಿಸುವಂತಹದಾಗುವುದು. ನಾಗರಿಕ ಭಾಷೆಯೇ ಹೀಗೆ ವ್ಯಾಕರಣದ ಕಟ್ಟಿನಿಂದ ಕೂಡಿರುವುದೆಂದಲ್ಲ. ಜಾನಪದ ಭಾಷೆಯನ್ನು ಸೂಕ್ಷ್ಮದೃಷ್ಟಿಯಿಂದ ಅಭ್ಯಾಸಿಸುತ್ತ ಹೋದರೆ, ಅದೂ ಕೆಲವೊಂದು ಕಟ್ಟು-ಕಟ್ಟಳೆಗಳನ್ನು ಹಾಕಿಕೊಂಡೇ ಇರುವುದೆಂಬುದು ಮನವರಿಕೆಯಾಗುವುದು. ಕಾಲಾನುಸಾರಿಗಳಾದ ಭಾಷೆಯ ಬದಲಾವಣೆಗಳೂ ಮೂಲ ಭಾಷಾಶಾಸ್ತ್ರದ ನಿಯಮಗಳಿಗೆ ಅನುಸರಿಸಿಯೇ ಆಗುತ್ತಿರುತ್ತವೆ. ಎಲ್ಲ ಕಾಲದಲ್ಲಿಯೂ ಎಲ್ಲ ದೇಶದಲ್ಲಿಯೂ ನಿಸ್ಸಂದಿಗ್ಧವಾಗಿ ಅರ್ಥಮಾಡಲು ಬರುವಂತಹ ಶಬ್ದ, ಪದ, ವಾಕ್ಯಗಳಿಂದ ಕೂಡಿದ ಭಾಷೆಯೇ ಸುಸಂಸ್ಕೃತ ಭಾಷೆಯೆನಿಸಿಕೊಳ್ಳುವುದು. ಕನ್ನಡಿಗರ ಸಾವಿರಾರು ವರ್ಷಗಳ ನಾಗರಿಕ ಜೀವನದೊಂದಿಗೆ ಕನ್ನಡ ಭಾಷೆಯು ವಿಕಾಸಹೊಂದುತ್ತ ಬಂದಿದೆ; ಅದರೂ ಸಂಧಿಗ್ಧವೆನಿಸುವಂತಹ ಮಾತುಗಳೇನಾದರೂ ಇದ್ದರೆ, ಅದರ ಬಗ್ಗೆ ಭಾಷಾಭ್ಯಾಸಿಗಳು ವಿಚಾರ ಚರ್ಚೆ ನಡೆಯಿಸಿ ಒಂದು ನಿರ್ಣಯಕ್ಕೆ ಬರಬೇಕಾದುದು ಅತ್ಯಗತ್ಯದ ಸಂಗತಿ. ಕೆಳಗಿನ ಬರಹದಲ್ಲಿ ಶ್ರೀಮಾನ್ ಎಂ. ಕೇಶವಭಟ್ಟ 'ವಿದ್ವಾನ್' ಅವರು, ತಮ್ಮನ್ನೆದುರಿಸಿದ ಕೆಲವು ಭಾಷಾಸಮಸ್ಯೆಗಳನ್ನು ವಿವರಿಸಿದ್ದಾರೆ. ನಮ್ಮಲ್ಲಿಯ ಬೇರೆ ಭಾಷಾಭ್ಯಾಸಿಗಳೂ ಇವರ ಸಮಸ್ಯೆಗಳನ್ನು ಕುರಿತು ವಿಚಾರಮಾಡಬೇಕೆಂದು ನಮ್ಮ ಬಯಕೆ. ಅಂತಹ ವಿಚಾರದ ಲೇಖನಗಳಿಗೆ ಜಯಂತಿಯಲ್ಲಿ ಖಂಡಿತವಾಗಿ ಎಡೆ ಕೊಡಲಾಗುವುದು. —ಸಂಪಾದಕರು

ಬಗೆಹರಿಯದ-ಕೆಲ ಸಮಸ್ಯೆಗಳು

(ವ್ಯಾಕರಣ ಜಿಜ್ಞಾಸೆ)

ಕೇ. ಎಂ. ಕೇಶವಭಟ್ಟ, 'ವಿದ್ವಾನ್'-ಕಾಸರಗೋಡು

ನಾಗವರ್ಮ, ಕೇಶಿರಾಜ, ಭಟ್ಟಾಕಲಂಕದೇವ ಇವರು ಕನ್ನಡಕ್ಕೆ ವ್ಯಾಕರಣವನ್ನು ಬರೆದು ಅಜರಾಮರರಾದರು. ಅನಂತರ ಬೆಳೆಯುತ್ತಿರುವ ಕನ್ನಡ ಭಾಷೆಗನುಗುಣವಾಗಿ ವ್ಯಾಕರಣರಚನೆ ಪ್ರಾಯಿಕವಾಗಿ ಆಗಿಲ್ಲವೆನ್ನಬಹುದು. ದೇಶಭಾಷೆಗಳಿಗೆ ವಿದ್ಯಾವ್ಯವಸಾಯದಲ್ಲಿ 'ಅಗ್ರಸ್ಥಾನ' ದೊರಕಿದುದು ಕನ್ನಡಮ್ಮನ ಅಣುಗರ ಅದೃಷ್ಟವೆನ್ನಬೇಕು.

ಬೆಳೆಯುತ್ತಿರುವ ಸಾಹಿತ್ಯ, ಭಾಷೆಗಳು: ಅದನ್ನು ಅಭ್ಯಾಸಿಸುವ ಏನೂ ಅರಿಯದ ಎಳಹರೆಯದ ಬಾಲಕರು; ಬೋಧಿಸುವ ಬೋಧಕರು; ಎಲ್ಲದರಲ್ಲೂ ವಿವಿಧಮುಖಗಳು. ಉತ್ತಮ ಪ್ರಾಸಾದದ ಅಡಿಗಲ್ಲೇ ಸೆರೆಬಿಟ್ಟಿದ್ದರೆ-ಭದ್ರವಿರದಿದ್ದರೆವ್ಯಾಸಾದೆವ ಸ್ಥಿರತೆಯಾದರೂ ಎಂತು? ಸಂದೇಹಗಳು ಮಾನವನ ರಕ್ತಗತವಾದುವುಗಳು. ತಿಳಿಯುವ ಕುತೂಹಲ ಪ್ರಶ್ನೆ ಬಾಲಕರ ಸೊತ್ತು. ಹೀಗಿರುವಾಗ ವ್ಯಾಕರಣವಿಭಾಗದ ಸಂದೇಹಗಳನ್ನು ಯಾರು ಬಗೆ ಹರಿಸಬೇಕು? ಹೇಗೆ ಬಗೆಹರಿಸಬೇಕು? ತಾನು ನಡೆದುದೇ ಪಂಥವೆಂದರೆ ಅಂತಹ ಪಂಥಗಳು ಹಲವಾಗಿ ಸಂದೇಹಗಳು ನೂರ್ಮಡಿಸಬಹುದು. ಆಧಾರ-ಗ್ರಂಥಗಳಾದ ವ್ಯಾಕರಣ ಪುಸ್ತಕಗಳನ್ನು ಉದಾಹರಿಸೋಣವೆಂದರೆ ಕೆಲವರಿಗೆ ಕಿರಿತನ; ಹಲವರಿಗೆ ಅಲಸ್ಯ; ಬೇರೆಯವರಿಗೆ ಹಳತೆಂದರೆ ತಾತ್ಸಾರ. ಬರುಬರುತ್ತ ಅದೆ ದುಸ್ಪರಿಣಾಮವೆಂದರೆ ಅಪಕ್ವಜ್ಞಾನದ ಪರಮಾವಧಿಯ ಬರಿಯ ತಿಕ್ಕಾಟ ವಾದಾಟಗಳು. ಆದುದರಿಂದ ಸಂಧಿ-ಸಮಾಸ ವಿಷಯಗಳಲ್ಲಿ ಬಂದೆ ಕೆಲವು ಸಂದೇಹಗಳನ್ನು ವಾಚಕರ ನಿಮರ್ಶಕರ ಮುಂದಿಡುವುದು ಈ ಲೇಖನದ ಉದ್ದೇಶ. ಹಿರಿಯ ಸಾಹಿತ್ಯಿಕರು ಅನೇಕರು ಉತ್ತರಿಸುವುದರ ಮೂಲಕ ಓದುಗರಿಗೆ (ವಿದ್ಯಾರ್ಥಿಗಳಿಗೆ) ತೃಪ್ತಿಯಾಗಬೇಕು-ಎಂಬ ಆಸೆ.

ಸಂಧಿ ಎಂದರೇನೆಂಬುದಕ್ಕೆ— "ಎರಡುಂ ಪಲವುಂ ವರ್ಣಂ ಪರಸ್ಪರಂ ಕೂಡುವುದು ಸಂಧಿ" ಎಂದಿರುವನು ಕೇಶಿರಾಜನು. "ಸ್ವರ ರಹಿತ ವ್ಯಂಜನಗಳು ಪರವರ್ಣಾಸನ್ನು ಹೊಂದುತ್ತಿವೆ" ಎಂದುದರಿಂದ "ವ್ಯಂಜನ ಸಂಧಿ" ಯನ್ನು ನಿರೂಪಿಸಿದಂತಾಯಿತು. ಅಕ್ಷರಗಳಾಗಲೀ ವರ್ಣಗಳಾಗಲೀ ಪರಸ್ಪರ ಕೂಡುವುದು "ಸಂಧಿ" ಎಂಬುದನ್ನು ಒಪ್ಪಿಕೊಂಡಾಗ ಆಗುವ ವ್ಯತ್ಯಾಸಗಳನ್ನು 'ಸಂಧಿಕಾರ್ಯ'ಗಳೆನ್ನುವುದು ವಿಹಿತವೇ ಅಥವಾ ವ್ಯತ್ಯಾಸಗಳನ್ನೇ ಸಂಧಿಗಳೆನ್ನುವುದು ಸರಿಯೇ?

ಎನ್ನ+ಅರಸಂ—ನಕಾರೋತ್ತರ ಅಕಾರ ಲೋಪವಾಗಿದೆಯಲ್ಲಿ ಇದನ್ನು 'ಲೋಪಸಂಧಿ' ಎಂದು ಹೆಸರಿಸಿದರೆ 'ಪದಮಧ್ಯ' 'ಪದಾಂತ್ಯ' ಎಂದು ಹೇಳಿದ ಪದಮಧ್ಯ-ಪದಾಂತ್ಯ ಸಂಧಿಗಳಿಗೆ ಉದಾಹರಣೆಯಿಲ್ಲ ಎನ್ನಬೇಕಾಗುವುದು. ಈ ಪರಿಸ್ಥಿತಿಯಲ್ಲಿ ಲೋಪಾಗಮ, ಆದೇಶಗಳನ್ನು 'ಸಂಧಿಕಾರ್ಯ'ಗಳೆಂದೂ ಊರಿನಲ್ಲಿ ಅಸನು ಸಂಧಿಯೇನೆಂದರೆ ಪದಾಂತ್ಯ ಸಂಧಿ (ಲೋಪ) ಎಂದು ಹೇಳವುದು ಸಮುಂಜಸವೆಂದು ಬರೆಹಗಾರನ ಮತ.

"ಸ್ವರಮಿದಿರೊಳರೆ ವಿಭಕ್ತಿಸ್ವರಕಂ ಪ್ರಕೃತಿಸ್ವರಕ್ಕಮಕ್ಕುಂ-ಲೋಪಂ" ಎಂದು ಕೇಶಿರಾಜನೂ "ಸ್ವರೇ ಸ್ವರಸ್ಯ ಲೋಪಃ" ಎಂದು ನಾಗವರ್ಮನೂ ಸಾರಿರುವರು. ಇಬ್ಬರ ಆಶಯದಲ್ಲೂ ಲೋಪವಾಗುವ ಅಕ್ಷರವು ಪೂರ್ವಪದದ ಕಡೆಯದು. ಆಗಮದಲ್ಲೂ ಪೂರ್ವಪದದ ಕೊನೆಯಕ್ಷರಗಳನ್ನೆ ವಿಷಯವಾಗಿ ನಿರೂಪಿಸಲಾಗಿದೆ. ಆದರೆ ಆದೇಶವು ಮಾತ್ರ ಉತ್ತರಪದದ ಆದಿಯ ವಿಚಾರವಾಗಿ ಹಲವರಿಂದ ನಿರೂಪಿಸಲ್ಪಡುತ್ತದೆ. ಇದು ಹೀಗೇಕೆ ?—ಎಂಬ ವಿಚಾರ ಸುಳಿದಾಗ, "ಇರ್ದುದನಮಿದಿರ್ಪುದರಿಯವೊಲಾದೇಶಂ" ಎಂದು ಕೇಶಿರಾಜನು ನುಡಿದು ಉದಾಹರಿಸಿದಾಗ 'ಒರ್ವೊದಲ್' ಎಂದಿರುವನು. ಒಂದು ಎಂಬುದಕ್ಕೆ ಬಂದ-'ಒರ್' ಎಂಬುದನ್ನೇ- ಪೂರ್ವಪದವನ್ನೇ ಆದೇಶವಾಗಿ ಹೇಳಿರುವನು. "ಸಮಾಸ ವಿಧಿಯಲ್ಲಿ" ಚ, ಟ, ವರ್ಗಗಳನ್ನು ಬಿಟ್ಟು ಉಳಿದ ವರ್ಗಪ್ರಥಮಾಕ್ಷರಗಳಿಗೆ ತೃತೀಯತ್ವವಿದೆ ಎಂದು ಕೇಶಿರಾಜನೂ "ವರ್ಗಪ್ರಥಮಾನಾಂ ತೃತಿಯಾ ಸಮಾಸೋತ್ತರ ಪದೌ" ಎಂದು ನಾಗವರ್ಮನೂ ಹೇಳಿರುವುದರಿಂದ, ಇಂದಿನ 'ಹಲವರು' ಅನ್ನುವ' ಗದಬಾದೇಶ'(ಸಂಧಿ) ಸಮಾಸ ವಿಷಯಗಳಾದುವೇ ಹೊರತು ಸಂಧಿ ವಿಷಯಗಳಾಗಲಿಲ್ಲ. ಅದುದರಿಂದ ಉತ್ತರಪದದ ಆದಿಯಲ್ಲಾಗುವ ವ್ಯತ್ಯಾಸವಾದ ಆದೇಶವನ್ನು ಸಂಧಿಕಾರ್ಯದಲ್ಲಿ ಸೇರಿಸುವುದು ಸರಿಯಲ್ಲ(ಹಿರಿದು+ಆಡವಿ) ಹೇರಡವಿ-ಕನ್ನಡ ಆದೇಶ. ಕಣ್ಗೊಂಬೆ, ಜೇನ್ ಪನಿ ಇತ್ಯಾದಿಗಳನ್ನು ಕನ್ನಡ ವ್ಯಂಜನ ಸಂಧಿ ಎಂದು ನಿರೂಪಿಸುವುದು ಯುಕ್ತನೆಂದು ಲೇಖಕನ ಮತ.

ಇನ್ನೊಂದು ಸಂದೇಹಕ್ಕೆ ಎಡೆಯಿರಬಹುದು. ಕಣ್ಗೊಂಬೆ ನೀರ್‌ನೆಲ ಇತ್ಯಾದಿ ಎಡೆಗಳಲ್ಲಿ ಸಂಧಿವಿವಕ್ಷೆ ಬೇಕೇ ಎಂದು. ಬರೆಹದಲ್ಲಿ ಕಣ್ಗೊಂಬೆ, ನೀರ್ನೆಲ ಎಂದು ಬರೆವುದರಿಂದ ಸಂಧಿವಿವಕ್ಷೆಯಿಂದ ತೊಂದರೆಯಾಗಲಾರದು. ಆಂತೆಯೇ ಜೇನ್ ಪನಿ, ಪಡಲ್ ಪಡಿಸಿದ (ಜೇಂಬನಿ, ಪಡಲ್ವಡಿಸಿದ) ಈ ಎಡೆಗಳಲ್ಲಿ ಸ್ಪಷ್ಟವಾಗಿ ಕನ್ನಡ ವ್ಯಂಜನ ಸಂಧಿ ಎಂದೇ ಸೂಚಿಸದೆ. ಪಕಾರಕ್ಕಾದೇಶವಾದ ಬ, ಪ, ಕಾರಗಳನ್ನು ಆದೇಶವೆಂದರೆ ಸಾಲದೇ? ಅಥವಾ ಕನ್ನಡ ವ್ಯಂಜನ ಸಂಧಿ (ಆದೇಶ) ಎಂದು ಹೇಳುವುದು ಹಿತವಲ್ಲವೇ ಎಂದು ಹಲವಾರು ಮಂದಿ ವಾದಿಸಿದರೆ ಹಿಂದಿನ ವೈಯ್ಯಾಕರಣಿಗಳ ಮತದಂತೆ ಈ ಗೊಂದಲಕ್ಕೆಡೆಗೊಡದೆ ಪೂರ್ವಪದದ ಸಂಧಿ ವಿಷಯವನ್ನೇ ಮುಂದಿಟ್ಟು ಮಾತನಾಡುವುದು ಹಿತವೆಂದು ಉಲ್ಲೇಖಕನ ಆಶಯವಾಗಿದೆ.

ಹಿಂದಿನ ವೈಯಾಕರಣಿಗಳು ಲೋಪದ ನಿಯಮವನ್ನು ಸಾಮಾನ್ಯ ನಿಯಮವನ್ನಾಗಿಸಿ ನಿರೂಪಿಸಿ "ನಾಮರೂಢಿಯಳಿಯದ ಪಕ್ಷಂ" ಎಂಬುದನ್ನು ಲೋಪ ಆಗಮಗಳೆರಡಕ್ಕೂ ಅಪವಾದ ಸೂತ್ರವಾಗಿ ಹೇಳಿರುವರು. ಲೋಪಕ್ಕೆ ಆಗಮಸೂತ್ರವು ಅಪವಾದ ಸೂತ್ರ. ಲೋಪ ಆಗಮಗಳೆರಡಕ್ಕೂ "ನಾಮರೂಢಿಯಳಿಯದ ಪಕ್ಷಂ" ಎಂಬುದು ಅಪವಾದ ಸೂತ್ರ. "ಸ್ವರಮಿದಿರೊಳರೆ ವಿಭಕ್ತಿ ಸ್ವರಕಂ ಪ್ರಕೃತಿಸ್ವರಕ್ಕಮಕ್ಕುಂ—ಲೋಪ. "ಆತ್ವದಿನಿವರ್ಣದಿಂ ಮತ್ತೋತ್ವದಿನ್ಯೆತ್ವದಿನೆವರ್ಣದಿಂ ಮುಂದಕ್ಕುಂ." ಯ್. ಆಗಮ.

"ಉವರ್ಣಮುವರ್ಣದೋತ್ವಿತ್ವದಗ್ರದೊಳ್ ಸ್ವರಮೀರೆ— ವ್ ಆಗಮಂ.

ಲೋಪ ಆಗಮಗಳಸೂತ್ರನಿಯಮವು ಹೀಗಿದೆ.

ಲೋಪವನ್ನು ಸಾಮಾನ್ಯ ಸೂತ್ರವಾಗಿ ಹೇಳಿರುವನೆಂಬುದಕ್ಕೆ "ನಾಮರೂಢಿಯಳಿಯದ ಪಕ್ಷಂ" ಎಂಬುದೇ ಉದಾಹರಣೆಯಾಗಿದೆ. ಇಲ್ಲಿ ಬಲವಾದ ಸಂದೇಹಗಳು ತಲೆದೋರುತ್ತವೆ. ಶಬ್ದಮಣಿದರ್ಪಣದಲ್ಲಿ ಕ್ರಮುದೆ+ಅಯ್ತು ಎಂಬುದನ್ನು ಈ ರೀತಿ ಬರೆಯಲಾಗಿದೆ, ಕ್ರಮುಪಾಯ್ತು ಎಂದು (ಲೋಪವಾಗಿಸಿಯದೆ) ಕೇಶಿರಾಜನೆ. ಹೇಳಿದ ಮಾತಿಗೆ ಅವನೇ ತಪ್ಪುವುದೆಂದರೆ 'ಜೇಲಿಯೇ ಹೊಲವನ್ನು ಮೇದಂತೆ' ಆಲ್ಲವೆ! ಅಥವಾ ಕ್ರಮುದೆಯಾಯ್ತು ಎಂದು ತಿದ್ದಿ ಕೊಳ್ಳಬೇಕೇ? ಇನ್ನೊಂದೆಡೆ ಸೇಸ+ಇಕ್ಕದಂ=ಸೇಸಿಕ್ಕದಂ (ಇಲ್ಲಿ ನಾಮ ಪ್ರಸಿದ್ಧಿ ಕೆಡುವುದಿಲ್ಲವೇ? ಸೇಸೆಯಿಕ್ಕಿದಂ ಎಂದಾಗಬೇಡವೇ?) ಈ ರೀತಿಯ ಜಟಿಲಸಮಸ್ಯೆಗಳನ್ನು ಬಗೆಹರಿಸಲು "ಯುತ್ವವತ್ವ" ಗಳಿಗೆ ವಿಷಯವಾದ ಸ್ವರಗಳ ವಿಷಯದಲ್ಲಿ ಲೋಪಕ್ಕೆ ಪ್ರಸಕ್ತಿಕೊಡದಿರುವುದು ಹಿತವು.

ಅ, ಇ, ಈ, ಎ. ಏ, ಐ. ಓ, ಎಂಬ ಸ್ವರಗಳ ಮುಂದೆ ಯಾವ ಸ್ವರವಿದ್ದರೂ ಯಕಾರಾಗನು ನಿಯಮ ಸಮಂಜಸ. ಇಲ್ಲಿ ಒಂದು ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸಬೇಕಾಗುವುದು. "ಬಂದನಸುರಾರಾತಿಯೋಲಗಕೆ" ಶ್ರೀ ಕೃಷ್ಣನಲ್ಲಿಗೆ ಧರ್ಮರಾಯನು ಬಂದನೆಂಬುದರ್ಥ. ಸಂಧಿ ವಿಂಗಡಿಸುವಾಗ-ಬಂದನು+ಅಸುರ+ಅರಾತಿ+ಓಲಗಕೆ ಅಥವಾ-ಬಂದನು+ಅಸುರ+ಅರಾತಿ+ಅ+ಓಲಗಕೆ ಎಂದು ವಿಂಗಡಿಸಬಹುದು ಇರ್ತೆರನಾಗಿ. ಅಸುರಾರಾತಿ+ಓಲಗಕೆ ಎಂದಿಟ್ಟೆ ಇಟ್ಟುಕೊಂಡರೂ ಆಗಮವು ಬಂದು ಅಸುರಾರಾತಿ+ಯ್+ಓಲಗಕೆ= ಅಸುರಾರಾತಿಯೋಲಗಕೆ ಎಂಬ ರೂಪವು ಸಿದ್ಧವಾಗುತ್ತಿದೆ. ಅಸುರಾರಾತಿ+ಓಲಗಕೆ ಎಂದು ಸಂಧಿನಿಯಮಕ್ಕೆ ಅನುಗುಣವಾಗಿ ಇಷ್ಟರೂಪವನ್ನು ಪಡೆಯಬಹುದಿದ್ದರೂ, ಅರ್ಥದಲ್ಲುಂಟಾಗುವ ಅನರ್ಥಕ್ಕೆ ಎಡೆಗೊಡಬೇಕು ಕೃಷ್ಣನ ಆಸ್ಥಾನಕ್ಕೆ ಧರ್ಮಜನು ಬಂದುದೇ ಹೊರತು ಧರ್ಮಜನ ಆಸ್ಥಾನಕ್ಕೆ ಕೃಷ್ಣನು ಬಂದುದಲ್ಲ. ಇನ್ನೊಂದೆಡೆ "ಆನೆಯೇರಿಬಾ"-ಆನೆ-ಏರಿಬಾ ಎಂದಿದೆ. ಇಲ್ಲಿಯೂ ಆನೆ+ಅ+ಏರಿಬಾ ಎಂದು ವಿಂಗಡಿಸದಿದ್ದರೆ, ಬರುವನನು ಆನೆಯನ್ನೇರಿ ಬರಬೇಕೆಂದರ್ಥವಾಗುವ ಬದಲು ವ್ಯಕ್ತಿಯನ್ನೇರಿ ಬರಲು ಆನೆಯನ್ನಾವ್ಹಾನಿಸಿದಂತಾಗುವುದು. ಅರ್ಥವಿಸರ್ಥವಾಗುವುದು. ಅರ್ಥವನ್ನು ದೃಷ್ಟಿಯಲ್ಲಿರಿಸಿ ಸಂಧಿ ವಿಂಗಡಿಸಬೇಕೇ? ಅಥವಾ ನಿಯಮಕ್ಕನುಸಾರವಾಗಿ ಸಂಧಿ ವಿಂಗಡಿಸಬೇಕೇ? ಈ ಸಮಸ್ಯೆ ವೃಷ್ಣಿಬೀಜನ್ಯಾಯವೇ-ಆಗುವುದು ಆದುದರಿಂದ ಓದುಗ ವಿಮರ್ಶಕರ ಅವಗಾಹನೆಗೆ ಇದನ್ನು ತರಲಾಗಿದೆ.

ಇಂತಹ ವೇಳೆಗಳಲ್ಲಿ ಸಂಬಂಧಾರ್ಥದ-"ಅ" ಕಾರವನ್ನು ಪ್ರತ್ಯೇಕವಾಗಿ ಸೂಚಿಸಿದರೆ ಈ ಒಗಟು ಬಗೆಹರಿಯುವುದು.

ಇನ್ನೊಂದು ಉದಾಹರಣೆಯನ್ನು ಆಯ್ದುಕೊಂಡರೆ ಅಭಿಪ್ರಾಯವು ಸ್ಪಷ್ಟವಾಗಿ ಅವಗತವಾಗುವುದು. "ಅವರು ಮನೆಯಲ್ಲಿಲ್ಲ

ಈ ವಾಕ್ಯದಲ್ಲಿರುವ "ಮನೆ+ಅಲ್ಲಿ+ಇಲ್ಲ" ಎಂಬಲ್ಲಿ 'ಮನೆ' ಎಂಬ ನಾಮಪದದ ಮೇಲೆ 'ಅಲ್ಲಿ' ಎಂಬ ಅಧಿಕರಣ ವಿಭಕ್ತಿಯಿದೆ. ಇವೆರಡೂ ಸೇರಿ "ಮನೆಯಲ್ಲಿ" ಎಂಬ ರೂಪ ಸಿದ್ಧವಾಯಿತು.

"ಪದೇತು ಸಂಹಿತಾ ನಿತ್ಯಾ" ಎಂದಿರುವಾಗ, ಮನೆ+ಅಲ್ಲಿ ಅಸುರಾಂತಿ+ಅ+ಓಲಗಕೆ ಎಂದೇ ವಿಂಗಡಿಸಿ ತಿಳಿಸಿ ಸ್ಪಷ್ಟವಾಗಿ ಸುವುದು ಹಿತವೂ ಸುಖಕರವೂ ಆಹುದು. ಮನೆ+ಅಲ್ಲಿ+ಇಲ್ಲ. ಇಲ್ಲಿ ಅರ್ಥವಿಚಾರ ಬೇಡವೇ ಬೇಡ; ಸಂಧಿನಿಯಮದ ಪ್ರಸಕ್ತಿ ಮಾತ್ರ ಸಾಕು-ಇತ್ಯಾದಿವಾದ ಅಯುಕ್ತವಲ್ಲ ಕಾರಣ ಲೋಪವೆಂಬ ಒಂದೇ ಸೂತ್ರಕ್ಕೆ ಎಡೆಗೊಡದಿರುವುದು ಆಗಿದೆ.

'ವ' ಕಾರಾಗಮದ ವಿಚಾರದಲ್ಲಿ ಇನ್ನೊಂದು ತೊಡಕಿದೆ. 'ಆಗಮವು ಲೋಪದ ಅಸವಾದಸೂತ್ರ ಎಂಬುದನ್ನು ಒಪ್ಪಿಕೊಂಡರೆ ಅದು "ಯ್" ಆಗಮಕ್ಕೆ ಮಾತ್ರವಲ್ಲ; 'ವ್' ಆಗಮಕ್ಕೂ ಬಂದೇ ಬರುವುದು. ಉ ಕಾರದ ಮುಂದೆ ಯಾವ ಸ್ವರವಿದ್ದರೂ ವ್ ಆಗಮ ಬರುವುದು. ನಿಯಮ. "ಜಗವೆಲ್ಲ" "ತರವಲ್ಲ" ಇತ್ಯಾದಿ ಶಬ್ದಗಳನ್ನು ಆಯ್ದು ಸಂಧಿ ಬಿಡಿಸಿದರೆ, ಒಂದೋ ಜಗ+ಎಲ್ಲ, ತರ+ಅಲ್ಲ ಎಂದು ವಿಂಗಡಿಸಿ "ವ್" ಆಗಮವನ್ನು ಹೇಳಬೇಕು. ಹಾಗೆ ಹೇಳಬೇಕೆಂದರೆ ಯಾವ ವ್ಯಾಕರಣಕಾರನೂ ಅಕಾರದ ಮುಂದೆ ಯಾವ ಸ್ವರವಿದ್ದರೂ "ವ್" ಆಗಮ ಬರುವುದೆಂದು ನಿರೂಪಿಸಿಲ್ಲ. ಆದುದರಿಂದ "ವ" ಕಾರಾಗಮ ಬರುವುದಿಲ್ಲವೆಂದಾಯಿತು. ಜಗವು+ಎಲ್ಲ ತರವು-ಅಲ್ಲ. ಎಂದು ವಿಂಗಡಿಸಿದರೆ ಉಕಾರದ ಮುಂದೆ ಯಾವ ಸ್ವರವಿದ್ದರೂ "ವ" ಕಾರಾಗಮವೇ ಬರುವುದು ಎಂಬ ನಿಯಮದಂತೆ ಜಗವುವೆಲ್ಲ, ತರವುವಲ್ಲ ಎಂಬ ರೂಪ ಸಿದ್ಧವಾಗುವುದು. ಆಗ ನಾಮಪ್ರಸಿದ್ಧಿಯು ಕೆಡುವುದು. ನಾಮಪ್ರಸಿದ್ಧಿ ಕೆಡಬಾರದಲ್ಲಿ ಸಂಧಿಯಾಗುವಾಗ ಲೋಪವೇ ಬರುವುದು. ಆದುದರಿಂದ ಲೋಪ, ಆಗುವ ಸೂತ್ರಗಳೆರಡಕ್ಕೂ "ನಾಮರೂಢಿಯು ಳಿಯದ ಪಕ್ಷಂ" ಎಂಬ ಸೂತ್ರವು ಅಸವಾದವಾದಂತಾಯಿತು.

ಇಲ್ಲಿಯ ಮಥಿತಾರ್ಥವೆಂದರೆ(ಲೇಖಕನ ಆಶಯದಂತೆ)ಲೋಪ ಸೂತ್ರಕ್ಕಸವಾದವಾದ ಆಗಮವು ತನಗೆಡೆಯಿರುವಲ್ಲಿ ಹೊಂದಿಕೊಳ್ಳುವುದು. ಹಾಗೆ ಹೊಂದಿಕೊಂಡಾಗ ನಾಮಪ್ರಸಿದ್ಧಿಯು ಕೆಡುವುದಿದ್ದರೆ ಆಗಮದ ಬದಲು ಲೋಪವನ್ನೇ ಹೇಳತಕ್ಕದ್ದು.

ಇನ್ನೊಂದು ಮಾತು ಸಮಾಸಗಳ ಕುರಿತು: "ನಾಮಪದನುದು ಅರ್ಥಾನುಗತಮಾಗೆ ಸಮಾಸಂ ನೆಗಳ್ದುಂ–ನೆರೆವೋಕುಂ ಮಧ್ಯಗತ ವಿಭಕ್ತಿಗಳಪರೊಳ್" ಎಂದು ಕೇಶಿರಾಜನು ನಿರೂಪಿಸಿರುವನು. ಒಂದು ಸಮಸ್ತಪದಕ್ಕೆ ವಿಗ್ರಹವಾಕ್ಯವನ್ನು ಹೇಳುವಾಗ ಅರಸನ ಮನೆ (ವಿಗ್ರಹವಾಕ್ಯ) ಅರಮನೆ (ಸಮಸ್ತಪದ) ಎನ್ನುತ್ತೇವೆ ಅಂತೆಯೆ ನುಳಿಯ ಕಾಲ ಮುಳಿಗಾಲ. ತರುಣಿಯಕುಲ ತರುಣಿಕುಲ ಇತ್ಯಾದಿಗಳು ಈ ವಿವರಣೆಯನ್ನು ಕರ್ಮಧಾರಯಕ್ಕೆ ಹೊಂದಿಸಿಕೊಂಡರೆ ಹಿರಿದಾದ ಬಾಗಿಲು=ಹೆಬ್ಬಾಗಿಲು ಕರಿದಾದ ಹಲಿಗೆ=ಕರಿಹಲಿಗೆ, ನೀಲವಾದ ಳಟ=ನೀಲಳಟ ಎಂಬ ರೂಪಗಳು ಸಿದ್ಧವಾಗುವುವು. ಕರ್ಮಧಾರಯ ಸಮಾಸದಲ್ಲಿ ಹಿರಿದು–ಬಾಗಿಲು ಕರಿದು–ಹಲಿಗೆ, ನೀಲ–ಳಟ ಇವೆಲ್ಲೇ ಹೇಳಿದರೆ ಸಾಕೆಂದು ಕೆಲವರವಾದ. ಬರಿಯ ಶಬ್ದಗಳನ್ನು ಬೇರೆ ಬೇರೆಯಾಗಿ ಬರೆದು ಒಟ್ಟಿಗೆ ಉಚ್ಚರಿಸಿದರೆ ಸಮಾಸವಾಗುವುದೆಂಬ ವಾದು ಕೇಶಿರಾಜನ "ನೆರೆವೋಕುಂ ಮಧ್ಯಗತ ವಿಭಕ್ತಿಗಳಪರೋಳ್" ಎಂಬುದಕ್ಕೆ ಎಡೆಗೊಡದು. ಆದುದರಿಂದ ಸಮಾಸದಲ್ಲಿ ವಿಗ್ರಹವಾಕ್ಯ ವಿವಕ್ಷೆಯುಂಟಾದಾಗ ಬರಿಯ ಪದಗಳನ್ನು ಮಾತ್ರ (ಬಿಳಿದು ಗೋಡೆ, ನೀಲ ಳಟ) ಇರಿಸಿದರೆ ಸಾಲದು. ಬಿಳಿದಾದ ಗೋಡೆ ನೀಲವಾದ ಳಟ ಎಂದಿರಿಸುವುದು ಚೆನ್ನ ಮಾತ್ರವಲ್ಲ; ಬಿಳಿದು ಎಂಬಲ್ಲಿ "ದು" ಎಂಬುದು ಹೊರಟು ಹೋಗಿರುತ್ತದೆ. ಆದುದರಿಂದ ಕೇಶಿರಾಜನ ಅಭಿಪ್ರಾಯದಂತೆ ತಪ್ಪಲ್ಲ ಎಂದು ಹಲವರಿನ್ನ ಬಹುದು. ಈ ವಿಚಾರದಲ್ಲಿ ಬಾಲಕರ ಅಪಕ್ವ ಬುದ್ಧಿಗೆ ಅನೇಕ ಸಂದೇಹಗಳುಂಟಾಗಲು ಎಡೆಯಿರುವುದರಿಂದ, ಕರ್ಮಧಾರಯ ಸಮಾಸದ ಗುರುತಾಗಿ "ಆದ" ಎಂದಿರಿಸಿಕೊಳ್ಳುವುದು ವಿಹಿತವಾಗಿದೆ.

ದ್ವಿಗು ಸಮಾಸದಲ್ಲಿ ಇನ್ನೊಂದು ಸಂದೇಹ ಬರುವುದಿದೆ. ಷಟ್ ಆಗಮ, ಪಂಚ+ಇಂದ್ರಿಯ ಇತ್ಯಾದಿಗಳನ್ನು ಹಾಗೆಯೇ ಇರಿಸುವುದು ಯುಕ್ತ. ಕಾರಣವೆಂದರೆ ಅಲ್ಲಿ ಇರುವ ಎರಡು ಸಮಸ್ತ ಪದಗಳೂ ಸಂಸ್ಕೃತದುವುಗಳೇ ಮಾತ್ರವಲ್ಲ ಎರಡರಲ್ಲಿರುವ ವ್ಯಸ್ತ ಪದಗಳೂ ಸಂಸ್ಕೃತದುವುಗಳೇ. ಕೇಶಿರಾಜನ ಮತಕ್ಕೆ ಅಲ್ಲ ಎಡೆಯಿಲ್ಲ. ಎರಡೂ ಸಂಸ್ಕೃತ ಪದಗಳಾದರೆ ಅವನ್ನು ಇದ್ದಂತೆಯೆ ಇರಿಸುವುದು ಹಿತವೆಂದು ನನ್ನ ಆಶಯವಾಗಿದೆ.

ಇನ್ನು ಕೆಲವು ಶಬ್ದಗಳಿಗೆ ಹೇಗೆ ವಿಗ್ರಹವಾಕ್ಯಗಳನ್ನು ಹೇಳಬೇಕೆಂದೇ ಅರ್ಥವಾಗುವುದಿಲ್ಲ. ಭೂಪ=ಭೂಮಿಯ ಪತಿ ಎಂದು ಕೆಲವರೆನ್ನುವರು. ಇದು ಸಮಂಜಸವಲ್ಲ. ಭೂಮಿಯ ಪತಿ ಭೂಪನೆ ಹೊರತು ಭೂಪ ಆಗಲಾರದು. ಭೂಪ ಎಂಬುದು ಸಮಸ್ತ ಪದ ನಿಜ. ವಿಗ್ರಹ ವಾಕ್ಯವೆಂತು? ಸಮಾಸವಾವುದು.? ಅಜ್ಞ, ತಜ್ಞ, ಕಮಲಜ ಇತ್ಯಾದಿಗಳಿಗೆ ಕನ್ನಡದಲ್ಲಿ ಹೇಗೆ ವಿಗ್ರಹವಾಕ್ಯಗಳನ್ನು ಹೇಳಬೇಕು? ಸಂದೇಹವುಂಟಾದಾಗ ಗಲಿಬಿಲಿಗೊಂಡುದರ ಪರಿಣಾಮವೆಂದರೆ ಶಾಲಾ ಬಾಲಕರ ಸಂಕಟ.

ಇನ್ನೊಂದು ನುಡಿ ಧಾತುಗಳ ಕುರಿತಾಗಿ–'ಎಂದಂ' 'ಎಂದನು' "ಎಂದು" ಈ ಕ್ರಿಯಾಪದಗಳ ಧಾತುಗಳಾವುವು ಎಂಬ ಪ್ರಶ್ನೆ. "ಎಂದಂ" ಎಂಬುದು ಹಳಗನ್ನಡ; ಆದುದರಿಂದ ಧಾತು 'ಎನ್' "ಎಂದನು" ಎಂಬುದು ಹೊಸ ಕನ್ನಡ; ಆದುದರಿಂದ ಧಾತು 'ಎನ್ನು' ಈ ರೀತಿಯ ವಿವೇಕವನ್ನಿಟ್ಟುಕೊಳ್ಳಬಹುದಾದರೂ 'ಎಂದು' ಎಂಬುದರ ಧಾತು "ಎನ್" ಆಗಬೇಕೇ? 'ಎನ್ನು" ಆಗಬೇಕೇ ಈ ಸಂದೇಹವನ್ನು ವಿಬುಧವರ್ಗವೆ ನಿರ್ಣಯಿಸತಕ್ಕದ್ದು.

ಕನ್ನಡ+ಅಭಿಮಾನಿ=ಕನ್ನಡಾಭಿಮಾನಿ(ಸವರ್ಣದೀರ್ಘ ಸಂಧಿ ಎಂತು?

(೨೪ ಪುಟ ನೋಡಿರಿ)

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ ಜಯಂತಿ ಸಂಚಿಕೆಯನ್ನು ಕುರಿತು ಆರು ಜನರಿಂದ ವಿಮರ್ಶೆಗಳು ಬಂದಂತಾಗಿವೆ ೧. ಶ್ರೀ. ಮು. ಗ. ಯಾಜಿ, ಇಡಗುಂಜಿ; ಶ್ರೀ. ಎಸ್. ಎಸ್ ಪುರುಷನ್, ಡಾವಣಗೆರೆ; ಶ್ರೀ. ವಿ. ಬಿ. ಹೊಸಮನೆ, ಉಡುಪಿ; ಶ್ರೀ. ಕೆ. ಎಸ್. ಶರ್ಮಾ 'ವಿದ್ವಾನ್' ಕಾಸರಗೋಡು—ಈ ನಾಲ್ವರು, ಜಯಂತಿಯ ಅಕ್ಟೋಬರ್ ಸಂಚಿಕೆಯನ್ನು ಇಡಿಯಾಗಿ ವಿಮರ್ಶಿಸಿ ಲೇಖನಗಳನ್ನು ಕಳುಹಿದ್ದಾರೆ. ಶ್ರೀ. ಬಡಾ ಶೇಷ ರಾಘವೇಂದ್ರ, ಸುರಪುರ ಎಂಬವರು, ಆ ಸಂಚಿಕೆಯಲ್ಲಿಯ 'ಕಡಲಕರೆ' ಕತೆಯೊಂದನ್ನೇ ವಿಮರ್ಶಿಮಾಡಿ ಬರೆದಿದ್ದಾರೆ ಶ್ರೀ ಪಾ. ಭೀ. ಜೋರಾಪುರ, ಜಬಲ್‌ಪುರ ಅವರು ಜಯಂತಿಯ ಸಾಮಾನ್ಯಸ್ವರೂಪವನ್ನು ಕುರಿತು ವಿಚಾರಮಾಡಿ, ತಮ್ಮ ಕೆಲವು ಸೂಚನೆಗಳೊಂದಿಗೆ ಪತ್ರವೊಂದನ್ನು ಬರೆದಿದ್ದಾರೆ.

ಶ್ರೀ. ಜೋರಾಪುರ ಅವರ ಪತ್ರದಲ್ಲಿಯ ಸಂಗತಿ ಹೀಗಿದೆ:

"ಮಹನೀಯರೆ! ಇಂದು (ಹೀಗೆಯೆ ಹಿಂದೆ ಎಷ್ಟೋಸಲ) ಈ ತಿಂಗಳ ಜಯಂತಿಯನ್ನು ಕೈಯಲ್ಲಿ ಹಿಡಿದಾಗ, ಅದರ ಗಾತ್ರದ ಕಡೆಗೆ ಲಕ್ಷ್ಯವು ಹೋಗಿ, ಹಿಂದೀ-ಮರಾಠೀ ಮಾಸಿಕಗಳ ನೆನಪಾಯಿತು. ಅವರ 'ವಿಶ್ವಭಾರತಿ' 'ಸ್ತ್ರೀ' 'ಕಿರ್ಲೋಸ್ಕರ' ಇಷ್ಟು ಪುಷ್ಟವಾಗಿವೆಯೇಕೆ? ನಮ್ಮ 'ಜಯಂತಿ' ಇಷ್ಟು ತೆಳ್ಳಗೆ ಏಕಿದ್ದಾಳೆ?—ಎಂದು ವ್ಯಸನವಾಯಿತು. ಕನ್ನಡ ಹುಡುಗಿ-ಎಂಬುದೇ ಕಾರಣವೆ? ಕನ್ನಡ ಸೋದರ-ಸೋದರಿಯರು ಅವಳ ಹೊಟ್ಟೆಗೆ ಹಾಕಲಾರರೆ? ಕನ್ನಡ ನಾಡು ನುರುಭೂಮಿಯೆ? 'ಜಯಂತಿ'ಯ ತಂದೆ ನೀವು ಅವಳ ಬಗ್ಗೆ ಸಾಕಷ್ಟು ಯತ್ನಿಸುವುದಿಲ್ಲವೇ?-ಎಂದು ಕೇಳುವ ದುಸ್ಸಾಹಸವನ್ನು ನಾನು ಮಾಡುವುದಿಲ್ಲ ನನಗೆ ಅಧಿಕಾರವೂ ಇಲ್ಲ. ನಾನು ಅವಳನ್ನು ಪ್ರೀತಿಸುವೆನಾದರೂ ಸೋದರಿಗೆ ಕೈಯೆತ್ತಿ ದುಡ್ಡು ಕೊಡುವ ಅಣ್ಣನಲ್ಲ. ದುಡ್ಡು ಕೊಡಪ ಜಣ್ಣನಲ್ಲ ವಿದ್ದರೆ ಏನಾಯಿತು? ಮಮತೆಯೆಂಬುದು ಸುಳ್ಳೇ? ಆದ್ದರಿಂದ ಈ ಬಗ್ಗೆ ಏನಾದರೂ ಕೇಳಿದರೆ ಕ್ಷಮಿಸುವಿರೆಂದು ಆಶಿಸುವೆ.

ಅನ್ಯಭಾಷೆಗಳ ಪತ್ರಿಕೆಗಳ ಪುಟ ತೆರೆದರೆ, ಮೇಲಿನ 'ಜುಬ್ಬರ' ತೆಗೆವುದರಲ್ಲಿಯೆ ಕೈಸೋಲುತ್ತದೆ. ಕೈಗೆ ತಿರುಳುಸಿಕ್ಕಾಗ! ಅಷ್ಟು ಜಾಹೀರಾತುಗಳು! ಜುಬ್ಬರ ನಿರುಪಯೋಗಿಯಲ್ಲವಲ್ಲ! ಒಳ್ಳೆ ಗಟ್ಟಿಯಾದ ಹಗ್ಗ ತಯಾರಿಸಬಹುದು. ನೀವೇಕೆ ಸಾಕಷ್ಟು ಜುಬ್ಬರ ಹಾಕಿಲ್ಲ-ಜಯಂತಿಯ ಆಸರಕ್ಕೆ? ನಿಮ್ಮ ವಿಚಾರ ಸರಿಯೇನೋ ಇರಬಹುದು; ಆದಕ್ಕೇ ಮೊದಲೇ ತೇಳಿದೆನಲ್ಲ—ಕ್ಷಮಿಸಬೇಕೆಂದು!

ಇನ್ನೊಂದು ವಿಷಯ: ದೀಪಾವಳಿ (ಹೊರಡಿಸುತ್ತಿದ್ದರೆ) ಸಂಚಿಕೆಯಲ್ಲಾಗಲಿ, ವರ್ಷದ ಕೊನೆಯ ಸಂಚಿಕೆಯಲ್ಲಾಗಲಿ, ಇಡಿಯ ವರ್ಷದ ಲೇಖನಗಳನ್ನು ವಿಭಜಿಸಿ, ಅನುಕ್ರಮಣಿಕೆಯನ್ನು ಅದೇ ವರ್ಷದ ಜನವರಿ ಸಂಚಿಕೆಯ ಜೊತೆಗೆ— ಇಡಿ ವರ್ಷದ ಸಂಚಿಕೆಗಳನ್ನು 'ಬೈಂಡು' ಮಾಡಲು ಬರುವಂತೆ-ಪ್ರಕಟಿಸಿದರೆ, ಲೇಖಕರಿಗೆ ಪ್ರಕಾಶಕರಿಗೆ ಸಂಶೋಧಕರಿಗೆ ಬಹಳ ಸಹಾಯವಾದೀತೆಂಬ ಕಲ್ಪನೆ, ಕೆಲದಿನಗಳ ಹಿಂದೆ ಬಹಳ ಹಳೆಯ ಸಂಪುಟಗಳನ್ನು ನೋಡುತ್ತಿದ್ದಾಗ ಬಂದಿತು. ವಿಚಾರಿಸಿರಿ—"

ಈ ಕಾಗದ ಬರೆದವರು ಜಯಂತಿಯ ಸಂಪೂರ್ಣ ಹಿತಚಿಂತಕರು. ಇವರು ಮಾಡಿದ ಸೂಚನೆಗಳೆಲ್ಲ ಗ್ರಾಹ್ಯವಾದುವುಗಳೆ. ಆದರೆ ಜಯಂತಿಯ ಚಂದಾದಾರರ ಬಳಗ ಬೆಳೆದಲ್ಲಜೆ ಜಯಂತಿ ಸುಪುಷ್ಟಳಾಗಳು; ಲಾವಣ್ಯವತಿಯಾಗಲಾರಳು. ಕನ್ನಡಿಗರಲ್ಲಿ ಜಯಂತಿಯನ್ನು ಪ್ರೀತಿಸುವ ಜನ ಸಾಕಷ್ಟು ಇದ್ದಾರೆ; ಪೋಷಣೆ ಕೊಡುವವರು ಮಾತ್ರ ಬೆರಳಿಣಿಕೆಯ ಜನರು. ಬರಿಯ ಪ್ರೀತಿಯಿಂದ ಹೊಟ್ಟೆ ತುಂಬಬಹುದೆ? ಹೊಟ್ಟೆ ತುಂಬದಿದ್ದರೆ ಪುಷ್ಟವಾಗುವ ಬಗೆ ಹೇಗೆ? ಇನ್ನು 'ಜುಬ್ಬರ'ದ ವಿಚಾರ. ತಾನು ಶಕ್ತನಾದರೆ ಸಂಟೆರೆಲ್ಲ ಹಿತದವರಾಗುವರು; ಅಶಕ್ತನಾದರೆ ಆಪ್ತಜನರೇ ದೂರದವರಾಗುವರು. ಜಾಹೀರಾತುಗಳು ತಾವಾಗಿ ಬಂದು ಜುಬ್ಬರದ ಪುಟಗಳನ್ನು ಹೆಚ್ಚಿಸಿಕೊಳ್ಳುವುದಕ್ಕೂ ಹಣದ ಬಲವು ಬೇಕು. ಹಣವ್ಯ ದೊರೆತರೆ,ಹೊರಗಣ್ಣಿಗೆ ಬೇಕಾಗುವ ಗುಣಗಳೆಲ್ಲ ತಾವಾಗಿ ಬೆಳೆಯುವುವೆಂಬುದನ್ನು ಬೇರೆಯಾಗಿ ಹೇಳಬೇಕಾಗಿಲ್ಲ.

ನಮ್ಮ ಅಕ್ಟೋಬರ್ ಸಂಚಿಕೆಯನ್ನು ಇಡಿಯಾಗಿ ವಿಮರ್ಶಿಸಿದವರಲ್ಲಿ ಶ್ರೀ ಕೆ. ಎಸ್. ಶರ್ಮಾ ಅವರ ವಿಮರ್ಶೆಯು ಉತ್ತಮವಾಗಿದೆ ಜಯಂತಿಯನ್ನವರು ತುಂಬ ಪ್ರೀತಿಸುವವರಾದುದರಿಂದಲೋ. ಏನೋ, ಹೆಚ್ಚಾಗಿ ಗುಣದ ಭಾಗಗಳನ್ನೇ ಎತ್ತಿತೋರಿಸಿರುತ್ತಾರೆ. ಆದುದರಿಂದ ಅವರ ಲೇಖನವನ್ನಿಲ್ಲಿ ಪ್ರಕಟಿಸದೆ, ನಮ್ಮ ಬೆನ್ನನ್ನು ನಾವೇ ಚೆಪ್ಪರಿಸಿಕೊಂಡಂತೆ ಆದೀತೆಂಬ ಭಾವನೆಯಿಂದ, ಇನ್ನೊಂದು ಬಗೆಯ ಜನರು ಜಯಂತಿಯನ್ನು ಯಾವ ದೃಷ್ಟಿಯಿಂದ ನೋಡುತ್ತಾರೆಂಬುದು ನಮ್ಮ ವಾಚಕವರ್ಗಕ್ಕೆ ತಿಳಿಯಲೆಂದು, ಶ್ರೀ ವಿ. ಬಿ. ಹೊಸಮನಿ, ಉಡುಪಿ ಅವರ ವಿಮರ್ಶೆಯನ್ನಿಲ್ಲಿ ಪ್ರಕಟಿಸಲಾಗಿದೆ. ಅವರ ವಿಮರ್ಶೆ ತಮ್ಮ ಮನಸ್ಸಿಗೆ ಒಪ್ಪಿಸಿಸುವುದೋ ತಪ್ಪಿಸಿಸುವುದೋ ಎಂಬುದನ್ನು ಜಯಂತಿಯ ವಾಚಕವರ್ಗ ನಿರೀಕ್ಷಿಸಬೇಕು.

ಮುಂದಿನ ಸಲದ ನೇಲಾಟಕ್ಕೆ ಈ ಸಂಚಿಕೆಯಲ್ಲಿ ಪ್ರಕಟವಾದ 'ತೆರೆದ ಪರದೆ' ಎಂಬ ಸಣ್ಣಕತೆಯನ್ನು ವಿಮರ್ಶಿಸಿ, ಬರೆದು ಕಳುಹಬೇಕು.

—ಸಂ.

"ಜಯಂತಿ"

(೧೯೩೩ ಅಕ್ಟೋಬರ್ ಸಂಚಿಕೆಯ ವಿಮರ್ಶೆ)

ಶ್ರೀ ವಿ. ಜಿ. ಹೊಸಮನಿ ಉಡುಪಿ

ಕರ್ನಾಟಕ ಸಾಹಿತ್ಯರಂಗದಲ್ಲೊಂದು ಜಯಭೇರಿಯನ್ನು ಬಾರಿಸಿಕೊಂಡೇ ಹೊರಟಿದೆ— ಜಯಂತಿ: ವಿವಿಧ ಬರಿಹಗಳಿಂದ ಪೋಣಿಸಲ್ಪಟ್ಟ ಸಾಹಿತ್ಯಕಂಠಹಾರದಂತಿವೆ, ಅದರೊಳಗಿನ ನಲುವತ್ತು ಪುಟಗಳು. 'ಮಧುರಚೆನ್ನ'ರಂತಹ ಜಾನಪದ ಕ್ರಾಂತಿಕಾರರಿಂದ ತುಂಬಿದ ಪುಟಗಳಲ್ಲಿ ಕನ್ನಡದ ಸಾರಸ್ವತರಿಗೆ ಅಂಜಲಿಯನ್ನಿತ್ತು ಮನಃಸಾಂತ್ವನಗೊಳಿಸಿಕೊಂಡುದು ಅದರದ ನೀತಿಪಾಠ. ಇಷ್ಟಿದ್ದರೂ ಉಕ್ಕಿ ಬರುವ ಕಾವ್ಯರಸದ ಬಂಡುಂಬ ಪುಂಡುಮರಿದುಂಬಿಗಳು ಬೇಕಲ್ಲ!— ಇದೇ ಇಂದಿನ ಪತ್ರಿಕಾರಂಗದಲ್ಲೊಂದು ದೊಡ್ಡ ಸಮಸ್ಯೆ!

ಕರ್ನಾಟಕಕ್ಕಿಬ್ಬರು ಕೃಷ್ಣಶರ್ಮರು— ಅಂತೆಯೆ 'ಜಯಂತಿ" "ಸರ್ವೋದಯ" ಪತ್ರಿಕೆಗಳೆರಡು, ಸಾಹಿತ್ಯ--ಸಾಮಾಜಿಕ ಕ್ಷೇತ್ರದ ಸಲುವಾಗಿಯೇ ಹುಟ್ಟಿವೆ— ಬಾಳಿ ಬದುಕಿವೆ. ಮಾಸ್ತಿಯವರ "ಜೀವನ"ದಂತೆ ರಾಜಕೀಯವನ್ನು ತನ್ನಲ್ಲಳವಡಿಸಿಕೊಳ್ಳದಿದ್ದರೂ 'ಜಯಂತಿ' ತನ್ನ ಧೋರಣೆಯನ್ನೆಲ್ಲಿಯೂ ತಪ್ಪು ತುಳಿದಂತೆ ತೋರುವುದಿಲ್ಲ. ವಿಶಾಲದೃಷ್ಟಿಯಿಂದ ನೋಡಿದರೆ, ಒಂದೆರಡು ಕಡೆ ತಪ್ಪಿ ಬಿದ್ದಂತೆ ಸಾಮಾಜಿಕರು ಊಹಿಸುವಂತಿದೆ. ಅದೇ, ಆದೊಂದು ಪತ್ರಿಕೆಗಳ ಅಂಟುರೋಗ.

'ಜಯಂತಿ'ಯ ಜೀವನದ ಬಗ್ಗೆ ಸಂಪಾದಕರು ಆಗಾಗ ಗೊಣಗಿಕೊಂಡಿದ್ದಾರೆ— ಸುಖ-ದುಃಖಗಳ ಸಾಧ್ಯಾಸಾಧ್ಯತೆಯ ಬಗ್ಗೆ ಅನಿವಾರ್ಯ ಕೊರಗಾಟವನ್ನು ಕಂಡ ಹಲವರು ಮರುಕಪಟ್ಟುಕೊಂಡದ್ದೂ ಇದೆ. ಲೇಖಕರ ಹಿರಿಮೆಗಿಂತಲೂ ವಾಚಕರ ಒಲುಮೆಗೆಂದು 'ವೇಶ್ಯಾವೃತ್ತಿ' ಜೀವನ ಮಾಡುವ ಪತ್ರಿಕೆಗಳೇ ಇಂದು ಹೆಚ್ಚು; ಆದರೂ ಹೆದರದೆ ಹದಿನಾರು ವರ್ಷಗಳಿಂದ ಕನ್ನಡ ಸಾಹಿತ್ಯಕ್ಕೆ ಸೇವೆ ಸಲ್ಲಿಸುತ್ತ ಬಂದ 'ಜಯಂತಿ'ಯ ಎದೆಗಾರಿಕೆಗೆ ಮೆಚ್ಚಬೇಕು.

ಸಾಹಿತ್ಯಪರವಾದ ಪತ್ರಿಕೆಗಳಲ್ಲಿ ಸಂಪಾದಕೀಯ ಮಾತ್ರ ರಾಜಕೀಯ ಎಂಬುದೊಂದು ಪರಂಪರಾಗತವೇ? ಅನುಕರಣೇಯನೆ? ಆದಿಲ್ಲವಾದರೆ, ಜನತೆ ಸರಕಾರಗಳೆದುರು 'ಹೌದಪ್ಪ'ನ ಚಾವಡಿಯಲ್ಲಿ ನಲಿಯಲಿಕ್ಕಾಗಿಯೇ ಪತ್ರಿಕೆಗಳು ತಾಳಿದ ಧೋರಣೆಯೆಂದೇ ತಿಳಿಯಬೇಕಾಗುತ್ತದೆ. ಅಂತೂ 'ಸಂಪಾದಕೀಯ'ವು ರಾಜಕೀಯ ರಂಗದಲ್ಲೇ ನಲಿಯುವುದೊಂದು ಹುಚ್ಚಾಟ! ಇಷ್ಟಿದ್ದರೂ 'ಜಯಂತಿ'ಯು ಸಾಮಾಜಿಕ ಸಂಘಟನಾ ಕಾರ್ಯದಲ್ಲಿ ಏನೊಂದು ಕ್ರಾಂತಿಯನ್ನೂ ತಂದಂತೆ ತೋರುವುದಿಲ್ಲ.

ಸಂಪಾದಕರು ಲಂಚನಿರ್ಮೂಲನದ "ಸಾಧ್ಯಾಸಾಧ್ಯತೆ"ಗಳ ಕುರಿತು ಪಾರಮಾರ್ಥಿಕ ವಿಚಾರವೇದನೆಯನ್ನು ತೋಡಿಕೊಂಡಿದ್ದಾರೆ. ತಾವು ಹಿರಿಯ ಸಾಹಿತಿಗಳ ಸಮುಪೀಠರಿದ್ದೂ ತಾಳ್ಮೆಯೆಂಬೊಂದು ಪಾಠ ಸಮಾಜಕ್ಕೆ ಕಲಿಸುತ್ತಾರೆ. ಯಥಾರ್ಥ ಸ್ವರೂಪಾದನೆಗೆ ದ್ಯೋತಕವಾದ "ಸಾಹಿತ್ಯ ವಿಮರ್ಶೆಯ ತಿಕ್ಷಣರಂಗ"ದಲ್ಲಿ ತನ್ಮ 'ಜಯಂತಿ'ಯನ್ನೆ ವಿಮರ್ಶಿಸಲು ಕೇಳಿಕೊಂಡಿರುವ ವಿಚಾರ ಅತಿ ಶ್ಲಾಘನೀಯ! ಸಾಮಾನ್ಯ ಬುದ್ಧಿಗೂ ಎಟಕಬೇಕಾದ ತತ್ತ್ವ ವಿಚಾರವೊಂದಿಲ್ಲಿದೆ. ಅದೇ, ಮಾನವನು ತನಗಾಗಿ ಬಾಳುವಂತೆಯೇ ಪರರಿಗಾಗಿಯೂ ಜೀವಿಸಿರಬೇಕೆಂಬುದು. ಮಹಾತ್ಮರಿಂದ ಪರಂಪರಾಗತ ಬಂದ ಒಂದು ನೀತಿ,—ತತ್ತ್ವ ಬೋಧೆ.

ಅಲ್ಲಿಂದೀಚೆಗೆ ಹೊರಳಿದರೆ "ಜಾಡಮಾಲಿ" ಪತ್ರಿಕೆಗಳೆಂಬ ನಾಮಮಾತ್ರದಿಂದ "ರಾಜಕೀಯ-ಪರಂಪರಾನುಕರಣೆ"; ಬಗೆ ಬಗೆಯ ಶಬ್ದಜಾಲಗಳ ಟೀಕೆಗೆ ತಂಗುದಾಣ; ರಾಜಕೀಯ ಧುರೀಣರಿಂದಲೂ ಸಮಾಜ ಸುಧಾರಕರೆನ್ನಿಸಿಕೊಳ್ಳುವವರಿಂದಲೂ ಬೆನ್ನು ತಟ್ಟಿಸಿಕೊಳ್ಳುವಂತಹ ಚಳಕ; ರಾಜಕೀಯಾನುಕರಣೆಗೆ ಬಿದ್ದ ಒಂದು ವಿಚಾರವೇದಿಕೆ—ಎಂದಿಷ್ಟೇ ಹೇಳಬಹುದು. ಉಳಿದುವುಗಳಲ್ಲಿ ಹೆಚ್ಚಿನವು ಭಾಷಾಂತರ ಸಾಹಿತ್ಯಗಳ ಪರಿವರ್ತನೆ— ಅನುಕರಣೆಗಳೇ ಆಗಿದ್ದರೂ. ನೈಜಚಿತ್ರವನ್ನು ತೋರಿಸುವ "ಳಡಲ ಳರಿ", ಪರಿಚಯಾತ್ಮಕ ಪ್ರಬಂಧ— 'ಇಂದಿನ ಇರಾಣಿ' ಸ್ವಭಾವೋಕ್ತಿಯಿಂದಲೇ ಮಧುರವಾಗಿ ತೋರ್ಪುವ ಕವನ— 'ಪಾರುವ ಹಕ್ಕಿಗೆ.' ಅನುಭವಸಿದ್ಧವಾದ ನಟನೆಯ — 'ಎಸ್. ಎಸ್. ಪಿ. ಯಾತ್ರೆ.' ಎಲ್ಲವೂ ಹೃದಯಂಗಮವಾಗಿವೆ. "ಊರ್ಮಿಳಾ" ಗೀತರೂಪಕ, ಓದಿದಮ್ಮೆ ಬಾರಿಗೂ ರಸ-ಭಾವಾದಿಗಳು-ಹೃದಯ ಪರಿವರ್ತನೆ ಮಾಡುವಂತಹ ಸಾಹಿತ್ಯವಾಗಿದೆ. ಮೂರು ವ್ಯಂಗ್ಯ ಚುಟುಕುಗಳ "ತಿರುಗತೆಗಳು" ಲೇಖಕರ ಭವಿಷ್ಯವನ್ನು ಒಂದು ವಿಧದ ಕ್ರಾಂತಿರೂಪವಾಗಿ ತೋರಿಸುತ್ತವೆ "ಪಂಚವಾರ್ಷಿಕ ಯೋಜನೆ" ಪ್ರತಿಯೊಬ್ಬನೂ ಓದಿ ತಿಳಿದುಕೊಳ್ಳಬೇಕಾದ 'ಲೇಖಾಂಕ'. ಈ ಹಿಂದಿನವನ್ನು ಇನ್ನು ನುಂದಿನ 'ಲೇಖಾಂಕ'ಗಳನ್ನೆಲ್ಲಾ ಒಟ್ಟು ಮಾಡಿ ಓದಿದರೆ ಉತ್ತಮ. ಮಹಾತ್ಮಾಗಾಂಧಿಯವರಂತೆಯೇ ರಷ್ಯನ್ ಕ್ರಾಂತಿಕಾರಿ "ಕ್ರೋಪಾಟಕಿನ್" ಸ್ಮರಣೀಯ ವ್ಯಕ್ತಿಯೆಂಬುದನ್ನು ಅವರ ಜೀವನ ಘಟನೆಯ ವಿಮರ್ಶೆಯಿಂದ ಲೇಖಕರು ವಿಶದವಾಗಿ ತಿಳಿಸಿದ್ದಾರೆ. "ಭಾಷಾ ಸಾಹಿತ್ಯದ ಆದರ" ಎಂಬುದೊಂದು ಜೀವನ ಚಿತ್ರದಲ್ಲಿಯ ಟೀಕೆ-ಅರ್ಥಾತ್ ಪರಭಾಷಾನುಕರಣೆಯಿಂದ ಮಾತೃಭಾಷೆಯನ್ನು ಮರೆತ ಕೆಲವರಿಗೆ ಪಶ್ಚಾತ್ತಾಪಪಟ್ಟುಕೊಳ್ಳಲನುಕೂಲ. ಮೋಪಾಸಾನ ಅನುವಾದಿತ ಕತೆಯೊಂದು 'ಪ್ರೇಮ' ಹೃದಯದ್ರಾವಕ ಚಿತ್ರ. ನಮ್ಮ ಜೀವನದಲ್ಲೂ ಹೋಲಿಸಿ ನೋಡಿಕೊಳ್ಳುವಂತಿದೆ. ಮಹಾಪಂಡಿತರ ಲೇಖನಿಯಿಂದ ಹೊರಟದ್ದೆಲ್ಲಾ ದೊಡ್ಡ ಸಾಹಿತ್ಯ. "ಮತ್ಸ್ಯಕ್ಷನುಳ್ಳ ಶವರ ಕಾಗದಗಳು" ಇಂಥಾ ಸಾಹಿತ್ಯವು ನಮ್ಮಲ್ಲಿಯೂ ಪುರಾತನ ಕಾಲದಿಂದ ಬೆಳೆದು ಬಂದಿತ್ತು. ಇಂದು ನಾವು ವಿದೇಶೀಯರ ಸಾಹಿತ್ಯವನ್ನು ಹೊಗಳಿದಂತೆಯೇ, ವಿದೇಶಿಯರೂ ನಮ್ಮ ಪುರಾತನ ಸಾಹಿತ್ಯಗಳಿಗೆ ತುಂಬಾ ಆದರವಿತ್ತಿದ್ದಾರೆ. "ಳಲಿಯುಗಿದ ಮುದುಕಿ" ಜಾನಪದ ಕಥೆಯಾಗಿದ್ದರೂ, ಸಿಹಿಯೇ ತಿಂದು ಮತ್ತರಾದ ಕಾಲದಲ್ಲಿ

ಭಾರದ ಸಂಪತ್ತೆಂಬಂತಿದೆ— ಅರ್ಥಾತ್ ಪುರಾತನರಲ್ಲಿದ್ದ ಒಂದು ಬಗೆಯ ಸತ್ಯ-ನೀತಿದೋಧೆಯನ್ನು ರೂಪಿಸುತ್ತದೆ.

ಇತ್ಯಾದ ಮೇಲೆ "ಮಧುರ ಹೆಸ್ಸ" ರ ನೆನಪು ಹುಟ್ಟುವುದು ಸಹಜವೇ ಆಗಿದೆ. "ಜಾನಪದ ಜೀವನದ ಸಂಗೀತಕೆದೆಯೋತು" ಹೂವಿನ ಜೇನು-ತೊಳೆಗಳನ್ನು ಬಿಡಿಸಿ, ಹೊಸ ಬೆಳಕಿನ ಸ್ನೇಹರಸದ ಸುಗ್ಗಿ ಮಾಡಿ ನಾಡನಲಿಸಿದ ಮಹಾಪುರುಷರಿಗೊಂದು ಅಂಜಲಿಯ ಸೊಲ್ಲಲ್ಲದೆ ಮತ್ತೇನನ್ನು ತಾನೆ ಕೊಡಬಲ್ಲೆವು.

"ಊರ್ಮಿಳಾ" — ಭಾವಪೂರ್ಣರೂಪಕ ಸಾಂಗತ್ಯದಲ್ಲೂ

(೨೨೩ ನೆಯ ಪುಟದಿಂದ ಬಂದುದು)

ತಾನೇ ಸೃಷ್ಟಿಸಿದ ಮಾನವನಿಗೆ ಎಲ್ಲವನ್ನೂ ಕೊಡುವುದಾಗಿ ಆ ದೇವಾಧಿದೇವನೂ ನಿರ್ಧರಿಸಿ ಬಿಟ್ಟಿದ್ದನಂತೆ.

"ನಾದವೆ? ಸರಿ! ಇಗೋ ನಿನಗಾಗಿ ಕಡಲಿನ ಭೋರ್ಗರೆಯ ದನಿಯೊಂದನ್ನು ದಯಪಾಲಿಸಿದೆ. ತೃಪ್ತಿಯೆ?" ಎಂದು ಸಾಂತ್ವನ ಗೊಳಿಸಿದನಂತೆ.

"ಅದೆಲ್ಲಿಗೆ ಸಾಕು! ವೈವಿಧ್ಯದ ಅನೇಕ ದನಿಗಳಿರಲಿ" ಎಂದು ಆ ದೇವಸಂಜಾತನ ಮೊರೆಯಂತೆ "ಇಗೋ, ನಿನಗಾಗಿ ಅಳಗಾಣದ ಝೇಂಕಾರವೊಂದಿರಲಿ: ಮೇಲೆ ಮಾರುತನ ಸುಯ್ಯಲು ನಿನಗಾಗಿ ಕರುಣಿಸಿದೆ. ತಣಿದೆಯಾ?" ಎಂದು ಸೃಷ್ಟಿಕರ್ತನ ಸಮಾಧಾನವಂತೆ

"ಅವೇನು ಮಹಾ? ನಿನ್ನಳವು ಇನಿತರಲ್ಲೆ ಮುಗಿಯಿತೇ? ಮತ್ತೂ ಕರುಣಿಸು" ಎಂದು ಮನುಶ್ರೇಷ್ಠನ ಚಂಡಿಯ ಆಗ್ರಹವಂತೆ.

"ಮಗೂ, ಸಕಲ ಜೀವರಾಶಿಗಳ ದನಿಯೆಲ್ಲ ನಿನ್ನ ಸೇವೆಗಿರಲಿ ಸಾಲದೆ?" ಎಂದು ಸುಲಭಸಾಧ್ಯವಾದ ನಾದರಾಶಿಯನ್ನೆಲ್ಲ, ಅಧಿದೇವ ಕರುಣಿಸಿದನಂತೆ.

'ಇನ್ನೂ ಬರಲಿ' ಎಂದು ಆ ದೇವಸಂಭೂತನ ದುರಾಗ್ರಹವಂತೆ.

"ಇಗೋ ಮಗು, ವೀಣಾನಾದ ನಿನಗಾಗಿ ಸೃಜಿಸಿದೆ." ಎಂದು ತಂತ್ರಿಗಾನದ ರಮ್ಯರಹಸ್ಯವನ್ನೂ ಆ ದಯಾಮಯ ದೇವ ಒಪ್ಪಿಸಿದನಂತೆ.

"ಬಹಳ ಕಡಿಮೆಯಾಯಿತುನೋಡು. ಬೇರಿಲ್ಲವೆ?" ಎಂದು ದೇವರ ಆ ಆಗ್ರಹೀ ಮಗು ಚಂಡಿ ಹಿಡಿಯಿತಂತೆ.

"ಮಗೂ, ಇನ್ನಿಲ್ಲದಷ್ಟು ಅಮೌಲ್ಯವಾದ ಸ್ತ್ರೀಯ ಕಂಠಶ್ರೀ ನಿನ್ನ ಸೇವೆಗಿರಲಿ" ಎಂದು ಹೆಣ್ಣು-ದನಿಯನ್ನು ಮಾಧುರ್ಯ ಸಮೃದ್ಧಿಯೊಡನೆ ತನ್ನ ಪ್ರತಿರೂಪೀಮಾನವಳಿಗೆ ಆ ದೊರೆ ಸೂರೆಗೊಟ್ಟನಂತೆ.

ಹಾಡಬಹುದಾದ ಕರುಣಾರಸಭರಿತ ಶೈಲಿಯಲ್ಲಿದೆ. "ಕಿರುತಾಯಿ ಕೈಕೇಯಿ ಛಲಕಾಗಿ ಶ್ರೀರಾಮ ಸತಿ ಸೀತಾ ಸೌಮಿತ್ರಿ ಸಹಿತ" ಅರಣ್ಯಗಮನಾನಂತರದ ರಾಣೀವಾಸ ಶೋಕಾಗ್ನಿಯಲ್ಲಿ ದಾಹಗೊಳ್ಳುತ್ತಿರುವ ಸನ್ನಿವೇಶ. "ಹೈಮಕಿರಣನಿರದ ರಾತ್ರಿ"ಯಂತಿರುವ ಅತಃಪುರದಲ್ಲಿ ಊರ್ಮಿಳೆಯ ಪತಿಕಾರ್ಯ ನಿರ್ವಹಣೆಯಲ್ಲೊಂದು ತಿಳಿಬೆಳಕನ್ನಿತ್ತ ಕಿರುಗೀತರೂಪಕ ಲೇಖಕರು ಇದಕ್ಕಿಂತಲೂ ದೊಡ್ಡದಾದ "ಗಂಗಾವತರಣ" ದಂಥಾಗೀತರೂಪಕದಿಂದ ಸಾಮಾನ್ಯರನ್ನು ಈ ಜಯಂತಿಯಲ್ಲಿ ತೇಲಿಸಿ ಬಿಟ್ಟಿದ್ದಾರೆ ಅಂತೂ ಕರ್ತವ್ಯನಿಷ್ಠರಿಗೂ ಪತಿಪರಾಯಣೆ ಸತಿಯರಿಗೂ ಮನಮಿಡ್ಡುವಂತಿದೆ.

"ಏನನ್ನೋ ನೀನು ನಿನಗಾಗಿ ಉಳಿಸಿಕೊಂಡಿರುವೆ. ಸಲ್ಲದು. ಎಲ್ಲವನ್ನೂ ನನಗಾಗಿ ನೀಡು" ಎಂದು ದೇವರ ಮೆಚ್ಚಿನ ಮಗು ಕೇಳಿಯೇ ಕೇಳಿತಂತೆ.

ದೇವ ನಿರುಪಾಯಿಯಾಗಿ ತನ್ನಳವಿನ ಚರಮಕಥೆಯಲ್ಲಿನ ದೇವಗಾನದ ರಾಶಿಯನ್ನೆಲ್ಲ ಆತನಿಗೊಪ್ಪಿಸಿ ಬಿಟ್ಟನಂತೆ.

"ಸಾಲದು" ಆ ಮಾನವ ಮತ್ತೂ ಸ್ಪಷ್ಟವಾಗಿ ಹೇಳಿದನಂತೆ

ದೇವನಲ್ಲಿ ಕೊಡಲಿರಲಿಲ್ಲ. ಸಪ್ತಸ್ವರಗಳಲ್ಲೊಂದನ್ನೂ ಬಿಡದೆ ಕೊಟ್ಟುದಾಗಿದೆ. 'ಸ, ರಿ, ಗ, ಮ, ಪ, ದೆ, ನಿ,'ಗಳೆಲ್ಲ ಮುಗಿದಿದ್ದುವು, ಇನ್ನು ಅಷ್ಟಮವೊಂದನ್ನೆಲ್ಲಿಂದ ಆವಿಷ್ಕರಿಸಿ ತರಲೆಂದು ಆತ ಚಿಂತಾಕ್ರಾಂತನಾದನಂತೆ.

ಪಡೆದೇ ತೀರಬೇಕೆಂಬ ಮಾನವನ ದುರಾಗ್ರಹ ತನ್ನ ಪಟ್ಟು ಬಿಡಲೇ ಇಲ್ಲವಂತೆ.

ಧೋಸಿ ಹೋದ ಶ್ರೀದೇವ ಆತನಿಗೆ "ಇಗೋ, ಕೊನೆ ಮುಟ್ಟಿ ನಿಟ್ಟುಸಿರ ನೀಳ್ದನಿಯೊಂದು ಅಷ್ಟಮವಾಗಿ ನಿನಗೆ ಹಾಸು ಹೊಕ್ಕಾಗಿರಲಿ." ಎಂದು ತನ್ನ ರಾಗಮಾಲಿಕೆಯ ಸ ರಿ ಗ ಮ ಪ ದ ನಿ ಗಳೊಂದಿಗೆ '....ಸ....'ವೊಂದನ್ನು ಹೊಸದಾಗಿ ಸೇರಿಸಿಕೊಂಡನಂತೆ.

(೨೨೬ ನೆಯ ಪುಟದಿಂದ ಬಂದುದು)

ಕನ್ನಡ+ಅಂಬೆ= ಕನ್ನಡಾಂಬೆ (ಸವರ್ಣದೀರ್ಘಸಂಧಿಯೆಂತು?)

ತೆಪ್ಪ+ಉತ್ಸವ= ತೆಪ್ಪೋತ್ಸವ (ಗುಣ ಸಂಧಿಯೆಂತು?)

ಹಿರಿಯ ಲೇಖಕರನೇಕರು ಈ ರೀತಿಯ ಪದ ಪ್ರಯೋಗವನ್ನು ಮಾಡುವುದು ಹಿತಕರವಲ್ಲ; ಸರಿಯಲ್ಲ ಎಂಬುದು ನನ್ನ ಮತ.

ಈ ರೀತಿಯ ವಿಚಾರತರಂಗಗಳನ್ನೆಬ್ಬಿಸುವುದು ವಿಬುಧವರ್ಗಕ್ಕೆ ಎಚ್ಚರವನ್ನೀವುದಾಗಿದೆ ವಿದ್ಯಾರ್ಥಿವೃಂದದ ಓದಿಗೆ ಅನುಕೂಲವಾಗಿದೆ.

———

"**ಹಾರುವ ಹಕ್ಕಿಗೆ**—" ಸ್ವಭಾವೋಕ್ತಿಯಲ್ಲಿಂದು ತಾತ್ತ್ವಿಕ ಸಾಮಾನ್ಯವನ್ನೇ ತಿದ್ದಿ ಬರೆಹಚ್ಚಿತೋರಿದಂತಾ ಕವನವಿದು. ಕಲಾಗತಿಗಳ ಸ್ಥಾನದಲ್ಲಿ "ಕಡಲಕರೆ" ಅಂಥದೇ ಒಂದು ನೈಜಚಿತ್ರ.

ಎರಡೂ ಹಳ್ಳಿಯ ಜೀವನದಲ್ಲಿಂದು ಸೊಬಗನು ತೋರಿದಂತಿದೆ.

"ಕಡಲಕರೆ"— ಬೆಸ್ತರ ಜೀವನದಚಿತ್ರವೊಂದನ್ನು ಕಣ್ಣಿಗೆ ಕಟ್ಟುತ್ತದೆ. ಭಾಷಾಭಿಮಾನಿಯೂ ದೇಶಾಭಿಮಾನಿಯೂ ಈ ಕತೆಯಲ್ಲಿ ಅಲ್ಲಲ್ಲಿ ಸ್ಫುಟವಾಗುತ್ತದೆ. **ಎಸ್. ಎಸ್ ಸಿ. ಯಾತ್ರೆ** ಯು ಸ್ವಾನುಭವದ ಚಿತ್ರವನ್ನೇ ಕೆತ್ತಿದಂತಿದೆ. ಇಂಥಾ ನಾವುಣ್ಣಾಗಿನನ್ನು ನಮ್ಮ ಲೇಖಕರು ನಮಗೆಲ್ಲ ಜೀವನದ, ನಿಜ—ಕಿಚಿಗಳಿಗೆಲ್ಲ ಸಾಮಾನ್ಯವನ್ನು ತಂದುಕೊಡಬೇಕು.

ಕೊನೆಯದಾಗಿ— ಸಂಪಾದಕರು ಹೊಸಹೆಗಾಲಿಕೆಯಿಂದಲೇ ಪತ್ರಿಕೆ ನಡೆಯುವುದಾದರೂ ಚಾಚಿಕರ ಅಭಿಪ್ರಾಯ ಅತಿ ಮುಖ್ಯ. ಅದಕ್ಕಾಗಿಯೇ ಈ ಸಲದ 'ಜಯಂತಿ' ಸಂಚಿಕೆಯನ್ನೇ ವಿಮರ್ಶೆಗೆ ಬಿಟ್ಟುಕೊಟ್ಟಿದ್ದಿರಬಹುದೇ? ಸಂಪಾದಕರು ಈ ವಿಭಾಗದಲ್ಲಿ ವಿಮರ್ಶಕರ ಲೇಖನಿಯ ಬಲಾಬಲತೆಯನ್ನು ಪರೀಕ್ಷಿಸಲೆಳಸಿದ್ದು ಶ್ಲಾಘನೀಯ. ಈ ಕಾರ್ಯ ಇನ್ನೂ ಮುಂದುವರಿದು— ಬಿಂದೆ ರಾಜ—ಮಹಾರಾಜರ ಆಸ್ಥಾನದಲ್ಲಿ ಯಾವ ಬಗೆಯಿಂದ ಸಾಹಿತ್ಯದ ಪರಿಶೋಧನೆ ನಡೆಸುತ್ತಿದ್ದರೋ, ಅದೇ ರೀತಿಯಲ್ಲಿ ಉತ್ತಮ ನವೀನಶಿಲಿ ಸಾಹಿತ್ಯಗಳು ಹೆಚ್ಚುವಂತೆಯೂ ತಪ್ಪಿದಾಗ್ಯ ಕ್ಷಿಪಗಳು ಹುಟ್ಟುವಂತೆಯೂ, ಹುಟ್ಟಿದವೆ ಬಿಂದಿನ— ಸ್ಫುಟಾರಕ್ಕೆ ಬಾರದಂತೆಯೂ ಮಾಡಿಯುಜೇಕೆಯುದು ಸರ್ವಸಾಮಾನ್ಯರ ಹಿತಾಂತಿಮೇ. 'ಜಯಂತಿ'ಯು ಧಾರವಾಡದ ಪತ್ರಿಕೆಯಾಗಿದ್ದು, ಸಂಯುಕ್ತ ಕರ್ನಾಟಕದ್ದಾಗಿದ್ದು, ಪರಸ್ಪರ ರಾಷ್ಟ್ರದ ವಿಷ್ಣಿಗಳನ್ನೂ ಜನತೆಯನ್ನೂ ಒಳಗೊಳ್ಳುವ ಸಾಹಸಕ್ಕೆಳಿಯಲೆಂದು ಆಕಾಂಕ್ಷೆ. ಇದರಿಂದಲೇ ಪತ್ರಿಕೆಯು ಭವಿಷ್ಯ ಉಜ್ವಲಗೊಂಡು ಸಾಹಿತ್ಯದಲ್ಲಿ ನವಿರಿದ ಗಂಟು ಬೀದು ಭದ್ರಪಡಿಸಿಕೊಳ್ಳುವುದೆಂದು ನಂಬಿಕೆ! ಜಯಂತಿ ನಿನ್ನ ದಿಕ್ಕುಗಳಲ್ಲಿ ನಿನ್ನಾದ್ಯರೆಯಿಂದ ಜಯಿಸಲಿ!

ಜಯಂತಿಯು ಶುಭಾಶಂಸನ

ವೀಣಳಿಗೆಯು ಹುಟ್ಟಿದೊಂದು ಹಿನ್ನು-ಕೆಳಗಳ ಬಾಳಿನ ಪ್ರಬರಸಕ್ಕಾಗಿ ಹುಟ್ಟಿದುದು.
ಇಂದಿನ ನಮ್ಮ ಬಾಳಿನಲ್ಲಿ ಹಿನ್ನಗೂ ಎಡೆಯುಟ್ಟು, ಕೆಳಗೂ ಎಡೆಯುಟ್ಟು.
ಎಂತಲೇ ಇಂದಿನ ವೀಣಳಿಗೆ ಕುಯಿದು ಅನುಕಾಣಿಯಾಗಿ ಕಾಣುತ್ತಿರುವುದು.
ಕನ್ನಡ ನಾಡಿನಲ್ಲಿ ಕೆಳ—ಹಿನ್ನಗಳು ಹೆಳೆಯಲಿ!
ವಿಮಲವಾದ ವೀಣಳಿಗೆ ಎಲ್ಲೆಮನಗಳನ್ನು ಬೆಳಗಲಿ!

"ನೂತನ ಗಣಿತ"ಗಳ ತಿದ್ದಿದ ಹೊಸ ಆವೃತ್ತಿಗಳು

ಎಲ್ಲಕಡೆಗೂ ದೊರೆಯುವವು

[ಗರಿಂದ ೭ ತೆರಗತೆಗಳ ಪಠ್ಯ]

ಕಲಿವು ತಿದ್ದಿದ ನೆರವಿನಿಂದ ತಿದ್ದುವಡೆಯುವುದನ್ನು ಕೈಕೊಂಡು ಹೊಸ ಆವೃತ್ತಿಗಳನ್ನು ಹೊರತಿರಲಾಗಿದೆ. ಮನೆಪಾಠಕ್ಕೂ, ಗಣಿತಕಾಷ್ಠಿ, ಸ್ವಯಂಪಾಠ ಇವುಗಳ ಪ್ರತ್ಯೇಕೋಪಯೋಗವನ್ನು ಇವ್ಯಾಳಿಕೆ ಕಾಣಬಹುದು ಅಲ್ಲದೆ ಗಣಿತದ ನಿಜ ವಿಷಯಗಳನ್ನೂ ತಿಳಿಸಲಾಗಿದೆ.

ವಿಜ್ಞ ಜಿಲ್ಲಾ ಸ್ಕೂಲ್ ಮೇಸ್ಟರು ಮ್ಯಾನೆಜರುಗಳಲ್ಲಿ ನಮ್ಮ ಮೇರೆ ಗಲಿತ ಮಾಸ್ತರುಮಿತ್ರವರ್ಗ.
ಎಂತಲೇ ನಿಮ್ಮ ಪ್ರತಿಗಳನ್ನು ಇಂದೇ ಕಂಗ್ರಹಿಸಿ ವಿದ್ಯಾರ್ಥಿಗಳಿಗೆ ಧಾರಾಳ ಕಮಿಶನ್.

ಅಕಳವಾಡಿ ಬುಕ್ ಡಿಪೋ, ಧಾರವಾಡ

ಸಾದರ ಸ್ವೀಕಾರ

●

೫೮. **ಉದಯ** (ಲೇಖನ ಸಂಕಲನ) ಬೇರೆ ಬೇರೆ ಲೇಖಕರು ಬರೆದ ಗದ್ಯ ಪದ್ಯ ಲೇಖನಗಳು. ಪ್ರಕಾಶಕರು ಶ್ರೀ. ಗು. ಸ್ವಾಮಿ, ಅಧ್ಯಕ್ಷ ಕರ್ನಾಟಕ ಸಂಘ, ನವಿಲುಗುಂದ. ಕ್ರೌ. ಆ. ೭೨ ಪುಟಗಳು. ಬೆಲೆ ೦-೧೬-೦.

೫೯. **ಸ್ನೇಹದ ಕಾಣಿಕೆ** (ಕಿರು ಕಾದಂಬರಿ) ಬರೆದವರು ಶ್ರೀಮಾನ್ ಎಂ. ಪಿ. ಸೀತಾರಾಮಯ್ಯ ಎಂ ಎ ಬಿಸೆಯು ಕ್ರಾಸ್ ಧಾರವಾಡ, **ಗವೀಪುರದ ವಿಸ್ತರಣ**, ಬೆಂಗಳೂರು ಕ್ರೌ. ಆ. ೧೧೦ ಪುಟಗಳು. **ಬೆಲೆ** ೧-೪-೦.

೬೦. **ಅಂತರಗಂಗೆ** (ಅನುವಾದಿತ ಕಥಾಸಂಕಲನ) ಲೇಖಕರು. ಶ್ರೀ ಬಸವರಾಜ. ಪ್ರಕಾಶಕರು **ಭಾರತಿ** ಪ್ರಕಾಶನ ಮಂದಿರ, **ಭಾರತಿ** ಆಫೀಸ್, ಮುಂಬಯಿ ೨೫. ಕ್ರೌ. ಆ. ೧೧೦ ಪುಟಗಳು. ಬೆಲೆ ೧-೪-೦.

೬೧. **ಭಾರತದ ಪಂಚವಾರ್ಷಿಕ ಯೋಜನೆ** (ಪರಿಚಯಾತ್ಮಕ ಪುಸ್ತಕ) ಬರೆದವರು ಶ್ರೀಮಾನ್ ನೆಗಳೂರ ರಂಗನಾಥ ಶರ್ಮ ಎ., ಎಲ್‌ಎಲ್.ಬಿ. ಅವರು. ಧಾರವಾಡದ ಮಿಂಚಿನ ಬಳ್ಳಿ ಯವರು ಪ್ರಥಮ ವರ್ಷದ ಪಠ್ಯವಾಗಿ ಇರಿಸಿರುವ ಕಿರು ಪುಸ್ತಕ. ಕ್ರೌ. ಆ ೨೦ ಪುಟಗಳು. ಬೆಲೆ ಪ್ರತಿಯೊಂದಕ್ಕೆ ೨-೮-೦. ಸಾದಾ ಪ್ರತಿಗೆ ೨-೦-೦.

೬೨. **ಧಾರವಾಡ ಜಿಲ್ಲಾ ಸಹಕಾರೋದಯ ಯೋಜನೆ** (ಒಂದು ವರ್ಷದ ವರದಿ) ಅರವಟಿಗೆಯ ಮುಖ್ಯ ಕೇಂದ್ರ ಸಂಚಾಲಕರು ಬಂದಿದೆ. ಡೆ.ಆ. ೨೪ ಪುಟಗಳು.

೬೩. China is Red with peasants Blood (ಪ್ರಚಾರಾತ್ಮಕ ಗ್ರಂಥ). ಲೇಖಕರು ಶ್ರೀಮಾನ್ ಸೀತಾರಾಮ ಗೋಖಲೆ ಅವರು. ಪ್ರಕಾಶಕರು ಸಾಮ್ಯವಾದ ಪ್ರಚಾರ ಸಮಿತಿ, ಧಾರವಾಡ. ಡೆ. ಆ. ೨೦ ಪುಟಗಳು. ಬೆಲೆ ೦-೬-೦.

೬೪. Real Brother or Yellow-Slave (ಪ್ರಚಾರಾತ್ಮಕ ಗ್ರಂಥ). ಲೇಖಕರು ಶ್ರೀ. ಸೀತಾರಾಮ ಗೋಖಲೆ ಅವರು. ಪ್ರಕಾಶಕರು ಸಾಮ್ಯವಾದ ಪ್ರಚಾರ ಸಮಿತಿ, ಧಾರವಾಡ. ಡೆ. ಆ. ೨೦ ಪುಟಗಳು. ಬೆಲೆ ೦-೬-೦.

೬೫. ಮುಂಬಯಿ ಕರ್ನಾಟಕ ಸಂಘದ ೨೦ನೆಯ ವರ್ಷದ ವರದಿ ಸಂಘದ ಕಾರ್ಯದರ್ಶಿಗಳು: ಶ್ರೀ. ರಾ. ಸೂ. ಪಾಟೀಲ ಮತ್ತು ಶ್ರೀ ಎ. ಆರ್. ಗೋಪಿ ಎಮ್ಮ. ಸಂಘದ ವಿಳಾಸ: ಸೈನಿ ಸದನ, ಗಿರಗಾಂವ, ಮುಂಬಯಿ ೪. ಡೆ ಆ. ೨೦ ಪುಟಗಳು.

೬೬. **ಕಾಸ್ಮಜೀವನ** (ಕವನ ಸಂಕಲನ) ಬರೆದವರು ಶ್ರೀಮಾನ್ ಸಿ.ಎಂ. ದೇವೇಂದ್ರನಾಯಕ, ಎಲಿಗಾರ ಓಣಿ, ಧಾರವಾಡ ಲೇಖಕರೇ ಪ್ರಕಾಶಕರು. ಸ್ಮೂ ಕ್ರೌ.ಆ ೪೨ ಪುಟಗಳು. ಬೆಲೆ ೦-೪-೦

೬೭. **ಮಹಾದೇವಭಾಯಿ ದೇಸಾಯಿಯವರ ದಿನಚರಿ** (ಮಹಾತ್ಮಾಗಾಂಧಿ ಮತ್ತು ವಿ ವಲ್ಲಭಭಾಯಿ ಪಟೇಲ ಅವರೊಂದಿಗೆ ಯರೋಡಾ ಜೇಲಿನಲ್ಲಿರುವಾಗ ಬರೆದುದು) ಮೂಲ ಗುಜರಾತಿಯಿಂದ ಕನ್ನಡದಲ್ಲಿ ತಂದವರು ಶ್ರೀಮಾನ್ ರಾಮಚಂದ್ರ ನಡಹಳ್ಳಿಯವರು. ಪ್ರಕಾಶಕರು: ಶ್ರೀಮಾನ್ ಪುಂಡಲೀಕ ಕಾತಗಡೆ, ಗ್ರಾಮ ಸೇವಾ ಸಮಿತಿ, ಮುಧೋಳ ಜಿಲ್ಲಾ ಬೆಳಗಾವಿ. ಡೆ.ಆ. ೫೧೬ ಪುಟಗಳು. ಬೆಲೆ ೮-೦-೦.

೬೮. **ಜಂಬು ಗೋಡಾವರಿ!** (ಐತಿಹಾಸಿಕ ಕಾದಂಬರಿ) ಬರೆದವರು ಶ್ರೀಮಾನ್ ದೇಸಾಯಿ ಪಂಡಿತರಂಗರಾಯರು ಎ.ಎ. ಪ್ರಕಾಶಕರು: ಶ್ರೀ ಕೆ. ಟಿ ಪುರಾಣಿಕ, ಸಾಹಿತ್ಯ ಸೇವಾ ಮಂದಿರ, ಗೋಕಾಕ, ಜಿಲ್ಲಾ ಬೆಳಗಾವಿ. ಕ್ರೌ. ಆ. ೧೫೨+೭೦ ಪುಟಗಳು. ಬೆಲೆ ೮-೦ ೦.

೬೯. **ಶ್ರೇಷ್ಠದಾನ** (ಕಥಾ ಸಂಕಲನ). ಲೇಖಕರು ಶ್ರೀ. ಗುರುನಾಥ ಜೋತಿಯವರು, ಧಾರವಾಡ ಪ್ರಕಾಶಕರು ಶ್ರೀ. ಶೇ. ಕಲಕರ್ಣಿ, ಸ್ವಾತಂತ್ರ್ಯ ಪ್ರಕಾಶನ ಭೂಗನಕಟ್ಟಿ, ಧಾರವಾಡ. ಕ್ರೌ. ಆ. ೮+೭೬ ಪುಟಗಳು. ಬೆಲೆ ೧-೦-೦.

ಕುಟಜಾರಿಷ್ಟ

ಆನೂಂಶ - ಸಂಗ್ರಹಣಿಗಳಿಗೆ

●

ಕಾಸಶಿಷ್ಟಾಸವ

ದಮ್ಮು - ಕೆಮ್ಮುಗಳಿಗೆ

ಎಲ್ಲ ಬಗೆಯ ಆಯುರ್ವೇದ ಔಷಧಿಗಳಿಗಾಗಿ ಬರೆಯಿರಿ:

ವಿ ಸೂತನ

ಆಯುರ್ವೇದ ಕಾರ್ಯಾಲಯ ಬಿ.

ಸಿ ಚಾ ಪುರ

ಶರತ್‌ಪ್ರಕಾಶನ ಮಂದಿರ, ಧಾರವಾಡ

(ಪುಸ್ತಕ ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು)

ಕನ್ನಡ ನಾಡಿನ ವಾಚನಾಲಯಗಳ ಸಂಚಾಲಕರು ಜ್ಞಾಪಕದಲ್ಲಿ ಇರಿಸಿಕೊಳ್ಳಬೇಕು!
ತಮ್ಮ ವಾಚನಾಲಯಕ್ಕೆ ಬೇಕಾಗುವ ಯಾವ ಕನ್ನಡ ಪುಸ್ತಕಗಳನ್ನೂ ಯೋಗ್ಯ ಬೆಲೆಗೆ ಸಮಯಕ್ಕೆ ಸರಿಯಾಗಿ ಪೂರಯಿಸಲಾಗುವುದು.

'ಆನಂದಕಂದ'ರ ಕತೆ, ಕಾದಂಬರಿ, ಕವನಸಂಕಲನ, ನಾಟಕಸಂಕಲನ, ಸಾಹಿತ್ಯ ಸಂಸ್ಕೃತಿಯ ಗ್ರಂಥಗಳು, ಎಲ್ಲವೂ ನಮ್ಮಲ್ಲಿ ದೊರೆಯುವವು. ವ್ಯಾಪಾರಿಗಳಿಗೆ ಅನುಕೂಲ ದರದ ಕಮೀಶನ್ ಕೊಡಲಾಗುವುದು. ಎಲ್ಲರೂ ನಮ್ಮೊಡನೆ ವ್ಯವಹಾರ ಬೆಳೆಯಿಸಬೇಕು.

ನಮ್ಮ ಮಂದಿರ ಪ್ರಕಟಿಸಿದ 'ಆನಂದಕಂದ'ರ ಸಾಮಾಜಿಕ ಕಾದಂಬರಿ:

ಮಗಳ ಮದುವೆ

ಗಾಂಧಿಯ ಸತ್ಯಾಗ್ರಹ ಚಳವಳಿಯ ಹಿನ್ನೆಲೆಯಲ್ಲಿ ಉತ್ತರಕರ್ನಾಟಕದ ಸಾಮಾಜಿಕ ಜೀವಪಲ್ಲಟವನ್ನು ವಿವಿಧ ಮುಖದಲ್ಲಿ ಚಿತ್ರಿಸಿ ತೋರಿಸಿದ ರಮ್ಯ ಕಥಾನಕ. ಓದಲು ಕೈಯ್ಯಲ್ಲಿ ತೆಗೆದುಕೊಂಡರೆ, ಮುಗಿಸುವ ವರೆಗೂ ಪುಸ್ತಕವನ್ನು ಕೆಳಗೆ ಇರಿಸಲಿಕ್ಕಾಗದಂತಹ ಆಕರ್ಷಕವಾದ ಕತೆಗಾರಿಕೆ. ಓದಿದ ರಸಿಕರಿಂದ ಧನ್ಯವಾದಗಳ ಸುರಿಮಳೆ!

ಕ್ರೌ. ಅ. ೩೫೦ ಪುಟಗಳು ಸಾದಾ ಪ್ರತಿಗೆ ೪-೦-೦; ಸುಂದರ ಪ್ರತಿಗೆ ೪-೮೫-೦

ಬೆಳವಡಿ ಮಲ್ಲಮ್ಮ
(ಶರಂಗಾಟಕ ಸಂಕಲನ)
ಕ್ರೌ. ಅ. ೧೧೬ ಪುಟ. ಬೆಲೆ ೧-೮-೦

ಕಾರಹುಣ್ಣಿವೆ
(ಕವನಸಂಕಲನ)
ಕ್ರೌ. ಅ. ೧೩೮ ಪುಟ. ಬೆಲೆ ಸಾದಾ ೨-೦-೦
ಸುಂದರ ೨-೮-೦

ಸದ್ಯ ನಮ್ಮಲ್ಲಿ ದೊರೆಯುವ 'ಆನಂದಕಂದ'ರ ಬೇರೆ ಗ್ರಂಥಗಳು

ಕಾದಂಬರಿ	ಕವನ ಸಂಕಲನ	ಕಥಾಸಂಕಲನ	ಇತರ ಗ್ರಂಥಗಳು
ರಾಜಯೋಗಿ	ವಿರಹಿಣಿ	ಬಡತನದ ಜಾಳು	ಕರ್ನಾಟಕ ಜನಜೀವನ
ಸುದರ್ಶನ	ಒಡನಾಡಿ	ನಮ್ಮ ಬದುಕು	ಜೀವನ ಚರಿತ್ರ
ಅಶಾಂತಿಪರ್ವ		ಸಂಸಾರ ಚಿತ್ರ	ಶ್ರೀ ಬನವಾಸಿಯವರು
ಮಗಳ ಮದುವೆ		ಮೂರಣಾಯಿಯ ಕಲ್ಲು	

ಅಲ್ಲದೆ ಶ್ರೀ ಹುದ್ದಾರರ 'ಚಿತ್ರಕಲಾಪ್ರವೇಶ'ವೂ ಜಾತಿಯ ಜಾಡಿಕ್ಯನ 'ಜಾತೀಯ ಸಮಸ್ಯೆ' 'ಕರ್ನಾಟಕ ಏಕೀಕರಣ' ಈ ಕರಪತ್ರಿಗೆಗಳೂ ದೊರೆಯುವವು.

ಶರತ್‌ಪ್ರಕಾಶನ ಮಂದಿರಕ್ಕೆ ೫ ರೂ. ಸಲ್ಲಿಸಿ ಗ್ರಾಹಕಸದಸ್ಯರಾದವರಿಗೆ ವಿಶೇಷ ಸವಲತ್ತುಗಳು. ಬೇಗನೆ ಪತ್ರವ್ಯವಹಾರವನ್ನು ಮಾಡಿರಿ.

ಸಂಚಾಲಕ:

ಎಸ್. ಡಿ. ಧರಮಟ್ಟಿ, ಶರತ್‌ಪ್ರಕಾಶನ ಮಂದಿರ, ಧಾರವಾಡ

Printed by N. A. Hoskeri at the Vijaya Press, Dharwar, and published forthe Proprietors Jayantipu blications, by S. D. Dharmatti at the Jayanti Office, Dharwar

ಡಿಸೆಂಬರ್
೧೯೫೩

ಈ ಸಂಚಿಕೆಯಲ್ಲಿ

ಬೇಡಿ ತಿನ್ನದೆ ಬದುಕುವ ಬಗೆ ಹೇಗೆ? (ಸಂಪಾದಕೀಯ)	ಸಂಪಾದಕರು	೨೪೧
ನಾಡಸಡಿ (ಪ್ರಾಸಂಗಿತ ಟಿಪ್ಪಣಿಗಳು)	'ಕಾಲಭೈರವ'	೨೪೩
ಬೀದಿಯ ಹಾಡುಗಾರರು (ಸಣ್ಣಕತೆ)	'ಆನಂದಕಂದ'	೨೪೫
ಕನ್ನಡ ಸಣ್ಣಕತೆಗಳ ಬೆಳೆವಣಿಗೆ (ಲಘುಪರಿಚಯ)	ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ	೨೪೯
ಭರತ-ಬಾಹುಬಲಿಯರ ಕತೆಗಳು (ಪೂರ್ವಾರ್ಧ)	ಶ್ರೀ. ಕೆ. ವೆಂಕಟರಾಯಾಚಾರ್ಯ 'ವಿದ್ವಾನ್'	೨೫೦
ದೀಪಾವಳಿ (ಕವನ)	ಶ್ರೀ. ಎಸ್. ಎಸ್. ಬಸುಪಟ್ಟದ ಎಂ. ಎ. ಗುಳೇದಗುಡ್ಡ	೨೫೩
ಫಲಯಾಚನೆ (ಕವನ)	ಶ್ರೀ. ಜ ಶ್ರೀ. ದೇಸಾಯಿ, ಜರಕುಂಟಿ ಬಿ. ಎ. ಬಿ. ಇಡಿ.	೨೫೩
ವೇದಿಸ ಸಮಾಧಿ (ಸಣ್ಣಕತೆ)	ಶ್ರೀ ವೆಂ. ಮು. ಜೋಶಿ, ಧಾರವಾಡ	೨೫೪
ಸ್ಥಿತಧೀಮಂತ ಹುಳ್ಕೇರಿಕರರು (ವ್ಯಕ್ತಿಪರಿಚಯ)	ಶ್ರೀ. ನೆಗಳೂರ ರಂಗನಾಥ ಎಂ. ಎ., ಎಲ್‌ಎಲ್. ಬಿ.	೨೫೯
ಮೂರು ತರುಗತೆಗಳು (ಭಾವರೂಪಕಗಳು)	ಶ್ರೀ ಪಿ. ಎಂ. ಗಲಗಲಿ ಬಿ. ಕಾಮ್.	೨೬೨
ಸುಳಿಗಾಳಿಯೊಡನೆ (ಕವನ)	ಶ್ರೀ. ಸಿದ್ದಣ್ಣ ಮಸಳಿ ಬಿ. ಎ. ಬೆಳಗಾಂವಿ	೨೬೪
ಹೊಸತೇನು ಹೊಸತು? (ಕವನ)	ಶ್ರೀ. ಹೊ. ಸೀತಾರಾಮಾಚಾರ್ಯ. ಹೊಸಪೇಟೆ	೨೬೫
ನಮ್ಮೂರು (ಕವನ)	ಶ್ರೀ. ಶ್ರೀನಿವಾಸ ಗಲಗಲಿ, ಧಾರವಾಡ	೨೬೫
ಸಾಗರದೆಡೆಗೆ (ಸಣ್ಣಕತೆ)	ಶ್ರೀ. ಆನಂದ ವಟ್ಟಿ, ಕಾರವಾರ	೨೭೦
ಶ್ರೇಯೋಗ ವಿಚಾರ (ಪರಿಚಯ)	ಶ್ರೀ. ಟಿ. ವಿ. ಪರದೇಶಿ, ಮುಂಬಯಿ	೨೭೩
ಸಾಹಿತ್ಯ ವಿಚಾರ (ವ್ಯಾಕರಣ ಚರ್ಚೆ)	ಶ್ರೀ ಕೆ. ಎಸ್. ಶರ್ಮಾ 'ವಿಶಾರದ'	೨೭೬
ಸಾಹಿತ್ಯ ವಿಮರ್ಶೆಯ ತಿಣ್ಣಣರಂಗ (ತೆರೆದ ಪರದೆ)	ಶ್ರೀ. ಎಂ. ಕೇಶವಭಟ್ಟ 'ವಿದ್ವಾನ್'	೨೭೯
ಸಾದರ ಸ್ವೀಕಾರ	ನೀಲೋಲೆಯ ತನೆಯ ಪುಟದಲ್ಲಿ	

ಪಣ್ಣಕತೆಗಳ ಮೇಲಾಟ

ಆಕರ್ಷಕವಾದ ಮೂರು ಬಹುಮಾನಗಳು

೨೦ ರೂ. ೧೫ ರೂ. ೧೦ ರೂ.

೧೯೩೪ನೆಯ ಫೇಬ್ರುವರಿ ೧೫ನೆಯ ದಿನಾಂಕದೊಳಗೆ ತಲ್ಪುವಂತೆ ಕತೆಗಳನ್ನು ಕಳುಹಬೇಕು.

ಮೇಲಾಟದ ನಿಯಮಗಳು:

೧ ಕತೆಯು ಸ್ವತಂತ್ರವಾಗಿದ್ದು ಕರ್ನಾಟಕದ ಸಾಮಾಜಿಕ ಹಿನ್ನೆಲೆಯಿಂದ ಕೂಡಿದುದಾಗಿರಬೇಕು.

೨ ಜಯಂತಿಯ ಮುದ್ರಿತ ಪುಟ ೫ಕ್ಕಿಂತ ಹೆಚ್ಚಿಗಾಗಬಾರದು; ಎಂದರೆ ಫುಲ್‌ಸ್ಕ್ಯಾಪ್ ಅರ್ಧಹಾಳೆ ಅರಲ್ಲಿ ಮುಗಿದಿರಬೇಕು.

೩ ವಯಸ್ಸಿನ ನಿರ್ಬಂಧವಿಲ್ಲ. ಹಿರಿಯರು ಕಿರಿಯರು ಎಲ್ಲರೂ ಮೇಲಾಟದಲ್ಲಿ ಭಾಗವಹಿಸಬಹುದು.

೪ ಒಬ್ಬರೇ ಲೇಖಕರು ೨-೩ ಕತೆಗಳನ್ನೂ ಮೇಲಾಟಕ್ಕೆ ಕಳುಹಬಹುದು. ಆದರೆ, ಒಬ್ಬರೇ ಎಲ್ಲ ಬಹುಮಾನಗಳನ್ನು ಪಡೆಯಲಾರರು.

೫ ಮೇಲಾಟಕ್ಕಾಗಿ ಕತೆಗಳನ್ನು ಕಳುಹುವವರು ತಮ್ಮ ಪ್ರತಿಯೊಂದು ಕತೆಗೆ ೮ ಆಣೆಯಂತೆ ಪ್ರವೇಶ ಧನವನ್ನು ಕಳುಹಬೇಕು. (ಅಂಚೆಯ ಟಿಕೀಟು, ನಗದುಋಣ, ಪೋಸ್ಟಲ್ ಆರ್ಡರ್ ರೂಪದಲ್ಲಿ ಕಳುಹಬಹುದು.) ಪ್ರವೇಶಧನವಿಲ್ಲದೆ ಬಂದ ಕತೆಗಳನ್ನು ಮೇಲಾಟದಲ್ಲಿ ಸೇರಿಸಿಕೊಳ್ಳುವುದಿಲ್ಲ.

೬ ಕತೆಯನ್ನು ಕಳುಹಬಹುದಾದ ಕೊನೆಯ ದಿನವೆಂದರೆ ೧೯೩೪ನೆಯ ಫೇಬ್ರುವರಿ ಹದಿನೈದನೆಯ ತಾರೀಖು. ಮೇಲಾಟದಲ್ಲಿ ಮೇಲಿನ ಕ್ರಮಾಂಕ ಪಡೆದ ಕತೆಗಳನ್ನೆಲ್ಲ ಏಪ್ರಿಲ್ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

೭ ಬಹುಮಾನಕ್ಕೆ ತಕ್ಕ ಕತೆಗಳು ಬಾರದಿದ್ದಲ್ಲಿ, ಬಹುಮಾನ-ಕೊಡದೆ ಇರುವುದಕ್ಕೂ ಬಂದುವುಗಳಲ್ಲಿ ಒಳ್ಳೆಯವೆಂದು ತೋರಿದ ಕತೆಗಳಿಗೆ ತಕ್ಕ ಮನ್ನಣೆ ಸಲ್ಲಿಸಲಿಕ್ಕೂ ಜಯಂತಿಯ ಸಂಪಾದಕ ಮಂಡಲಿ ತನ್ನ ಕಡೆಗೆ ಕೊನೆಯ ಅಧಿಕಾರವನ್ನಿರಿಸಿಕೊಂಡಿದೆ.

ಕನ್ನಡ ಕತೆಗಾರರೆಲ್ಲ ಉತ್ಸಾಹದಿಂದ ಭಾಗವಹಿಸಬೇಕು.

ಸಂಪಾದಕರು 'ಜಯಂತಿ' ಧಾರವಾಡ

ಸಾದರ ಸ್ವೀಕಾರ

೭೧ **ಹಿಂದೀ ಸಾಹಿತ್ಯ ಸಮ್ಮೇಲನ ಪ್ರೇಮುಜಿಂದ** (ಲೇಖಕನ ಜೀವನಪರಿಚಯದಿಂದ ಕೂಡಿದ ಅನುವಾದಿತ ಕಥಾಸಂಕಲನ) ಕಥೆಗಳನ್ನು ಅನುವಾದಿಸಿದವರು ಶ್ರೀ. ವೇಲುಂಡಿ ಮಲ್ಲಾರಿಯವರು. ಧಾರವಾಡದ ಮಿಂಚಿನ ಬಳ್ಳಿಯ ೧೬ನೆಯ ವರ್ಷದ ೧೨ನೆಯ ಕುಡಿ. ಕ್ರೌ. ಅ. ೧೬೦ ಪುಟಗಳು. ಬೆಲೆ ೨- -೦.

೭೨ **ಶ್ರೀಕೃಷ್ಣೇಂದ್ರಗುರು ಚರಿತ್ರಸಾರ ಕತಕಂ.** (ಪದ್ಯ ಪುಸ್ತಕ) ಬರೆದವರು ಶ್ರೀ. ಹ. ರಾ. ದೇಸಾಯಿ, ಹಳೇಹುಬ್ಬಳ್ಳಿ. ಪ್ರಕಾಶಕರು ಶ್ರೀ. ಮಲ್ಲಾರ ಭೀಮರಾವ ದೇಸಾಯಿ, ಅಧ್ಯಕ್ಷ ಶ್ರೀಕೃಷ್ಣೇಂದ್ರಗುರು ಸಂಸ್ಥೆ, ಹಳೇಹುಬ್ಬಳ್ಳಿ. ಡೆ. ಗ್ಲಿಪ್ ೫೦ ಪುಟ. ಬೆಲೆ ೦-೪-೦.

೭೩ **ಜಯಹಿಂದ** (ವಾರಪತ್ರಿಕೆಯ ದೀಪಾವಳಿ ಸಂಚಿಕೆ) ಸಂಪಾದಕರು ಶ್ರೀ. ರಾ. ವೆಂ. ಕರಿಗುದರಿಯವರು. ಪ್ರಕಾಶಕರು ಹಿಂದ ಸೇವಾ ಟ್ರಸ್ಟ್, ಸ್ನೇಹಕುಂಜ, ಕೆಲ್ಲೆ-ಹುಬ್ಬಳ್ಳಿ. ಕ್ರೌನ್ ೧೮೦ ಪುಟಗಳು. ಬೆಲೆ ೦-೧೨-೦.

ಎಂದಿನಂತೆ ಈ ಸಂಚಿಕೆಯು ವಿವಿಧ ಲೇಖಕರ ಲೇಖನ-ಕವನ-ಕಥೆ-ಏಕಾಂಕಗಳಿಂದ ಕೂಡಿದ್ದು, ವಾಚನೀಯವಾಗಿದೆ.

೭೪ **ಗೌರೀಕಂಕಣವಿಜಯ** (ಪರಿಚಯಾತ್ಮಕ ಕಿರುಹೊತ್ತಗೆ) ಬರೆದವರು ಶ್ರೀ ಗುರುನಾಥ ಜೋಶಿ, ಧಾರವಾಡ. ಪ್ರಕಾಶಕರು ಹಿಂದಮಾತಾ ಮುದ್ರಣಾಲಯ, ಧಾರವಾಡ. ಕ್ರೌ. ಅ. ೨೪ ಪುಟಗಳು. ಬೆಲೆ ೧-೪-೦.

೭೫ **ಕಂಬನಿಯ ಕುಯಿಲು** (ಐತಿಹಾಸಿಕ ಕಾದಂಬರಿ) ಬರೆದವರು ಶ್ರೀ. ತ. ರಾ ಸು. ಪ್ರಕಾಶಕರು ಮೆ. ಎಚ್. ವೆಂಕಟರಾಮಯ್ಯ ಅ್ಯಂಡ್ ಸನ್ಸ್, ವಿದ್ಯಾನಿಧಿ ಬುಕ್ ಡಿಪೋ, ಮೈಸೂರು. ಕ್ರೌ. ಅ. ೩೦೨, ಪುಟಗಳು. ಬೆಲೆ ೧-೮-೦

೭೬ **ದೀಪದಾನ** (ದೀಪಾವಳಿಯ ವಿಶೇಷ ಸಂಪುಟ.) ಸಂಪಾದಕರುಃ ಶ್ರೀಯುತರುಗಳಾದ ದ. ಬಾ. ಕುಲಕರ್ಣಿ, ಪ್ರೊ. ಬಿ. ಆರ್. ಕುಲಕರ್ಣಿ ಎಂ. ಎ, ಪ್ರೊ. ಸಿ ಎಂ. ಕುಲಕರ್ಣಿ, ಎಂ.ಎ. ಅವರು ಪ್ರಕಾಶಕರುಃ ಶ್ರೀ. ಎಸ್. ಬಿ. ಕುಲಕರ್ಣಿ, ದೀಪದಾನ ಪ್ರಕಾಶನ, ಧಾರವಾಡ. ಕ್ರೌ. ೧೮೮+೬ ಪುಟಗಳು ಬೆಲೆ ೧-೮-೦.

ಕನ್ನಡ ವಾಚಕರ ಹೃದಯುತ್ಕೆ ರಸದೂಟ ಉಣಿಸಬಲ್ಲ, ಬುದ್ಧಿಗೆ ಪೌಷ್ಟಿಕಾನ್ನವನ್ನು ಕೊಡಬಲ್ಲ ಹಲವು ಗದ್ಯ-ಪದ್ಯ ಲೇಖನಗಳನ್ನು ಒಳಗೊಂಡ ಸುಂದರವಾದ ಸಂಪುಟವಿದು. ಇದರಲ್ಲಿ ಪ್ರಕಟವಾದ ಪ್ರೊ. ವಿ. ಎಂ. ಇನಾಂದಾರರ "ಮುಗಿಯದ ಕಥೆ" ಎಂಬ ಲಘು ಕಾದಂಬರಿಯು, ತೀರ ಹೊಸ ತಂತ್ರದಿಂದ ಕೂಡಿದುದಾಗಿದ್ದು, ಹೊಸ ಕಾಲದ ಒಂದು ಉತ್ತಮ ಕೃತಿಯ ಪಾದರಿಯಾಗಿದೆ. ಕವನಗಳ ಸಾಕಷ್ಟು ಪುಟಗಳ ಅವಕಾಶವನ್ನು ಪಡೆದಿವೆ. ಸಂಪಾದಕ ಮತ್ತು ಪ್ರಕಾಶಕರನ್ನು—ಒಳ್ಳೆಯದಾದ ಈ ಸಂಚಿಕೆಯನ್ನು ಒದಗಿಸಿಕೊಟ್ಟು ದಕ್ಕಾಗಿ—ಹೃತ್ಪೂರ್ವಕ ಅಭಿನಂದಿಸುತ್ತೇವೆ.

ಜಯಂತಿ

ಸಂಪುಟ ೧೩ ಸಂಚಿಕೆ ೬

ಕುಟುಂಬದಲ್ಲಿಯ
ಪ್ರತಿಯೊಬ್ಬರೂ ಓದಿ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಎ. ಚಿಟ್ಟೆಗೇರಿ ಕೃಷ್ಣಶರ್ಮ

**
*

ವ್ಯವಸ್ಥಾಪಕರು:
ಮತ್ತು
ಪ್ರಕಾಶಕರು:
ಎ. ಡಿ. ತರಕ್ ಕುಮಾರ

**

ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು

**

ವಾರ್ಷಿಕ ವರ್ಗಣಿ ೫ ರೂ.
ಪ್ರತಿ ಸಂಚಿಕೆ ೬ ಆಣೆ

**

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

**

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

ಬೇಡಿಕೊಳ್ಳದೆ ಬಾಳುವ ಬಗೆ ಹೇಗೆ?

ಒಂದು ಹಳ್ಳಿಯಿಂದ ವೈಯಕ್ತಿಕವಾಗಿ ನನಗೆ ಬಂದ ಕಾಗದದಲ್ಲಿ ಅನೇಕ ಮಾತು. ಗಳೊಂದಿಗೆ ಈ ಸಂಗತಿಯೂ ಇವೆ:

"ಈ ಊರಿಗೆ ರಬಕವಿ-ಬನ್ನಟ್ಟಿಗಳಿಂದ ಸುಮಾರು ೩೦-೪೦ ಜನ ನೇಕಾರರು, ನಿರಾಶ್ರಿತರಾಗಿ ಬಂದಿದ್ದಾರೆ. ಅವರಿಗೆ ಇತರ ಹೋರೆ ಯಾವುದೂ ಬರುವುದಿಲ್ಲ. ಆದರೂ ಸುಗ್ಗಿಯಕಾಲದಲ್ಲಿ ಇಲ್ಲಿ ವಿಶಾದರೂ ಕೆಲಸ ಮಾಡಬೇಕೆಂದು ಬಂದಿರುವರು. ಆದರೆ ನಮ್ಮಲ್ಲಿ ಸುಗ್ಗಿ ಪ್ರಾರಂಭವಾಗಬೇಕಾದರೆ, ಇನ್ನೂ ೪೦-೫೦ ದಿನಗಳು ಹೋಗಬೇಕು. ಅವರು ಇಲ್ಲಿಗೆ ಬಂದು ಎಂಟು ಹತ್ತು ದಿನಗಳಾದವು. ಅವರಿಗೆ ನಿತ್ಯವೂ ಊರಲ್ಲಿ ರೊಟ್ಟಿಯನ್ನು ಎತ್ತಿ ಕೊಡುತ್ತಿದ್ದೇನೆ. ಇದರಂತೆಯೆ ಗೋಕಾಕದೊಳಗಿನ ನೇಕಾರರಿಗೆ, ಅಲ್ಲಿಯ ಆರ್. ಎಸ್. ಎಸ್. ಸಂಘದ ಹುಡುಗರು ನಿತ್ಯವೂ ಊರಲ್ಲಿ ರೊಟ್ಟಿಯನ್ನು ಎತ್ತಿಕೊಡುತ್ತಿದ್ದಾರೆ. ಸರಕಾರದವರು ನೇಕಾರರ ಸಹಾಯದ ಯೋಜನೆಯನ್ನು ಮಾಡುತ್ತಿರುವರಂತೆ ಈ ಯೋಜನೆಯಿಂದ ಸಿಗುವ ಸಹಾಯವು, ಅವರ ಅಂತ್ಯೇಷ್ಟಿಗಾಗಲಿ, ವರ್ಷ ಶ್ರಾದ್ಧಕ್ಕಾಗಲಿ ಉಪಯೋಗಿಸಬಹುದು...."

ಎಂತಹ ಕರುಳನ್ನು ಕುದಿಸುವ ಸಂಗತಿಯಿದು! ಒಂದು ಕಾಲದಲ್ಲಿ—ಎಂದರೆ ಬಹಳ ಹಿಂದಿನ ಕಾಲದಲ್ಲಲ್ಲ; ಹತ್ತಿಪ್ಪತ್ತು ವರ್ಷಗಳ ಹಿಂದೆ—ರಬಕವಿ, ಬನ್ನಟ್ಟಿ, ಮಹಾಲಿಂಗಪುರ, ಬೆಳಗಲಿ—ಮೊದಲಾದ ಊರುಗಳ ನೇಕಾರರ ಮನೆಗಳಿಂದ ಚಿನ್ನದ ಹೊಗೆಯೆ ಹಾಯುತ್ತಿದ್ದಿತು. ಆ ಊರುಗಳ ಪ್ರತಿಯೊಂದು ನೇಕಾರ ಕುಟುಂಬವೂ ಸಿರಿವಂತಿಕೆಯಲ್ಲಿ ತೇಲಾಡುತ್ತಿದ್ದಿತು. ಮನೆಯಲ್ಲಿ ಗಂಡಸರು, ಹೆಂಗಸರು, ಹುಡುಗರು, ಮುದುಕರು ಎಲ್ಲರೂ ದುಡಿಯುವವರು. ದುಡಿತಕ್ಕೆ ತಕ್ಕ ಪಡಿ ಎಲ್ಲರಿಗೂ ದೊರೆಯುವುದು. ಅದುದರಿಂದ ನೇಕಾರ ಗಂಡಸರೇ ಆಗಲಿ, ಹೆಣ್ಣುಮಕ್ಕಳೇ ಆಗಲಿ, ಸಿರಿವಂತಿಕೆಯ ತೇಜಸ್ಸಿನಿಂದ ಕೂಡಿ, ಹಳ್ಳಿಗರಲ್ಲಿ ಒಡೆದುಕಾಣುತ್ತಿದ್ದರು. ಹಾಲು-ತುಪ್ಪದ ಮಾರಾಟದವರಿಗೆ ಹೆಚ್ಚಿನ ಬೆಲೆ ಸಿಕ್ಕುವುದೆಂದರೆ, ನೇಕಾರರಿದ್ದ ಊರುಗಳಲ್ಲಿಯೆ. ಬಯಸಿದುದನ್ನು ಉಣ್ಣುವರು; ಇಚ್ಛೆಗೆ ಬಂದುದನ್ನು ಉಡುವರು. ಬಡತನವೆಂದರೇನೆಂಬುದು ಅವರಿಗೆ ಗೊತ್ತೇ ಇರಲಿಲ್ಲ. ನೇಕಾರರ ಬಹು ಸಂಖ್ಯೆಯ ಮೂಲಕವೇ ರಬಕವಿಯು ವ್ಯಾಪಾರದ ಮುಖ್ಯ ಕೇಂದ್ರವಾಗಿ 'ಛೋಟಾ ಮುಂಬಯಿ' ಎಂದು ಕರೆಯಿಸಿಕೊಳ್ಳುತ್ತಿದ್ದಿತು.

ನೇಕಾರರು ಉದ್ಯಮಶೀಲರಿದ್ದಂತೆಯೆ ಸಂಸ್ಕೃತಿಪ್ರಿಯರೂ ಆಗಿದ್ದರು. ಅದುದರಿಂದಲೆ ನೇಕಾರರಿರುವ ಊರುಗಳಲ್ಲಿ ಹಾಡು ಬಾರಿಸುವವರು ಹೆಚ್ಚಾಗಿರುತ್ತಿದ್ದರು. ಬಯಲಾಟ-ನಾಟಕಗಳನ್ನು ಮಾಡುವ ಕುಶಲ ನಟರು ಇರುತ್ತಿದ್ದರು. ಹೊರಗಿನಿಂದ ಬಂದ ಕಲಾವಿದರಿಗೆ ತಕ್ಕ ಆಶ್ರಯವನ್ನೂ ಇವರು ಕೊಡುತ್ತಿದ್ದರು. ಮಹಾರಾಷ್ಟ್ರ ಭಾಷೆಯ ಸಂಸ್ಥಾನಿಕರ ಆಧಿಪತ್ಯ ದಲ್ಲಿದ್ದ ಈ ಊರುಗಳಲ್ಲಿ ಕನ್ನಡ ಭಾಷೆಯು ಬದುಕಿ, ತಲೆಯೆತ್ತಿಕೊಂಡು ವ್ಯವಹರಿಸುವಂತೆ ಮಾಡಿದವರು, ಈ ನೇಕಾರರೆಂದೇ ಹೇಳಬಹುದು. ರಬಕವಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವು ಸೇರಿ ಯಶಸ್ವಿಯಾಗಿ ನೆರವೇರುವುದಕ್ಕೆ, ಆ ಭಾಗದ ಬಹುಸಂಖ್ಯಾಕ ನೇಕಾರರ ಕನ್ನಡ ಸಾಹಿತ್ಯ ಪ್ರೀತಿಯೇ ಕಾರಣ.

ಅಂತಹ ಉದ್ಯಮಶೀಲ-ಸಂಸ್ಕೃತಿಯ ನೇಕಾರರು ಇಂದು ನಿರ್ಗತಿಕರಾಗಿ, ತಮ-ಸುವರ್ಣ ವೃಷ್ಟಿಯನ್ನು ಕರೆಯುತ್ತಿದ್ದ—ಕೈಮಗ್ಗಗಳನ್ನು ಏರುಗಟ್ಟಿ, ಹೊಟ್ಟೆಗೆ ಹಿಟ್ಟು ದೊರಕಿಸುವು-ದಕ್ಕಾಗಿ ಊರು-ಮನೆ ಬಿಟ್ಟು ಹೊರಟಿದ್ದಾರಂತೆ! ಎಂತಹ ವಿಪರೀತ ಕಾಲ! ಈ ವಿಪರೀತ ಕಾಲಕ್ಕೆ ಕಾರಣರು ಯಾರು? ನೇಕಾರರು ಅಲಸಿಗರೇ? ಹಗಲು-ರಾತ್ರಿಗಳೆನ್ನದೆ ಹೆಂಗುಸರೂ ಗಂಡುಸರೂ ದುಡಿಯುವವರು: ನೇಕಾರಿಕೆಯ ಕುಶಲತೆ-ಕುಸುರುಗಳನ್ನು ಬಲ್ಲವರು. ಪ್ರಾಮಾ-ಣಿಕವಾಗಿ ದುಡಿಯುವ ಚತುರ ಉದ್ಯಮಿಗಳೂ ನಿರುದ್ಯೋಗಿಗಳಾಗಿ ನಿರ್ವಾಹಿತರಾಗುವ ಸಂದರ್ಭ ಒದಗಿದುದಕ್ಕೆ ಹೊಣೆಗಾರರು ಯಾರು? ಇದನ್ನು ನಮ್ಮ ಸಾಮಾಜಿಕರೂ ಸರಕಾರದವರೂ

ನೋಡುವುದಿಲ್ಲವೆ? ನೋಡಬೇಕಾಗಿಲ್ಲವೆ? ಬಹಳ ಜನರನ್ನು ಉದ್ಯೋಗಕ್ಕೆ ಹಚ್ಚಬೇಕೆಂದು ಭಾರತ ಸರಕಾರ, ಪಂಚವಾರ್ಷಿಕ ಮಹಾ ಯೋಜನೆಯನ್ನು ಕೈಕೊಂಡು ಹೊರಟಿದೆ. ಈ ಯೋಜನೆಯ ಕಾಲದಲ್ಲಿಯೇ, ಉದ್ಯೋಗವಿದ್ದ ಈ ಜನರೂ ನಿರುದ್ಯೋಗಿಗಳಾಗಿ ಬಾಯಿಬಾಯಿಬಿಡುತ್ತಿದ್ದಾರಲ್ಲ! ಇದನ್ನು ತಡೆಹಿಡಿಯುವುದಕ್ಕೆ ಉಪಾಯವೇನೂ ಇಲ್ಲವೆ?

ನೇಕಾರರು ತಮ್ಮ ಉದ್ಯಮದಲ್ಲಿ ಕುಶಲರಾಗಿರಬಹುದು. ಆದರೆ ಆ ಉದ್ಯಮವು ನಿಂತು ಹೊಟ್ಟೆಯ ದಾರಿಯೇ ಕಟ್ಟಾಗಿ ಹೋಗಿರುವಾಗ, ಅವರು ಮಾಡಬೇಕೇನು? ಇದುವರೆಗೂ ತಮ್ಮ ಉದ್ಯಮದಲ್ಲಿಯೇ ಜೀವನ ಕಳೆದವರಿಗೆ, ಒನ್ಮೆಲೆ ಬೇರೆಯ ಕೆಲಸ ಮಾಡಲಿಕ್ಕೆ ಬಂದೀತು ಹೇಗ? ಬಂದರೂ ಮಾಡಲಿಕ್ಕೆ ಬೇರೆ ಕೆಲಸಗಳಿಲ್ಲಿವೆ? ಕೆಲಸವಿಲ್ಲದೆ ಹೋದರೆ, ಇವರು ಬದುಕುವುದಕ್ಕೆ ಮಾರ್ಗವೇನಿದೆ? ಹಳ್ಳಿಯ ಒಕ್ಕಲಿಗರ ದಯಾಬುದ್ಧಿಯ ಕಡೆಗೇ ಇವರೂ ಕಣ್ಣಿಟ್ಟು ಹೊರಡಬೇಕಾಗುವುದು. ಹೊಸಕಾಲವು ಸೃಷ್ಟಿಸಿದ ನವೀನ ಬಿಕ್ಷುಕರಿವರು! ಭಿಕ್ಷೆ ಬೇಡುವುದು ಅಪರಾಧವೆಂದು ಕಾಯಿದೆ-ಕಾನೂನುಗಳನ್ನು ಮಾಡುವ ವಿಧಾನಸಭೆಗಳ ಸದಸ್ಯರು, ಯಾರೂ ಭಿಕ್ಷೆ ಬೇಡದೆ ಇರುವಂತಹ ಯೋಜನೆಗಳನ್ನೇನಾದರೂ ಕಲ್ಪಿಸಿದ್ದಾರೆಯೆ?

ಹೈದರಾಬಾದಿನ ನ್ಯಾಯಾಧೀಶರು ೧೫೦ ಜನ ಭಿಕ್ಷುಕರಿಗೆ ಭಿಕ್ಷೆ ಬೇಡಿದುದಕ್ಕಾಗಿ ಶಿಕ್ಷೆ ವಿಧಿಸಿದರಂತೆ. ಪಾಪ, ಕಾಯಿದೆಯ ದಾಸರವರು! ಇನ್ನೇನು ಮಾಡುವರು? ಈ ಭಿಕ್ಷೆ ಬೇಡುವವರಿಗಾಗಿ ಅಲ್ಲಿಯ ಸರಕಾರ, ಹೊಟ್ಟೆಹೊರೆಯುವ ಬೇರೆ ಯೋಜನೆಯನ್ನು ಏನಾದರೂ ಮಾಡಿಕೊಟ್ಟಿದೆಯೆ? ಇದನ್ನು ಆ ನ್ಯಾಯಾಧೀಶರು ವಿಚಾರ ಮಾಡಿರಬಹುದೆ? ಈಗ ಶಿಕ್ಷೆ ವಿಧಿಸಿದ ಭಿಕ್ಷುಕರು, ಸೆರೆಮನೆಯಿಂದ ಹೊರಗೆ ಬಂದು ಮಾಡಬೇಕೇನು? ಮತ್ತೆ ಅವರು ಹೊಟ್ಟೆಯ ಹಸಿವಿಗಾಗಿ ಭಿಕ್ಷೆಯನ್ನೇ ಬೇಡಬೇಕಲ್ಲವೆ? ಹೈದರಾಬಾದನ್ನು ಬಿಟ್ಟು ಇನ್ನೊಂದೂರಿಗೆ ಹೋಗಬಹುದು—ಇಸ್ಪೆ! ಈಗ ಕೆಲಸವಿಲ್ಲದ ನೇಕಾರರು ನಿರ್ಗತಿಕರಾದುದರಿಂದ, ಅಲ್ಲಲ್ಲಿಯ ಹಳ್ಳಿಯ ಜನರು ಅವರಿಗೆ ರೊಟ್ಟಿಯನ್ನೆತ್ತಿ ಕೊಡುತ್ತಾರಂತೆ! ಒಂದು ರೀತಿಯಿಂದ ಇದು ಕೂಡ ಭಿಕ್ಷೆಯ ಕಕ್ಷೆಯಲ್ಲಿಯೇ ಬರುವುದಲ್ಲವೆ? ಕಾಯಿದೆಯಿಂದ ಇಂತಹ ಭಿಕ್ಷೆಯೂ ಅಪರಾಧವೇ ಎನಿಸಬಹುದಲ್ಲವೆ? ಆದರೆ ಇಂತಹ ಅಪರಾಧವನ್ನು ಅನಿವಾರ್ಯವಾಗಿ ಮಾಡಲೇಬೇಕಾಗಿ ಬರುವಂತಹ ಸಂದರ್ಭವನ್ನು ತಂದು ಒದಗಿಸಿದವರು ಯಾರು? ಇದರ ವಿಚಾರವನ್ನು ನಮ್ಮ ಶಾಸನಸಭಾಸದಸ್ಯರೇಷ್ಟಿಗಳು ಮಾಡಬೇಕಾಗಿಲ್ಲವೆ?

ಇಂದಿನ ಪ್ರಾಥಮಿಕ ಶಿಕ್ಷಣದಲ್ಲಿ ವೃತ್ತಿಶಿಕ್ಷಣಕ್ಕೆ ಪ್ರಾಧಾನ್ಯ ಕೊಡಬೇಕೆಂದು, ಪ್ರತಿಯೊಬ್ಬ ವಿದ್ಯಾರ್ಥಿಗೂ ನೂಲುವ ನೇಯುವ ಉದ್ಯಮವನ್ನು ಕಲಿಸಲಾಗುತ್ತದೆ. ಸದ್ಯದ ನೇಕಾರರ ಉದ್ಯಮದ ದುರ್ದಶೆಯನ್ನು ನೋಡಿದರೆ, ಈ ವೃತ್ತಿಶಿಕ್ಷಣದ ಯೋಜನೆಯು ನಗೆಗೆ ಈಡಾಗುವಂತಹ ಮಾತೇ ಆಗಿದೆ. ತಜ್ಞರಾದ ನೇಕಾರರೇ ಹೊಟ್ಟೆಗೆ ಗತಿಯಿಲ್ಲದೆ ಅಡ್ಡಾಡುತ್ತಿರುವಾಗ, ಈ ವಿದ್ಯಾರ್ಥಿಗಳ ವೃತ್ತಿಶಿಕ್ಷಣವು ಅವರನ್ನು ಯಾವ ಗತಿಗೆ ಮುಟ್ಟಿಸೀತು? ಅವರು ನೂತು ನೆಯ್ದು ಅಣಿಗೊಳಿಸಿದ ಉರುಟು ಬಟ್ಟೆಗಳನ್ನು ತೊಡುವವರು ಯಾರು? ಉಡುವವರು ಯಾರು? ಮಾರಾಟವಿಲ್ಲದ ಮಾಲನ್ನು ಹುಟ್ಟಿಸುವ ವೃತ್ತಿಯಿಂದ ಪ್ರಯೋಜನವಾದರೂ ಏನು?

ಮಹಾತ್ಮರ ತತ್ತ್ವದ ಹೆಸರಿನಿಂದ ನಮ್ಮ ಜನತಾರಾಜ್ಯ ಆಡಳಿತ ನಡೆಯಿಸಿರುವುದು. ಆದರೆ ಮಹಾತ್ಮರು ಸುತರಾಂ ಬೇಡವೆಂದಿದ್ದ ಯಂತ್ರರಕ್ತಸರನ್ನು ಆಡಳಿತವು ಮೆಚ್ಚಿ ಸ್ವಾಗತಿಸುತ್ತಲಿದೆ. ಯಂತ್ರಗಳು ಬೆಡಗು-ಬೆಡಗಿನ ಬಣ್ಣ-ಬಣ್ಣದ ಮೇರುಗಿನ ಬಟ್ಟೆಗಳನ್ನು ಬೇಕಾದಷ್ಟು ನಿರ್ಮಿಸಿಕೊಡುತ್ತಿರುವಾಗ, ಕೈಮಗ್ಗದ ಉರುಟುಬಟ್ಟೆಗಳನ್ನು ತೊಡಬೇಕೆನ್ನುವ ತತ್ತ್ವವಿನವರು, ನಮ್ಮ ಜನಸಾಮಾನ್ಯರಲ್ಲಿ ಎಷ್ಟು ಜನರು ಹೊರಟಾರು? ಮಹಾತ್ಮರ ತತ್ತ್ವದ ಹೆಸರನ್ನು ಸಾರುತ್ತ ಹೊರಟಿರುವ ಇಂದಿನ ಜನತಾರಾಜ್ಯದ ಪಾಳೆಯಗಾರರ ಮನೆಯಲ್ಲಿಯೇ, ಕೈಮಗ್ಗದ ಬಟ್ಟೆಯ ಬಳಕೆಯೆಷ್ಟಿದೆ? ಬೆಡಗಿಗೆ ಮರುಳಾದ ಜನತೆಗೆ ಕೈಮಗ್ಗದ ಬಟ್ಟೆಗಳು ಬೇಕಾಗಿಲ್ಲ; ಮಹಾತ್ಮರ ತತ್ತ್ವವನ್ನು ಹೇಳುವ ಸರಕಾರಗಳಿಂದ ಕೈಮಗ್ಗದ ಉದ್ಯಮಕ್ಕೆ ಸಂರಕ್ಷಣೆ ದೊರೆಯುವಂತಿಲ್ಲ. ಎಂದನೇಲೆ, ಕೈಮಗ್ಗದ ಉದ್ಯಮದಿಂದ ಜೀವಿಸುತ್ತಿರುವ ಕೋಟ್ಯವಧಿ ನೇಕಾರರು ಈಗ ಮಾಡಬೇಕೇನು? ಸರಕಾರದ ಬಳಿ ಅವರಿಗೆ ಕೊಡಬೇಕಾದ ಯಾವ ಕೆಲಸಗಳೂ ಇಲ್ಲ. ಸಾಮಾಜಿಕರಿಗೆ ಅವರ ಕೆಲಸದ ಅಗತ್ಯವಿಲ್ಲ, ಈಗವರು ಹೊಟ್ಟೆ ತುಂಬಿಕೊಳ್ಳುವುದಕ್ಕಾಗಿ ನಟ್ಟು ಕಡಿಯಲಿಕ್ಕೆ ಹೋಗಬೇಕು; ಇಲ್ಲನೆ ಬುಟ್ಟಿ ಹೊರಲು ಹೋಗಬೇಕು. ಹತ್ತಿರವಿದ್ದ ಕಲೆಗೂ ಸಂಸ್ಕೃತಿಗೂ ಕಾಸಿನ ಬೆಲೆಯಿಲ್ಲ! ಧಿಕ್ಕಾರ!

ಹೋಗಲಿ, ಈ ನೇಕಾರರು ನಟ್ಟು ಕಡಿದೋ, ಬುಟ್ಟಿ ಹೊತ್ತೋ, ಹೊಟ್ಟೆ ತುಂಬಿಕೊಂಡಾರೆಂದರೆ ಅದಕ್ಕಾದರೂ, ಅವಕಾಶವಿದೆಯೆ? ಎಂದೂ ಗೊತ್ತಿಲ್ಲದ ಅವರಿಗೆ ಒಮ್ಮೆಲೆ ಇಂತಹ ಕಷ್ಟದ ಕೆಲಸ ನೀಗುವುದು ಹೇಗೆ? ಕೆಲಸ ನೀಗದ ಇವರನ್ನು, ಯಾವ ಒಕ್ಕಲಿಗ—ಕೂಲಿಕಾರರನ್ನು ಬಿಟ್ಟು ಇವರನ್ನು—ಕೆಲಸಕ್ಕೆ ಕರೆದಾನು? ಹೀಗಿರುವಾಗ ನೇಕಾರರು ಮಾಡಬೇಕೇನು? ಅವರು ಕುಟುಂಬ ಸಹಿತವಾಗಿ, ಬೇಡಿಕೊಳ್ಳದೆ ಬಾಳುವ ಬಗೆ ಹೇಗೆ?

ಮಧ್ಯಮ ತರಗತಿಯವರ ಪತನವ ಇನ್ನೊಂದು ಉದಾಹರಣೆ ಇದು! ಆರ್ಥಿಕದೃಷ್ಟಿ, ಸಾಂಸ್ಕೃತಿಕ ದೃಷ್ಟಿಗಳಿಂದ ನೋಡಿದರೆ, ನೇಕಾರರೂ ಮಧ್ಯಮತರಗತಿಗೆ ಸೇರಿದವರೆ! ಭಾರತದ ಸದ್ಯದ ಆಡಳಿತದ ಧೋರಣದಿಂದ ಮಧ್ಯಮ ತರಗತಿಯ ಜನರ ಪಂಗಡಗಳೆಲ್ಲ ಒಂದೊಂದಾಗಿ ಮಣ್ಣುಗೂಡುತ್ತಲಿವೆ. ನೇಕಾರರೂ ಈಗ ಇದರ ಬಾಯಿಗೆ ಬಲಿಯಾಗುವುದರಲ್ಲಿದ್ದಾರೆ.

—ಸಂಪಾದಕರು

ನಾಡನಡೆ

●

ಕನ್ನಡ ಸಾಹಿತ್ಯ ಸಮ್ಮೇಳನದ ೩೬ನೆಯ ಅಧಿವೇಶನ

ಈ ತಿಂಗಳ ಕೊನೆಯ ವಾರದಲ್ಲಿ, ಎಂದರೆ ದಿನಾಂಕ ೨೬, ೨೭ ಮತ್ತು ೨೮ರಂದು, ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಕುಮಟೆಯಲ್ಲಿ, ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನದ ಅಧಿವೇಶನವು ಸೇರಲಿರುವುದು ಸಂತೋಷದ ಸಂಗತಿ. ಉತ್ತರ ಕನ್ನಡ ಜಿಲ್ಲೆಯಲ್ಲಿ ಅಖಿಲ ಕರ್ನಾಟಕ ಸಾಹಿತ್ಯಸಮ್ಮೇಳನ ನಡೆಯುವುದಿದು ಎರಡನೆಯ ಸಲ. ೨೨ ವರ್ಷಗಳಿಗೆ ಹಿಂದೆ ಒಂದು ಸಲ, ದಿವಂಗತ ಪಂ. ಮುಳಿಯ ತಿಮ್ಮಪ್ಪಯ್ಯನವರ ಅಧ್ಯಕ್ಷತೆಯಲ್ಲಿ, ಕಾರವಾರ ನಗರದಲ್ಲಿ ನಡೆದಿದ್ದಿತು. ಆ ಮೇಲೆ ಇದೇ ಎರಡನೆಯ ಸಲವು. ಹಿಂದೆ ಕಾರವಾರದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಸೇರಿದಾಗ, ಅದರೊಂದಿಗೆ ಕರ್ನಾಟಕ ಏಕೀಕರಣ ಪರಿಷತ್ತಿನ ಅಧಿವೇಶನವೂ ನಡೆಯಿತು. ಇವೆರಡೂ ಸಮ್ಮೇಳನಗಳ ಯಶಸ್ಸಿಗಾಗಿ, ಅಂದು ಕಾರವಾರದ ಧುರೀಣರೆಲ್ಲ ತನು-ಮನ-ಧನದಿಂದ ನೆರವು ಕೊಟ್ಟರು. ಕನ್ನಡ ಸಾಹಿತ್ಯ ಪ್ರಚಾರಕ್ಕೂ ಕರ್ನಾಟಕ ಏಕೀಕರಣಕ್ಕೂ ಅಂದಿನ ಕಾರವಾರದಲ್ಲಿ ಯಾರೂ ವಿರೋಧಿಗಳಾಗಿದ್ದಂತೆ ತೋರಲಿಲ್ಲ. ಸುಪ್ರಸಿದ್ಧ ವೀಣಾವಾದನಪಟುಗಳಾದ ದಿವಂಗತ ತೇಲಂಗ ಮಂಗೇಶರಾಯರೂ ಸಮ್ಮೇಳನಗಳ ಕಾರ್ಯಕಲಾಪಗಳಲ್ಲಿ ಸಕ್ರಿಯರಾಗಿ ಭಾಗವಹಿಸಿದ್ದರು. ಕಾರವಾರಕ್ಕೆ ದಯೆಮಾಡಿಸಿದ್ದ ಕನ್ನಡ ಸಾಹಿತ್ಯಕರನ್ನೆಲ್ಲ ಕಾರವಾರದ ನಾಗರಿಕರು ಅಂದು ಅದರ ಪ್ರೀತಿಗಳಿಂದ ಕಂಡಿದ್ದರು.

ಆದರೆ ಇತ್ತೀಚೆಗೆ ಹೊರಗಿನಿಂದ ಕಾರವಾರ ಜಿಲ್ಲೆಗೆ ಬಂದು ಸೇರಿದ ಕೆಲವು ಅಹಂಮನ್ಯ ಮಹನೀಯರು, ಕನ್ನಡ ಭಾಷೆಯ ವಿಷಯದಲ್ಲಿಯೂ ಕರ್ನಾಟಕ ಪ್ರಾಂತೀಕರಣ ವಿಚಾರವಲ್ಲಿಯೂ ವಿರೋಧ ಭಾವನೆಯನ್ನು ಹಬ್ಬಿಸತೊಡಗಿದ್ದಾರೆ; ಮಹಾರಾಷ್ಟ್ರ ಪ್ರಾಂತ-ಭಾಷೆಗಳ ಮೇಲ್ಮೆಯನ್ನು ಪ್ರಚಾರಮಾಡುತ್ತ, ಜನಮನವನ್ನು ಕದಡುತ್ತಿದ್ದಾರೆ. ಇದರ ಪರಿಣಾಮವಾಗಿಯೇ ಈಗೆರಡು ವರ್ಷಗಳ ಹಿಂದೆ ಕಾರವಾರ ನಗರದಲ್ಲಿ ಅಖಿಲ ಮಹಾರಾಷ್ಟ್ರ ಸಾಹಿತ್ಯ ಸಮ್ಮೇಲನವು ನಡೆಯಿತು. ಸಮ್ಮೇಳನಕ್ಕೆ ಬಂದ ಮಹಾರಾಷ್ಟ್ರೀಯ ಧುರೀಣರೆಲ್ಲ ಕಾರವಾರ ಜಿಲ್ಲೆ ತಮ್ಮದೇ ಎಂದು ಮಾತನಾಡಿ ಹೋದರು. ಈಗವರು ಅಖಿಲ ಮಹಾರಾಷ್ಟ್ರದ ನಕ್ಷೆಯಲ್ಲಿ, ಕಾರವಾರ ಜಿಲ್ಲೆಯನ್ನು ಕೂಡಿಸಿಯೇ ಬಿಟ್ಟಿದ್ದಾರೆ.

ಕುಮಟೆಯ ಕಾರ್ಯಕರ್ತರಿಗೆ ಧನ್ಯವಾದಗಳು!

ಇಂತಹ ಅಯಕಟ್ಟಿನ ಸಂದರ್ಭದಲ್ಲಿ, ಕುಮಟೆಯ ಕನ್ನಡಾಭಿಮಾನಿಗಳು ಕ. ಸಾ. ಸಮ್ಮೇಳನವನ್ನು ತಮ್ಮಲ್ಲಿಗೆ ಬರಮಾಡಿಕೊಂಡುದು, ತುಂಬ ಸಂತೋಷದ ಸಂಗತಿಯಾಗಿದೆ. ಕಾರವಾರದಲ್ಲಿ ಕೊಂಕಣಿ ಮಾತನಾಡುವ ಜನರು ಸಾಕಷ್ಟು ಸಂಖ್ಯೆಯಲ್ಲಿ ಇರಬಹುದು; ಅವರು ಸಮಾಜದಲ್ಲಿ ಮುಂದುವರಿದ ನಾಗರಿಕರೂ ಆಗಿರಬಹುದು. ಕಾರವಾರದಂತೆಯೆ ಮಂಗಳೂರು ಜಿಲ್ಲೆಯಲ್ಲಿಯೂ ಕೊಂಕಣಿ ಭಾಷೆಯನ್ನಾಡುವ ಜನರು ಬಹಳ ಜನರಿದ್ದಾರೆ. ಅವರೆಲ್ಲರೂ ಸುಶಿಕ್ಷಿತರೂ ಕರ್ತೃತ್ವಶಾಲಿಗಳೂ ಆದ ನಾಗರಿಕರಾಗಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ದಕ್ಷಿಣದ ಕರಾವಳಿ ಪ್ರದೇಶದಲ್ಲಿಯೂ ಕೊಂಕಣಿ ಮಾತನಾಡುವ ಜನರು ಇಲ್ಲದೆ ಇಲ್ಲ. ಕೊಂಕಣಿ ಮನೆಯ ಮಾತಾಗಿ ಇರುವವರೆಲ್ಲ ಪ್ರಾದೇಶಿಕ ಭಾಷೆಯಾದ ಕನ್ನಡದೊಂದಿಗೆ ಇದುವರೆಗೂ ತಾದಾತ್ಮ್ಯ ಭಾವದಿಂದ ವರ್ತಿಸುತ್ತ ಬಂದಿದ್ದಾರೆ. ಕೊಂಕಣಿ ನುನೆಮಾತಿನ ಬಹುಜನರು, ಇಂದಿನ ಕನ್ನಡ ಸಾಹಿತ್ಯದ ಅಭ್ಯುದಯಕ್ಕಾಗಿ ದುಡಿದವರಾಗಿದ್ದಾರೆ. ಆದರೆ ಇಂದಿನ ಕಾರವಾರದಲ್ಲಿ, ಹೊರಗಿನಿಂದ ಬಂದ ಕೆಲವು ಮಹಾಷ್ಟ್ರೀಯರು, ಕೊಂಕಣಿ ಮಾತನಾಡುವ ಜನರಲ್ಲಿ ಬುದ್ಧಿಭೇದವಾಗುವಂತೆ ತೀಕ್ಷ್ಣ ಚಟುವಟಿಕೆಗಳನ್ನು ನಡೆಯಿಸಿದ್ದಾರೆ.

ಈಗ ನಡೆಯಲಿರುವ ಸಮ್ಮೇಳನದಿಂದ ಕಾರವಾರ ಜಿಲ್ಲೆಯಲ್ಲಿ ತುಂಬ ಕಾರ್ಯವಾಗಬೇಕಾಗಿದೆ. ಮಹಾರಾಷ್ಟ್ರ ಚಳವಳಿಗಾರರ ಮೋಹದ ಮಾತಿಗೆ ಮುಂಕುವಟ್ಟ ಜನರಲ್ಲಿ,—ಕರ್ನಾಟಕ ಸಾಹಿತ್ಯ ಸಂಸ್ಕೃತಿಗಳ ಸ್ವಭಾವವು ಮನನವಾಗುವಂತೆ-ಉಚಿತ ರೀತಿಯ ಪ್ರಚಾರ ನಡೆಯಿಸಬೇಕಾಗಿದೆ. ಉದಾಸೀನರಾಗಿದ್ದ ಜನರನ್ನು ಅತ್ಮೀಯರನ್ನಾಗಿ ಮಾಡಿಕೊಂಡು, ಅವರನ್ನು ಕನ್ನಡದ ಕಡೆಗೆ ಆಕರ್ಷಿಸಬೇಕಾಗಿದೆ. ಕಾರವಾರದಲ್ಲಿ ಹೂತಿಟ್ಟು ನಿರ್ಲಕ್ಷಿಸದಂತಿರುವ ಹಲವು ಬಗೆಯ ಕನ್ನಡ ಸಂಸ್ಕೃತಿಸಾಧನಗಳನ್ನು ಬೆಳಕಿಗೆ ತಂದು ತೋರಿಸಿ, ಸಂಪೂರ್ಣ ಕಾರವಾರ ಜಿಲ್ಲೆಯು ಕರ್ನಾಟಕದ ಅವಿಭಾಜ್ಯ ಪ್ರದೇಶವೆಂಬುದನ್ನು ಸಿದ್ಧಮಾಡಿ ತೋರಿಸಬೇಕಾಗಿದೆ. ಇದನ್ನೆಲ್ಲ ಮಾಡಲು ಅನುಕೂಲವಾಗುವಂತಹ ಒಳ್ಳೆಯ ಸಂದರ್ಭವನ್ನು ಒದಗಿಸಿಕೊಟ್ಟುದಕ್ಕಾಗಿ, ಕುಮುಟೆಯ ಕ. ಸಾ. ಸಮ್ಮೇಳನದ ಸ್ವಾಗತ ಸಮಿತಿಯನ್ನು, ಕನ್ನಡಿಗರೆಲ್ಲ ಅಭಿನಂದಿಸಬೇಕು. ಎಲ್ಲ ಭಾಗದಿಂದಲೂ ಕನ್ನಡ ಸಾಹಿತ್ಯ ಪ್ರೇಮಿಗಳು ಕುಮಟೆಗೆ ಆಗಮಿಸಿ, ಸಮ್ಮೇಳನವನ್ನು ಯಶಸ್ವಿಯಾಗಿಸಬೇಕು.

ಈ ಸಲದ ಸಮ್ಮೇಳನಾಧ್ಯಕ್ಷರು

ಹಿಂದೆ ಕಾರವಾರದಲ್ಲಿ ಕ. ಸಾ. ಸಮ್ಮೇಳನದೊಂದಿಗೆ ಕೂಡಿದ ಕವಿಸಮ್ಮೇಳನಕ್ಕೆ ಅಧ್ಯಕ್ಷರಾಗಿ, ಅಂದಿನ ಪ್ರಾರಂಭಭಾಷಣದ ಪ್ರಭಾವದಿಂದ, ಪರಭಾಷೆಯ ಸಾಹಿತ್ಯಕರನ್ನೂ ಬೆರಗುಗೊಳಿಸಿದ ಶ್ರೀ. ವಿ. ಸೀತಾರಾಮಯ್ಯನವರೇ ಇಂದು ಕಾರವಾರ ಜಿಲ್ಲೆಯಲ್ಲಿಯೇ ಮತ್ತೆ ಸೇರಲಿರುವ ಸಾಹಿತ್ಯಸಮ್ಮೇಳನಕ್ಕೆ ಅಧ್ಯಕ್ಷರಾಗಿ ಆಯ್ಕೆ ಪಡೆದುದು ಕೌತುಕದ ಮತ್ತು ಆನಂದದ ಸಂಗತಿಯಾಗಿದೆ. ಸಾಹಿತ್ಯ ಪ್ರಪಂಚದಲ್ಲಿ ಎದ್ದಿರುವ ಹೊಸತು-ಹಳತು- ಎಂಬ ವಿಚಿತ್ರ ಬಿರುಗಾಳಿಯ ಈ ಕಾಲದಲ್ಲಿ, ಶ್ರೀ. ವಿ. ಸೀತಾರಾಮಯ್ಯನವರಂತಹ

ಸಮಂಜಸ ಸಮನ್ವಯವಾದಿಗಳು ಅಧ್ಯಕ್ಷರಾಗಲಿರುವುದು ಉಚಿತವಾದ ಮಾತೇ ಆಗಿದೆ. ಕನ್ನಡ ಸಾಹಿತ್ಯದ ಹೊಸ ಯುಗದ ಆರಂಭಕಾರರಲ್ಲಿ ಶ್ರೀಮಾನ್ ವಿ. ಸಿ. ಯವರೂ ಒಬ್ಬರು. ಇವರ ಜೊತೆಗಾರರಾಗಿದ್ದ ಶ್ರೀ. ಎ. ಆರ್. ಕೃಷ್ಣಶಾಸ್ತ್ರಿಗಳೂ, ದಿನಂಗತ ಎಂ. ಆರ್. ಶ್ರೀನಿವಾಸಮೂರ್ತಿಗಳೂ– ಸ್ವಲ್ಪ ಹಿರಿಯರಾದುದರಿಂದ– ಈ ಮೊದಲೇ ಅನುಕ್ರಮವಾಗಿ ಸಮ್ಮೇಳನಾಧ್ಯಕ್ಷ ಪದದ ಬಹುಮಾನವನ್ನು ಪಡೆದರು. ವಯಸ್ಸಿನ ಕಿರುಮೆಯು ಮೂಲಕವೋ ಏನೋ– ಶ್ರೀ. ವಿ. ಸಿ. ಯವರಿಗೆ ಆ ಸನ್ಮಾನ ಈಗ ಸಿಕ್ಕಿತು.

ಶ್ರೀ ವಿ. ಸಿ. ಯವರು ಸಾಹಿತ್ಯದ ಕೂಲಂಕಷ ಅಭ್ಯಾಸಿಗಳು. ಹೊಸತು–ಹಳತುಗಳಲ್ಲಿಯ ಸಂಬಂಧ–ಸೌಂದರ್ಯಗಳ ಸೂಕ್ಷ್ಮತೆಯನ್ನು ಅರಿತವರು. ಕವಿಗಳು, ನಾಟಕ–ಪ್ರಬಂಧಕಾರರು, ಒಳ್ಳೆಯ ಸಾಹಿತ್ಯ ವಿಮರ್ಶಕರು, ಸಂಗೀತ–ಚಿತ್ರಕಲೆಗಳ ಬೆಲುವನ್ನು ಅನುಭವಿಸಿ ಅರಿತವರು. ಒಳ್ಳೆಯ ಮಾತುಗಾರರು. ಅರ್ಥಶಾಸ್ತ್ರದ ಉಚ್ಚ ವಿದ್ಯಾಭ್ಯಾಸ ಮಾಡಿದವರಾದ ರಸಿಕ ಸಾಹಿತ್ಯಕರಾದುದರಿಂದ, ಬುದ್ಧಿ–ಭಾವನೆಗಳಲ್ಲಿ ಸುಂದರ ಸಾಮರಸ್ಯವನ್ನು ತಂದುಕೊಂಡವರು. ಕರ್ನಾಟಕದ ಯಾವ ಭಾಗದ ನಾಗರಿಕರಿಗೂ ಶ್ರೀಯುತರು ಹೊಸಬರಲ್ಲ, ಸಂಪೂರ್ಣ ಪರಿಚಿತರು. ಎಲ್ಲರ ಪ್ರೀತ್ಯಾದರಗಳಿಗೆ ಪಾತ್ರರಾದವರು. ಇಂತಹರು ಇಂದಿನ ಸಾಹಿತ್ಯಿಕ ಸಂಕ್ರಮಣಕಾಲದಲ್ಲಿ ಅಧ್ಯಕ್ಷರಾಗಿ ಆಯ್ಕೆಯಾಗಿದುದು ಒಳ್ಳೆಯ ಭವಿಷ್ಯಸೂಚಕವಾಗಿದೆ. ಇವರ ನೇತೃತ್ವದಲ್ಲಿ ಕುಮಟೆಯಲ್ಲಿ ಸೇರಲಿರುವ ಸಾಹಿತ್ಯಕ ವೃಂದವು ಪರಸ್ಪರರನ್ನು ವಿಶ್ವಾಸದಿಂದ ಕಂಡು, ಎಲ್ಲರೂ ಒಟ್ಟುಗೂಡಿ ಕನ್ನಡಕ್ಕಾಗಿ ದುಡಿಯುವ ದೃಢಸಂಕಲ್ಪವನ್ನು ಮಾಡುವಂತಾಗಲೆಂದು ನಮ್ಮ ಹಾರೈಕೆ. ಅಧ್ಯಕ್ಷಪದದ ಸನ್ಮಾನ ದೊರೆತುದಕ್ಕಾಗಿ ಶ್ರೀ. ವಿ. ಸಿ. ಯವರಿಗೆ ನಮ್ಮ ಅಭಿನಂದನೆಗಳು.

ಮಕ್ಕಳ ಸದೃಢತೆಗಾಗಿ

"ಬಗನ ಬಾಲಾಮೃತ"

ಹಲ್ಲು ಬರುವಾಗ

ಎಕ್ಸ್‌ಟ್ರಾ ಇಫ್ "ಹೀಲರ್"

ಜಂತು ಆದರೆ

"ವರ್ಮ್ ಆಯಿಲ್"

ಉಪಯೋಗಿಸಿರಿ. ಇವು ಪತ್ರಿಯೊಬ್ಬ ಕುಟುಂಬಸ್ಥರಿಗೆ ಉಪಯೋಗವಾಗುವ ಔಷಧಗಳು.

The National Pharmacies & Pharmaceuticals Ltd., Dharwar.

ಆನಂದ ಗ್ರಂಥಮಾಲಾ, ಹುಬ್ಬಳ್ಳಿ

(ಸಂ.: ಶ್ರೀ. ಪಿ. ವೆಂಕೋಬಾಚಾರ್ಯ ಬಿ. ಎ. ಬಿ. ಟಿ.)

ಬೆಲೆ ಬಾಳುವ ಪುಸ್ತಕಗಳು ಕಡಿಮೆ ಬೆಲೆಗೆ

	(೧೧-೮-೦	(೮-೦-೦)
೧	ಪೂರ್ಣಿಮಾ (ಸಂಸಾರ ಸುಖದ ಚಿತ್ರಗಳು)	೩-೪-೦
೨	ಮನೋರಾಜ್ಯ (ಮೂರಂಕದ ನಾಟಕ)	೩-೪-೦
೩	ಮೋಪಾಸಾನ ಓಲೆಗಳು (ಜೀವನ ಚರಿತ್ರೆ)	೩-೦-೦
೪	ರುಕ್ಮಿಣಿ (ಕಾದಂಬರಿ)	೩-೦-೦
೫	ಮುಡಿಯದ ಹೂ (ಮೋಪಾಸಾನ ಕತೆಗಳು)	೧-೪-೦
೬	ಕಲ್ಪನಾ ವಿಲಾಸ (ಸಣ್ಣ ಕತೆಗಳು)	೧-೪-೦
		೧೧-೪-೦

ಈ ಮೇಲಿನ ಪುಸ್ತಕಗಳು ಕೇವಲ ೮-೪-೦ ಗೆ
ಅಂಚೆ ವೆಚ್ಚ ಸಹಿತ
ಒಳ್ಳೇ ಸುಸಂಧಿ. ಇಂದೇ ಬರೆಯಿರಿ.

೬೦೬೦ ಗೋಕಲ್ ರೋಡ್, ಹುಬ್ಬಳ್ಳಿ

ಪಿ. ವಿ. ಆಚಾರ್ಯ & ಕಂ.
ಸಂಚಾಲಕರು, ಆನಂದ ಗ್ರಂಥಮಾಲಾ.

ಬೀದಿಯ ಹಾಡುಗಾರರು

(ಸಣ್ಣಕಥೆ)*

'ಆನಂದಕಂದ'ರು ಬರೆದುದು

●

"ಹೊಟ್ಟೆಗೆ ಹಿಟ್ಟು, ಮೈಗೆ ಬಟ್ಟೆಗಳನ್ನು ದೊರಕಿಸುವುದಕ್ಕಾಗಿಯೆ ಮಾನವನ ಬುದ್ಧಿ ಹಲವು ಬಗೆಯ ಚಮತ್ಕಾರಗಳನ್ನು ಕಂಡುಹಿಡಿದಿದೆ. ಕಲೆಗಳೆಲ್ಲವೂ ಇಂತಹ ಬುದ್ಧಿಚಮತ್ಕಾರಗಳೆ! ಒಂದೊಂದು ವ್ಯಕ್ತಿಯ ಅಭಿರುಚಿ, ಒಂದೊಂದು ಬಗೆಯ ಕಲೆಗಳನ್ನು ಸೃಷ್ಟಿಸುವುದು!"
ಈ ಅಭಿಸ್ಸಾಯವು ಸರಿಯಾದುದೇನು?

●

ಬೆಳಗಿನ ಒಂಬತ್ತು ಗಂಟೆಯಾಗಿರಬಹುದು. ಬಿಡುವಿನ ದಿನವಾದ್ದರಿಂದ ಆನಂದ ನಮ್ಮ ಮನೆಗೆ ಬಂದಿದ್ದ. ಉಪಾಹಾರದ ಔಪಚಾರಿಕತ್ಯ ಮುಗಿದೊಡನೆಯೆ, ಹಾಗೆಯೆ ಏನೇನೋ ಮಾತನಾಡಲು ತೊಡಗಿದೆವು. ದೂರದಲ್ಲಿ ಎದುರುಗೋಡೆಗೆ ಇರಿಸಿದ ದಿಂಬನ್ನು ಒರಗಿಕೊಂಡು ನನ್ನ ಚಿಕ್ಕಪ್ಪ, 'ವಾಗ್ಭವ' ಗ್ರಂಥದ ಪುಟಗಳಲ್ಲಿ ಕಣ್ಣುಗಳನ್ನು ತೊಡಕಿಸಿ ಕುಳಿತಿದ್ದರು. ಆನಂದ ನಾನು ಕೂಡಿದೆವೆಂದರೆ ಆಯಿತು: ಯಾವಾಗಲೂ ಸಾಹಿತ್ಯ, ಸಂಗೀತ, ನೃತ್ಯ ಮೊದಲಾದ ಲಲಿತಕಲೆಗಳ ವಿಚಾರವನ್ನೆತ್ತಿ ವಾದ-ಚರ್ಚೆಗಳನ್ನು ಮಾಡುತ್ತಿರುವೆವು. ಅದೇಕೋ, ಇಂದು ಸಂಗೀತಕಲೆಯ ವಿಷಯವನ್ನು ಎತ್ತಿ ನಾನು ಮಾತನಾಡಿದೆ:

"ನಿಜವಾಗಿಯೂ ನೋಡು ಆನಂದ, ಸಂಗೀತಕಲೆಯು ಇನ್ನೊಂದು ಬೆಳೆವಣಿಗೆ ಹೊಂದಿ, ಇಂತಹ ಸುಂದರ ಕುಸುರುಗಳನ್ನು ಪಡೆಯಬೇಕಾದರೆ, ಎಷ್ಟು ಕಾಲ ಕ್ರಮಿಸಿದೆಯೋ ಎನೋ! ಇದರ ಇಂದಿನ ಸ್ವರೂಪವನ್ನು ಕುರಿತು ವಿಚಾರಮಾಡುತ್ತ ಹೋದಂತೆಲ್ಲ, ಮನಸ್ಸು ಆಶ್ಚರ್ಯದಲ್ಲಿ ಮುಳುಗಿಹೋಗುವುದು."

ಆನಂದ ಹೇಳಲು ತೊಡಗಿದ:

"ಮಾನವನ ಆನಂದದ ಆಶೆಯ ಕಾರ್ಯವೇ ಹೀಗಿದೆ. ಆನಂದಸಾಧನೆಯ ಆಶೆಗಾಗಿಯೆ ಅದು ಅವನನ್ನು ಕುಣಿಯಲು ಹಚ್ಚಿತು; ಹಾಡಲು ಹಚ್ಚಿತು; ಹಾಡನ್ನು ಸವಿಗೊಳಿಸಬೇಕೆಂದು ಬೊಕೆಯ ವಾದ್ಯಗಳನ್ನು ಹುಟುಕಲು ಹಚ್ಚಿತು. ಅದಕ್ಕೊಂದು ಶಾಶ್ವತವಾದ ಸೌಂದರ್ಯಶಾಸ್ತ್ರವನ್ನು ನಿರ್ಮಿಸಿ ಬರೆಯಲು ಹಚ್ಚಿತು. ಎಲ್ಲ ಲಲಿತಕಲೆಗಳಲ್ಲಿಯೂ ಸಂಗೀತಕಲೆಯೆಂಬುದು ಸರ್ವಜನಪ್ರಿಯವಾದುದು. ಸರ್ವಜನಾನಂದಕಾರಿಯಾದುದು."

ಆನಂದನ ಮಾತಿಗೆ ತಲೆದೂಗಿ ನಾನು ಕೇಳಿದೆ:

"ಆಯಿತಪ್ಪಾ, ನಮ್ಮ ಸಾಹಿತ್ಯಕಲೆಯ ವಿಷಯದಲ್ಲಿ, 'ಸಾಹಿತ್ಯ ಕೇವಲ ಸೌಂದರ್ಯಸಿದ್ಧಿಗಾಗಿ' ಎಂದೂ 'ಸಾಹಿತ್ಯ ಜೀವನದ ಪ್ರಯೋಜನಕ್ಕಾಗಿ' ಎಂದೂ ತೀಕ್ಷ್ಣವಾದ ವಾದವು ಎದ್ದು ಬಿಟ್ಟಿದೆ. ಈ ಪ್ರಯೋಜನವಾದಿಗಳು ಸಂಗೀತಕಲೆಯ ವಿಚಾರದಲ್ಲಿ ಏನು ಹೇಳುವರು? ಸಂಗೀತಕಲೆಯು ಕೇವಲ ಆನಂದಸಿದ್ಧಿಗಾಗಿಯೇ ಅಲ್ಲವೇನು? ಮಾತಿನ ಕೊನೆಯೊಂದಿಗೆ ನಾನು, ಎದುರುಗಡೆ ನನ್ನ ಸಹಜದೃಷ್ಟಿಗಳನ್ನು ಚೆಲ್ಲಿದಾಗ, ಚಿಕ್ಕಪ್ಪ ಓದುವುದನ್ನು ಬಿಟ್ಟು ನಮ್ಮ ಮಾತಿನ ಕಡೆಗೆ ಲಕ್ಷ್ಯಗೊಟ್ಟು ಕುಳಿತಿರುವುದನ್ನು ನೋಡಿದೆ. ಆನಂದ ಹೇಳಲು ತೊಡಗಿದ:

"ಸಂಗೀತವೊಂದೇ ಏಕೆ? ಎಲ್ಲ ಕಲೆಗಳೂ ಆನಂದಸಿದ್ಧಿಗಾಗಿಯೆಂದೇ ಬೆಳೆದುಬಂದಿವೆ. ಜೀವನಪ್ರಯೋಜನವಾದಿಗಳಿಗೆ, ಈ ಲೋಕದ ವ್ಯವಹಾರಜೀವನದ ಹೊರತು ಇನ್ನೊಂದು ಗೊತ್ತೇ ಇಲ್ಲ. ಎಲ್ಲ ಮಾತನ್ನೂ ಅವರು ಹೊಟ್ಟೆ-ಬಟ್ಟೆಗೇ ಒಯ್ದು ಹೆಚ್ಚುತ್ತಾರೆ. ಕೂಪದಲ್ಲಿಯ ಕಪ್ಪೆಗಳಂತೆ ಅವರದು ಸಂಕುಚಿತ ದೃಷ್ಟಿಯ ವಿಚಾರ!"

ಚಿಕ್ಕಪ್ಪ ಮೆಲುನಗೆಯ ಮೊಗದಿಂದ ಎದ್ದು ನಮ್ಮ ಬಳಿಗೆ ಬಂದರು. ನಿಂತುಕೊಂಡೇ ಮಾತನಾಡಲು ತೊಡಗಿದರು:

"ನಾನು ಎನ್ನುವುದೆಂದರೆ.....ಜೀವನಪ್ರಯೋಜನವಾದಿಗಳ ವಾದ....ಅಸತ್ಯವೇನೂ ಅಲ್ಲ—ಎಂದು."

ಆನಂದ ಸ್ವಲ್ಪ ಬಿಸಿಯಾದ ಧ್ವನಿಯಲ್ಲಿ ನುಡಿದ:

"ಏನು? ಅಸತ್ಯವಲ್ಲವೆ? ನಿಮ್ಮಂತಹ ಹಿರಿಯರೂ ಹೀಗೆ ಹೇಳುವುದೆಂದರೆ, ಆಶ್ಚರ್ಯಕ್ಕಿಂತ ಹೆಚ್ಚಾಗಿ ಅಸಮಾಧಾನವೆನಿಸುತ್ತದೆ ನನಗೆ."

ಸಹಜಸ್ವರದಲ್ಲಿ ಚಿಕ್ಕಪ್ಪ ಹೇಳಿದರು:

* ಈ ಕತೆಯು ಹಿಂದಿಯಲ್ಲಿ ಅನುವಾದಿತವಾಗಿ, ತಾ. ೨೯-೧೦-೫೨ರಂದು ಅಖಿಲಭಾರತ ಆಕಾಶವಾಣಿಯ ದಿಲ್ಲಿಯ ಕೇಂದ್ರದ ಮೂಲಕ ಪ್ರಸಾರಗೊಂಡಿತು. ಸಂ. ಪ್ರ. ಧಾ.

"ಅನವಧಾನನೆನಿಸುವ ಕಾರಣವೇನೂ ಇಲ್ಲ. ನನ್ನಷ್ಟು ಹಿರಿಯ ವಯಸ್ಸಿನವರಾದಾಗ, ಅನುಭವದಿಂದ ನೀವೂ ನನ್ನ ಅಭಿಪ್ರಾಯಕ್ಕೆ ಬಂದುನಿಲ್ಲಬಹುದು. ಕಲೆಗಳು ಬೆಳೆದು ಪ್ರತ್ಯಕ್ಷ ಜೀವನದ ಪ್ರಯೋಜನಕ್ಕಾಗಿ ಅಲ್ಲದೆ, ಕಲ್ಪಿತವಾದ ಆನಂದದ ಸಿದ್ಧಿಗಾಗಿ ಅಲ್ಲ!"

ಬಳಿಯಲ್ಲಿದ್ದ ಕುರ್ಚಿಯ ಮೇಲೆ ಕುಳಿತುಕೊಂಡು, ಚಿಕ್ಕಪ್ಪ ಮಾತನ್ನು ಮುಂದುವರಿಸಿದರು:

"ನೋಡು ಆನಂದಾ ಭಾವನಾವಶನಾಗಿ ಮುಖವನ್ನು ಕೆಂಪಗೆ ಮಾಡಬೇಡ. ಹೊಟ್ಟೆಗೆ ಹಿಟ್ಟು, ಮೈಗೆ ಬಟ್ಟೆಗಳನ್ನು ದೊರೆಕಿಸುವುದಕ್ಕಾಗಿಯೇ ಮಾನವನ ಬುದ್ಧಿ ಹಲವು ಬಗೆಯ ಚಮತ್ಕಾರಗಳನ್ನು ಕಂಡುಹಿಡಿದಿದೆ. ಕಲೆಗಳೆಂದರೂ ಇಂತಹ ಬುದ್ಧಿಯ ಚಮತ್ಕಾರಗಳೇ! ಅಪಕ್ವಪದಾರ್ಥಗಳನ್ನು ತಿಂದು ಜೀವಿಸುತ್ತಿದ್ದ ಮಾನವ, ವಿವಿಧ ಪಕ್ವಾನ್ನಗಳನ್ನು ನಿರ್ಮಿಸಿಕೊಂಡುದು ಆತನ ಒಂದು ಬುದ್ಧಿಯ ಚಮತ್ಕಾರ. ಪ್ರಕೃತಿಯ ವಿಕೃತಿಗೆ ಔಷಧಿಗಳನ್ನು ಕಂಡುಹಿಡಿದುದೂ ಅವನ ಬುದ್ಧಿಯ ಚಮತ್ಕಾರ. ಹಾಗೆಯೇ ಮಾನವನ ಕಣ್ಣು, ಕಿವಿ, ಮನಸ್ಸುಗಳ ಬಯಕೆಗಾಗಿ ಕಲೆಗಳನ್ನು ನಿರ್ಮಿಸಿದುದೂ ಅವನ ಬುದ್ಧಿಯ ಕೈವಾಡ. ಇದರಲ್ಲಿ ನಿನ್ನ ಆದರ್ಶ—ಆನಂದಸಿದ್ಧಿಯ ಮಾತೇ ಇರುವುದಿಲ್ಲ!"

ಕೇಗಿದ ಧ್ವನಿಯಲ್ಲಿ ಆನಂದ ನುಡಿದ:

"ಆನಂದಸಿದ್ಧಿಯ ಮಾತೇ ಇಲ್ಲದಿದ್ದರೆ, ಕಲೆಗಳು ಇಷ್ಟರ ವರೆಗೆ ಬೆಳೆದು ಬದುಕುತ್ತಲೇ ಇರಲಿಲ್ಲ. ಎಂದೋ ಹುಡಿಗೂಡಿ ಹೋಗುತ್ತಿದ್ದುವು.!

"ನಿನ್ನಂತೆಯೇ ನಾನೂ ಹೇಳುತ್ತೇನೆ: ಜೀವನಪ್ರಯೋಜನ ಇರದೇ ಹೋಗಿದ್ದರೆ, ಕಲೆಗಳು ಇದುವರೆಗೆ ಬೆಳೆದುಬಾಳುತ್ತಲೆ ಇರಲಿಲ್ಲ. ಎಂದೋ ಕಣ್ಮರೆಯಾಗಿ ಹೋಗಿ ಬಿಡುತ್ತಿದ್ದುವು!"

ನಾನು ವಿನಯದ ಸ್ವರದಲ್ಲಿಯೇ ಕೇಳಿದೆ:

"ಕಲೆಗಳಲ್ಲ ಜೀವನದ ಪ್ರಯೋಜನ ಏನಿರುವುದು ಚಿಕ್ಕಪ್ಪ! ಆನಂದಸಿದ್ಧಿಗಾಗಿಯೇ ಕಲೆಗಳಲ್ಲವೇ?"

"ಇಲ್ಲಿಯೇ ನೋಡು, ನೀವು ತಪ್ಪುವುದು! ಲೋಕದ ಪ್ರತಿಯೊಂದು ಚೇಷ್ಟೆಯೂ ಹೊಟ್ಟೆ-ಬಟ್ಟೆಗಳ ಅನುಕೂಲತೆಗಳನ್ನು ಹುಡುಕುವುದಕ್ಕಾಗಿಯೇ ಇರುವುದು. ಡೊಂಬರವನು ಗಣೇಯೇರಿ ಲಾಗ ಹೊಡೆಯದೇ ಹೋದರೆ, ಉಳ್ಳವರ ಜೇಬಿನ ದುಡ್ಡು ಆತನ ಜೇಬಿಗೆ ಹೇಗೆ ಹೋದೀತು ಹೇಳು! ಹಣವಿಲ್ಲದಿರುವವರಿಗೆ ಹೊಟ್ಟೆ-ಬಟ್ಟೆಗಾಗಿ ಹಣವು ಬೇಕು: ಲಾಗ ಹೊಡೆಯುವ ಡೊಂಬನಿಗೆ ದೇಹ ಶ್ರಮವಲ್ಲದೆ ಯಾವ ಆನಂದವೂ ಇರಮ. ಹೆಚ್ಚಾಗಿ ಹಣವು ದೊರೆತರೆ ಮಾತ್ರ ಆತನ ಹೊಟ್ಟೆಯ ಚಿಂತೆ ತಪ್ಪಿ, ಅವನಿಗೆ ಆನಂದವಾದೀತು"

ಆನಂದ ಕೆಳಿದ:

"ಕಲೆಗಳಿಗೆ ನೀವು ಡೊಂಬರ ಲಾಗವನ್ನು ಹೋಲಿಸುತ್ತೀರಾ?"

"ಇದರಲ್ಲಿ ತಪ್ಪೇನು? ಮಾನವನ ಬುದ್ಧಿಯು ಲಾಗಗಳೇ ಕಲೆಗಳೆನಿಸಿಕೊಳ್ಳುವುವು. ಒಂದೊಂದು ಬಗೆಯ ಲಾಗ ಒಬ್ಬೊಬ್ಬರ ಅಭಿರುಚಿಗೆ ಬೇಕೆನಿಸುವುದು. ಬೇಕೆನಿಸಿದವರೆಲ್ಲ ಆ ಲಾಗ ಹೊಡೆಯುವವರಿಗೆ ಪ್ರತಿಫಲವಾಗಿ ಏನನ್ನಾದರೂ ಕೊಟ್ಟೇ ಕೊಡುವರು."

ಒಮ್ಮೆಲೆ ಬೀದಿಯಲ್ಲಿ ಹಾರ್ಮೋನಿಯಮ್ ಬಾರಿಸುವ ಇಂಪಾದ ಧ್ವನಿ ಕೇಳಿಸಿತು. ಆ ಧ್ವನಿಯೊಂದಿಗೆ ಕೋಮಲಕಂಠವನ್ನು ಬೆರಸಿ ಹಾಡುವ ಹಾಡೂ ಕೇಳಿಸಲು ತೊಡಗಿತು. ಸಂಗೀತವೆಂದರೆ ನಮ್ಮ ಚಿಕ್ಕಪ್ಪನಿಗೆ ಪ್ರಾಣ. ಎಂತಹ ಸಂಗೀತವೇ ಇರಲಿ; ಕೇಳಲಿಕ್ಕೆ ಅವರ ಕಿವಿಗಳು ತವಕಿಸುವುವು. ಈಗ ಕೇಳಿಸಿದ ಸಂಗೀತ ಅವರ ಮನಸ್ಸನ್ನು ಸಂಪೂರ್ಣವಾಗಿ ಸೆಳದಿರಬೇಕು. ಎಂತಲೇ ಮಾತನ್ನು ಅಷ್ಟಕ್ಕೆ ನಿಲ್ಲಿಸಿ, ಚಿಟ್ಟನೆ ಎದ್ದು ಹೊರಗೈ ಹೊರಟರು. ಆನಂದನಿಗೆ ಸಂಗೀತವೆಂದರಾಯಿತು; ಉಟ-ನಿದ್ದೆಯ ಪರಿವೆ ಇಲ್ಲದೆ ಕೇಳುವನು. ಆದುದರಿಂದ ಅವನೂ ಕುತೂಹಲಭಾವದಿಂದ ಎದ್ದು ಹೊರಗೆ ಹೊರಟನು. ನಾನು ಅವನ ಹಿಂದಿನಿಂದಲೇ ಹೊರಟೆ.

ನಾನೆಲ್ಲ ಹೆಬ್ಬಾಗಿಲ ಮುಂಗಟ್ಟಿಗೆ ಹೋಗಿ ನಿಲ್ಲುವುದರಲ್ಲಿಯೇ, ಆ ಬೀದಿಯ ಹಾಡುಗಾರರು ನಮ್ಮ ಮನೆಯ ಬಾಗಿಲಿಗೇ ಬಂದರು. ಕೊರಳಿಗೆ ಹಾರ್ಮೋನಿಯಮ್ ಹಾಕಿಕೊಂಡು ಬಾರಿಸುತ್ತಲಿದ್ದ ಗಂಡುಸಿನ ವಯಸ್ಸು ಐವತ್ತರ ಸಮೀಪಕ್ಕೆ ಬಂದಿರಬಹುದು. ಉಟ್ಟ ಧೋತರ ಹಲವಾರು ತೇಪೆಗಳಿಂದ ಕೂಡಿದ್ದಿತು. ತೊಟ್ಟ ಅಂಗಿಯ ಹರಕುಗಳಲ್ಲಿ, ಆತನ ಕಪ್ಪು ಮೈ ಅಲ್ಲಲ್ಲಿ ಕಾಣುತ್ತಿದ್ದಿತು. ಎಣ್ಣೆ ಗಾಣದೆ ಪೊದೆಯಾಗಿ ಬೆಳೆದ ಕೂದಲುಳ್ಳ ತಲೆಯ ಮೇಲೆ, ಒಂದು ಹಳೆಯ ಟೋಪಿ ಇದ್ದಿತು. ಬಡತನದ ದೇಹ. ಬಡತನದ ಲಕ್ಷಣಗಳು ಅಂಗಾಂಗದಲ್ಲಿಯೂ ಮೂಡಿ ನಿಂತಿದ್ದುವು. ಕೈಬೆರಳುಗಳು ಮಾತ್ರ ಮಿಂಚಿನಗತಿಯಲ್ಲಿ ಹಾರ್ಮೋನಿಯಮ್ಮಿನ ಸ್ವರಸ್ಥಾನಗಳ ಮೇಲೆ ಓಡಾಡುತ್ತಿದ್ದುವು.

ಆತನ ಹಿಂದೆ ಐದಾರಡಿ ದೂರದಲ್ಲಿ ಒಬ್ಬ ಹುಡುಗಿ ನಿಂತಿದ್ದಳು. ವಯಸ್ಸು ಹದಿಮೂರು ಹದಿನಾಲ್ಕು ಇರಬಹುದು. ಹರಕುಸೀರೆ;

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ
ಪ್ರಚಾರವಾಗಬೇಕಾಗಿದ್ದರೆ

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್ ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸೇವೆಯ
ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಜೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ

ಮೂಸಿದ ಕುಪ್ಪುಸ. ಕೊರಳಲ್ಲಿ ಎಂತಹವೋ ಕಾಜಿನಮಣಿಗಳ ಸರ ಸ್ಪೊಂದು. ಮುಖದಲ್ಲಿ ದೈನ್ಯಭಾವ ತುಂಬಿ ತುಳುಕುತ್ತದೆ. ತಾವಾಗಿಯೆ ಸುರಿಯುತ್ತಿದ್ದ ಕಂಬನಿಗಳನ್ನು ಹುಡುಗಿ ಆಗ ಸೆರಗಿನಿಂದ ಒರಸಿ ಕೊಳ್ಳುತ್ತಿದ್ದುದನ್ನು ನಾನು ನೋಡಿದೆ. ನಮ್ಮ ಸಂಗೀತದ ಆತುರ ವನ್ನು ಆ ಹಾಡುಗಾರ ಅರಿತುಕೊಂಡನೇನೋ! ಖಮಾಜ ರಾಗದಲ್ಲಿ ಮೀರಾಬಾಯಿಯ ಭಜನದ ಪಲ್ಲವಿಯೊಂದನ್ನು ನುಡಿಸಲು ತೊಡಗಿದ. ಎರಡು ಮೂರು ಸಲ ನುಡಿಸಿದರೂ ಹಿಂದೆ ನಿಂತ ಹುಡುಗಿ ಹಾಡು ಪೇಳುವುದಕ್ಕೆ ಮುಂದೆ ಬರಲಿಲ್ಲ. ಆಗ ಆ ಹಿರಿಯ, ಕೋಪದ ನೋಟಗಳಿಂದ ಹುಡುಗಿಯ ಕಡೆಗೆ ನೋಡಿದ. ಹುಡುಗಿ ಮತ್ತೊಂದು ಸಲ ಕಣ್ಣೀರನ್ನು ಒರಸಿಕೊಂಡಳು. ಜಡವಾದ ಹೆಜ್ಜೆಗಳನ್ನು ಎತ್ತಿ ಇಡುತ್ತ ಮುಂದೆ ಬಂದಳು. ಹಾರ್ಮೋನಿಯಂನ ಸ್ವರಗಳನ್ನು ಮರೆಯಿಸಿಬಿಡುವಂತಹ ಮಂಜುಲಕಂಠದಿಂದ ಹಾಡಲು ತೊಡಗಿದಳು. ಎಂತಹ ಸವಿಯಾದ ಸಂಗೀತವದು! ಸಂಗೀತದ ಅಭಿರುಚಿಯಿಲ್ಲದವರನ್ನೂ ತಡೆದು ನಿಲ್ಲಿಸಿ ಕೇಳಲು ಹಚ್ಚುವಂತಹ ಗಂಧರ್ವಗೀತ. ಕಾಡಿನ ಮಲ್ಲಿಗೆಯಂತೆ ಸಹಜ ಸೌಂದರ್ಯದಿಂದ ಕೂಡಿದ ಸವಿಹಾಡು. ಚಿಕ್ಕಪ್ಪ ಮುಗ್ಧರಾಗಿ ಕೇಳುತ್ತಿದ್ದರು. ಆನಂದನ ಮೈ ಜುಮ್ಮೆ-ದಟ್ಟುತ್ತಿರುವುದು ನನಗೆ ಕಾಣುತ್ತಿದ್ದಿತು. ಹುಡುಗಿ ಕುರೂಪಿಯೇನೂ ಅಲ್ಲ. ಸಿರಿವಂತಿಕೆಯ ಉಡಿಗೆ-ತೊಡಿಗೆಗಳಿದ್ದರೆ, ಅವಳು ಸುಂದರಿಯೇ ಎನಿಸಿಕೊಳ್ಳಬಹುದಾಗಿತ್ತು. ಹಾಡುವಾಗಲೂ ಕಂಬನಿ ಕೆನ್ನೆಗಳ ಮೇಲೆ ಇಳಿಯುತ್ತಿದ್ದವು. ನಡುನಡುವೆ ಹಾರ್ಮೋನಿಯಂ ಬಾರಿಸಲು ಎಡೆಕೊಟ್ಟಂತೆ ಮಾಡಿ ಕಣ್ಣನ್ನು ಒರಸಿಕೊಳ್ಳುವಳು. 'ಮೀರಾಕೇ ಪ್ರಭು ಗಿರಿಧರ ನಾಗರ'ದ ಅಂಕಿತದೊಂದಿಗೆ ಹಾಡು ಮುಗಿಯಿತು. ಹುಡುಗಿ ಹಿಂದೆ ಸರಿದು ಸೋತವಳಂತೆ ಕುಳಿತುಬಿಟ್ಟಳು

ಹಾಡುಗಾರ ಹಾರ್ಮೋನಿಯಂ ಬಾರಿಸುತ್ತ, ತಾನೇ ಹಾಡಲು ತೊಡಗಿದನು. ಗಡುಸಾದ ಸ್ವರ. ಹುಡುಗಿಯ ಸಂಗೀತ ಕೇಳಿದ ನನ್ನ ಕಿವಿಗೆ ಅದು ರಸಹೀನವೆನಿಸಲು ತೊಡಗಿತು. ಆದರೂ ಚಿಕ್ಕಪ್ಪ, ಆನಂದ, ತನ್ಮಯರಾಗಿಯೆ ಕೇಳುತ್ತಿದ್ದರು. ನಾನು ಹುಡುಗಿಯ ಕಡೆಗೆ ನನ್ನ ಮೆಚ್ಚುಗೆಯ ನೋಟವನ್ನು ಹೊರಳಿಸಿದೆ. ಹುಡುಗಿ ಬಿಕ್ಕಿ ಬಿಕ್ಕಿ ಅಳುತ್ತಿರುವುದನ್ನು ಕಂಡು ಕಾತರಗೊಂಡೆ

ಹಿರಿಯ ಹಾಡುಗಾರನ ಹಾಡು ಮುಗಿಯಿತು. ಚಿಕ್ಕಪ್ಪನಿಗೆ ಹುಡುಗಿಯ ಬಾಯಿಂದ ಮತ್ತೊಂದು ಹಾಡನ್ನು ಹಾಡಿಸಬೇಕೆಂದು ಆಶೆಯುಂಟಾಗಿರಬಹುದು. ಹಾಡು ಮುಗಿದೊಡನೆಯೇ ನಾನು, ಆ ಹಿರಿಯ ಹಾಡುಗಾರನನ್ನು ಕೇಳಿದೆ:

"ಈ ಹುಡುಗಿ ನಿನ್ನ ಮಗಳೇನು?"

"ಹೌದು ರಾವ್‌ಸಾಹೇಬ್!"

"ಆಗಿನಿಂದಲೂ ನಾನು ನೋಡುತ್ತಿದ್ದೇನೆ. ಈಕೆ ಅಳುತ್ತಿದ್ದಾಳೇಕೆ?"

"ಏನು ಮಾಡೂದು ನನ್ನ ತಂದೇ! ನಮ್ಮ ಬತವರ ಬಾಳೆಲ್ಲಾ ಅಳತಾ ಅಳತಾನೇ ನಡೆದಿರೂದು!"

ಚಿಕ್ಕಪ್ಪ ಕುತೂಹಲದಿಂದ ಕೇಳಿದರು:

"ಯಾಕೆ? ಈಗ ಅಳುವಂತಹ ಸಂದರ್ಭ ಏನು ಬಂದಿದೆ ಈಕೆಗೆ? ಇದೇ ಈಗ ಎಷ್ಟೊಂದು ಸವಿಯಾಗಿ ಹಾಡಿದಳು! ಏನಮ್ಮಾ? ಏನಾಗಿದೆ ನಿನಗೆ? ನೀರೇಕೆ ಕಣ್ಣಲ್ಲಿ?"

ಹುಡುಗಿಯ ಮುಖ ಕೆಂಪಗಾಯಿತು. ಕಂಬನಿಗಳೂ ಧಾರೆ-ಗಟ್ಟಿದವು. ಅಳುವು ಹೊರಗೆ ಬಂದುಬಿಟ್ಟಿತು. ನಾವು ಮೂವರೂ ಕುತೂಹಲಿಗಳಾದೆವು. ಚಿಕ್ಕಪ್ಪ ಹಾಡುಗಾರನನ್ನು ಕೇಳಿದರು:

"ಯಾಕೆ? ಏನಾಗಿದೆಯಿವಳಿಗೆ? ನೀನು ಸಿಟ್ಟು-ಗಿಟ್ಟು ಮಾಡಿದೆಯೇನು?"

"ನಾ ಏನು ಸಿಟ್ಟು ಮಾಡೂದೈತಿ ತಂದೆ! ನಮ್ಮ ಮ್ಯಾಲೆ ದೈವಾನೇ ಸಿಟ್ಟುಮಾಡಿ ಬಿಟ್ಟೈತಿ. ಇವರ ತಾಯಿಗೆ ಜ್ವರಬಂದು ಹದಿನೈದು ದಿವಸ ಆಯ್ತುರಿ. ಮೈಮ್ಯಾಗ ಎಚ್ಚರಿಲ್ಲಾ ಏನಿಲ್ಲಾ! ಈಗ ನಾಕುದಿನದಿಂದ ಅಂತೂ ತೀರ ನಿತ್ರಾಣ ಬಂದುಬಿಟ್ಟೈತಿ. ಕೈಕಾಲು ಸಹಿತ ಎಳಕೊಳ್ಳದೇ ಬಿದ್ದಾಳ!"

ಕರುಣಾಧ್ವನಿಯಲ್ಲಿ ಚಿಕ್ಕಪ್ಪ ಕೇಳಿದರು:

"ಎಲ್ಲಿ ಇದ್ದಾಳೆ ಆಕೆ? ಔಷಧವನ್ನು ಏನು ಕೊಡಿಸುತ್ತಿದ್ದೀರಿ?"

"ಎಲ್ಲೀ ಔಸದ ಸಿಗಬೇಕು ತಂದೇ....ನಮ್ಮಂತವರಿಗೆ! ಹೊಟ್ಟೇ ತುಂಬಿಕೊಳ್ಳಕ್ಕಂತ ಈ ಊರಿಗೆ ಬಂದೀವಿ; ಊರಹೊರಗೆ ಒಂದು ಹಾಳುಗುಡಿಯ ಪೌಳಿಯೊಳಗ ಇಳಕೊಂಡೀವಿ. ಅಲ್ಲೇ ಮಲ-ಕೊಂಡಾಳ ಆಕಿ. ಈಗ ಮೂರುದಿನ, ಆಕೀ ಹತ್ತರನಽ ಆರಯ್ಸೋ ಮಾತನ್ನ ಕೂತೀನರಿ. ಅವರ ಮುನ್ಸ್ಯಾಗs ಅಲ್ಲಿ ಕೂತುಕೊಂಡರ, ಮಿಕ್ಕವರ ಹೊಟ್ಟೆಯೊಂದು ಕೇಳಬೇಕಲ್ರಿ! ನಾಕೈದು ಹುಡುಗರು ಹಸಿವಿಯಿಂದ ವಿಲಿವಿಲಿ ಒದ್ದಾಡತ ಬಿದ್ದಾವರಿ! ಮೂರು ದಿನಾ ಆಯ್ತು, ಹೊಟ್ಟತುಂಬ ಕೂಳು ಯಾರಿಗೂ ಇಲ್ಲ. ಇವೊತ್ತು ತೀರ ಬರಗೈಯಾತು. ಜ್ವರದಾಕಿಗೆ ಹಾಕಲಿಕ್ಕೆ ಚಹಾಕ್ಕ ಕೂಡ ಗತಿ ಇಲ್ಲದ್ದಾಂಗಾತು. ಅಂತನ ನಿರ್ವಾ ಇಲ್ಲವನ ಎದ್ದು, ಈಗ ತೀರಕೊಳ್ಳಲಿಕ್ಕೆ ಬಂದೀವಿ. ಈಕೇ ಹಿರಿಯ ಹೆಣ್ಣುಮಗಳು. ತಾಯಿಯ ಆರಯ್ಸೋ ಎಲ್ಲಾ ಈಕೆನೇ ಮಾಡತಾಳ್ರಿ! ತಾಯಿ ಬದುಕುವ ಆಶೆ ಇಲ್ಲಂಬೂದು ಈಕೇಗೆ ಗೊತ್ತಾಗಿ ಹೋಗೆಯ್ತರಿ. ಅಂತಲೇ ಹೊರಗ ಹೊಂಟಾಗಿನಿಂದಲೂ ಹಾಂಗss ಕಣ್ಣೀರು ಸುರಿಸತಾನೇ ಹೊಂಟಾಳ! ಅಂಥಾದರೊಳಗss, ಸ್ವರಾ ತಗದು ಹಾಡತಾಳ. ಇಲ್ಲದಿದ್ದರ, ಹಸಿವಿಗೆ ಏನು ಗತಿ ತಂದೇ!" ಮಾತಿನ ಕೊನೆಯೊಂದಿಗೆ ಅತ ನಿಟ್ಟುಸಿರಿಟ್ಟ. ಹುಡುಗಿ ಬಿಕ್ಕಿ ಬಿಕ್ಕಿ ಅಳಲು ಮೊದಲುಮಾಡಿದಳು. ಹಾಡಿದರೆ ಪ್ರಪಂಚದ ದುಃಖವನ್ನೇ ಮರೆಯಿಸಿಬಿಡಬಲ್ಲ ಆ ಎಳೆಯ ಸಂಗೀತ ಗಾತಿ, ತಾನೇ ಈಗ ದುಃಖದ ಪ್ರತಿಮೆಯಾಗಿದ್ದಳು.

ಚಿಕ್ಕಪ್ಪ ಅರ್ಥಪೂರ್ಣವಾದ ದೃಷ್ಟಿಯಿಂದ ನನ್ನ ಕಡೆಗೂ ಆನಂದನ ಕಡೆಗೂ ನೋಡಿದರು. ಮಾತನೇನೂ ಆಡದೆ, ಒಳಗೆ ಹೋದರು. ಹಾಡುಗಾರನ ಕೈ ಹಾರ್ಮೋನಿಯಮಿನ ಮೇಲೆ ಆಡಿಯೇ ಆಡುತ್ತಿದ್ದಿತು. ಎರಡು ಮೂರು ನಿಮಿಷಗಳಲ್ಲಿಯೇ ಚಿಕ್ಕಪ್ಪ ಚಿಕ್ಕಮ್ಮನೊಂದಿಗೆ ಹೊರಗೆ ಬಂದರು. ಚಿಕ್ಕಮ್ಮನ ಕೈಯಲ್ಲಿರುವ ಸೊರದಲ್ಲಿ ಸುಮಾರು ಒಂದೂಕಾಲು ಸೇರಿನಷ್ಟು

ಅಕ್ಕಿಯಿದ್ದಿತು. ಹಾಡುಗಾರ ಆಶ್ಚರ್ಯದಿಂದ ಅದನ್ನು ನೋಡಿದ. ಮುಖದ ಮೇಲೆ ಸಂದೇಹದ ರೇಖೆಯೂ ಮೂಡಿನಿಂತಿತು. ಚಿಕ್ಕಪ್ಪ ಹೇಳಿದರು:

"ಆ ಅಕ್ಕಿಯನ್ನು ತೆಗೆದುಕೊಳ್ಳಿ. ಇದೋ, ಈ ಎರಡು ರೂಪಾಯಿ ಹಿಡಿ! ಇಂದು ನೀವು ಭಿಕ್ಷೆಬೇಡುವುದನ್ನು ಇಷ್ಟಕ್ಕೆ ನಿಲ್ಲಿಸಿ, ನಿಮ್ಮ ಬೀಡಾರಕ್ಕೆ ನಡೆದುಬಿಡಿರಿ. ನೊದಲು ಊಟದ ವ್ಯವಸ್ಥೆ ಮಾಡಿಕೊಳ್ಳಿರಿ! ಆ ಜ್ವರ ಬಂದ ಹೆಣ್ಣುಮಗಳನ್ನು ಸರಕಾರೀ ದವಾಖಾನೆಗೆ ಕಳುಹುವುದು ಸಾಧ್ಯವಿದೆಯೇ ನೋಡಿರಿ!"

ಈಗ ಆ ಹಾಡುಗಾರನ ಕಣ್ಣಿಂದಲೂ ಹನಿಗಳು ಇಳಿದುವು. ಕಂಠವು ಬಿಗಿದು ಬಂದಿತು. ಹಾಗೆಯೆ ಕಂಪಿಸುವ ಕಂಠದಲ್ಲಿ ಹೇಳಲು ತೊಡಗಿದ:

"ನಮ್ಮಂಥಾ ಬಡವರಿಗೆ ಯಾವ ದವಾಖಾನ್ಯಾಗೆ ಜಾಗಾ ಸಿಗತೈತಿರಿ! ಇರೂತನಕಾ ಈ ಲೋಕವ ನರಕದಾಗಿರಬೇಕು; ಸತ್ತ ಮ್ಯಾಗ ಆ ಲೋಕದ ನರಕದಾಗ ಇರಬೇಕು!"

ಮಾತಿನ ಕೊನೆಯೊಂದಿಗೆ ಅಕ್ಕಿಯನ್ನು ಹಾಕಿಸಿಕೊಂಡು, ರೂಪಾಯಿಗಳನ್ನೂ ತೆಗೆದುಕೊಂಡ. ಕೃತಜ್ಞತೆಯ ದೃಷ್ಟಿಗಳಿಂದ ನಮ್ಮೆಲ್ಲರನ್ನೂ ನೋಡಿದ ಆನಂದ ಮುಖವನ್ನು ಬಾಡಿಸಿಕೊಂಡು, ನಿರುಪಾಯಭಾವದಿಂದ ಮೌನಿಯಾಗಿ ನಿಂತುಬಿಟ್ಟಿದ್ದ. ಆ ಹಾಡುಕಾರನ ಕರುಳು-ಕರಗಿಸುವಂತಹ ಬಾಳಿನ ಕತೆಯನ್ನು ಕೇಳಿ, ನಾನೂ ಕಂಗೆಟ್ಟವನಂತಾಗಿದ್ದೆ. ಹಾರ್ಮೋನಿಯಮನ್ನು ಮೌನಿಯಾಗಿಸಿ, ಹಾಡುಗಾರ ನಮ್ಮೆಲ್ಲರನ್ನೂ ನಮಸ್ಕರಿಸಿ ಮರಳಿ ಹೊರಟ. ಹುಡುಗಿಯೂ ಎದ್ದು, ನಡೆಯಲಾರದೆ ಮುಂದೆ ನಡೆದಳು. ನಮ್ಮೆಲ್ಲರ ದೃಷ್ಟಿ ಅವರ ಕಡೆಗೇ ಇದ್ದಿತು.

ಅವರು ಹತ್ತೆಂಟು ಹೆಜ್ಜೆ ಮುಂದೆ ಸಾಗಿರಬಹುದು; ಆಗಲೇ ಚಿಕ್ಕಪ್ಪ ಕೂಗಿದರು:

"ಇಲ್ಲಿ ನೋಡಪ್ಪಾ, ಸ್ವಲ್ಪ ತಡೆ!"

ಇಬ್ಬರೂ ತಿರುಗಿ ನೋಡಿದರು. ಆಗ ಚಿಕ್ಕಪ್ಪ ಹೇಳಿದರು:

"ನಿನ್ನ ಹೆಂಡತಿಯ ಪ್ರಕೃತಿಯನ್ನು ನಾನು ಸ್ವಲ್ಪ ನೋಡ ಬೇಕೆಂದು ಮಾಡಿದ್ದೇನೆ. ನಾವೂ ಬರುತ್ತೇನೆ. ಸ್ವಲ್ಪ ತಡೆಯಿರಿ!"

ಕೂಡಲೆ ಚಿಕ್ಕಪ್ಪ ಒಳಗೆ ಹೋದರು. ಒಂದೆರಡು ನಿಮಿಷಗಳಲ್ಲಿಯೇ ತಮ್ಮ ಔಷಧಿಯ ಕೈಚೀಲವನ್ನು ಹಿಡಿದುಕೊಂಡು ವೇಗವಾಗಿಯೇ ಹೊರಗೆ ಬಂದರು. ಮತ್ತೊಂದು ಸಲ ನಮ್ಮಿಬ್ಬರತ್ತಲೂ ಧ್ವನಿಪೂರಿತ ದೃಷ್ಟಿಗಳನ್ನು ಬೀರಿ ಹೊರಬೀಸಿದರು ಮುಂದೆ ಬೀದಿಯ ಹಾಡುಕಾರರು—ಹಿಂದೆ ಚಿಕ್ಕಪ್ಪ. ಅವರು ಕಣ್ಮರೆಯಾದೊಡನೆಯೇ, ಆನಂದ ನಾನು ಒಳಗೆ ಹೋದೆವು. ಆಮೇಲೆ ಆನಂದ ಬಳಿಕ ನೀಳಿಯು ಎಲೆಗೇನೂ ಕುಳಿರಲಿಲ್ಲ ಎಂದು ಸಂಜೆಯ ಆರು ಗಂಟೆಗೆ ನಿತ್ಯಸಂಘದಲ್ಲಿ "ಸೌಂದರ್ಯ-ಆನಂದ" ಎಂಬ ವಿಷಯವನ್ನು ಕುರಿತು ಅವನ ಉಪನ್ಯಾಸವಿದ್ದಿತು. ನೆಪಗೂ ಬರಲಿಕ್ಕೆ ಹೇಳಿ ಮನೆಗೆ ತೆರಳಿದ.

* * * *

ಚಿಕ್ಕಪ್ಪ ಮನೆಗೆ ಮರಳಿಬಂದಾಗ, ಮಧ್ಯಾಹ್ನದ ಒಂದು ಗಂಟೆ ಮೀರಿಹೋಗಿದ್ದಿತು. ನಾವೆಲ್ಲ ಊಟಕ್ಕಾಗಿ ಅವರ ದಾರಿಯನ್ನು ಕಾಯುತ್ತಾ ಕುಳಿತಿದ್ದೆವು. ಚಿಕ್ಕಪ್ಪನ ಮುಖ ಬಾಡಿ ಬತ್ತಿಯಾಗಿದ್ದಿತು. ಬಂದವರೇ ಉಸ್ಸೆಂದು ನಿರ್ವಿಣ್ಣರಾಗಿ ಕುಳಿತು ಹೇಳಿದರು:

"ನಾವು ಹೋಗುವುದರಲ್ಲಿಯೆ ಪಾಪ, ಆ ಹೆಣ್ಣುಮಗಳ ಪ್ರಾಣ ಹೋಗಿಬಿಟ್ಟಿದ್ದಿತು. ಹುಡುಗರೆಲ್ಲ ಭೋಯೆಂದು ಅಳುತ್ತ ಕುಳಿತಿದ್ದುವು. ನಾವೆಲ್ಲ ಹೋದುದನ್ನು ಕಂಡು ಇನ್ನಷ್ಟು ಅಳಲು ತೊಡಗಿದುವು. ನಿಳಗಿನಲ್ಲಿ ಇಲ್ಲಿ ಹಾಡಿದ ಹುಡುಗಿ, ತಾಯಿ ದೇಹದ ಮೇಲೆ ಬಿದ್ದು ಮೈಮರೆತಳು. ನೀರುಕುಡಿಸಿ ಉಪಚಾರ ಮಾಡಿದ ಮೇಲೆ ಚೇತರಿಸಿಕೊಂಡಳು. ಆ ಹಾಡುಕಾರನಿಗೊ, ತಾನೇನು ಮಾಡಬೇಕೆಂಬುದೇ ತಿಳಿಯದಂತಾಯಿತು. ಅಕ್ಕಪಕ್ಕದ ಜನ ಬಂದು ನಿಂತು ನಿಂತು, ಸುತ್ತೂಹಲದಿಂದ ನೋಡಿಹೋಗುತ್ತಿದ್ದರೇ ಹೊರತು, ಯಾರೂ ಯಾವ ನೆರವನ್ನು ಕೊಡಲೂ ಮುಂದುವರಿಯಲಿಲ್ಲ. ನಾನೇ ಹತ್ತಿರದಲ್ಲಿಯೇ ಇದ್ದ ನಮ್ಮ ದೇಶಸಾಂಡೆಯವರ ಮನೆಗೆ ಹೋಗಿ, ಇಪ್ಪತ್ತು ರೂಪಾಯಿ ಕೈಗಡ ಪಡೆದುಕೊಂಡು, ಮುಂದಿನ ವ್ಯವಸ್ಥೆ ಮಾಡಿಕೊಳ್ಳಲು ಹೇಳಿ ಕೊಟ್ಟು ಬಂದೆ. ಇಲ್ಲದೆ ಹೋಗಿದ್ದರೆ, ಹೆಣವನ್ನು ಸುಸಣಕ್ಕೆ ಸಾಗಿಸುವ ವೆಚ್ಚಕ್ಕಾಗಿಯೂ, ಹಣ ಕೂಡಿಸಲು ಆ ತಂದೆ-ಮಗಳು ಬೀದಿ ಬೀದಿ ಹಾಡುತ್ತ ಅಲೆಯಬೇಕಾಗುತ್ತಿತ್ತು!"

ಕೇಳಿ ಚಿಕ್ಕಮ್ಮ ಕಂಬನಿಗರೆದರು. 'ಬಡವರ ಬಾಳು ಪಾಪ! ಯಾವ ಗುಣವಿದ್ದರೂ ಉಪಯೋಗವೇನು? ಹಸಿವು ಸಾವುಗಳ ಎದುರು, ಸಂಗೀತ, ಹಾಡು ಇವೆಲ್ಲಾ ಏನುಮಾಡಬಲ್ಲವು?' ಎಂದು ಉಸಿರನ್ನು ಹಾಕಿದರು. ಅಂದು ಮಲಗಿ ನಿದ್ದೆ ಮಾಡುವವರೆಗೂ ಮನದಲ್ಲಿ ಆ ಹಾಡುವ ಹುಡುಗಿಯ ಚಿತ್ರವೇ ಮೂಡಿನಿಂತಿದ್ದಿತು. ನಿದ್ದೆಯಲ್ಲಿರುವಾಗ ಬಿದ್ದಕನಸಿನಲ್ಲಿಯೂ ಅಳೆಯ ಕಂಬನಿಗೂಡಿದ ಮುಖವೇ ಮುಂದೆ ಬಂದು ನಿಲ್ಲುತ್ತಿತ್ತು. ನಾನು ಆರು ಗಂಟೆಗೆ ಆನಂದನ ವ್ಯಾಖ್ಯಾನಕ್ಕೆಂದು ಹೊರಗೆ ಹೋದಾಗ, ಚಿಕ್ಕಪ್ಪನೂ ಎಲ್ಲಿಯೋ ಹೋಗುವರೆಂತೆ. ಬಹಳಮಾಡಿ, ಅಗಲೂ ಅವರು ಆ ಹಾಡುಕಾರರ ಬೀಡಾರಕ್ಕೇ ಹೋಗಿರಬಹುದು.

ಪುಣೆಯಲ್ಲಿ ನಮ್ಮ ಏಜಂಟರು:
ಶ್ರೀ. ಎನ್. ಬಿ. ಮಹಳಕರ
ಶನಿವಾರಪೇಠ, ಪುಣೆ ೨

ಕನ್ನಡದ ಸಣ್ಣ ಕತೆಗಳ

ಬೆಳೆವಣಿಗ ಮತ್ತು ಒಲವು

(ಚಿಕ್ಕ ಪರಿಚಯ*)

ಶ್ರೀ. ಬಿಟಗೇರಿ ಕೃಷ್ಣಶರ್ಮ, ಧಾರವಾಡ

ಸಣ್ಣಕತೆಯು ಲಲಿತ ಸಾಹಿತ್ಯದಲ್ಲಿಯ ಒಂದು ವಿಶಿಷ್ಟ ವರ್ಗದಲ್ಲಿ ಸೇರಿರುವುದೆಂಬ ಪ್ರಜ್ಞೆ, ಕನ್ನಡನಾಡಿನಲ್ಲಿ ಪಾಶ್ಚಾತ್ಯ ಸಾಹಿತ್ಯದ ಅಭ್ಯಾಸದಿಂದಲೇ ತಲೆದೋರಿತು. ಕಥಾಸಾಹಿತ್ಯ ಕನ್ನಡನಾಡಿನಲ್ಲಿ ನೊದಲಿನಿಂದಲೂ ಇದ್ದಿಲ್ಲವೆಂತೆಲ್ಲ. ಲಿಖಿತಸಾಹಿತ್ಯದಲ್ಲಿಯೂ ಕಥೆಗಳು ವಿಪುಲವಾಗಿವೆ; ಅಲಿಖಿತವಾದ ಜಾನಪದ ಸಾಹಿತ್ಯದಲ್ಲಿಯೂ ಅಸಂಖ್ಯವಾಗಿವೆ. ಹಲವಾರು ಸಾಮ್ರಾಜ್ಯಗಳನ್ನು ಕಟ್ಟಿ ಆಳಿದ ಕನ್ನಡಿಗರ ಸಾಂಸ್ಕೃತಿಕ ಜೀವನವು, ಲೆಕ್ಕಕ್ಕೆ ಹತ್ತದಷ್ಟು ಕತೆಗಳನ್ನು ನಿರ್ಮಿಸಿ, ಪರಂಪರೆಯಿಂದ ವರ್ತಮಾನಕಾಲದಲ್ಲಿಯೂ ಸಂರಕ್ಷಿಸಿಕೊಂಡು ಬಂದಿದೆ. ಇಂತಹ ಕತೆಗಳೆಂದರೆ ವೀರಪುರುಷರ ಶೌರ್ಯ-ಸಾಹಸಗಳು, ಮಹಾಪುರುಷರ ಸವಾದಗಳು, ಮಹಾಸತಿಯರ ಪಾತಿವ್ರತ್ಯದ ಮಹಿಮೆ—ಇವುಗಳನ್ನೇ ಹೆಚ್ಚಾಗಿ ವಿವರಿಸುವಂತಹವು. ಮಾನವನ ಜೀವನಸಧರ್ಮ ಬೋಧಕವಾದ ನೀತಿಯ ಕಥೆಗಳೂ, ವ್ಯಂಗ್ಯ ವಿನೋದಗಳಿಂದ ಕೂಡಿದ ಚಾಟುಕಥೆಗಳೂ ರಾಜ-ರಾಣಿಯರ ಅದ್ಭುತ ರಮ್ಯ ಜೀವನದ ಮನೋರಂಜಕ ಕಥೆಗಳೂ ಕನ್ನಡನಾಡಿನಲ್ಲಿ ಇರುವಷ್ಟು ಮಿಕ್ಕ ಕಡೆಗೆ ಇರಬಹುದೇ?—ಎಂದು ಸಂದೇಹ ಬರುವಷ್ಟು ಬಹುಸಂಖ್ಯೆಯಲ್ಲಿವೆ. ಆದರೆ ಇವಾವುವೂ ಆಧುನಿಕ ಲಘುಕಥಾತಂತ್ರದ ಪ್ರಜ್ಞೆಯಿಂದ ರಚಿತವಾದುವುಗಳಲ್ಲ.

ಕನ್ನಡದ ಆಧುನಿಕ ಸಾಹಿತ್ಯ ನಿರ್ಮಿತಿಯು ಪ್ರಾರಂಭವಾದುದು ಪರಭಾಷೆಯ ಸಾಹಿತ್ಯಕೃತಿಗಳ ಭಾಷಾಂತರ ಅನುವಾದಗಳಿಂದ. ಒಬ್ಬಿಬ್ಬರು ಈ ಕಾಲದಲ್ಲಿ ಸ್ವತಂತ್ರ ಕೃತಿಗಳನ್ನು ಬರೆದಿರಬಹುದಾದರೂ, ಅವುಗಳು ಕೂಡ ಪರಭಾಷೆಯ ಕೃತಿಗಳ ಅನುಕರಣಗಳಾಗಿರುತ್ತವು ಈ ಕಾಲದ ನಿರ್ಮಿತಿಯಲ್ಲಿ ಬಂಗಾಲಿ, ಮರಾಠಿ ಇಂಗ್ಲಿಷ್ ಕೃತಿಗಳ ಪ್ರಭಾವವೇ ಹೆಚ್ಚಾಗಿ ಮೂಡಿಕೊಂಡಿಕೊಂಡಿರುವುದು. ಈ ಕಾಲದಲ್ಲಿ ಕೂಡ ಸಣ್ಣಕತೆಗಳು ಸಣ್ಣಕತೆಗಳ ವಿಶಿಷ್ಟ ಸ್ವರೂಪವನ್ನು ಪಡೆಯ ತಲೆದೋರಲಿಲ್ಲ.

ಎಂಬತ್ತೆಯ ಶತಮಾನದ ಎರಡನೆಯ ದಶಕದಲ್ಲಿ ದಿವಂಗತ ಪಂಜೆ ಮಂಗೇಶರಾಯರು, ದಿವಂಗತ ಎಂ. ಎನ್. ಕಾಮತರು, ದಿವಂಗತ ವಾಸುದೇವಾಚಾರ್ಯ ಕೆರೂರ ಅವರು ಸ್ವತಂತ್ರ ಕತೆಗಳನ್ನು ಬರೆಯ ಪ್ರಕಟಿಸಿದರು. ಇವರು ಬರೆದ ಕೆಲವೊಂದು ಕತೆಗಳು, ಹೆಚ್ಚಾಗಿ ಸಣ್ಣಕಥೆಗಳ ಸಾಹಿತ್ಯತಂತ್ರಕ್ಕೆ ಒಳಗಾಗುವಂತಿವೆಯಾದರೂ, ಇವರೆಲ್ಲ ಸಣ್ಣಕಥಾ ಸಾಹಿತ್ಯದ ವಿಶಿಷ್ಟ ಪ್ರಜ್ಞೆಯಿಂದ ಬರೆದವರಲ್ಲ. ಅವರ ಕಾಲದಲ್ಲಿಯೆ ನಾಲ್ವತ್ತಾರು ವರ್ಷಗಳ ತರುವಾಯ, ಸ್ವತಂತ್ರವಾಗಿ ಸಣ್ಣಕತೆಗಳನ್ನು ಬರೆಯಲು ತೊಡಗಿದ ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು, ಸಂಪೂರ್ಣವಾಗಿ ತಂತ್ರಸ್ವರೂಪವನು ಕಂಡುಹಿಡಿದವರಾಗಿ ಕೃತಿಗಳನ್ನು ಬೆಳಕಿಗೆ ತಂದರು. ಕನ್ನಡಿಗರಲ್ಲಿ ಸಣ್ಣಕತೆಗಳ ವೈಶಿಷ್ಟ್ಯದ ಅರಿವನ್ನು ಹುಟ್ಟಿಸಿದರು. ಎಂತಲೇ ಇವರನ್ನು 'ಕನ್ನಡ ಸಣ್ಣಕತೆಗಳ ಜನಕರು' ಎಂದು ಜನತೆ ಕರೆಯುತ್ತಲಿದೆ. ಕಥಾಲೇಖನದಲ್ಲಿ ಮೊತ್ತಮೊದಲಿಗರು; ಬರೆದ ಕಥೆಗಳ ಸಂಖ್ಯೆಯೂ ಸಾಕಷ್ಟಿದೆ. ಅದುದರಿಂದಲೇ ಶ್ರೀಮಾನ್ ಮಾಸ್ತಿಯವರು ಸಣ್ಣಕಥಾ ಪ್ರಪಂಚದಲ್ಲಿ ಹಿರಿಯಸ್ಥಾನವನ್ನು ಗಳಿಸಿದವರಾಗಿದ್ದಾರೆ.

ಶ್ರೀಮಾನ್ ಮಾಸ್ತಿಯವರೇ ಆಗಲಿ, ಅವರ ಹಿಂದಿನಿಂದ ಹೊರಟು ಬೇರೆ ಕತೆಗಾರರೇ ಆಗಲಿ, ಆದರ್ಶದ ದಾರಿಯಲ್ಲಿ ಹೊರಟವರು. ಜೀವನದ ಕಡೆಗೆ ಸಾಕಷ್ಟು ಲಕ್ಷ್ಯ ಕೊಟ್ಟಿರುವರಾದರೂ, ಸಾಮಾಜಿಕ ಸಂಸ್ಕೃತಿ—ರೂಢಿ—ಪರಂಪರೆಗಳಲ್ಲಿ ಕ್ರಾಂತಿಯನ್ನುಂಟುಮಾಡಬೇಕೆಂಬ ದುಡುಕು ಅವರ ಕೃತಿಗಳಲ್ಲಿ ಹೆಚ್ಚಾಗಿಲ್ಲ. ಪನ್ನಿವೇಶ ಚಮತ್ಕೃತಿ, ಪಾತ್ರಪರಿಪೋಷಣೆ, ಹಿನ್ನೆಲೆಯ ಚಿತ್ರಣ, ಮನೋವಿಶ್ಲೇಷಣ, ಕಥನತಂತ್ರ, ಪರಿಣಾಮ ರಮಣೀಯತೆ—ಇವುಗಳ ಬಿಡಗುಬಿನ್ನಾಣ ಸಾಕಷ್ಟು ಒಡಮೂಡಿ ನಿಂತಿದೆ. ಈ ಕಾಲದ ಕತೆಗಾರರಲ್ಲಿ ಇದುವರೆಗೂ ಹೆಸರನ್ನು ಉಳಿಸಿಕೊಂಡು ಬಂದವರೆಂದರೆ: ಮೈಸೂರ ಕಡೆಗೆ ಶ್ರೀ. ಅನಂದರು, ಉತ್ತರ ಕರ್ನಾಟಕದಲ್ಲಿ ಆನಂದಕಂದರು; ಮಂಗಳೂರು ಕರ್ನಾಟಕದಲ್ಲಿ ಶ್ರೀ. ಕಡೆಂಗೋಡ್ಲು ಶಂಕರಭಟ್ಟರು.

ಸದ್ಯದ ಆರ್ಥಿಕ ಮುಗ್ಗಟ್ಟಿನ ಪ್ರಭಾವದಿಂದ, ನಮ್ಮ ತರುಣರಲ್ಲಿ ಸಾಮಾಜಿಕ ಧಾರ್ಮಿಕ ಕ್ರಾಂತಿಯ ವಿಚಾರಗಳು ತಾಂಡವನವಾಡಲು ತೊಡಗಿವೆ. ಭಿನ್ನ ಭಿನ್ನ ರಾಜಕೀಯ ವಾದಗಳೂ ಅವರ ಮನಸ್ಸನ್ನು ಕದಡಿಬಿಟ್ಟಿವೆ. ಹೊಸಕಾಲದ ತರುಣವರ್ಗ, ನಮ್ಮ ಸಮಾಜದಲ್ಲಿ ಸಂಪೂರ್ಣ ಬದಲಾವಣೆಯನ್ನು ಅಪೇಕ್ಷಿಸುತ್ತಿದೆ. ಅವರು ಭವಿಷ್ಯತ್ ಸಮಾಜ ಎಂತಹದಾಗಬೇಕೆಂಬ ಸಂಪೂರ್ಣಚಿತ್ರವನ್ನು ಕೊಡಲಾರದಾದರೂ, ಹಳೆಯ ಸಾಮಾಜಿಕ ರೂಢಿಗಳನ್ನೆಲ್ಲ ಹುಡಿಗೂಡಿಸಿಬಿಡಬೇಕೆಂಬ ಪ್ರಚಾರ ನಡೆಯಿಸಿರುವರು. ಆರ್ಥಿಕ ಕ್ರಾಂತಿಯನ್ನು ಎತ್ತಿ ಹಿಡಿಯುವ ಮಾರ್ಕ್ಸ್‌ವಾದ ಅವರಿಗೆ ಹೆಚ್ಚಾಗಿ ಸೇರುತ್ತಲಿದೆ. ಆದುದರಿಂದ, ಇತ್ತೀಚಿನ ಹೊಸ ಕಥೆಗಾರರು ತಮ್ಮ ಉದ್ದೇಶ ಪ್ರಚಾರಕ್ಕಾಗಿ ಜೀವನದ ವಾಸ್ತವಚಿತ್ರಗಳನ್ನೇ ಹೆಚ್ಚಾಗಿ ತಮ್ಮ ಕತೆಗಳಿಗೆ ವಸ್ತುಗಳನ್ನಾಗಿ ಆರಿಸುತ್ತಲಿದ್ದಾರೆ. ಪ್ರಚಾರಕ್ಕೆ ಸಣ್ಣಕಥೆಯು ಸಾಹಿತ್ಯ ಅನುಕೂಲಸಾಧನವಾದುದರಿಂದ, ಸದ್ಯದ ಕನ್ನಡ ಸಾಹಿತ್ಯದಲ್ಲಿ ಸಣ್ಣಕಥೆಗಳ ಸಂಖ್ಯೆ ದಿನದಿನಕ್ಕೂ ಹೆಚ್ಚಾಗುತ್ತಲಿದೆ. ಸಂಗ್ರಹ-ಸಂಕಲನ ಗ್ರಂಥಗಳಾಗಿ ಹೊರಡುವುದಲ್ಲದೆ, ನಿಯತಕಾಲಿಕಗಳಲ್ಲಿಯೂ ಪ್ರಕಟವಾಗುತ್ತಲಿವೆ. ತರುಣ ಲೇಖಕರೆಲ್ಲ ತಮ್ಮ ಸಾಹಿತ್ಯಲೇಖನಗಳನ್ನು ಸಣ್ಣಕತೆಗಳಿಂದಲೇ ಪ್ರಾರಂಭಿಸುತ್ತಲಿದ್ದಾರೆ ಅದುದರಿಂದಲೇ ಸಣ್ಣಕತೆಗಳ ಸಂಖ್ಯೆ ಹೆಚ್ಚಾಗುತ್ತಲಿದ್ದರೂ, ಇಂದು ಅವುಗಳಲ್ಲಿ ಕಲಾಗುಣವು ಕಡಿಮೆಯಾಗುತ್ತ ಹೊರಟಿದೆ. ಇಂತಹ ಕಾಲದಲ್ಲಿಯೂ ಕನ್ನಡ ಸಣ್ಣಕಥಾಪ್ರಪಂಚಕ್ಕೆ ಒಳ್ಳೆಯ ಕಾಣಿಕೆಗಳನ್ನು ಸಲ್ಲಿಸಬಲ್ಲ ತರುಣ ಕತೆಗಾರರೂ ಕೆಲವರು ಮುಂದೆ ಬಂದಿದ್ದಾರೆ. ಮಿಕ್ಕೆಲ್ಲ ಸಾಹಿತ್ಯ ವಿಭಾಗಗಳಿಗಿಂತ ಸಣ್ಣಕತೆಯ ವಿಭಾಗ ಕನ್ನಡದಲ್ಲಿ ರಭಸದಿಂದ ಬೆಳೆಯುತ್ತಲಿದೆ. ಜಾಗತಿಕ ಸ್ಥಾನಮಾನಗಳನ್ನು ಗಳಿಸಬಲ್ಲ ಕತೆಗಳೂ ಸಾಕಷ್ಟು ನಿರ್ಮಾಣಗೊಂಡಿವೆ.

---

* ಈ ಚಿಕ್ಕ ಪರಿಚಯವು 'ಬೀದಿಯ ಹಾಡುಗಾರರು' ಎಂಬ ಕತೆಯೊಂದಿಗೆ ದಿಲ್ಲಿಯ ಆಕಾಶವಾಣಿಯ ಮೂಲಕ ಪ್ರಸಾರಗೊಂಡಿತು.

ಸಂ. ಜ. ಧಾ.

ಭರತ-ಬಾಹುಬಲಿಯರ ಕತೆಗಳು

(ಪೂರ್ವಾರ್ಧ)

ಶ್ರೀ ಕೆ. ವೆಂಕಟರಾಯಾಚಾರ್ಯ 'ವಿದ್ವಾನ್' ಸುರತಕಲ್ಲು

●

ಕನ್ನಡ ಚೈನಕವಿಗಳಲ್ಲಿ ಭರತ-ಬಾಹುಬಲಿಗಳ ದಿವ್ಯವ್ಯಕ್ತಿತ್ವವನ್ನು ಚಿತ್ರಿಸಿ ತೋರಿಸಿದವರು ನಾಲ್ಕಾರು ಜನರಿದ್ದಾರೆ. ಇವರೆಲ್ಲರೂ ಭರತ-ಬಾಹುಬಲಿಗಳ ದಿವ್ಯವ್ಯಕ್ತಿತ್ವಗಳಿಗೆ ಬೇರೆ ಬೇರೆ ಬಗೆಯ ಬಣ್ಣಗಳನ್ನು ಕೊಟ್ಟಿದ್ದಾರೆ. ರತ್ನಾಕರ ವರ್ಣಿಯ ವರ್ಣನೆ. ಶೈಲಿಯ ಚಿತ್ರಣವಂತೂ ರಮಣೀಯವಾದುದಾಗಿದೆ.

●

ಕನ್ನಡದೆಡೆಗಳಲ್ಲಿರುವ ಶಿಲ್ಪಕಲೆಯನುಸಾರದ ಗೋಮಟನ ಶಿಲಾಮೂರ್ತಿಗಳು, ಜಗತ್ತಿನ ವಿಚಿತ್ರಗಳಲ್ಲೊಂದಾದುವೆಂದು ಪೌರ್ವಾತ್ಯ ಹಾಗೂ ಪಾಶ್ಚಿಮಾತ್ಯರೆಲ್ಲರೂ ಬಾಯ್ತುಂಬಾ ಹೊಗಳಿದ್ದಾರೆ. ಶ್ರವಣರ ಬೆಳ್ಗೊಳ, ಕಾರಕಳ ಹಾಗೂ ವೇಣೂರುಗಳಲ್ಲಿ ಆ ಶಿಲ್ಪಗಳು ಇವೆ. (ಮೈಸೂರಿನಲ್ಲಿಯೇ ಇನ್ನೆರಡೆಡೆಯ ಚಿಕ್ಕ ವಿಗ್ರಹಗಳು ಇವುಗಳಷ್ಟು ಪ್ರಸಿದ್ಧವಲ್ಲ).

ಈ ಗುಮ್ಮಟೆ, ಗೊಮ್ಮಟೆ, ಗೋಮಟವೆಂದರೆ ಅರ್ಥವೇನೆಂದು ವಿಚಾರಿಸಿದರೆ; ಒಬ್ಬೊಬ್ಬ ವಿದ್ವಾಂಸರು ಒಂದೊಂದು ತೆರನಾಗಿ ಹೇಳುವರು: ಮನ್ಮಥ ಶಬ್ದದ ಕನ್ನಡ ರೂಪಾಂತರವೆಂದು ಶ್ರೀ. ಎಂ. ಗೋವಿಂದ ಪೈಯವರು ಹೇಳುತ್ತಾರೆ. 'ಮುಹ' ಎಂಬ ಸಂಸ್ಕೃತ ಧಾತುವು ಪ್ರಾಕೃತ ಭಾಷೆಯಲ್ಲಿ 'ಗುಮ್ಮಡ'ವೆಂದು ರೂಪಾಂತರಿತವಾಗಿ ತೋರುವುದು, ಇದರಿಂದಲೇ ಗುಮ್ಮಟನೆಂದು ಬಂದಿರಬೇಕೆಂದು ಶ್ರೀಮಾನ್ ಕುಂದಣಗಾರ ಪ್ರಭೃತಿಗಳು ಬರೆಯುತ್ತಾರೆ. (ಈ ಆಕಯವೇ ಸಾಧುವೆಂದು ಇದೇ ಕಳೆದ ಫೆಬ್ರವರಿ ತಿಂಗಳ ಜಯಕರ್ನಾಟಕ ಮಾಸಪತ್ರಿಕೆಯಲ್ಲಿ ನನ್ನದೊಂದು ಚಿಕ್ಕ ಲೇಖನವಿದೆ). ಈ ಬಗೆಯನ್ನು ಕುರಿತು ಪ್ರಕೃತಕ್ಕೆ ವಾದಿಸುವುದು ಪ್ರಾಮುಖ್ಯವಲ್ಲದಾಗಿದೆ.

ಈ ಪ್ರತಿಮೆಯ ಕಲ್ಪನೆಯು ಜೈನ ಪುರಾಣಗಳಲ್ಲಿ ಮೊದಲಾಗಿದೆ. ಆದಿ ಜಿನೇಶ್ವರನ ಮಕ್ಕಳಲ್ಲೊಬ್ಬನಾದ ಭರತ ಚಕ್ರವರ್ತಿಯು —ತನ್ನ ಕಿರಿಯ ತಮ್ಮನಾದ ಬಾಹುಬಲಿಯು ನಿರ್ವಾಣ ಹೊಂದಿದ ನೆನಹಿಗಾಗಿ—ಪೋದನವಲ್ಲಿ ಸ್ಥಾಪಿಸಿದಂತೆ ಹೇಳಿದೆ. ಈಗಣ ಹೈದರಾಬಾದು ಸಂಸ್ಥಾನದ ನಿಜಾಮಾಬಾದ್ ಜಿಲ್ಲೆಯ ಬೋದನ ವೆಂಬ ಗ್ರಾಮವಿದು. (ಈ ಬೋದನದ ಮಹತ್ವಿಕೆಯ ಬಗೆಗೆ ಇದೇ ಕಳೆದ ಮೇ ತಿಂಗಳ ಜಯಕರ್ನಾಟಕವೋದಿರಿ).

ಈ ಬೋದನದ ಯಾತ್ರೆಯು ಸಾಮಾನ್ಯರಿಗೆ ಅಸಾಧ್ಯವೆಂದು, ತಲಕಾಡಿನ ಗಂಗವಂಶದ ರಾಜಮಲ್ಲನ ಮಂತ್ರಿಯಾಗಿದ್ದ ಚಾಮುಂಡರಾಯನು, ಶ್ರವಣರ ಬೆಳ್ಗೊಳದಲ್ಲಿ ಎಪ್ಪತ್ತೇಳು ಅಡಿ ಎತ್ತರದ ವಿಗ್ರಹವನ್ನು ನಿಲ್ಲಿಸಿದನು. ಇದು 'ಇನ್ನಿ ಗಂಗರಲ್ಲಿ'ರ ಮೊದಲನೆಯ (ಎಮ್. ಎ. ಆರ್. ೧೯೨೩), ಆ ವಾದವು ಸರಿಯಲ್ಲವೆಂಬ (ಕನ್ನಡಕವಿ ಚರಿತೆ—ಸಂಪುಟ ಮೂರರ ಮುನ್ನುಡಿ), ಇನ್ನಿತರರ ಮಾಚಿ ಮಾಹೆ ಹದಿಮೂರರಿಂದೂ (ಶ್ರೀ. ಎಂ. ಗೋವಿಂದ ಪೈಯವರ ಲೇಖನ) ವಾದವಿದೆ. ಅಂತೂ ಈ ಕ್ರಿಸ್ತಾಬ್ದ ಸುಮಾರು ಹತ್ತನೆಯ ಶತಕದ ಬಳಿಕ, ಸುಮಾರು ಒಂಭಾ ವರುಷಗಳ ಅಂತರದಲ್ಲಿ (ಶಾ ಸಂ-೨-೧೫೫೩), ನವಿದ್ಯಾ ತುಳುನಾಡಿನ ಹಾಗೂ ಕಳಸಾಪುರದ ಅರಸಾಳಿಕೆಯಿದ್ದ ವೀರ ಪಾಂಡ್ಯರಾಯನು ಕಾರಕಳದಲ್ಲಿ ನಲ್ವತ್ತೊಂದುವರೆಯಡಿ ಎತ್ತರದ ಶಿಲಾಪ್ರತಿಮೆಯನ್ನು ಸ್ಥಾಪಿಸಿದನು. ಇದರ ತರುವಾಯ್ತು ಸುಮಾರು ೧೬೨ ವರುಷಗಳ ಬಿಡುವಿನಲ್ಲೇ (ಶಾ. ೧೫-೩-೧೬೦೪), ಕಾರಕಳದಿಂದ ಕೆಲವೆ ಮೈಲುಗಳ ದೂರದ ವೇಣೂರು ಪಟ್ಟಣದಲ್ಲಿ—'ಪುಂಜಲಿಕೆ ಪಟ್ಟಣ ನಾಳುತ್ತಿದ್ದ' ತಿಮ್ಮರಾಜ ಅಜಿಲನ್ನು, ಅಗಣ ಶ್ರವಣರ ಬೆಳ್ಗೊಳದ ಗುರುಗಳ ವಾಕ್ಯದಂತೆ—ಮತ್ತೊಂದು ಮೂರ್ತಿಯನ್ನು—ಮೂವತ್ತೈದು ಅಡಿಯೆತ್ತರವಾಗಿ—ಪ್ರತಿಷ್ಠಿಸಿದನು (ಶ್ರೀ ಮಧ್ವಾಚಾರ್ಯರು ಅವತರಿಸಿದ ಉಡುಪಿ ಪಾಜಕಾ ಕ್ಷೇತ್ರವೆಂದರೆ, ಪುಂಜಿಕಾಸ್ಥಲಿಯೆಂಬ ಅಪ್ಸರೆಯ ತಪೋಭೂಮಿಯೆಂದು ಹೇಳುವರು. ಮಂಗಳೂರಿಂದ ಹತ್ತು ಮೈಲು ದೂರದ ಗುರುಪುರದ ಬಳಿಯಲ್ಲಿ 'ಪುಂಜಾಲಕಟ್ಟೆ' ಯೆಂಬ ಗ್ರಾಮವಿದೆ. ಈ ಮೂರು ಹೆಸರುಗಳು ತಿಂಚಿತ್ಸಾದೃಶ್ಯವಾಗಿರುವಂತೆ ಕಾಣುವುದರಿಂದ, ಇವುಗಳ ಪ್ರಾಚೀನತೆ ಹಾಗೂ ನಿರುಕ್ತವು ವಿಚಾರಾಸಕ್ತವಾದುದಾಗಿದೆ)!

ಈ ಮೂರು ಪ್ರತಿಮೆಗಳೂ ಒಗ್ಗಲ್ಲಿನಿಂದಲೇ ಕೆತ್ತುಗೊಂಡುವುಗಳಾಗಿ, ನೋಟಕರಿಗೆ ವಿಸ್ಮಯ ಹಾಗೂ ದೈವಭಕ್ತಿಗಳನ್ನುಂಟು ಮಾಡುತ್ತವೆಯೆಂದರೆ ಅತ್ಯುಕ್ತಿಯಾಗಲಾರದು.

ಈ ಪ್ರತಿಮೆಗಳಿಂದರೆ, ಬಾಹುಬಲಿಯ ಸ್ಮಾರಕಗಳೆಂದು ಮೊದಲಲ್ಲಿ ಬರೆದಿದ್ದೇವೆ. ಇವುಗಳಂತೆ—ಇವುಗಳಿಗಿಂತಲೂ ಹೆಚ್ಚಿನ

—ಎತ್ತರದವನಾದ ಆ ಬಾಹುಬಲಿಯ ಕತೆಯು, ಅನೇಕರಿಂದ ಆದರಣೀಯವಾಗಿ ಕೃತಿಸಲ್ಪಟ್ಟಿದೆಯೆಂದರೆ ಸುಳ್ಳಲ್ಲ:

೧) ಜಿನಸೇನನು ಇಸ್ವಿ ಸುಮಾರು ೮೫೦ರಲ್ಲಿ ರಚಿಸಿದ ಪೂರ್ವ ಪುರಾಣದ ಬೆಂಬಲದಿಂದಲೇ ಪಂಪಮಹಾಕವಿಯು ಇಸ್ವಿ ೯೪೫ರಲ್ಲಿ ಆದಿಪುರಾಣವನ್ನು ಕೃತಿಸಿದನು.

೨) ಶ್ರವಣ ಬೆಳ್ಗೊಳದ ಮೂರ್ತಿಸ್ಥಾಪಕನಾದ ಚಾಮುಂಡರಾಯನು, ತಾನು ಇಸ್ವಿ ೯೭೮ರಲ್ಲಿ ಬರೆದ ಪುರಾಣದಲ್ಲಿ ಈತನ ಕತೆಯನ್ನು ಸ್ವಲ್ಪಶಃ ಹೇಳಿದ್ದಾನೆ.

೩) ಇಸ್ವಿ ೧೦೫೫ರಲ್ಲಿ, ಎಂದರೆ ಕಾರಕಳದ ಮೂರ್ತಿಯು ನೆಲೆಯಾದ ಮೇಲೆ, ಮೂಡಬಿದರೆಯ (ವೇಣುಪುರದ) 'ಶೃಂಗಾರ ರತ್ನಾಕರ' ನೆಂಬ ಬಿರುದಿನ ಹಾಗೂ ರತ್ನಾಕರ ಅಥವಾ ನನ್ನಯ್ಯ ನೆಂಬ ಕವಿಯು ಭರತೇಶ ವೈಭವದಲ್ಲಿ—ಆ ಗ್ರಂಥದ ಹೆಸರಿನಿಂದಲೇ ತಿಳಿವ ಕಥಾನಾಯಕ (ಭರತೇಶ್ವರ) ನನ್ನೂ, ಪ್ರತಿನಾಯಕನಾದ ಬಾಹುಬಲಿಯನ್ನೂ—ಚೆಲುವಾಗಿ ಚಿತ್ರಿಸಿದ್ದಾನೆ.

೪) ಶ್ರವಣಬೆಳ್ಗೊಳದ ಗೋಮಟನಿಗೆ ಇಸ್ವಿ ೧೮೭೭ರಲ್ಲಿ ನಡೆದ ಮಸ್ತಕಾಭಿಷೇಕದ ನಿಮಿತ್ತದಿಂದ, ಪಂಚಬಾಣನೆಂಬ ಕವಿಯು ಭುಜಬಲಿ ಚರಿತೆಯನ್ನು ಬರೆದಿದ್ದಾನೆ.

೫) ಇದಾಗಿ ಕೆಲವೇ ವರುಷಗಳ ಅಂತರದಲ್ಲಿ, ಕಾರಕಳದ ಗೋಮಟೇಶನ ಮಸ್ತಕಾಭಿಷೇಕದ ಬಣ್ಣನೆ (ಇಸ್ವಿ ೧೮೯೬ನೆ ಫೆಬ್ರುವರಿ ತಾರೀಖು ಹದಿನಾರರದು) ಹಾಗೂ ಆ ಗೋಮಟನ ಪ್ರತಿಷ್ಠೆಯ ವಿವರಣೆಯೊಂದಿಗೆ ಆ ಮೂಲಕಥೆಯನ್ನು ಕೃತಿಸಿದ್ದಾನೆ; ಅದೇ ಕಾರಕಳದ ಚಿದುರಚಂದ್ರಮನೆಂಬ ಕವಿಯು.

ಪ್ರಕೃತ ಲೇಖನದಲ್ಲಿ; ಇದೀಗ ಅಚ್ಚಾಗಿ ದೊರೆವ ಆದಿಪುರಾಣ ಹಾಗೂ ಭರತೇಶವೈಭವಗಳಲ್ಲಿರುವ ಭರತ-ಬಾಹುಬಲಿಯರ ಕತೆಯೊಂದಿಗೆ, ಈ ತನಕ ಅಚ್ಚಾಗದ ಕಾರಕಳದ ಕವಿಕೃತಿಯನ್ನೂ ಪರಿಚಯಿಸಿ, ವಿವೇಚಿಸಿಯುಮಿ. (ಈ ಗ್ರಂಥವು ಕಾರಕಳದ ದಾನಶಾಲೆ ಮಠದಲ್ಲಿದ್ದ ಪುಸ್ತಕದಿಂದ ಸಂಪಾದಿಸಿದ್ದು, ಎ. ಗೋವಿಂದ ಪೈಯವರ ಸಂಗ್ರಹದಿಂದ ಓದುವ ಸುಯೋಗವು ನನಗೆ ದೊರೆಯಿತು. ಇದರಲ್ಲಿ ಹದಿನೇಳು ಸಂಧಿಗಳಲ್ಲಿ ಸುಮಾರು ಎರಡೂಕಾಲು ಸಾವಿರ ಸಾಂಗತ್ಯ ಪದ್ಯಗಳಿವೆ. ಇದರ ಮೊದಲ ಮೂರು ಸಂಧಿ ಹಾಗೂ ಕೊನೆಯೆಂಟು ಸಂಧಿಗಳ ಸುಮಾರು ಏಳುನೂರು ಪದ್ಯಗಳ ಸಾರಾಂಶ ನನ್ನ ಶ್ರೀಮಾನ್ ಜಿ. ಪಿ. ರಾಜರತ್ನಂ ಅವರು, 'ಬೆಂಗಳೂರು—ಜೀವನ ಪತ್ರಿಕೆ'ಯಲ್ಲಿ ಬರೆದುದನ್ನು ವಾಚಕರು ಓದಬೇಕಾಗಿ ವಿನಂತಿಸುತ್ತೇವೆ. ಆ ನಡುವಣ ಎಂದರೆ ನಾಲ್ಕರಿಂದ ಹದಿನೈದರ-ನಡುವಣ ಸಂಧಿಗಳಲ್ಲಿ, ಸುಮಾರು ಒಂದುವರೆ ಸಾವಿರ ಪದ್ಯಗಳಲ್ಲಿ ಹೇಳಿದ ಕತೆಯ ಸ್ವಾಮ್ಯಾಂಶವನ್ನು ಮಾತ್ರ ಇಲ್ಲಿ ನಿರೀಕ್ಷಿಸಿಯಿದೆ). ಇವರಿಂದ ಈ ಗ್ರಂಥಗಳ ಕತೆಗಳಲ್ಲಿಯ ವೈಶಿಷ್ಟ್ಯವು ತಿಳಿಯುವುದಲ್ಲದೆ, ಅವುಗಳ ಔಚಿತ್ಯವೂ ಗೊತ್ತಾಗುವುದು; ಹಾಗೂ ಗೋಮಟೇಶನ ಜೀವನಕಥೆಯ ಶ್ರವಣವು ಪುಣ್ಯಕರವೆಂಬಾ ಬಯಕೆಯು ನಮ್ಮನ್ನು ಈ ಕಾರ್ಯಕ್ಕೆ ಮುಂದೂಡಿತೆಂದು ವಾಚಕರಲ್ಲಿ ವಿನಂತಿಸುವೆವು.

ಪಂಚಕಲ್ಯಾಣಿಯ ಕೃತಿಯಲ್ಲಿ:— ಹದಿನಾಲ್ಕನೆಯ ಮನುವಾದ ನಾಭಿರಾಜನಿಗೆ ಮರುದೇವಿಯಲ್ಲಿ ಹುಟ್ಟಿದ ವೃಷಭನಾಥನು, ತಂದೆಯಂತೆ ಅಯೋಧ್ಯೆಯಲ್ಲಿ ಆಳುತ್ತಿದ್ದನು. ಈತನಿಗೆ ಯಶಸ್ವತಿಯಲ್ಲಿ ಭರತನೇ ಮೊದಲಾದ ಏಳುವರು ಗಂಡುಮಕ್ಕಳೂ ಬ್ರಾಹ್ಮಿಯೆಂಬ ಹೆಣ್ಣೂ ಹುಟ್ಟಿದರು. ಸುನಂದೆಯಲ್ಲಿ ಬಾಹುಬಲಿ ಹಾಗೂ ಸೌಂದರಿಯೂ ಜನಿಸಿದರು. ಇವರ ವಿದ್ಯಾಭ್ಯಾಸವು ನಡೆಯಿತು. (ಇವರ ಮದುವೆಯ ಪ್ರಸ್ತಾವನೇ ಇಲ್ಲಿಲ್ಲ)!

ವೃಷಭನು ಕೆಲಗಾಲದಲ್ಲಿ ಪರಿನಿಷ್ಕ್ರಮಣಕ್ಕೆ ಸಾಗುವ ಮನಸ್ಸಿನಿಂದ, ಭರತನಿಗೆ ರಾಜತ್ವ ಹಾಗೂ ಬಾಹುಬಲಿಗೆ ಯುವ ರಾಜತ್ವವನ್ನು ಇತ್ತನು. ಎಂದರೆ, 'ಅಯೋಧ್ಯಾ ಪೌದನಪುರಾಧಿಪತ್ಯದೊಳಿರ್ವರುಮಂ' ಬೇರೆಬೇರೆಯಾಗಿ ನೆಲೆಗೊಳಿಸಿದನು. ಇದರಿಂದಾಗಿ, ಬಾಹುಬಲಿಯು ಅಯೋಧ್ಯೆಯಲ್ಲಿ ಯುವರಾಜನಾದರೂ ಪೌದನದಲ್ಲಿ ರಾಜನಾದನು.

ಇತ್ತ ಭರತನ ಮನದಲ್ಲಿ ಧರ್ಮಕ್ಕಿಂತಲೂ ಹೆಚ್ಚು ರಾಜ್ಯದ ಅಧಿಕಾರಧರ್ಮಕ್ಕೆ ಒಲವಿತ್ತು! ಅದಕ್ಕೆ ಸರಿಯಾಗಿ, ಭರತನ ಆಯುಧಾಗಾರದಲ್ಲಿ ಚಕ್ರರತ್ನವೂ, ರಾಜಾಲಯದಲ್ಲಿ ಪುತ್ರೋದಯವೂ ಆಯಿತು ಈ ಆನಂದದ್ವಯಕ್ಕೆ ಕಳೆಗೂಡಿಸಿದ ಶರತ್ಕಾಲೋದಯದಿಂದ ಭರತನು ಉತ್ಸಾಹಭರಿತನಾಗಿ, ದಿಗ್ವಿಜಯಕ್ಕಾಗಿ ಸಕಲ ಸಂಭಾರದೊಡನೆ ಉತ್ತರಾಭಿಮುಖನಾದನು. ಅಂತೆ ದಿಕ್ಕೆಲ್ಲಾ ಗೆದ್ದು ಬಂದನು.

ಅಯೋಧ್ಯಾಪುರಪ್ರವೇಶಕ್ಕಾಗುವಾಗ, ಆ ಚಕ್ರವು ಇದ್ದಕ್ಕಿದ್ದಂತೆ ತಾನಾಗಿ ನಿಂತಿತು. ಇದರ ಕಾರಣವೆಂದರೆ, 'ಅಂತರ್ಮಂಡಲ ಸಾಧನ ಪೂರ್ತಿಯಾಗಿಲ್ಲೆಂದು' ಪುರೋಹಿತರಿಂದ ತಿಳಿತು, ಅದಕ್ಕಾಗಿ ದೂತನೊಬ್ಬನನ್ನು ರಾಜಧಾನಿಗೆ ಕಳುಹಿದನು. ಅದನ್ನು ತಿಳಿದ ಭರತನ ತಮ್ಮಂದಿರು ಎಳು ಮಂದಿಯೂ ತಪಸ್ಸಿಗೆ ನಡೆದರು. ಇನ್ನೊಂದೆಡೆಯಲ್ಲಿ ಬಾಹುಬಲಿಯತ್ತಲೂ ದೂತನನ್ನು ಕಳುಹಿದನು; ಅವನಾದರೋ ಕದಲದೆ ಯುದ್ಧಕ್ಕೆಂದೇ ಸಾರಿಬಂದನು!

ಆಯೆಡೆಯಲ್ಲಿ ಭರತನ ಮಂತ್ರಿಗಳು ಯೋಚಿಸಿ, 'ಅಣ್ಣ-ತಮ್ಮಂದಿರ ದೆಸೆಯಿಂದಾಗುವ ಕಾಳಿಗದಲ್ಲಿ ವೃಥಾ ಪ್ರಾಣಿವಧೆಯಾಗದಂತೆ, ಅವರಿಬ್ಬರು ನಾಯಕರೇ ಕದನತ್ರಯಗಳನ್ನು ಮಾಡಿ, ಕಾದಿಗೆದ್ದುಕೊಳ್ಳುವಂತೆ' ಭರತ-ಬಾಹುಬಲಿಯರನ್ನು ಒಪ್ಪಿಸಿದರು. (ಈ ಕದನತ್ರಯಗಳೆಂದರೆ: ದೃಷ್ಟಿಯುದ್ಧ, ಜಲಯುದ್ಧ, ಮಲ್ಲಯುದ್ಧಗಳು. ಇವುಗಳಲ್ಲಿ ಜಲಯುದ್ಧವೊಂದನ್ನುಳಿದು, ಮಿಕ್ಕೆರಡು ತೆರದುವುಗಳು ಜೈನೇತರ ಸಾಹಿತ್ಯಗಳಲ್ಲೂ ಕಾಣುಬರುವುವು).

ಮೊದಲೆರಡು ಕಾಳಿಗಗಳಲ್ಲಿ ಭರತನು ಸೋತನು. ಕೊನೆಯ ಮಲ್ಲರಾಟದಲ್ಲುಂತೂ 'ಕನಕಾಚಲಮಂ ಪೊತ್ತುದು ಘನಮರಳತ ಕೈಲ'ವೆಂಬಂತೆ, ಬಾಹುಬಲಿಯು ಭರತನನ್ನು ಆಗಸಕ್ಕೆತ್ತಿ ಹೊತ್ತು ತಂಸ ಹೊತ್ತಿನ ಬಳಿಕಲೇ ಮೆಲ್ಲನೆ ನೆಲಕ್ಕಿಳಿಸಿದನು

ಇದರಿಂದ ಕುದಿಗೊಂಡ ಭರತೇಶನು, ಆ ಚಕ್ರರತ್ನವನ್ನು ತಮ್ಮನೆಡೆಗೆ ಎಸೆದನು. ಅದು ಅತನ 'ಬಲಬಾಹು ತಿಖರದ ಬಯದಿನೆ ತೊಡವಿನಂತೆ' ಇತ್ತು. ಭರತನು ಪೂರ್ತಿಯಾಗಿ ಸೋತನು!

ಇದರಿಂದಾ ಬಾಹುಬಲಿಯು ವಿರಕ್ತನಾಗಿ 'ಮಣ್ಣಿನಲ್ಲಿ ಆಶೆಯಿಲ್ಲದೆ,' ಜೈನದೀಕ್ಷೆಗೊಂಡನು; ಮಹಾಬಲಿಯೆಂಬ ಆತ್ಮತನೂಜನನ್ನು ನಿಜಪದವಿಗೇರಿಸಿದನು. ಭರತನೇ ಭೂವಿಶಾಸನಾದನು!

ಇನ್ನು ಕೆಲವು ದಿನಗಳ ಬಳಿಕಲೂ ಬಾಹುಬಲಿಯು ಕೇವಲಿಯಾಗದಿದ್ದುದನ್ನು ಅರಿತು, ಆತನ ಬಳಿಗೈದಿ 'ನೆಲವಿದು ನನ್ನದೆಂ' ಬಾಶಯವಿಲ್ಲಿಂದು ಆತನ ಮಾನಸಿಕ ಕಷಾಯವನ್ನು ಭರತನು ತೊಲಗಿಸಿದನು; ಮರಳಿ ಅಯೋಧ್ಯೆಗೆ ಹೋಗಿ ಅಭಿಷಿಕ್ತನಾದನು.

ಮತ್ತೊಮ್ಮೆ ಪುರುದೇವ (ವೃಷಭನಾಥನ)ನ ನಿರ್ವಾಣದ ಸಮಯಕ್ಕೆ ಹೋಗಿ ಬಂದು, ತನ್ನ ಕೆನ್ನೆಯ ನರೆಯಿಂದ ತಾನು ವಿರಕ್ತನಾದನು; ತನ್ನ ಮಗನಾದ ಅರ್ಕಕೀರ್ತಿಗೆ ಪಟ್ಟಗಟ್ಟಿ, ಕೈಲಾಸಕ್ಕೆ ಏರಿ ಯೋಗಧ್ಯಾನದಲ್ಲಿ ಮುಳುಗಿದನು. 'ಇಂತು ಮುಕ್ತಿಸಿ ನಿಂದತ್ಯಾದಿತೀರ್ಥೇಶ್ವರನ ಚರಿತದೊಳ್ ವಾಕ್ಯನೂಣೈಕ್ಯ ಕೋಶವು' ಪೂರ್ತಿಯಾಯ್ತು. (ಆದಿಪುರಾಣ ಸಂಗ್ರಹದಿಂದ).

ಭರತೇಶ ವೈಭವದಲ್ಲಿ— ಈ ಮೇಲಣ ಕತೆಯನ್ನೇ ಮೂಡಬಿದರೆಯ ನನ್ನಯ್ಯ ಅಥವಾ ರತ್ನಾಕರ ಕವಿಯು ಬರೆದುದಾದರೂ, ಕೊನೆಯಲ್ಲಿ ತುಸ ಮಾರ್ಪಡಿಸಿದ್ದಾನೆ; ಅದರಿಂದಲೇ ತನ್ನ ಕೃತಿಗೆ ನಾಯಕನಾಗಿಸಿದ ಭರತನ ಪಾತ್ರಕ್ಕೆ ಉದಾತ್ತತೆಯ ಮಹದ್ಗೌರವವನ್ನು ಒದಗಿಸಿದ್ದಾನೆಂದೂ ಹೇಳುವುದು ಸುಳ್ಳಲ್ಲ. ಅದು ಮಾತ್ರವಲ್ಲ, ಭರತನ ಜೀವನದ ಪೂರ್ವಭಾಗವಾದ ಭೋಗವಿಜಯವನ್ನು ಸ್ವಂತವಾಗಿ ರಚಿಸಿದ್ದಾನೆ. ಈ ಭರತನು ಪರಿಶ್ಚಂದ್ರನಂತೆ ಇಬ್ಬರೆಯ ಜೀವನಸಾರನಲ್ಲ, ಭೋಗವನ್ನು ನಿಷ್ಕಾಮನಾಗಿ ಅನುಭವಿಸಿದ ತ್ಯಾಗಿಯೆಂದೂ ಚಿತ್ರಿಸಿದ್ದಾನೆ.

ಭರತೇಶ್ವರನು ತೀರ್ಥಂಕರನಲ್ಲವಾದರೂ, ಸಿದ್ಧಜೀವಿಯೆಂದೂ, ಈತನು ತೀರ್ಥಂಕರರಂತೆ ಪಂಚಕಲ್ಯಾಣಗಳನ್ನು ಹೊಂದಲು ತಕ್ಕವನೆಂದೂ ಸಾಧಿಸಿದ್ದಾನೆ. ಭರತೇಶನ ಹುಟ್ಟು ಮದುವೆಗಳ ವಿಚಾರವು ಈ ಭರತೇಶ ವೈಭವದಲ್ಲಿಲ್ಲ. ಹಲವಾರು ಹೆಂಡಿರೊಡನೆ ವಿಹರಿಸುವವನ ಒಂದು ಮದುವೆಯ ಪಡಪಂಚವನ್ನಾದರೂ ಈ ಕವಿ ಬಣ್ಣಿಸದಿರಲಿಕ್ಕಿಲ್ಲವೆನ್ನು ಊಹಿಸಬಹುದಷ್ಟೆ! ಅಂತೆ, ದೇವಚಂದ್ರನೆಂಬ ಕವಿಯು ತನ್ನ ರಾಜಾವಳೀ ಕಥೆಯಲ್ಲಿ, ಈ ಕೃತಿಯ ಪರಿಚಯವನ್ನು— ಈ ಗ್ರಂಥದಲ್ಲಿ ಒಟ್ಟು ಎಂಭತ್ತುನಾಲ್ಕು ಸಂಧಿಗಳನ್ನಿವೆಯೆಂದನು. ಇದೀಗಿನ ಸಾಂಗತ್ಯದಲ್ಲಿ ಎಂಭತ್ತೇ ಸಂಧಿಗಳಿವೆಯಾದುದರಿಂದ, ಉಳಿದ ನಾಲ್ಕು ಸಂಧಿಗಳು ಶೋಭನ ಸಂಧಿಗಳಿರಬೇಕೆಂದು ಬಗೆಯುತ್ತಾರೆ: ಈ ಸಂಧಿಗಳಾದರೋ ಇತ್ತೀಚೆಗೆ ಶ್ರೀ. ನಿರ್ಜರ ಅಣ್ಣಾರಾಯರಿಂದ ಪ್ರಕಟಿತವಾಗಿವೆ!

ಶೋಭನ ಸಂಧಿಗಳು— ಭರತೇಶ ವೈಭವದಂತೆ ಸಾಂಗತ್ಯವಲ್ಲದಿರುವ ಇವು ತ್ರಿಪದಿಯಾಗಿವೆ. ಅದು ಮೊದಲಾದ ಕಾರಣದಿಂದ 'ಇದು ರತ್ನಾಕರನದಲ್ಲ ಎಂಬ ಆಕ್ಷೇಪಕ್ಕೆ ಆಸ್ಪದ ಕೊಡುತ್ತಿರುವುದಲ್ಲದೆ ಕೆಲವು ಸಮಾನಾಂತರಗಳು ಬರಿದಿವೆ. ಅದರೂ, ಇನ್ನೂ ಕೆಲವು ಸಂದೇಹಗಳು ವಿಚಾರಿಸಲಾವವು: ತ್ರಿಪದಿಯೇ ಸಾಂಗತ್ಯವಾಗಿ ಮಾರ್ಪಡಿಸುವಾಗ, ಕೆಲವೊಂದು ಅಂತರ ಹಾಗೂ ವೈಶಿಷ್ಟ್ಯಗಳಿವೆಯೆಂದು ವಿಮರ್ಶಕರ ಆಶಯವಿದೆ (ಡಾ. ಡಿ. ಎಸ್. ಕರ್ಕಿಯವರು ಗರ್ಭಗುಡಿಯ 'ದೀಪದಾನ'ದಲ್ಲಿ ಬರೆದುದನ್ನು ಓದಿರಿ). ಹಾಗೂ "ಈ ಭಂಡಿಸ್ಸಿನ ಭೇದವಲ್ಲದೆ, ಈ ಕಾವ್ಯದ ಮಧ್ಯಮ ಗುಣ ಮೊದಲಾದ ಅಂಶಗಳನ್ನು ನೋಡಿದರೆ; ಈ ಶೋಭನಸಂಧಿಗಳನ್ನು ರತ್ನಾಕರವರ್ಣಿಯ ಕಾವ್ಯಸಾಗರದಲ್ಲಿ ಮುಳುಗಿ ಎದ್ದ ಆವನ ಪ್ರಶಂಸಕನೊಬ್ಬನು ತರುವಾಯದ ಕಾಲದಲ್ಲಿ ಬರೆದಿರಬಹುದೇನೋ?" ಎಂದು ತಾತ್ಪೂರ್ವಿಕವಾಗಿ ತನಗೆ ತೋರುತ್ತದೆಂದು ಶ್ರೀಮಾನ್ ರಂ ಶ್ರೀ. ಮುಗಳಿಯವರು ಅರಿಸಿದುದುಂಟು (ಜೀವನ ಪತ್ರಿಕೆ, ೫-೧೧) (ಇತ್ತ ಕುಮಾರವ್ಯಾಸನ 'ಕನ್ನಡ ಭಾರತವು ಅಪೂರ್ಣ'ವಾಗಿರುವುದರಿಂದ, ಅಲ್ಲಿಲ್ಲದ ಸ್ತ್ರೀಪರ್ವ ಹಾಗೂ ಆ ಮೇಲಣ ಸಂಧಿಗಳನ್ನು ಶ್ರೀನಿವಾಸ ಕವಿ ಹಾಗೂ ತಿಮ್ಮಣ್ಣಿ ಕವಿಯೂ ರಚಿಸಿದರೆಂಬರು! ಇದು ಸರಿಯಲ್ಲವೆಂದು ಗರ್ಭಗುಡಿ ಪ್ರಜಾಮತ ದೀಪಾವಳಿ ಸಂಚಿಕೆಯಲ್ಲಿದ್ದ ನನ್ನ ಲೇಖನವನ್ನು ನೋಡಬಹುದು) ಆತ್ಮೆ ಒಬ್ಬನೇ ಕವಿಯು ತ್ರಿಪದಿ ಮತ್ತು ಸಾಂಗತ್ಯಗಳೆಂಬ ಇಬ್ಬರೆಯ ಛಾಟಿಯಲ್ಲಿ ಒಂದೇ ಕೃತಿಯನ್ನು ಬೇರೆ ಬೇರೆಯಾಗಿ ರಚಿಸಿಕೊಟ್ಟಿಲ್ಲವೆಂದೂ, ಈ ಬಗೆಗೆ ಇನ್ನೂ ವಿಮರ್ಶೆಯಾಗಬೇಕಾದುದೆಂದೂ ನಮಗೆ ಅನ್ನಿಸುತ್ತದೆ.

ಶೋಭನ ಸಂಧಿಗಳೆಲ್ಲಿ— ಭರತನ ಹುಟ್ಟು ಮದುವೆಗಳ ಹೇಳಿಕೆ. ಕೃತಿಯ ಆರಂಭದಲ್ಲಿ ಅಯೋಧ್ಯೆಯಲ್ಲಿ ವೃಷಭನಾಥನು ಆಳುತ್ತಿದ್ದನು ಅವನಿಗೆ ಸರಸ್ವತಿಯಲ್ಲಿ (ಯಶಸ್ವತಿಯನ್ನು) ನೂರೊಂದು ಮಕ್ಕಳು, ಅವರಲ್ಲಿ ಭರತನೊಬ್ಬನು ಹುಟ್ಟಿದನೆಂಬ ಕಿರಿಯವಳಾದ ಸಂಸಂಧಿಯಲ್ಲಿ— ಹತ್ತು ವರುಷದ ಬಳಿಕ— (ಬಾಹುಬಲಿ ಮತ್ತು ಸೌಂದರಿಯರಿರಬೇಕು) ಮಕ್ಕಳಿಬ್ಬರು ಹುಟ್ಟಿದರು (ಈ ಶೋಭನ ಸಂಧಿಯಲ್ಲಿ 'ಉತ್ಪತ್ತಿ'ಯೆಂದು ಒಂದು ಹೆಸರು ಹೇಳಿದೆ): ಭರತನು ದೊಡ್ಡವನಾಗಿ ಸುಮಾರು ಹದಿನೈದು ವರುಷಕ್ಕೆ ಬರಲು, ವೃಷಭನಾಥನು ಅವನಿಗೆ ತಿಪ್ಪಿಂಛಪುರದ ಕುಂಭವತಿಯನ್ನು ಮದುವೆ ಮಾಡಿಸಿದನು. ಅವಳ್ಳಲ್ಲದೆ ಇನ್ನು ಕೆಲ ಹೆಂಗಳ ಹೆಸರಿದೆಯಿಲ್ಲ!

ಮತ್ತೆ ಕವಿರತ್ನಾಕರನ ಭರತೇಶನು 'ಭೋಗವಿಜಯ'ದ ವೈಭವದಿಂದೊಡಗೂಡಿ, ದಿಗ್ವಿಜಯಿಯಾಗಿ ಹಿಂತಿರುಗಿದನು. ಚಕ್ರವು ಮುಂದಾಗಲಿಲ್ಲ ಆಗ ಬಾಹುಬಲಿಯು ಯುದ್ಧವನ್ನೇ ಮಾಡಿದ್ದು. ಸರಂತು ಬಾಣ್ಬೆರಿಮ ಬಾಹುಬಲಿಯು ಮಾತುಗಳಿಂದಲೇ ಭರತನು ಸೋತನು ಆಗ 'ಚಕ್ರವು ಬಾಹುಬಲಿಯಿಂದೆಗೆ ಸಾರದೆ ಸಮ್ಯಸಿತ್ತು' ಎಂದು ಕವಿಯು ವಾಕ್ಯವಿದೆ! ಇದಾದಾಗಿ ಬಾಹುಬಲಿಯು ವಿರಕ್ತನಾದನು!

ವಿನೋಚನೆ: ಇದೆಂತು ಕಾವ್ಯಗಳನ್ನು ನೋಡಿದರೆ, ಈ ಕಾವ್ಯಾಂತರಾಳದ ಒಂದೆರಡೆಕೆಯು ಕೆಲವೇ ಪುಟಿಗಳಲ್ಲಿ ಮುಕ್ತಿ ಪಾತ್ರ ವೈಚಿತ್ರ್ಯವನ್ನು ನಿಶ್ಚಿಸುವ ಹಂಬಲವಾಗಿದೆ. ಇದು ಸರಿಯಲ್ಲವಾಗಿದೆ.

ದೀಪಾವಳಿ

ಶ್ರೀ. ಎಸ್. ಎಸ್. ಬಸುಪಟ್ಟದ ಎಂ. ಎ. ಗುಕೇವಗುಡ್ಡ

೧

ಸಿರಿವಂತರ ಮನೆಯೊಳಗಿದೆ
ದೀಪಾವಳಿಯುಬ್ಬುಕ–;
ಬಡ–ಬಗ್ಗರ ಮನೆಗಿಳಿದಿದೆ
ಸಂಕಷ್ಟದ ಪಬ್ಬುಕ–.

೨

ಧನವಂತರ ಮನೆ ಬೆಳಗಿನೆ
ವಿಧವಿಧದಾ ದೀಪ–;
ಧನಹೀನರ ಮನೆಯೊಳಗಿನೆ
ಬಹುರೂಪದ ತಾಪ–.

೩

ಇದು ಇಂದಿನ ದೀಪಾವಳಿ,
ಎಂತಹದಿ ಹಬ್ಬುಕ!
ಜನಜನವಲಿ ಬೆಳೆದಿಹುದೋ
ವೈಷಮ್ಯದ ದಿಬ್ಬುಕ!

೪

ಈ ಭಿನ್ನತೆ ಈ ಖಿನ್ನತೆ
ಹೋಗಲಿ ತಾ ಹೂಳಿ–;
ಈ ಭಗ್ನತೆ ಉದ್ವಿಗ್ನತೆ
ಸಿಡಿದಳಿಯಲಿ ಸೀಳಿ–,

೫

ಹುಡಿಗೂಡಲಿ ಜೀವನದಲಿ
ಬಂಬೊದಗುವ ಎಡರು–;
ಹರಿಮೋಡಲಿ ಬಾಳಿನಲ್ಲಿ
ಬಂಬೆರಗುವ ತೊಡರು–

೬

ಹೀನತೆಯನು ದೀನತೆಯನು
ಜಗದಲಿ ತಾ ಕಳೆದು
ದನುಜತ್ವವ ಕಳಿಯಲಿ ತಾ
ಮನುಜತೆ ವೈದಳೆದು–.

೭

ಈ ಜೀವನ ಈ ಭಾವನ
ಹೊಸ ಮೈಯನು ತಾಳಿ
ಪಡೆಯಲಿ ಹೊಸ ಚೇತನವನು
ಹೊಸ ಬಗೆಯಲಿ ಬಾಳಿ–.

೪

ಕಾರಿರುಳಲಿ ಬೆಳಕಿನ ಹೊಳಿ
ಊರೂರಲಿ ಇಂದು
ಹರಿಯುತಲಿದೆ, ಸೌಖ್ಯದ ಜಿಳಿ
ಬೇರೂರದೆ ಬಂದು?

೯

ಥಳಥಳಿಸಲಿ ಬಳಿಯದು ತಾ
ಕತ್ತಲೆಯನು ತರಿದು–;
ಹೊಳಿಹೊಳಿಯಲಿ ಬೆಳಕದು ತಾ
ಸುತ್ತೆಲ್ಲಾ ಪರಿದು–.

೧೦

ಮನೆ–ಮನೆಗೂ ಬೆಳಕೇಯಲಿ
ದೀಪೋತ್ಸವವಿಂದು–;
ಮನ–ಮನಕೂ ಬಂದೀಯಲಿ
ಅನುತೋತ್ಸವ ತಂದು–.

೧೧

ಸದ್ಭಾವದ ಧೀಶಕ್ತಿಯ
ದೀಪ್ತಿಯು ತಾ ಬೆಳಗಿ
ಮೆರೆಯಲಿಯಿದು ಸ್ಫೂರ್ತಿ ವ್ಯಕ್ತಿಯ
ಮನ-ಮನವನು ತೊಳಗಿ

೧೨

ಹೃದ-ಹೃದಯದ ಹೊಂದೀವಿಗೆ
ಹೊಂಗಿರಣವ ಹೊರಿ
ಜಗಜನತೆಗೆ ಮುದವೀಯಲಿ
ಸುಖ-ಶಾಂತಿಯ ಬೀರಿ

೧೩

ಆಂದಾಗಲೆ ದೀಪಾವಳಿ
ನಮ್ಮೆಲ್ಲರ ಜಗಕೆ .
ನಿಜ ಹೆಮ್ಮೆಯ ಸೊಗಸುವೇ
ಭರತಖಂಡಾ ಮನಕೆ–.

೧೪

ಪರಮಾಯುಷಕೆ ಒದುತಿರುವೀ
ದೀಪಾವಳಿ ಹಬ್ಬುಕ–;
ಪರಮಾಯುಷಕ ಫಲವೆಗೊಲೆಯಲಿ
ಹೊಸ ಹರುಷವ ಕಬ್ಬುಕ–.

ಫಲಯಾಚನೆ

ಶ್ರೀ. ಜ. ಶ್ರೀ. ಜ. ಕೊಪ್ಪಳ

ನೀಡುವ ದೊರೆಯೆಂದು
ಬೇಡಿ ಬಾಯ್ಬರೆದೆ ಕೈ ..
ಗೂಡಿಸೀ ಬೇಡಿಕೆಯನು—ಓ ಒಡೆಯ! ॥ಪ॥

೧

ಬಲಿತ ತರುವಿದು ದೇವ!
ಸಲಕಾಲ ಜಲಿಮಳೆಯ
ಬಲುಬಿಸಿಲ ಸೈಸಿ ಜೈಸಿ;
ಫಲವಾನ ಸೈದಿವಕೆ
ಬಲವಾಗು ನೆರವಾಗು
ಕುಲಗುರುವೆ ಕಾಲ್ಪಿಡಿವೆ ಕಂದೆರೆಯೊ
ಕರುಣಾಳು!

೨

ಹಲವಾರು ದಿನಗಳಿಂ-
ದೆದೆಭಾರ ಪೂತ್ತಾಯ್ತು.
ತೆದೆಭಾರವಾ ಭಾರವ್ಯ,
ಕುಲಿದ ಪೈರನು ನೋಡಿ
ಜೆಲುವ ಫಲಗಳ ನೀಡಿ
ಜೆಲುನೀಡು ಒರಡುತನ ಒಡಿಸೊಡೆಯ ಬಾ
ಜೇಗ!

೩

ಕಳೆವೆ ದಿನಗಳನೆಸಿತೊ
ಬಳಲಿ ಕಂಪಿಸಿ ನುಡಿಸಿ
ಕಳಚುವೆಲೆವೆನಿಯಂದವಿ;
ಒಳಗೊಳಗೆ ಕೊರತೆ ಕೊರೆ-
ವಿಳೆಗೆ ಕೆಡಹದೆಯೆನ್ನ
ಕಳೆಯಬಾರಿಹರಿದನು ಕಳೆವವರು ಓ! ತಂದೆ!

೪

ಪಣ್ಣಾಣಲಿ ಹೆಕ್ಕೆಗಳು
ನಾಣ್ಣೆಲಲಿ ಬೀಜಗಳು
ಪೊಣ್ಣೆಂದೆ ಪೊಸಪೈರಿಸಿ,
ಮಣ್ಣಹುಣ ಮುಗಿದ ದಿನ
ಕಣ್ಣಿಟ್ಟಿ ಶಾಂತಿಯಲಿ
ಅಣ್ಣಾ ನೀರುಣಿಸಿ ನಿನ್ನ ಪದಕಮಲ–ರಾಗದಲಿ.

ಸೇಡಿನ ಸಮಾಧಿ

(ಸಣ್ಣ ಕತೆ)

ಶೀ. ವೆ. ಮು. ಜೋಶಿ, ಧಾರವಾಡ

●

ಪ್ರೀತಿ, ದ್ವೇಷ–ಎರಡೂ ಹೃದಯದ ಸಂವೇದನೆಗಳೆ! ಆದರೆ ದ್ವೇಷದ ಕೈಗೆ ಸಿಕ್ಕ ಮಾನವನು ರಾಕ್ಷಸನಾಗುವನು. ಪ್ರೀತಿಯ ಕೈಗೆ ಸಿಕ್ಕ ಮಾನವನು ದೇವತೆಯಾಗುವನು; ಜಾಗೃತವಾದ ಕೃತಜ್ಞತಾಬುದ್ಧಿ, ದ್ವೇಷರಾಕ್ಷಸನನ್ನು ಜಯಿಸಿ ಹುಡಿಗೂಡಿಸಬಲ್ಲದು!

●

ದ್ವಿತೀಯ ಮಹಾಯುದ್ಧವು ಆಗ ತಾನೇ ಮುಗಿದುಹೋಗಿತ್ತು. ಜರ್ಮನಿಯು ಸೋತ ಕೆಲವು ತಿಂಗಳುಗಳಲ್ಲಿಯೇ, ಜಪಾನೂ ಶಸ್ತ್ರಾಸ್ತ್ರಗಳನ್ನು ಕೆಳಗಿರಿಸಿ ಸೋಲನ್ನೊಪ್ಪಿಕೊಂಡಿತ್ತು. ಅದರ ಪರಿಣಾಮವಾಗಿ ಆಗ್ನೇಶಿಯಾದ ಭಾಗದಲ್ಲಿ ಶಾಂತಿ ನೆಲಸಿತ್ತು. ಯುದ್ಧ ಸಮಯದಲ್ಲಷ್ಟೆ ಸೈನಿಕರಿಗೆ ಕೆಲಸವಿದ್ದಿತೆಂತಲ್ಲ. ಯುದ್ಧದ ನಂತರವೂ ಅಷ್ಟೇ ಕೆಲಸ ಅವರಿಗಾಗಿ ಕಾಯ್ದುಕೊಂಡು ಕುಳಿತಿತ್ತು. ಯುದ್ಧ ಕಾಲದಲ್ಲಿ ಹಾಳಾದ ಕಟ್ಟಗಳನ್ನೂ ಸೇತುವೆಗಳನ್ನೂ ಪುನಃ ರಚಿಸುವ ಕಾರ್ಯಗಳು ಅವರಿಗಾಗಿ ಮೀಸಲಿದ್ದುವು. ಹಿಂದುಸ್ತಾನದ ೫೫ನೆಯ ಡಿವಿಜನ್ನು ಮಲಾಯಾದಲ್ಲಿ ಬೀಡು ಬಿಟ್ಟಿತ್ತು. ಆ ಡಿವಿಜನ್ನಿನ ಒಂದು ಭಾಗ ಮಲಾಯಾದ ಪೂರ್ವ ಕರಾವಳಿಯ ಮೇಲಿನ **ಕ್ವಂಟಿನ್** ಪಟ್ಟಣದಲ್ಲಿ ಬೀಡು ಬಿಟ್ಟಿತ್ತು.

ಕ್ವಂಟಿನ್, ಊರು ಸಣ್ಣದಾಗಿದ್ದರೂ ಸುಂದರವಾದುದು. ಊರ ಸುತ್ತಲೂ ಮೂರು ಹೊಳೆಗಳು ಹರಿದು, ಪೂರ್ವದ ಸಮುದ್ರಕ್ಕೆ ಕೂಡುವುವು. ಮೂರು ಬದಿಗೆ ಮೂರು ಹೊಳೆಗಳು, ಪೂರ್ವಕ್ಕೆ ಚೀನಾ ಸಮುದ್ರ–ಹೀಗಾಗಿ, ಮಳೆಗಾಲದಲ್ಲಿ ಕ್ವಂಟನ್ ಒಂದು ನಡು ಗಡ್ಡೆಯಾಗಿ ಬಿಡುತ್ತಿತ್ತು. ಒಂದು ಹೊಳೆಗೂ ಸೇತುವೆ ಇರಲಿಲ್ಲ. ಸೇತುವೆಯನ್ನು ಕಟ್ಟುವುದು ಸ್ವಲ್ಪ ಕಠಿಣವಾದ ಕೆಲಸವೇ ಆಗಿತ್ತು.

ಮೈಲು–ಮೈಲಗಲದ ಹೊಳೆಗಳು; ಎರಡೂ ಬದಿಗೆ ದಟ್ಟಡವಿ; ದಂಡೆಗಿದ್ದ ಉತ್ತುಂಗ ವೃಕ್ಷಗಳ ದಟ್ಟವಾದ ಛಾಯೆಯು ಹೊಳೆಯ ನೀರ ಮೇಲೆ ಪಸರಿಸಿದಾಗ, ಆ ಹೊಳೆಯನ್ನು ಬರೀ ನೋಡುವುದಕ್ಕೂ ಧೈರ್ಯ ಬೇಕೆಂದೆನಿಸುತ್ತಿತ್ತು ಅಷ್ಟು ಭಯಾನಕ-ಭೀಕರವಾಗಿ ಹರಿಯುತ್ತಿದ್ದುವು. ರಹದಾರಿಯು ಅಪ್ಪಕ್ಕಷ್ಟೆ ಆದುದರಿಂದ, ಸರಕಾರವು ಸೇತುವೆ ಕಟ್ಟುವ ಗೋಜಿಗೆ ಹೋಗಿರಲಿಲ್ಲ. ಕ್ವಂಟನ್ ಪಟ್ಟಣ, ಮಲಾಯಾದ ಎಂಟು ಸಂಸ್ಥಾನಗಳಲ್ಲೊಂದಾದ **ಪಹಾಂಗ್** ಸಂಸ್ಥಾನದ ರಾಜಧಾನಿ. ರಾಜಧಾನಿಯಾಗಿದ್ದರೂ ಪಹಾಂಗದ ಸುಲ್ತಾನ್ ವಾಸಿಸುವುದು ಪೇಕನದಲ್ಲಿಯೇ. ಉಳಿದ ಸರಕಾರಿ ಕಚೇರಿಗಳು ಕ್ವಂಟನದಲ್ಲಿದ್ದುದರಿಂದ, ಕ್ವಂಟನಕ್ಕೆ ಪೇಕ್ಷಿಂತಲೂ ಹೆಚ್ಚಿನ ಸ್ಥಾನ–ಮಾನ ದೊರೆತಿತ್ತು. ಹೊಳೆಗಳ ಮತ್ತು ಸಮುದ್ರದ ಸಂಬಂಧವೇ ಅಲ್ಲಿಯ ಜನರಿಗೆ ಹೆಚ್ಚಾಗಿ ಬರುತ್ತಿದ್ದುದರಿಂದ, ಅಲ್ಲಿಯವರೆಲ್ಲ ಸಾಮಾನ್ಯವಾಗಿ ಈಸು ಬಲ್ಲವರೇ.

ನಮ್ಮ ಸೈನಿಕಪಡೆ ಬೀಡು ಬಿಟ್ಟುದು ಊರ ಹೊರಗೆ; ಊರ ಹೊರಗಿದ್ದರೂ ಊರಿಂದ ದೂರವಾಗಿರಲಿಲ್ಲ. ಕ್ವಂಟನ್ ಹೊಳೆ (ಹೊಳೆಯ ಹೆಸರೇ ಅದು) ಸಮುದ್ರಕ್ಕೆ ಕೂಡಿದ ದಂಡೆಯಲ್ಲಿಯೆ ನಮ್ಮ ಯುನಿಟ್ ಬೀಡು ಬಿಟ್ಟಿತ್ತು. ಅಲ್ಲಿ ಬೀಡು ಬಿಡುವುದಕ್ಕೆ ವಿಶೇಷ ಕಾರಣವಿತ್ತು. ಯುದ್ಧಸಮಯದಲ್ಲಿ ಜಪಾನಿ ಜನರು ಅದೇ ಸ್ಥಳದಲ್ಲಿ ಹಡಗುಕಟ್ಟುವ ಕಾರಖಾನೆಯನ್ನು ಕಟ್ಟಿಸಿಟ್ಟಿದ್ದರು. ಕಟ್ಟಿಸಿಟ್ಟ ಸ್ಥಳ, ಇದ್ದ ಸ್ಥಿತಿಯಲ್ಲಿಯೇ ಕೈವಶವಾದುದರಿಂದಲೂ ಅದೇ ಸರಿಯಾದ ಸ್ಥಳವೆನಿಸಿ, ನಮ್ಮ ಯುನಿಟ್ ಅಲ್ಲಿ ಪಾಳೆಯ ಹಾಕಿತು.

ಹಗಲಿರುಳೂ ಭೋರ್ಗರೆಯುವ ಸಾಗರದ ಸಪ್ಪಳಕ್ಕೆ, ಮೊದಲೆರಡು ದಿನ ಬೇಜಾರುಗೊಂಡೆವು. ಹೇಳಿಕೇಳಿ ಸೈನಿಕರು; ಗುಂಡುಗಳ ಸಪ್ಪಳದಿಂದ ಕಿವುಡಾದ ಕಿವಿಗಳಿಗೆ, ಸಮುದ್ರದ ಸಪ್ಪಳ ಎಷ್ಟರದು? ನಮ್ಮ ಯುನಿಟ್ **ಇನ್‌ಫಂಟ್ರಿಯಾಗಿರಲಿಲ್ಲ**; ಕೇವಲ ಸೈನಿಕವಾಹನಗಳನ್ನೂ, ಆಯುಧಗಳನ್ನೂ, ಯಾಂತ್ರಿಕ ಸಾಮಗ್ರಿಗಳನ್ನೂ ಸರಿಪಡಿಸುವ ತಾಂತ್ರಿಕ ಸೈನ್ಯಪಡೆಯಾಗಿದ್ದರೂ, ಎಲ್ಲರಿಗೂ ತಾಂತ್ರಿಕ ಶಿಕ್ಷಣದ ಜತೆಯಲ್ಲಿ ಸೈನಿಕ ಶಿಕ್ಷಣವನ್ನೂ ಕೊಡಲಾಗಿತ್ತು. ಆ ಪಡೆಯ ಹೆಸರನ್ನು ಹೇಳಿದರೂ ಒಳಿತೇ: **'೫೫ ಇಂಡಿಯನ್ ಮೊಬಾಯಿಲ್ ವರ್ಕ್‌ಶಾಪ್ ಕಂಪನಿ'** ಎಂದು ಹೆಸರು. ತಾಂತ್ರಿಕ ಸೈನಿಕಪಡೆ ಎಂದು ಒತ್ತಿ ಹೇಳುವುದರಲ್ಲಿ ಉದ್ದೇಶವಿಷ್ಟೇ: ಈ ಪಡೆಯಲ್ಲಿದ್ದ ಸೈನಿಕರೆಲ್ಲರೂ ಸ್ವಲ್ಪ ಕಲಿತವರು. ಕಾಲ್ದಳಗಳಲ್ಲಿ ನಿರಕ್ಷರಿಗಳಿಗೂ ಆಸ್ಪದ ಸಿಕ್ಕುವಂತೆ, ಈ ಪಡೆಯಲ್ಲಿ ಸಿಕ್ಕುವುದಿಲ್ಲ. ಆದುದರಿಂದ ಈ ಪಡೆಯಲ್ಲಿದ್ದವರು **ಸ್ವಲ್ಪ** ಮೃದು ಹೃದಯಿಗಳು. ಕಲಿತುದರ ಪರಿಣಾಮವೇನೋ!

ಪರದೇಶದಲ್ಲಿದ್ದಾಗ, ಅದೂ ಸೈನಿಕರಾಗಿದ್ದಾಗ ಬಂಧು ಬಳಗ ಯಾರೂ ಹತ್ತಿರವಿರುವುದಿಲ್ಲ. ಗೆಳೆಯರೇ ಸರ್ವಸ್ವ. ಎಲ್ಲರು ಸಮದುಃಖಿಗಳೇ. ಅಪ್ಪಿಯ ಬಾಂಧವ್ಯವು ನಿಜಕ್ಕೂ ನೋಡಿ ಆನಂದಪಡುವಂತಿರುತ್ತದೆ. ಊರಲ್ಲಿ ಏನೇನೋ ಕೆಟ್ಟ ಕೆಲಸ ಮಾಡಿ ಬಂದ ಕಿಡಿಗೇಡಿಗಳೂ ತಮ್ಮ ಕೆಟ್ಟತನವನ್ನು ಕಳೆದುಕೊಂಡು, ಇಲ್ಲಿ ಒಳ್ಳೆಯವರಾಗಿ ಪರಿಣಮಿಸಿದ ಉದಾಹರಣೆಗಳಿದ್ದುವು.

ಗುರುದಾಸ ಸಿಂಗನು ನನಗೆ ಮೊದಲಿನಿಂದಲೂ ಗೆಳೆಯನಾಗಿದ್ದ. ಶಿಕ್ಷಣಕೇಂದ್ರದಿಂದ ಹಿಡಿದು ಈ ವರೆಗೂ, ನಾವಿಬ್ಬರೂ ಒಂದೇ ಎಡೆಯಲ್ಲಿ ಕೆಲಸ ಮಾಡುತ್ತಿದ್ದೆವು. ಬಹುದಿನದ ಸಹವಾಸದಿಂದ ನಮ್ಮ ಗೆಳೆತನ ಮತ್ತಿಷ್ಟು ಹೆಚ್ಚಾಗಿ ಬೆಳೆದಿತ್ತು. ಅವನು ಬಂದುದ ಪಂಜಾಬದಲ್ಲಿಯ ಲುಧಿಯಾನಾ ಜಿಲ್ಲೆಯಿಂದ ಜಾತಿಯಿಂದ ಸಿಖ

ರಡಿ ಎತ್ತರದ ಆಜಾನುಬಾಹು. ಒಂದು ಮಧ್ಯಮ ಕುಟುಂಬಕ್ಕೆ ೇರಿದವನಾಗಿದ್ದ. ಸ್ವಂತದ ಹೊಲ-ಮನೆಗಳಿರದುದರಿಂದ, ಮುಂದಿಯ ೊಲವನ್ನೇ ಹಿಡಿದು ಮನೆತನವನ್ನು ಸಾಗಿಸುತ್ತಿದ್ದ ಗುರುದಾಸ ಂಗ. ಬಡತನಕ್ಕೆ ಬೆಸತ್ತು ಸೈನ್ಯಖಾತೆಯನ್ನು ಸೇರಿಕೊಂಡಿದ್ದ ಿಂದು ಅವನೇ ನಮ್ಮ ಮುಂದೆ ಹೇಳಿದ್ದ. ಆದರೂ ಅವನಿರುವ ಗೆ, ಅವನ ಹಾವಭಾವ, ಅವನ ಮಾತುಕತೆ, ಮುಖದ ಮೇಲೆ ಯಾವಾಗಲೂ ಸುಳಿಯುತ್ತಿದ್ದ ಅಂಜಿಕೆಯ ಕಳೆ– ಇವೆಲ್ಲವೂ ಅವನ ೈನಿಕ ಪೂರ್ವದ ನಾಗರಿಕ ಜೀವನದ ವಿಷಯವಾಗಿ ನನ್ನಲ್ಲಿ ಸಂದೇಹ ನ್ನುಂಟುಮಾಡುತ್ತಿದ್ದುವು. ನಮ್ಮಿಬ್ಬರಲ್ಲಿ ಗೆಳೆತನವು ಭದ್ಧನಾ ಾಗ, ನಾನು ಅವನನ್ನು, ಸೈನಿಕಖಾತೆಯಲ್ಲಿ ಸೇರಿದ ಕಾರಣ, ಅವನ ಪೂರ್ವಜೀವನ–ಇವುಗಳ ಬಗ್ಗೆ ಹೇಳಲು ಕೇಳಿದ್ದೆ. ಸಮರ್ಪಕವಾದ ಉತ್ತರವು ಮಾತ್ರ ದೊರೆತಿರಲಿಲ್ಲ. ಆದರೆ ಮುಖದ ಮೇಲಿನ ಅವನ ಅಂಜಿಕೆಯ ಕಳೆಯು ಅಡಗಲಿಲ್ಲ. ಒಂದು ದಿನ ಡಾಯಂಕಾಲ ರೂಲ್‌ಕಾಲ್ ಪರೇಡ ಮುಗಿಸಿಕೊಂಡು, ಸಮುದ್ರದ ಂಡೆಯ ಮೇಲೆ ಬಂದು ಕುಳಿತೆವು. ನಮ್ಮಿಬ್ಬರ ಜತೆಯಲ್ಲಿ ಅದೇ ೊಸದಾಗಿ ವರ್ಗವಾಗಿ ಬಂದ ಬಲಬೀರ ಸಿಂಗನೂ ಬಂದು ಕುಳಿತ. ಬಲಬೀರಸಿಂಗ ಇನ್ನೂ ಎಳೆಯ ಹುಡುಗ. ಸೈನ್ಯಖಾತೆಯನ್ನು ೇರಿ ಇದೀಗ ಒಂದುವರೆ ವರುಷ ಸಂದಿತ್ತು. ಮ್ಯಾಟ್ರಿಕ್ ಮುಗಿಸಿ ೊಂಡು, ಮುಂದೆ ಕಲಿಯುವ ಮನಸ್ಸಿಲ್ಲದುದರಿಂದ ಸೈನ್ಯ ಖಾತೆ ಯನ್ನು ಸೇರಿದ್ದ. ಹೆಚ್ಚುಕಡಿಮೆ ಸಮವಯಸ್ಕರ ಜತೆಯಲ್ಲಿಯೇ ಗೆಳೆತನ ಮಾಡುವುದು ಮನುಷ್ಯಸ್ವಭಾವವಾಗಿದ್ದುದರಿಂದ, ಬಲಬೀರ ಂಗನು ನನ್ನ ಜತೆಯಲ್ಲಿಯೇ ಓಡಾಡ ತೊಡಗಿದ. ಅವನು ನಮ್ಮ ಮುನಿಟ್ಟಿಗೆ ಬಂದು ಅದೇ ಎರಡು ದಿನಗಳಾಗಿದ್ದುವು. ರೂಲ್‌ಕಾಲ್ ರೇಡು ಮುಗಿದಾಕ್ಷಣ, ಅವನೂ ನಮ್ಮ ಜತೆಯಲ್ಲಿ ಕಡಲ ತಡಿಗೆ ಂದ. ಮೂವರೂ ಮಳಲಲ್ಲಿ ಕುಳಿತು ಮಾತನಾಡಲು ತೊಡಗಿ ೆವು. ಮಾತಿಗೆ ನಾನೇ ಪ್ರಾರಂಭಿಸಿದೆ.

"ಗುರುದಾಸ, ಇಲ್ಲಿಂದ ನಮ್ಮ ಊರು ಎಷ್ಟು ದೂರವಾಗಿದೆ ೊತ್ತುಂಟೊ?"

"..... ಹೂಂ" ಗುರುದಾಸಸಿಂಗ ಉತ್ತರವನ್ನು ಕೊಡಲಿಲ್ಲ; ದರ ಬದಲು ಒಂದು ನಿಟ್ಟುಸಿರನ್ನು ಬಿಟ್ಟ.

ನಾನೇ ಕೇಳಿದೆ:

"ಏನೋ! ಏನಾಗಿದೆ? ಯಾವಾಗ ನೋಡಿದರೂ ಚಿಂತೆಯೇ ನ್ನ ಮುಖದ ಮೇಲೆ ಕಾಣುತ್ತದಲ್ಲ? ಮನೆಯಲ್ಲಿದ್ದ ಹೆಂಡತಿಯ ನೆನಪಾಗುತ್ತದೆಯೇ?"

"ಹೆಂಡತಿ!.... ಎಲ್ಲಿಯ ಹೆಂಡತಿ?"

"ಅಂದರೆ.... ನಿನಗೆ ಹೆಂಡತಿ ಇಲ್ಲವೇ?"

"ಇದ್ದಳು!"

"ಇದ್ದಳು ಎಂದರೆ? ಈಗ ಇಲ್ಲವೆ?"

"ಇಲ್ಲವಾದಳಂತೇ ಈ ಅವಸ್ಥೆ. ಸತ್ತು ಐದು ವರುಷವಾಯ್ತು."

ಹೆಂಡತಿಯ ಬಗ್ಗೆ ಅವನಲ್ಲಿದ್ದ ಆದರವನ್ನು ಕಂಡು ನನಗೆ ಆನಂದವೇ ಎನಿಸಿತು. ಆದರೆ ಹೋದವರ ಬಗ್ಗೆ ಅತ್ತರೆ ಅವರು ತಿರುಗಿ ಬರುವುದುಂಟೆ? ಅವನನ್ನು ಸಂತಯಿಸುವ ಧ್ವನಿಯಲ್ಲಿಯೇ ಹೇಳಿದೆ:

"ಹೋಗಲಿ ಬಿಡಯ್ಯ! ಆದರೆ ಈ ಮಾತನ್ನು ನೀನು ನನಗೆ ಈ ಮೊದಲೆಂದೂ ಹೇಳಿಲ್ಲವಲ್ಲ!"

"ಏನು ಹೇಳುವುದು?"

"ತಮಗಿದ್ದ ದುಃಖವನ್ನು ಮುಂದಿಯವರು ಆಡಿದರೆ, ದುಃಖದ ಭಾರ ಕಡಿಮೆಯಾದಂತೆನಿಸುತ್ತದೆ."

"ಆ ದುಃಖ ಬೇರೆ. ನಾಲ್ಕು ಜನ ಹೋಗುವಂತೆ ಹೋಗಿದ್ದರೆ, ಹೋದ ದುಃಖವನ್ನು ಸಮಯ ಹೋದಂತೆ ಮರೆಯಬಹುದಿತ್ತು. ಆದರೆ ಇವಳ....."

ಅವನಿಂದ ಮುಂದೆ ಮಾತನಾಡಲಾಗಲಿಲ್ಲ. ಕಂಠ ಬಿಗಿದು ಬಂದಿತ್ತು. ನಾನು ಅವನನ್ನು ಸಂತಯಿಸಿದೆ. ಬಲಬೀರಸಿಂಗ ಅಷ್ಟು ಪರಿಚಯಸ್ಥನಲ್ಲ; ಆದುದರಿಂದ, ಅಸಹಾಯಸ್ಥಿತಿಯಲ್ಲಿ ಕುಳಿತು ಕೊಂಡಿದ್ದ.

ಅಷ್ಟರಲ್ಲಿ ಊಟದ ಗಂಟೆಯಾದುದರಿಂದ, ಗುರುದಾಸ ಸಿಂಗ ನನ್ನೂ ಬಲಬೀರಸಿಂಗನನ್ನೂ ಜತೆಯಲ್ಲಿ ಕರೆದುಕೊಂಡು ಮೆಸ್ ಕಡೆಗೆ ನಡೆದೆ. ಗುರುದಾಸಸಿಂಗ ತನ್ನ ಪೂರ್ವಜೀವನದ ಅರ್ಧ ಸಂಗತಿಯ ನ್ನಷ್ಟೇ ಹೇಳಿ. ನನ್ನ ಕುತೂಹಲವನ್ನು ಕೆರಳಿಸಿದ್ದ. "ನಾಲ್ಕು ಜನ ಹೋಗುವಂತೆ ಹೋಗಿದ್ದರೆ, ದುಃಖವನ್ನು ಮರೆಯ ಬಹುದಾಗಿತ್ತು ಆದರೆ!...." ಗುರುದಾಸನ ಅಸಂಧಿಗ್ಧ ಮಾತುಗಳಿಂದ, ಅವನ ಹೆಂಡತಿಯ ಬಗೆಗೆ ಯಾವುದೇ ಅಭಿಪ್ರಾಯಕ್ಕೆ ಬರಲು ನಾನು ಅಸಮರ್ಥನಾಗಿದ್ದೆ. ಗುರುದಾಸಸಿಂಗನ ಔದಾಸೀನ್ಯವನ್ನು ನೋಡಿ, ಇವನ ಹೆಂಡತಿ ಇವನಿಗೆ ಸರಿಯಾದ ಸುಖಕೊಡದೆ ವಾಮಮಾರ್ಗ ಕ್ಕಿಳಿದು, ಅದು ಜನರಿಗೆ ಗೊತ್ತಾದಾಗ ಆತ್ಮಹತ್ಯ ಮಾಡಿಕೊಂಡಿರ ಬಹುದೆಂಬ ಕಲ್ಪನೆಯನ್ನು ನಾನು ಮಾಡುತ್ತಿದ್ದೆ. ಆದರೆ ಗುರುದಾಸ ಸಿಂಗನ ಮುಖದ ಮೇಲಿನ ಭಯಾನಕವಾದ ಅಂಜಿಕೆಯ ಕಳೆಯನ್ನು ನೋಡಿದಾಗ, ಈ ಕಲ್ಪನೆ ಮಾಯವಾಗಿಬಿಡುತ್ತಿತ್ತು. ಆದರ ಸ್ಥಳ ದಲ್ಲಿ ಮತ್ತೊಂದು ಕಲ್ಪನೆ ಬರುತ್ತಿತ್ತು: "ಅವಳ ಮೇಲಿನ ಅರ್ಥ ವಾಗದ ಅಪಾವನೆಯಿಂದ ಮುನಿದು, ಇವನೇ ಅವಳನ್ನು ಪೀಡಿಸಿ ಪೀಡಿಸಿ ಕೊನೆಗಾಣಿಸಿರಬೇಕು...." ಎಲ್ಲವೂ ಕಲ್ಪನೆಯೆಂದಾಗ, ಮುಂದಿಯ ವಿಷಯದಲ್ಲಿ ಸಲ್ಲದ ವಿಚಾರವೇಕೆ—ಎಂದು ನನ್ನಷ್ಟಕ್ಕೆ ನಾನೇ ನಿಂದಿಸಿಕೊಳ್ಳುತ್ತಿದ್ದೆ. ಆದರೆ ಗುರುದಾಸಸಿಂಗ ತೀರ ಹತ್ತಿರದ ಗೆಳೆಯನಾದುದರಿಂದ, ಅವನು ಮುಂದಿ ಎಂದು ಎನಿಸಿಕೊಳ್ಳುತ್ತಿದ್ದಿಲ್ಲ. ನನ್ನ ಕಲ್ಪನೆಯ ಕುದುರೆಗಳು ಅಷ್ಟೇ ವೇಗದಿಂದ ಮುಂದೋಡು ತ್ತಿದ್ದುವು.

ಇವೆಲ್ಲ ವಿಚಾರಗಳು ನಡೆದಿದ್ದಾಗ, ನಮ್ಮ ಊಟವೂ ನಡೆಯು ತ್ತಿತ್ತು. ಊಟ ಮಾಡುತ್ತಿದ್ದಾಗ ಮೂವರೂ ಮಾತಾಡುತ್ತಿರಲಿಲ್ಲ. ಊಟವ ಮೊದಲು, ಗುರುದಾಸಸಿಂಗ ತೋಡಿಕೊಂಡ ದುಃಖವು,

ಮೂವರ ಮುಖದ ಮೇಲೂ ರುದ್ರ ಗಂಭೀರ ಕಳೆಯನ್ನು ತಂದಿರಿಸಿತ್ತು. ಆದರೆ ನನಗೂ ಬಲಬೀರಸಿಂಗನಿಗೂ ಆಗಿನ ಗಂಭೀರ ಮೌನವನ್ನು ಸಹಿಸಲಾಗುತ್ತಿರಲಿಲ್ಲ. ಊಟ ಮುಗಿಯುವುದಕ್ಕೆ ಬಂದಾಗ, ನಮ್ಮ ಯುನಿಟ್ ಹವಾಲ್ದಾರ್ ಮೇಜರ್ ಬಂದು, ಬಟಾಲಿಯನ್ ಆರ್ಡರ್‌ನ್ನು ಓದಿ ತೊರಿಸ ತೊಡಗಿದ :

"ಪ್ರತಿ ಹುಣ್ಣಿಮೆಗೆ ಹೊಳೆಯ ಆ ಬದಿಯ ದಂಡೆಯ ತೋಟದಲ್ಲಿ, ಬಾಲಿ ಹುಡುಗಿಯರ ನರ್ತನ ಕಾರ್ಯಕ್ರಮ ನಡೆಯುವುದು ಇಲ್ಲಿಯ ರೂಢಿಯಾಗಿದೆ. ಇಂದೂ ಅಲ್ಲಿ ರಾತ್ರಿಯ ೧೧ಕ್ಕೆ ಆ ಕಾರ್ಯಕ್ರಮವಿದೆ. ನೋಡಲು ಹೋಗಬಯಸುವವರು ಹೋಗಬಹುದು !"

ನಾನು ನಗು-ನಗುತ್ತಲೇ ಬಲಬೀರಸಿಂಗನಿಗೆ ಹೇಳಿದೆ: "ಈಗ ಈ ಗುರುದಾಸಸಿಂಗನ ದುಃಖವನ್ನು ಮರೆಯಿಸಲು ಒಳ್ಳೆಯ ಸಂದರ್ಭ ಸಿಕ್ಕಂತಾಯಿತು."

"ಹೌದು! ನಿಜವಾಗಿಯೂ, ಗುರುದಾಸ ಸಿಂಗ, ನೀವು ಬರಲೇ ಬೇಕು! ನಾವು ಮೂವರೂ ಕೂಡಿಯೇ ಹೋಗುವಾ!" ಎಂದು ಬಲಬೀರ ಸಿಂಗನೂ ದುಂಬಾಲುಬಿದ್ದ. ಗುರುದಾಸಸಿಂಗನು ಉದಾಸೀನತೆಯ ಸ್ವರದಲ್ಲಿಯೆ "ಆಗಲಿ" ಎಂದು ಉತ್ತರಿಸಿದ.

ಆ ಹೊತ್ತಿಗಾಗಲೇ ಊಟ ಮುಗಿದದ್ದರಿಂದ, ನಾವು ಮೂವರೂ ನಮ್ಮ ರೂಮಿಗೆ ಹೋಗಿ ಬಟ್ಟೆಗಳನ್ನು ಹಾಕಿಕೊಂಡು, ಹೊಳೆಯ ಆ ಬದಿಗೆ ಹೋಗಲು ಈಚೆಯ ದಂಡೆಗೆ ಬಂದು ನಿಂತೆವು. ದೋಣಿಗಳು ಕಡಿಮೆ ಇದ್ದುದರಿಂದಲೂ, ಹೋಗುವ ಸೈನಿಕರು ಹೆಚ್ಚಾಗಿ ಇದ್ದುದರಿಂದಲೂ, ಸೈನಿಕರು ಸರತಿಯಲ್ಲಿ ನಿಲ್ಲಬೇಕಾದ ಪ್ರಸಂಗ ಬಂದಿತು. ಆ ದೋಣಿಗಳು ಆ ದಂಡೆಯನ್ನು ಮುಟ್ಟಿ ತಿರುಗಿ ಈ ಬದಿಗೆ ಬರುವ ವರೆಗೂ, ಸರತಿಯಲ್ಲಿ ನಿಲ್ಲುವುದಕ್ಕಿಂತ ಬದಿಯಲ್ಲಿದ್ದ ಪ್ರಶಾಂತ ಸ್ಥಳದಲ್ಲಿ ಹೋಗಿ ಕೆಲಕಾಲ ಕೂಡಬೇಕೆಂದೆನಿಸಿತು. ನನ್ನ ಈ ವಿಚಾರವನ್ನು ಗುರುದಾಸನಿಗೂ ಬಲಬೀರನಿಗೂ ತಿಳಿಸಿದೆ. ಇಬ್ಬರಿಗೂ ಸಮ್ಮತವಾದುದರಿಂದ, ಮೂವರೂ ಆ ಸೈನಿಕರ ತಂಡದಿಂದ ದೂರ ಹೋಗಿ ಮಳಲಲ್ಲಿ ಕುಳಿತೆವು.

ಪೂರ್ಣಚಂದ್ರ ಆಕಾಶದಲ್ಲಿ ಮಿನಗುತ್ತಿದ್ದ. ಹೊಳೆಯ ನೀರು ಬೆಳ್ಳಿಗೆ ಮಿಂಚುತ್ತಿತ್ತು. ಇಂತಹ ಪ್ರಶಾಂತ ವಾತಾವರಣದಲ್ಲಿಯಾದರೂ ಗುರುದಾಸಸಿಂಗನು ತನ್ನ ಪೂರ್ವಕತೆಯನ್ನು ಹೇಳಿಯಾನು—ಎಂದೆಣಿಸಿ, ನಾನೇ ಅವನನ್ನು ಕೇಳಿದೆ :

"ಗುರುದಾಸ, ನಾನು ಈ ಮೊದಲೇ ಹೇಳಲಿಲ್ಲವೇ?" "ಏನು?"

"ತನ್ನ ದುಃಖವನ್ನು ಎರಡನೆಯವರ ಮುಂದೆ ತೋಡಿಕೊಂಡರೆ, ಅವನಿಗೆ ದುಃಖದ ಭಾರ ಕಡಿಮೆಯಾಗುತ್ತದೆಂದು ?"

ಗುರುದಾಸ ಮಾತನಾಡಲೆಲ್ಲ ಬಲಬೀರಸಿಂಗನೂ ಗುರುದಾಸನನ್ನು ವಿನಂತಿಸಿದ;

"ಹೌದು! ಗುರುದಾಸ, ಹೇಳು, ಅವಶ್ಯವಿದ್ದರೆ, ಕೈಯಿಂದಾದಷ್ಟು ಸಹಾಯ ಮಾಡುವೆವು."

"ನಾನು ಹೇಳಿದ್ದನ್ನು ನಿಸ್ಸುಲ್ಲಿಸಿ ಇರಿಸಿಕೊಳ್ಳುತ್ತೀರೆಂದರೆ ಹೇಳುತ್ತೇನೆ."

"ನನ್ನ ಬಗ್ಗೆ ನಿನಗೆ ಸಂದೇಹವೇ ?" ನಾನು ಕೇಳಿದೆ.

"ಅಲ್ಲ—ನಿನ್ನನ್ನು ಮೊದಲಿನಿಂದಲೂ ಬಲ್ಲೆ. ನಿನ್ನ ಬಗ್ಗೆ ಎಳ್ಳಷ್ಟೂ ಸಂದೇಹವಿಲ್ಲ."

"ಹಾಗಾದರೆ ?"

"ಬಲಬೀರ, ನೀನೂ ಒಳ್ಳೆಯ ಹುಡುಗ. ನೀನೂ ನನ್ನ ಎರಡು ಬಗೆಯಲಾರೆ—ಎಂದು ತಿಳಿಯುತ್ತೇನೆ."

ಬಲಬೀರ ಸಿಂಗನು ಕಳಕಳಿಯಿಂದ ಉತ್ತರಿಸಿದ :

"ನಿನಗೆ ಇವನು ಹೇಗೆ ಮಿತ್ರನೋ ನಾನೂ ಹಾಗೇಯೆ ಎಂದು ತಿಳಿ. ಎಳ್ಳಷ್ಟೂ ಸಂದೇಹಪಡಬೇಡ."

ಗುರುದಾಸಸಿಂಗನು ನಿದಾನವಾಗಿ ತನ್ನ ಕತೆಯನ್ನು ಹೇಳ ತೊಡಗಿದ:

"ಲುಧಿಯಾನಾದಿಂದ ೧೫ ಮೈಲಿನ ಮೇಲಿದ್ದ ಗಂಜ್ರಾವ ಪೂರ ಹಳ್ಳಿ ನನ್ನೂರು. ಮಂದಿಯ ಹೊಲ ಲಾವಣಿ ಹಿಡಿದು ಉಳು ಜೀವನ ಸಾಗಿಸುತ್ತಿದ್ದೆ. ಲಗ್ನವಾಗಿ ಅದೇ ಎರಡು ವರ್ಷಗಳಾಗಿದ್ದುವು ನನ್ನ ಹೆಂಡತಿಯೂ ನನ್ನ ಜತೆಗೆ ಹೊಲದಲ್ಲಿ ದುಡಿಯಲು ಬರುತ್ತಿದ್ದಳು. ಒಂದು ಸಲ ಹೀಗೆಯೆ ಇಬ್ಬರೂ ಹೊಲಕ್ಕೆ ಹೋದಾಗ ಯಾವುದೋ ಕೆಲಸಕ್ಕಾಗಿ ಹತ್ತಿರದ ಹಳ್ಳಿಗೆ ಹೋಗಬೇಕಾದ ಪ್ರಸಂಗ ನನಗೆ ಬಂದಿತ್ತು. ನಾನು ಅವಳೊಬ್ಬಳನ್ನೇ ಬಿಟ್ಟು ಹಳ್ಳಿಗೆ ಹೋದೆ ಮರಳಿ ಬೇಗನೇ ಬರುವುದಿದ್ದುದರಿಂದ, ಅವಳೊಬ್ಬಳನ್ನೇ ಹೊಲದಲ್ಲಿ ಬಿಟ್ಟು ನಡೆದೆ. ಆದರೆ ದುರ್ದೈವ! ಆ ಹಳ್ಳಿಗೆ ಹೋದ ಕೂಡಲೆ ಮಳೆ ಬಿದ್ದು ಹಳ್ಳ ತುಂಬಿ ಹರಿಯತೊಡಗಿ, ಹಾದಿಯನ್ನು ಕಟ್ಟಿತು. ಎರಡನೆಯ ದಿನ ಮುಂಜಾವಿನಲ್ಲಿ ಮನೆಯನ್ನು ಕಂಡೆ. ಆದರೆ ಎಲ್ಲವೂ ಘಾತವಾಗಿ ಹೋಗಿತ್ತು."

"ಅಂದರೆ ಏನಾಗಿತ್ತು ?" ನಾವಿಬ್ಬರೂ ಕೇಳಿದೆವು. "ಏನಾಗುವುದೇನು! ನನ್ನ ಹೆಂಡತಿ ವಿಷವನ್ನು ಕುಡಿದು, ಸಾಯುವ ಸ್ಥಿತಿಯಲ್ಲಿ ಬಿದ್ದಿದ್ದಳು!

"ಅದೇಕೆ? ಹಾಗೇಕೆ ಮಾಡಿದಳು ?" ಮತ್ತೆ ಕುತೂಹಲಗಳಾಗಿ ನಾವಿಬ್ಬರೂ ಅವನನ್ನು ಪ್ರಶ್ನಿಸಿದೆವು."

"ಅದನ್ನೇ ನಾನೂ ಅವಳನ್ನು ಕೇಳಿದೆ. ಅವಳು ಉತ್ತರಿಸಿದಳು....ನಾನು ಅವಳನ್ನು ಬಿಟ್ಟು ಹೋದ ಮೇಲೆ, ಕಗ್ಗತ್ತಲೆಯಾಗುವರೆಗೂ ಅವಳು ನನ್ನ ದಾರಿಯನ್ನು ನೋಡುತ್ತಿದ್ದಳು. ಅಷ್ಟರಲ್ಲಿಯೆ ಕುದುರೆಯ ಮೇಲಿಂದ ಯಾರೋ ಮೂರು ನಾಲ್ಕು ಜನ ಆ ಬಯಿಂದ ಬಂದರು. ಅವರು ಇವಳ ಬಳಿ ಬಂದಾಗ "ಇಂದು ಮಿಯಾವ ಪ್ರಾಣಿಯ ಬೇಟೆ ಸಿಗದಿದ್ದರೂ ಹಾನಿಯೇನೂ ಇಲ್ಲ! ಹೆಣ್ಣುಬೇಟೆ ಚೆನ್ನಾಗಿ ಸಿಕ್ಕಿತು" ಎಂದು ಹೇಳುತ್ತ, ಬಲಾತ್ಕಾರದಿಂದ ಅವಳನ್ನು ಕುದುರೆಯ ಮೇಲೆ ಹೇರಿಕೊಂಡು ದೂರ ಹೋಗಿ ಅವಳ ಮೇಲೆ ಅತ್ಯಾಚಾರವೆಸಗಿ ಬಿಟ್ಟುನಡೆದರಂತೆ. ಒಬ್ಬಳೇ ಒಬ್ಬಳು! ಏನು ಮಾಡಿಯಾಳು? ಆದರೂ ಬಲಾತ್ಕಾರವೆಸಗಿದವನ ಪತ್ತೆಯನ್ನು ಪರ್ಯಾಯದಿಂದ ತಿಳಿದುಕೊಂಡು ಬಂದಿದ್ದಳು. ಅವನ ವಿಶ್ವಾಸಳಾಗಿ ಮುಂದೆ ಜೀವನ ಮಾಡುವುದಕ್ಕೆ ಬೇಸತ್ತು ವಿಷ ಕುಡಿದಿದ್ದ

ಕ್ಷ. ಸಾಯುವ ಮುಂದೆ, "ಲುಧಿಯಾನಾದ ಜಮೀನದಾರನೇ ನ್ನ ಬಾಳನ್ನು ಕೆಡಿಸಿದ. ಈ ಸೇಡನ್ನು ತೀರಿಸಬೇಕು! ಎಂದಳು. ಮೀನದಾರನು ಬೇಟೆಯಾಡುವುದಕ್ಕೆ ನಮ್ಮ ಹತ್ತಿರದ ಹಳ್ಳಿಗೆ ಬರು ದ್ದ. ನನ್ನ ಮೈಯೆಲ್ಲ ಉರಿ ಬಿತ್ತು. ನಮ್ಮ ಹಳ್ಳಿ ಸಣ್ಣದಾಗಿ ದ್ದುದರಿಂದ, ವಿಷಯ ಯಾರ ಕಿವಿಯ ಮೇಲೂ ಹೋಗದೆ. ಒಳಗೊ ಗೇ ಮುಗಿದು ಹೋಯಿತು. ನನ್ನಲ್ಲಿ ದಿನೇದಿನೇ ಸೇಡಿನ ಬುದ್ಧಿ ಬೆಯತೊಡಗಿತು. ಒಂದು ದಿನ ಧೈರ್ಯ ಮಾಡಿ, ರಾತ್ರಿ ಲುಧಿ ಯಾನಾಕ್ಕೆ ಹೋಗಿ. ಜಮೀನದಾರನ ಮನೆಯನ್ನು ಸೇರಿ, ನನ್ನ ವಳನ್ನು ಪವಿತ್ರಮಾಡಿದ ಆ ಜಮೀನದಾರನ ಮನೆಗೆ ಬೆಂಕಿ ಹಚ್ಚಿ, ಕೈಗೆ ಕ್ಕ ಆಭರಣ ದೋಚಿಕೊಂಡು ಓಡಿಬಂದೆನು. ಎರಡನೆಯ ದಿನ ಪೇಪರಿ ಲ್ಲಿ ಜಮೀನದಾರನ ಮನೆಗೆ ಬೆಂಕಿ ಹತ್ತಿದ ಸುದ್ದಿ ಪ್ರಕಟವಾಗಿತ್ತು. ದರ ಜತೆಯಲ್ಲಿ ಜಮೀನದಾರನು ಬೆಂಕಿಯಲ್ಲಿ ಸುಟ್ಟು ಸತ್ತು ೋದ ಸುದ್ದಿಯೂ ಬಂದಿತ್ತು. ಪಾಪಿಗೆ ತಕ್ಕ ಶಾಸ್ತಿಯಾಯಿತೆಂದು, ಗೆದೆ. ಆದರೆ ಮುಂದೆ ಅಲ್ಲಿರುವುದು ಸರಿಯಾಗಿ ತೋರಲಿಲ್ಲ; ನ್ಯಖಾತೆಯನ್ನು ಸೇರಿದೆ."

"ಅಬ್ಬಾ, ನಿನ್ನ ಜೀವನದ ಈ ಪ್ರಸಂಗವು ಒಂದು ಕಥೆಯನ್ನೇ ರಿಯನಂತಿದೆ." ಎಂದು ನಾನು ನುಡಿದೆ.

ಬಲಬೀರ ಸಿಂಗ ಅಧೀರನಾಗಿಯೇ ಗುರುದಾಸಸಿಂಗನನ್ನು ೇಳಿದ:

"ಲುಧಿಯಾನಾದ ಜಮೀನದಾರನೆಂದರೆ? ಲುಧಿಯಾನಾದಲ್ಲಿ ಣಿಗೊಬ್ಬ ಜಮೀನದಾರರಿದ್ದಾರೆ."

"ದಿಲ್ಲೀ ಗೇಟ್ ಬದಿಯಲ್ಲಿದ್ದನಲ್ಲಾ: ಆ ಸ್ಪೇನುಸಿಂಗ ಬೇದಿ!"

"ಓಹೋ ಅವರೇ?" ವಿಚಿತ್ರ ಸ್ವರದಲ್ಲಿ ಬಲಬೀರಸಿಂಗನು ಸಿರನ್ನೆಳೆದ.

ದಂಡೆಯ ಮೇಲೆ ನಿಂತ ಜನಸಂದಣಿಯು ಮುಗಿಯಲು ಬಂದು ರಿಂದ, ನಾವು ಮೂವರೂ ಆ ಬದಿಗೆ ಹೊರಟೆವು. ಬಲಬೀರಸಿಂಗ ತ್ತೆ ರೂಮಿನತ್ತ ನಡೆದ.

"ಯಾಕೋ? ನೀನು ಬರುವುದಿಲ್ಲವೋ? ಎಂದು ಕೇಳಿದೆ."

"ಬಂದೆ! ಬ್ಯಾಟರಿಯನ್ನು ತೆಗೆದುಕೊಂಡು ಬಂದೆ!" ಎಂದೆ ತ್ತ ಬಲಬೀರ ಕೋಣೆಯ ಕಡೆಗೆ ಓಡುತ್ತಲೇ ನಡೆದ.

ನಾನು, ಗುರುದಾಸ ಸಿಂಗ ಇಬ್ಬರೇ ದೋಣಿ ನಿಲ್ಲುವ ಸ್ಥಳಕ್ಕೆ ಂದು ನಿಂತೆವು.

ಅರ್ಧ ತಾಸಿನ ನಂತರ ದೋಣಿ ಬಂದಿತು. ಎಲ್ಲರೂ ಹತ್ತಿ ರೂ ಬಲಬೀರಸಿಂಗ ಬರಲಿಲ್ಲ. ಕೋಣೆಯು ಕೂಗಳತೆಯ ೀಲೆಯೇ ಇದ್ದುದರಿಂದ, ನಾನೊಮ್ಮೆ ಕೂಗು ಹಾಕಿದೆ. ಬಲಬೀರ ಯಲ್ಲಿ ಟಾರ್ಚನ್ನು ಹಿಡಿದುಕೊಂಡೇ ಓಡುತ್ತ ಬಂದು, ದೋಣಿ ನ್ನು ಹತ್ತಿದ. ನಾನು ಬೇಕೆಂತಲೇ ಅವನನ್ನು ಹಾಸ್ಯ ಮಾಡಿದೆ:

"ಹುಣ್ಣಿವೆಯ ಚಂದ್ರನನ್ನು ನೋಡಲಿಕ್ಕೆ ಈ ಬ್ಯಾಟ್ರಯನ್ನು ಂದೆಯೇನು?"

"ಹತ್ತಿರ ಇರಬೇಕು. ಪ್ರಸಂಗ ಹೇಳಿ ಕೇಳಿ ಬರುತ್ತದೆಯೇ?"

"ಅಲ್ಲವೋ! ಬೇಗನೇ ಬರುತ್ತೇನೆಂದು ಹೇಳಿದವನು, ಅರ್ಧ ತಾಸಾದರೂ ನಿನ್ನ ಸುಳಿವೇ ಇದ್ದಿಲ್ಲವಲ್ಲಾ!"

"ಬೇಗನೇ ಬ್ಯಾಟ್ರ ಸಿಕ್ಕಲೇ ಇಲ್ಲ!"

ಬಲಬೀರನನ್ನ ಮಾತಿನತ್ತ ಲಕ್ಷ್ಯವಿಲ್ಲದವನಂತೆ ಗುರುದಾಸನತ್ತ ತಿರುಗಿದ. ದೋಣಿಯಲ್ಲಿದ್ದ ಇತರ ಸೈನಿಕರು ಹಾಡು ಹೇಳುತ್ತ ಒಂದು ಬದಿಗೆ ಕುಳಿತಿದ್ದರು. ನಾವು ಮೂರು ಜನರೂ ಹೋಗಿ ಒಂದು ಬದಿಗೆ ಕುಳಿತು ಹರಟೆಗೆ ಮೊದಲು ಮಾಡಿದೆವು. ಬಲಬೀರಸಿಂಗ ಗುರು ದಾಸನನ್ನು ಕೇಳಿದ:

"ಗುರುದಾಸ! ನಿನ್ನದೂ ಧೈರ್ಯ! ಪೋಲೀಸರ ಕೈಗೆ ನೀನು ಸಿಕ್ಕಿಬೀಳಲಿಲ್ಲವೆ?"

"ಸಿಕ್ಕುಬೀಳುವ ಅಂಜಿಕೆ ಆಗಲೇ ಇತ್ತು. ಈಗೇನು? ಒಂದೊಂದು ಸಲ ಅಂಜಿಕೆಯಾಗುತ್ತದೆ; ಆದರೂ ಒಂದು ಧೈರ್ಯ: ನಾನು ಮಾಡಿದ್ದು ಪಾಪವಲ್ಲ. ನನ್ನ ಪುನೆಯನ್ನು ಅವನು ಹಾಳು ಮಾಡಿದ. ನಾನು ಅವನ ಮನೆಯನ್ನು ಹಾಳು ಮಾಡಿದೆ. ಆಷ್ಟೆ!"

"ನೀನು ಹಣ, ಆಭರಣ ಬೇರೆ ದೋಚಿದೆಯಲ್ಲಾ! ಅವನ್ನೆಲ್ಲ ಎಲ್ಲಿಟ್ಟು ಬಿಟ್ಟೆ?"

ನಾನು ನಡುವೆಯೇ ಬಾಯಿ ಹಾಕಿದೆ: "ಏಕೆ ಬಲಬೀರ, ನೀನು ಅದನ್ನು ದೋಚಿಕೊಳ್ಳಬೇಕೆಂದು ಅದನ್ನಿಟ್ಟ ಸ್ಥಳವನ್ನು ಕೇಳುತ್ತಿದ್ದೀಯಾ"

ಗುರುದಾಸ ನನ್ನ ಮಾತಿಗೆ ನಕ್ಕು ಹೇಳಿದ:

"ನಾನು ಬರುವಾಗ, ನಮ್ಮ ಮನೆಯ ಆಡಿಗೆ ಮನೆಯಲ್ಲಿ ಹುಗಿದಿಟ್ಟು ಬಂದಿದ್ದೇನೆ. ಇಲ್ಲಿಂದ ರಿಲೀಜ್ ಆಗಿ ಹೋದ ಮೇಲೆ, ಅವನ್ನು ಹೊರಗೆ ತೆಗೆಯುವೆನು."

"ನಿನ್ನ ಊರು ಯಾವುದೆಂದಿ?"

"ಗಂಜಾಮ್‌ಪೂರ"

ಅಷ್ಟರಲ್ಲಿಯೆ ಆ ದಂಡೆ ಬಂದಿತು. ನಾನು ಇಬ್ಬರಿಗೂ ಹೇಳಿದೆ: "ಸಾಕು ನಿಮ್ಮ ಗಂಜಾಮ್‌ಪೂರ.... ಇಳಿಯರಿ ಇನ್ನು!"

ಮೂವರೂ ಇಳಿದು ನೃತ್ಯದ ಕ್ರೀಡಾಂಗಣಕ್ಕೆ ಹೋದೆವು.

x x x x

ನೃತ್ಯಸಮಾರಂಭವು ಮುಗಿದ ಬಳಿಕ, ಬೀಡಿಗೆ ಪುರಳಿದೆವು. ನಾವು ಮೂವರೂ ಮತ್ತೆ ದೋಣಿಯ ಮೇಲೆ ಹತ್ತಿದೆವು. ಜಪಾನಿ ಸಾದಾ ಕೈದಿಗಳೇ ದೋಣಿಗೆ ಹುಟ್ಟು ಹಾಕುತ್ತಿದ್ದರು. ಆಕಾಶದಲ್ಲಿ ಚಂದ್ರ ಇನ್ನೂ ಹೊಳೆಯುತ್ತಲೇ ಇದ್ದ.

ದೋಣಿ ನಡುಹೊಳೆಗೆ ಬಂದಾಗ, ಒನ್ಮಿಂದೊಮ್ಮೆಲೇ ನೀರು ಒಳಗೆ ಬರತೊಡಗಿತು. ದೋಣಿಯಲ್ಲಿದ್ದ ಹದಿನೆಂಟು ಜನರೂ ದಿಕ್ಕು ಕಾಣದವರಂತೆ ಯೋಚನೆಗೀಡಾದೆವು. ಒಂದು ದೊಡ್ಡ ತೂತೇ ಬಿದ್ದಿತ್ತು ದೋಣಿಗೆ. ಎಲ್ಲ ಸೈನಿಕರೂ ಹುಚ್ಚರಂತೆ, ಕೈಯಿಂದ ನೀರನ್ನು ಹೊರಚೆಲ್ಲ ಹತ್ತಿದರು. ಆದರೇನು? ನೀರು ರಭಸದಿಂದ ಒಳಗೆ ಬರತೊಡಗಿತು. ಎಲ್ಲರ ಮುಖವನ್ನೂ ಹುಚ್ಚುಕಳೆ ವ್ಯಾಪಿಸಿತು. ಹುಟ್ಟು ಹಾಕುವುದನ್ನು ನಿಲ್ಲಿಸಿದ್ದುದರಿಂದ, ದೋಣಿ

ಪ್ರವಾಹದ ಗುಂಟ ಸಮುದ್ರದತ್ತ ಸಾಗಿತು. ದಂಡೆ ಇನ್ನು ಮುಕ್ಕಾಲು ಫರ್ಲಾಂಗ್ ದೂರವಿತ್ತು. ಇನ್ನೂ ಒಂದು ಫರ್ಲಾಂಗ್ ದೂರವಿದ್ದಿದ್ದರೂ ಅಷ್ಟು ಅಂಜುತ್ತಿದ್ದಿಲ್ಲ; ಆದರೆ ಆ ಹೊಳೆಯಲ್ಲಿ ಮೊಸಳೆಗಳಿದ್ದ ಸುದ್ದಿಯಿಂದ ಎಲ್ಲರೂ ಭಯಭೀತರಾದರು. ದೋಣಿಯ ತೂತನ್ನು ಮುಚ್ಚುವ ಪ್ರಯತ್ನ ಅಯಶಸ್ವಿಯಾದದ್ದರಿಂದ. ಎಲ್ಲರೂ ದೇವರ ಮೇಲೆ ಭಾರಹಾಕಿ, ನೀರಲ್ಲಿ ಜಿಗಿದು ಈಸುತ್ತಲೇ ಹೋಗುವುದೆಂದು ನಿರ್ಧರಿಸಿದರು. ಬಲಬೀರ ಸಿಂಗನು, ಕೂಗುತ್ತಲೇ ನನ್ನ ಕೊರಳಿಗೆ ಬಿದ್ದು "ನನ್ನನ್ನು ಉಳಿಸುವುದು ನಿನ್ನನ್ನೇ ಕೂಡಿದೆ." ಎಂದು ಅಳಲುತೊಡಗಿದ. ಸ್ವಂತವ ಜೀವ ಉಳಿಸುವುದಕ್ಕೆ ಧಡಪಡಿಸುವ ನನಗೆ, ಅವನನ್ನು ಉಳಿಸುವುದು ಅಸಾಧ್ಯವಾಯಿತು. ಎಲ್ಲರೂ ಪಟಪಟನೆ ನೀರಲ್ಲಿ ಜಿಗಿದರು. ನಾನೂ ಬಲಬೀರನ ಕೈಯನ್ನು ಬಿಡಿಸಿಕೊಂಡು ನೀರಿಗೆ ಜಿಗಿಯಲು ಸಿದ್ದನಾದೆ. ಬಲಬೀರ ದೋಣಿಯಲ್ಲಿ ಕುಸಿದು ಬಿದ್ದ. ಗುರುದಾಸಸಿಂಗ ಹತ್ತಿರ ಬಂದವನೇ ಬಲಬೀರನನ್ನು ಬೆನ್ನಿಗೆ ಕಟ್ಟಿಕೊಂಡು ನೀರಿಗೆ ಜಿಗಿದ. ನಾನೂ ಅವನ ಹಿಂದೆಯೇ ನೀರಲ್ಲಿ ಜಿಗಿದೆ. ಜಿಗಿಯುವ ಹೊದಲು, ದಂಡೆಯ ದೆಸೆಯನ್ನು ಕಣ್ಣಿಂದ ನೋಡಿ, ಕಣ್ಣನ್ನು ಮುಚ್ಚಿಕೊಂಡು ಈಸಲು ತೊಡಗಿದೆ. ನಮ್ಮೆಲ್ಲರ ಜೀವನಸೂತ್ರ ಗಟ್ಟಿಯಾಗಿದ್ದಿತೇನೋ! ಎಲ್ಲರೂ ಸುರಕ್ಷಿತವಾಗಿ ದಂಡೆಯನ್ನು ಮುಟ್ಟಿದೆವು. ನಾನು ದಂಡೆಯನ್ನು ಮುಟ್ಟಿದಾಗ, ಗುರುದಾಸಸಿಂಗ ಬಲಬೀರನನ್ನು ಸಂತಯಿಸುತ್ತಿದ್ದ.

ಮೂವರೂ ದೇವರನ್ನು ನೆನೆಯುತ್ತ ನಮ್ಮ ಕೋಣೆಗೆ ಬಂದೆವು. ಕೋಣೆಯಲ್ಲಿದ್ದ ಸ್ವಿಚ್ಚನ್ನು ಒತ್ತಿ, ವಸ್ತ್ರಗಳನ್ನು ಬದಲಿಸಲಾರಂಭಿಸಿದೆವು. ನಾನಿನ್ನೂ ಬಟ್ಟೆಗಳನ್ನು ಬದಲಿಸಿರಲಿಲ್ಲ; ಅಷ್ಟರಲ್ಲಿಯೆ ಬಲಬೀರಸಿಂಗನು ಬಿಕ್ಕಿ ಬಿಕ್ಕಿ ಅಳುತ್ತ, ಗುರುದಾಸನ ಕಾಲಿಗೆ ಬಿದ್ದು ಪ್ರಾರ್ಥಿಸತೊಡಗಿದ:

"ಗುರುದಾಸ ಅಣ್ಣಾ! ನೀನು ನನ್ನನ್ನು ಕ್ಷಮಿಸಲಾರೆಯಾ?"

ನಾನು ಆಶ್ಚರ್ಯಚಕಿತನಾಗಿ ನೋಡಲುತೊಡಗಿದೆ.

ಗುರುದಾಸ ಮೃದುವಾದ ಸ್ವರದಲ್ಲಿ ಕೇಳತೊಡಗಿದ್ದ:

"ಕ್ಷಮೆ! ನೀನೇನು ಅಪರಾಧ ಮಾಡಿದೆ ಎಂದು ಕ್ಷಮೆ?"

"ಒಂದು ದೊಡ್ಡ ಅಪರಾಧ ಮಾಡಲುತೊಡಗಿದ್ದೆ!"

"ಏನದು?"

"ನಿನ್ನ.....ನೀನು ಕ್ಷಮಿಸುವೆನೆಂದು ಹೇಳಿದರೆ ಮಾತ್ರ ನಾನು ಹೇಳುವೆ. ನೀನು ಕ್ಷಮಿಸುವ ವರೆಗೂ ನಾನು ನಿನ್ನ ಕಾಲು ಬಿಡುವುದಿಲ್ಲ!"

"ನನ್ನನ್ನು ನಂಬು! ನಿನ್ನನ್ನು ಕ್ಷಮಿಸಿದ್ದೇನೆ!"

"ನನ್ನಾಣೆಯಾಗಿಯೂ?"

"ಸತ್ಯವಾಗಿಯೂ! ನನ್ನ ದೃಷ್ಟಿಯಲ್ಲಂತೂ ನೀನು ನನ್ನ ಬಗ್ಗೆ ಯಾವ ತಪ್ಪನ್ನೂ ಮಾಡಿಲ್ಲ!"

"ಇಲ್ಲ-ತಪ್ಪನ್ನು ಮಾಡಿದ್ದೇನೆ. ನಾನು ನಿನ್ನ ಪೂರ್ವದ ಕಥೆಯನ್ನು ಕೇಳಿ, ಅದನ್ನು ಲುಧಿಯಾನಾದ ಪೋಲೀಸ್ ಇನ್ಸಪೆಕ್ಟರರಿಗೆ ತಿಳಿಸಲು ಕಾಗದ ಬರೆದಿಟ್ಟಿದ್ದೇನೆ. ನಿನ್ನನ್ನು ಹಿಡಿಸಬೇಕೆಂದು ಇಚ್ಛಿಸಿದ್ದೆ. —"

"ನಿನಗೇಕಿಷ್ಟು ನನ್ನ ಮೇಲೆ ದ್ವೇಷ ಉಂಟಾಯಿತು:"

"ನಾನು ಲುಧಿಯಾನಾದ ಜಮೀನದಾರ್ ಪ್ರೇಮಸಿಂಗ ಬೇಡಿಯವರ ಮಗನು!!"

"ನೀವೆ?" ಎಂದು ಗುರುದಾಸಸಿಂಗನು ಒಮ್ಮೆಲೇ ಕೆರಳಿದನು. ನಾನು ದಿಗಿಲು ಬಡಿದವನಾಗಿ ನಿಂತಿದ್ದೆ. ಗುರುದಾಸಸಿಂಗನು ಬಳಿಸಾರಿ ಅವನನ್ನು ಸಂತಯಿಸುತ್ತಲೇ ಬಲಬೀರನಿಗೆ ಹೇಳಿದ:

"ನಿನ್ನನ್ನು ಗುರುದಾಸನು ಇದೀಗಲೇ ಜೀವದಿಂದುಳಿಸಿದ!"

"ಅದಕ್ಕೆಂತಲೇ—ನನ್ನಲ್ಲಿ ಬೆಳೆದ ಸೇಡು ಮಾಯವಾಯಿತು. ಗುರುದಾಸ ನನಗೆ ಜೀವದಾನ ಮಾಡಿದ. ಗುರುದಾಸನು ನನ್ನ ವೈರಿಯಲ್ಲ; ನನ್ನ ಹಿರಿಯಣ್ಣ!" ಬಲಬೀರ ಬಿಕ್ಕಿ ಬಿಕ್ಕಿ ಅಳತೊಡಗಿದ. ನಾನು ಅವನನ್ನು ಸಂತಯಿಸಲುತೊಡಗಿದೆ. ಬಲಬೀರ ಜೇಬಿನೊಳಗಿಂದ ಕಾಗದವನ್ನು ಹೊರತೆಗೆದು ತೋರಿಸಿದ. ಕಾಗದ ಪೂರ್ಣ ತೊಯ್ದು ಹೋಗಿತ್ತು. ಅದನ್ನೇ ತೆಗೆದು ತೋರಿಸುತ್ತ ಹೇಳಿದ. "ಬ್ಯಾಟರಿಯನ್ನು ತರುತ್ತೇನೆಂದು ನಿಮಗೆ ಹೇಳಿ, ಈ ಕಾಗದವನ್ನು ಲುಧಿಯಾನಾದ ಪೋಲಿಸ ಇನ್ಸ್‌ಪೆಕ್ಟರರಿಗೆ ಬರೆಟ್ಟಿದ್ದೆ." ಎಂದು ಹೇಳುತ್ತ, ಆ ಕಾಗದವನ್ನು ಹರಿದು ಹಾಕಿ ಮತ್ತೆ ಗುರುದಾಸನ ಕಾಲುಗಳನ್ನು ಹಿಡಿದು ಅಳಲುತೊಡಗಿದನು.

ಗುರುದಾಸ "ತಮ್ಮಾ" ಎಂದು ಬಲಬೀರನನ್ನು ಮೇಲಕೆತ್ತಿದ. ಇಬ್ಬರೂ ಒಬ್ಬರನ್ನೊಬ್ಬರು ಅಪ್ಪಿಕೊಂಡರು. ನಾನು ಇಬ್ಬರ ಬೆನ್ನ ಹೇಲೆ ಕೈಯಾಡಿಸಿದೆ. ಅಂತಃಕರಣ ಅರಳಿ ಕಂಬನಿಗರೆಯಲು ಹಚ್ಚಿತ್ತು. ಈ ಮಿಲನದಲ್ಲಿ ಸೇಡಿನ ಸಮಾಧಿಯಾಗಿತ್ತು.

೫೫ ವರ್ಷಗಳಿಂದ ಅನುಭವಪಟ್ಟ
ಕರ್ಕ ಮತ್ತು ಕಂಪನಿಯ
ಜ್ವರಗಡ್ಡೆಯ ಗುಳಿಗೆಗಳು
ಬಾಟ್ಲಿಗೆ ೧-೮-೦
ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.
ವಿಳಾಸ:—
ಗಜೇಂದ್ರ ರಾಮಚಂದ್ರ ಕರ್ಕ ಮತ್ತು ಕಂಪನಿ
ಗಿರಗಾಂವ, ಮುಂಬಯಿ. ೪

ಸ್ಥಿತ ಧೀಮಂತ ರಾ. ಶ್ರೀ. ಹುಕ್ಕೇರಿಕರು

ಶ್ರೀ. ನೆಗಳೂರ ರಂಗನಾಥ ಎಂ. ಎ., ಎಲ್. ಎಲ್. ಬಿ ಧಾರವಾಡ

—●—

ಶ್ರೀಮಾನ್ ಹುಕ್ಕೇರಿಕರ ರಾಮರಾಯರ ಕರ್ತೃತ್ವಶಕ್ತಿಯ ಕಲ್ಪನೆ ಬಹಳ ಜನ ಕನ್ನಡಿಗರಿಗಿಲ್ಲ. ಹಳ್ಳಿಯಲ್ಲಿ ಬೆಳೆಯುತ್ತ ಎನ್ಮೆಯ ಮೈ ತೊಳೆಯುತ್ತಿದ್ದ ಒಬ್ಬ ಬಡಹುಡುಗ, ಇಂದು ಮುಂಬಯಿ ರಾಜ್ಯದ ಒಂದು ಉಚ್ಚಸ್ಥಾನದಲ್ಲಿ ಕುಳಿತುಕೊಳ್ಳುವುದೆಂದರೆ, ಇದು ಕರ್ತೃತ್ವಶಕ್ತಿಯ ಗುರುತೇ ಅಲ್ಲವೆ?

●

ಪ್ರಾಚೀನ ಕಾಲದ ಯೌಗಿಕ ಪಾರಿಭಾಷಿಕ ಶಬ್ದಗಳನ್ನು ಇಂದಿನ ಸಂದರ್ಭಗಳಲ್ಲಿ ಬಳಸಿದರೆ ಕೆಲವರಿಗೆ ಹಿಡಿಸದು. ಅಂದಿನ ಸಂಸ್ಕೃತಿಯ ಪುನರುಜ್ಜೀವನ ಮಾಡಬೇಕೆಂದು ಹೇಳುವವರೆ ಈ ಭಾಷಾಪ್ರಯೋಗಕ್ಕೆ ಮೂಗು ಮುರಿವರು. ಅದಕ್ಕೆ ಕಾರಣವೂ ಇರಬಹುದು. ಯಾವ ವ್ಯಕ್ತಿಯ ಬಗ್ಗೆ ಆ ಶಬ್ದಪ್ರಯೋಗ ಮಾಡಲಾಗಿರುವುದೋ ಆ ವ್ಯಕ್ತಿಯು ಟೀಕೆ ಮಾಡುವವರ ದೃಷ್ಟಿಯಿಂದ ಆ ಪಾರಿಭಾಷಿಕ ಶಬ್ದದ ವರ್ಣನೆಯ ವಿವಿಧಾಂಗಗಳನ್ನು ಸಂಪೂರ್ಣವಾಗಿ ತುಂಬುವುದಿಲ್ಲ; ಸದಾಕಾಲ ತುಂಬುವದಿಲ್ಲ, ಎಂದು. ಪೂರ್ಣತ್ವದಿಂದ ಒಡಗೂಡಿದುದು ಮಾನವಮಾತ್ರವಾಗದು. ಮಾನವನು ಅಪೂರ್ಣವಿದ್ದು ಪೂರ್ಣತ್ವದ ಗುರಿಯತ್ತ ದಾರಿ ತುಳಿಯುತ್ತಿರುವನು. ಆದುದರಿಂದ ಆ ಪೂರ್ಣಮಾನವ ವರ್ಣನೆಯನ್ನು ಮಾಡುವಾಗ, ಆ ಶಬ್ದಗಳನ್ನು ಬಳಸಬಾರದೆಂಬುದು ಅಷ್ಟು ಸಾಧುವಲ್ಲ. ಆ ಶಬ್ದ ಪ್ರಯೋಗದಿಂದ ಉಂಟಾಗುವ ವಿಚಾರಗಳು–ಭಾವನೆಗಳು ಆ ವ್ಯಕ್ತಿಯ ಜೀವನ ಕಾರ್ಯಗಳನ್ನು ಪರಿಶೀಲಿಸುವಾಗ ಹೊರಹೊಮ್ಮಿದರೆ ಸಾಕು. ಶಬ್ದವು ಗುರುತಿಗಾಗಿಯಲ್ಲವೆ? ಗುರಿಯ ಸಾಧನೆಯ ಕೆಲಸ ವ್ಯಕ್ತಿಯದಲ್ಲವೆ?

ದೂರದಿಂದಲೆ ನೋಡುವಾಗ ದುರಾಲೋಚನೆ ಮೂಡುವುದು ಸ್ವಭಾವಿಕವಲ್ಲ. ಸಮೀಪ ಬಂದು ಸಹಾನುಭೂತಿಯಿಂದ ಸಹೃದಯತೆಯಿಂದ ನೋಡಿದಾಗ ದುರಾಲೋಚನೆಗಳು ಮಾಯವಾಗಿ ಸರಿಯಾದ ಕಲ್ಪನೆ ಮೂಡಿಬರುವುದು. ಸಮೀಪದ ದೃಶ್ಯವೆ ಸರಿಯಾದ ದೃಶ್ಯ. ಹೃದಯಸ್ಪರ್ಶಿಯಾದ ದೃಶ್ಯ. ಹಣೆಪಟ್ಟಿ ನೋಡಿ ಪುಣಾಕಾರವ ವಿಚಾರದವರಿಗೆ ಹೃದಯದ ವೈಭವದ ವಿಚಾರವಾದರೂ ಎಲ್ಲಿ ಬರುವುದು! ಬಹಿರಂಗದ ನೋಟ ಆವರಣದ ನೋಟ. ಅಂತರಂಗಕ್ಕೆ ಆವರಣವಿಲ್ಲ. ಆವರಣವು ಬದಲಾದ ಹಾಗೆಲ್ಲ ಅತಃಕರಣ ಬದಲಾಗದು. ಅತಃಕರಣ ಪ್ರವೃತ್ತಿಗಳನ್ನು ನೋಡಿ ಅರಿಯುವುದೇ ವ್ಯಕ್ತಿವೈಶಿಷ್ಟ್ಯವನ್ನು ತಿಳಿಯುವುದು.

ಕಳೆದ ಮೂವತ್ತು ವರ್ಷಗಳಿಂದ ಶ್ರೀ. ರಾ. ಶ್ರೀ. ಹುಕ್ಕೇರಿಕರ ಅವರನ್ನು ನೋಡುತ್ತ ಬಂದಿದ್ದೇನೆ. ಈ ಅವಧಿಯ ಬಹುಕಾಲ ನಾನು ಅವರನ್ನು ದೂರದಿಂದಲೆ ನೋಡಿದ್ದೇನೆ. ನಮ್ಮ ಅವರ ಮನೆ ಸಮೀಪವಾಗಿದ್ದರೂ ಮನಸ್ಸಾಮೀಪ್ಯವಾಗಿರಲಿಲ್ಲ. ಕಳೆದ ಕೆಲವು ವರ್ಷಗಳಿಂದ ಮನಸ್ಸಾಮೀಪ್ಯದ ಸನ್ನಿವೇಶಗಳು ಒದಗಿ ಬಂದು, ಹುಕ್ಕೇರಿಕರರ ಅಂತರಂಗದ–ಅಂತಃಕರಣದ ಪರಿಚಯವಾಗತೊಡಗಿತು. ನಿಸ್ತೇಜವೆಂದು ಕಂಡುಬರಬಹುದಾದ ಬಹಿರಂಗದ ಹಿಂದೆ ಎಂತಹ ತೇಜವಿದೆಯೆಂಬುದು ತಿಳಿಯತೊಡಗಿತು. ಸಪ್ಪಗೆ ಕಾಣುವ ಆವರಣದ ಪರಿಗೆ ಸತ್ತ್ವವಿದ್ದುದು ತಿಳಿಯತೊಡಗಿತು. ಸತ್ತ್ವಶಕ್ತಿಯೆ ಸಾಮರ್ಥ್ಯದ ಕುರುಹು; ಕಾರ್ಯಶಕ್ತಿಯ ಒಗರು. ಈ ಸತ್ತ್ವಶಕ್ತಿಯ ಪೋಷಣೆ-ಸಂರಕ್ಷಣೆಗಾಗಿ ಸಪ್ಪಗಿನ ಆವರಣವು ಸಂರಕ್ಷಕ ಕವಚವಾಗಿರಬಹುದು, ಎಂದು ತಿಳಿಯಿತು.

ಶ್ರೀ. ಹುಕ್ಕೇರಿಕರರ ಬಾಳು ಕೂಡ ಆವರಣಕ್ಕೆ ಮೋಸ ಹೋಗಿಲ್ಲ. ಅವರ ಜೀವನದಲ್ಲಿಯೆ ಆವರಣರೂಪಕ್ಕೆ ಗೌಣ ಸ್ಥಾನ. ಅಂತರಂಗಶಕ್ತಿ, ಚಾರಿತ್ರ್ಯಶಕ್ತಿ, ಶೀಲಶಕ್ತಿ, ಇವೆ ಕೊನೆ-ಬಾಳುವುವೆಂದು ಇವರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುವಂತೆ ಜೀವನದಲ್ಲಿಯ ಸನ್ನಿವೇಶಗಳು ಮಾಡಿವೆ. ಬಡತನದ ಭವಣೆಯು ಅದಕ್ಕೆ ಪುಟ ಹಾಕಿವೆ. ತಂದೆಯವರ ಜೀವನ ಮಾರ್ಗದರ್ಶನವಾಗಿದ್ದು; ತಾಯಿಯ ಅಂತಃಕರಣದ ಸಂರಕ್ಷಣೆ ಸದಾ ಎಚ್ಚರಿಸಿದೆ. ಸತ್‌ಶಿಕ್ಷಕರ ಸಲಹೆ ಸ್ಫೂರ್ತಿಕೊಟ್ಟಿದೆ, ಗೆಳೆಯರ ಸಹವಾಸ ಒರೆಗೆ ಹಚ್ಚಿದೆ.

ಹುಕ್ಕೇರಿಕರರ ಮೂಲನೆತನ ಮೂಲದಲ್ಲಿ ಹುಕ್ಕೇರಿಯದೆ. ಹುಕ್ಕೇರಿ ಬೆಳಗಾಂವಿ ಜಿಲ್ಲೆಯ ತಾಲೂಕಿನ ಸ್ಥಳ. ಮೊನ್ನೆಮೊನ್ನೆಯ ತನಕ ಹುಕ್ಕೇರಿಯ ಊರ ಸಂಬಂಧ ಪಿತ್ರಾರ್ಜಿತ ಆಸ್ತಿಯ ನಿಮಿತ್ತವಾಗಿತ್ತು: ಆದರೆ ಇವರ ತಂದೆ ಮಾತ್ರ ಹುಕ್ಕೇರಿಯನ್ನು ಬಿಟ್ಟು ಹೋಗಿ ಚಿಂಚಲಿಯಲ್ಲಿ ನೆಲಸಿದ್ದರು. ಅಣ್ಣನ ಸಂಗಡ ಯಾವುದೋ ಒಂದು ಸನ್ನಿ-

ವೇಶಕ್ಕಾಗಿ ತುಸ ಬಡಿದಾಟವಾಗಿ, ಅಭಿಮಾನಿಗಳಾದ ಶ್ರೀನಿವಾಸ ರಾಯರು 'ಅವಮಾನದ ಸ್ಥಳವೂ ಬೇಡ; ಅವಮಾನ ಮಾಡುವವರ ಸಂಬಂಧವೂ ಬೇಡ!' ಎಂದು, ಮೂಲಸ್ಥಾನವಾದ ಹುಕ್ಕೇರಿ ಬಿಟ್ಟು ಚಿಂಚಲಿಗೆ ಬಂದು ನೆಲಸಿದರು. ಅವರ ಆಯುಷ್ಯದಲ್ಲಿ ಪುರಳಿ ಹುಕ್ಕೇರಿಗೆ ಕಾಲು ಹಾಕಲಿಲ್ಲವಂತೆ. ಇದು ಕಠೋರ ವೃತ್ತಿಯೆಂದು ಕಂಡರೂ, ಅದನ್ನು ಪಾಲಿಸಿಕೊಂಡು ಬಂದ ನಿರ್ಧಾರಶಕ್ತಿಯು ಮಹತ್ತ್ವವುಳ್ಳದ್ದಾಗಿದೆ.

ಚಿಂಚಲಿಗೆ ಬಂದ ಶ್ರೀನಿವಾಸರಾಯರು, ಅಲ್ಲಿಯ ಇನಾಮದಾರ ದೇಸಾಯರಲ್ಲಿ ನೇತನಕ್ಕೆ ನಿಂತರು. (ಚಿಂಚಲಿ ಕೊಲ್ಲಾಪೂರಿ ಸಂಸಾನದ ಅಂಕಿತದಲ್ಲಿದ್ದ ಜಾಗೀರು.) ತಮ್ಮ ಸದಾಚಾರ-ಸುಸ್ವಭಾವ-ಸ್ವಾಭಿಮಾನಗಳ ಮೂಲಕ, ಊರಲ್ಲಿ ವಿಶೇಷ ಗೌರವ ಪಡೆದರಲ್ಲದೆ. ಇನಾಮದಾರರ ಭಕ್ತಿ-ವಿಶ್ವಾಸಗಳನ್ನೂ ಗಳಿಸಿದರು. ಲೌಕಿಕ ವೃತ್ತಿಯಲ್ಲಿ ಅವರು ಇನಾಮದಾರರ ನೌಕರರಾಗಿದ್ದರೂ, ಆ ಕಾಲದ ಸಂಪ್ರದಾಯದಂತೆ ಧಾರ್ಮಿಕ, ಆಚಾರ-ವಿಚಾರಗಳಿಗಾಗಿ ಪುರಾಣ-ಪಾಠ ಪ್ರವಚನ ನಡಸುತ್ತಿದ್ದುದಕ್ಕಾಗಿ, ಇನಾಮದಾರರು ಇವರಲ್ಲಿ ಗುರು-ಭಕ್ತಿಯನ್ನು ಇಟ್ಟುಕೊಂಡಿದ್ದರು. ಇದರಿಂದ ಲೌಕಿಕ ವ್ಯವಹಾರಕ್ಕೂ ಧಾರ್ಮಿಕ ಜೀವನಕ್ಕೂ ಚ್ಯುತಿ ಬರುತ್ತಿರಲಿಲ್ಲ. ಇಷ್ಟೇ ಅಲ್ಲ; ಪರಸ್ಪರರಲ್ಲಿ ವಿಶ್ವಾಸ ಬೆಳೆಸುತ್ತಿತ್ತು. ಆದರೆ ದುರ್ದೈವದಿಂದ, ಇಂದು ಈ ತರದ ನ್ಯವಹಾರ ಪ್ರವೃತ್ತಿ ಮಾಯವಾಗಿ, ಎಲ್ಲ ಕ್ಷೇತ್ರದಲ್ಲಿಯೂ ತಾನೇ ನೇಲು ಎಂಬ ಒಣ ಆಡಂಬರದ ಸಲ್ಲದ ಆಢ್ಯತೆಯ ಆವರಣ ಬಂದು, ಸಮಾಜದ ಜೀವನದ ಸಂಸ್ಕೃತಿಯು ಬುಡಮೇಲಾಗಿದೆ. ಇದರಿಂದ ಯಾರಿಗೂ ಹಿತವಿಲ್ಲದಾಗಿದೆ.

ಹುಕ್ಕೇರಿಕರ ರಾಮರಾಯರು ಚಿಂಚಲಿಯಲ್ಲಿ,ಅಲಲಒರ ಅಕ್ಕೋಬರ ೨೨ರಂದು ಹುಟ್ಟಿದರು. ಬಾಲ್ಯವೂ ಪ್ರಾಥಮಿಕ ಶಿಕ್ಷಣದ ಮೊದಲ ಮೂರು ಈಯತ್ತೆಗಳೂ ಚಿಂಚಲಿಯಲ್ಲಿಯೆ. ತೀರ ಎಳೆಯ ವಯಸ್ಸಿನಲ್ಲಿಯ ಅನುಭವಗಳು ಕೊನೆಬಾಳುವ ಅಚ್ಚನ್ನೊತ್ತುವುವು: ತಂದೆ ಶ್ರೀನಿವಾಸರಾಯರು, ತಮ್ಮ ಧಾರ್ಮಿಕ ಪ್ರವೃತ್ತಿಯ ಮೂಲಕ ಮನೆಯಲ್ಲಿ ಪ್ರತಿನಿತ್ಯ ಬೆಳಗು ಪುರಾಣ, ಗೀತಾಪಾರಾಯಣ ಮಾಡುತ್ತಿದ್ದರು. ಮನೆಯಲ್ಲಿಯ ಈ ಪುರಾಣವಾಚನ-ಪ್ರವಚನ, ಗೀತಾ ಪಠಣ ಇವು ಎಳಮಗುವಿನ ಮೇಲೆ ಒಳ್ಳೆಯ ಪರಿಣಾಮ ಮಾಡಿದುವು. ನಸುಕು ಹರಿಯುವುದರೊಳಗೆ ಏಳುವುದು ಮನೆತನದ ರೂಢಿಯಾಗಿದ್ದುದು ಆ ಕಾಲದಲ್ಲಿ ಪರಿಪಾಠವಿದ್ದುದರಿಂದ. ಇಂದಿಗೂ ರಾಮರಾಯರ ದಿನಚರ್ಯೆಯು ಬೆಳಗಿನ ಐದು ಗಂಟೆಗೆ ಪ್ರಾರಂಭವಾಗುವ ಹಾಗೆ ಮಾಡಿದೆ. ಏಳುವುದಕ್ಕೆ ಅವರಿಗೆ ಅಲಾರ್ಮ್ ಟಾಯಂಪೀಸಿನ ಆವಶ್ಯಕತೆಯಿಲ್ಲ. ನಸುಕು ಹರಿಯುವ ಮುನ್ನ ಏಳುವುದು ಒಂದು ಸಣ್ಣ ಸಂಗತಿಯೆಂದೆನ್ನಿಸಿದರೂ, ಚಳಿ – ಗಾಳಿ – ಮಳೆಗಳೆನ್ನದೆ ಬೆಳಗಿನಲ್ಲಿ ಏಳುವ ಪರಿಪಾಠದಿಂದ ದೈಹಿಕ ಆರೋಗ್ಯ ಬೆಳೆಯುವುದು ಎಂಬ ಮಾತು ಸಣ್ಣದಲ್ಲ. ನಮ್ಮ ದೇಶದ-ನಮ್ಮ ವರ್ಗದ-ಸಂಸ್ಕೃತಿಯ ಲಕ್ಷಣಗಳು, ಔದಾಸೀನ್ಯ ಆಲಸ್ಯಗಳ ಮೂಲಕ ಮಾಯವಾಗಹತ್ತಿದ್ದರಿಂದ, ಬೆಳೆಯುವ ಮಕ್ಕಳಿಗೆ ಮನೆಯಲ್ಲಿಯ ಮೂಲ ಸಾಂಸ್ಕೃತಿಕ ಶಿಕ್ಷಣವು ಇಂದು ಸಿಕ್ಕದಂತಾಗಿದೆ. ಇಂದಿನ ನೇಳೆಯ ಜನ ಸೂರ್ಯೋದಯದ ನಂತರ ಏಳುವ ಪರಿಪಾಠ ಇಟ್ಟುಕೊಂಡು, ತಾವು ತಮ್ಮ ಆಯುಷ್ಯದಲ್ಲಿ ಪ್ರತಿನಿತ್ಯ ಎರಡು ಮೂರು ಗಂಟೆಗಳ ಒಳ್ಳೆಯ ಕಾಲವನ್ನು ವ್ಯರ್ಥವಾಗಿ ಹಾಳು ಮಾಡಿಕೊಳ್ಳುತ್ತಿರುವರೆಂಬುದು ತಿಳಿದು ಬಂದಾಗ, ಆಗಿನ ಮನೆತನಗಳ ಪದ್ಧತಿಯು ಎಷ್ಟು ಒಳ್ಳೆಯದಾಗಿತ್ತು, ಎಂಬುದು ತಿಳಿದು ಬರುವುದು. ಆ ಒಳ್ಳೆಯ ಪದ್ಧತಿಯ ಸುಪರಿಣಾಮವನ್ನು ರಾಮರಾಯರ ಜೀವನದಲ್ಲಿ ಕಂಡುಕೊಳ್ಳಬಹುದಾಗಿದೆ.

ರಾಮರಾಯರ ಮನೆತನ ಅಚ್ಚಕನ್ನಡ ಮನೆತನ. ವೈಷ್ಣವ ಮನೆತನ. ಆದರೆ ಆಗಿನ ಕಾಲಪರಿಸ್ಥಿತಿಯ ಮೂಲಕ, ರಾಮರಾಯರ ಪ್ರಾಥಮಿಕ ಅಭ್ಯಾಸವು ಮರಾಠಿಯಲ್ಲಿಯೆ ಆಯಿತು. ಮಾತೃಭಾಷೆ ಕನ್ನಡವಿದ್ದರೂ ಮರಾಠಿಯಲ್ಲಿಯೆ ವ್ಯಾಸಂಗ ಮಾಡಬೇಕಾಯಿತು. ನನ್ನ ಪೀಳಿಗೆಯ ವರೆಗೆ ಈ ದುರ್ದಶೆ ಇದ್ದಿತೆಂದು ಹೇಳಿದರೆ, ಅದಕ್ಕೂ ಹಿಂದಿನ ೨೦ ವರುಷಗಳ ಪಾಡು ಹೇಳತೀರದು. ರಾಮರಾಯರ ಕನ್ನಡ ಮಾತಿನ ಸರಣಿಯಲ್ಲಿ ಮರಾಠಿಯ ವಾಕ್ಯರಚನೆ-ಶಬ್ದಗಳು ಇಂದಿಗೂ ಬರುತ್ತಿದ್ದರೆ, ಅದು ಮರಾಠಿಯ ಮೋಹದಿಂದಲ್ಲ-ಬಾಲ್ಯದಲ್ಲಿ ಮರಾಠಿ ಕಲಿಯಬೇಕಾಗಿ ಬಂದ ಪ್ರಸಂಗದ ಪರಿಣಾಮವದು.

ಚಿಂಚಲಿಯಲ್ಲಿ ಮೂರನೆಯ ಈಯತ್ತೆಯನ್ನು ಮುಗಿಸಿ ನಾಲ್ಕು, ಐದು, ಆರನೆಯ ಈಯತ್ತೆಗೆ ರಾಯಬಾಗಕ್ಕೆ ಹೋದರು ಈ ಮೇಲಿನ ಈಯತ್ತೆಗಳನ್ನು ಕಲಿಸಲು ಚಿಂಚಲಿಯಲ್ಲಿ ಅನುಕೂಲತೆ ಇರಲಿಲ್ಲ. ರಾಯಬಾಗದಲ್ಲಿ ರಾಮರಾಯರ ಅಣ್ಣ ಇರುತ್ತಿದ್ದರು. ಅಲ್ಲಿ ಮನೆಯ ಅನುಕೂಲವಿದ್ದಿತೆಂದು, ಪ್ರತಿನಿತ್ಯ ೬ಮೈಲಿನ ಅಂತರ ಹೋಗಿ ಬರುವ ಪ್ರಸಂಗವನ್ನು ತಪ್ಪಿಸಿತು. ಇಲ್ಲದಿದ್ದರೆ ಮುಂದೆ ಕಲಿಯುವುದನ್ನಾದರೂ ಬಿಡಬೇಕು; ಇಲ್ಲವೆ ದಿನವೂ ಆರಾರು ಮೈಲು ಹೋಗಿ ಬರಬೇಕು. ಕಲಿಯಬೇಕೆನ್ನುವ ಹುಮ್ಮಸ್ಸು ಇದ್ದವರಿಗೆ, ಅನುಕೂಲತೆ ಸಿಕ್ಕಲಾರದೆ ಎಷ್ಟೋ ಬಾಲಕರು ಕಮರಿಹೋಗುವುವೆಂಬುದನ್ನು ಇಂದಿಗೂ ಕಾಣುತ್ತೇವೆ. ಅಂದಿನ ಕಾಲ ಇನ್ನೂ ಕಠಿಣವಾಗಿತ್ತು.

ಪ್ರಾಥಮಿಕ ಅಭ್ಯಾಸ ಮುಗಿದ ಹೊತ್ತಿಗೆ, ರಾಮರಾಯರ ಜೀವನದಲ್ಲಿ ಎರಡು ಆಪತ್ತಿಗಳು ಬಂದುವು. ಒಂದು, ಇವರ ವಯಸ್ಸು ಸಣ್ಣದಿದ್ದ ಮೂಲಕ ಮುಲ್ಕೀ ಪರೀಕ್ಷೆಗೆ ಕೂಡಲು ಪರವಾನಿಗೆ ಸಿಕ್ಕಲಿಲ್ಲ. ಆಂದಿನ ಕಾಲದಲ್ಲಿ ಮುಲ್ಕೀ ಪರೀಕ್ಷೆಯಲ್ಲದೆ ಯಾವ ನೌಕರಿಗೂ ಮಾರ್ಗವಿಲ್ಲ-ಎಂಬ ಪರಿಸ್ಥಿತಿ. ಇದು ಒಂದು ಬಗೆಯ ಆಘಾತವಾಯಿತು. ಆದರೆ ಇದಕ್ಕೂ ಹೆಚ್ಚಿನ ಆಘಾತವು ಇವರ ತಂದೆಯವರ ಮರಣದಿಂದ ಆಯಿತು. ಇದು ಸಾಯಲಾರದ ಗಾಯ ಮಾಡಿತು. ಇದ್ದುಳ್ಳ ಮನೆತನವಲ್ಲ; ದುಡಿಯದೆ ದುಡ್ಡು ಬರಲಾರದ ಸ್ಥಿತಿ. ರಾಮರಾಯರ ಹಿರಿಯಣ್ಣಂದಿರು ಮೂವರು ಇದ್ದರೂ, ಯಾರೂ ಅಷ್ಟು ಸ್ಥಿತಿವಂತರಾಗಿದ್ದಿಲ್ಲ. ಅವರಲ್ಲಿ ಇಬ್ಬರು ಇನ್ನೂ ಕಲಿಯುವ ಎತ್ತುಗಡೆಯಲ್ಲಿದ್ದರು. ಎಲ್ಲಕ್ಕೂ ಹಿರಿಯರಾದ ನಾರಾಯಣರಾಯರು ಮೊದಲು ರಾಯಬಾಗದಲ್ಲಿ ಕಲಸ ಮಾಡುತ್ತಿದ್ದವರು, ಪುಣೆಗೆ ಲೋಕ

ಾನ್ಯ ಟಳಕರ ಕಡೆಗೆ ನೌಕರಿಗೆ ಹೋಗಿಬಿಟ್ಟಿದ್ದರು. ಇನ್ನಿಬ್ಬರು ಣ್ಣಂದಿರು ವಿಷ್ಣು-ಕೃಷ್ಣರು ಇಂಗ್ಲೀಸು ಕಲಿಯಲಿಕ್ಕೆಂದು ಜಮು ಂಡಿ-ಸಾಂಗಲಿ, ಟೊಂಧದತ್ತ ಅಲೆಯುತ್ತಿದ್ದರು. ಹೀಗಾಗಿ ಮನೆ-ನ ನಡೆಸುವುದು, ತಾಯಿಯ ಸಂರಕ್ಷಣೆ ಮಾಡುವುದರ ಹೊಣೆ ಯ ರಾಮರಾಯರ ಮೇಲೆಯೆ ಬಂದಿತು.

ಬಂದುದನ್ನು ಎದುರಿಸದೆ ಗತ್ಯಂತರವಿರಲಿಲ್ಲ. ಜೀವನರಥ ಗಬೇಕಲ್ಲ. ತಂದೆಯವರು ಮಾಡುತ್ತಿದ್ದ ಕೆಲಸವನ್ನು ಮಾಡು ಷ್ಟು ದೊಡ್ಡವರಲ್ಲ. ಆದುದರಿಂದ ವ್ಯಾಪಹಾರಿಕವಾಗಿ ನೌಕರಿ ಇರ ಲ್ಲ. ಆದರೆ ಧಾರ್ಮಿಕವಾಗಿ ಇವರ ತಂದೆ ಮಾಡುತ್ತಿದ್ದ ಕಾರ್ಯದ ಭಾರ ಇವರ ಮೇಲೆ ಬಿದ್ದಿತು. ಮನೆಯಲ್ಲಿ ತಾಯಿಗೆ ಪುರಾಣ ಹೇಳು ದು; ಇನಾಮದಾರರ ವಾಡೆಯಲ್ಲಿ ಪುರಾಣ ಹೇಳುವುದು ದಿನದ ರ್ಯವಾಯಿತು ಪುರಾಣ ನಡೆವುದೆಂದರೆ ಸುತ್ತಲಿನ ಜನ ಬರು ವರೆ. ಹೀಗಾಗಿ ತೀರ ಎಳವೆಯಲ್ಲಿಯೆ ಪ್ರವಚನ-ಪಾಠಗಳನ್ನು ನಡಿ ಸುವ ಯೋಗ ಬಂದಿತು. ಪುಣ್ಯೇರಿಕರರು ಇಂದು ಸಾರ್ವತ್ರಿಕವಾಗಿ ಮಾಸ್ತರು' ಎಂದು ಕರೆಸಿಕೊಳ್ಳುವ ಹಾಗೆ ಆಗುವ ಸಂಸಿವೇಶದ ಭೀಜಾಂಕುರ, ಈ ಪುರಾಣಪಾಠ-ಪ್ರವಚನಗಳ ಕ್ರಮದಲ್ಲಿಯೆ ತ್ತೆಂದು ಹೇಳಬಹುದು.

ಚಿಂಚಲಿಯ ಇನಾಮುದಾರರು ಮಾದರಿಯ ಜಾಗೀರದಾರ ರಾಗಿದ್ದರೆಂದು ಹೇಳಬಹುದು. ಪುರಾಣ ಹೇಳುವ ಈ ಹುಡುಗ ನನ್ನು ವಾಡೆಗೆ ಬಂದ ಕೂಡಲೆ, ಮೊದಲು ತಿನಿಸು ಕೊಡುವರು. ಬ್ಬ-ಪುಣ್ಣಿಮೆಗಳಲ್ಲಿ ಸುತ್ತಲಿನ ಅನೇಕ ಹುಡುಗರನ್ನು ಕರೆಯಿಸಿ ನಿಸು ಕೊಡುವರು. ದೀಪಾವಳಿಯಂತಹ ಹಬ್ಬಗಳಲ್ಲಿ ಫಲಾಹಾರದ ಳೂಟದ ವ್ಯವಸ್ಥೆ ಮಾಡುತ್ತಿದ್ದರಲ್ಲದೆ, ಜನರೂ ಸುಖಪಡಲಿ ಂದು ತಮ್ಮ ಸ್ವಂತ ವೆಚ್ಚದಿಂದ ವಾಸನೆಯೆಣ್ಣೆ ಜನರಿಗೆ ಹಂಚುತ್ತಿ ದ್ದರು. ಸುತ್ತಲಿನವರೂ ಸುಖಪಟ್ಟರೆ ತನ್ನ ಸುಖಕ್ಕೆ ಒಂದು ಬೆಲೆ ಯೆಂದು ತಿಳಿದ ಸಂಸ್ಥಾನಿಕರ ಕಾಲವದು. ಈ ಸಂಸ್ಥಾನಿಕರು, ರಾಜರು, ಮಹಾರಾಜರು, ಸಾರ್ವಜನಿಕರ ವಿಶ್ವಸ್ತ-ಧರ್ಮದರ್ಶಿ ಳಾಗಿ, ಸಾರ್ವಜನಿಕ ಸುಖಕ್ಕಾಗಿ ತಮ್ಮ ಆಸ್ತಿಯ ಉಪಯೋಗ ಮಾಡಬೇಕೆಂದು ಗಾಂಧೀಜಿ ಹೇಳುತ್ತಿದ್ದ ಮಾತಿನ ಪ್ರತ್ಯಕ್ಷ ನಿದರ್ಶನ ಳೆಯ ಕಾಲದಲ್ಲಿತ್ತು. ಇನಾಮದಾರರ ತಾಯಿಯು ಜಾತಿ, ಮತ, ಪಂಥಗಳ ಭೇದವಿಲ್ಲದೆ, ಬಾಣಂತಿಯರಾದ ಹೆಂಗಸರ ಸೇವೆ ಮಾಡು ತ್ತಿದ್ದರಲ್ಲದೆ, ಒಡವರಾದವರಿಗೆ ಅಕ್ಕಿ, ತುಪ್ಪ, ಸುಂಠಾವ ಪದಾರ್ಥ ಳನ್ನು ಒದಗಿಸುತ್ತಿದ್ದರು. ಆಗಿನದು ಧರ್ಮಕ್ಕೆ ಮನ್ನಣೆಕೊಡುವ ಕಾಲ. ಪ್ರತಿಯೊಬ್ಬನೂ ತನ್ನ ಕರ್ತವ್ಯ ಮಾಡಿದರೇ ಸಮಾಜದ ಉತ್ಕರ್ಷವಾಗುವುದು-ಎಂದು ತಿಳಿದ ಕಾಲ. ಈ ತರದ ಧಾರ್ಮಿಕ ಮನೋವೃತ್ತಿಯುಳ್ಳ ಇನಾಮುದಾರರ ಜಾಗೀರಿನ ಸ್ಥಳದಲ್ಲಿ ಬೆಳೆದ ರಾಮರಾಯರಲ್ಲಿ ಉಪಕಾರ ಪ್ರವೃತ್ತಿಯು ಮೂಡಿತೆಂಬುದು ಅವರ ಮುಂದಿನ ಬಾಳಿನಿಂದ ಗೊತ್ತಾಗುವುದು.

ತಂದೆ ತೀರಿದರು. ಅವರ ಪ್ರತ್ಯಕ್ಷ ಸಂರಕ್ಷಣೆಯ ಆಸರ ತಪ್ಪಿತು. ಆದರೆ ಅವರ ಚಾರಿತ್ರಶಕ್ತಿಯ-ಶೀಲ-ಸುಸ್ವಭಾವದ ಆದರ್ಶವು ಸದಾ ರಾಮರಾಯರಿಗೆ ಮಾರ್ಗದರ್ಶನ ಮಾಡುತ್ತಿತ್ತು. ಶ್ರೀನಿವಾಸರಾಯರು ಮಕ್ಕಳನ್ನು ಎಂದೂ ಬೈಯುತ್ತಿದ್ದಿಲ್ಲ. ಉಳಿದವರು ಯಾರಾದರೂ ಅಪಶಬ್ದ ವಾಡಿದರೆ, ಅವರಿಗೆ ಸೇರುತ್ತಿದ್ದಿಲ್ಲ. ಅವಾಚ್ಯ ಶಬ್ದಗಳನ್ನು ಎಂದೂ ಆಡಕೂಡದೆಂದು ಶ್ರೀನಿವಾಸರಾಯರ ಕಟ್ಟಪ್ಪಣೆ. ಆಚಾರಶೀಲವೃತ್ತಿ, ಸದಾಚಾರ ವೃತ್ತಿಯೆ ಸಾರ್ವಜನಿಕ ಮನ್ನಣೆಯ-ನೆಲೆಗಟ್ಟು ಎಂದು ನಂಬಿ ಬಾಳಿದವರು ಅವರು. ಅವರ ಜೀವಮಾನದಲ್ಲಿಯ ಒಂದು ಸಂಗತಿಯಿಂದ ಸದಾಚಾರದ ಬಗ್ಗೆ ಅವರ ದೃಷ್ಟಿಯು ಎಷ್ಟು ತೀವ್ರವಾಗಿತ್ತೆಂಬುದು ತಿಳಿವುದು: ಅವರು ಒಮ್ಮೆ ಊರಿಗೆ ಹೊರಟಿದ್ದರಂತೆ—ಒಬ್ಬ ಸಂಬಂಧಿಕರನ್ನು ಕಾಣಲು. ಆದರೆ ದಾರಿಯಲ್ಲಿ ಒಂದು ಹಳ್ಳಿಯಲ್ಲಿ ತಂಗಿದಾಗ, ಆ ಸಂಬಂಧಿಕರ ಬಗ್ಗೆ ಏನೋ ಸುದ್ದಿ ತಿಳಿಯಿತಂತೆ. ಸದಾಚಾರಹೀನರಾದವರು ತಮ್ಮ ಸಂಬಂಧಿಕರೆನಿಸಿಕೊಳ್ಳಲು ಯೋಗ್ಯರಲ್ಲ; ಅವರೊಡನೆ ಬಳಕೆ ಇಟ್ಟು ಕೊಳ್ಳುವುದು, ತರವಲ್ಲವೆಂದು ಮರಳಿ ಚಿಂಚಲಿಗೆ ಗಾಡಿ ಹೊಡೆಸಿದರು. ಊರನ್ನು ಮುಟ್ಟಿದ ಕೂಡಲೆ ಮನೆಯವರಿಗೆ ಸುದ್ದಿ ತಿಳಿಸಿ, ಇಂದಿನಿಂದ ಆ ಸಂಬಂಧಿಕರು ನಮ್ಮ ಪಾಲಿಗೆ ಸತ್ತಂತೆ ಎಂದು ತೀರ್ಮಾನ ಮಾಡಿ, ಸೂತಕಸ್ನಾನ ಮಾಡಿದರಂತೆ. ಇಂತಹ ಸದಾಚಾರಶೀಲವುಳ್ಳ ತಂದೆಯ ಆದರ್ಶವು ರಾಮರಾಯರಿಗೆ ಜೀವನದಲ್ಲಿ ಕೈದೀಪವಾಗಿದೆ.

ಅಣ್ಣಂದಿರು ಬೇರೆ ಊರುಗಳಲ್ಲಿರುತ್ತಿದ್ದುದರಿಂದ, ಕಿರಿಯರಾದರೂ ರಾಮರಾಯರಿಗೆ ಮನೆತನದ ಯಜಮಾನ್ಯ ಬಂದಿತು. ಪ್ರತಿನಿತ್ಯ ಹಳ್ಳಕ್ಕೆ ಹೋಗಿ ಎಮ್ಮೆಯ ಮೈತೊಳೆದು, ತನ್ನ ಅಂಗಿ-ಅರಿವೆಗಳನ್ನು ತಾಯಿಯ ಸೀರೆಗಳನ್ನು ಒಗೆದುಕೊಂಡು ಸ್ನಾನ ಮಾಡಿ, 'ಗುಂಡು-ಗೊಡ' ಎಂದು ಹೆಸರು ಪಡೆದ ದೊಡ್ಡ ಕೊಡಪಾನ್ನು ಹೊತ್ತುಕೊಂಡು ಮನೆಗೆ ಬರುವುದು. ಮತ್ತೆ ಹೊಲಕ್ಕೆ ಹೋಗಿ, ಕಣಕೆಹೊರೆಯನ್ನು ತಲೆಯ ಮೇಲೆ ಹೊತ್ತುಕೊಂಡು ಬರುವುದು; ಪಲ್ಲೆಕಾಯಿ ಆರಿಸಿ ಕೊಂಡು ಬರುವುದು. ಬೆಳಗು-ಸಂಜೆಗೆ ಪುರಾಣ ಹೇಳುವುದು. ಇವೆಲ್ಲ ದಿನದ ಕಾರ್ಯಕ್ರಮವಾದುದರಿಂದ, ತೀರ ಚಿಕ್ಕಂದಿನಲ್ಲಿಯೂ ಕೂಡ ಆಟ-ನೋಟಗಳಿಗೆ ಸಮಯ ಸಿಕ್ಕದೆ ಇದ್ದುದರಿಂದಲೂ, ಕೆಲಸವು ವ್ಯಾಯಾಮವಾಗಿ ಪರಿಣಮಿಸುತ್ತಿದ್ದುದರಿಂದಲೂ, ಅಂದಾಗಲಿ ಮುಂದಾಗಲಿ-ರಾಮರಾಯರಿಗೆ ಆಟದ ಮನೋವೃತ್ತಿ ಬರಲೇ ಇಲ್ಲ. ಕೆಲಸ ಮಾಡಿಯೇ ದೈಹಿಕ ಆರೋಗ್ಯ ಕಾಯ್ದುಕೊಳ್ಳುವ ರೂಢಿಯಾಯಿತು; ಅದಕ್ಕೆಂದೇ ಕೆಲಸವೆಂದರೆ ರಾಮರಾಯರ ಮೈಯುಬ್ಬುವುದು ಆಲಸ್ಯದಿಂದ ಅತಿಗಳಿಗೆ ಕಳೆವುದು ಅವರಿಗೆ ಮರಣಸಮನಾದ ಯಾತನೆಯನ್ನುಂಟು ಮಾಡುವುದು ಕಾರ್ಯದ ಘನತೆಯು ಅವರಿಗೆ ಮುಪತೆಯನ್ನು ತಂದುಕೊಟ್ಟಿದೆಯೆಂಬುದು ತಿಳಿಯ ಬೇಕಾದ ಸಂಗತಿಯಾಗಿದೆ ದುಡಿತ ಅವರಿಗೆ ದಡ್ಡು ಬಿದ್ದಿದೆ. ದೊಡ್ಡತನವನ್ನು ತಂದಿದೆ.

ತಂದೆಯ ಜೀವನದ ಆದರ್ಶವು ಒಂದು ಮುಖವನ್ನು ಒಪವಿಸಿತು. ತಾಯಿಯ ಆತಃಕರಣದ ಸಂರಕ್ಷಣೆಯು ಇನ್ನೊಂದು ಮುಖವನ್ನು ಒಡಪಿಸಿತು. ಚಿಂಚಲಿ ಈಗ ತುಸು ಬೆಳೆದ ಊರಾಗಿದ್ದರೂ,

ಆಗ ಸುಮಾರು ಎರಡು ಸಾವಿರ ಜನವಸತಿಯ ಊರು. ಊರ ಮಾನದಿಂದ ಅಲ್ಲಿ ಸೂಳೆಯರ ಸಂಖ್ಯೆ ಬಹು ದೊಡ್ಡದು. ಅದಕ್ಕೆ ಕಾರಣವಿದ್ದಿತು. ಚಿಂಚಲಿಯಲ್ಲಿ ಒಂದು ದೊಡ್ಡ ಮಹಾಕಾಳಿಯ ದೇವಾಲಯವಿರುತ್ತದೆ. ಈ ದೇವಿಗೆ ಬಸವಿಗಳನ್ನು ಬಿಡುವ ಪರಿಪಾಠ ಅಲ್ಲಿ. ಬಸವಿಗಳು ದೇವಿಯ ಪೂಜೆಯ ಕಾಲಕ್ಕೆ–ಜಾತ್ರೆಯ ಕಾಲಕ್ಕೆ–ತಮ್ಮನ್ನು ಸೇವೆ ಸಲ್ಲಿಸುತ್ತಿದ್ದರು. ಈ ಬಸವಿಯರ ಹಾವಳಿಯು ಹೆಚ್ಚಾಗಿತ್ತು. ಹದಿನಾರು ವಯಸ್ಸು ಮೀರಿದ ಹುಡುಗ ದಾರಿ ಬಿಟ್ಟು ವರ್ತನ ನಡಿಸದೆ ಇದ್ದರೆ ಅದು ಅವನ ಪುಣ್ಯ – ಅವನ ಮನೆತನದ ಪುಣ್ಯ. ಇಷ್ಟು ಗಂಭೀರ ಪರಿಸ್ಥಿತಿಯು ಆಗಿನ ಚಿಂಚಲಿಯಲ್ಲಿತ್ತು. ಈ ಬಸವಿಗಳ ಕೈಗೆ ಮಗನು ಸಿಕ್ಕಬಾರದೆಂದು ತಾಯಿ ರಾಧಾಬಾಯಿ ಸದಾ ಜಾಗ್ರತೆ ವಹಿಸುವಳು. ಸಂಜೆಯು ಏಳು ಗಂಟೆಯಾಗುವುದರಲ್ಲೆ ಮಗನು ಮನೆಗೆ ಬರಲೇಬೇಕೆಂಬ ಕಟ್ಟಪ್ಪಣೆ. ಒಂದು ನಿಮಿಷ ತಡವಾದರೂ ಅಂದಿನ ಸಂಜೆಯ ಊಟಕ್ಕೆ ಚಕ್ರ. ಈ ನಿರ್ಬಂಧವು ಒಂದು ಬಗೆಯ ವಿಧೇಯತೆಯನ್ನು ರಾಮರಾಯರಲ್ಲಿ ತಂದಿತು. ಪುರಾಣ ಓದುವುದು, ಗೀತಾ ಪಾರಾಯಣ ಮಾಡುವುದು, ಮನೋವಿಕಾಸ—ಧೈರ್ಯಗಳನ್ನು ತಂದುಕೊಡುತ್ತಿದ್ದುವಲ್ಲದೆ, ತಾಯಿಯ ಕಟ್ಟಪ್ಪಣೆಯು ವಿಧೇಯತೆಯ ಗುಣವನ್ನು ಬೆಳೆಸಿದುವು. ಮೇಲಾಗಿ ಊರಲ್ಲಿಯ ಉಳಿದ ಜನರು ಬಸವಿಗಳ ಬಲೆಗೆ ಬಿದ್ದು ಬೇನೆಗೆ ತುತ್ತಾದ ಉದಾಹರಣೆಗಳು ಹೆದರಿಕೆಯನ್ನು ಹುಟ್ಟಿಸಿದ್ದರಿಂದ, ಅನೀತಿಯ ದಾರಿಯು ರಾಮರಾಯರ ಸಮೀಪ ಸುಳಿಯಲಿಲ್ಲ ಕೂಡ. ರಾಮನೆಂಬ ಹೆಸರು ಅನ್ವರ್ಥಕವಾಗಿರುವಂತೆ ಬಾಳು ಸಾಗಿಸುವ ಮನೋನಿರ್ಧಾರ ತಂದು ಕೊಟ್ಟುವು.

ಮುಳ್ಳಿಗೆ ವಯಸ್ಸು ಇಲ್ಲದೆ, ಮತ್ತು ತಂದೆ ತೀರಿದ ಕಾರಣದಿಂದ ಯಾಜಮಾನ್ಯ ವಹಿಸಿ ಮನೆಯಲ್ಲಿ ಕಾಲಕಳೆವಾಗ, ಒಂದು ಮಾತು ರಾಮರಾಯರ ಕಿವಿಗೆ ಬಿದ್ದಿತು. "ಬಾಳಿನಲ್ಲಿ ಮುಂದಾಗಬೇಕೆನ್ನುವವರು ಇಂಗ್ಲಿಷು ಕಲಿಯಬೇಕು!" ಈ ಮಾತು ವಿಲಕ್ಷಣ ಚಾಲಕಶಕ್ತಿಯನ್ನು ಹುಟ್ಟಿಸಿತು. ರಾಮರಾಯರ ಅಣ್ಣಂದಿರು ಇಂಗ್ಲಿಶ್ ಕಲಿವ ಪವ್ಯಾಸದಲ್ಲಿ ತೊಡಗಿದ್ದರೂ. ಅದರಿಂದೆ ಈ ದೃಷ್ಟಿಯ ದರ್ಶನವಾಗಿದ್ದಿಲ್ಲ. "ಮುಂದೆ ಬರಬೇಕಾದರೆ ಇಂಗ್ಲಿಶ್ ಕಲಿಯಬೇಕು—ಕೇವಲ ನೌಕರಿಗಾಗಿ—ಹೊಟ್ಟೆಹೊರೆದುಕೊಳ್ಳಲು ಅಲ್ಲ; ಹೊಟ್ಟೆ ಹೊರೆದುಕೊಳ್ಳಲು ಮುಳ್ಳಿ ಸಾಕಾಗಿತ್ತು." ಮುಂದೆ ಬರಬೇಕೆನ್ನುವ ಪವ್ಯಾಸವು ಇಂಗ್ಲಿಶ್ ಕಲಿಯುವ ವಿಚಾರವನ್ನು ಪ್ರಚೋದಿಸಿತು. ತಾನು ಇಂಗ್ಲಿಷ್ ಕಲಿಯಬೇಕು—ಮುಂದಾಗಬೇಕು—ಈ ವಿಚಾರ, ಗಾಳಿ ಹೊಕ್ಕ ಕರುವಿನಂತೆ ರಾಮರಾಯರನ್ನು ಹೊಯ್ದಾಡಿಸಿತು. ವಿಚಾರ ಮೂಡಿತು. ಯೋಜನೆಗೆ ತೊಡಗಿದರು. ಆದರೆ ನಾಲ್ಕು ಜನರನ್ನು ಕೇಳಿ ತಿಳಿದುಕೊಳ್ಳಬೇಕೆಂದರೆ ಬೊಬ್ಬಾಟವಾಗುವುದು. ಮೇಲಾಗಿ ಚಿಂಚಲಿಯಲ್ಲಿ ತಿಳಿಹೇಳುವವರಾದರೂ ಯಾರು ? ಮನದಲ್ಲಿಯೆ ಲೆಕ್ಕ ಹಾಕುತ್ತ ಹಾಕುತ್ತ 'ಕೊಲ್ಹಾಪುರಕ್ಕೆ ಹೋದರೆ ಆಗುವುದು. ಅದು ದೊಡ್ಡೂರು. ಅಲ್ಲಿ ಇಂಗ್ಲೀಶ್ ಕಲಿಸುವ ವ್ಯವಸ್ಥೆ ಇರಬೇಕು" ಎಂದು ಮಾಡಿದರು. ತಾಯಿ ಒಮ್ಮೆ ಹೊಲದ ವಸೂಲಿಗೆ ಹುಕ್ಕೇರಿಗೆ ಹೋದಾಗ, ಮನೆಯಲ್ಲಿಯ ಒಂದು ರೂಪಾಯಿಯನ್ನು—ಅಲ್ಲಿ ೨೦ ರೂಪಾಯಿಗಳಿದ್ದರೂ—ತೆಗೆದುಕೊಂಡು, ಕುಂಟೆ ಶಿವ್ಯಾ ಎಂಬ ಗೆಳೆಯನನ್ನು ಜೋಡಿಸಿಕೊಂಡು, ರಾಮರಾಯರು ಕೊಲ್ಹಾಪುರನತ್ತ ಕಾಲುನಡಿಗೆಯಾಗಿದರು. ಕೊಲ್ಹಾಪುರವು ಚಿಂಚಲಿಯಿಂದ ಬರಿಯೆ ನಾಲ್ಕು ಮೈಲು. ಇಂಗ್ಲಿಶ್ ಕಲಿಯಬೇಕೆಂಬ ಹುಮ್ಮಸದಲ್ಲಿ ರಾಮರಾಯರು ನಾಲ್ಕು ನೂರು ಮೈಲುಗಳನ್ನಾದರೂ ನಡೆಯಬಹುದಾಗಿತ್ತು. ಅವರ ಅಸಕ್ತಿ. ನಡೆದು ಬಂದರೂ ಪಡೆದು ಬಂದಿದ್ದಿಲ್ಲ ರಾಮರಾಯರು. ಅದಕ್ಕಾಗಿ ಕಂಡವರ ಮುಖ ನೋಡಿ ಅಂಡಲೆದರೂ ಇಂಗ್ಲಿಶ್ ಕಲಿಸುವ ಪುಣ್ಯವಂತರು ಕೊಲ್ಹಾಪುರದಲ್ಲಿ ದೊರೆಯುವಾರ ಹಚ್ಚಿಕೊಂಡಾದರೂ ಕಲಿಯಬೇಕೆಂದರೆ, ಅದೂ ಸಾಧ್ಯವಿಲ್ಲ. ಬೀದಿ ಬೀದಿ ಅಲೆಯುವುದನ್ನು ಕಂಡು ಇವರ ಜತೆ ಕುಂಟಶಿವ್ಯಾ, ಇದು ತನಗೆ ಹೊಂದದ ವಿಷಯವೆಂದು ಮರುದಿನ ಊರಿಗೆ ಮರಳಿದನು. ಚುರಮರಿ-ಪುತಾಣಿ ತಿಂದು, ಎರಡು ದಿನ ಪ್ರಯತ್ನ ಪಟ್ಟರೂ ಎಲ್ಲಿಯೂ ಯಾವ ಅನುಕೂಲವೂ ಆಗಲಿಲ್ಲ. ಕೊನೆಗೆ ಚಿಂಚಲೀಕರರ ಕಾರಭಾರಿಯನ್ನು ಕಂಡಾಗ, ಅವನೂ ತನ್ನ ಅಸಹಾಯತೆಯನ್ನು ವ್ಯಕ್ತಪಡಿಸಿದನಾದರೂ ಗಾಡಿಯ ನೆಚ್ಚಕ್ಕೆ ದುಡ್ಡು ಕೊಟ್ಟನು. ಅದನ್ನು ತೆಗೆದುಕೊಂಡು ಊರಿಗೆ ಬರಬೇಕೆಂದು ಅನ್ನಿಸಲಿಲ್ಲ. ಇಷ್ಟು ಕಷ್ಟ ನಡೆದು ಬಂದರೂ ಇಷ್ಟಸಿದ್ಧಿಯಾಗಲಿಲ್ಲವೆಂಬ ಕಳವಳ, ರಾಮರಾಯರನ್ನು ಸಾಂಗಲಿಗೆ ಜಗ್ಗಿತು. ಅಲ್ಲಿಯ ಒಬ್ಬ—ಹಲನಾಯಿ—ಮಿರಜಿಗಾರ ಚಿಂಚಲಿಯ ಜಾತ್ರೆಗೆ ಬರುತ್ತಿದ್ದಾಗಿನ ಪರಿಚಯ. ಅವರ ಹೋದರು. ಅವನು ಇವರ ಅಕಾಂಕ್ಷೆಯ ತೀವ್ರತೆಯನ್ನು ತಿಳಿದು ಸ್ಥಳೀಯ ಶಾಲೆಯ ಅಧಿಕಾರಿಗಳ ಕಡೆಗೆ ಕರೆದುಕೊಂಡು ಹೋದ. ಆದರೆ ಆಗ ಶಾಲೆಯ ವರುಷ ಮುಗಿಯಲು ಎರಡು ತಿಂಗಳು ಉಳಿದಿತ್ತು. ಮುಂದಿನ ವರುಷದ ಪ್ರಾರಂಭಕ್ಕೆ ಬಂದರೆ ಹೆಸರು ಕೊಳ್ಳುವುದಾಗಿ ಅವರು ಹೇಳಿದರು. ಇನ್ನು ಎರಡು ತಿಂಗಳು ಸುಮ್ಮನೆ ಅಲ್ಲಿ ಉಳಿಯುವುದು ಅನ್ಯಾಯವೆಂದು ಬಗೆದು, ಹಲವಾರ ಸಹಾಯದಿಂದ ಚಿಂಚಲಿ ಟಿಕೆಟ್ ಪಡೆದು, ಊರಿಗೆ ಮರಳಿ ಬಂದು ಇಂಗ್ಲಿಷ್ ವಿದ್ಯಾಭ್ಯಾಸದ ಯೋಜನೆ ಕೈಗೂಡದೆ.

ಲಾವಣಿಯ ವಸೂಲಿಯಿಂದ ತಾಯಿ ಮರಳಿ ಚಿಂಚಲಿಗೆ ನೋಡುತ್ತಾಳೆ; ರಾಮು ಮನೆಯಲ್ಲಿಲ್ಲ. ಎಲ್ಲಿ ಹೋಗಿರುವನೆಂಬ ತಿಳಿಯದು. ಅಲ್ಲಿ ಇಲ್ಲಿ ಎರಡು ಮೂರು ದಿನ ಹುಡುಕಿಸಿದರು. ಗಾಬರಿಯಾದರು. ಈ ಮನಃಸ್ಥಿತಿಯಲ್ಲಿ ತಾಯಿ ಇರಲು ರಾಮರಾಯರ ಸ್ವಾರಿ ಬಂದಿತು ಚಿಂಚಲಿಗೆ. ಇಂಗ್ಲಿಷ್ ಕಲಿಸಲುವಾಗಿ ಉಂಟಾದ ತನ್ನ ಮನದ ಅನುತಾಪವನ್ನು ತಾಯಿ ಮುಂದೆ ಹೇಳಿದರು. ಇದೂರನ್ನು ಬಿಟ್ಟು ಹೋಗುವುದು ತಾಯಿ ಸಂಪ್ರದಾಯದ ತಾಯಿಗೆ ಒಪ್ಪದಾಯಿತು. ಮಹಾಕಾಳಿಯ ದೇವಾಲಯದಲ್ಲಿ ಕಣಿ ಕೇಳಿ ಬಂದರು: "ಕರಿಕಿಬೇರು ತಿಂದು, ಹಳ್ಳದ ನೀರು ಕುಡಿದು ಇಲ್ಲೆ ಇರು!" ಎಂದು ವಾಣಿನುಡಿಯಿತು. ಅದರೇನು;

ಮನದ ತೀವ್ರತೆಯನ್ನು ಕಂಡು, ತಾನೆ ಮುಂಜಾಗಿ ನರವಾಗದಿದ್ದರೆ ಮಗನು ಮನೆಬಿಟ್ಟು ಹೋಗಿಬಿಡುವನೆಂದು ಮನಗಂಡು ಬೆಳಗಾಂವಿಯ ಹತ್ತಿರದ ಶಹಾಪೂರಕ್ಕೆ ಹೋಗಿ ಅಲ್ಲಿ ಮನೆ ಮಾಡಿ ಮಗನಿಗೆ ಇಂಗ್ಲಿಷ ವಿದ್ಯಾಭ್ಯಾಸ ಮಾಡಿಸಬೇಕೆಂದು ತಾಯಿ ನಿರ್ಧಾರ ಮಾಡಬೇಕಾಯಿತು; ಮಾಡಿದರು.

ರಾಮರಾಯರು ಶಹಾಪೂರದಲ್ಲಿಯ ಇಂಗ್ಲಿಷ ಶಾಲೆ ಸೇರಿದರು. ಮನದ ಆಶೆ ಈಡೇರಿತೆಂದು ಬಗೆದು, ಏಕಚಿತ್ತದಿಂದ ಅಭ್ಯಾಸ ಮಾಡ ತೊಡಗಿದರು. ಮೊದಲೆರಡು ತಿಂಗಳಲ್ಲಿ, ೫–೪ ನಂಬರು ಇದ್ದವರು ನುಂದೆ ಒಂದನೆಯ ನಂಬರು ಪಡೆದರು. ಈ ಸ್ಥಾನವು ಅವರಿಗಾಗಿ, ಮ್ಯಾಟ್ರಿಕ್ ಆಗುವವರೆಗೆ ಮೀಸಲಾಯಿತು. ಈ ಮೊದಲ ನಂಬರಿನ ಸ್ಥಾನವು ಒಂದು ವಿಚಾರವನ್ನು ಪ್ರಚೋದಿಸಿತು: ಈ ಪಟ್ಟಣದ ಹುಡುಗರಿಗಿಂತಲೂ ತಾನು ಹೆಚ್ಚು ಜಾಣನಿರುವೆನೆಂಬ ಭಾವ ಬಂದಿತು. ನೇಲಾಗಿ ಪಟ್ಟಣದ ಹುಡುಗರಿಗಿಂತಲೂ ವಯಸ್ಸಿನಲ್ಲಿ ಹಿರಿಯರಾಗಿ ದ್ದರು. ವೇಷದಲ್ಲಿಯೂ ಹಿರಿತನ ಮೂಡಿದ್ದಿತು. ತಲೆಗೆ ರುಮಾಲು ಸುತ್ತುತ್ತಿದ್ದರು. ಸಾಲದ್ದಕ್ಕೆ ಬಡತನ. ಇವೆಲ್ಲ ಕಾರಣಗಳು ಕೂಡಿ-ಬಂದು, ಉಳಿದ ಹುಡುಗರಂತೆ ವರುಷಕ್ಕೆ ಒಂದೇ ಈಯತ್ತೆ ಮಾಡದೆ, ಒಂದು ವರುಷದಲ್ಲಿ ಎರಡು ಈಯತ್ತೆ ಮಾಡಬೇಕೆಂದು ಮನದಲ್ಲಿ ಮೂಡಿ, ಶಾಲೆಯಲ್ಲಿ ೨ನೆಯ ಈಯತ್ತೆಯ ಅಭ್ಯಾಸ–ಮನೆಯಲ್ಲಿ ಮೂರನೆಯ ಈಯತ್ತೆಯ ಅಭ್ಯಾಸ–ಹೀಗೆ ನಡೆಸಿದರು. ಇದಕ್ಕೆ ಪೋಷಕವಾಗಿ ಶಾಲೆಯಲ್ಲಿ ಇವರಿಗೆ ದೊರಕಿದ ಉಪಗುರುವಿನ ಸ್ಥಾನ. ಮಾನಿಟರ್-ವು ಬಂದಿತ್ತು. ತನ್ನ ವರ್ಗದ ಹುಡುಗರಿಗೆ ಕಲಿಸುವ ಶಕ್ತಿ ತನ್ನಲ್ಲಿದೆಯೆಂದ ಮೇಲೆ–ತಾನು ಉಳಿದವರಿಗಿಂತಲೂ ಮೇಲಿನವನು ಎಂಬ ಭಾವವು ಬಂದಿತು. ಕಲಿತು–ಕಲಿಸಿ–ಕಲಿಯುವ, ಈ ಪರಿಪಾಠ ಇವರ ಅಭ್ಯಾಸವನ್ನು ನುಂದುವರಿಸಿತು. ಎರಡನೆಯ ಈಯತ್ತೆಯ ಪರೀಕ್ಷೆಗೆ ಕುಳಿತಾಗ ಮೂರನೆಯ ಈಯತ್ತೆಯ ಪರೀಕ್ಷೆಗೂ ಕುಳಿತು, ಮೊದಲನೆಯ ನಂಬರು ಪಾಸಾದರು.

ಉಪಗುರುವಿನ ಕಾರ್ಯವು ಶಿಕ್ಷಕವೃತ್ತಿಯನ್ನು ಬೆಳೆಸಿತಲ್ಲದೆ, ಸಂಘಟನೆಯ ಸಾಮರ್ಥ್ಯವನ್ನು ತಂದುಕೊಟ್ಟಿತು ರಾಮರಾಯರ ಮಾತನ್ನು ಯಾವ ಹುಡುಗರೂ ಮೀರುತ್ತಿದ್ದಿಲ್ಲ ಇವರ ಅಚ್ಚು-ಕಟ್ಟುತನ, ಹಿರಣ, ಜಾಣತನ. ಇವು ನುನ್ನಣೆ ತಂದಿದ್ದುವು. ನಾಲ್ಕನೆಯ ಈಯತ್ತೆಯಲ್ಲಿ ಇವರು ಕಲಿಯುವಾಗ ಒಂದು ಮನೋರಂಜಕ ಸಂಗತಿ ನಡೆಯಿತು: ಒಬ್ಬ ಅಧಿಕಾರಿಯು ನಿವೃತ್ತನಾದುದರಿಂದ ತನ್ನ ಮನೆಯ ಭಟ್ಟನಿಗೆ ಒಂದು ಕೆಲಸ ಕೊಡಿಸಬೇಕಾಗಿತ್ತು. ಅವರು ಆ ಭಟ್ಟನನ್ನು, ಈ ಇಂಗ್ಲಿಷ ಶಾಲೆಯಲ್ಲಿ ಡ್ರಾಯಿಂಗ್ ಮಾಸ್ತರನೆಂದು ನೂಡಿದರು. ಆ ಭಟ್ಟನಿಗೆ ಡ್ರಾಯಿಂಗಿನಲ್ಲಿಯಾಗಲಿ ಶಿಕ್ಷಕನ ಕಾರ್ಯದಲ್ಲಿಯಾಗಲಿ, ಯಾವ ವಿಶೇಷ ಪರಿಣತತೆ ಇರಲಿಲ್ಲ. ಅದಕ್ಕಾಗಿ ಹುಡುಗರು ಅವನ ಮಾತನ್ನು ಕೇಳದಾದುವು. ಆಗ ಅವರು ಹುಕ್ಕೇರಿಕರರನ್ನು ಕರೆಸಿಕೊಂಡು ಹೇಳಿದರು: "ಹುಡುಗರು ನಿನ್ನೆ ಮಾತನ್ನು ಕೇಳುತ್ತಾರೆ. ನನ್ನ ವರ್ಗಕ್ಕೆ ಬಂದು ಕೂಡಲು ಅವರಿಗೆ ಹೇಳು." ಅವರು ಬರದಿದ್ದರೆ ನನಗೆ ನೌಕರಿ ಹೋಗುತ್ತದೆ. ನನ್ನ ಹೊಟ್ಟೆಯ ಪಾಡಿಗೆ ನುಂದೆ ಗತಿಯೇನು"? ಎಂದು, ಇವರ ಅಂತಃ ಕರಣವನ್ನೂ ಅಲುಗಿಸಿದರು. ಹುಡುಗತನದ ಒರಟುತನವು ಸಾಕಷ್ಟಿ ದ್ದರೂ, ತಾವು ಬಡತನದಲ್ಲಿಯೇ ಬೆಳೆದವರಾದ್ದರಿಂದ, ಆದರ ಬವ ನೆಯ ಅರಿವಿದ್ದಿತಾದ್ದರಿಂದ, ಆ ಶಿಕ್ಷಕರ ಮಾತಿಗೆ ಒಪ್ಪಿಕೊಂಡು, ಹುಡುಗರನ್ನು ಡ್ರಾಯಿಂಗ್ ವರ್ಗಕ್ಕೆ ಕೂಡುವಂತೆ ಮಾಡಿದರಷ್ಟೇ ಅಲ್ಲ ನುಂದೆ ಗನೆಯ ಗ್ರೇಡ್ ಪರೀಕ್ಷೆಗಾಗಿ ಕೆಲಹುಡುಗರು ಅಭ್ಯಾಸಮಾಡು ವಂತೆಯೂ ಮಾಡಿದರು. ಇದರ ಫಲವಾಗಿ ಬೆಳಗಾಂವಿ ಶಹಾಪೂರ ಶಾಲೆಗಳಿಂದ ಪರೀಕ್ಷೆಗೆ ಕುಳಿತ ಹುಡುಗರಲ್ಲಿ, ಶಹಾಪೂರ ಶಾಲೆಯ ವಿದ್ಯಾರ್ಥಿ ಗೆಜ್ಜಿ ಎಂಬವನೇ ಆ ಕೇಂದ್ರಕ್ಕೆ ಮೊದಲ ನಂಬರು ಬಂದನು. ಈ ಯಶಸ್ಸಿಗೆ ಗೆಜ್ಜಿಯ ಚಿತ್ರಕಲಾ ಸಾಮರ್ಥ್ಯವೇ ಹೆಚ್ಚು ಕಾರಣವಾಗಿದ್ದರೂ, ಡ್ರಾಯಿಂಗ್ ಶಿಕ್ಷಕನ ಕೆಲಸವು ಶಾಶ್ವತ ವಾಯಿತು. ಆಪತ್ತಿನ ಕಾಲದಲ್ಲಿ ನೆರವಾಗುವ ಬುದ್ಧಿ ಇವರಲ್ಲಿ ಅಂದಿನಿಂದಲೂ ಬೆಳೆದು ಬಂದಿದೆ.

ಈ ಉಪಕಾರ ಪ್ರವೃತ್ತಿಯ ಸಸಿಗೆ ನೀರೆರೆವ ಹಾಗೆ ಸ್ಫೂರ್ತಿ ಯನ್ನು ಕೊಟ್ಟವರು, ಶಹಾಪೂರ ಶಾಲೆಯ ಮುಖ್ಯಾಧ್ಯಾಪಕರಾದ ಯಶವಂತರಾವ ಕೋಲ್ಹಟಕರರು. ಇವರು ಶಾಲೆಯಲ್ಲಿಯೂ ಆದರ್ಶ ಶಿಕ್ಷಕರಾಗಿದ್ದರು; ಸಮಾಜದಲ್ಲಿಯೂ ಗಣ್ಯ ವ್ಯಕ್ತಿಯಾಗಿದ್ದರು. ಸಾದಾ ಸರಲ ಜೀವನವು; ತಾತ್ವಿಕವಿಚಾರ ವ್ಯವಹಾರ; ನಿಯಮಿತ ತನ; ಸಾಂಘಿಕಜೀವನದಲ್ಲಿ ಆಸ್ಥೆ. ಎಲ್ಲಕ್ಕೂ ಹೆಚ್ಚಿನದೆಂದರೆ ಪರೋ-ಪಕಾರ ಬುದ್ಧಿ: ಇವು ಅವರಲ್ಲಿಯ ಗುಣಗಳಾಗಿದ್ದುವು. ತಮಗೆ ಬರುವ ೬೦ ರೂಪಾಯಿಯ ಸಂಬಳದಲ್ಲಿ ೫ತಿಂಗಳೂ ೬೦ ಆಣೆ ಗಳನ್ನು ತೆಗೆದಿಟ್ಟು, ತಮಗೆ ಯೋಗ್ಯ ಕಂಡ ಕಾರ್ಯಗಳಿಗಾಗಿ ಅವರು ದಾನಮಾಡುತ್ತಿದ್ದರು. ಸ್ವಂತ ಗಳಿಕೆಯಲ್ಲಿ ಸಮಾಜಕ್ಕಾಗಿ ಸ್ವಲ್ಪ ತೆಗೆದಿಟ್ಟು ದಾನ ಮಾಡುವುದು ಸಮಾಜದ ಋಣ ತೀರಿಸಿದಂತೆ ಎಂದು ಅವರ ತತ್ತ್ವ. ಇದರಂತೆ ಅವರು ಆಚರಿಸುತ್ತಿದ್ದರು. ಅವರ ಜೀವನಾ ದರ್ಶವು ಹುಕ್ಕೇರಿಕರರ ಮೇಲೆ ತುಂಬಾ ಪರಿಣಾಮ ಮಾಡಿದೆ.

ಕೋಲ್ಹಟಕರರಿಂದ ಪರೋಪಕಾರ ಪ್ರವೃತ್ತಿಯ ಸ್ಫೂರ್ತಿ ಪಡೆ ದರು. ಇನ್ನೊಬ್ಬ ಶಿಕ್ಷಕ ಕಾಳೆಯೆಂಬವರು, ಆಗಿನ ಕಾಲದಲ್ಲಿಯೂ ತೀವ್ರ ಸ್ವದೇಶೀ ವ್ರತಧಾರಿಗಳಾಗಿದ್ದರು. ಸ್ವದೇಶೀ ವಸ್ತುಗಳಬಗ್ಗೆ ಅವರಲ್ಲಿದ್ದ ಶ್ರದ್ಧೆಯು ಅಸಾಧಾರಣವಾಗಿದ್ದಿತು. ಅದು ಹುಡುಗ ಹುಕ್ಕೇರಿಕರರಲ್ಲಿ ಅಚ್ಚಳಿಯದ ಮುದ್ರೆಯನ್ನೊತ್ತಿತು. ಇದರ ಪರಿಣಾ-ಮವು ಹುಕ್ಕೇರಿಕರರು ಮುಂದೆ ಕಾಂಗ್ರೆಸ ಚಳವಳಿಯಲ್ಲಿ ಮುಂದಾಳು ಗಳಾಗಿ ಪ್ರದೇಶ ಚಳವಳಿಯನ್ನು ಸಂಘಟಿಸಿ ಕಾರ್ಯ ಮಾಡಿದುದರಲ್ಲಿ ಮೂಡಿ ಬಂದಿದೆ.

ಶಿಕ್ಷಕರು ಒಳ್ಳೆಯವರಾಗಿದ್ದರೆ ಸತ್ತ್ವ ಶಕ್ತಿಯುಳ್ಳ ಬಾಲಕರು ಪ್ರಗತಿ ಪಡೆಯುವರೆಂದು ಹೇಳಬಹುದು. ಆದರೆ ಎಲ್ಲರೂ ಒಳ್ಳೆಯ ಶಿಕ್ಷಕರಾಗಿ ಎಲ್ಲಿ ದೊರೆವರು? ಒಮ್ಮೊಮ್ಮೆ ಶಿಕ್ಷಕರ ವೈಗುಣ್ಯವೂ ಪೋಷಕವಾಗುವುದು. ಶಹಾಪೂರ ಶಾಲೆಯಲ್ಲಿಯೆ ಒಬ್ಬ ಮಾಸ್ತರರು ಇದ್ದರು. ತಿಂತ್ರಿ ಎಂದು ಅವರ ಹೆಸರು. ಅವರಿಗೆ ಕಳ್ಳು ತಿನ್ನುವ ಚಟವಿದ್ದಿತು. ಆ ಗುಂಗಿನಲ್ಲಿ ವರ್ಗಕ್ಕೆ ಬಂದು ಕಲಿಸುತ್ತಿರುವಾಗ

ಅವರು ಕೇಳಿದ ಪ್ರಶ್ನೆಗೆ ಹುಕ್ಕೇರಿಕರರು ಉತ್ತರ ಕೊಟ್ಟಾಗ "ನೀನು ಪುಸ್ತಕ ನೋಡಿ ಉತ್ತರ ಕೊಟ್ಟಿಯಾ!" ಎಂದು ಆಪಾದಿಸಿದರು. "ನಾನು ಸುಳ್ಳು ಹೇಳಿಲ್ಲ. ಪುಸ್ತಕ ನೋಡಿ ಉತ್ತರ ಕೊಟ್ಟಿಲ್ಲ: ಬೇಕಾದರೆ ಹುಡುಗರನ್ನು ಕೇಳಿರಿ!" ಎಂದರು ಹುಕ್ಕೇರಿಕರರು. ಆದರೆ ಗುಂಗು ಏರಿದ ಅವರು ತಮ್ಮ ಮಾತನ್ನೇ ಸಾಧಿಸತೊಡಗಿದರು. ಹುಕ್ಕೇರಿಕರರು ಪ್ರತಿಭಟಿಸಿ ವರ್ಗವನ್ನು ಬಿಟ್ಟು ಹೋಗಿ, ಮುಖ್ಯಾಧ್ಯಾಪಕರನ್ನು ಕಂಡು ನಡೆದ ಸಂಗತಿಯನ್ನು ತಿಳಿಸಿ, ತಾವು ಎರಡನೆಯ ಶಾಲೆಗೆ ಹೋಗುವುದಾಗಿಯೂ, ತಮಗೆ ತಮ್ಮ ಸರಟೀಫಿಕೇಟು ಕೊಡಬೇಕೆಂಬುದಾಗಿಯೂ ಕೇಳಿದರು. ಕೋಲ್ಲಟಕರರು ಇವರನ್ನು ಸಮಾಧಾನ ಮಾಡಿದರು; ಶಿಂತ್ರೆಯವರಿಗೂ ತಿಳಿ ಹೇಳಿದರು. ಅಸತ್ಯದ–ಅನ್ಯಾಯದ ಆರೋಪವನ್ನು ಪ್ರತಿಭಟಿಸುವಷ್ಟು ಸತ್ಯ-ಸದಾಚಾರ-ಸತ್‌ಶೀಲಗಳು ಇವರಲ್ಲಿ ಆಗಿನಿಂದಲೇ ಮನೆಮಾಡಿಕೊಂಡಿದ್ದುವು.

ಪ್ರತಿಭಟನೆಗಾಗಿ ಪ್ರತಿರೋಧ ಮಾಡುವ ಚಟವು ಅವರಿಗೆ ಇದ್ದಿಲ್ಲ. ಆ ಚಟವೇ ಇದ್ದಿದ್ದರೆ, ಆಗಿನ ಕಾಲದಲ್ಲಿಯ ಶಾಲೆಯಲ್ಲಿಯ ಶಿಕ್ಷೆಗಳಿಗೆ ಪ್ರತಿಭಟಿಸಬಹುದಾಗಿತ್ತು. ಶುದ್ಧ ಬರಹವು ಆಗಿನ ಕಾಲದಲ್ಲಿ ಮುಖ್ಯ ವಿಷಯ. ಒಂದಕ್ಷರ ತಪ್ಪಿದರೆ, ಒಂದು ಅನುಸ್ವಾರ ತಪ್ಪಿದರೆ (ಮರಾಠಿಯಲ್ಲಿ ಈ ಅನುಸ್ವಾರದ ಗೊಂದಲ ವಿಶೇಷವಾಗಿದೆ.) ಮೈಮುರಿ ಹೊಡೆತ, ಮೂಲದಂಡಿಗೆ, ಹರಳು ಇಡುವುದು ಮುಂತಾದ ಶಿಕ್ಷೆ ಅನುಭವಿಸಬೇಕಾಗುತ್ತಿತ್ತು. ಪ್ರಾಥಮಿಕ ಶಾಲೆಯಲ್ಲಾಗಲೀ, ಮಾಧ್ಯಮಿಕ ಶಾಲೆಯಲ್ಲಾಗಲಿ, ಶುದ್ಧಬರಹಕ್ಕೆ ಹೆಚ್ಚು ಗಮನ ಕೊಡಲಾಗುತ್ತಿತ್ತು. ಶುದ್ಧಬರಹಕ್ಕೆ ಶುದ್ಧ ಉಚ್ಚಾರ ಅಗತ್ಯ. ಒಂದರಿಂದ ಮತ್ತೊಂದು ಪೋಷಿತವಾಗಿ, ಭಾಷೆಯ ಜ್ಞಾನವು ಜೀವನ್ನಾಗಿ ಆಗುತ್ತಿತ್ತು. ಭಾಷಾವರ್ಗಗಳಲ್ಲಿ ತಪ್ಪಿದಾಗ ಶಿಕ್ಷೆ ಕೊಟ್ಟಾಗ ಹುಕ್ಕೇರಿಕರರು ಎಂದೂ ಪ್ರತಿಭಟಿಸಿಲ್ಲ. ಆ ಶಿಕ್ಷೆಯನ್ನು ಶಾಂತತನದಿಂದ ಅನುಭವಿಸಿ ತಪ್ಪು ತಿದ್ದಿಕೊಂಡರೆಂದೇ, ಇಂದು ಅವರಲ್ಲಿ ತಾಳ್ಮೆಯೂ ಮೂಡಿಬಂದಿದೆ. ಬರೆವಣಿಗೆಯಲ್ಲಿ, ಉಚ್ಚಾರದಲ್ಲಿ, ತಪ್ಪೂ ಆಗದು. ಇದನ್ನು ನೋಡಿದರೆ, ಇಂದಿನ ಯುಗದಲ್ಲಿ ದೈಹಿಕ ಶಿಕ್ಷೆ ಹುಡುಗರಿಗೆ ಇಲ್ಲದಿರುವುದೂ ಶುದ್ಧ ಬರಹದ ಪಾಠ ಇಲ್ಲದಿರುವುದೂ ಹುಡುಗರಲ್ಲಿ ಶಿಸ್ತು, ತಾಳ್ಮೆ, ಇವು ಕಡಿಮೆಯಾಗಿರುವುದಕ್ಕೆ ಕಾರಣವಾಗಿರಬಹುದೇನೊ ಎಂದೆನ್ನಿಸುವುದು.

ಶಹಾಪೂರ ಶಾಲೆಯಲ್ಲಿ ಮಾಟ್ರಿಕ್ ವರೆಗೆ ಕಲಿಸುವ ಅನುಕೂಲತೆ ಇರಲಿಲ್ಲ. ಅದಕ್ಕಾಗಿ ಬೆಳಗಾಂವಿಯ ಮಿಶನ್ ಹಾಯಸ್ಕೂಲಿಗೆ ಸೇರಿದರು. ಅಲ್ಲಿಯ ಒನೆಯ ಈಯತ್ತೆಯಲ್ಲಿ ಕೆಲ ದಿನ ಕುಳಿತಿರುವಾಗ, ಅಲ್ಲಿಯ ಅಭ್ಯಾಸವೆಲ್ಲವೂ ತನಗೆ ಆಗಿದೆಯೆಂದು ಕಂಡು ಬಂದಿತು. ಅದಕ್ಕಾಗಿ ಆ ಈಯತ್ತೆಯನ್ನು ಹಾರಿಸಿ ಮಾಟ್ರಿಕ್ ವರ್ಗಕ್ಕೆ ಸೇರಿಕೊಳ್ಳಬೇಕೆಂದು, ಪ್ರಿನ್ಸಿಪಾಲರಿಗೆ ಭೆಟ್ಟಿಯಾದರು. ಬೇಕಾದರೆ ನನ್ನ ಪರೀಕ್ಷೆ ತೆಗೆದುಕೊಂಡು ನೋಡಿರಿ--ಎಂದರು. ಎಂಟು ದಿನಗಳವರೆಗೆ ಮ್ಯಾಟ್ರಿಕ್ ವರ್ಗದಲ್ಲಿ ಕೂಡುವಂತೆಯೂ ಅನಂತರ, ಪರೀಕ್ಷೆ ತೆಗೆದುಕೊಳ್ಳುವುದಾಗಿಯೂ ಪ್ರಿನ್ಸಿಪಾಲರು ಹೇಳಿದರು. ಪ್ರಿನ್ಸಿಪಾಲರಿಗೆ ೩ ವಿಷಯಗಳನ್ನು ಕಲಿಸುತ್ತಿದ್ದುದರಿಂದ, ಆ ಎಂಟು ದಿನಗಳ ಅವಧಿಯಲ್ಲಿ ಇವರ ಸಾಮರ್ಥ್ಯವನ್ನು ಅವರು ತಿಳಿದುಕೊಂಡು ಪರೀಕ್ಷೆ ಬೇಡವೆಂದರು. ಈ ಮೇಲಿನ ಒಂದು ಈಯತ್ತೆಯನ್ನು ಹಾರಿಸಿ ಒಮ್ಮೆಲೆ ಮ್ಯಾಟ್ರಿಕ್ ಪರೀಕ್ಷೆಗೆ ಕೂತರು; ಪಾಸಾದರು ಕೂಡ.

ಆದರೆ ಮಾಧ್ಯಮಿಕ ಶಾಲೆಯಲ್ಲಿಯ ಎರಡು ಈಯತ್ತೆಗಳನ್ನು ಹಾರಿಸಿದ್ದರಿಂದ ಇವರ ಭೂಮಿತಿ ಮತ್ತು ಸಂಸ್ಕೃತ ತುಸು ಕಚ್ಚಾ ಆದುವು. ಅದರ ಹೊಡೆತ ಮ್ಯಾಟ್ರಿಕ್‌ನ ವರೆಗೆ ಅನ್ನಿಸದಿದ್ದರೂ, ಕಾಲೇಜಿನ ಶಿಕ್ಷಣದಲ್ಲಿ ಪೆಟ್ಟು ಬಿದ್ದಿತು. ಅಲ್ಲಿ ಇವರಿಗೆ ಮೇಲಿನ ನಂಬರು ಸಿಕ್ಕಲಿಲ್ಲ. ಬಗತನ ಒಂದು ಕಡೆ; ಮೇಲಿನ ನಂಬರು ಸಿಕ್ಕದೆ ಶಿಷ್ಯವೃತ್ತಿಗಳು ಸಿಕ್ಕದುದು ಇನ್ನೊಂದು ಕಡೆ; ಹೀಗಾಗಿ ಕಾಲೇಜಿನ ಶಿಕ್ಷಣವು ತುಂಬ ಕಷ್ಟಮಯವಾಯಿತು. ಇಂಟರ್ ಆಗುವ ತನಕ ಅಣ್ಣನ ನೆರವು ತುಸ ಇದ್ದಿತು. ಆದರೆ ಅವರು ಮುಂದೆ ರಾಷ್ಟ್ರೀಯ ಶಾಲೆಯೊಂದನ್ನು ಸೇರಿಕೊಂಡರಾದ್ದರಿಂದ, ಸಹಾಯವು ತಪ್ಪಿತು. ಆದರೆ ರಾಮರಾಯರ ಸುದೈವ! ಪ್ರಾಧ್ಯಾಪಕ ಭಾಟೆಯವರ ಆಶ್ರಯ ದೊರೆಯಿತು. ಪ್ರಾಧ್ಯಾಪಕ ಭಾಟೆಯವರು ಆಗ ಫರ್ಗ್ಯುಸನ್ ಕಾಲೇಜಿನಲ್ಲಿ ಜನಪ್ರಿಯ ಪ್ರೊಫೆಸರರಾಗಿದ್ದರು. ಅವರು ಕಲಿಸುವ ವಿಷಯವಾದ ತತ್ತ್ವಜ್ಞಾನವನ್ನೇ ರಾಮರಾಯರು ತಮ್ಮ ವಿಚ್ಛಿಕ ವಿಷಯವನ್ನಾಗಿ ಮಾಡಿಕೊಂಡಿದ್ದರು. ಇವರ ಜಾಣತನಕ್ಕೆ ಉದ್ಯೋಗಶೀಲತೆಗೆ ಮೆಚ್ಚಿ ಭಾಟೆಯವರು ಇವರನ್ನು, ತಮ್ಮ ಕೋಣೆಯಲ್ಲಿಯೆ ಇಟ್ಟುಕೊಂಡು ಕಲಿಸಿದರು. ಅವರು ಹಾಯ್‌ಸ್ಕೂಲೊಂದರ ವಸತಿಗೃಹದ ಮೇಲ್ವೀಚಕರೂ ಆಗಿದ್ದರು. ಕೆಲವು ಸಮಯದನಂತರ ರಾಮರಾಯರನ್ನೂ ಸಹಾಯಕ ಮೇಲ್ವೀಚಕರೆಂದು ಮಾಡಿಕೊಂಡರು. ಇದರಿಂದ ಬಿ. ಎ., ಎಂ. ಎ. ಓದು ಸುಲಭವಾಗಿ ದಾಟಿತು.

ಒಂದೆಸೆಯ ಆಸರವು ಇನ್ನೊಂದೆಡೆಯ ಆಪರವನ್ನು ಅಲ್ಲಗಳಿಸಿತೋ ಎಂಬಂತೆ, ರಾಮರಾಯರು ಜ್ಯೂನಿಯರ್ ಬಿ.ಎ. ನಲ್ಲಿರುವಾಗ ತಾಯಿ ತೀರಿದರು. ಆ ಮೇಲೆ ತಾವೇ ತಾವಾದರು. ಮನೆಯ ಚಿಂತೆಯು ತಪ್ಪಿತು ಇದೇ ಮುಂದೆ ಸಾರ್ವಜನಿಕ ಜೀವನದತ್ತ ಹೊರಳಿಸಿರಬಹುದೇನೋ!

ಪುಣೆಯಲ್ಲಿಯ ವಾಸ್ತವ್ಯವು ಸಾಮಾಜಿಕ ಸೇವೆ-ರಾಜಕಾರಣಗಳತ್ತ ಮನಸ್ಸನ್ನು ಜಗ್ಗತೊಡಗಿತು. ರಾಜಕೀಯದಲ್ಲಿ ಮುಂದೆ ಬರಲು, ಸಮಾಜಸೇವೆ ಮಾಡಲು, ಶಿಕ್ಷಣ ಸಂಸ್ಥೆಗಳನ್ನೂ ಪತ್ರಿಕಾ ಸಂಸ್ಥೆಗಳನ್ನು ನಡಸುವುದು ವಾಡಿಕೆಯಾಗಿತ್ತು. ಟಿಳಕರ ಮೇಲ್ಪಂಕ್ತಿಯಿತ್ತು, ಭಾಟೆಯವರು ಸಮಾಜಸುಧಾರಕರಲ್ಲಿ ಒಬ್ಬರಾಗಿದ್ದರು. ಅವರು ವಿಧವಾವಿವಾಹ ಮಾಡಿಕೊಂಡಿದ್ದರು. ಅವರ ಸಂತತ ಸಹವಾಸ,ತತ್ತ್ವಜ್ಞಾನಗಳ ಪ್ರಭಾವದ ಮೂಲಕ ರಾಮರಾಯರೂ ವಿಧವಾವಿವಾಹ ಮಾಡಿಕೊಳ್ಳಬೇಕೆಂದೂ ಮುಂದಿನ ಜೀವನದಲ್ಲಿ ಶಿಕ್ಷಣ ಸಂಸ್ಥೆಗಳನ್ನು ನಡೆಸಬೇಕೆಂದೂ ಮನಸ್ಸು ಮಾಡಿದರು. ಈ ಒಲವಿನ ಮೂಲಕ ಸರಕಾರಿ ನೌಕರಿಯ ವಿಚಾರ ಬರಲೇ ಇಲ್ಲ.

ಆದರೆ ವಿಧವಾವಿವಾಹದ ಪ್ರಸಂಗ ತಪ್ಪಿದ್ದು ಮನೋರಂಜಕ ಸಂಗತಿಯಾಗಿದೆ. ಭಾಟೆಯವರು ಮೂರು ತಿಂಗಳ ರಜೆಯ

ಪ್ರವಾಸಕ್ಕೆ ಹೋಗಿದ್ದರು. ಆಗ ಇವರ ಕೋಣೆಗೆ ಒಬ್ಬ 'ಕಾನಗೋ' ಎಂಬ ಗೃಹಸ್ಥರು ಬಂದರು. ಮತ್ತು ತಮ್ಮ ಉದ್ದೇಶವನ್ನು ವಿವರಿಸಿದರು, "ನಾನು ಸದ್ಯಕ್ಕೆ ಲಗ್ನ ಮಾಡಿಕೊಳ್ಳುವುದಿಲ್ಲ." ಎಂದು ಹೇಳಿದ ಹುಕ್ಕೇರಿಕರರ ಉತ್ತರ ಕೇಳಿ. ಆ ಗೃಹಸ್ಥ ದೊಡ್ಡ ದನಿತೆಗೆದು ಅಳತೊಡಗಿದನು. ವಸತಿಗೃಹದ ಹುಡುಗರು ಏನಾಯಿತೆಂದು ನೋಡಲು ಮುಕುರಿದರು ಅವರನ್ನು ತಿಳಿಹೇಳಿ ಕಳಿಸುವುದು ಸಾಧ್ಯವಾದರೂ, ಆ ಗೃಹಸ್ಥನ ದುಃಖ ತಡೆವುದಾಗಲಿಲ್ಲ. "ನನ್ನ ತಾಯಿ ಸಾಯುವ ಕಾಲಕ್ಕೆ ನಾನು ವಚನ ಕೊಟ್ಟಿದ್ದೇನೆ.....ನನ್ನ ಮಗಳನ್ನು ವೈಷ್ಣವ ವರನಿಗೆ ಕೊಡುವೆನಲ್ಲದೆ, ಒಂದು ವರುಷದ ಅವಧಿಯಲ್ಲಿ ಮದುವೆ ಮಾಡುವೆನೆಂದು ವರುಷ ಮುಗಿಯುತ್ತ ಬಂದಿದೆ. ಈ ಊರಲ್ಲಿ ನಿಮ್ಮ ಹೊರತು ಬೇರೆ ವೈಷ್ಣವವರ ನನಗೆ ಸಿಕ್ಕಿಲ್ಲ" ಎಂದು ಆ ಗೃಹಸ್ಥನು ಸಾವರಿಸಿಕೊಂಡು ಹೇಳಿದನು. ರಾಮರಾಯರಿಗೆ ಮೋಜೆನ್ನಿಸಿತು. ಈ ಪರಕೀಯನಾದ ಮನುಷ್ಯನ ವಚನ ಪಾಲಿಸಲು, ತಾವು ಮನಸ್ಸಿನಲ್ಲಿ ಮಾಡಿಕೊಂಡ ವಿಧವಾವಿವಾಹದ ಸಂಕಲ್ಪ ಮುರಿಯಬೇಕಾಗುವುದಲ್ಲ! ಆ ಕ್ಷಣಕ್ಕೆ ನಿರ್ಧಾರದಿಂದ ನಿಸ್ಸೂರದಿಂದ 'ಈ ಮಾತು ಶಕ್ಯವಿಲ್ಲ.' ಎಂದು ಆ ಗೃಹಸ್ಥನನ್ನು ಕಳಿಸಿಕೊಟ್ಟರೂ ಗೆಳೆಯ ಜೋತಿ—ಇವರೇ ಈ ವರನನ್ನು ಸೂಚಿಸಿದ್ದರು—ಯ ಒತ್ತಾಯದ ಮೂಲಕ, ಕನ್ಯೆ ನೋಡಲಿಕ್ಕೆ ಔಪಚಾರಿಕವಾಗಿ ಹೋದವರು, ಆ ಗೃಹಸ್ಥನ ಕುರಣಾಜನಕ ಸ್ಥಿತಿಯನ್ನೂ ತಾಯಿಯ ವಚನ ಪಾಲಿಸುವುದಕ್ಕಾಗಿ ಪಡುತ್ತಿದ್ದ ಕಳವಳವನ್ನೂ ಕಂಡು ಪರುಗಿ, ಮದುವೆಯಾಗಲು ಒಪ್ಪಿದರು ಮದುವೆ ಮಾಡಿಕೊಂಡರು. ಆಗ ಇವರು ಜ್ಯೂನಿಯರ್ ಎಂ. ಎ. ದಲ್ಲಿದ್ದರು.

ತಮ್ಮ ಅಸನ್ನಿಧಿಯಲ್ಲಿ ಮದುವೆಯಾದರೂ, ಉಪವರ ಕನ್ಯೆಯನ್ನು ಮದುವೆಯಾದುದು ಸುಧಾರಕರಾದ ಪ್ರಾಧ್ಯಾಪಕ ಭಾಟೆಯವರಿಗೆ ತುಸ ಕೆಡಕೆನ್ನಿಸಿತು. ಆದರೆ ನಿಜಸ್ಥಿತಿಯನ್ನು ಅರಿತ ಮೇಲೆ, ಇದೂ ಒಂದು ಬಗೆಯ ಸಮಾಜಸೇವೆಯೆ—ಎಂದು ಸಮಾಧಾನ ಹಚ್ಚಿಕೊಂಡರು. ಈ ಪ್ರಸಂಗದಿಂದ ಪರಸ್ಪರರ ಗೌರವಾದರಗಳು ಕಡಿಮೆಯಾಗಲಿಲ್ಲವೆಂಬುದು ಮನನೀಯವಾಗಿದೆ. ಮಾವನವರು ಧಾರ್ಮಿಕ ಪ್ರವೃತ್ತಿಯವರಾದರೂ, ರಾಮರಾಯರು ಪ್ರಾ. ಭಾಟೆಯವರೊಡನೆ ಊಟ-ಉಪಚಾರದ ವ್ಯವಹಾರಕ್ಕೆ ಅಡ್ಡಿ ತಂದುಕೊಳ್ಳಲಿಲ್ಲ. ಮುಂದೆ ಕೆಲಕಾಲದ ನಂತರ ಭಾಟೆಯವರು, ಎರಡನೆಯ ಮದುವೆ ಮಾಡಿಕೊಳ್ಳುವ ಪ್ರಸಂಗ ಬಂದಾಗ, ಅವರು ಮರಾಠಾ ವಿಧವೆಯನ್ನು ಮಾಡಿಕೊಂಡ ಕಾಲಕ್ಕೆ, ರಾಮರಾಯರು ಭಾಟೆಯವರನ್ನು ಅಭಿನಂದಿಸಿ ಒರೆದ ಪತ್ರಕ್ಕಾಗಿ ವೈಷ್ಣವರಲ್ಲಿ ತುಸ ಕಳವಳವೆದ್ದರೂ ಲೆಕ್ಕಿಸಲಿಲ್ಲ. ಯಾವ ಮುರುವತ್ತಿಗೂ ಸೊಪ್ಪು ಹಾಕದೆ, ಭಾಟೆಯವರ ಸ್ನೇಹ-ಸಹವಾಸನನ್ನು ಕೊನೆಯ ನರೆಗೂ ಪಾಲಿಸಿಕೊಂಡು ಬಂದರು ರಾಮರಾಯರು.

೧೯೩೮ರಲ್ಲಿ ಎಂ. ಎ. ಆಯಿತು. ಆಗ ಧಾರವಾಡದಿಂದ ಫ್ಯಿಕ್ಟೋರಿಯಾ ಹಾಯಸ್ಕೂಲಿನಿಂದ ಕರೆ ಬಂದಿತು. ಅಲ್ಲಿ ಇವರ ಗೆಳೆಯರಾದ ರಂಗಾಚಾರ್ಯ ಗುತ್ತಲರು ಶಿಕ್ಷಕರಾಗಿದ್ದರು. ಗೆಳೆಯರ ಒತ್ತಾಯದ ಔತಣವೂ ಸಾಮಾಜಸೇವೆ ಮತ್ತು ಸಾರ್ವಜನಿಕ ಖಾಸಗಿ ಸಂಸ್ಥೆಗಳನ್ನು ಮುಂದುವರಿಸಬೇಕೆಂಬ ಹಂಬಲವೂ ರಾಮರಾಯರನ್ನು ಧಾರವಾಡಕ್ಕೆಕರೆತಂದುವು. ರಾಮರಾಯರು ವ್ಹಿಕ್ಟೋರಿಯಾ ಹಾಯ್ ಸ್ಕೂಲಿನ ಮುಖ್ಯಾಧ್ಯಾಪಕರೆಂದು ೧೯೩೮ರಿಂದ ೧೯೫೧ರ ವರೆಗೆ ಕಾರ್ಯ ಮಾಡಿದರು. ಇವರ ಕಾರ್ಯದ ಕಾಲಾವಧಿಯಲ್ಲಿ ಶಾಲೆಯು ಊರ್ಜಿತ ಸ್ಥಿತಿಗೆ ಬಂದಿತಲ್ಲದೆ. ಈ ಶಾಲೆಯನ್ನೆ ಹಿಗ್ಗಿಸಿ-ಬೆಳಸಿ, ಕಾಲೇಜು ಸ್ಥಾಪಿಸಬೇಕೆಂಬ ಹುಮ್ಮಸವು ಮೂಡಿತು. ಆ ರೀತಿಯ ಕಾರ್ಯವೂ ಆಯಿತು. ಆದರೆ ಕರ್ನಾಟಕದ ದುರ್ದೈವದಿಂದ, ಬೇರೆ ಕಾರಣಗಳು ಅಡ್ಡಿಯಾಗಿ ಕಾಲೇಜು ಕಪುರಿತು. ರಾಮರಾಯರು ಕಾಲೇಜ ಶಿಕ್ಷಣ ವ್ಯವಸ್ಥೆಯನ್ನು ಮಾಡುವಂತಾಗಬೇಕಾದರೆ, ನಡುವೆ ೫೫ ವರ್ಷಗಳು ಗತಿಸಬೇಕಾಯಿತು.

ಈ ೯ ವರ್ಷದ ಶಿಕ್ಷಕವೃತ್ತಿಯನ್ನು ಅನುಸರಿಸಿದ ಅವಧಿಯಲ್ಲಿ ಸಾವಿರಾರು ವಿದ್ಯಾರ್ಥಿಗಳು ಇವರನ್ನು 'ಮಾಸ್ತರ್' ಎಂದು ಕರೆದರು. ಮಾಸ್ತರ್ ಎಂದು ಕರೆಸಿಕೊಂಡು ಶಿಕ್ಷಕಕಾರ್ಯ ಮಾಡಿದುದು ಈ ೯ ವರುಷವಾದರೂ, ಆ ಮೊದಲು ಅನಂತರ-ಅಂದರೆ ಜೀವನದುದ್ದಕ್ಕೆ 'ಮಾಸ್ತರ್'ಕೆಯನ್ನು ಒಂದಿಲ್ಲೊಂದು ರೀತಿಯಿಂದ ಮಾಡಿದ್ದಾರೆಂಬುದು ಗಮನಾರ್ಹವಾಗಿದೆ. ಮಾಸ್ತರ್ ಎಂಬ ವಿಶೇಷಣವು ಹುಕ್ಕೇರಿಕರ ಅವರಿಗೆ ಅನ್ವಯಿಸಿದಷ್ಟು ಬೇರಾನ ವ್ಯಕ್ತಿಗೂ ಇಷ್ಟು ಸಂಪೂರ್ಣವಾಗಿ ಅನ್ವಯಿಸಿದೆಯೆ?—ಎಂಬುದು ಸಂದೇಹಾಸ್ಪದವಾಗಿದೆ. ಅವರು ಯಾವ ಕಾರ್ಯವನ್ನೇ ಮಾಡಲಿ, ಯಾವ ಹುದ್ದೆಯಲ್ಲಿಯೆ ಇರಲಿ, ಅವರು ಹುಕ್ಕೇರಿಕರ ಮಾಸ್ತರರು.

ಈ ಮಾಸ್ತರಿಕೆಯ ಅವಧಿಯಲ್ಲಿ ಕಾಲೇಜು ಸ್ಥಾಪಿಸುವ ಹವ್ಯಾಸದ ಅವಧಿಯಲ್ಲಿ, ರಾಮರಾಯರಿಗೆ ದಿವಾಕರ ರಂಗರಾಯರ ಪರಿಚಯ ಸ್ನೇಹ ಉಂಟಾಯಿತು. ಆ ನುಂದಿನ ಜೀವನದಲ್ಲಿ ಇವರಿಬ್ಬರೂ ವಿಚಾರ ವಿನಿಮಯ ಮಾಡದ ಯಾವುದೇ ಕಾರ್ಯವಿಲ್ಲ. ಮಾಸ್ತರರು ವಯಸ್ಸಿನಲ್ಲಿ ತುಸ ಹಿರಿಯರಾದರೂ, ದಿವಾಕರರನ್ನು ಗೆಳೆಯನೆಂದೇ ಬಗೆದಿದ್ದಾರೆ. ಅಲ್ಲದೆ ಬುದ್ಧಿವತ್ತೆಯಲ್ಲಿ ಕುಶಲತೆಯಲ್ಲಿ ದಿವಾಕರರನ್ನು ತಮಗಿಂತ ಹೆಚ್ಚಿನವರೇ ಎಂದೂ ತಿಳಿದಿದ್ದಾರೆ. ಪರಸ್ಪರರಲ್ಲಿಯ ತಿಳಿವಳಿಕೆಯು ಚೆನ್ನಾಗಿ ಬೆಳೆದು ಬಂದುದರಿಂದ, ಅವರಿವರಲ್ಲಿ ಭಿನ್ನಾಭಿಪ್ರಾಯಕ್ಕಾಗಲಿ, ವೈಮನಸ್ಯಕ್ಕಾಗಿಯಾಗಲಿ ಅಸ್ಪದವೇ ಉಂಟಾಗಿಲ್ಲ. ಇವರಿಬ್ಬರ ಸ್ನೇಹ ಅಚಲವಾಗಿದೆ: ಆದರ್ಶವಾಗಿದೆ. ಈ ರೀತಿಯಾದ ಸ್ನೇಹ ಬೆಳೆದು ಬರಲು, ಕಳೆದ ಮೂವತ್ತು ವರ್ಷಗಳಿಂದ ಅವರಿಬ್ಬರೂ ಕೂಡಿ ರಾಜಕೀಯದಲ್ಲಿ, ಪತ್ರಿಕಾ ವ್ಯವಸಾಯದಲ್ಲಿ ಸುಖ-ದುಃಖಸಮಭಾಗಿಗಳಾಗಿ ದುಡಿದುದೇ ಕಾರಣವೆಂದು ಹೇಳಬಹುದು. ಕರ್ನಾಟಕದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ, ಪತ್ರಿಕಾವ್ಯವಸಾಯಿಕ ಇತಿಹಾಸದ ಕಳೆದ ಮೂವತ್ತು ವರುಷಗಳ ಅವಧಿಯ ಸಿಂಹಾವಲೋಕನವನ್ನು ಮಾಡಿದರೆ, ದಿವಾಕರ-ಹುಕ್ಕೇರಿಕರ ಇವರ ಹೆಸರುಗಳು ಒಂದೇ ನಾಣ್ಯದ ಇಕ್ಕೆಲಗಳಂತೆ ಹೊಂದಿಕೊಂಡುದು ಕಂಡುಬರುವುದು. ಹುಕ್ಕೇರಿಕರರ ಕಾರ್ಯದ ಶ್ರೇಯಸ್ಸಿನ ಬಹುಭಾಗ ದಿವಾಕರರಿಗೆ ಸಲ್ಲುವುದು; ದಿವಾಕರರ ಕಾರ್ಯದ ಶ್ರೇಯಸ್ಸಿನ ಬಹುಭಾಗ ಹುಕ್ಕೇರಿಕರರಿಗೆ ಸಲ್ಲುವುದು.

ರಾಜಕೀಯದಲ್ಲಿ ಈ ಇಬ್ಬರ ಜತೆಗೆ ಇನ್ನೊಬ್ಬ ವ್ಯಕ್ತಿಯು ಬರುವುದು. ಅವರೇ ಕೌಜಲಗಿ ಹನುಮಂತರಾಯರು. ಈ ತ್ರಿಮೂರ್ತಿಗಳದು ಒಂದು ಗುಂಪು. ಇದಕ್ಕೆ ಕಾರಣ ಇವರು ದೇಶಪಾಂಡೆ ಗಂಗಾ-

ಧರರಾಯರ ನೇತೃತ್ವದಲ್ಲಿ ಸಾಗಿದ್ದುನು, ಆಗಿನ ಕಾಲದಲ್ಲಿ ಕರ್ನಾಟಕದ ರಾಜಕೀಯ ಮುಂದಾಳುತ್ವವು ಬಹುವಾಗಿ ದೇಶಪಾಂಡೆ ಗಂಗಾಧರರಾಯರದೆ ಆಗಿದ್ದಿತು. ವಿಜಯಪುರದ ಕೌಜುಲಗಿ ಶ್ರೀನಿವಾಸರಾಯರ ಹೆಸರೂ ಕೇಳಿಬರುತ್ತಿದ್ದರೂ. ಅವರು ಗಂಗಾಧರರಾಯರಂತೆ ಪೂರ್ಣಾವಧಿಯ ರಾಜಕಾರಣಿಗಳಾಗಿದ್ದಿಲ್ಲ. ಆದರೂ ಅವರಿಗೂ ಕರ್ನಾಟಕದಲ್ಲಿ ಅನುಯಾಯಿವರ್ಗವಿದ್ದಿತು ಡಾ. ಹರ್ಡೀಕರರು ಕೌಜುಲಗಿ ಶ್ರೀನಿವಾಸರಾಯರ ಪಿರಿತನವನ್ನು ಒಪ್ಪಿಕೊಂಡವರು. ಕರ್ನಾಟಕದ ಮುಂದಾಳುಗಳೆಂದು ಹೆಸರುಗಳಿಸಿದ ಆಲೂರ ವೆಂಕಟರಾಯರು, ಕಡಪಾ ರಾಘವೆಂದ್ರರಾಯರು. ಮುದವೀಡು ಕೃಷ್ಣರಾಯರು, ಕಾರ್ನಾಡ ಸದಾಶಿವರಾಯರು, ಜೆ. ಎಂ ದೇಶಪಾಂಡೆಯವರು—ಕಾರಣಾಂತರದಿಂದ ಕಾಲ ಮತ್ತು ಕ್ಷೇತ್ರ ಮರ್ಯಾದಿತವಾದ ಚಟುವಟಿಕೆಗಳಲ್ಲಿ ತೊಡಗಿದ್ದುದರಿಂದ, ಅವರು ಮುಂದಾಳು ತನದಲ್ಲಿ ಮುಂದುವರಿಯಲಿಲ್ಲ. ಗಾಂಧಿಯುಗದ ಮುಂದಾಳುಗಳ ಮೊದಲನೆಯ ಪೀಳಿಗೆಯಲ್ಲಿ—ಗಂಗಾಧರರಾವ, ದಿವಾಕರ, ಹುಕ್ಕೇರಿಕರ, ಕೌಜುಲಗಿ ಹನುಮಂತರಾವ, ಮತ್ತು ಹರ್ಡೀಕರ—ಇವರೇ ಪ್ರಾಂತದಾದ್ಯಂತ ಹೆಸರು ಪಡೆದರು. ಇವರಲ್ಲಿ ಪ್ರಾಂತದ ಹೊರಗೆ ತಮ್ಮ ಹೆಸರು ಮಾಡಿಕೊಂಡವರು ಗಂಗಾಧರರಾಯರು—ತಮ್ಮ ಸಂಪರ್ಕ-ಸಂಪತ್ತಿನಿಂದ; ಡಾ. ಹರ್ಡೀಕರರು ಸೇವಾದಳದ ಕಾರ್ಯದಿಂದ. ಗಂಗಾಧರರಾಯರು ಮುಂದಾಳುಗಳಾಗಿರುವ ತನಕ ಅವರ ಅನುಯಾಯಿಗಳ ಹೆಸರು, ಪ್ರಾಂತದ ಮೇರೆಯಾಚೆ ಹೋಗಿರಲಿಲ್ಲ. ಐತಿಹಾಸಿಕ ಕಾರಣಗಳಿಗಾಗಿ ಗಂಗಾಧರರಾಯರ ಮುಂದಾಳುತನವು ೧೯೩೦ಕ್ಕೆ ಮುಗಿಯಿತಾದ್ದರಿಂದ, ಆ ಮುಂದೆ ಅವರ ಅನುಯಾಯಿಗಳು ಮುಂದೆ ಬರಲು ಅಸ್ಪದವಾಯಿತು.

೧೯೩೦ರ ರಾಜಕೀಯ ಚಳವಳಿಯು ಪಟ್ಟಣಕ್ಕೆ ಮರ್ಯಾದಿತವಾಗದೆ, ಹಳ್ಳಿಗಳಿಗೂ ಹಬ್ಬಿತು. ಕರಬಂದಿ ಕಾಯಿದೆಭಂಗ ಚಳವಳಿಗಳು ಗಂಗಾಧರರಾಯರಿಗೆ ಹಿಡಿಸದಾದುವು. ಈ ಚಳವಳಿಗಳು ಕರ್ನಾಟಕದಲ್ಲಿ ಯಶಸ್ವಿಯಾಗಲಾರವೆಂದೂ ಅವರು ಮೇಲಿನವರಿಗೆ ತಿಳಿಸಿದರು. ಆಯತ್ತನೇಳೆಯಲ್ಲಿ ಹಿಂದೆ ಬೀಳುವುದು ಹೇಡಿತನವೆಂದು ಇಪ್ಪತ್ತಿನ ಅನುಯಾಯಿ ವರ್ಗದಲ್ಲಿದ್ದವರು ಮುಂದಾಳುಗಳಾದರು. ಹೊಸ ಕಾರ್ಯಕರ್ತರ ಗುಂಪು ಉದಯವಾಯಿತು. ಕರಮರಕರ್, ಕಬ್ಬೂರ, ವೆಂಕಟರಾಮಯ್ಯ, ವೀರನಗೌಡ ಪಾಟೀಲ, ಎಂ. ಪಿ. ಪಾಟೀಲ. ನೇಸ್ವಿ, ಕೆ. ಎಫ್. ಪಾಟೀಲ, ಹಳ್ಳಿಕೇರಿ, ಮೂಗಡಿ—ಮುಂತಾದವರು, ಹೊಸಯುಗದ ಕಾರ್ಯಕರ್ತರ ಗುಂಪಿನಲ್ಲಿ ಬಂದರು. ರಾಜಕೀಯ ಚಳವಳಿಕ್ಕೆ ಹೊಸ ಕಳೆ ಬಂದಿತು. ಕಾಂಗ್ರೆಸ್ ಕಮೀಟಿಯ ಅಧಿಕಾರಪದಗಳಲ್ಲಿ ಅನೇಕ ಸ್ಥಿತ್ಯಂತರಗಳಾದುವು.

೧೯೩೦-೩೩ರ ಚಳವಳಿಯ ಮೂಲಕ, ಕರ್ನಾಟಕದ ಹೆಸರು ಅಖಿಲ ಭಾರತವಾಯಿತು. ಇಲ್ಲಿ ಯಶಸ್ವಿಯಾದ ಹಾಗೆ ಚಳವಳಿವು ಬೇರೆಡೆಯಲ್ಲಿ ಆಗಲಿಲ್ಲವೆಂದು ಹೇಳಿದರೆ ಅದು ಕೇವಲ ಹೆಗ್ಗಳಿಕೆಯ ಮಾತಲ್ಲ. 'ಗಾಂಧಿಪ್ರಾಂತ' ಎಂದು ಹೆಸರು ಕರ್ನಾಟಕಕ್ಕೆ ಬಂದುದೂ ಆಗಲೇ. ಜೇಲಿನಲ್ಲಿ ರಾಜಕೀಯ ಕೈದಿಗಳ ಸಂಖ್ಯೆಯಲ್ಲಿ ಕರ್ನಾಟಕದ ಜನವೇ ಹೆಚ್ಚು. ಇದು ಇಲ್ಲಿಯ ಮುಂಬಾಳುಗಳಿಗೆ ಪ್ರಾಂತದ ಹೊರಗಿನ ಜನತೆಯ ಸಂಪರ್ಕವನ್ನೂ ತಂದುಕೊಟ್ಟಿತು. ಕಾರ್ಯಕ್ಷಮತೆಯು ವರಿಗೆ ಹತ್ತಿತು. ಕರ್ನಾಟಕದವರು ಯಾವುದೇ ದೃಷ್ಟಿಯಿಂದ ಕಡಮೆಯವರಲ್ಲವೆಂದು ಕಂಡುಬಂದಿತು. ಹೀಗೆ ಅಭಿಪ್ರಾಯವುಂಟಾಗುವ ಹಾಗೆ ಚಳವಳಿಯನ್ನು ಯೋಜಿಸಿ ಯಶಶ್ವಿಯಾಗಿಸಿದ ಶ್ರೇಯಸ್ಸಿನ ಬಹುಭಾಡವು ಹುಕ್ಕೇರಿಕರರಿಗೆ ಸಲ್ಲುವುದು. ಸಂಘಟನೆಯಲ್ಲಿ ಕರ್ನಾಟಕದ ವಲ್ಲಭಭಾಯಿಯೆಂದು ಕೂಡ ಇವರಿಗೆ ಹೆಸರು ಬಂದಿತ್ತು. ಇವರ ಸಂಘಟನೆಯ ಕಾರ್ಯಶಕ್ತಿಯ ಅರಿವು ಅಖಿಲ ಭಾರತದ ಮುಂದಾಳುಗಳಾಗಿದ್ದ ವಲ್ಲಭಭಾಯಿ, ರಾಜೇಂದ್ರಪ್ರಸಾದ, ಪಟ್ಟಾಭಿ, ಸಾಂಬಮೂರ್ತಿ, ನರಿಮನ್, ಎಸ್. ಕೆ. ಪಾಟೀಲ, ಇವರಿಗೆ ಉಂಟಾಗಿತ್ತು. ೧೯೩೭ರ ಚುನಾವಣೆಯಲ್ಲಿಯ ಕಾಂಗ್ರೆಸ್ಸಿನ—ಕರ್ನಾಟಕದಲ್ಲಿಯ—ಯಶಸ್ಸಿಗೆ ಹುಕ್ಕೇರಿಕರರೇ ಕಾರಣರೆಂದು ಅಭಿಮತವಾಗಿದೆ.

ಹೀಗೆ ಕಾರ್ಯಶಕ್ತಿಯು ಅವರಲ್ಲಿ ಬೆಳೆದುಬರಲು ಅವರ ಜೀವನದೃಷ್ಟಿಯೆ ಕಾರಣ. ಮಾನವನ ಸಾಮಾಜಿಕ ಬೆಲೆ ಅವನ ಉಪಯುಕ್ತತೆಯಿಂದಲೆ ನಿರ್ಣಯಿತವಾಗುವುದೆಂದು ಅವರ ದೃಢ ವಿಶ್ವಾಸ. ಸಹಾಯ-ಸಲಹೆ ಕೇಳಲು ಬಂದಾಗ 'ಇದು ನನ್ನ ಕೆಲಸವಲ್ಲ; ಇವರು ನನ್ನವರಲ್ಲ' ಎಂಬ ಭಾವ ಮೂಡಿಬರದೆ, ನನ್ನೆಡೆಗೆ ಬಂದಿದ್ದಾರೆಂದ ಮೇಲೆ ಅದು ನನ್ನ ಕೆಲಸವೇ; ಅವರು ನನ್ನವರೆ ಎಂಬ ಭಾವನೆಯೆ ಅವರಲ್ಲಿ ಮೂಡಿ ಬಂದು, ಯಾವ ಕೆಲಸವೇ ಆಗಿರಲಿ—ಅದು ತನ್ನ ಕೆಲಸವೆಂದು ಅಷ್ಟೇ ಆಸ್ಥೆಯಿಂದ ಮಾಡುವರು. ಅದಕ್ಕೆ ಅವರು ಆ ಕ್ಷೇತ್ರದಲ್ಲಿಯೂ ಮಾಸ್ತರು. ಬೇಡಿದವರಿಗೆ ಸಲಹೆ ಕೊಡುವರಾದ್ದರಿಂದ ಇವರು '. ಅಕ್ಕಲಕಾ ದುಕಾನ "ದ ಮಾಲೀಕರೆಂದು ಹೆಸರು ಪಡೆದಿದ್ದಾರೆ. ಸಾರ್ವಜನಿಕ ಕಾಕಾ ಆಗಿದ್ದಾರೆ. ಕರ್ನಾಟಕದ ಹಿತ ಎಲ್ಲಿ ಸಾಧಿಸುವುದೋ ಅಲ್ಲಿ ತಮ್ಮ ಸೇವೆ ಇರಲೆಂದು—ಅದು ಗ್ರಾಮೋದ್ಯೋಗವಿರಲಿ, ಸ್ವದೇಶಿ ಚಳವಳಿರಲಿ, ಪತ್ರಿಕಾ ವ್ಯವಸಾಯವಿರಲಿ—ಅದರಲ್ಲಿ ಆಸ್ಥೆ ವಹಿಸುವವರೆ.

ಆದರೆ ಎಲ್ಲೆಯೂ ಕರೆಯದಲೆ ಹೋಗುವವರಲ್ಲ. ಕೇಳದೆ ಉಪದೇಶ ಕೊಡುವವರಲ್ಲ. ತನಗಾಗಿ ಆಶೆ ಮಾಡುವವರಲ್ಲ. ಯದೃಚ್ಛೆಯಾ ಬಂದುದನ್ನಷ್ಟೇ ಸ್ವೀಕರಿಸುವರು. ಹೀಗಾಗಿ ಜೀವನಕ್ರಮ ನೋಡುವಾಗ ಮುಂದೆ ಬರಬೇಕಾದಾಗ, ಅವರು ಹಿಂದುಳಿದುದೂ, ಹಿಂದುಳಿದವರೆಂದಾಗ ಮುಂದೆ ಬಂದುದೂ, ಕಂಡುಬರುವುದು. ಹಿಂದೆ ಉಳಿದಾಗ ಹೊರವರ ಬಗ್ಗೆ ಹೇನವಿಲ್ಲ. ಮುಂದೆ ಬಂದಾಗ ಅನ್ಯರ ಬಗ್ಗೆ ಅಸಡ್ಡೆಯಿಲ್ಲ. ಬೇಕಾದುದು ದೊರೆಯಲಿಲ್ಲವೆಂದು ಮೊಖವಿಲ್ಲ; ಸಿಕ್ಕಿದೆಯೆಂದು ಸೊಕ್ಕಿಲ್ಲ. ಬಂದ ಪ್ರಸಂಗಗಳನ್ನೆಲ್ಲ ಧೈರ್ಯವಾಗಿ ಎದುರಿಸಿ, ಪುಟಕ್ಕೆ ಹಾಕಿದ ಚಿನ್ನದ ರೂಪು ತಳೆದಿದ್ದಾರೆ. ಆಪತ್ತಿಗಳನ್ನೆಲ್ಲ. ಅರಗಿಸಿಕೊಂಡು, ನಿರ್ದಾರದಿಂದ ಮುಂದುವರೆದು, ಸುಖದ ಸನ್ನಿವೇಶಗಳಿಗಾಗಿ ತಲೆ ಬಾಯಿಸಿಕೊಂಡು ಅಲಸಿಗರಾಗದೆ, ಸತತೋದ್ಯೋಗ, ಸಹನಶೀಲತೆ, ಸರಲತೆ, ಚಾರಿತ್ರ್ಯಶಕ್ತಿಗಳಿಂದ ಪೋಷಿತರಾಗಿ, ಸಮಾಜದ ಸರ್ವಕ್ಷೇತ್ರಗಳಲ್ಲಿಯೂ ಅವಿರತವಾಗಿ ಕಾರ್ಯಮಾಡುತ್ತಿದ್ದಾರೆ—ಮಾಸ್ತರರೆಂದು ಕರೆಯಿಸಿಕೊಳ್ಳುವ ಸ್ಥಿತ ಧೀಮಂತರಾದ ಹುಕ್ಕೇರಿಕರರು.

ಮೂರು ಕಿರುಗತೆಗಳು

ಡಿ. ಪಿ. ಎಂ. ಗಲಗಲಿ, ಬಿ. ಕಾಮ್, ಮುಂಬೈ

೧ ತತ್ತ್ವಜ್ಞಾನಿ

ಒಂದು ಗಿಡದಡಿಯಲ್ಲಿ ನಾಲ್ವರು ವೃದ್ಧರು ಕುಳಿತು ಮಾತನಾಡು ತ್ತಿದ್ದರು. ಅವರಲ್ಲಿಯ ಮೂವರು ದೊಡ್ಡ ವಿದ್ವಾಂಸರಂತೆ ಕಾಣು ತ್ತಿದ್ದರು. ಅವರೆಲ್ಲ ಬಾಲ್ಯಸ್ನೇಹಿತರು. ಲೌಕಿಕ ಮಾತುಗಳನ್ನು ಮುಗಿಸಿ ದ್ದರು, ತಮ್ಮ ತಮ್ಮ ಗೃಹಜೀವನವನ್ನು ಕುರಿತು ಮಾತನಾಡ ತೊಡಗಿದರು. ಮೊದಲನೆಯ ವಿದ್ವಾಂಸ ನುಡಿದ: "ತತ್ತ್ವ ಜ್ಞಾನದ ಬೆನ್ನಾದ ಅಭ್ಯಾಸದಿಂದ ನಾನು 'ವಸುಧೈವ ಕುಟುಂಬಕಂ' ಎಂಬ ತತ್ತ್ವವನ್ನು ಕಂಡೆನು. ನನಗೆ ನನ್ನ ಗೃಹಜೀವನವು ಅತಿ ಸಂಕುಚಿತ ವೆನಿಸಿ, 'ಈ ತತ್ತ್ವಬೋಧನೆಗಾಗಿ ಇತ್ತ ಹೊರಟು ಬಂದೆ. ಈಗ ಕೆಲ ದಿನ ಗಳ ಹಿಂದೆ, ನನ್ನ ಬಂಧುಗಳೆಲ್ಲ ಹೀನಾವಸ್ಥೆಯಲ್ಲಿ ಒಬ್ಬೊಬ್ಬರೇ ಮೃತ ರಾದರೆಂದು ಕೇಳಿದೆ. ಪ್ರಪಂಚವೇ ನನ್ನ ಕುಟುಂಬದಂತಿದ್ದು, ಅದೆಲ್ಲ ವನ್ನೂ ಕಲ ದುಃಖಮಯವಾಗಿರುವಾಗ, ಕೇವಲ ಒಂದೇ ಕುಟುಂಬಕ್ಕಾಗಿ ನಾನು ಹೇಗೆ ಕಣ್ಣೀರು ಸುರಿಸಲಿ?"

ಎರಡನೆಯ ವಿದ್ವಾಂಸನೆಂದನು: "ಆಶ್ಚರ್ಯ! ತತ್ತ್ವಜ್ಞಾನದ ಬೆನ್ನಾದ ಅಭ್ಯಾಸದಿಂದ ನಾನು ಅಹಂ ಬ್ರಹ್ಮಾಸ್ಮಿ ತತ್ತ್ವಕ್ಕೆ ಬಂದು ನಿಂತಿದೆ. ಪ್ರಾಪಂಚಿಕ ಸುಖ, ದುಃಖಗಳೆಲ್ಲ ಅವರವರ ಕರ್ಮಾನು ಸಾರವಾಗಿರುವವು. ನಾನಂತೂ ನಿರ್ಲಿಪ್ತನು. ನನ್ನ ಸ್ವಗೃಹವು ಯಾವ ಸ್ಥಿತಿಯಲ್ಲಿದೆಯೋ ನನಗೇನೂ ಗೊತ್ತಿಲ್ಲ."

ಮೂರನೆಯ ವಿದ್ವಾಂಸನೆಂದನು, "ಎಲ ಇದೇನು! ಅದೇ ತತ್ತ್ವಜ್ಞಾನದ ಅಭ್ಯಾಸ ಮಾಡಿದ ನನಗೆ ಬೇರೆ ತತ್ತ್ವವೇ ಗೋಚರಿಸಿ ತಲ್ಲ. ನನಗೆ ತಿಳಿದದ್ದು 'ನಾಹಂ ಕರ್ತಾ ಹರಿಃಕರ್ತಾ' ತತ್ತ್ವವು. ಪರ ಮಾತ್ಮನೆದುರು ನಾವು ಅತಿ ಕ್ಷುಲ್ಲಕರು ನನ್ನ ಸ್ವಂತದ ಕಲ್ಯಾಣವನ್ನೇ ಮಾಡಿಸುವ ಸ್ಥೈರ್ಯ, ಅಧಿಕಾರ ನನಗಿಲ್ಲದಾಗ, ನನ್ನ ಬಂಧು-ಬಾಂಧವ ರ ಕಲ್ಯಾಣವನ್ನೆಂತು ಚಿಂತಿಸಲಿ?— ಎಂದು ಅವರ ಸ್ಥಿತಿಯಲ್ಲಿ ವರನ್ನು ಬಿಟ್ಟು ಹೊರಟಿದ್ದೇನೆ."

ನಾಲ್ಕನೆಯವನೆಂದನು: "ಮಿತ್ರರೇ. ನೀವೆಷ್ಟು ಗಹನ ವಿಚಾರ ಗಳನ್ನು ಮಾತನಾಡುತ್ತಿದ್ದೀರಿ? ನನ್ನ ಬಂಧು-ಬಾಂಧವರ, ನನ್ನ ಗ್ರಾಮದವರ ಕಲ್ಯಾಣವನ್ನು ಚಿಂತಿಸಿ, ಕಲ್ಯಾಣವನ್ನು ಮಾಡುವುದ ಕ್ಕೆಯೆ ಜೀವನ ಕಳೆದೆ. ನಾನೂ ನಗುತ್ತ ಬಾಳಿದೆ. ನನ್ನ ಸುತ್ತಲಿನ ವರನ್ನು ಶಕ್ತಿವಿದ್ದಷ್ಟು ನಗಿಸಿದೆ. ಆದರೆ ಒಂದು ಗಳಿಗೆಯೂ ತತ್ತ್ವಜ್ಞಾನವನ್ನು ಅಭ್ಯಸಿಸಲಿಲ್ಲವಲ್ಲ!"

——

೨ ಸ್ತುತಿ-ಮುಖಸ್ತುತಿ

ಜನ ತಂಡತಂಡವಾಗಿ ಪ್ರದರ್ಶನದ ಮುಂಟಪದಿಂದ ಹೊರ ಬೀಳುತ್ತಿದ್ದರು ಅದು ನಗರದ ಸುಪ್ರಸಿದ್ಧ ಕಲಾವಿದನೊಬ್ಬನ ಚಿತ್ರ ಗಳ ಪ್ರದರ್ಶನವಾಗಿದ್ದಿತು. ಪ್ರದರ್ಶನದ ಉದ್ಘಾಟಕರು ಉಜ್ವಲ ಭಾಷಣ ಮಾಡಿದರು. ಹೊಗಳಿಕೆಯ ಎಷ್ಟೋ ನುಡಿಗಳು ಕೇಳ ಬರುತ್ತಿದ್ದುವು. ಕೂಡಿದ ಜನ ಆಶ್ಚರ್ಯಭರಿತರಾಗಿ ಚಿತ್ರಗಳನ್ನು ನೋಡುತ್ತಿದ್ದರು. ಎಲ್ಲರ ಬಾಯಲ್ಲೂ "ಅದ್ಭುತ ಸುಂದರ" ಮುಂತಾದ ಉದ್ಗಾರಗಳೇ. ಕಲಾವಿದನಿಗೆ ತನ್ನ ಶ್ರಮದ ಸಾರ್ಥ ಕತೆಯನ್ನು ತಿಳಿದು ಸಂತೋಷವಾಯಿತು. ಅಂದು ಅವನಿಗೆ ನಗರದ ಪರವಾಗಿ ಮಾನಪತ್ರ ಸಲ್ಲಿಸಿ ಮರ್ಯಾದಿಸಲಾಯಿತು.

ಅಂದು ಇಡೀದಿನ ಕಲಾವಿದನು ಅತ್ಯಂತ ಸಂತೋಷದಿಂದ ಕಳೆದನು. ತಾನು ಅಂದಿಗೆ ಧನ್ಯನಾದೆನೆಂದು ಕಲಾವಿದನಿಗೆ ಹೆಮ್ಮೆ ಯಾಯಿತು ಆದರೂ ಕಲಾವಿದನಿಗೆ ಮನಸ್ಸಿನ ಯಾವುದೋ ಮೂಲೆಯಲ್ಲಿ ತುಸು ಅಸಮಾಧಾನದ ಗೆರೆ ಮೂಡಿದ್ದಿತು. ಅದರ ಕಾರಣ ಮಾತ್ರ ಕಲಾವಿದನಿಗೆ ಇಡಿಯ ದಿನ ಗೊತ್ತಾಗಲಿಲ್ಲ. ಅಂದು ರಾತ್ರಿ ಕಲಾವಿದನು ವಿಶ್ರಾಂತಿ ಹೊಂದುತ್ತಿದ್ದನು. ಆಗ ಅವನ ಆತ್ಮ ನುಡಿಯಿತು: "ಕಲಾವಿದನೇ ಕೇಳು, ಇಂದು ನೀನು ಕೇಳಿದ್ದೆಲ್ಲ ಕೇವಲ ಮುಖಸ್ತುತಿ; ಸ್ತುತಿಯಲ್ಲ. ನಿಜಸ್ತುತಿಯಿಂದ ಸ್ತುತಿಸುವವ ನಿಗೂ ಸ್ತುತ್ಯನಿಗೂ ಸಂತತವಾಗಿ ಸಂತಸವಾಗುವುದು. ಮುಖಸ್ತುತಿ ಯಿಂದ ಮಾತ್ರ ಇಬ್ಬರಿಗೂ ಅಸಮಾಧಾನ. ಮುಖಸ್ತುತಿಯನ್ನು ಎಲ್ಲರೂ ಮಾಡಬಲ್ಲರು. ಸ್ತುತಿಯನ್ನು ಮಾತ್ರ ಬಹು ಸ್ವಲ್ಪ ಜನ ಮಾಡಬಲ್ಲರು!"

ಕಲಾವಿದನಿಗೆ ತನ್ನ ಅಸಮಾಧಾನದ ಗುಟ್ಟು ತಿಳಿಯಿತು. ಸಮಾಧಾನವಾಯಿತು.

——

೩ ಭಕ್ತಿ

ಒಂದು ದಟ್ಟಡವಿಯಲ್ಲಿ ಮೂವರು ಪ್ರಯಾಣಿಕರು ಸಾಗಿದ್ದರು. ಮೂವರೂ ವಿಮನಸ್ಕರಾಗಿ ಮೂಕರಂತೆ ಸಾಗಿದ್ದರು. ಒಮ್ಮೆಲೆ ಒಬ್ಬನು ಕೂಗಿದನು: "ಅಗೋ, ಅಲ್ಲಿ ನೋಡಿರಿ ಭಗವನ್ಮಂದಿರ!" ಅನತಿದೂರದಲ್ಲಿ ಜೀರ್ಣವಾದ ಒಂದು ದೇವಾಲಯ ಕಣ್ಣಿಗೆ ಬಿದ್ದಿತು. ಮೂವರೂ ತ್ವರೆಯಿಂದ ಸಾಗಿದರು. ದೇವಾಲಯದ ಒಳಗಡೆಯಲ್ಲಿ ಧೂಳು ಮುಸುಕಿ, ಅರ್ಧ ಹಾಳಾದ ಸ್ಥಿತಿಯಲ್ಲಿತ್ತು.

ಗರ್ಭಗುಡಿಯಲ್ಲಿಯೂ ಕಗ್ಗತ್ತಲು. ಪ್ರಯಾಣಿಕರು ಅಲ್ಲಿಯೇ ಕೆಲ ದಿನ ನಿಂತು, ಗುಡಿಯ ಜೀರ್ಣೋದ್ಧಾರ ಮಾಡಬೇಕೆಂದರು. ಕೆಲ ದಿನಗಳಲ್ಲಿಯೇ ದೇವಾಲಯ ಮತ್ತೆ ಶೋಭಿಸತೊಡಗಿತು. ಮೇಲೆ ಭಗವಾ ಧ್ವಜ. ಒಳಗಡೆ ಗಂಟೆಯ ನಾದ. ಭಗವಂತನ ಮುಂದೆ ದೊಡ್ಡ ನೀರಾಜನದ ದೀಪ ಬೆಳಗುತ್ತಿತ್ತು.

ಒಬ್ಬ ಪ್ರಯಾಣಿಕನು ಗುಡಿಯ ಹೊರಗಡೆ ಕಲ್ಲಿನ ಮೇಲೆ ಬರೆದನು: "ಈ ದೇವಾಲಯವನ್ನು ಶೋಧಿಸಿದವರಲ್ಲಿ ಮೊದಲಿಗನು ನಾನೇ!" ಎರಡನೆಯ ಪ್ರಯಾಣಿಕನು ಅದರ ಕೆಳಗೆ ಬರೆದನು: "ಈ ದೇವಾಲಯದ ಜೀರ್ಣೋದ್ಧಾರದ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತವನು ನಾನೇ!" ಮೂರನೆಯ ಪ್ರಯಾಣಿಕನು ಭಗವನ್ಮೂರ್ತಿಯ ಎದುರಿನಲ್ಲಿ ನಿಂತು ಬೇಡುತ್ತಿದ್ದನು: "ಹೇ, ಭಗವನ್, ನೀನು ಅತ್ಯಂತ ಕರುಣಾಮಯನು. ನನಗಾಗಿ ನಾನು ಸೃಷ್ಟಿಸಿದ ಈ ಅಳಲುಸೇವೆಯಲ್ಲಿ ಕುಂದೇನಾದರೂ ಇದ್ದರೆ ಕ್ಷಮಿಸು. ನನಗಿನ್ನೇನೂ ಬೇಡ.....ನಿಸ್ಸ ಕರುಣೆಯೊಂದನ್ನು ಬಿಟ್ಟು!" ಭಗವಂತನು ನಸುನಕ್ಕನು.

ಮೂವರೂ ಪ್ರಯಾಣಿಕರು ಮೃತರಾದ ಮೇಲೆ, ನೂರಾರು ವರ್ಷಗಳ ನಂತರ, ಸುತ್ತಲಿನ ಜನವೆಲ್ಲ ಇಬ್ಬರು ಮಹಾಭಕ್ತರ ಜಯಂತ್ಯುತ್ಸವವನ್ನು ವಿಜೃಂಭಣೆಯಿಂದ ಆಚರಿಸುತ್ತಿದ್ದರು. ನೂರನೆಯವನು ಪ್ರಪಂಚದ ಸೃಷ್ಟಿ ಸಟಲದಿಂದ ಜಾರಿ ಹೋಗಿದ್ದನು. ಭಗವಂತನು ಗಹಗಹಿಸಿ ನಕ್ಕನು.

ಸುಳಿಗಾಳಿಯೊಡನೆ:

ಶ್ರೀ. ಸಿದ್ಧಣ್ಣ ಮುಸಳಿ ಬಿ. ಎ. ಬೆಳಗಾಂವಿ

೧

ಹನ್ನೆರಡು ವರುಷಗಳು ಮೇಲೇಸೊ ದಿವಸಗಳು
ಭೂತಕಾಲದ ಗರ್ಭಗೋರಿಯಲ್ಲಿ.
ಉರುಳಿ ಹೋದರು ಕೂಡ ಮರಳಿ ಸುಳಿವಾಡಿಹವು
ನೊಂದ ಜೀವಿಯ ಮನದ ರಂಗದಲ್ಲಿ.

೨

ಕವಿಶಿಶುವ ಬೆಳೆಸಿರುವ ಮೊಲೆಹಾಲನುಣಿಸಿರುವ
ವಿಜಯಪುರವೇ ನಿನ್ನ ಮರೆಯಲಾರೆ;
ನೂರಾರು ಮೈಲುಗಳ ಗಡಿಯಾಚೆ ನಿಂತರೂ
ಎದೆಯ ಹೆಂಬಲವನ್ನು ತೊರೆಯಲಾರೆ!

೩

ಅರೆಬೀಳು ಕೋಟೆಗಳು ಆ ಹಾಳು ಗೋರಿಗಳು
ಕೂಗಿ ಕರೆದಿವೆ ಕವಿಯ ಬಾರೊ ಎಂದು;
ತಮ್ಮ ನೋಲೊಂದೊಂದು ಕಾವ್ಯಕೃತಿ ರಚಿಸೆಂದು
ಆಂಗಲಾಚಿವೆ ಕಣ್ಗೆ ನೀರ ತಂದು.

೪

ದುಃಖದಲಿ ಬಿಕ್ಕಿರುವ ಅಳುನುಂಗಿ ನಕ್ಕಿರುವ
ನಿನ್ನ ನೆರಳೇ ನನಗೆ ತೌರಾಗಿದೆ;
ಮರಣಶಯ್ಯೆಯ ಮೇಲೆ ಕೊನೆಯ ಉಸಿರಿಳೆಯದಿರಿ
ಕವಿಯ ಕರುಳೇ ಕರಗಿ ನೀರಾಗಿದೆ.

೫

ನಿನ್ನ ಹೃದಯವ ನೋಡಿ ಕಾವ್ಯ ಕಲ್ಪನೆ ನೀಡಿ
ನಿಮ್ಮತನ ಸರ್ವಸ್ವದೌದಾರ್ಯಕೆ;
ಕಾವ್ಯಕೃತಿಯಲ್ಲೊಂದು ಸ್ಮೃತಿಯ ದೀಪಸ್ತಂಭ
ನಿಲ್ಲಿಸಿದರಾದಿನವೆ ಋಣ ತೀರಿತೆ?

೬

ನಿತ್ಯ ನಿರ್ವಾಣದಲಿ ಸಿಳ್ಳುಹೊಡೆಯುವ ಗಾಡಿ
ಹೊತ್ತು ತರದಿಹುದಲ್ಲ ಕವಿಯನೊಮ್ಮೆ-
ಎಂದು ಪ್ರತಿ ಉಸುರಿನಲಿ ಜಲಜ ಚೇತ್ಕಾರದಲಿ
ಕೂಗದಿರಿ ಎದೆಗೆಟ್ಟು — ಬರುವೆನೊಮ್ಮೆ.

೭

ಹಗಲಿರಲಿ ಇರುಳಿರಲಿ ಯಾವ ದಿನವೇ ಇರಲಿ
ತೇಲಿ ಬರುವೆನು ಮುಗಿಲ ತೇರನೇರಿ;
ಸುಳಿಗಾಳಿಯೊಡಗೂಡಿ ಸುತ್ತು ಸೌರಭ ಸೂಸಿ
ಬರುವೆ, ಬೀದಿಯ ತುಂಬ ಬೆಳಕ ಬೀರಿ.

ಹೊಸತೇನು ಹೊಸತು!

ಶ್ರೀ. ಬೊ. ಸೀತಾರಾಮಾಚಾರ್ಯ, ಹೊಸಪೇಟ್ಟೆ

"ಹೊಸತು ಭಾವಶೈಯುದಿಸಿ, ಹೊಸಬದುಳು ಚಿಲುವರಸಿ
ಹೊಸ ಹೊಸ್ತಿಲಲಿ ಕಾಲನಿರಿಸಿ ಮುಂದೆ,
ನವ-ನವೋದಯವಾಂತ ಶ್ರೇಯ-ಸಾಮ್ರಾಜ್ಯಕ್ಕೆ
ಭವ್ಯ-ನವ್ಯದ ದಾರಿದೆರೆಯಲೆಂದೆ" ೧

ಹಳೆಯ ಶ್ರದ್ಧೆಯ ಸುಟ್ಟು ಸುಡುಗಾಡಿನಲ್ಲೊಂದು
ಹೊಸತುಗೋರಿಯ ಕಟ್ಟಬೇಕೆ ನಾವು?
ಉರುಳುತಿಹ ಹೊಸ-ಹಳೆಯ ಚಕ್ರನೇಮೀಕ್ರಮವ
ತಿಳಿದರೂ ಹಳತಿನ್ನಬಹುದೆ ನಾವು? ೨

ಭಾವನೆಯ ವೇಗದಲಿ ಬಾಳಬಂಡಿಯು ಮುರಿಯೆ
ಆಶೆ ಮೃಗಜಲವಾಗಬಹುದು ಆಗ.
ಹಿಂದಿನಿಂದಲು ಉತ್ತ ಹೊಲದಲ್ಲಿ ಗೇದಿರಲು
ರಸವೃಕ್ಷ ಚಿಗುರಬಹುದಾಗಬೇಗ! ೩

ಮೂಹುಗುಡ್ಡೆಯ ಸೀಳಿ ಮೂಹುತಿಹ ನೇಸರನು
ನಿನ್ನೆ-ಬುಸಿರೊಳಗಿಂದ ಬಂದ ಕೂಸು;
ಇಂದು ಬಾನೊಳಗಿಂದ ಸುರಿವ ವರ್ಷದ ಧಾರೆ
ಮೊನ್ನೆ ಕಡಲಬ್ಬೆ ತಾ ಹೊಸೆದ ಹಾಸು! ೪

ಜನ್ಮಜನ್ಮದ ಪಯಣ ಹೊಸತು ಹೆಬ್ಬಾಗಿಲಿಗೆ
ಹೊಗುವಂದೆ ಸಾರಥ್ಯಸೂತ್ರಹಿಡಿದು—
ಹಳ ಯುಗಾದಿಯೆ ಇಳಿಗೆ ನಯದ ನುಣ್ಗೊರಳಿಂದ
ಇತಿಹಾಸ-ಸಾರವನ್ನೂದುತಿಹುದು. ೫

ಹಿರಿಯನೊಬ್ಬನ ನೆರೆದ ಬೆಳ್ಳಗೂದಲಿನಲ್ಲಿ
ಅಡಗಿಹುದು ಜೀವನದ ಅನುಭವಾಳಿ;
ಇಂದು ಬಾಡದ ತರುಣ ನಾಳೆ ಬಸವಳಿದಿರಲು
ಅರಿಯಬಹುದಾತನಿಗೆ "ಹೊಸತು ಚಾಳಿ!" ೬

ಹಳೆಯಬಳಗವು ಕಡೆದ ಸಂಸ್ಕೃತಿಯ ಶಿಲ್ಪದಲಿ
ಬಿತ್ತಿತ್ತು ಅಗಲೇ ಹೊಸತಿನಾಸೆ,
ಇಂದು ಬೆಳಗುವ ಬಾಳಿಕನ್ನಡಿಯ ಮೊಗದಲ್ಲಿ
ಅರಳಿಹುದು ಹೊಸತಾಗಿ ನಾಳೆಯಾಸೆ. ೭

ಹೊಸತಿನುನ್ಮಾದದಲಿ ಹಳತೆಂದು ಬೆಯ್ಯದಿರು,
ಕ್ಷಣಕ್ಷಣವು ಹೊಸತನ್ನು ಹಳತುಮಾಡಿ—
ಸಾಗುವುದು; ಹಳತೆಂಬ ಹೊಂಪಿನಾ ಜೋಗುಳಕೆ
ಜೋಕೆ, ಮಣಿದಿರಬೇಡ ನಿದ್ದೆಬೇಡಿ. ೮

ನಮ್ಮ ಗುರಿ

ಶ್ರೀ. ಶ್ರೀನಿವಾಸ ಗಲಗಲಿ, ಧಾರವಾಡ

೧

ಬಾಳಲು ಎಂದೇ ಬಂದೆವು ಇಲ್ಲಿಗೆ
ಬಾಳುವುದೊಂದೇ ನಮ್ಮ ಗುರಿ!
ಬಾಳುವ; ಬದುಕುವ; ಬಾಳಿರಗೊಡುತಲಿ,
ಇದುವೇ ನಮ್ಮಯ ಹೆಮ್ಮೆಸಿರಿ!

೨

ಬಲೆಯನು ಹಾಸುವ ದುರುಳರ-ಹವಣದ
ಕರುಳನು ಬಗೆದೇ ಬಾಳೋಣ!
ವಾಮನರಾಗಿಯೆ ಬಲಿಗಳ ದಂಡಿಸಿ,
ನಾಡಿನ ಪಾಡಿಗೆ ಹೆಣಗೋಣ!

೩

ಶುದಿ-ಮೊದಲಿಲ್ಲದ ಬಾಳುವೆಬನದಲಿ
ಸೊಬಗಿನ ಸುಗ್ಗಿಯ ಮಾಡೋಣ!
ಬಾಳುವ ಜೀವಿಗೆ ಬಲವೇ ಅಮೃತವು
ಅದನೇ ಗಳಿಸಿಯೆ ಬಾಳೋಣ!

ಸಾಗರದೆಡೆಗೆ

(ಚಿಕ್ಕಕತೆ)

ಶೀ. ಆನಂದ ವರ್ತಿ, ಕಾರವಾರ

●

ಎಲ್ಲರೂ ಇಲ್ಲದ ಸೌಕರಿಗಾಗಿ ಬಾಯಿ ಬಿಡುತ್ತ, ಹೊರಟೆರೆ, ಎಲ್ಲಿ ದೊರೆಯಬೇಕು? ಹುಟ್ಟುಸೊಂದಿಗೆ ಹೊಟ್ಟೆಯ ಪಾಡಿನ ಹೋರೆಯೊಂದು ಬೆನ್ನುಹತ್ತಿಯೆ ಇರುತ್ತದೆ. ವಿಟ್ಠಲ ತನ್ನ ಮಗನಿಗೆ ಅದು ಬೇಡವೆಂದ. ಮಗನು ಕಾನಾಗಿಯೆ ಅದನ್ನು ಸ್ವೀಕರಿಸಿದ.

●

ಸಾಗರದ ತೆರೆಗಳು ತಮ್ಮಲ್ಲಿಯೇ ಲಲ್ಲಾಟವನ್ನಾಡುತ್ತಿದ್ದುವು. ಮುಳುಗುವ ಸೂರ್ಯನ ಮಾಗಿದ ಕಾಂತಿಯು ಆ ತೆರೆಗಳ ಮೇಲೆ ಬಿದ್ದುದರಿಂದ, ಅವು ಕೆಂಪಾಗಿ ತೋರುತ್ತಿದ್ದುವು. ವಿಟ್ಠಲನ ದೋಣಿಯೂ ಆ ನೀರಿನೊಡನೆ ಲಲ್ಲಾಟವನ್ನಾಡುತ್ತ ಮಂದಗತಿಯಿಂದ ತನ್ನ ತಾಣಕ್ಕೆ ಹೊರಟಿತ್ತು. ತಂಪಾದ ಗಾಳಿಯು, ಬಲವಾಗಿ ಬೀಸುತ್ತಿದ್ದುದರಿಂದ, ವಿಟ್ಠಲನು ತನ್ನ ಕೈಯಲ್ಲಿಯ ಹುಟ್ಟನ್ನು ಕೆಳಗಿಟ್ಟು ಸುತ್ತಲ ಸೌಂದರ್ಯವನ್ನು ನೋಡುತ್ತ ಕುಳಿತನು. ಚಿತ್ರವನ್ನು ಬರೆದಂತೆ ಆಗಿನ ಆ ದೃಶ್ಯ. ನೀಲಾಕಾಶವಲ್ಲಿ ಕಂಗೊಳಿಸುವ ಅರ್ಧಚಂದ್ರನಂತೆ, ನೀಲಜಲಧಿಯ ಮರೆಯಲ್ಲಿ ಶೋಭಿಸುವ ಶುಭ್ರ ಮಳಲದಂಡೆ; ಉದ್ದವಾಗಿ ಬೆಳೆದು ಜೋಗಾತುತ್ತ ನಿಂತ ಗಾಳಿಮರಗಳು; ತೆಂಗಿನ ಮರಗಳು; ಅಲ್ಲಲ್ಲಿ ಕಾಣುವ ಜೆಪ್ಪರದ ಮನೆಗಳು; ದೂರದಲ್ಲಿ ಮಸಕುಮಸಕಾಗಿ ಕಾಣುವ ನೀಲಿಗುಡ್ಡಗಳು. ಅವೆಲ್ಲವುಗಳಲ್ಲಿ ಎದ್ದು ಕಾಣುವ ಆ ಬಾವುಟಕಟ್ಟೆ.

ಆದರೆ ವಿಟ್ಠಲನಿಗೆಲ್ಲಿಯ ನಾವೀನ್ಯ ಅದರಲ್ಲಿ? ಅವನ ಮನದಲ್ಲಿ ಈಗ ಶಂಕರನ ಬಗ್ಗೆಯೇ ವಿಚಾರಗಳು: ತೇಲಾಡುತ್ತಿದ್ದುವು.... ಅವನ ಆ ದೋಣಿಯಂತೆಯೇ! ಬಹಳೇ ಶ್ರಮಪಟ್ಟು ವಿಟ್ಠಲ, ಶಂಕರನನ್ನು ವಿದ್ಯೆ ಕಲಿಯಲು ಶಾಲೆಗೆ ಹಾಕಿದ್ದ. ಒಬ್ಬನೇ ಒಬ್ಬ ಮಗ. ಶಂಕರನ ಆರಾಧನೆಯಿಂದ ಹುಟ್ಟಿದುದಕ್ಕಾಗಿ ಪ್ರೀತಿಯಿಂದ 'ಶಂಕರ' ಎಂದೇ ಅವನಿಗೆ ಹೆಸರಿಟ್ಟಿದ್ದ. ಶಂಕರನೂ ಬುದ್ಧಿವಂತ; ಒಂದೂ ಪರೀಕ್ಷೆಯಲ್ಲಿ ಅಪಯಶ ಹೊಂದದೆ—ತೇರ್ಗಡೆಯಾಗುತ್ತಲಿದ್ದ. ಹೋದ ವರ್ಷವೇ ಅವನು ಮ್ಯಾಟ್ರಿಕ್ ಆದದ್ದು. ತಾನು ಸ್ವತಃ ಅರಿಹೊಟ್ಟೆಯುಂಡು, ವಿಟ್ಠಲನು ಶಂಕರನಿಗೆ ಅವನ ಶಿಕ್ಷಣಕ್ಕಾಗಿ ದುಡ್ಡು ಕೊಟ್ಟಿದ್ದ. ಅದಕ್ಕೆ ಯಶಸ್ಸೂ ಬಂದಿತ್ತು.

ವಿಟ್ಠಲನ ಮುಂದೆ ಈಗೊಂದು ರಮ್ಯಸ್ವಪ್ನ: ತನ್ನ ಶಂಕರನಿಗೆ—ಈಗ ಎಲ್ಲಿಯಾದರೂ ಕೆಲಸ ಸಿಗುತ್ತದೆ. ಶಾಲೆಯಲ್ಲಿ ಶಿಕ್ಷಕನೆಂದಾಗಲಿ; ಆಫೀಸಿನಲ್ಲಿ ಕಾರಕೂನನೆಂದಾಗಲಿ ಅವನು ಈಗ ಕೂಡ್ರತಕ್ಕದ್ದು. ಇನ್ನು ಮೇಲೆ ಅವನಿಗೆ ತ್ರಾಸವಿಲ್ಲ; ಈ ಮೀನು. ಗಾಂಕೆಯ ಉದ್ಯೋಗವಿಲ್ಲ. ತಾನೂ ಈ ಬಲೆ, ದೋಣಿಗಳನ್ನು ಮಾರಿ ಸುಮ್ಮನೆ ಮನೆಯಲ್ಲಿ ಕುಳಿತುಕೊಳ್ಳುವೆ. ಹೇಗಾದರೂ ತಿಂಗಳು-ತಿಂಗಳಿಗೆ ಮನೆಗೆ ಹಣ ಬರುವುದಲ್ಲ! ವಿಚಾರ ಮಾಡುತ್ತಿದ್ದಂತೆಯೇ ಅವನಿಗೆ ನೀರಲ್ಲಿ ತೇಲಾಡುವ ತನ್ನ ಪ್ರತಿಬಿಂಬ ಕಂಡಿತು. ಒಣಗಿದ ಎಲೆಯು ಮೇಲಿನ ಶಿರಗಳು ಹೇಗೆ ಎದ್ದು ಕಾಣುತ್ತವೆಯೋ ಹಾಗೆ. ವಿಟ್ಠಲನಿಗೇಕೋ ಅದರ ನೆನಪಾಯಿತು. ಆ ಪ್ರತಿಬಿಂಬ ತನ್ನನ್ನು ಅಣಕಿಸಿದಂತೆ ಅವನಿಗೆ ಭಾಸವಾಯಿತು. ಅವನು ತಪ್ಪನ್ನಿ ತನ್ನ ದೃಷ್ಟಿಯನ್ನು ಬೇರೆಡೆ ನಿಲ್ಲಿಸಿದ. ಆದರೆ ಅದೇಕೋ ಅವನಿಗೆ ಆ ವಿಚಾರಗಳು ಅಂಟು ಹತ್ತಿದಂತೆ ಅಂಟಿದ್ದುವು. ಚಕ್ರಗಳು ತಿರುಗತೊಡಗಿದುವು ಅವನ ತಲೆಯಲ್ಲಿ:

'ನಾನು ಈಗ ಮುದುಕ, ಈಗ ಹೊಣೆಯೆಲ್ಲವೂ ಶಂಕರನ ಮೇಲೆಯೇ—ಊರಲ್ಲಿಯೇ ಎಲ್ಲಿಯಾದರೂ ಮನೆ ನೋಡಿ ಅಲ್ಲಿಯೇ ಇದ್ದರಾಯಿತು. ಈ ಹಾಳು ಉದ್ಯೋಗ ಇನ್ನೇತಕ್ಕೆ? ಹಣ ಸಿಕ್ಕಿದರೆ ಸಿಕ್ಕಿತು, ಇಲ್ಲದಿದ್ದರೆ ಇಲ್ಲ; ಏನೂ ಇಲ್ಲ. ಇದೆಂತಹ ಜೀವನ? ನಾನೊಬ್ಬನೇ ಮಾಡಿದೆ ಈ ಕೆಲಸ; ಶಂಕರನಿಗೆ ಮತ್ತು ಬೇಡ ಇದು!'

ತನ್ನ ವಿಚಾರತಂದ್ರಿಯಲ್ಲಿ ದಂಡೆಯನ್ನು ಮುಟ್ಟಿದ್ದೇ ತಿಳಿಯಲಿಲ್ಲ ಅವನಿಗೆ. 'ಆ ಪೊಡ್ಡ ದೊಡ್ಡ ತೆರೆಗಳು ಎಲ್ಲಿ ಮಾಯವಾದವು?' ಎಂದು ನೋಡುತ್ತಾನೆ—ಅವ; ದೋಣಿಯು ದಂಡೆಯ ಮೇಲೆ. ವಿಸ್ಮಿತನಾಗಿ ಕೆಳಗಿಳಿದ. ನೀರಿನಿಂದ ದೋಣಿಯನ್ನು ಎಳೆದು ದಂಡೆಯ ಮೇಲಿಟ್ಟ. ಸಿಕ್ಕ ಸ್ವಲ್ಪ ಬೇಟೆಯನ್ನು ತನ್ನ ಜಾಳಿಗೆಯಲ್ಲಿ ಹಾಕಿ ಮನೆಯ ಕಡೆಗೆ ಸಾಗಿದ. ಆ ಸಂಧ್ಯಾಪ್ರಕಾಶದಲ್ಲಿ ಅವನ ಹಣೆಯ ಮೇಲೆ ಬಿದ್ದ ನೀರಿನ ಹನಿಗಳು ಮಿನುಗಿದುವು. ಅವನ ಕೈಯಲ್ಲಿಯ ಆ ಬೇಟೆಯನ್ನು ನೋಡಿ ನಾಲ್ಕೈದು ಕಡಲ್‌ಪಕ್ಷಿಗಳು ಅಲ್ಲಿ ಹಾರುತ್ತ ಬಂದುವು. ಅವನು ಅವುಗಳನ್ನು ಲೆಕ್ಕಿಸದೆ, ಆ ಉಸುಕಿನಲ್ಲಿ ಲಗುಬಗೆಯಾಗಿ ನಡೆಯತೊಡಗಿದ.

ಮನೆಯು ಸಮೀಪಿಸಿತು. ತೆಂಗಿನಮರಗಳ ದಟ್ಟವಾದ ತೋಪಿನಲ್ಲಿ ಚಿಕ್ಕದೊಂದು ಗುಡಿಸಿಲು. ಕತ್ತಲೆಯಾವುದರಿಂದ ನೆಲವು ಆವರಿಸಿತ್ತು. ಒಳಗೆ ಪಾತ್ರೆ ಒಂದು ದೀಪ ಮಿಣಮಿಣನೆ ಮಿನುಗುತ್ತಿತ್ತು.

"ಶಂಕರಾ!"

"ಓಽ, ಅಪ್ಪಾ, ಬಂದೆಯಾ? ಅಮ್ಮನಿಗೆ ಈಗಲೇ ಸ್ವಲ್ಪ ಜ್ವರ ಬಂದಿದೆ. ನೆಗಡಿಯಾಗಿರಬೇಕು. ಹೆಚ್ಚೇನಿಲ್ಲ."

"ಜ್ವರವೇ? ಆ ಹೊತ್ತು ಎಷ್ಟು ಅದು ನೀರಿನಲ್ಲಿ ಇರುವುದು—ಏನು ಸುಮಾರು? ಈಗ ಜ್ವರ ಬಂತೆಂತ ಒದರಾಡೋದು!"

"ಇರಲಿ ಅಪ್ಪಾ, ಜ್ವರವೇನು ಹೇಳಕೇಳಿ ಬರುತ್ತದೆಯೇ?"

"ಮತ್ತು ಹಣವೇನು ಹೇಳಿ ಬರುತ್ತದೆಯೇ? ಈಗೆಲ್ಲಿಂದ ದುಡ್ಡು ತರುವಿ? ಸಾಕಪ್ಪಾ ಸಾಕು! ಎಲ್ಲಿಯಾದರೂ ನಿನಗೊಂದು ಕೆಲಸ ಸಿಕ್ಕರೆ, ಈ ಬಡತನದಿಂದ ಪಾರಾಗಬಲ್ಲೆವು!"

ಶಂಕರ ಮಾತನಾಡಲಿಲ್ಲ. ಅವಳ ಮುಖ ಕೆಂಪಗಾಗಿತ್ತು. ಗಾಬರಿಯಾಯಿತು. ಯಾವಾಗಲೂ ಹೊಟ್ಟೆತುಂಬ ಊಟಮಾಡುವ ಶಂಕರ ಈ ದಿನ ಸ್ವಲ್ಪ ಅಂಬಲಿಯನ್ನು ಬಿಟ್ಟು ಎದ್ದಿದ್ದ. ವಿಟ್ಠಲನಿಗೆ ಏನೇನೋ ಅಶ್ಚರ! 'ಇರಬಹುದು, ಅವನದೇನಾದರೂ ವ್ಯವಹಾರ' ಎಂದು ತಂದೆ ಸುಮ್ಮನೆ ಮಲಗಿಬಿಟ್ಟ.

× × × ×

ಹಾಸಿಗೆಯ ಮೇಲೆ ಬಿದ್ದ ಶಂಕರನಿಗೆ ಸರಿಯಾಗಿ ನಿದ್ದೆಯೇ ಇಲ್ಲ. ಅವನ ಆ ಗಟ್ಟಿ–ಮುಟ್ಟಾದ ದೇಹಕ್ಕೂ ಆ ಹಾಸಿಗೆ ಮುಳ್ಳಿನಂತೆ ಚುಚ್ಚುತ್ತಿತ್ತು. ಅವನ ಮನಸ್ಸನ್ನು ನೋಯಿಸುತ್ತಿತ್ತು. ಜಗತ್ತಿನ ರೀತಿ-ನೀತಿಗಳನ್ನು ನೋಡಿ ಅವನಿಗೆ ಹೇಸಿಕೆಯಾಗಿತ್ತು. ತಲೆಯಲ್ಲಿ ವಿಚಾರಗಳು, ಗೋಡೌನಿನಲ್ಲಿ ತುಂಬಿಟ್ಟ ಜೀಲಗಳಂತೆ ರಾಶಿರಾಶಿಯಾಗಿ ಬಿದ್ದಿದ್ದುವು. ಮಳೆಗಾಲದ ರಾತ್ರಿಯಂತೆ ಅವನ ಮನದಲ್ಲಿ ಜುಗುಪ್ಸೆಯ ಮೋಡ ಕವಿದಿತ್ತು. ಹೃದಯದ ಯಾವುದೋ ಭಾಗಕ್ಕೆ ನೋವಾಗಿ ಅದರಿಂದ ವಿಷ ಸುರಿಯುತ್ತಿತ್ತು.....

ಹಾಗೆಯೆ ಎದ್ದು ಹೊರಗೆ ಹೊರಟ. ಇಡಿಯ ಕಾರವಾರ ಊರು ಸ್ತಬ್ಧವಾಗಿ ಮಲಗಿತ್ತು. ಚಂದಿರನು ಪ್ರೀತಿಯಿಂದ ತಾನು ಹೊದೆದ ರೇಶಿಮೆ ಶಾಲಿನ ತುದಿಯನ್ನು ಅದರ ಮೇಲೆ ಹಾಸಿದ್ದ. ತೆಂಪಾದ ಗಾಳಿ ಜೋಗುಳ ಹಾಡುತ್ತಿತ್ತು. ತೆಂಗಿನಮರಗಳು ಬೀಸಣಿಕೆಯಂತೆ ಬೀಸುತ್ತಿದ್ದುವು. ವಕ್ರವಾಗಿ ಹಬ್ಬಿದ ಆ ಕಪ್ಪು ರಸ್ತೆ, ಉದ್ದುದ್ದ ಬೆಳೆದ ಗಾಳಿಮರಗಳು, ಮಿತ್ರಸಮಾಜ ಮತ್ತು ಪೋಸ್ಟ್ ಆಫೀಸಿನ ಕಟ್ಟಡಗಳು— ಆ ಬೆಳುದಿಂಗಳಿನಲ್ಲಿ ಶಾಂತವಾಗಿ ಮಲಗಿದ್ದುವು. ಅವುಗಳ ಮುಂದೆ ಹಬ್ಬಿದ ಗುಡಿಸಿಲುಗಳೂ ಶಾಂತ; ಎಲ್ಲೆಲ್ಲಿಯೂ ಶಾಂತಿ. ಸಮುದ್ರದ ತೆರೆಗಳು ಮಾತ್ರ ತಡೆತಡೆದು ಬಂದು ಅಪ್ಪಳಿಸುತ್ತಿದ್ದುವು. ಶಂಕರನ ಮನಸ್ಸೂ ಹಾಗೆಯೇ. ಮ್ಯಾಟ್ರಿಕ್ ಆಗಿ ಎಂದು ವರ್ಷವಾಯಿತು. ಅವರೆ ಇನ್ನೂ ಜೀವನದಲ್ಲಿ ಸ್ಥಿರತೆ ಬಂದಿಲ್ಲ. ಇದೇ ಊರಲ್ಲಿ ಕೆಲಸಕ್ಕಾಗಿ ಹುಡುಕಾಡಿದ: ಪ್ರತಿಯೊಂದು ಆಫೀಸು, ಅಂಗಡಿ, ಶಾಲೆ ಸುತ್ತಾಡಿದ. ಎಲ್ಲೆಲ್ಲಿಯೂ ನಿರಾಶೆ. ಇದೇ ಊರು. ಈಗ ಶಾಂತವಾಗಿ ಮಲಗಿದೆ. ರಾತ್ರಿಯು ಅದರ ಮೇಲೆ ತನ್ನ ಗೂಢ, ಗಾಢ ಆವರಣವನ್ನು ಹೊಚ್ಚಿದೆ. ಆದರೆ ಬೆಳಕಿನಲ್ಲಿ.... ಛೇ; ಛೇಡ! ಆ ಮನುಷ್ಯರ ಸಹವಾಸವೇ ಬೇಡವೆನಿಸಿತು ಅತನಿಗೆ. ಇದೇ ಊರೆಂತಲ್ಲ. ಎಲ್ಲೆಲ್ಲಿಯೂ ಹೀಗೆಯೇ! ಶಕ್ತರ್ತನ, ಮೋಸ, ಕೃತ್ರಿಮ ಈ ಮಾಳು ಜಗವನ್ನಾವರಿಸಿದೆ. ಶ್ರೀಮಂತರು ಬಡವರನ್ನು ತಿರಸ್ಕರಿಸುತ್ತಾರೆ; ಬಡವರು ಶ್ರೀಮಂತರನ್ನು ತೆಗಳುತ್ತಾರೆ; ಅಂಗಡಿಕಾರರು ಗಿರಾಕಿಗಳನ್ನು; ಡಾಕ್ಟರರು ವಕೀಲರನ್ನು; ವಕೀಲರು ಡಾಕ್ಟರರನ್ನು; ಅಧಿಕಾರಿಗಳು ಕೈಕೆಳಗಿನವರನ್ನು; ಗೆಳೆಯರು ಗೆಳೆಯರನ್ನು; ಗಂಡಸು ಹೆಂಗಸನ್ನು; ಹೆಂಗಸು ಗಂಡಸನ್ನು—ಮೋಸಗೊಳಿಸುತ್ತಾರೆ. ಸ್ವಾರ್ಥ! ಎಲ್ಲವೂ ಸ್ವಾರ್ಥಕ್ಕಾಗಿ! ಸ್ವಾರ್ಥವೆ ಮದ್ಯಬಿಂದು. ಉಳಿದೆಲ್ಲವರೂ ಬೇರೆ ಬೇರೆ ಅಂತರದಿಂದ ಅದರಸುತ್ತ ತಿರುಗುವವರೇ! ಚಕ್ರಾಕಾರವಾಗಿ ತಿರುಗುವವರೇ! ಆ ಚಕ್ರದಿಂದ ಬಿಡುಗಡೆಯಿಲ್ಲ! ಅಮೋಘ ಪ್ರವಾಹ; ರಭಸದ ಪ್ರವಾಹ, ತಿರುಗು. ವಿಕೆ; ತಿರುಗುವಿಕೆ, ಬರೀ ತಿರುಗುವಿಕೆ; ಗರಗರ! ಗರಗರ.....

ಶಂಕರನಿಗೆ ತನ್ನ ತಲೆ ಸೀಳಿಹೋದಂತಾಯಿತು. ಎರಡೂ ಕೈಗಳಿಂದ ತಲೆಯನ್ನು ಗಟ್ಟಿಯಾಗಿ ಹಿಡಿದುಕೊಂಡ ಅವನಿಗೆ ಆ ಬಾಹ್ಯಜಗತ್ತಿನ ಬಗ್ಗೆ ಜುಗುಪ್ಸೆ ಹುಟ್ಟಿತು. ತಿರಸ್ಕಾರ ಉದ್ಭವಿಸಿತು. ಅಸಮಾಧಾನವಾಯ್ತು. ಹಾಗೆಯೆ ಎದ್ದ ಅಷ್ಟಾಂಗವಾಗಿ ಅನಂತ ಜಲಧಿ ಪಸರಿಸಿತ್ತು. ನೀಲ ಜಲಧಿ; ಗಾಢ ಗಂಭೀರ ಜಲಧಿ! ಜಗತ್ತಿನಲ್ಲಿಯ ಎಲ್ಲ ವೇದಾಂತ ಅದರಲ್ಲಿ ಒಕ್ಕಟ್ಟಾಗಿತ್ತು. ಬೆಳ್ದಿಂಗಳಿನಿಂದ ಅದಕ್ಕೊಂದು ವಿಶೇಷ ಮಿರುಗು ಬಂದಿತ್ತು. ತೇಜವು ಇಮ್ಮಡಿಸಿತ್ತು. ಅದರ ಆ ಮೋಹಕ ಕೋಮಲ ತೆರೆಗಳು ಶಂಕರನ ಕಾಲಡಿಯನ್ನು ಸ್ಪರ್ಶಿಸುತ್ತಿದ್ದವು. ಅವನನ್ನು ಆಮಂತ್ರಿಸುತ್ತಿದ್ದುವು. ಜನ್ಮಜನ್ಮಾಂತರಗಳ ಗೆಳೆಯರಂತೆ ಅವು ಶಂಕರನಿಗೆ ತೋರಿದುವು. ಸುತ್ತಲ ತೆಂಗಿನಮರಗಳೂ ಅಹುದೆಂದು ತಲೆಯನ್ನು ಅಲ್ಲಾಡಿಸಿದುವು. ಶಂಕರನು ಮುಗ್ಧನಾದ. ಅವನ ಹೃದಯದಲ್ಲಿ ಎದ್ದ ಬಿರುಗಾಳಿ ಶಾಂತವಾಯಿತು. ವಿಭಂಗ ವಿಷದಿಂದ ಅಮೃತ ಸುರಿಯಹತ್ತಿತು. ಮುಳ್ಳುಗಳು ಹೂವಾದುವು. ಸಮಾಧಾನವು ಉಕ್ಕೇರಿ ಬಂದಿತು ನಿರಭ್ರ ಆಕಾಶದಂತೆ ಅವನ ಮನಸ್ಸು ಪ್ರಕಾಶಿಸಿತು.

× × × ×

ಬೆಳಿಗಿನಲ್ಲಿ ಎದ್ದು ನೋಡಿದರೆ, ವಿಟ್ಠಲನಿಗೆ ತನ್ನ ಬಲೆಯೇ ಕಾಣಲಿಲ್ಲ. ಚಕಿತನಾಗಿ ಮುಂದೆ ನೋಡಿದ. ಹೆಗಲ ಮೇಲೆ ಬಲೆಯನ್ನಿಟ್ಟು ತನ್ನ ದೋಣಿಯ ಬಳಿ ನಗುತ್ತ ನಿಂತಿದ್ದ ಶಂಕರ!

"ಇದೇನು ಶಂಕರ, ಎಲ್ಲಿಗೆ ಹೋಗುತ್ತೀ?"

"ನಮ್ಮ ಜೀವನಪಥಕ್ಕೆ, ಪವಿತ್ರ ಕಾರ್ಯಕ್ಕೆ! ಅಪ್ಪಾ; ಈ ಹೊತ್ತಿನಿಂದ ನಿನ್ನ ಕೆಲಸ ನನಗೆ. ಇದೇ ನನಗೆ ಮೋಕ್ಷ; ಇದೇ ನನಗೆ ಜೀವನ; ಇದೇ ಶಾಂತಿ; ಇದೇ ಸಮಾಧಾನ; ಇದೇ ಸುಖ!" ದೊಡ್ಡ ಕಾದಂಬರಿಕಾರನಂತೆ ಶಂಕರ ಹೇಳಿದ.

ವಿಟ್ಠಲನಿಗೆ ಅದರಲ್ಲಿ ಎಷ್ಟು ಅರ್ಥವಾಯಿತೇನೋ! ಸುಮ್ಮನೆ ಮಗನನ್ನು ನೋಡುತ್ತ ನಿಂತುಬಿಟ್ಟ.

ಶಂಕರ ಹೆಗಲ ಮೇಲಿನ ಬಲೆಯನ್ನು ದೋಣಿಯಲ್ಲಿ ಬೀಸಾಡಿ ಯಾವುದೋ ಪದವನ್ನು ಹಾಡುತ್ತ ದೋಣಿಯನ್ನು ನೂಕಿದ. ಅದು ಸರಸರನೆ ಸುಳಿದು; ಕಡಲನ್ನು ಅಪ್ಪಿತು.

ಕ್ಷಯರೋಗ ವಿಚಾರ

(ಸ್ವಾನುಭವಕಥನ)*

ಡಾ. ಟಿ. ವಿ. ಪರದೇಶಿ, ಮುಂಬೈ

●

ಕ್ಷಯರೋಗದ ರಕ್ಕಸನು, ತನ್ನ ಉರಿನಾಲಗೆಯನ್ನು ಚಾಚಿ, ಭಾರತದ ಮೂಲೆ-ಮೂಲೆಯಲ್ಲಿಯ ಜೀವಿಗಳನ್ನೂ ಕಬಳಿಸುತ್ತಿದ್ದಾನೆ. ಆ ರಕ್ಕಸನ ಸ್ವರೂಪವೆಂತಹದು? ಅವನಿಂದ ಪಾರಾಗುವುದಕ್ಕೆ ಉಪಾಯಗಳೇನೇನು?

●

(೧) ಕ್ಷಯರೋಗವು ಭಯಂಕರ ಗಂಡಾಂತರಕಾರಿಯಾದ ರೋಗವೆಂಬುದನ್ನು ನಾವೆಲ್ಲರೂ ಬಹು ಪ್ರಾಚೀನ ಕಾಲದಿಂದಲೂ ತಿಳಿಯುತ್ತ ಬಂದಿದ್ದೇವೆ. ಪ್ರಸ್ತುತ ಇದು ಜಗತ್ತಿನ ಎಲ್ಲ ಭಾಗಗಳಲ್ಲಿರುವುದು ಕಂಡುಬರುತ್ತದೆ. ಹಲವಾರು ಶತಮಾನಗಳ ಹಿಂದೆಯೆ ಈ ರೋಗವು ಭಾರತದಲ್ಲಿ ಹಬ್ಬಿಕೊಂಡಿತ್ತೆಂಬುದಕ್ಕೆ ವೈದ್ಯಕೀಯ ವಿಜ್ಞಾನವಾದ ಆಯುರ್ವೇದಕ್ಕೆ ಸಂಬಂಧಪಟ್ಟ ಉಲ್ಲೇಖಗಳಿಂದ ಕಂಡುಬರುತ್ತದೆ. ಬೇರೆ ರೋಗಗಳಿಂದ ಭಿನ್ನವಾಗಿರುವ ಈ ರೋಗವು ಮನುಷ್ಯರಿಗೆ ಒಮ್ಮೆ ತಗಲಿತೆಂದರೆ, ವರ್ಷಾನುವರ್ಷ ಬಾಧೆಪಡಿಸುತ್ತದೆ. ಆದುದರಿಂದಲೇ ಎಲ್ಲರೂ ಈ ರೋಗಕ್ಕೆ ಇಹ್ಲೋಂದು ಅಂಜುತ್ತಾರೆ.

(೨) ಕ್ಷಯರೋಗವು ಕೇವಲ ಮನುಷ್ಯರಿಗಲ್ಲ; ಹಸು, ಕೋಳಿ, ಇತರ ಪಶು-ಪಕ್ಷಿಗಳಿಗೂ ಅದು ಸೋಂಕಬಲ್ಲದು. ದೇಹದಲ್ಲಿಯ ಅವಯವಗಳಾದ— ಶ್ವಾಸಕೋಶಗಳು, ಗ್ರಂಥಿಗಳು, ಎಲುಬುಗಳು, ಸಂದುಗಳು, ಕರುಳುಗಳು, ಮೂತ್ರಪಿಂಡ, ಮೆದುಳಿನ ಪರಿ— ಮುಂತಾದುವುಗಳಿಗೆ ಈ ರೋಗ ಅಂಟಿಕೊಳ್ಳಬಹುದು. ಸಾಮಾನ್ಯವಾಗಿ ಕ್ಷಯವು ಶ್ವಾಸಕೋಶಕ್ಕೆ ಹೆಚ್ಚಾಗಿ ಅಂಟಿಕೊಳ್ಳುವುದು ಕಂಡುಬರುತ್ತದೆ. ಹುಡುಗರ ಎಳೆಯತನದಲ್ಲಿಯೂ ಸ್ತ್ರೀಯರಿಗೆ ಹೆಚ್ಚಾಗಿ ಗರಿಂದ ೩೦ ವರ್ಷದ ಅವಧಿಯಲ್ಲಿಯೂ (ಈ ಅವಧಿಯಲ್ಲಿ ಬಾಣಂತಿತನವನ್ನು ಅನುಭವಿಸುತ್ತಾರೆ) ಮತ್ತು ಪುರುಷರಿಗೆ ೨೫ರಿಂದ ೪೦ ವರ್ಷ ಕಾಲ ಅವಧಿಯಲ್ಲಿಯೂ (ಸಾಂಸಾರಿಕ ತಾಪತ್ರಯಗಳ ಭಾರವು ಹೆಚ್ಚಾಗಿರುವ ಕಾಲ) ಈ ರೋಗ ಕಂಡುಬರುತ್ತದೆ. ಈ ರೋಗ ಹಿಡಿಯಲು ಇಂತಿಷ್ಟೇ ಪ್ರಾಯವೆಂಬ ನಿಯಮವಿಲ್ಲ. ವಯೋವೃದ್ಧರಲ್ಲಿ ಸಹ ಕಂಡುಬರುವುದುಂಟು. ಬೇರೆ ಯಾವುದೇ ರೋಗ–ದಮ್ಮು ಅಥವಾ ಗೂರಲು, ಕೆಮ್ಮು ಮತ್ತು ಮಧುಮೇಹ ಇವುಗಳೊಂದಿಗೂ ಕಂಡುಬರುವುದುಂಟು.

(೩) ಕ್ಷಯರೋಗವು ಅನುವಂಶಿಕವಾದ ರೋಗವಲ್ಲ. ಆದರೆ ಒಂದು ಕುಟುಂಬದಲ್ಲಿಯ ರೋಗಿಯನ್ನು ಪ್ರತ್ಯೇಕವಾಗಿಡದಿದ್ದರೆ, ಸಾಂಸರ್ಗಿಕವಾಗಿ ಈ ರೋಗವು ಇತರರಿಗೂ ಅಂಟಿಕೊಳ್ಳಬಹುದು. ಹೆತ್ತವರಿಂದ ರೋಗದ ಸೋಂಕು ಸಾಂಕ್ರಾಮಿಕವಾಗಿ ಮಕ್ಕಳಿಗೂ ಬರಬಹುದು. ಕುಟುಂಬದ ಸದಸ್ಯನಲ್ಲದ ಒಬ್ಬ ಅಡಿಗೆಯವನಿಗೆ ಕ್ಷಯರೋಗವಿದ್ದರೆ ಅವನ ಮೂಲಕವೂ ಕುಟುಂಬದ ಮಕ್ಕಳಿಗೆ ರೋಗವು ಅಂಟಿಕೊಳ್ಳಬಹುದು. ಹೀಗೆ ಈ ರೋಗವು ಇತರರಿಗೂ ಅಂಟಿಕೊಳ್ಳುವುದರಿಂದ ಅನುವಂಶಿಕ ರೋಗದಂತೆ ಭಾಸವಾಗುತ್ತದೆ.

(೪) **ಕಾರಣಗಳು:**— ಕ್ಷಯರೋಗದ ಹಬ್ಬುಗೆಗೆ ಅನೇಕ ಕಾರಣಗಳಿವೆ. ಸಾಮಾಜಿಕ ಸಂಪರ್ಕ ಹೆಚ್ಚುತ್ತಿರುವುದು, ಅನೈತಿಕ ಪ್ರವೃತ್ತಿ, ಅನಿಷ್ಟ ಚಟುಗಳು, ಅಶುದ್ಧಜೀವನ, ಒಳ್ಳೆಯವರ ಬಗ್ಗೆ ತಾತ್ಸಾರ, ಮಾನಸಿಕ ಮತ್ತು ದೈಹಿಕ ಯಾತನೆ, ಪೌಷ್ಟಿಕ ಮತ್ತು ಶುದ್ಧ ಆಹಾರದ ಕೊರತೆ— ಇವೆಲ್ಲ ಕಾರಣವಾಗಿವೆ. ಗಾಡಿಗಳು, ಸಿನೇಮಾ ಗೃಹಗಳು, ಕಾರಖಾನೆಗಳು, ಕ್ಲಬ್ಬುಗಳು, ದಟ್ಟ ಜನವಸತಿಯ ಪ್ರದೇಶಗಳು, ಜಾತ್ರೆಗಳು, ಇಂಥಲ್ಲೆಲ್ಲ ಬರುವ ಸಹವಾಸ ಸಂಪರ್ಕಗಳಿಂದ — ವಾತಾವರಣದ ಮೂಲಕ — ಕ್ಷಯರೋಗವು ಹಬ್ಬುತ್ತದೆ. ಕ್ಷಯರೋಗಿಗಳು ಮಾತಾಡುತ್ತಿರುವಾಗ, ಕೆಮ್ಮುವಾಗ ಸೀನುವಾಗ, ರೋಗದ ಜಂತುಗಳನ್ನು ಹೊರಹೊಮ್ಮಿಸುತ್ತಾರೆ ಇಂತಹ ಕೆಟ್ಟ ಹವೆಯನ್ನು ನಿರೋಗಿಗಳು ಉಸಿರಾಡಿಸುವುದರಿಂದ ಅವರಿಗೆ ಈ ರೋಗದ ಬಾಧೆಯಾಗುವುದರಲ್ಲಿ ಸಂದೇಹವಿಲ್ಲ. ಈ ರೋಗದ ಬಾಧೆಯನ್ನು ಸಕಾಲದಲ್ಲಿ ಕಂಡುಹಿಡಿಯದಿದ್ದರೆ ಪ್ರಾಣಾಪಾಯವೂ ತಪ್ಪಿದ್ದಲ್ಲ.

(೫) **ಲಕ್ಷಣಗಳು:**— ಸಣ್ಣ ಮಕ್ಕಳಲ್ಲಿ ಕ್ಷಯರೋಗವನ್ನು ಗುರುತಿಸಲು ಕೆಲವು ಲಕ್ಷಣಗಳಿವೆ; ತೂಕದಲ್ಲಿ ದೀರ್ಘಕಾಲದವರೆಗೆ ಇಳಿತ, ಮಗುವಿನ ಆರೋಗ್ಯ ಮತ್ತು ಚುರುಕುತನಗಳಲ್ಲಿ ಅಶಕ್ತತೆ ತೋರುವುದು, ರಾತ್ರಿಕಾಲದಲ್ಲಿ ನಿದ್ದೆಮಾಡದೆ ಭಯಭ್ರಾಂತವಾಗುವುದು, ದೇಹದ ಯಾವುದೇ ಭಾಗದ ಗ್ರಂಥಿಗಳು ಬೆಳೆದರೆ. ಆಗಾಗ್ಗೆ ಜ್ವರ ಬರುವುದು, ದೀರ್ಘಕಾಲದ ಅತಿಸಾರ, ಹೊಟ್ಟೆಯು ಮಿತಿಮೀರಿ ಬೆಳೆದಿರುವುದು, ಬಿಳ್ಳ ಪುಟ್ಟ ಕಾಯಿಗಳಿಂದ ಬಂದ ನಿರ್ಬಲತೆ. ಈ ಲಕ್ಷಣ ಕಂಡಕೂಡಲೆ ತಜ್ಞ ವೈದ್ಯರನ್ನು ಕಂಡು ಯೋಗ್ಯ ಚಿಕಿತ್ಸೆ ನಡೆಯಿಸತಕ್ಕದ್ದು.

(೬) ವಯಸ್ಕರಲ್ಲಿ ಕ್ಷಯರೋಗದ ಲಕ್ಷಣಗಳೆಂದರೆ ಜ್ವರ ಬರುವುದು, ಮೈ ಬೆವರುವುದು, ಕೆಮ್ಮುವುದು, ಕಫ ಬೀಳುವುದು, ತೂಕದಲ್ಲಿಳಿತ, ನಾಡಿಯ ಬಡಿತ–ಉಸಿರಾಟದ ಕ್ರಮ ಹೆಚ್ಚಾಗುವುದು.

* ಲೇಖಕರು ಸ್ವತಃ ಕ್ಷಯರೋಗದ ರುದ್ರಪರಿಣಾಮವನ್ನು ಅನುಭವಿಸಿದವರು. ಹಲವು ತಿಂಗಳ ಅವಧಿಯನ್ನು ಆರೋಗ್ಯಧಾಮದಲ್ಲಿ ಕಳೆದು, ಈಗ ಕ್ಷಯದ ಬವಣೆಯಿಂದ ದುಃಖ್ತರಾದವರು. ಅವರ ಸ್ವಾನುಭವ ಪೂರ್ಣ ಲೇಖನವು ನಮ್ಮ ವಾಚಕ ವರ್ಗಕ್ಕೆ ಪ್ರಯೋಜನಕಾರಿಯಾಗಿರಬಹುದು.

ಸಂ. ಜ.

ನಿಶ್ಯಕ್ತಿ, ತಪಿವೆ ಆಗದಿರುವುದು, ರಕ್ತಹೀನತೆ, ಅತಿಸಾರ, ಮಲಬದ್ಧತೆ, ಉಗುಳಿನಲ್ಲಿ ರಕ್ತಬೀಳುವುದು, ಎದೆನೋವು, ಫ್ಲೂರಿಸಿ (ಶ್ವಾಸಕೋಶದಲ್ಲಿ ನೀರಾಗುವುದು). ಕ್ಷಯರೋಗ ಸೋಂಕಿದ ಮಹಿಳೆಯರಿಂಗೆ ಮುಟ್ಟು ನಿಲ್ಲಬಹುದು.

(೭) **ಕ್ಷಯರೋಗದ ಪ್ರಸಾರ:**—ಕ್ಷಯುವನ್ನುಂಟು ಮಾಡುವ ರೋಗಾಣುಗಳು, ರೋಗವಿದ್ದವನಿಂದ ಮತ್ತೊಬ್ಬನಿಗೆ ಪ್ರಸಾರವಾಗಬಹುದು. ಈ ರೋಗಾಣುಗಳು ಮನುಷ್ಯನ ದೇಹದೊಳಗೆ ಶ್ವಾಸಕೋಶದ ಮೂಲಕ ಪ್ರವೇಶಿಸುತ್ತವೆ. ರೋಗಿಯು ಕೆಮ್ಮುವಾಗ ಇಲ್ಲವೆ ಸೀನುವಾಗ, ಅವನ ಮುಖದಿಂದ ಹೊರಡುವ ಉಚ್ಛ್ವಾಸದಲ್ಲಿ ಸಾವಿರಾರು ರೋಗಾಣುಗಳಿಂದ ಕೂಡಿದ ಕಫದ ಕಣಗಳು ೨–೩ ಅಡಿಗಳಿಗಿಂತ ಹೆಚ್ಚು ದೂರಕ್ಕೆ ಹೊರಚಿಮ್ಮಲ್ಪಡುತ್ತವೆ. ಆಗ ಅವನ ಸಮೀಪದಲ್ಲಿದ್ದವರ ಶ್ವಾಸದಲ್ಲಿ ಆ ಕಣಗಳು ಸೇರುವುವು. ರೋಗಿಯೊಡನೆ ರಾತ್ರಿಕಾಲ ಒಂದೇ ಕೋಣೆಯಲ್ಲಿ ಮಲಗುವುದರಿಂದ ಬೇರೊಬ್ಬರಿಗೆ ಸಹಜವಾಗಿ ಕಗಲಬಹುದು. ಮತ್ತು ಕ್ಷಯರೋಗಿಯನ್ನು ಅತಿಗೆಗೆ ನೇಮಿಸುವುದರಿಂದ, ರೋಗಿಯು ಆಹಾರದ ಮೇಲೆ ಕೆಮ್ಮುವುದರಿಂದ, ಆಹಾರವನ್ನು ಮುಚ್ಚಿಡದೆ ನೊಣ ಕೂಡುವಂತೆ ತೆರೆದಿಡುವುದರಿಂದ, ಕ್ಷಯರೋಗಿಯು ಉಪಯೋಗಿಸಿದ ಪಾತ್ರೆ, ಚಮಚೆ, ಬಟ್ಟೆ ಇತ್ಯಾದಿ ಸಾಮಾನುಗಳನ್ನು ನಿರೋಗಿಯು ಬಳಸುವುದರಿಂದ, ಈ ರೋಗದ ಸೋಂಕು ಉದರ ಮತ್ತು ಕರುಳನ್ನು ಸೇರುವುದು. ರೋಗಾಣುಗಳು ಚರ್ಮದ ಮೂಲಕವೂ ಸೇರಬಹುದು.

(೮) ಆರೋಗ್ಯದ ನಿಯಮಗಳನ್ನು ಪಾಲಿಸದೆ ಚಹದ ಅಂಗಡಿ, ಹೊಟೇಲುಗಳಲ್ಲಿ ತಿನ್ನುವುದು, ಬುದ್ಧಿಯಿಲ್ಲದೆ ಕಂಡಕಂಡಲ್ಲಿ ಉಗುಳುವುದು, ಕೆಮ್ಮುವುದು—ಮುಂತಾದ ರೀತಿಯಲ್ಲಿ ಕ್ಷಯರೋಗವು ಹಬ್ಬುವುದು. ಈ ಕೆಟ್ಟ ಚಟಗಳನ್ನು ಬಿಡಲು ಜನರಿಗೆ ಉಪದೇಶಿಸಿದರೆ ಅವರು ಸಿಟ್ಟಿಗೇಳುತ್ತಾರೆ. ರೋಗಿಗಳು ಸಹ ತಮಗೆ ಈ ರೋಗದ ಬಾಧೆಯಾಗಿಲ್ಲವೆಂದು ಇತರರೊಂದಿಗೆ ಬೆರೆಯುತ್ತಾರೆ. ಕ್ಷಯರೋಗವು ಭಾರತದ ಮೂಲೆಮೂಲೆಯಲ್ಲಿ ಹರಡಲು ಚಹ, ಕಾಫಿ, ಹೊಟೇಲಿನಲ್ಲಿಯ ಊಟ ಇವೆಲ್ಲ ಮುಖ್ಯ ಕಾರಣವೆನ್ನಬಹುದು. ಯಾಕೆಂದರೆ ಚಹದ ಅಂಗಡಿಯಲ್ಲಿಯೂ ಹೊಟೆಲುಗಳಲ್ಲಿಯೂ ಹೊಲಸು ನೀರಿನಲ್ಲಿ ಎದ್ದಿ ತೆಗೆಯುವ ಕುಡಿಯುವ ಕಪ್ಪು ಮತ್ತು ಬೇರೆ ಪಾತ್ರೆಗಳಿಂದ, ಕುಡಿಯುವ ಚಹ ನೀರು ಮೊದಲಾದುವು ರೋಗದ ಪ್ರಸಾರಕ್ಕೆ ಬಹಳೇ ನೆರವಾಗುತ್ತವೆ. ಈ ರೋಗಜಂತುಗಳು ಕುದಿಯುವ ನೀರಿನಲ್ಲಿ ಕೂಡ ಒಮ್ಮೊಮ್ಮೆ ಅರ್ಧ ಘಂಟೆಯವರೆಗೂ ಜೀವಿಸಿರಬಲ್ಲವಾದ್ದರಿಂದ, ಬಿಸಿ ಬಿಸಿ ಚಹದಲ್ಲಿಯೂ ಈ ರೋಗದ ಗಂಡಾಂತರವಿರುವುದು. ಕ್ಷಯರೋಗಿಯೆಂದು ಪ್ರಾತ್ರಿಯಾದ ಮನೆಯ ಸಂಬಂದಿಕರಲ್ಲಿ, ಒಬ್ಬನಿಂದಲೇ ರೋಗವು ಪ್ರಸಾರವಾಗಬಹುದು. ರೋಗಿಯು ಮಕ್ಕಳನ್ನು ಅಕ್ಕರತೆಯಿಂದ ಮುದ್ದಿಡುವನು; ಆಹಾರ ಉಣ್ಣಿಸುತ್ತಿರುವನು; ಅವರೊಡನೆ ಒಂದೇ ಕೋಣೆಯಲ್ಲಿ ಮಲಗಿಕೊಳ್ಳುವನು. ನೆರೆಹೊರೆಯವನೊಬ್ಬನಿಗೆ, ಶಾಲಾ ಶಿಕ್ಷಕನಿಗೆ, ಕ್ಷೌರ ಮಾಡುವವನಿಗೆ, ಕ್ಷಯರೋಗವು ಇದ್ದು, ಅವನು ಆಗಾಗ ಮನೆಯವರಿಗೆ ಸಂದರ್ಶನ ಕೊಡುವುದರಿಂದ, ರೋಗವು ಪ್ರಸಾರವಾಗಬಹುದು. ಇವೆಲ್ಲವುಗಳನ್ನು ಅಲಕ್ಷ್ಯಿಸಿದರೆ, ರೋಗಿಯಿಂದ ರೋಗವು ಅವನ ಸಮೀಪದವರಿಗೆ ಹಬ್ಬಲು ಅಸ್ಪದವಾಗವುದು. ಆದುದರಿಂದ ಇತರರೊಡನೆ ಸಂಪರ್ಕವಾಗದಂತೆ ರೋಗಿಯು ನೋಡಿಕೊಳ್ಳುವುದು ಅವನ ಆದ್ಯ ಕರ್ತವ್ಯವಾಗಿರುತ್ತದೆ. ರೋಗಿಯು ಹೋಟೆಲಿನಲ್ಲಿ ವಾಸಿಸುತ್ತಿರುವುದಾದರೆ, ಕ್ಷಯರೋಗದ ಸೋಂಕು ಕಂಡು ಹಿಡಿಯಲ್ಪಟ್ಟಾಕ್ಷಣ ಅಲ್ಲಿ ಇರಕೂಡದು. ಕಚೇರಿ-ಆಫೀಸುಗಳಲ್ಲಿ ಕೆಲಸ ಮಾಡುತ್ತಿರುವುದಾದರೆ, ಕೆಲಸಕ್ಕೆ ಹಾಜರಾಗುವದನ್ನು ಕೂಡಲೆ ನಿಲ್ಲಿಸಬೇಕು. ಅವನು ಅಧ್ಯಾಪಕನ ವೃತ್ತಿಯಲ್ಲಿರುವುದಾದರೆ, ಬಹಳೇ ಎಚ್ಚರದಿಂದ ಕೂಡಲೇ ಕೆಲಸ ಬಿಟ್ಟು ಹೋಗತಕ್ಕದ್ದು. ಯಾಕೆಂದರೆ ನೂರಾರು ಚಿಕ್ಕ ವಯಸ್ಸಿನವರಿಗೆ ರೋಗವು ಹರಡಲು ಸಹಾಯವಾಗುವುದು. ಅದೇ ರೀತಿ ಶಾಲೆಗೆ ಹೋಗುವ ಸಣ್ಣ ಪ್ರಾಯದ ವಿದ್ಯಾರ್ಥಿಗಳು ಶಾಲೆಗೆ ಹೋಗುವುದನ್ನು ನಿಲ್ಲಿಸಬೇಕು. ಕಾಲೇಜಿನಲ್ಲಿಯ ಹಾಸ್ಟೇಲಿನಲ್ಲಿ ಇರುವವನಾದರೆ, ತೀವ್ರವೇ ಅವನ್ನು ಬಿಟ್ಟು ಹೋಗಬೇಕು.

(೯) ಕಫ ಬರುವಂತಹ ವ್ಯಕ್ತಿಯು ಯಾರನ್ನೂ ಮುತ್ತಿಡಬಾರದು. ಇತರರು ಮುಟ್ಟಬಹುದಾದ ವಸ್ತುಗಳನ್ನು ತಾನು ಮುಟ್ಟಿ ನೆಕ್ಕಕೂಡದು, ಇಲ್ಲವೆ ಎಂಜಲುಮಾಡಬಾರದು. ರೋಗಿಯು ಕೆಮ್ಮುವಾಗ ತನ್ನ ಪಕ್ಕದವರಿಂದ ದೂರಕ್ಕೆ ಮುಖ ತಿರುಗಿಸಿ, ಮುಖದ ಮುಂದೆ ಒಂದು ಕರವಸ್ತ್ರ ಇಲ್ಲವೆ ಅಂವೆಯನ್ನು ಹಿಡಿದುಕೊಂಡೇ ಕೆಮ್ಮಬೇಕು. ಹಾಗೆ ಮಾಡದಿದ್ದಲ್ಲಿ ಕಣ್ಣಿಗೆ ಕಾಣದ ಅಸಂಖ್ಯಾತ ಕ್ಷಯಾಣುಗಳು, ಸುತ್ತುಮುತ್ತಲಿರುವವರ ಉಸಿರಾಟದಲ್ಲಿ ಸೇರುವ ಸಂಭವವಿದೆ. ರೋಗಿಯು ಅನಾವಶ್ಯಕವಾಗಿ ಯಾವಾಗಲೂ ಕೆಮ್ಮ

ಬಾರದು. ಕ್ಷಯರೋಗ ಅಂಟಿಕೊಂಡಿರುವ ತಾಯಿಯು, ತನ್ನ ಮಗುವಿನ ಆರೈಕೆಯ ಭಾರವನ್ನು ಸ್ವತಃ ವಹಿಸಿಕೊಳ್ಳಬಾರದು. ಮಗುವಿಗೆ ದನದ ಹಾಲು ಮೊದಲಾದುವುದನ್ನು ಕೊಟ್ಟು. ತನ್ನಿಂದ ದೂರವಿರುವಂತೆ ಮಾಡಬೇಕು. ಇನ್ನೆಲ್ಲವುಗಳನ್ನು ಅಲಕ್ಷಿಸಿದರೆ ರೋಗವು ಹಬ್ಬಲು ಮತ್ತು ಪ್ರಸಾರವಾಗಲು ಸಹಾಯ ಸಿಕ್ಕಂತಾಗುವುದು.

(೧೦) **ಕ್ಷಯರೋಗ ಆರೋಗ್ಯಧಾಮ:**– ಕ್ಷಯರೋಗವನ್ನು ಯೋಗ್ಯರೀತಿಯಲ್ಲಿ ಚಿಕಿತ್ಸೆಮಾಡಲು ನಿರ್ಮಾಣಮಾಡಿದ ವಿಶಿಷ್ಟ ಸಂಸ್ಥೆಯೇ ಇದು. ಮುಂಚೆ ಇಂತಹ ಸಂಸ್ಥೆಗಳನ್ನು ಶುದ್ಧವಾದ ಹವಾಗುಣಕ್ಕಾಗಿ, ಜನರಿಲ್ಲದ ಶಾಂತಮಯವಾದ ವಾತಾವರಣವಲ್ಲಿಯ ಪ್ರದೇಶಗಳಲ್ಲಿ ಸ್ಥಾಪಿಸುತ್ತಿದ್ದರು. ಇತ್ತೀಚೆಗೆ ಇಂತಹ ಹವಾಗುಣದಿಂದ, ತಿಳಿದಷ್ಟು ವಿಶೇಷ ಪ್ರಯೋಜನವಿಲ್ಲವೆಂಬುದನ್ನು ತಜ್ಞರು ಮನಗಂಡುದರಿಂದ, ಜನರಿಗೆ ಬಂದು ಇರಲಿಕ್ಕೆ ಸುಲಭವಾಗುವಂತೆ ಆಧುನಿಕ ಮತ್ತು ಎಲ್ಲ ತರದ ವಿಶಿಷ್ಟ ವಿಧಾನಗಳಿಂದ ಸುಸಜ್ಜಿತ ತಜ್ಞರು ಇಲ್ಲಿ ಚಿಕಿತ್ಸೆ ಮಾಡುವರು.

(೧೧) ಕ್ಷಯರೋಗದ ಲಕ್ಷಣಗಳು ತಿಳಿದ ಕೂಡಲೆ, ರೋಗಿಯು ಆರೋಗ್ಯಧಾಮಕ್ಕೆ ತೀವ್ರವೇ ಹೋಗಿ, ಅಲ್ಲಿರುವ ತಜ್ಞರನ್ನು ಕ್ಷಯರೋಗದ ನಿವಾರಣೆಗಾಗಿ ಕಂಡು, ಯೋಗ್ಯರೀತಿಯಿಂದ ತನ್ನ ದೇಹದೇ ಪೂರ್ಣವಾದುವುಗಳನ್ನು ಪರೀಕ್ಷೆ ಮಾಡಿಸಕ್ಕದ್ದು. ಆಗ ವೈದ್ಯರು ಪರೀಕ್ಷಿಸುವ ವಿಧಃ (೧) **ಕ್ಷ-ಕಿರಣ:**–ಛಾಯಾಗ್ರಾಹಕದ ಮೂಲಕ ರೋಗಿಯ ಎದೆಯ ಪರೀಕ್ಷೆಯನ್ನು ನಡೆಸುವರು. ಇದರಿಂದ ಕ್ಷಯರೋಗ ಅಂಟಿಕೊಂಡಿರುವುದನ್ನು ಕಂಡುಬರುವುದು. ಆ ನೇರಳೆ ಕ್ಷ-ಕಿರಣ ಛಾಯಾಗ್ರಾಹಕ (X-Ray)ವನ್ನು ತೆಗೆದು, ಅದರ ವಿವರಗಳನ್ನು ಪರೀಕ್ಷಿಸುವುದು. ರೋಗವನ್ನು ಕಂಡುಹಿಡಿಯಲು ಇದು ಬಹಳೇ ಉಪಯುಕ್ತವಿರುವುದು. (೨) **ರೋಗಿಯ ಕಫ** ವನ್ನು ಸೂಕ್ಷ್ಮದರ್ಶಕ ಯಂತ್ರದಿಂದ ಪರೀಕ್ಷಿಸುವುದು. ಕ್ಷಯಾಣುಗಳು ಕಫದಲ್ಲಿರುವುವಾದರೆ, ಅವು ಸೂಕ್ಷ್ಮದರ್ಶಕಯಂತ್ರದಲ್ಲಿ ಕಾಣುವುವು. ಕಫವನ್ನು ಹೊರಗೆ ಉಗುಳಲು ಬಾರದೆ ನುಂಗುವ ಮಕ್ಕಳಲ್ಲಿ, ಜಠರರಸಾದಿಗಳನ್ನು ಮೇಲಕ್ಕೆತ್ತಿ ಕ್ಷಯಾಣುಗಳ ಬಗ್ಗೆ ಪರೀಕ್ಷೆ ನಡೆಸುವರು (೩) ರಕ್ತವನ್ನು ರಕ್ತನಾಳದಿಂದ ತೆಗೆದು, ಅಂಕೆಗಳ ಗುರುತುಳ್ಳ ಒಂದು ಕಾಜಿನ ನಳಿಗೆಯಲ್ಲಿ ಹಾಕುತ್ತಾರೆ; ಅದು ಹೆಪ್ಪುಗಟ್ಟದಂತೆ ಒಂದು ರಾಸಾಯನಿಕ ದ್ರವ್ಯವನ್ನು ಕೂಡಿಸುತ್ತಾರೆ. ಒಂದು ತಾಸು ಆದನಂತರ, ಆರೋಗ್ಯಸ್ಥಿತಿಯುಳ್ಳವರ ರಕ್ತದಲ್ಲಿ ಶುಭ್ರವಾಗಿ ತೋರುವ ನೀರಿನ ಅಂಶವು ೧೦ ಮಿಲಿಮೀಟರುಗಳಿಗಿಂತ ಎತ್ತರವಿರುವುದಿಲ್ಲ. ರೋಗದ ಸೋಂಕು ಇದ್ದವರ ರಕ್ತದಲ್ಲಿ ಅದು ಮೇಲೇರುತ್ತದೆ. (೪) **ಮೂತ್ರಪರೀಕ್ಷೆ:**— ಮೂತ್ರಪಿಂಡಗಳ ಪರಿಸ್ಥಿತಿಯನ್ನು ತಿಳಿಯುವುದರ ಸಲುವಾಗಿ ಮೂತ್ರಪರೀಕ್ಷೆ ಮಾಡುವರು. ಮೂತ್ರಸ್ರಾವದವರಲ್ಲಿ ಮೂತ್ರಪರೀಕ್ಷೆಯನ್ನು ತಪ್ಪದೇ ಮಾಡುತ್ತಾರೆ. ಮೂತ್ರದಲ್ಲಿ ಸಕ್ಕರೆಯ ಅಂಶವನ್ನು ಕಂಡು ಹಿಡಿಯುವುದಕ್ಕಾಗಿ ಇದನ್ನು ಪರೀಕ್ಷಿಸುವರು. (೫) **ಮಲಪರೀಕ್ಷೆ:**– ಕರುಳಿನ ಕಾಲುವೆಯೊಳಗೆ ಹುಳುಗಳ ಅಸ್ತಿತ್ವವನ್ನು ಕಂಡುಹಿಡಿಯಲು ಮಲಪರೀಕ್ಷೆಯನ್ನು ಸಾಮಾನ್ಯವಾಗಿ ನಡೆಯಿಸುವರು. (೬) ದೇಹದ ಉಷ್ಣತೆಯನ್ನು ಮತ್ತು ತೂಕವನ್ನು ನೋಡುವರು. ಉಷ್ಣತೆಯನ್ನು ಪ್ರತಿದಿನ ಎರಡು ಸಲ, ಮತ್ತು ವಾರಕ್ಕೊಮ್ಮೆಯಾದರೂ ತೂಕದಲ್ಲಿಯ ಹೆಚ್ಚುಕಡಿಮೆ ಸ್ಥಿತಿಯನ್ನು ನೋಡುವರು ಉಳಿದುವುಗಳ ಪರೀಕ್ಷೆಯನ್ನು ನುಂದೆ ಅಯಾ ರೋಗಿಗಳ ಸ್ಥಿತಿ-ಗತಿಗಳನ್ನು ನೋಡಿ ಆಗಾಗ್ಗೆ ತಪಾಸಿಸುವರು. ರೋಗದ ಪ್ರಾತ್ರಿಯಾವ ಮೇಲೆ, ರೋಗಿಯನ್ನು ಅಲ್ಲಿಯೇ ಚಿಕಿತ್ಸೆಯು ಸಲುವಾಗಿ ಇಡುವರು. ರೋಗಿಯು ತಜ್ಞರ ಹೇಳಿಕೆಯ ಪ್ರಕಾರ ಇರಬೇಕಾಗುವುದು.

(೧೨) ಕೈಮೀರಿದ ರೋಗಿಯನ್ನು, ಇಂತಹ ಆರೋಗ್ಯಧಾಮಗಳಲ್ಲಿ ಚಿಕಿತ್ಸೆಯು ಸಲುವಾಗಿ ತೆಗೆದುಕೊಳ್ಳುವುದಿಲ್ಲ. ಆದರೆ ಮುಖ್ಯವಾಗಿ ಹಲವು ರೋಗಿಗಳ ಆರ್ಥಿಕಸ್ಥಿತಿಯು ಅವರನ್ನು ಅಂತಹ ಆರೋಗ್ಯಾಲಯಗಳಿಗೆ ಹೋಗಲು ಅವಕಾಶ ಕೊಡುವುದಿಲ್ಲ. ಯಾಕೆಂದರೆ ಈ ರೋಗವು ದೀರ್ಘಕಾಲಿಕ ರೋಗವಾದುದರಿಂದ. ಅಲ್ಲಿಯವರೆಗೆ ಆರೋಗ್ಯಧಾಮಗಳಲ್ಲಿಪ್ಪು ಯೋಗ್ಯ ಚಿಕಿತ್ಸೆಯನ್ನು ಪಡೆಯಲು ಬಹಳ ಹಣವನ್ನು ವ್ಯಯ ಮಾಡಬೇಕಾಗುವುದು. ಇದು ಎಲ್ಲ ಜನರಿಗೂ ಅಸಾಧ್ಯವಾದ ಸಂಗತಿ. ಇಂತಹ ಕಠಿಣ ಪ್ರಸಂಗವನ್ನು ಎದುರಿಸಲು, ಭಾರತಸರಕಾರವು ಸತತ ಪ್ರಯತ್ನಗಳನ್ನು ಮಾಡಹತ್ತಿದೆ. ಮತ್ತು ಪಂಚವಾರ್ಷಿಕ ಯೋಜನೆಯಲ್ಲಿ ಸಹ ಸಾರ್ವಜನಿಕ ಆರೋಗ್ಯದ ಸಲುವಾಗಿ ಯೋಗ್ಯ ವ್ಯವಸ್ಥೆ ಮಾಡಲು ವಿವಿಧ ಯೋಜನೆಗಳನ್ನೆ. ಪ್ರತಿವರ್ಷ ಕ್ಷಯರೋಗ ಸೀಲುಗಳನ್ನು ಮಾರಿ, ಬಂದ ಹಣದಿಂದ ಸಹಾಯವನ್ನೀಯುತ್ತಿದೆ. ಇದರಿಂದ ಕೆಲ ಮಟ್ಟಿಗೆ ಬಡ ರೋಗಿಗಳ ಸಲುವಾಗಿ ಸಹಾಯವಾಗುವುದು

(೧೩) ಕ್ಷಯರೋಗದ ನಿವಾರಣೆಗಾಗಿ ಭಾರತದಲ್ಲಿ ಸಾಕಷ್ಟು ಉಪಕರಣಗಳಿಲ್ಲ. ತಜ್ಞರ ವರದಿಯ ಮೇರೆಗೆ ಭಾರತದಲ್ಲಿಯ ಕ್ಷಯರೋಗಿಗಳಿಗಾಗಿ ಕಡಿಮೆಯೆಂದರೂ ೫೫ ಲಕ್ಷ ಹಾಸಿಗೆಗಳೂ, ೧೫,೦೦೦ ತಜ್ಞ ವೈದ್ಯರೂ ಬೇಕು. ಆದರೆ ಈಗ ಕೇವಲ ೧೦,೦೦೦ ಹಾಸಿಗೆಗಳೂ ಮತ್ತು ೨೦೦ ತಜ್ಞ ವೈದ್ಯರೂ ಇದ್ದಾರೆ. ಆದರೂ ಈ ಕಾರ್ಯಕ್ಕಾಗಿ ಭಾರತದಲ್ಲಿ ಕ್ಷಯರೋಗ ಸಂಘಗಳೂ, ಸರಕಾರವೂ ಸತತ ಪ್ರಯತ್ನ ಮಾಡುತ್ತಿರುವುದು ಪ್ರಶಂಸನೀಯವಾಗಿದೆ. ಸಾರ್ವಜನಿಕ ಹಿತದ ದೃಷ್ಟಿಯಿಂದ ಸರಕಾರದ ಪ್ರಯತ್ನವು ಯಶಸ್ವಿಯಾಗಲು, ಎಲ್ಲರೂ ತನು ಮನ-ಧನಗಳಿಂದ ಸಹಾಯ ಮಾಡಲು ಮುಂದೆ ಬರಬೇಕು.

(೧೪) ಕ್ಷಯರೋಗಿಗಳು ಆರೋಗ್ಯಧಾಮುಗಳಲ್ಲಿ ಹೋಗಿ ಇರುವುದರಿಂದ, ಹಲವು ಪ್ರಯೋಜನಗಳಿವೆ. ರೋಗವು ಎಂಡನೆಯವರಿಗೆ ಹಬ್ಬುವುದಿಲ್ಲ. ರೋಗದ ಚಿಕಿತ್ಸೆಯು ಆಧುನಿಕ ಮತ್ತು ಯೋಗ್ಯ ರೀತಿಯಿಂದ ನಡೆದು, ಬಹಳೇ ಪ್ರಯೋಜನಕಾರಿಯಾಗುತ್ತದೆ. ಉಳಿದ ರೋಗಿಗಳನ್ನು ಕಂಡು ರೋಗಿಯು ತನ್ನಿಂದ್ಲಿಬ್ಬನನ್ನೇ ಕಾಣುವ ರೋಗವಲ್ಲವೆಂದು ತಿಳಿಯುವನು. ಅಲ್ಲದೆ ರೋಗದಿಂದ ಮುಕ್ತಾರಣೆಗೊಂಡು ಹರ್ಷಚಿತ್ತದಿಂದ ಹಲವರು ಮನೆಗೆ ಮರಳಿ ಹೋಗುವ

್ನ ಕಣ್ಣಿನಿಂದ ಕಂಡು, ರೋಗಿಯು ಮನಸ್ಸಿಗೆ ಆಗತ್ಯವಿರುವ
ೃದಯುಂಟಾಗುತ್ತದೆ. ರೋಗಿಗೆ ತಾನು ರೋಗದಿಂದ ವಿಮುಕ್ತ-
ಲು ಹೇಗೆ ನಡೆದುಕೊಳ್ಳಬೇಕೆಂದು ತಿಳಿವಳಿಕೆಯಾಗುವುದಲ್ಲದೆ
ಂದ ಈ ರೋಗವು ಬೇರೆಯವರಿಗೆ ಪ್ರಸಾರವಾಗದಂತೆ ಕೈಕೊಳ್ಳುವ
ಮುಗಳೂ ಗೊತ್ತಾಗುವುವು.

(೧೫) **ಕ್ಷಯರೋಗಿಯ ವಸತಿ ಮತ್ತು ಉಪಚಾರ:–**
ಯರೋಗಿಯು ಆರೋಗ್ಯಧಾಮದಲ್ಲಿರುವಾಗ, ಅವನ ಉಪಚಾರದ
ಯೋಗ್ಯರೀತಿಯಲ್ಲಿ ವ್ಯವಸ್ಥೆ ಮಾಡಲ್ಪಟ್ಟಿರುತ್ತದೆ. ಪ್ರತಿ
ಬ್ಬ ರೋಗಿಗೆ ಇರಲು ಜಾಗೆಯು, ವಾಯುಸಂಚಾರಕ್ಕೆ ಅನುಕೂಲ
ದ್ದ ಶುಚಿಯಾಗಿಯೂ ಶುಭ್ರವಾಗಿಯೂ ಇರುವುದು. ಮಲ-
ತ್ರ ವಿಸರ್ಜನೆಗಾಗಿ ಬೇಕಾದ ಯೋಗ್ಯರೀತಿಯ ವ್ಯವಸ್ಥೆ ಇರು
ತ್ತದೆ. ರೋಗಿಗಳ ಉಪಚಾರಕರು ಸಾಧಾರಣವಾಗಿ ಅನುಭವಿಕರೂ
ರುತ್ತಾದವರೂ ಇರುವರು. ರೋಗಿಯು ಉಗುಳಲು ಒಂದು
ಾಯಿಮುಚ್ಚುವ ಪಾತ್ರೆಯಲ್ಲಿ ಕ್ರಿಮಿನಾಶಕ ದ್ರವವನ್ನು ಹಾಕಿ
ಡುವರು. ಉಗುಳುಪಾತ್ರೆಯನ್ನು ಕುದಿಯುವ ನೀರಿನಲ್ಲಿ ಕೆಲವು
ಟೆ ಇಟ್ಟು, ಅನಂತರ ಚೆನ್ನಾಗಿ ೨–೩ ಸಲ ತೊಳೆಯುವರು. ರೋಗಿಯು
ಲಾನೂತ್ರವನ್ನು ಉಗುಳಿನಂತೆಯೇ ಕ್ರಿಮಿನಾಶಕ ದ್ರವವನ್ನು
ಪಯೋಗಿಸಿ ಹೊಳೆಯುವರು. ಕ್ಷಯರೋಗಿಯು ತಾನು ಬಳಸುವ
ತ್ರೆಗಳನ್ನು ಪ್ರತ್ಯೇಕವಾಗಿಟ್ಟುಕೊಳ್ಳಬೇಕು. ರೋಗಿಯು ಉಪ-
ೋಗಿಸುವ ಪಾತ್ರೆಗಳನ್ನು ಕುದಿಯುವ ನೀರಿನಲ್ಲಿ ೧೫ ನಿಮಿಷಗಳ
ಗೆ ಇಡಬೇಕು. ಎಂದರೆ ಅವು ಸ್ವಚ್ಛವಾಗಿ ಕ್ಷಯಾಣುಗಳು
ಷ್ಟವಾಗುತ್ತವೆ. ಬಟ್ಟೆಗಳನ್ನು ಯೋಗ್ಯ ಕ್ರಿಮಿನಾಶಕ ದ್ರವದಲ್ಲಿ
ರ್ಧ ತಾಸಿನವರೆಗೆ ತೋಯಿಸಿ ಮುಳುಗಿಸಿಟ್ಟು, ತರುವಾಯ ಬಿಸಿ
ನೀರಿನಲ್ಲಿ ಕುದಿಸಬೇಕು. ಒಗೆದ ತರುವಾಯ ಬಿಸಿಲಿನಲ್ಲಿ ಒಣಗಿಸ
ಕು. ರೋಗಿಯು ಇರುವ ಜಾಗೆಯನ್ನು ಕ್ರಿಮಿನಾಶಕ ದ್ರವದಲ್ಲಿ
ದ್ದಿ ಹಿಂಡಿನ ಒದ್ದೆಬಟ್ಟೆಯಿಂದ ಆಗಾಗ ಸ್ವಚ್ಛಮಾಡಬೇಕು.
ನನ ಸಲ ವಾಗಿ ಮೊಲಗೆಲು ಒಂದು ಕಾಲು. ಅವೆ ಹತ್ತಿರ ಅವನ
ಷಧಿ ಸಾಮಾನು ಇತ್ಯಾದಿಗಳನ್ನು ಇಡಲು ಒಂದು ಸಣ್ಣ ಮೇಜು.
ಉಗುಳಲು ಕ್ರಿಮಿನಾಶಕ ದ್ರವ ಹಾಕಿದ ಬಾಯಿ ಮುಚ್ಚುವ ಒಂದು
ಣ್ಣ ಪಾತ್ರೆ, ಒಂದು ಖುರ್ಚಿ ಇವ್ಯೇ ಇರಬೇಕು. ಚೆಂದವಾದ ಹೂವು
ಳನ್ನು ಸಂಗ್ರಹಿಸಿದ ಒಂದು ಪುಷ್ಪಪಾತ್ರೆಯನ್ನು ಅಲ್ಲಿಡುವುದರಿಂದ,
ೋಗಿಯ ಮನಸ್ಸಿಗೆ ಉಲ್ಲಾಸವಾಗುವುದು. ಹೊರಗೆ ಸಹ
ದವಾದ ವಿವಿಧ ಬಣ್ಣಗಳಿಂದ ಕೂಡಿದ ಸುವಾಸಿಕವಾದ ಹೂವುಗಳ
ಂಬ ಉದ್ಯಾನ ಇರುವುದರಿಂದ, ಮುಂಜಾವು ಸಾಯಂಕಾಲ
ೋಗಿಯು ಅದರ ಸೌಂದರ್ಯದ ಸೊಬಗನ್ನು ಅನುಭವಿಸುವನು.
ದರಿಂದ ಮನಸ್ಸಿಗೆ ಬಹಳೇ ಆನಂದವಾಗುವುದು. ರೋಗಿಗಳು
ಾರವನ್ನು ಮತ್ತು ಮುಖಕ್ಷೌರವನ್ನು ತಮ್ಮ ಇಷ್ಟದಂತೆ ಮಾಡಿ
ಳ್ಳಬಹುದು. ಎಣ್ಣೆಯನ್ನು ತಲೆಗೂದಲಿಗೆ ಉಪಯೋಗಿಸಬಹುದು.
ಸ್ತ್ರೀಯರು ಕೂದಲನ್ನು ಪ್ರತಿನಿತ್ಯ ಬಾಚಬೇಕು. ಇಲ್ಲದಿದ್ದರೆ ಹೇನಿನ
ಾವವಾಗಬಹುದು. ಬಿಸಿನೀರಿನಿಂದ ಮೈಯನ್ನು ಸ್ವಚ್ಛ (ಸ್ಪಂಜ್)
ಮಾಡಬೇಕು. ಮೊದಲು ಒಂದಿಷ್ಟು ಒಳ್ಳೆಯ ಸಾಬೂನು ಮಿಶ್ರಿತ
ನೀರಿನಲ್ಲಿ ಸಣ್ಣ ವಸ್ತ್ರವನ್ನು ಮುಳುಗಿಸಿ, ಅನಂತರ ಸ್ವಲ್ಪ ಹಿಂಡಿ,
ಅದರಿಂದ ದೇಹದ ಬೇರೆ ಬೇರೆ ಭಾಗಗಳನ್ನು ಪ್ರತ್ಯೇಕವಾಗಿ ಉಜ್ಜಿ.
ಬಳಿಕ ಸ್ವಚ್ಛವಾದ ಬಿಸಿನೀರಿನಲ್ಲಿ ಮುಳುಗಿಸಿ ಹಿಂಡಿದ ವಸ್ತ್ರದಿಂದ
ತಿಕ್ಕಬೇಕು; ಕೊನೆಗೆ ಒಣ ವಸ್ತ್ರದಿಂದ ದೇಹವನ್ನು ಒರಸಬೇಕು.
ರೋಗಿಯು ಕಾರ್ಬೋಹೈಡ್ರೇಟ್, ಸಾರಜನಕ, ಕೊಬ್ಬು, ಧಾತು,
ಜೀವಾತುಗಳು ಮತ್ತು ನೀರು ಇವುಗಳ ಕ್ರಮಬದ್ಧವಾದ ಅಂಶಗಳಿಂದ
ಕೂಡಿದ ಪೌಷ್ಟಿಕ ಆಹಾರವನ್ನು ನಿಶ್ಚಿತ ಸಮಯಕ್ಕೆ ಸಾಕಷ್ಟು
ಬಿಸಿಯಿದ್ದಾಗಲೇ ಊಟವನ್ನು ಮಾಡಬೇಕು.

(೧೬) ಹೀಗೆ ಶಾಂತಾತಾಮಯವಾದ ವಾತಾವರಣದಲ್ಲಿ
ವಾಸಿಸುವ ರೋಗಿಯ ಮನಸ್ಸನ್ನು ಸಂತೋಷಪಡಿಸುವುದಕ್ಕೆ ರೆಡಿಯೋ
ಗಳ ವ್ಯವಸ್ಥೆ ಇರುವುದು. ಅದರ ಮುಖಾಂತರ ವಿವಿಧ ಮನೋರಂಜಕ
ಕಾರ್ಯಕ್ರಮ, ಗಾಯನ, ವ್ಯಾಖ್ಯಾನ, ಪಾದ್ಯನೃತ್ಯ, ನಾಟಕ
ಮೊದಲಾದುವುಗಳನ್ನು ಅವನು ಕೇಳಬಹುದು. ಆರೋಗ್ಯದ ವಿಷಯದ
ಮೇಲೆ, ಬೇರೆ ಬೇರೆ ದೇಶದ ಭೌಗೋಲಿಕ–ಸೃಷ್ಟಿ ಸೌಂದರ್ಯದ
ಮಹತಿಯ ಬಗ್ಗೆ, ಜನರ ಜೀವನ-ನಡೆನುಡಿಗಳು, ಐತಿಹಾಸಿಕ ಕಟ್ಟಡ
ಗಳು ಮುಂತಾದ ವಿಷಯಗಳನ್ನು ಪ್ರದರ್ಶಿಸುವ ಚಲಚ್ಚಿತ್ರಗಳ
ವ್ಯವಸ್ಥೆ ಮಾಡುವರು. ವಾಚನಾಯದಲ್ಲಿ ಬೇರೆ ಬೇರೆ ವಿಷಯಗಳ
ಪುಸ್ತಕಗಳು ಓದಲು ಸಿಕ್ಕುವವು. ವೈದ್ಯಕೀಯ ತಜ್ಞರು ಮತ್ತು
ಮಹಾಪುರುಷರು ಆಗಾಗ ಬಂದು ಭೆಟ್ಟಿಕೊಟ್ಟು, ಹಿತಕರವಾದ
ಉಪದೇಶವನ್ನು ರೋಗಿಗಳಿಗೆ ಹೇಳಿಕೊಡುವರು. ಮತ್ತು ರೋಗಿಗಳ
ಮನೋರಂಜನೆದ ಸಲುವಾಗಿ ಆಗಾಗ ವಿವಿಧ ವಿನೋದಾವಳಿಗಳನ್ನು
ಸಹ ಏರ್ಪಡಿಸಲಾಗುವುದು. ಇದರಿಂದ ರೋಗಿಯು ತನ್ನ ರೋಗದ
ಬಗ್ಗೆ ನಿಶ್ಚಿಂತೆಯಿಂದ ಇರುವಂತೆ ವಾತಾವರಣ ತಲೆದೋರುವುದು.
ಹೀಗೆ ಆರಾಮವಾಗಿಯೂ ನಿಶ್ಚಿಂತೆಯಿಂದಲೂ ರೋಗಿಯು ತನ್ನ
ಜೀವನವನ್ನು ಸಾಗಿಸುವುದರಿಂದ, ಅಂಥವರಿಗೆ 'ರಾಜರೋಗಿ'ಯೆಂದು
ಕೆಲವರು ಕರೆಯುವರು. ಮತ್ತು ಈ ರೋಗಕ್ಕೆ 'ರಾಜರೋಗ'
ಎಂದೂ ಹೇಳುವರು.

ಹೊಸ ಕಥಾಸಂಕಲನ ಇದೀಗ ಪ್ರಕಟವಾಗಿದೆ!

"ಜೀವನರಂಗ"

ಲೇಖಕರು :–ಶ್ರೀ. ಬಿ. ಆರ್. ಪಾಡಶ್ಚಿ ಎಂ. ಎ. ಬಿ. ಟಿ.

ಸುಪ್ರಸಿದ್ಧ ಕತೆಗಾರರಾದ "ಆನಂದಕಂದ"ರ ವಿಚಾರಪರ
ಮುನ್ನುಡಿಯೂ ಇದೆ. ಬೆಲೆ ೧-೪-೦ ಮಾತ್ರ!
ಇದೇ ಲೇಖಕರ "ಯಾರು ಹೊಣೆ" ಹಾಗೂ
"ಗಾಳಿಗುದರಿ" ಪುಸ್ತಕಗಳನ್ನು ತಪ್ಪದೇ ಓದಿರಿ.
ಮನೋಹರ ಗ್ರಂಥ ಭಾಂಡಾರ, ಧಾರವಾಡ

ಸಾಹಿತ್ಯ ವಿಹಾರ

ಸಮಸ್ಯೆಗೆ ಸಮಾಧಾನ

ಶ್ರೀ. ಕೇ. ಶ್ರೀನಿವಾಸ ಶರ್ಮ, ಕಾಸರಗೋಡು

●

ನವಂಬರ ತಿಂಗಳ ಸಂಚಿಕೆಯಲ್ಲಿ ಗೆಳೆಯರೊಬ್ಬರು ಜಯಂತಿಯ ಮುಂದಿರಿಸಿದ 'ವ್ಯಾಕರಣ ಜಿಜ್ಞಾಸೆ'ಯಲ್ಲಿ ಪಾಲುಗೊಂಡು, ಅವರು ಎತ್ತಿದ ಕೆಲ ಸಮಸ್ಯೆಗಳನ್ನು ಬಗೆಹರಿಸಲು ಉದ್ಯಮಿಸಿರುವೆನು.

ಬೆಳೆಯುತ್ತಿರುವ ಸಾಹಿತ್ಯವು ಸ್ವಾಯತ್ತವಾದ ಭಾಷೆಯನ್ನು ವಿಪುಲವಾಗಿಸುವ ಸಂಭ್ರಮದಲ್ಲಿ, ಭಾಷೇತರ ಸಾಹಿತ್ಯದ ಒಲವನ್ನು ಸಂಪಾದಿಸುವ ಉನ್ನತ ಧ್ಯೇಯದಲ್ಲಿ ಕೆಲವೊಂದು ಮಾರ್ಪಾಟನ್ನು ಒಳಪಡಿಸಿಕೊಳ್ಳುವುದು ಸ್ವಭಾವವಿರುದ್ಧ ವಿಚಾರವಲ್ಲ. ಆದರೆ ಸಾಹಿತ್ಯವು ತನ್ನ ಪುರೋಗತಿಯಲ್ಲಿ ತನ್ನ ಪ್ರೌಢಿಮೆಯನ್ನು—ಕಟ್ಟು ನಿಟ್ಟುಗಳನ್ನು—ಒಂದು ಅಚ್ಚುಕಟ್ಟಾದ ವ್ಯವಸ್ಥೆಯಲ್ಲಿರಿಸಬೇಕಾದುದು ಮುಖ್ಯವೆಂಬುದನ್ನು ಮರೆಯಬಾರದು. ಅಂತೆಯೆ ಸಾಹಿತ್ಯಕರೂ ಈ ಭಾಗದಲ್ಲಿ ಜಾಗರೂಕರಾಗಿದ್ದು ಪ್ರವರ್ತಿಸುವುದು ಅತ್ಯಗತ್ಯವಿದೆ. ಇಲ್ಲವಾದರೆ ಭಾಷೆಯಲ್ಲಿ—ಆ ಭಾಷೆಯನ್ನಾಡುವ ಜನರಲ್ಲಿ—ಒಂದು ಬಗೆಯ ಸಾರ್ವಮುಖೀನ ಶೈಥಿಲ್ಯವು ಬಂದು ಸೇರುವುದು.

ಕನ್ನಡದಲ್ಲಿ ಸಿಗುವ ವ್ಯಾಕರಣಗಳಲ್ಲಿ ಅರ್ವಾಚೀನವಾಗಿ ಸಿಗುವ ವ್ಯಾಕರಣವೆಂದರೆ ಅದು 'ಶಬ್ದಾನುಶಾಸನ'. ಅದಕ್ಕಿಂತಲೂ ಹಿಂದೆ ಜಜ್ಞಾಸುಗಳು ಉಲ್ಲೇಖಿಸಿದಂತೆ ನಾಗವರ್ಮ-ಕೇಶಿರಾಜರೂ ವ್ಯಾಕರವನ್ನು ಬರೆದಿದ್ದರು. ಕೇಶಿರಾಜನು ಭಾಷೆಯಲ್ಲಿರುವ ಕೆಲವು ಕುಂದನ್ನು ಎತ್ತಿತೋರಿಸಿ, ಶಬ್ದಮಣಿದರ್ಪಣವನ್ನು ತೋರಿದನಲ್ಲದೆ, ಕಟ್ಟುನಿಟ್ಟಾದ ಒಂದು ನಿಯಮವನ್ನೇ ಹಾಕಿಲ್ಲ. ಅದುದರಿಂದಲೆ ಭಾಷೆಯನ್ನು—ಅದೇ ವ್ಯಾಕರಣವನ್ನು ನೋಡುವಾಗ ಸಂದೇಹಗಳು ನೂರಾರು ಬಗೆಯಿಂದ ಮುತ್ತುವುವು. ಏನಿದ್ದರೂ ಶಬ್ದಾನುಶಾಸನವು ಕೆಲಮಟ್ಟಿಗೆ ನಿಸ್ಪೃಷ್ಟರೂಪದಿಂದ ಕನ್ನಡವನ್ನು ಬೆಳಗಿದೆಯೆಂದರೆ ಅದನ್ನಾರೂ ಅಲ್ಲಗಳೆಯಲಾರರು. ಕೇಶಿರಾಜನಿಗೂ—ಭಟ್ಟಾಕಳಂಕ ದೇವನಿಗೂ ಹಲವಾರೆಡೆಯಲ್ಲಿ ಮತಭೇದವಿದೆ. ಅದಿರಲಿ.

ಇದೀಗ ಸಂಧಿವಿಚಾರ:— ವರ್ಣಗಳಿಗಿರುವ ಅತಿಶಯವಾದ ಸನ್ನಿಕರ್ಷವೆ ಸಂಧಿ. ಇದನ್ನೇ ದರ್ಪಣಕಾರನು 'ಎರಡುಂ ಪಲವುಂ ವರ್ಣಂ ಪರಸ್ಪರಂ ಕೂಡುವಂದನುದನುಸಂಧಿ'ಯೆಂದೂ 'ಸ್ವರರಹಿತವ್ಯಂಜನವು ಪರವರ್ಣಮನೆಯ್ದುತಿರ್ಪುವಾ ಸಂಹಿತೆಯೊಳ್' ಎಂದೂ ಹೇಳಿರುವನು. ಹೀಗೆ ಹೇಳಿದ ಅವನು 'ಸಂಧಿ–ಸಂಹಿತೆ'ಗಳೆರಡನ್ನೂ ಏಕಾರ್ಥಕಗಳೆಂದಿರುವನಲ್ಲದೆ 'ವ್ಯಂಜನಸಂಧಿ'ಯೆಂದು ನಿರೂಪಿಸಲಿಲ್ಲವೆಂದೇ ತಿಳಿಯಬೇಕಾಗಿದೆ. ಸಂಧಿಯು ಸಂಹಿತೆಯು ವಿವರ್ಪೆ ಬಂದಾಗ ಮಾತ್ರ ಮುಂದಿನ 'ಪದಮಧ್ಯಂ ಪದದಂತ್ಯಂ' ಎಂಬ ಶಾಸ್ತ್ರ ಸೂತ್ರದಿಂದ, ಎರಡೆಂಬ ನಿರ್ಣಯಕ್ಕೆ ಬರುತ್ತಾನೆ. ಅದರ ವಿವರವನ್ನು ಅಲ್ಲೇ ಕೊಡುತ್ತಾನೆ. ಅದಿಲ್ಲಿ ವಿವಕ್ಷಿತವಿಲ್ಲ.

ವರ್ಣಗಳಿಗಿರುವ ಅತಿಶಯವಾದ ಸನ್ನಿಕರ್ಷವೇ ಸಂಧಿ- ಎಂದಾಗ, ಅವುಗಳ ಸನ್ನಿಕರ್ಷದಲ್ಲಿ ಆಗುವ ವ್ಯತ್ಯಾಸಗಳನ್ನು ಸಂ ಯೆನ್ನುವುದರಲ್ಲಿ ಬಿಚಕ್ಷವಿಲ್ಲ; 'ಆಗುವ ವ್ಯತ್ಯಾಸ'ಗಳೆಂಬುದ ಅವನ್ನು ಸಂಧಿಕಾರ್ಯಗಳೆಂದು ಸಾರುತ್ತಿರುವವು. ಈ ವ್ಯತ್ಯಾಸಗ ಸ್ವರಸಂಧಿಯಲ್ಲೂ ವ್ಯಂಜನ ಸಂಧಿಯಲ್ಲೂ ಧಾರಾಳವಾಗಿ ಬರುವುವ ಈ ವಿಷಯದಲ್ಲಿ ಲೇಖಕರೇ ತಮ್ಮ ಸಮಸ್ಯೆಯನ್ನು ಬಗೆಹರಿಸಿದ್ದಾ

ಮುಂದೆ ಲೇಖಕರೆತ್ತಿದ ಲೋಪಾಗಮ ಕುರಿತಾದ ಮಾ ನ್ಯಾಯವಾದುದಾಗಿದೆ. ಆದರೆ ಆದೇಶದಲ್ಲಿ ಮಾತ್ರ ಅದು ಸ ಯಾಗದು. ಉತ್ತರಪದಾದಿಯಲ್ಲೇ ಆದೇಶವು - ಹಲವರಿ ನಿರೂಪಿಸಲ್ಪಟ್ಟಿದ್ದರೂ, ಆ ಮಾತನ್ನು ಅಲ್ಲಗಳೆಯಲಾಗುವುದಿ ಕೇಶಿರಾಜನಿತ್ತ 'ಒರ್ಮೊದಲ್' ಎಂಬ ಉದಾಹರಣೆಯಿಂದ ಲೇಖಕರು ಆದೇಶವನ್ನು 'ಪೂರ್ವಪದಾತ್ಯಯವಾಗಿರಿಸುವುದ ನ್ಯಾಯವಿಲ್ಲ. ಪೂರ್ವಪದದಲ್ಲಾಗುವುದನ್ನು 'ಆದೇಶವೆಂದೂ ಪರಪದದಾದಿಯಲ್ಲಾಗುವುದನ್ನು ಸಮಾಸ ವಿಷಯಕವಾಗಿ ಸ ಯಲ್ಲವೆನ್ನುವುದನ್ನೂ ಒಪ್ಪಲಾಗುವುದಿಲ್ಲ. ಸಮಾಸವಿಷಯಕ ಆದ 'ಕಣ್ಗೊಂಬೆ, ಜೇರ್ಪನಿ' ಮೊದಲಾದುವನ್ನು ಲೇಖಕ ವ್ಯಂಜನಸಂಧಿಯೆಂದು ಕರೆಯಬಹುದೇ? ಅಲ್ಲೂ ಆದೇಕೆ ಆದೆ ವಾಗಿರಬಾರದು? ಶಬ್ದಾನುಶಾಸನಕಾರನು 'ಗದಬಾದೇಶ'ಗಳ ಸಂಧಿಪ್ರಕರಣದಲ್ಲೇ ತಾನಿಸಿದ್ದಾನೆ. ಇದಕ್ಕೆ ಸಾಕ್ಷಿಯನ್ನು ನೀಡು ಮೊದಲೇ 'ಗದಬಾದೇಶ'ವೆಂಬ ಈ ಮಾತೇ ಈ 'ಅರ್ಥವನ 'ಆದೇಶ'ವೆಂಬ ಪದದಿಂದ ಸಾರುತ್ತಿದೆ.

ಉತ್ತರ ಪದಾದಿಯಲ್ಲಿ ಕಾಣುವ ಆದೇಶವು "ದೀರ್ಘೋದ್ವತೌ ರುರದ್ವಾದೇಃ—ಎಂಬ ಸೂತ್ರದಿಂದ ರೂಪಿಸಲ್ಪಟ್ಟ" ಆ+ಋತು ಆರುತು, ಆ + ಋಷಿ = ಆರುಸಿ ಎಂಬಲ್ಲಿ ಸ್ಪಷ್ಟವಾಗುವುದು. ಗದಬ ದೇಶಗಳೂ ಆದೇಶವಾಗಿ ಸಂಧಿಯಲ್ಲಿ ಬರುವುದೆಂಬುದು "ತತಪಸ್ತೀಯ ಉತ್ತರ ಪದಾದೇಃ" ಎಂಬ ಸೂತ್ರನಿಷ್ಪನ್ನವಾದ ಪಬಿದು ಕನ್ನಡಂ = ಪಬಿಗನ್ನಡಂ, ಬಾಯ್ + ತೆರೆ = ಬಾಯ್ತೆರೆ, ನುಣ್ ಪೊಗರ್ = ನುಣ್ಪೊಗರ್—ಎಂಬ ರೂಪಗಳಿಂದಲೇ ಸ್ಪಷ್ಟವಾಗುವುದ ಈ ಸೂತ್ರಗಳು ಸಂಧಿಪ್ರಕರಣದಲ್ಲೇ ಇರುವುದರಿಂದ, ಇದರ ಕುರಿ ಚರ್ಚಿಸುವ ಅಗತ್ಯವೇ ಇಲ್ಲ. ಸಮಾಸದಲ್ಲಿ ಗದಬಾದೇಶಗ ಬಂದರೂ—ಅವು ಸಂಧಿವಿಷಯಕವೇ ಹೊರತು ಬೇರಲ್ಲ. ಯಾಕೆಂದ ಸಮಾಸಪ್ರಕರಣದಲ್ಲಿ ಹೇಳಿದ 'ಸಮರ್ಥಃ ಪದವಿಧಿಃ" ಎಂಬು ವಿಶೇಷ್ಯ ವಿಶೇಷಣ ಭಾವಗಳಿಂದ 'ಅಖಂಡೋಪಸ್ಥಿತಿಜನಕಗಳಾ ಪದಗಳಿಗಾಶ್ರಯವಲ್ಲದೆ, ವರ್ಣಾಶ್ರಯವಲ್ಲ.

ಬಳಿಕಿನ ಸಂದೇಹಕ್ಕೊಂದು ಮಾತು—ಸಂಧಿವಿವಕ್ಷೆಯ ಕುರಿತು : ಸಂಧಿಯು ವಿವಕ್ಷೆಯಿದ್ದರೆ — ವ್ಯಂಜನಸಂಧಿಯೆಂದೆನ್ನುವುದರಲ್ಲಿ ತಪ್ಪಾಗದು. 'ಆದೇಶ'ವೆಂದು ಮಾತ್ರ ಹೇಳಿದರೂ ಇಲ್ಲಾವ ದೋಷವೂ ಇಲ್ಲ. ಸಂಧಿಯು ಮೂಲವಾಗಿ ಈ ಕಾರ್ಯವು ನಡೆಯಬೇಕಷ್ಟೆ! ಅಂತೂ 'ಒರ್ಮೊದಲ' ಎಂಬಲ್ಲಿ ಪೂರ್ವಪದಾಶ್ರಯವಾಗಿ ಬಂದ ಆದೇಶದಂತೆ, ಪರಪದಾಶ್ರಯವಾಗಿಯೂ ಬಂದಾಗ ಆದೇಶವಾಗಿಯೇ ತೀರುವುದೆಂಬುದು ಶಾಸ್ತ್ರಜ್ಞರಿಂದಲೆ ನಿರ್ಣೀತವಿದೆ. ಲೇಖಕರು 'ಗದಬಾದೇಶಗಳು' ಸಂಧಿವಿಷಯಗಳಲ್ಲ—ಸಮಾಸವಿಷಯಗಳೆಂದು ಹೇಳಿದರೆ, ಮುಂದೆ ಅವರು ಅದನ್ನು ಸಂಧಿಯೆಂದು ಕರೆದುದು ಸಾಧುವಾಗುವುದೇ?

ಹಿಂದಿನ ವೈಯಾಕರಣಿಗಳು, ಲೋಪವು ಸಾವಸಾನ್ಯ ವಿಷಯಕ ವೆಂದಿದ್ದಾರೆ. ನಾಮಹಾನಿ ಬರುವಲ್ಲಿ ಮಾತ್ರ ಯತ್ವ-ವತ್ವಗಳನ್ನು ಸಾರುವ ಆಗಮಪ್ರವನ್ನು ಮುಂದಿರಿಸಿದ್ದಾರೆ. ಅದನ್ನೇ ಸ್ಪಷ್ಟವಾಗಿ "ಲುಖನಾಮಹಾನೌ" 'ಅನಾಮಹಾನಿಯಲ್ಲಿ ಲುಪ್' ಎಂದು ಬಟ್ಟಿದ್ದಾರೆ. "ನಾಮರೂಢಿಯಳಿಯದ ಪಕ್ಷಂ" ಎಂಬುದು ಲೋಪಾಗಮಗಳೆರಡಕ್ಕೂ ಅಪವಾದವಾಗಲು ಸಾಧ್ಯವಿಲ್ಲ. ಯಾಕೆಂದರೆ ಲೋಪ ಸಾಮಾನ್ಯ ವಿಷಯಕವಾಗಿದ್ದು, ಆಗಮವು ವಿಶೇಷ ವಿಷಯಕ ವಾಗಿದೆ. ಎಲ್ಲಿ ಲೋಪಮಾಡುವಾಗ ನಾಮಹಾನಿ ಬರುವುದೊ, ಅಲ್ಲಿ ಆಗಮವು ಬರಬೇಕಲ್ಲದೆ—ಸ್ವರವಿಷಯದಲ್ಲಿ ಆಗಮವು ತಾನಾಗಿ ಬರಲು ಸಾಧ್ಯವಿಲ್ಲ; ಅದು ಬರುವೆಡೆಯನ್ನು ಲೇಖಕರೇ ಸ್ಪಷ್ಟೀಕರಿಸಿದ್ದಾರೆ.

ಇನ್ನು ಇಲ್ಲೇ ಬಂದಿರುವ ಸಂದೇಹ: ಕೇಶಿರಾಜನೇ 'ಕ್ರಮದೆ + ಆಯ್ತು' ಎಂಬುದನ್ನು 'ಕ್ರಮುದಾಯ್ತು' ಎಂದೂ 'ಸೇಸೆ + ಇಕ್ಕ್ದಂ' ಎಂಬುದನ್ನು 'ಸೇಸಿಕ್ಕಿದಂ' ಎಂದೂ ಹೇಳಿ, ಬೇಲಿಯೇ ಹೊಲವನ್ನು ಮೇದಂತೆ ಮಾಡಿದ್ದಾನೆಂದು ಲೇಖಕರು ಮಾತಿರಿಸಿದ್ದಾರೆ. ಆದರೆ ಕೇಶಿರಾಜನೇ "ಬಹುಳತೆಯುತ್ವ-ವತ್ವದೊಳ್ – ಸಂಸ್ಕೃತಕ್ಕೆ ತಾನಿಲ್ಲೆಂದುಂ" ಎಂದಂದು, ಈ ವಾದವನ್ನು ಮುರಿದಿದ್ದಾನೆ. ಆದುದರಿಂದಲೆ 'ಒತ್ತೆ + ಇಟ್ಟಂ' ಎಂಬುದು ಒತ್ತಿಟ್ಟಂ, ಒತ್ತೆಯಿಟ್ಟಂ ಎಂಬುದಾಗಿ ನಿಷ್ಪನ್ನವಾಯಿತೆಂದೂ, ಸಂಸ್ಕೃತದಲ್ಲಿ ಮಾತ್ರ ನಿತ್ಯವೆಂದೂ ಹೇಳಿ ಮುಂದೆ ಉದಾಹರಿಸುವನು. ಉದಾ: ನದಿಯೆಲ್ಲಂ, ನಿಧಿಯಿಲ್ಲದಿರುಳ್ ಇತ್ಯಾದಿ.

ಏನಿದ್ದರೂ ಇಂತಹ ಜಟಿಲ ಸಮಸ್ಯೆಗಳು ತೋರಿದಾಗ, ಅದಷ್ಟು ಮಟ್ಟಿಗೆ ಭಾಷಾಸೌಂದರ್ಯವನ್ನುಳಿಸುವಂತೆ ಪ್ರಯತ್ನಿಸಿ 'ಅನಾಮ ಹಾನೌ' ಎಂಬುದನ್ನು ಲಕ್ಷ್ಯದಲ್ಲಿರಿಸಿಕೊಂಡರೆ ಸಾಕೆಂದು ತೋರುತ್ತದೆ.

ಇನ್ನು ಲೇಖಕರಿತ್ತಿದ 'ಬಂದನಸುರಾರಾತಿಯೋಲಗಕೆ' 'ಅನೆಯೇರಿ ಬಾ' ಮೊದಲಾದೆಡೆಯಲ್ಲಿ ಸಂಧಿಯನ್ನು ವಿಂಗಡಿಸುವಾಗ ಅರ್ಥಾನುಗುಣವಾಗಿಯೇ ಸಾಗಬೇಕಲ್ಲದೆ 'ಅಸುರಾರಾತಿ + ಅ + ಓಲಗಕೆ' ಎಂದಾಗಿ ವಿಂಗಡಿಸುವುದು ಅನಗತ್ಯವೆಂದೇ ತೋರುತ್ತದೆ. ಪದವಿವಕ್ಷೆ ಬಂದಾಗ ಮಾತ್ರ ಈ ಕ್ರಮ ಯೋಗ್ಯವಲ್ಲದೆ, ಅರ್ಥಾನುಗುಣವಾಗಿ ಸಾಗಿದ ವಾಕ್ಯದಲ್ಲಿದು ಅಗತ್ಯವಿಲ್ಲ. ಹಾಗಾದರೆ 'ಅಸುರಾರಾತಿಯ + ಓಲಗಕೆ, ಎಂದು ಮಾಡಿ ಲೋಪವಾಗಿಸಿ ಸಾಗುವುದು ಲೇಸು ಅಲ್ಲದೆ ಸಂಬಂಧಾರ್ಥದ 'ಅ'ವನ್ನು ಪ್ರತ್ಯೇಕವಾಗಿ ಸೂಚಿಸುವ ಪ್ರಸಕ್ತಿಯೇಕೆ? ಮುಂದೆ 'ಮನೆಯಲ್ಲಿಲ್ಲ' ಎಂಬುದನ್ನು ಅವರು ಸಿದ್ಧಿಸಿ ತೋರಿರುತ್ತಾರೆ. 'ಪದೇತು ಸಂಹಿತಾ ನಿತ್ಯಾ' ಎಂಬ ಮಾತನ್ನು ಕೇವಲ 'ಮನೆಯಲ್ಲಿ' ಎಂದಿರುವಾಗ ನೋಡಬೇಕಲ್ಲದೆ 'ಮನೆಯಲ್ಲಿಲ್ಲ' ಎಂದಿರುವಲ್ಲಿ ಕಾಣುವ ಅಗತ್ಯವಿಲ್ಲ. ಈ ಪ್ರಕಾರವಾಗಿ ವಾಕ್ಯದಲ್ಲಿ ಹೊಂದಿಕೆಯಾದ ಪ್ರತಿಪದಗಳ ಸಂಧಿಯನ್ನನುಲಕ್ಷಿಸಿ ಸಾಗಿದರೆ, ಅರ್ಥಹಾನಿಯಾಗಿ ಕಾವ್ಯರಸವು ಕುಂದುವುದಲ್ಲದೆ ವ್ಯಾಕರಣಭಾಗದಲ್ಲೂ ಜುಗುಪ್ಸೆ ಬರುವುದು. ಅರ್ಥಾನುಗುಣವಾಗಿ ಸಾಗಿ, ಪದವನ್ನು ವಿಂಗಡಿಸಿ ಮುಂದಿನ ಪದದೊಡನೆ ಅದು ಹೊಂದಿಕೆಯಾಗಃವಾಗ ಕಾಣುವ ವಿಷಯವನ್ನೇ—ಸಂಧಿಯೆನ್ನಾಗಿ ವಾಕ್ಯದಲ್ಲಿ ಕಂಡರೆ ಸಾಕು—ಎಂದೆನಿಸುತ್ತದೆ.

ಇನ್ನು 'ಜಗವೆಲ್ಲ- ತರವಲ್ಲ- ಮೊದಲಾದೆಡೆಯಲ್ಲಿ' ಜಗ+ ಎಲ್ಲ, ತೆರ+ ಅಲ್ಲ ಎಂದು ವಿಂಗಡಿಸಿ 'ವ' ಗಾಗಮವನ್ನು ಹೇಳಲು ಸಾಧ್ಯವಿಲ್ಲ ಎಂದಂದು ಲೇಖಕರು, ಜಗವು+ಎಲ್ಲ- ತರವು+ಅಲ್ಲ ಎಂಬಲ್ಲಿ ವ ಗಾಗಮದ ಪ್ರಾಪ್ತಿಯನ್ನು ಬರಿಸಿ, ಅದು ನಾಮಪ್ರಸಿದ್ಧಿ

ಸಾಹಿತ್ಯ ವಿಹಾರ

ಸಮಸ್ಯೆಗೆ ಸಮಾಧಾನ

ಶ್ರೀ. ಕೇ. ಶ್ರೀನಿವಾಸ ಶರ್ಮ, ಕಾಸರಗೋಡು

●

ನವಂಬರ ತಿಂಗಳ ಸಂಚಿಕೆಯಲ್ಲಿ ಗೆಳೆಯರೊಬ್ಬರು ಜಯಂತಿಯ ಮುಂದಿರಿಸಿದ 'ವ್ಯಾಕರಣ ಜಿಜ್ಞಾಸೆ'ಯಲ್ಲಿ ಪಾಲುಗೊಂಡು, ಅವರು ಎತ್ತಿದ ಕೆಲ ಸಮಸ್ಯೆಗಳನ್ನು ಬಗೆಹರಿಸಲು ಉದ್ಯಮಿಸಿರುವೆನು.

ಬೆಳೆಯುತ್ತಿರುವ ಸಾಹಿತ್ಯವು ಸ್ವಾಯತ್ತವಾದ ಭಾಷೆಯನ್ನು ವಿಪುಲವಾಗಿಸುವ ಸಂಭ್ರಮದಲ್ಲಿ, ಭಾಷೇತರ ಸಾಹಿತ್ಯದ ಒಲವನ್ನು ಸಂಪಾದಿಸುವ ಉನ್ನತ ಧ್ಯೇಯದಲ್ಲಿ ಕೆಲವೊಂದು ಮಾರ್ಪಾಟನ್ನು ಅಳವಡಿಸಿಕೊಳ್ಳುವುದು ಸ್ವಭಾವವಿರುದ್ಧ ವಿಚಾರವಲ್ಲ. ಆದರೆ ಸಾಹಿತ್ಯವು ತನ್ನ ಪುರೋಗತಿಯಲ್ಲಿ ತನ್ನ ಪ್ರೌಢಿಮೆಯನ್ನು—ಹುಟ್ಟು ನುಟ್ಟುಗಳನ್ನು—ಒಂದು ಅಚ್ಚುಕಟ್ಟಾದ ವ್ಯವಸ್ಥೆಯಲ್ಲಿರಿಸಬೇಕಾದುದು ಮುಖ್ಯವೆಂಬುದನ್ನು ಮರೆಯಬಾರದು. ಅಂತೆಯೆ ಸಾಹಿತ್ಯಿಕರೂ ಈ ಭಾಗದಲ್ಲಿ ಜಾಗರೂಕರಾಗಿದ್ದು ಪ್ರವರ್ತಿಸುವುದು ಅತ್ಯಗತ್ಯವಿದೆ. ಇಲ್ಲವಾದರೆ ಭಾಷೆಯಲ್ಲಿ—ಆ ಭಾಷೆಯನ್ನಾಡುವ ಜನರಲ್ಲಿ—ಒಂದು ಬಗೆಯ ಸಾರ್ವಮುಖೀನ ಶೈಥಿಲ್ಯವು ಬಂದು ಸೇರುವುದು.

ಕನ್ನಡದಲ್ಲಿ ಸಿಗುವ ವ್ಯಾಕರಣಗಳಲ್ಲಿ ಅರ್ವಾಚೀನವಾಗಿ ಸಿಗುವ ವ್ಯಾಕರಣವೆಂದರೆ ಅದು 'ಶಬ್ದಾನುಶಾಸನ'. ಅದಕ್ಕಿಂತಲೂ ಹಿಂದೆ ಜಜ್ಜಾಸುಗಳು ಉಲ್ಲೇಖಿಸಿದಂತೆ ನಾಗವರ್ಮ-ಕೇಶಿರಾಜರೂ ವ್ಯಾಕರವನ್ನು ಬರೆದಿದ್ದರು. ಕೇಶಿರಾಜನು ಭಾಷೆಯಲ್ಲಿರುವ ಕೆಲವು ಕುಂದನ್ನು ಎತ್ತಿತೋರಿಸಿ, ಶಬ್ದಮಣಿದರ್ಪಣವನ್ನು ತೋರಿದನಲ್ಲದೆ, ಹುಟ್ಟುನಿಟ್ಟಾದ ಒಂದು ನಿಯಮವನ್ನೇ ಹಾಕಿಲ್ಲ. ಆದುದರಿಂದಲೆ ಭಾಷೆಯನ್ನು—ಅದೇ ವ್ಯಾಕರಣವನ್ನು ನೋಡುವಾಗ ಸಂದೇಹಗಳು ನೂರಾರು ಬಗೆಯಿಂದ ಮುತ್ತುವುವು. ಏನಿದ್ದರೂ ಶಬ್ದಾನುಶಾಸನವು ಕೆಲಮಟ್ಟಿಗೆ ನಿಷ್ಕೃಷ್ಟರೂಪದಿಂದ ಕನ್ನಡವನ್ನು ಬೆಳಗಿದೆಯೆಂದರೆ ಅದನ್ನಾರೂ ಅಲ್ಲಗಳೆಯಲಾರರು. ಕೇಶಿರಾಜನಿಗೂ—ಭಟ್ಟಾಕಳಂಕ ದೇವನಿಗೂ ಹಲವಾರೆಡೆಯಲ್ಲಿ ಮತಭೇದವಿದೆ. ಅದಿರಲಿ.

ಇದೀಗ ಸಂಧಿವಿಚಾರ:— ವರ್ಣಗಳಿಗಿರುವ ಅತಿಶಯವಾದ ಸನ್ನಿಕರ್ಷವೆ ಸಂಧಿ. ಇದನ್ನೇ ದರ್ಪಣಕಾರನು 'ಎರಡುಂ ಪಲವುಂ ವರ್ಣಂ ಪರಸ್ಪರಂ ಕೂಡುವಂದವುದುಸಂಧಿ'ಯೆಂದೂ 'ಸ್ವರರಹಿತವ್ಯಂಜನಮುಂ ಸರವರ್ಣಮನೆಯ್ದುತಿರ್ಪುವಾ ಸಂಹಿತೆಯೊಳ್' ಎಂದೂ ಹೇಳಿರುವನು. ಹೀಗೆ ಹೇಳಿರುವ ಅವನು 'ಸಂಧಿ-ಸಂಹಿತೆ'ಗಳೆರಡನ್ನೂ ಏಕಾರ್ಥಕಗಳೆಂದಿರುವನಲ್ಲದೆ 'ವ್ಯಂಜನಸಂಧಿ'ಯೆಂಬುದನ್ನು ನಿರೂಪಿಸಲೆಂದೇ ತಿಳಿಯಬೇಕಾಗಿದೆ. ಸಂಧಿಯು ಸಂಸ್ಕೃತದ ವಿಷಯಕ್ಕೆ ಬಂದಾಗ ಮಾತ್ರ ಮುಂದಿನ 'ಪದಮಧ್ಯಂ ಪದದಂತ್ಯಂ' ಎಂಬ ಜಂನಿ. ಸೂತ್ರದಿಂದ, ಎರಡೆಂಬ ನಿರ್ಣಯಕ್ಕೆ ಬರುತ್ತಾನೆ. ಅದರ ವಿವರವನ್ನು ಅಲ್ಲೇ ಕೊಡುತ್ತಾನೆ. ಅದಿಲ್ಲಿ ವಿವಕ್ಷಿತವಿಲ್ಲ.

ವರ್ಣಗಳಿಗಿರುವ ಅತಿಶಯವಾದ ಸನ್ನಿಕರ್ಷವೇ ಸಂಧಿ ಎಂದಾಗ ಅವುಗಳ ಸನ್ನಿಕರ್ಷದಲ್ಲಿ ಆಗುವ ವ್ಯತ್ಯಾಸಗಳನ್ನು ಸೂಚಿಸುವುದರಲ್ಲಿ ಔಚಿತ್ಯವಿಲ್ಲ; 'ಆಗುವ ವ್ಯತ್ಯಾಸ'ಗಳೆಂಬುದು ಅವನ್ನು ಸಂಧಿಕಾರ್ಯಗಳೆಂದು ಸಾರುತ್ತಿರುವವು. ಈ ವ್ಯತ್ಯಾಸಗಳು ಸ್ವರಸಂಧಿಯಲ್ಲೂ ವ್ಯಂಜನ ಸಂಧಿಯಲ್ಲೂ ಧಾರಾಳವಾಗಿ ಬರುವುದು. ಈ ವಿಷಯದಲ್ಲಿ ಲೇಖಕರೇ ತಮ್ಮ ಸಮಸ್ಯೆಯನ್ನು ಬಗೆಹರಿಸಿದ್ದಾರೆ.

ಮುಂದೆ ಲೇಖಕರೆತ್ತಿದ ಲೋಪಾಗಮ ಕುರಿತಾದ ಮಾತು ನ್ಯಾಯವಾದುದಾಗಿದೆ. ಆದರೆ ಆದೇಶದಲ್ಲಿ ಮಾತ್ರ ಅದು ಸರಿಯಾಗದು. ಉತ್ತರಪದಾದಿಯಲ್ಲೇ ಆದೇಶವು ಹಲವರಿಂದ ನಿರೂಪಿಸಲ್ಪಟ್ಟಿದ್ದರೂ, ಆ ಮಾತನ್ನು ಅಲ್ಲಗಳೆಯಲಾಗುವುದಿಲ್ಲ. ಕೇಶಿರಾಜನಿತ್ತ 'ಒರ್ಮೊದಲ್' ಎಂಬ ಉದಾಹರಣೆಯಿಂದ ಲೇಖಕರು ಆದೇಶವನ್ನು ಪೂರ್ವಪದಾಶ್ರಯವಾಗಿರಿಸುವುದು ನ್ಯಾಯವಿಲ್ಲ. ಪೂರ್ವಪದದಲ್ಲಾಗುವುದನ್ನು 'ಆದೇಶ'ವೆಂದೂ ಪರಪದದಾದಿಯಲ್ಲಾಗುವುದನ್ನು ಸಮಾಸ ವಿಷಯಕವಾಗಿ ಸರಿಯಲ್ಲವೆನ್ನುವುದನ್ನೂ ಒಪ್ಪಲಾಗುವುದಿಲ್ಲ. ಸಮಾಸವಿಷಯಕವೆಂದೇ ಆದ 'ಕಣ್ಗೊಂಬೆ, ಜೇರ್ಮಲ್ಲಿ'ಯೊದಲಾದುವನ್ನು ಲೇಖಕರು ವ್ಯಂಜನಸಂಧಿಯೆಂದು ಕರೆಯಬಹುದೇ? ಅಲ್ಲೂ ಆದೇಶ ಆದೇಶವಾಗಿರಬಾರದು? ಶಬ್ದಾನುಶಾಸನಕಾರನು 'ಗದಬಾದೇಶ'ಗಳನ್ನು ಸಂಧಿಪ್ರಕರಣದಲ್ಲೇ ಕಾಣಿಸಿದ್ದಾನೆ. ಇದಕ್ಕೆ ಸಾಕ್ಷಿಯನ್ನು ನೀಡುವ ಮೊದಲೇ 'ಗದಬಾದೇಶ'ವೆಂಬ ಈ ಮಾತೇ ಈ 'ಅರ್ಥವನ್ನು 'ಆದೇಶ'ವೆಂಬ ಪದದಿಂದ ಸಾರುತ್ತಿದೆ.

ಉತ್ತರ ಪದಾದಿಯಲ್ಲಿ ಕಾಣುವ ಆದೇಶವು "ದೀರ್ಘೋದ್ವರ್ತೋರುರದ್ವಾದೇಃ—ಎಂಬ ಸೂತ್ರದಿಂದ ರೂಪಿಸಲ್ಪಟ್ಟ" ಆ+ಋತುಃ=ಆರುತು, ಆ+ಋಷಿ=ಆರುಷಿ ಎಂಬಲ್ಲಿ ಸ್ಪಷ್ಟವಾಗುವುದು. ಗದಬಾದೇಶಗಳೂ ಆದೇಶವಾಗಿ ಸಂಧಿಯಲ್ಲಿ ಬರುವುದೆಂಬುದು "ಕಶಪಸ್ಯೋಯು ಉತ್ತರ ಪದಾದೇಃ" ಎಂಬ ಸೂತ್ರನಿಷ್ಪನ್ನವಾದ ಪಬುದು+ಕನ್ನಡಂ=ಪಬುಗನ್ನಡಂ, ಬಾಯ್+ತೆರೆ=ಬಾಯ್ದೆರೆ, ನುಗ್+ಪೊಗರ್=ನುಗ್ಪೊಗರ್—ಎಂಬ ರೂಪಗಳಿಂದಲೇ ಸ್ಪಷ್ಟವಾಗುವುದು. ಈ ಸೂತ್ರಗಳು ಸಂಧಿಪ್ರಕರಣದಲ್ಲೇ ಇರುವುದರಿಂದ, ಇದರ ಕುರಿತು ಚರ್ಚಿಸುವ ಅಗತ್ಯವೇ ಇಲ್ಲ. ಸಮಾಸದಲ್ಲಿ ಗದಬಾದೇಶಗಳು ಬಂದರೂ—ಅವು ಸಂಧಿವಿಷಯಕವೇ ಹೊರತು ಬೇರಲ್ಲ. ಯಾಕೆಂದರೆ ಸಮಾಸಪ್ರಕರಣದಲ್ಲಿ ಹೇಳಿದ 'ಸಮರ್ಥಃ ಪದವಿಧಿಃ" ಎಂಬುದು ವಿಶೇಷ್ಯ ವಿಶೇಷಣ ಭಾವಗಳಿಂದ ಅಖಂಡೋಪಸ್ಥಿತಿಜನಕಗಳಾದ ಪದಗಳಿಗಾಶ್ರಯವಲ್ಲದೆ, ವರ್ಣಾಶ್ರಯವಲ್ಲ.

ಬಳಿಕಿನ ಸಂದೇಹಕ್ಕೊಂದು ಮಾತು–ಸಂಧಿವಿವಕ್ಷೆಯ ಕುರಿತು: ಂಧಿಯು ವಿವಕ್ಷೆಯಿದ್ದರೆ – ವ್ಯಂಜನಸಂಧಿಯೆಂದೆನ್ನುವುದರಲ್ಲಿ ತಪ್ಪಾ- ದು. 'ಅದೇಶ'ವೆಂದು ಮಾತ್ರ ಹೇಳಿದರೂ ಇಲ್ಲಾವ ದೋಷವೂ ಲ್ಲ. ಸಂಧಿಯು ಮೂಲವಾಗಿ ಈ ಕಾರ್ಯವು ನಡೆಯಬೇಕಷ್ಟೆ! ಂತೂ 'ಒರ್ಮೊದಲ್' ಎಂಬಲ್ಲಿ ಪೂರ್ವಪದಾಶ್ರಯವಾಗಿ ಬಂದ ಆದೇಶದಂತೆ, ಪರಪದಾಶ್ರಯವಾಗಿಯೂ ಬಂದಾಗ ಆದೇಶವಾಗಿಯೇ ೀರುವುದೆಂಬುದು ಶಾಸ್ತ್ರಜ್ಞರಿಂದಲೆ ನಿರ್ಣೀತವಿದೆ. ಲೇಖಕರು ಗದಬಾದೇಶಗಳು' ಸಂಧಿವಿಷಯುಗಳಲ್ಲ—ಸಮಾಸವಿಷಯುಗಳೆಂದು ೀಳಿದರೆ, ಮುಂದೆ ಅವರು ಅದನ್ನು ಸಂಧಿಯೆಂದು ಕರೆದುದು ಾಧುವಾಗುವುದೇ?

ಹಿಂದಿನ ವೈಯಾಕರಣಿಗಳು ಲೋಪವು ಸಾಮಾನ್ಯ ವಿಷಯಕ ೆಂದಿದ್ದಾರೆ. ನಾಮಹಾನಿ ಬರುವಲ್ಲಿ ಮಾತ್ರ ಯತ್ವ-ವತ್ವಗಳನ್ನು ಾರುವ ಆಗಮನವನ್ನು ಮುಂದಿರಿಸಿದ್ದಾರೆ. ಅದನ್ನೇ ಸ್ಪಷ್ಟವಾಗಿ ಲುಖನಾಮಹಾನೌ" 'ಅನಾಮಹಾನಿಯಲ್ಲಿ ಲುಪ್' ಎಂದು ಿಟ್ಟಿದ್ದಾರೆ. "ನಾಮರೂಢಿಯಳಿಯದ ಪಕ್ಷಂ" ಎಂಬುದು ಲೋಪಾ- ಗಮಗಳೆರಡಕ್ಕೂ ಅಪವಾದವಾಗಲು ಸಾಧ್ಯವಿಲ್ಲ. ಯಾಕೆಂದರೆ ಲೋಪ ಸಾಮಾನ್ಯ ವಿಷಯಕವಾಗಿದ್ದು, ಆಗಮವು ವಿಶೇಷ ವಿಷಯಕ ವಾಗಿದೆ. ಎಲ್ಲಿ ಲೋಪಮಾಡುವಾಗ ನಾಮಹಾನಿ ಬರುವುದೊ, ಅಲ್ಲಿ ಆಗಮವು ಬರಬೇಕಲ್ಲದೆ—ಸ್ವರವಿಷಯದಲ್ಲಿ ಆಗಮವು ತಾನಾಗಿ ಬರಲು ಸಾಧ್ಯವಿಲ್ಲ; ಅದು ಬರುವೆಡೆಯನ್ನು ಲೇಖಕರೇ ಸ್ಪಷ್ಟೀ- ಕರಿಸಿದ್ದಾರೆ.

ಇನ್ನು ಇಲ್ಲೀ ಬಂದಿರುವ ಸಂದೇಹ: ಕೇಶಿರಾಜನೇ 'ಕ್ರಮದೆ + ಳಯ್ದು' ಎಂಬುದನ್ನು 'ಕ್ರಮವಾಯ್ದು' ಎಂದೂ 'ಸೇಸೆ + ಇಕ್ಕಿದಂ' ಎಂಬುದನ್ನು 'ಸೇಸಿಕ್ಕಿದಂ' ಎಂದೂ ಹೇಳಿ, ಬೇಲಿಯೇ ಹೊಲವನ್ನು ನೇದಂತೆ ಮಾಡಿದ್ದಾನೆಂದು ಲೇಖಕರು ಮಾತಿರಿಸಿದ್ದಾರೆ. ಅದರಿ ಕೇಶಿರಾಜನೇ "ಬಹುಳತೆಯುತ್ವ-ವತ್ವದೊಳ್ – ಸಂಸ್ಕೃತಕ್ಕೆ ತಾನಲ್ಲೆಂದುಂ" ಎಂದಂದು, ಈ ವಾದವನ್ನು ಮುರಿದಿದ್ದಾನೆ. ಅದುದರಿಂದಲೆ 'ಒತ್ತಿ + ಇಟ್ಟಂ' ಎಂಬುದು ಒತ್ತಿಟ್ಟಂ, ಒತ್ತೆಯಿಟ್ಟಂ ಎಂಬುದಾಗಿ ನಿಷ್ಪನ್ನವಾಯಿತೆಂದೂ, ಸಂಸ್ಕೃತದಲ್ಲಿ ಮಾತ್ರ ನಿತ್ಯ- ನೆಂದೂ ಹೇಳಿ ಮುಂದೆ ಉದಾಹರಿಸುವನು. ಉದಾ: ನದಿಯೆಲ್ಲಂ, ಧುವಿಲ್ಲದಿರುಳ್ ಇತ್ಯಾದಿ.

ಏನಿದ್ದರೂ ಇಂತಹ ಜಟಿಲ ಸಮಸ್ಯೆಗಳು ತೋರಿದಾಗ, ಅದಷ್ಟು ಮಟ್ಟಿಗೆ ಭಾಷಾಸೌಂದರ್ಯವನ್ನುಳಿಸುವಂತೆ ಪ್ರಯತ್ನಿಸಿ 'ಅನಾಮ ಹಾನೌ' ಎಂಬುದನ್ನು ಲಕ್ಷ್ಯದಲ್ಲಿರಿಸಿಕೊಂಡರೆ ಸಾಕೆಂದು ತೋರು- ತ್ತದೆ.

ಇನ್ನು ಲೇಖಕರಿತ್ತಿದ 'ಬಂದನಸುರಾರಾತಿಯೋಲಗಕೆ' 'ಅನೆ ಯೇರಿ ಬಾ' ಮೊದಲಾದೆಡೆಯಲ್ಲಿ ಸಂಧಿಯನ್ನು ವಿಂಗಡಿಸುವಾಗ ಅರ್ಥಾನುಗುಣವಾಗಿಯೇ ಸಾಗಬೇಕಲ್ಲದೆ 'ಅಸುರಾರಾತಿ + ಅ + ಓಲಗಕೆ' ಎಂದಾಗಿ ವಿಂಗಡಿಸುವುದು ಅನಗತ್ಯವೆಂದೇ ತೋರುತ್ತದೆ. ಪದವಿವಕ್ಷೆ ಬಂದಾಗ ಮಾತ್ರ ಈ ಕ್ರಮ ಯೋಗ್ಯವಲ್ಲದೆ, ಅರ್ಥಾನು- ಗುಣವಾಗಿ ಸಾಗಿದ ವಾಕ್ಯದಲ್ಲಿದು ಅಗತ್ಯವಿಲ್ಲ. ಹಾಗಾದರೆ 'ಅಸುರಾ ರಾತಿಯ + ಓಲಗಕೆ, ಎಂದೆ ಮಾಡಿ ಲೋಪವಾಗಿಸಿ ಸಾಗುವುದು ಲೇಸು ಅಲ್ಲದೆ ಸಂಬಂಧಾರ್ಥದ 'ಅ'ವನ್ನು ಪ್ರತ್ಯೇಕವಾಗಿ ಸೂಚಿ- ಸುವ ಪ್ರಸಕ್ತಿಯೇಕೆ? ಮುಂದೆ 'ಮನೆಯಲ್ಲಿಲ್ಲ' ಎಂಬುದನ್ನು ಅವರು ಸಿದ್ಧಿಸಿ ತೋರಿರುತ್ತಾರೆ. 'ಪದೇತು ಸಂಹಿತಾ ನಿತ್ಯಾ' ಎಂಬ ಮಾತನ್ನು ಕೇವಲ 'ಮನೆಯಲ್ಲಿ' ಎಂದಿರುವಾಗ ನೋಡಬೇ ಕಲ್ಲದೆ 'ಮನೆಯಲ್ಲಿಲ್ಲ' ಎಂದಿರುವಲ್ಲಿ ಕಾಣುವ ಅಗತ್ಯವಿಲ್ಲ. ಈ ಪ್ರಕಾರವಾಗಿ ವಾಕ್ಯದಲ್ಲಿ ಹೊಂದಿಕೆಯಾದ ಪ್ರತಿಪದಗಳ ಸಂಧಿಯನ್ನ- ನುಲಕ್ಷಿಸಿ ಸಾಗಿದರೆ ಅರ್ಥಹಾನಿಯಾಗಿ ಕಾವ್ಯರಸವು ಕುಂದುವುದಲ್ಲದೆ ವ್ಯಾಕರಣಭಾಗದಲ್ಲೂ ಜುಗುಪ್ಸೆ ಬರುವುದು. ಅರ್ಥಾನುಗುಣವಾಗಿ ಸಾಗಿ, ಪದವನ್ನು ವಿಂಗಡಿಸಿ ಮುಂದಿನ ಪದದೊಡನೆ ಅದು ಹೊಂದಿಕೆ ಯಾಗುವಾಗ ಕಾಣುವ ವಿಷಯವನ್ನೇ—ಸಂಧಿಯನ್ನಾಗಿ ವಾಕ್ಯದಲ್ಲಿ ಕಂಡರೆ ಸಾಕು—ಎಂದೆನಿಸುತ್ತದೆ.

ಇನ್ನು 'ಜಗನೆಲ್ಲ– ತರವಲ್ಲ– ಮೊದಲಾದೆಡೆಯಲ್ಲಿ' ಜಗ+ ಎಲ್ಲ, ತೆರ+ ಅಲ್ಲ ಎಂದು ವಿಂಗಡಿಸಿ 'ವ' ಾಗಮವನ್ನು ಹೇಳಲು ಸಾಧ್ಯವಿಲ್ಲ ಎಂದೆಂದು ಲೇಖಕರು, ಜಗವು+ಎಲ್ಲ- ತೆರವು+ಅಲ್ಲ ಎಂಬಲ್ಲಿ ವ ಾಗಮದ ಪ್ರಾಪ್ತಿಯನ್ನು ಬರಿಸಿ, ಅದು ನಾಮಪ್ರಸಿದ್ಧಿ

ಹಾನಿಗೆ ಕಾರಣವೆಂದು 'ನಾಮರೂಢಿಯಲ್ಲಿಯದ ಪಕ್ಷಂ' ಎಂಬುದನ್ನು ಅಗಮಿಕ್ಕೂ ಅಸವಾದಸೂತ್ರವಾಗಿ ತಂದಿದ್ದಾರೆ. ಇಲ್ಲಿ 'ಜಗತ್ತು+ಎಲ್ಲ' ಎಂದು ಮಾಡಿ ಲೋಪವನ್ನೇ ಪ್ರಸಕ್ತಿಯಾಗಿಸುವುದು ಹಿತವಲ್ಲವೇ? ಅಗಮದ ಪ್ರಸಕ್ತಿಯೇಕೆ? ನಾಮರೂಢಿಯಲ್ಲಿಯಲ್ಲವು ದಾದರಲ್ಲವೇ ಅಗಮದ ಪ್ರಸಕ್ತಿ? 'ಜಗ+ಎಲ್ಲ' ಎಂದು ನಿಂಗಡಿಸುವುದಕ್ಕಿಂತಲೂ 'ಜಗಂ+ಎಲ್ಲ' ಎಂದಾಗಿ ನಿಂಗಡಿಸುವುದಾದರೆ ಅದೂ ಚೆನ್ನಾಗಬಹುದು. ಅದರಲ್ಲೂ ದೋಷವು ಸಿಗದು. ಹೀಗೆ ಸಂದೇಹವೆತ್ತಿದ ಲೇಖಕರು, ಕೊನೆಗೆ ಇದೇ ಸುಧಿತಾರ್ಥಕ್ಕೆ ಬರುವರೆಂಬ ಆಸೆಯಿದೆ. ಇನ್ನು ಸಮಾಸಗಳ ಕುರಿತು:

ಈ ಭಾಗದಲ್ಲಿ ಲೇಖಕರು ಮೊದಲಾಗಿ ತತ್ಪುರುಷಸಮಾಸವನ್ನು ನಿರ್ದೆಶಿಸಿ, ಬಳಿಕ ಕರ್ಮಧಾರಯದಲ್ಲಿನ್ನ ತಮ್ಮ ಅಭಿಪ್ರಾಯವನ್ನು ಸೂಚಿಸಿದ್ದಾರೆ 'ನೆರೆಪ್ರೋಕ್ತಂ ಮುನ್ನಗತ ವಿಭಕ್ತ್ಯರ್ಥಗಳವರೊಳ್' ಎಂದಾದು ಅರವನೆ+ಮನೆ = ಅರಮನೆ, ತರಣಿಯ ಕಾಲ= ತರಣಿಕುಲ-ಎಂಬ ವಿಭಕ್ತಿಲೋಪಹೊಂದಿದ ರೂಪಗಳನ್ನು ತಾಳಿಸುವರು. ಆದರೆ ಕರ್ಮಧಾರಯದಲ್ಲಿ 'ಹಿರಿದು ಬಾಗಿಲು, ಕಿರಿದು ಹಲಿಗೆ, ಎಂದಿಷ್ಟೆ ಹೇಳಿದರೆ ಸಾಕೆಂದು ಕೆಲವರಾಡುವ ಮಾತನ್ನು ಮುಂದಿರಿಸಿ,—ಸ್ವಾಭಿಪ್ರಾಯವನ್ನು ನೀಡುತ್ತ 'ಹಿರಿದಾದ ಬಾಗಿಲು, ಕಿರಿದಾದ ಹಲಿಗೆ' ಎಂದಿರಿಸಿದರೆ ಚೆನ್ನವೆಂದೂ, ಕರ್ಮಧಾರಯ ಸಮಾಸದ ಗುರುತಾದ 'ಆದ' ಎಂಬುದನ್ನು ತಿರಿಸಿಕೊಳ್ಳುವುದು ಏಕೆಂದೂ ಸೂಚಿಸಿದ್ದಾರೆ. ಆದರೆ ಭಟ್ಟಾಕಳಂಕನು 'ವಿಶೇಷಣ. ವೇಕಾರ್ಥೇನ' ಎಂಬ ಸೂತ್ರದಿಂದ ವಿಶೇಷ್ಯ-ವಿಶೇಷಣಗಳಿಗೆ ಸಾಮಾನಾಧಿಕರಣ್ಯ' ವಿರಬೇಕೆಂದು ಸ್ಪಷ್ಟವಾಗಿ ನುಡಿದಿದ್ದಾನೆ. ಏಕಾರ್ಥೇನ' ಎಂಬ ಪದವೇ 'ಸಮಾನಾಧಿಕರಣ' ವಾಚಿಯಾಗಿದೆ. ಅಲ್ಲವೆ, 'ಆದ' ಪದವನ್ನು ಹಳಗನ್ನಡದಲ್ಲಿ ಉಪಯೋಗಿಸುವುದು ಚೆನ್ನಾಗುವುದೇ? ಇಲ್ಲಿ ಕಾರಣವಿದೇ ವಿಷಯವನ್ನು ಅಪಕ್ವ ಬುದ್ಧಿಯ ಬಾಲಕರಿಗೆ ತಿಳಿಯಪಡಿಸುವುದು ನ್ಯಾಯವೆಂದು ತೋರುತ್ತದೆ.

ದ್ವಿಗು ಸಮಾಸದಲ್ಲಿ ಲೇಖಕರೆತ್ತಿದ ವಾದವು ನಿಜ. ಸಂಖ್ಯಾಪದದ ವಿವರಣೆಯು ದ್ವಿಗುಸಮಾಸದಲ್ಲಿ ಅಗತ್ಯವಿಲ್ಲ. ಆದರೆ ಕರ್ಮಧಾರಯ ಮೊದಲಾದೆಡೆಯಲ್ಲಿ ಆ ಸಮಾಸವು ಸಂಸ್ಕೃತ ಪದಾಶ್ರಯವಾಗಿದ್ದರೆ-'ಆದ' ವನ್ನು ಸೇರಿಸಿ ತಿಳಿಯಪಡಿಸುವುದು ಯುಕ್ತ. ಇಲ್ಲವಾದರೆ ಬಾಲಮನೋಧರ್ಮದಿಂದದು ಹೊರನಿಲ್ಲುವುದು.

ಭೂಪ, ಅಜ್ಜ, ತಜ್ಜ, ಕಮಲಜ ಮೊದಲಾದೆಡೆಗಳಲ್ಲಿ ನಾವು ಕಾಣುವ ಸಂಸ್ಕೃತ ಸಮಾಸಗಳ ರೀತಿಯೇ ಬೇರೆ. ಭೂಮಿಯ ಪತಿಯೆಂದು 'ಭೂಪ' ವನ್ನು ವಿಗ್ರಹಿಸುವುದು ನ್ಯಾಯವೂ ಅಲ್ಲ. "ಭುವಂ ಪಾತೀತಿ, ಭೂಪಃ" ಎಂದಾಗಬೇಕು. ಹೀಗೆಯೇ ಉಳಿದ ಪದಗಳೂ ವಿಗ್ರಹಿಸಲ್ಪಟ್ಟು ಉಪಪದ ಸಮಾಸವಾಗುವುವು. ಕನ್ನಡದಲ್ಲಿ ಈ ಶಬ್ದ ಬಂದಾಗ, ವಿಗ್ರಹವಾಕ್ಯವನ್ನು ಹೇಳಲೇಬೇಕೆಂದಿದ್ದರೆ, 'ಪ' ಶಬ್ದವೆ ಅರ್ಥವನು ಹೇಳಿ, ಭೂವಿ ಪ ಎಂದಾಗಿ ಹೇಳುವುದು. ಹಾಗೆಯೆ 'ಅಜ್ಜ' ವನ್ನು 'ನಜ್' ಅಗಿಯೂ, 'ತಜ್ಜ' ವನ್ನು ತತ್ಪುರುಷವನ್ನಾಗಿಯೂ (ಎಂದರೆ 'ಅದರ ಜ್ಞ') ಕಮಲಜ ಎಂಬುದನ್ನು ಬಹುವ್ರೀಹಿಯಂತೆಯೂ ಹೇಳಬೇಕು. ಆದರೆ ಹೇಳುವುದಕ್ಕೂ ಸುಖವಿಲ್ಲ ಈ ಕ್ರಮ. ಉಣಾಯವಿಲ್ಲದಿದ್ದರೆ ಈ ಕ್ರಮವನ್ನು ಕೈಗೊಳ್ಳದಿಗತ್ಯಂತರವಿಲ್ಲ. "ಭೂಮಿಯ ಪತಿ" 'ಭೂಪ' ಎಂದೆನ್ನುವವರ ಕ್ರಮ ಉಚಿತವಲ್ಲವೆಂಬುದನ್ನು ಯಾರೂ ಬೇಳಬಲ್ಲರು.

ಇನ್ನು ಧಾತುಗಳ ವಿಷಯ: 'ಎಂದಂ' ಎಂಬುದರ ಧಾತುವು 'ಎಣ್' ಎಂದಾದರೆ 'ಎಂದನು' ಎಂಬುದರ ಧಾತು 'ಎನ್ನು' ಎಂದಾಗಬಹುದೆಂದು ಲೇಖಕರು ಹೇಳಿದ್ದಾರೆ. ಇದಕ್ಕೆ ಕಾರಣ ಹಳಗನ್ನಡ-ಹೊಸಗನ್ನಡ ರೂಪಗಳ ಶ್ರವಣ. ಆದರೆ 'ಎಂದು' ವಿನ ಗತಿಯಾವುದೆಂದು ಸಂದೇಹಪಟ್ಟಿದ್ದಾರೆ. ಈ ಪ್ರಶ್ನೆ ನ್ಯಾಯವಾಗಿದೆ. ಇದಕ್ಕುತ್ತರವೂ ಇದೆ. 'ಎಂದು' ಎಂಬುದರ ನಿಷ್ಕೃಷ್ಟ ಧಾತುವೇ ಬೇಕಾಗಿದ್ದರೆ, ಆ ಶಬ್ದವು ಉಪಯುಕ್ತವಾದ ಗ್ರಂಥದ ಕಾಲವೇ ಗತ! ಅದು ಪ್ರಾಚೀನವಾಗಿದ್ದರೆ 'ಎಣ್' ಅಧುನಿಕವಾಗಿದ್ದರೆ 'ಎನ್ನು!' ಇದು ಸಾಲದೆ? ಪ್ರತ್ಯೇಕವಾಗಿ 'ಎಂದು' ಎಂಬುದರ ಧಾತುವು ಯಾವುದೆಂದು ಕೇಳಿದರೆ, ಬರುವ ಎರಡೂ ಉತ್ತರಗಳನ್ನೂ ಸ್ವಾಗತಿಸಬೇಕು.

ಇನ್ನು 'ಕನ್ನಡಾಭಿಮಾನಿ, ಕನ್ನಡಾಂಬೆ ಇವುಗಳು ಸವರ್ಣದೀರ್ಘಗಳೆಂತು?' ಎಂದು ಪ್ರಶ್ನಿಸಿದ್ದಾರೆ. 'ಕನ್ನಡ'ವೆಂಬುದು ಒಂದು ಭಾಷೆಯೆಂದೇ ತೀರ್ಮಾನಿಸಲ್ಪಟ್ಟರೆ, ಅದೊಂದು ಭಾಷೆಯ ಹೆಸರೆಂದೇ ನಿರ್ಧೇತನವಾಗುವುದಿದ್ದರೆ- ಅಂಬೆ, ಅಭಿಮಾನಿಗಳೊತನೆ ಸೇರುವಾಗ ಸವರ್ಣಸಂಧಿಯಾಪರೆ ಕಷ್ಟವೇನು? ಭಾಷೆಯು ಹೆಸರು ಯಾವ ಭಾಷೆಯಲ್ಲೂ ವ್ಯತ್ಯಾಸವಾಗಬಾರದಷ್ಟೆ! ಇನ್ನು ಕರ್ನಾಟಕ- ಕನ್ನಡ ಶಬ್ದಗಳ ಪೂರ್ವಾಪರ ಜನ್ಯ-ಜನಕ ಭಾವದ ನಿರ್ಣಯ ಸಾಗದಿರುವಾಗ, ಈಗ ನಾವಿರಿಸಿಕೊಂಡ ಈ ನಿಯಮದಿಂದ ಬಾಧಕವೇನು?

ಕೊನೆಯದಾಗಿ 'ತೆಪ್ಪೋತ್ಸವ' ಗುಣಸಂಧಿಯೆಂತು? ಎಂದು. ಇದು ಬಳಕೆಯಲ್ಲಿ ಬಂದ ಶಬ್ದ. ರಥೋತ್ಸವದಂತೆ- ತೆಪ್ಪೋತ್ಸವವೂ ಸಾಗಿಬಂದಿತು. ಹಾಗೆಯೇ 'ಹಗಲಾಯನ' (ಹಗಲು+ಅಯನ) ಎಂಬ ರೂಪವೂ ಬಂದು ಸೇರಿದೆ. ಇವಕ್ಕೆಲ್ಲ ಗತಿಯೆಲ್ಲಿ? ಅಷ್ಟೇಕೆ? 'ರಥಬೀದಿ' ಎಂಬ ಶಬ್ದಸ್ವರೂಪ ನ್ಯಾಯಬದ್ಧವೆ? ಇವನ್ನು ತಡೆಗಟ್ಟುವವರಾರು?

ಇಂತೂ ಬೆಳೆಯುತ್ತಿರುವ ಕನ್ನಡಭಾಷೆಯಲ್ಲಿ ಉಂಟಾಗುವ ಕೆಲವು ತೊಡಕುಗಳನ್ನು ಗೆಳೆಯರು ತೋರಿಕೊಟ್ಟಿದ್ದು ಅಭಿನಂದನೀಯವಾಗಿದೆ. ಇಂತಹ ಜಟಿಲಸಮಸ್ಯೆಗಳನ್ನು ಎತ್ತುವವರೇ ಕಡಿಮೆ. ಯಾಕೆಂದರೆ ಸಮಯವೂ-ತಾಳ್ಮೆಯೂ ತುಂಬಾ ಬೇಕಾಗಿದೆ ಈ ಉದ್ಯಮಕ್ಕೆ. ಜಯಂತಿಯು ಈ ಭಾಗದಲ್ಲಿ ಕೈನೀಡಿದುದು ಅಭ್ಯಾಸಿಗಳಿಗೊಂದು ಕ್ಷೇತ್ರವಾಯಿತು. ಏನೇ ಇರಲಿ! ಭಾಷೆಯು ಅಚ್ಚುಕಟ್ಟನ್ನು ರೀತಿ-ನೀತಿಯನ್ನು ವೃಥಾ ಮೀರುವವರಿಗೊಂದು ಎದೆಬಿಟ್ಟನ ಕ್ಷೇತ್ರ.

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಸೂಚಿಸಿದಂತೆ 'ತೆರೆದ ಪರದೆ' ಎಂಬ ಕತೆಯನ್ನು ವಿಮರ್ಶಿಸಿದ ಬರಿಹಗಳು ಆರು ಜನರಿಂದ ಬಂದಿವೆ. ವಿಮರ್ಶಕರ ಹೆಸರುಗಳು ಹೀಗಿವೆ:

೧. ಶ್ರೀ. ಎಂ. ಕೇಶವಭಟ್ಟ 'ವಿದ್ವಾನ್' ಕಾಸರಗೋಡು, ೨ ಶ್ರೀ. ಕೆ. ಶ್ರೀನಿವಾಸಶರ್ಮ 'ವಿದ್ವಾನ್' ಕಾಸರಗೋಡು, ೩. ಶ್ರೀ ಕೆ. ಆರ್. ಕಾಳನ್, ಮುಂಬಯಿ. ೪. ಶ್ರೀ. ಜಿ. ಎಸ್. ಮುಕರ, ಎಂ ಎ., ಬಿ ಟಿ, ಧುಳೆ, ೫. ಬಡಾ ಶೇಷ ರಾಘವೇಂದ್ರ ಸುರಪುರ, ೬. ಶ್ರೀ. ವಿ. ಬಿ. ಹೊಸಮನೆ, ಪೇಜಾವರಮಠ, ಉಡುಪಿ.

ಎಲ್ಲ ವಿಮರ್ಶೆಗಳನ್ನೂ ಸಂಪಾದಕ ಮಂಡಲಿಯವರೇ ನೋಡಿ ತಮ್ಮ ನಿರ್ಣಯವನ್ನು ಈ ಬಗೆಯಾಗಿ ಕೊಟ್ಟಿದ್ದಾರೆ:

"ಒಟ್ಟಿನ ಮೇಲೆ ಈ ಸಲ ಬಂದ ವಿಮರ್ಶೆಗಳಿಲ್ಲಿ ಚೆನ್ನಾಗಿವೆ. ಒಬ್ಬಬ್ಬರು ಕತೆಯ ಘಟನೆಯಲ್ಲಿಯ ಬದಲಾವಣೆಯನ್ನು ಅಪೇಕ್ಷಿಸಿ ಬರೆದಿದ್ದಾರೆ. ಬದಲಾವಣೆ ಹೇಗೆ ಆಗಬೇಕಾಗಿದ್ದಿತೆಂಬುದನ್ನೂ ಸೂಚಿಸಿದ್ದಾರೆ. ವಿಮರ್ಶಕರು ಇದ್ದ ಕೃತಿಯಲ್ಲಿಯ ಗುಣ-ದೋಷಗಳನ್ನು ಮಾತ್ರ ವಿಶ್ಲೇಷಿಸಿ ವಿಮರ್ಶಿಸುವುದು ಸರಿಯಾದ ದಾರಿ. ಕೃತಿಯಲ್ಲಿ ಬದಲಾವಣೆಯನ್ನು ಸೂಚಿಸುವುದು ಸರಿಯಾದ ದಾರಿಯಲ್ಲ. ಶ್ರೀ. ಎಂ. ಕೇಶವಭಟ್ಟ, ಶ್ರೀ. ಕೆ. ಶ್ರೀನಿವಾಸ ಶರ್ಮಾ, ಶ್ರೀ. ಜಿ. ಎಸ್. ಮಕರ ಇವರ ವಿಮರ್ಶೆಗಳು ಉತ್ತಮವಾಗಿವೆ. ಮಿಕ್ಕುವು ಚೆನ್ನಾಗಿವೆ. ಶ್ರೀ. ವಿ. ಬಿ. ಹೊಸಮನೆಯವರದು ತೀರ ಲಘುವಿಮರ್ಶೆ. ಅಂಚೆಯ ಕಾರ್ಡಿನ ಒಂದು ಪಕ್ಕದಲ್ಲಿ ಮಾತ್ರ ಬರೆದಿದ್ದಾರೆ. ಶ್ರೀ. ಎಂ. ಕೇಶವಭಟ್ಟ ಅವರ ವಿಮರ್ಶೆಯನ್ನು ಈ ಸಲದ ಸಂಚಿಕೆಯಲ್ಲಿ ಪ್ರಕಟಿಸಬಹುದು."

ಮುಂದಿನ ಸಂಚಿಕೆಯ ಮೇಲಾಟಕ್ಕಾಗಿ, ಈ ಸಂಚಿಕೆಯಲ್ಲಿ ಪ್ರಕಟವಾದ 'ಬೀದಿಯ ಹಾಡುಗಾರರು' ಎಂಬ ಕತೆಯನ್ನಾಗಲಿ, 'ಸೇದಿನ ಸಮಾಧಿ' ಎಂಬುದನ್ನಾಗಲಿ ವಿಮರ್ಶಿಸಬೇಕು.

ಈ ವಿಭಾಗವನ್ನು ಸಿಲ್ಲಿಸಿದಾಗ, ಬೇಕುಬೇಕೆಂದು ಕಾಗದ ಬರೆದು ಈ ವಿಭಾಗವನ್ನು ಅಪೇಕ್ಷಿಸಿದವರು ಬಹಳ ಜನರು. ಆದರೆ ಮೇಲಾಟದಲ್ಲಿ ಭಾಗವಹಿಸುವವರ ಸಂಖ್ಯೆ ಬೆಳೆಯದಿರುವುದು ವಿಷಾದದ ಮಾತು.

ಸಂ. ಜ. ಧಾ.

'ಜೀವನವು ತರ್ಕದ ಒರೆಗಲ್ಲ ಮೇಲೆಯೇ ನಿಂತಿರುವುದಿಲ್ಲ. ಅಕಲ್ಪಿತ ಘಟನೆಗಳ ಅಂದೋಲನವೂ ಅದರಲ್ಲಿ ಕೂಡಿದೆ' ಎಂಬ ಮಾತಿಗೆ ಉದಾಹರಣವಾಗಿ ಶೀನೂನ ಮಾತಿನಲ್ಲಿ 'ತೆರೆದ ಪರದೆ'ಯ ಕಥಾಸೂತ್ರವನ್ನು ಕತೆಗಾರರು ಪೋಣಿಸಿರುವರು. ಅಯ್ದುಕೊಂಡ ಚರಿತ್ರಚಿತ್ರಣದ ಕಥಾವಸ್ತು, ಓದುಗರ ಕುತೂಹಲವನ್ನು ಕೆರಳಿಸುತ್ತದೆ. ಪರದೆ ತೆರೆವಾಗ ಕಾಣುವ 'ಹೇಮಾ'ನ ಜೀವನಕ್ಕಾಗಿ ಸಹಕಾರ-ಸಹಾನುಭೂತಿಯನ್ನು ಓದುಗರ ಮಿಡಿವ ಕಂಬನಿ ವ್ಯಕ್ತಪಡಿಸುತ್ತದೆ. 'ಪಾಟೀಲ'ನ ಸಂಕುಚಿತ ಧಾನಸೆಗಳಾಗಿ, ಪರಸ ಸಂಸಾರದಲ್ಲಿ ಹುಳಿ ಹಿಂಡಿ ಕೆಡಿಸಿದುದಕ್ಕಾಗಿ, ಅತನ ಮೇಲೆ ಕತ್ತಿ ಗಬ್ಬಲು ಆಶಿಸುತ್ತದೆ. ವಿದ್ಯಾರ್ಥಿದೆಸೆಯಲ್ಲಿ ಉತ್ತಮನೆನಿಸಿದ ಪಾಟೀಲನು, ಸಂಸಾರಜೀವನದಲ್ಲಿ 'ಕ್ಷುಲ್ಲಕ' ವ್ಯಕ್ತಿಯಾಗಿ ಕಾಣಿಸುವುದು ಸೋಜಿಗವಾದರೂ, ಸ್ವತಃ ಸತ್ಯವಾಗಿ ಚಿತ್ರಿತನಾಗಿರುವನು. ಕಥಾವಸ್ತುವಿನ ಹೊಂದಿಕೆಯು ಯುಕ್ತವಾಗಿ ಆದರ್ಶವಾಗಿ ಕಾಣಿಸುವುದರಲ್ಲಿ ಸಂಶಯವೇ ಇಲ್ಲ

ವಿರುದ್ಧಧ್ರುವಗಳಲ್ಲಿರುವ ಎರಡು ಸಂಸಾರಚಿತ್ರಗಳ ನಿರೂಪಣೆ ಇಲ್ಲಿ ವ್ಯಕ್ತವಾಗುತ್ತಿದೆ. ಒಂದು "ಆದರ್ಶ ಸಂಸಾರ." ಚೆಕ್ಕ ಮನೆ. ಜೊಳ್ಳ ಹೆಂಡತಿ ವೆಚ್ಚಕ್ಕೆ ತಕ್ಕ ರೊಕ್ಕ- ಇವಿದ್ದರೆ ಸಗ್ಗಕ್ಕೆ ಕೆಲ್ಲು ಹಾಕಿದ ಸರ್ವಜ್ಞನೆಂದಂತಿರುವ ಸಂಸಾರ. ರಂಗಣ್ಣನ ಸಂಸಾರ ಸಾರ ಸರ್ವಸ್ವವೂ ಇದೇ ಆಗಿದೆಯೆಂದರೆ ಮಾತು ಅತ್ಯುಕ್ತಿಯಲ್ಲ. 'ಸಮಾಧಾನ' ಮನೆಯ ಹೆಸರು. ಮುದ್ದಿನ ನಾಲ್ಕು ಮಕ್ಕಳು. ಮನವನ್ನರಿತು ನಡೆವ ಪತಿ-ಪತ್ನಿಯರು. ಇದಕ್ಕಿಂತ ಸಂಸಾರವನ್ನು ಸುಗಮವಾಗಿಸಲು ಬೇರೆ ವಸ್ತುಭಾವಗಳ ಅವಶ್ಯಕತೆಯಿಲ್ಲ; ಬೇಕಾಗಿಲ್ಲ. 'ಶಕ್ಕೂ' ಮನೆಯೊಡತಿಯಾಗಿ 'ರಂಗಣ್ಣನ' ಮನದೊಡತಿಯಾಗಿ ಆದರ್ಶ ಗೃಹಿಣಿಯಾಗಿ ಚಿತ್ರಿತಳಾಗಿರುವಳು. ರಂಗಣ್ಣನಂತೂ ಬತ್ತದ ತೆರೆನೆರೆಗಳಿಲ್ಲದ ತುಂಬುಗೆಳೆಯನಾಗಿ ರಸನಿಮಿಷಗಳಲ್ಲೇ ದಿನಗಳೆವ ಆದರ್ಶವ್ಯಕ್ತಿಯಾಗಿ ನಿರೂಪಿತನಾಗಿರುವನು.

ಇನ್ನೊಂದು ಮೇನುಲತಾ-ಪಾಟೀಲರ 'ಕ್ಷುಲ್ಲಕ ಸಂಸಾರ' ರೋಗದಿಂದ ನರಳುವ ಮಕ್ಕಳು ಮನೋವೇದನೆಯಿಂದ ಬಡಕಲು ಕಡ್ಡಿಯಾವ ಮೇನೂ. ಲೌಕಿಕ ಅನುಭವಗಳಿಲ್ಲದ—ವಿದ್ಯೆಯಿದ್ದರೂ ಸಂಸ್ಕೃತಿ-ನಾಗರಿಕತೆಗಳ ಗಂಧಗಾಳಿಯಿಲ್ಲದ, ಸ್ತ್ರೀಯರನ್ನು ಭೋಗವಸ್ತುವಾಗಿಸಿ, ಮಕ್ಕಳನ್ನು ಹಡೆಯುವ ಯಂತ್ರವಾಗಿಸಿ, 'ಪಶುತ್ವ' ಬೇರಿಲ್ಲ ಎಂದಿತ್ತ ತೋರುವ ಯಜಮಾನ ಪಾಟೀಲ. ಹೀಗೆ ಚಿತ್ರಿಸಲ್ಪಟ್ಟಿದೆ. ಮೇನೂ ಅಂಗಾರವಂತಹ ಹುತುಗಿ. ರೂಪದ ಜತೆಗೆ ಮನವನ್ನು ಆಕರ್ಷಿಸುವ ಜಾಣ್ಮೆಯ ನಪೆ-ನುತಿಗಳುಳ್ಳವಳು. ಬುದ್ಧಿಯಲ್ಲಿ ತೇಜವಿಲ್ಲದವಳು ಆಗಿ ಕತೆಗಾರರು ಮೇನಾನ ಸ್ತ್ರೀತ್ವದ ನೈಜ ಮೊಗವಾಡವನ್ನು ಚಿತ್ರಿಸಿರುವರು. ಬುದ್ಧಿಯಲ್ಲಿ ತೇಜವಿಲ್ಲದವಳಾದರೂ

ಶೀನು ಹೇಳುವ 'ಹೇಮಲತೆಯ ಹುಷಾರಿಯ ಬಗ್ಗೆ ಕೌತುಕ ನೆನಿಸಿತು.' ಎಂಬುದು ಮಾತ್ರ ಕೌತುಕದಾಯಕವಾಗಿದೆ.

ಹೀಗೆ ಎರಡು ಸಂಸಾರಗಳ ವಾಸ್ತವಿಕಚಿತ್ರವನ್ನು ಓದುಗರ ಮುಂದಿಟ್ಟು. ಕತೆಗಾರರು ಕತೆಯನ್ನು ಹೆಣೆದಿರುವರು. ರಂಗಣ್ಣ ಶಕ್ಕೂರವರ ಆದರ್ಶಸಂಸಾರವನ್ನು ಬಣ್ಣಿಸಿ, ಬೇಕಾದ ನೈಪುಣ್ಯದಿಂದ ಕಥಾಸರಣಿಯನ್ನು ಹೃದಯಂಗಮವಾಗಿ-ಉತ್ತಮವಾಗಿ-ಮುಂದುವರಿಸಿದ ಕತೆಗಾರರು 'ಅಪ್ರತಿಭ'ರಾಗಿಯೋ ಅಥವಾ ಒಂದು ದುರಂತ ಚಿತ್ರವನ್ನು ಓದುಗರ ಮುಂದಿಡಬೇಕೆಂದೋ ಪ್ರಯತ್ನಿಸಿದಂತೆ ಭಾಸವಾಗುತ್ತದೆ.

ಹೆಣ್ಣುಮಕ್ಕಳು ಅಸ್ವತಂತ್ರರಾಗಿ, ತಂದೆತಾಯಿ-ಬಂಧುಬಳಗವು ಹೇಳಿದಂತೆ ವರನನ್ನು ವರಿಸುವುದೊಂದು ಲೋಕಧರ್ಮ. ಬಡತನದ ಬೇಗೆಯಿಂದ ನೊಂದು ಬೆಂದು, ಬೆಳೆದ ಮಗಳು ತಪ್ಪುದಾರಿಯಲ್ಲಿ ಕಾಲಿರಿಸಬಾರದೆಂದು ಹಿತಾಹಿತಗಳನ್ನು ವಿಚಾರಿಸಲೆಡೆಯಿಲ್ಲದೆ ಇಕ್ಕಟ್ಟಿನಲ್ಲಿ ಸಿಲುಕಿ, ಕನ್ನೆಯನ್ನು ಯಾಚಿಸಿ ಬಂದ ಕುಂಟನಿಗಾಗಲಿ ಕುರುಡನಿಗಾಗಲಿ ಧಾರೆ ಎರೆದು 'ಧರ್ಮಸೆರೆ' ಬಿಡಿಸುವುದು ಸಾಮಾಜಿಕ ಧರ್ಮ. ವಯೋಧರ್ಮ, ಕಾಲಧರ್ಮಗಳಿಂದ ಹೆಣ್ಮಕ್ಕಳಿಗೆ ಸ್ವಾತಂತ್ರ್ಯವಿತ್ತು. ಅವರಾಯ್ದ ವರನಿಗೆ ವಿವಾಹವೆಸಗುವುದು ಯುಗಧರ್ಮ. ಈ ಉತ್ತಮಾಧಮ ಮಧ್ಯಮ ಧರ್ಮಗಳ ಸಮನ್ವಯತೆಯನ್ನು 'ಹೇಮಾ-ಪಾಟೀಲ'ರ ದಾಂಪತ್ಯದ ಬಗೆಯಲ್ಲಿ ನಿರೂಪಿಸಿದರೆ ತೊಡಕೊಂದು ತೋರಿಬರುವುದು.

ಹೇಮಾನಿಗೆ ಮನೆಯಲ್ಲೇ 'ಟ್ಯೂಶನ್' ಕೊಡಲು ಶೀನುನೇ ನಿಯುಕ್ತನಾಗಿದ್ದನು—ಎಂದಾಗ, ಹೇಮಾಸ ಹೆತ್ತವರು ಸ್ತ್ರೀ ವಿದ್ಯಾಭ್ಯಾಸಕ್ಕೆ ಮಾನ್ಯತೆಯಿತ್ತು, ಆಕೆಯು ಬಾಳಲು-ಉತ್ತಮ ಬದುಕನ್ನು ನಡೆಯಿಸಲು ಶಕ್ತಳಾಗಬೇಕೆಂಬ ಬಯಕೆಯುಳ್ಳ ಉತ್ತಮ ನಾಗರಿಕರು. ಅಗರ್ಭ ಶ್ರೀಮಂತರಲ್ಲದಿದ್ದರೂ ಬಡವರಲ್ಲ-ಎಂಬ ಭಾವನೆಯು ಸ್ಪಷ್ಟವಾಗುವುದು. 'ಪ್ರೇಮದ ಜೇಡನ ಜಾಳಿಗೆಯಲ್ಲಿ ಮೊದಲೇ ತೊಡಕದೆ ಇದ್ದರೆ' ಎಂದುದರಿಂದ, ಪ್ರೇಮವಿವಾಹವಲ್ಲವೆಂದರ್ಥವಾಗುವುದು. ಹಾಗಿದ್ದರಿ ಹೇಮಾ-ಪಾಟೀಲರ ವಿವಾಹ, ಸಮಸ್ಯೆಯೇ ಆದಂತಾಯಿತು. ಕಾರಣ ಬಡವರಲ್ಲದ ಸುಸಂಸ್ಕೃತರಾದ ಹೇಮಾನ ಹೆತ್ತವರು ವರನ ಶಿಕ್ಷಣ, ನವಕರಿ, ಆಸ್ತಿ ಇವನ್ನು ನೋಡಿದರೇ ಹೊರತು ಗುಣವನ್ನು ಗಣಿಸಿಲ್ಲ ಎನ್ನಬೇಕಾಯಿತು. ದೈವದಾಟಕ್ಕೆ ಮಾನವನು ತಲೆದೂಗಬೇಕಾದುದರಿಂದ, ಹೇಮಾ ಪಾಟೀಲರು ಸಂಸಾರರಥದ ಗಾಲಿಗಳಾದರು ಎಂದು ಸಮಜಾಯಿಸಲು ಕತೆಗಾರರ ಆಶಯವಿದ್ದರಿ ಅನ್ಯಥಾ ಉಕ್ತಿಯಿಲ್ಲ.

ಪ್ರತಿಭಟಿಸುವಿಕೆ ಮಾನವನ ಸಹಜಧರ್ಮ. ಜನಾಂಗ ಜನಾಂಗಗಳ ಚರಿತ್ರೆಯೇ ಇದಕ್ಕೆ ಸಾಕ್ಷಿಯಾಗಿದೆ. ಈ ಪ್ರತಿಭಟನಾ ಧರ್ಮ, ಓದಿದವಳಾದ ಕುಲೀನಳಾದ ಹೇಮಾನ ಜೀವನದಲ್ಲಿ ಕಾಣಿಸುವುದೇ ಇಲ್ಲ. ಸಂಸಾರವೊಡೆದು ನುಚ್ಚುನೂರಾಗುವ ಹೆದರಿಕೆ ಹೇಮಾಗಿಲ್ಲಿತ್ತು. 'ಸಹನೆಯೇ ಹೆಣ್ಣಿಗೆ ಅಸಲುರತ್ನ'; ಆದುದರಿಂದ ಹೇಮಾ ಬಂದ ಬವಣೆಗಳನ್ನೆಲ್ಲ ಸಹಿಸಿ ಆದರ್ಶಳಾಗಿ ಬಾಳಲು ಯತ್ನಿಸಿದ 'ವಿಚಾರಲಹರಿ' ಕತೆಗಾರರ ಲೇಖನಿಯಿಂದ ಓದುಗರ ವಿಚಾರದಲ್ಲಿ ಲಹರಿಯಾಗಿಯೇ ಉಳಿಯುಬಾರದಾಗಿತ್ತು. ಪಾಟೀಲ ಗೆಳೆಯರಿಗಾಗಿ ಸಿಗರೇಟು ತರಲು ಹೊರಹೋದಾಗ, ಶೀನೂ ಹೇಮಾನನ್ನು ಮಾತಾಡಿಸಲು ಮನೆಯೊಳಗೆ ನಡೆದನು. 'ನೆಲದ ಮೇಲೆ ಮಲಗಿ (ಅಂಗಾತ) ಹೊಟ್ಟೆ ಹೊಸೆಯುತ್ತಿದ್ದ ಹೇಮಾ'ನನ್ನು ಕಂಡನು. ಮನಬಿಚ್ಚಿ ಮಾತನಾಡಿದನು. "ನಡೆನೆಣ"ದಂತೆ ಹೇಮಾ ತನ್ನ ದುಃಖವನ್ನು ತೋಡಿಕೊಂಡಳು. 'ಮೊನ್ನೆ ಒಂದು ಕೂಸು ಹೋಯ್ತಲಾ; ಇನ್ನೆರಡು ಪಡ್ಡಿಲೆ ಮೀಗ್ಯಾವ' - ಸಂಸಾರ ಪಂಚಾಮೃತವಾಗುವುದರ ಬದಲು ಕಾಲಕೂಟ ವಿಷವಾಗಿದೆ' ಸಾವೇ ತನಗೆ ಜೆನ್ನ.... ಇತ್ಯಾದಿ ನುಡಿದ ಹೇಮಾ ದುಃಖದ ಗನಿಯಾಗಿ ವಿರಸಗಳನ್ನೆಲ್ಲ ಸಹಿಸುವ ಮಾತೆಯಾಗಿ ಗೃಹಣಿಯಾಗಿ ಬಾಳಲು ಇಚ್ಛಿಸಿದರೂ-ಭಾವಗಳನ್ನು ಕೆರಳಿಸುವ ಸ್ತ್ರೀಯಾಗಿ ಚಿತ್ರಿತಳಾಗಿದ್ದರೂ, 'ನಿಂದ ನೆಲವೆದ್ದು ಬಡಿಯುವಂತೆ' ಕ್ಷಮಾಶೀಲಳಾದ ಹೇಮಾ ಪ್ರತಿಭಟಿಸಿ ಸಂಸಾರವನ್ನು ಓರಣವಾಗಿಸಿ, ಪಾಟೀಲನಂತಹ 'ಮೊಂಡ ವ್ಯಕ್ತಿ'ಯನ್ನು ಸರಿದಾರಿಗೆ ಹಚ್ಚಬೇಕಾಗಿತ್ತು. "ಯತ್ರ ನಾರ್ಯಸ್ತು ಪೂಜ್ಯಂತೆ, ರಮಂತೇ ತತ್ರದೇವತಾಃ" (ಸ್ತ್ರೀಯರು ಪೂಜನೀಯರಿದ್ದರೆ ದೇವತೆಗಳೊಲಿಯುವರು) ಎಂಬ ಆರ್ಯೋಕ್ತಿಯನ್ನು ಯಥಾರ್ಥವನ್ನಾಗಿ ಮಾಡಿ ಉತ್ತಮ ಬೋಧೆಯನ್ನು ಜನತೆಗೆ ನೀಡಬೇಕಾಗಿತ್ತು. ಹಾಗೆ ಹೇಮಾನ ಪಾತ್ರ ಚಿತ್ರಿತವಾಗಿದ್ದರೆ, ಕತೆಯು ಉತ್ತಮ ಪರಿಣಾಮಕಾರಿಯಾಗುತ್ತಿತ್ತು.

"ಪಾಟೀಲ" ಈ ವ್ಯಕ್ತಿತ್ವ ಚಿತ್ರಣವಂತೂ ಉತ್ತಮೋತ್ತಮವಾಗಿ, ಕವಿಕಲ್ಪನೆಯ ಕುಸುರಿ ಕೆಲಸವಾಗಿ ಕೆತ್ತಲ್ಪಟ್ಟಿದೆ. ತಾನು ಮಾಡಿದುದೇ ಶ್ರೇಷ್ಠ, ಪರರು ಮಾಡಿದುದು ಹೀನ ಅದರಲ್ಲಿ ಏನಾದರೊಂದು ಕುಂದು ಕಂಡು ಟೀಕಿಸುವವನು ಪಾಟೀಲನು ಈ ಮಾತು ಅಕ್ಷರಶಃ ಸತ್ಯ. ತನ್ನ ಹೆಂಡತಿಯು ಕುರಿತಾಗಿ ಆಡುವ ಮಾತಿನಿಂದ ವ್ಯಕ್ತವಾಗುತ್ತಿದೆ 'ಯಥೇಚ್ಛ ಮಾಡಿ ನೊದಲು ತಮ್ಮ ಒಡಲಿಗೇ ಹಾಕ್ತಾರೆ' ಎಂದು ಟೀಕಿಸುವನು. ಓದಿದವನಾದ ಮನೆಯೊಡೆಯನಾದ ಪಾಟೀಲನೇ 'ನಾಚಿಗ್ಗೇಡಿ'ಯಾಗಿ ಮನೆತನದ ವಿಚಾರವನ್ನು ಗಾಳಿಗಂಟಾಗಿಸುತ್ತಾನೆಂದರಿ, ಅವನ ವೈಜೊತೆಗೆ ಅಂಟಿಕೊಂಡ ಗುಣಗಳ ಪರಿಚಯ 'ಅಂಗೈನೆಲ್ಲಿ'ಯಾಗಿ ಓದುಗರಿಗೆ ಮಂದಟ್ಟಾಗುತ್ತಿದೆ. 'ಸಣ್ಣದನಿಯಲ್ಲಿ ದೇಡಿಯೋ ನಡೆದಿತ್ತು: ಕೋಣೆ ಓರಣವಾಗಿತ್ತು' ಎಂದುದರಿಂದ, ಸ್ವಸುಖರೂಪವಾದ 'ಸ್ವಾರ್ಥ'ವನ್ನೇ ಗಣಿಸುವ ಕ್ಷುದ್ರ ಕಲ್ಪನೆಯ ತೀರ ಸಾಮಾನ್ಯವ್ಯಕ್ತಿ ಪಾಟೀಲನು ಎಂದು ಅರಿವಾಗದಿರದು.

ಭಾರತದ ಜನಸಂಖ್ಯೆ ಏರುತ್ತಿದೆ; ಆಹಾರ ವಿಹಾರ ಪ್ರಶ್ನೆ ಜಟಿಲವಾಗುತ್ತಿದೆ; ಭಾರತದ ಸ್ತ್ರೀ-ಪುರುಷರು ಎಚ್ಚರಿಕೆ ವಹಿಸಬೇಕು—ಇತ್ಯಾದಿ ಏನೇನೇ ಇದ್ದರೂ 'ಕಾಮವೆ, ಜೀವನ ಸರ್ವಸ್ವ,

(ಹೊದಿಕೆಯ ಮೂರನೆಯ ಪುಟ ನೋಡಿರಿ)

ಹೆಂಡತಿ ಹಾಸುಗೆಯ ದಾಸಿ, ಅವಳು ಬದುಕಿರಲಿ, ಹಡೆಯುವ ಯಂತ್ರವಾಗಿ ಸಾಯಲಿ—ತನಗೆ ಬೇಕಾಗುವುದು ಅಕೆಯ ಮೈಯ್ಯ ಸುಸುಖ—ಅಕೆಯ ಆರೋಗ್ಯದಲ್ಲಿ ಅಕೆಯೂ ಮನುಷ್ಯಳಂತೆ ಬಾಳ ಬೇಕೆಂಬುದಿಲ್ಲ—ಮನದಿರವಿನ ಅನ್ಯೋನ್ಯತೆಯಿಲ್ಲ—ಹೀಗಿದೆ ಪಾಟೀಲನ ಜೀವನದ 'ಮೋಜಿನ' ಜೀವಿತದ ವ್ಯಥೆ? ಇನ್ನೊಂದು ಮಾತನ್ನು ಇಲ್ಲಿಯೇ ಬಯಲಿಗೆಳೆದರೆ ನಮ್ಮಾ 'ಖಳನಾಯಕ'ನ ಅಂತರಂಗದ ಅರಿವಾದರೂ ವ್ಯಕ್ತವಾಗಿ ವೇದ್ಯವಾಗುವುದು. ಮಕ್ಕಳ ಸಂಖ್ಯೆ ಎಲ್ಲಿಗೆ ಬಂದದೆ" ಎಂದು ಶೀನೂ ಕೇಳಲು 'ಇನ್ನೂ ಎರಡಂಕಿಗಳಿಗೇನೂ ಬಂದಿಲ್ಲ' ಎಂಬ ಅಶೋತ್ತರದೊಡನೆ ಅದೂ ಬರಲಿಕ್ಕೂ ಇಲ್ಲ ಎಂದು (ನಿರಾಕೆಯೊಡನೆ) ಅನ್ನುವನು. 'ಅವೇಸು ಹುಟ್ಟುತಿರತಾವ ಸಾಯುತಿರತಾವ' ಅನ್ನುವನು. ಪಾಪ! ಹುಟ್ಟು ಸಾವಿನ ವಿಲಗಕ್ಕಾಗಿ ಸಮೀದಾತ್ಪರ್ಯದ ನುಡಿಯಲ್ಲವದು. ಅವುಗಳ ಕಡೆಗೆ ಲಕ್ಷ್ಯ ಕೊಡದಿರುವುದರ 'ಹಿರಿಮೆ' (?) ಎಂದರೂ ಸಲ್ಲುವುದು. ಸುಪುತ್ರನೊಬ್ಬನು ಕುಲದುದ್ಧಾರಕ್ಕಾಗಿ ಸಾಕೆನ್ನುವ 'ಹಿರಿಮೆ'ಯಲ್ಲ. ಅತ್ತಿಯ ಹಣ್ಣಿನೊಳಗಿನ ಅಸಂಖ್ಯ ಜಂತುಗಳು (ಸಂಸಾರದ ಮಕ್ಕಳು) ಹುಟ್ಟಲಿ, ಸಾಯಲಿ ಎನ್ನುವ ಬರಡು ಮನದ—ಮಕ್ಕಳಿಗಾಗಿ ತನ್ನ ಕರ್ತವ್ಯವೇನೂ ಇಲ್ಲ ಎಂಬ ದುರ್ಮನದ—'ಹಿರಿಮೆ'. ತೋರಿಕೆಯ ಸಂಸ್ಕೃತಿಗೆ ಮಾರು ಹೋದವನು ಎಂಬುದು ಮಗುವಿಗಿಟ್ಟ 'ಸುಹಾಸ ಪಾಟೀಲ' ಎಂಬುದರಿಂದ ವ್ಯಕ್ತವಾಗುತ್ತಿದೆ. 'ಅಪ್ಪಾ, ಅವ್ವ ಯಾಲಕ್ಕೀ ಬೇಡತಾಳ' ಎಂದು ಮಗನು ಹೇಳಿದಾಗ, ಕತಾನಾಯಕನ ಬೀಗ ತೆರೆದು ತಾನೇ ತೆಗೆದೊಳಗೊಯ್ದನು—ಎಂದು ಕತೆಗಾರರು ನಿರೂಪಿಸಿದುದು ಚೆನ್ನಾದುದಾಗಿದೆ. ಉತ್ತಮ ವಸ್ತುವನ್ನು ಬೇಗ ಮುಪ್ರೈಯಲ್ಲಿರಿಸಿ—ಯಾಜಮಾನ್ಯ ವಹಿಸುವ ಗುಣ, ಹೇಮಾನ ಮಾತಿನಿಂದಲೂ ಯಾರಾದರೂ ನನ್ನ ಜೊತೆಗೆ ಮಾತಾಡಿದರೆ ಅವರಿಗೆ ಸೇರಿಕೆ ಬರೋದಿಲ್ಲ—ಸ್ಪಷ್ಟವಾಗುವುದು. ಮಕ್ಕಳನ್ನು ಒಡನೆ ಊಟಕ್ಕೆ ಕರೆಯುದ—'ಬಾ' ಎಂದು ಶೀನೂ ಕರೆದಾಗ ಮಗುವಾಡಿದ ಮಾತಿನಿಂದ ಪಾಟೀಲನನ್ನೇ ಸುಟ್ಟು ಹಾಕುವ ಕಡಿಕಡಿದಿಕ್ಕುವ ಮನ ಬಾರದಿದ್ದರೆ, ಅದವನ ಭಾಗ್ಯವೆನ್ನಬೇಕು. ಮಕ್ಕಳ ಆರೋಗ್ಯವನ್ನು ಗಮನಿಸದ ಹೆಂಡತಿಯ ಕಡೆಗೆ ಅಂತಃಕರಣ ಕಕಗದ—'ಜಾ ಣೀಲೆ ಹೊಡೆದದು ಕಣ್ಣಮ್ಮಾಲ' ಎಂದು ಹೇಮಾ ನುಡಿದುದನ್ನು ಕೇಳಿದಾಗ, ನರಪಶುವಾಗಿ—ನಿರ್ದಯನಾಗಿ—ಕಣ್ಣುರುಡನಾಗಿ ವರ್ತಿಸಿದುದು ಪಾಟೀಲನ ವ್ಯಕ್ತಿತ್ವದ ಇನ್ನೊಂದು ಮುಖದರ್ಶನವಾಗಿದೆ. 'ಮಂಗಳಸೂತ್ರ ಹರಕೊಂಡು ನನ್ನ ಮೂರು ದಿನ ಹೊರಗೆ ಹಾಕಿದ್ದರು' ಎನ್ನುವ ಹೇಮಾನ ಮಾತಿನಿಂದ ಕತೆಗಾರರು ಪಾಟೀಲನಿಗೆ ಸಜೀವ ಸಮಾಧಿಯನ್ನೇ ಕಲ್ಪಿಸಿರುವುದು ಹಿತವಾಗಿದೆ.

ಭಾಷಾಶೈಲಿ, ವ್ಯಕ್ತಿಗಳ ಸ್ವಭಾವ ಚಿತ್ರಣ—ಅಡಿದ ಮಾತುಗಳು, ಕತೆಯು ಬೆಳೆದುಬಂದ ರೀತಿ, ಮಾಡಬಹುದಾದ ಪರಿಣಾಮ; ಸರ್ವತೋಮುಖವಾದ ಸಣ್ಣಕತೆಯ ನಿಯಮ—ನಿಬಂಧನೆಗಳು ಸರ್ವ ಜನಸಾಮಾನ್ಯವಾಗಿ ಗ್ರಾಹ್ಯವಾಗಿವೆ. ವಿಸ್ತರಭಯದಿಂದ ಹೆಚ್ಚನ್ನು ಬರೆಯದೆ, ಲೇಖನಿಗೆ ವಿಶ್ರಾಂತಿ ಕೊಡದೇಕಾಯಿತು. ಶೀನು ಸ್ಪೀತ್ಸದ ಸಹಜ ಕಲ್ಪನೆಯಿತ್ತು, ವಿಚಾರಾಂಜನ ಶಲಾಕೆಯಿಂದ ಓದುಗರನ್ನು ಶೃಪ್ತಿಗೊಳಿಸಿರುವನು.

ಕುಟುಜಾರಿಷ್ಟ

ಅಮಾಂಶ-ಸಂಗ್ರಹಣಿಗಳಿಗೆ

●

ಕಾಸಶ್ವಾಸಾರಿ

ದಮ್ಮು-ಕೆಮ್ಮುಗಳಿಗೆ

ಎಲ್ಲ ಬಗೆಯ ಆಯುರ್ವೇದ ಔಷಧಿಗಳಿಗಾಗಿ ಬರೆಯಿರಿ:

ಶ್ರೀ

ದಿ ನೂತನ

ಆಯುರ್ವೇದ ಕಾರ್ಯಾಲಯ ಲಿ.

ವಿಜಾಪುರ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ಬಿ. ಹಂಡಿಕೇ

ಮನೋಹರ ನೀಲ ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಪ್ಪಾಗಿ ಬೆಳೆಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ ಜೀವಿನಿ ಟಾನಿಕ್

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯ ಬಂಜೆತನಕ್ಕೆ ಸಿದ್ಧಯೋಗ

ಅಜೀರ್ಣ ವಿಕಾರಗಳಿಗೆ ಪಂಚವಟಿ ರಾಮಬಾಣ

ಸದ್ವೈದ್ಯ ಶಾಲಾ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರ್ಖಾನೆ.

ಶರತ್‌ಪ್ರಕಾಶನ ಮಂದಿರ, ಧಾರವಾಡ

(ಪುಸ್ತಕ ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು)

ಕನ್ನಡ ನಾಡಿನ ವಾಚನಾಲಯಗಳ ಸಂಚಾಲಕರು ಜ್ಞಾಪಕದಲ್ಲಿ ಇರಿಸಿಕೊಳ್ಳಬೇಕು!
ತಮ್ಮ ವಾಚನಾಲಯಕ್ಕೆ ಬೇಕಾಗುವ ಯಾವ ಕನ್ನಡ ಪುಸ್ತಕಗಳನ್ನೂ ಯೋಗ್ಯ
ಬೆಲೆಗೆ ಸಮಯಕ್ಕೆ ಸರಿಯಾಗಿ ಪೂರೈಸಿಕೊಳ್ಳಬಹುದು.

'ಆನಂದಕಂದ'ರ ಕಥೆ, ಕಾದಂಬರಿ, ಕವನಸಂಕಲನ, ನಾಟಕಸಂಕಲನ, ವಾಙ್ಮಯ ವಿಮರ್ಶೆ ಗ್ರಂಥಗಳು ಎಲ್ಲವೂ ನಮ್ಮಲ್ಲಿ ದೊರೆಯುವವು. ವ್ಯಾಪಾರಿಗಳಿಗೆ ಅನುಕೂಲ ಸರಕ ಕಮೀಶನ್ ಕೊಡಲಾಗುವುದು.
ಎಲ್ಲರೂ ನಮ್ಮೊಡನೆ ವ್ಯವಹಾರ ಬೆಳೆಯಿಸಬೇಕು.
ನಮ್ಮ ಮಂದಿರ ಪ್ರಕಟಿಸಿದ 'ಆನಂದಕಂದ'ರ ಪೌರಾಣಿಕ ಕಾದಂಬರಿ:

ಮುಗಿಲ ಮುದುಪೆ

ರಾವಣನೆಯ ನತ್ಯಾಗ್ರಹ ಜೀವನವು ಹಿನ್ನೆಲೆಯಲ್ಲಿ ಅತ್ಯದ್ಭುತವಾದ ಪೌರಾಣಿಕ ಪಾತ್ರಚಿತ್ರಣವನ್ನು ವಿವಿಧ ಮುಖದಲ್ಲಿ ಚಿತ್ರಿಸಿ ತೋರಿಸಿದ ರಮ್ಯ ಕಾದಂಬರಿ. ಓದಲು ಕೈಯ್ಯಲ್ಲಿ ತಗೆದುಕೊಂಡರೆ, ಮುಗಿಸುವ ತನಕ ಪುಸ್ತಕವನ್ನು ಕೆಳಗೆ ಇರಿಸಲಿಕ್ಕಾಗದಂತಹ ಆಕರ್ಷಕವಾದ ಕತೆಗಾರಿಕೆ. ಓದಿದ ರಸಿಕರಿಂದ ಮೆಚ್ಚುಗೆಯ ಮಾತುಗಳೇ!

ಕ್ರೌ. ಅ. ೩೫೦ ಪುಟಗಳು ಸಾದಾ ಪ್ರತಿಗೆ ೪-೦-೦; ಸುಂದರ ಪ್ರತಿಗೆ ೪-೮-೦

ಬೆಳವಡಿ ಮಲ್ಲಮ್ಮ

(ಕರಂಗಾಪಟ್ಟಿ ಸಂಕಲನ)

ಕ್ರೌ. ಅ. ೧೧೬ ಪುಟ. ಬೆಲೆ ೧-೮-೦

ಕಾರಹುಣ್ಣಿಮೆ

(ಕವನಸಂಕಲನ)

ಕ್ರೌ. ಅ. ೧೨೮ ಪುಟ. ಬೆಲೆ ಸಾದಾ ೨-೦-೦
ಸುಂದರ ೨-೮-೦

ಇದ್ದ ಇಮ್ಮಲ್ಲಿ ದೊರೆಯುವ 'ಆನಂದಕಂದ'ರ ಜೇರೆ ಗ್ರಂಥಗಳು

ಕಾದಂಬರಿ	ಕವನ ಸಂಕಲನ	ಕಥಾಸಂಕಲನ	ಇತರ ಗ್ರಂಥಗಳು
ರಾಜಯೋಗಿ	ವಿರಹಿಣಿ	ಬಿಡುಗಡೆಯ ಜಾಳು	ಕರ್ನಾಟಕ ಜನಜೀವನ
ಸುವರ್ಣನ	ಒಡನಾಡಿ	ನಮ್ಮ ಬಿಡುಗಡೆ	ಸಂಪುಟ ಚರಿತ್ರೆ
ಅಶಾಂತಿಪರ್ವ		ಸಂಸಾರ ಚಿತ್ರ	ಶ್ರೀ ಬಸವ ವೈಭವ
ಮುಗಿಲ ಮುದುಪೆ		ಮೂರನೆಯವನ ಕಲ್ಲು	

ಇಲ್ಲಿಯ ಶ್ರೀ ಕುಡ್ಡಾರರ 'ಚಿತ್ರಕಲಾಪ್ರವೇಶ'ವೂ ಚಾರಿಯ ಚಾಣಕ್ಯನ 'ಜಾತೀಯ ಸಮಸ್ಯೆ' 'ಕರ್ನಾಟಕ ಏಕೀಕರಣ' ಈ ಕರಿಪೊತ್ತಗೆಗಳೂ ದೊರೆಯುವವು.

ಶರತ್‌ಪ್ರಕಾಶನ ಮಂದಿರಕ್ಕೆ ಜ ರೂ. ಸಲ್ಲಿಸಿ ಗ್ರಾಹಕನಾದಿನ್ಯಾದನಾಗಿರಿ ವಿನಂತಿ
ಸಲಹುತ್ತಿರಿ. ಬೇಗನೆ ಪತ್ರವ್ಯವಹಾರವನ್ನು ಮಾಡಿರಿ.

ಸಂಚಾಲಕ:

ಎಸ್. ಡಿ. ಧರಮಟ್ಟಿ, ಶರತ್‌ಪ್ರಕಾಶನ ಮಂದಿರ, ಧಾರವಾಡ

Printed by N. A. Hoskeri at the Vijaya Press, Dharwar, and published for the Proprietors Jayantipu blications, by S. D. Dharmatti at the Jayanti Office, Dharwar